ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೨–೨

ಶ್ರೀಮತ್ಸ್ಕಂದಪುರಾಣಾಂತರ್ಗತಾ

ಸೂತಸಂಹಿತಾ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಯಜ್ಞವೈಭವಖಂಡ

(ಭಾಗ ೧)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೫

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೨-೨

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಯಜ್ಞವೈಭವಖಂಡ

(ಭಾಗ ೧)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೫

Printed by T. S. Raghavachar, Manager,
Sree Panchacharya Electric Press
Sayaji Rao Road, Mysore.

For The Palace Mysore.

ಮುನ್ನುಡಿ

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ಈ ಸೂತಸಂಹಿತೆಯು ಸ್ಕಾಂದಪುರಾಣಕ್ಕೆ ಸೇರಿದ್ದೆಂದು ಗೊತ್ತಾಗುತ್ತದೆ. ಸ್ಕಾಂದಪುರಾಣವು ಖಂಡಾತ್ಮಕವಾದ ಮತ್ತು ಸಂಹಿತಾತ್ಮಕವಾದ ಎರಡು ರೂಪ ಗಳಲ್ಲಿ ರಚಿತವಾಗಿದೆ ಎಂದು ತಿಳಿದುಬರುತ್ತದೆ. ಆದುದರಿಂದ ಈ ಸೂತಸಂಹಿತೆಯೂ ಸಂಹಿತಾತ್ಮಕವಾದ ಸ್ಕಾಂದಪುರಾಣಕ್ಕೆ ಸೇರಿದುದೆಂದು ತಿಳಿಯಬೇಕು.

ಇತರ ಪುರಾಣಗಳಂತೆ ಈ ಗ್ರಂಥದಲ್ಲೂ ಕಥೆಗಳೂ, ದಿನಗಟ್ಟಲೆಯ ಜೀವನ ಕ್ರಮದಲ್ಲಿ ಜನರು ಅನುಸರಿಸಬೇಕಾದ ನೀತಿಗಳೂ, ಆಚರಿಸಬೇಕಾದ ಧರ್ಮ ಕರ್ಮಗಳೂ, ಉಪಾಸನೆಗಳೂ, ವೇದಾಂತತತ್ವಗಳೂ, ಇವನ್ನು ವಿವರಿಸಲಾಗಿದೆ. ಇತರ ಪುರಾಣಗಣಗಳಲ್ಲಿ ಕಥೆ ನೀತಿಗಳಿಗೆ ಪ್ರಾಧಾನ್ಯವಿದ್ದರೆ, ಇಲ್ಲಿ ವೇದಾಂತತತ್ವ ನಿರೂಪಣೆಗೆ ಪ್ರಾಮುಖ್ಯವಿರುತ್ತದೆ. ತತ್ವಸಾಕ್ಷಾತ್ಕಾರಕ್ಕೆ ಬೇಕಾದ ಚಿತ್ತಶುದ್ಧಿಯು ಧರ್ಮಾಚರಣೆಯಿಂದ, ನಿಷ್ಕಾಮಕರ್ಮಾನುಷ್ಠಾನದಿಂದ, ಉಂಟಾಗುತ್ತದೆಂದು ತಿಳಿಯಹೇಳಿದೆ. ಇದರಿಂದ ಜ್ಞಾನಕಾಂಡ ಕರ್ಮಕಾಂಡಗಳಿಗೆ ಸಂಬಂಧಸಾಮರಸ್ಯವನ್ನು ವಿವರಿಸಿರುವುದು ಒಂದು ವಿಶೇಷಗುಣವಾಗಿದೆ. ಪ್ರಾಯಶಃ ಈ ಕಾರಣದಿಂದಲೇ ಈ ಗ್ರಂಥಕ್ಕೆ ಪ್ರಾಶಸ್ತ್ಯವಿದೆ ಎನ್ನಬಹುದಾದರೂ, ಇದರ ಹೆಚ್ಚುಗಾರಿಕೆಗೆ ಇನ್ನೂ ಒಂದು ವಿಶೇಷಗುಣವಿದೆ. ಅದೇನೆಂದರೆ ಮಾರ್ಗಪ್ರಾಮಾಣ್ಯನಿರೂಪಣೆಯು.

ಈ ಯಜ್ಞವೈಭವಖಂಡದಲ್ಲಿ ವೇದಾಂತಾರ್ಥಸಾರವನ್ನು ತಿಳಿಯಹೇಳುವುದ ಕ್ಕಾಗಿ ಪರ ಮತ್ತು ಅಪರ ವೇದಾರ್ಥಗಳನ್ನು ವಿವರಿಸಿ, ವಾಚಿಕ, ಮಾನಸಿಕ ಮುಂತಾದ ಯಜ್ಞಗಳ ಸ್ವರೂಪವನ್ನೂ, ಪ್ರಣವ, ಗಾಯತ್ರೀ, ಆತ್ಮಮಂತ್ರ, ಅಜಪಾಮಂತ್ರ, ಷಡಕ್ಷರಸ್ವರೂಪ ಇವುಗಳಿಂದ ಉಪಾಸನೆಯನ್ನು ಮಾಡಿ ಆತ್ಮ ತತ್ವದ ಸಾಕ್ಷಾತ್ಕಾರವನ್ನು ಹೇಗೆ ಪಡೆಯಲಾಗುತ್ತದೆಂಬುದನ್ನೂ ನಿರೂಪಿಸಲಾಗಿದೆ. ಅಲ್ಲದೆ ಮೇಲೆ ಸೂಚಿಸಿದ ಮಾರ್ಗಪ್ರಾಮಾಣ್ಯವನ್ನು ೨೨ನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅದರ ಅರ್ಥವು ಹೀಗಿದೆ. ಜನರು ಮೋಕ್ಷನೆಂಬ ಪರಮಪುರುಷಾ ರ್ಥವನ್ನು ಪಡೆಯಲು ಬಯಸುತ್ತಾರೆ. ಇದಕ್ಕಾಗಿ ನಾನಾದೇಶ ಕಾಲಗಳಲ್ಲಿದ್ದ ಆಚಾರ್ಯರು ಅನೇಕ ಪ್ರಕಾರವಾದ ಮಾರ್ಗಗಳನ್ನು ಉಪದೇಶಿಸಿರುತ್ತಾರೆ.

ಅವೆಲ್ಲವೂ ನಮ್ಮ ದೇಶದವಲ್ಲವೆಂದಾಗಲಿ, ನಮ್ಮ ವೇದಗಳಲ್ಲಿ ಹೇಳಿಲ್ಲವೆಂದಾಗಲಿ, ಅಪ್ರಮಾಣಗಳೆಂದು ತಿಳಿಯಬಾರದು. ಮತ್ತೇನೆಂದರೆ, ಅವನ್ನೆಲ್ಲವನ್ನೂ ಪರಶಿವನೇ ಆಯಾ ಆಚಾರ್ಯರ ಮೂಲಕ ಆಯಾ ದೇಶಗಳ ಜನರಿಗೆ ಅವರವರ ರುಚಿ ಸಂಸ್ಕೃತಿಗಳಿಗೆ ತಕ್ಕಂತೆ ಬೋಧಿಸಿರುವುದರಿಂದ ಅವೆಲ್ಲವೂ ಪ್ರಮಾಣಗಳೆಂದು ತಿಳಿದು, ಅದರ ಗೌರವಗಳನ್ನು ಸಲ್ಲಿಸುವಷ್ಟು ಸಹಾನುಭೂತಿ, ಪರಮತಸಹಿಷ್ಣುತೆಗಳನ್ನು ಬೆಳೆಸಬೇಕು. ಭಕ್ತರ, ಉಪಾಸಕರ, ಮುಮುಕ್ಷುಗಳ ಹೃದಯವು ಈ ವಿಶಾಲ ಮನೋಭಾವಕ್ಕೆ ಏರುವಂತಾಗಬೇಕು, ವಿಶ್ವಧರ್ಮಾಚರಣೆಯಲ್ಲಿ ಆದರದೊಡನೆ ಆಸಕ್ತವಾಗುವಂತಾಗಬೇಕೆಂಬುದು ಅದರ ತಾತ್ಪರ್ಯವು. ಅಂತಹ ವಿಶ್ವಧರ್ಮಾಚರಣೆಯಿಂದಲೇ ಜನರೆಲ್ಲರೂ ಶಾಂತಿ ಸಮೃದ್ಧಿ ಸೌಖ್ಯಗಳನ್ನು ಶಾಶ್ವತವಾಗಿ ಪಡೆಯಲು ಸಾಧ್ಯವಾಗುತ್ತದೆಂಬುದನ್ನು ಹೃದಯಂಗಮವಾಗಿ ತಿಳಿಸಿದೆ.

ಇಂತಹ ಉತ್ತಮ ಗ್ರಂಥಗಳ ವ್ಯಾಸಂಗದಿಂದ ಜನತೆಯ ತಿಳಿವಳಿಕೆಯೂ ನಡೆವಳಿಕೆಯೂ ಉತ್ತಮಗೊಳ್ಳಲೆಂಬ ಘನವಾದ ಉದ್ದೇಶದಿಂದ, ನಮ್ಮನ್ನಾಳುತ್ತಿರುವ ಮಹಾಸ್ವಾಮಿಯವರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದೂರ್ ಜಿ.ಸಿ.ಎಸ್.ಐ.,** ಮಹಾಪ್ರಭುಗಳವರ ಆಜ್ಞೆಯಂತೆ ಇದನ್ನೂ ಮುದ್ರಿಸಿ ಪ್ರಕಟಿಸಲಾಗಿದೆ. ಇಂತಹ ಸೇವಾವಕಾಶವನ್ನು ಕಲ್ಪಿಸಿಕೊಟ್ಟಿರುವ ಪ್ರಭುಗಳಲ್ಲಿ ನನ್ನ ಕೃತಜ್ಞತಾರಾಜಭಕ್ತಿಪೂರ್ವಕವಾದ ವಂದನೆಗಳನ್ನು ಸಮರ್ಪಿಸಿ, ಅವರ ಘನವಾದ ಉದ್ದೇಶವು ನೆರವೇರುವಂತಾಗಲೆಂದು ಪ್ರಪಂಚಕ್ಕೆ ಮಾತಾಪಿತೃಗಳಾದ ಪಾರ್ವತೀಪರಮೇಶ್ವರರಲ್ಲಿ ಪ್ರಾರ್ಥಿಸುತ್ತಿರುತ್ತೇನೆ.

ಪಾರ್ಥಿವಸಂವತ್ಸರದ
ಆಷಾಢ ಶುಕ್ಲ ಪೂರ್ಣಿಮಾ
ಬುಧವಾರ, 25—7—1945

ಎಡತೊರೆ ದೇವಯ್ಯದೀಕ್ಷಿತರ ಮಗ
ಚಂದ್ರಶೇಖರಶಾಸ್ತ್ರೀ

ಶ್ರೀಸೂತಸಂಹಿತೆಯ ದ್ವಿತೀಯಸಂಪುಟದಲ್ಲಿರುವ ವಿಷಯಗಳ ಸೂಚಿಕೆ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

॥ ಪ್ರಥಮೋಽಧ್ಯಾಯಃ ॥

ಮೊದಲನೆಯ ಅಧ್ಯಾಯವು

(ಸರ್ವವೇದಾರ್ಥಪ್ರಶ್ನಃ)

ಶಿವಮಾದ್ಯಂತನಿರ್ಮುಕ್ತಮತಿಶೋಭನಮಾದರಾತ್ ।
ನಮಾಮಿ ವಿಗ್ರಹಂ ಸಾಂಬಂ ಸಂಸಾರವಿಷಭೇಷಜಂ ॥೧॥

ಗಣೇಶಂ ವಿಘ್ನನಾಶಾಯ ವಾಣೀಂ ವಾಗರ್ಥಬುದ್ಧಯೇ ।
ಗುರುಂ ಮುಖ್ಯಾರ್ಥ ಬೋಧಾರ್ಥಂ ನಮಾಮಿ ಪರಯಾ ಮುದಾ ॥

ಹಿಂದಿನ ಖಂಡಗಳಲ್ಲಿ ಜ್ಞಾನದ ಸ್ವರೂಪವನ್ನೂ, ಅದರಿಂದ ಮುಕ್ತಿಯು ಲಾಭವಾಗುತ್ತದೆಂಬುದನ್ನೂ ಹೇಳಿದೆ. ಆದರೆ "ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮ ಸನಾತನಂ । ನಾಯಂ ಲೋಕೋಽಸ್ತ್ಯ ಯಜ್ಞಸ್ಯ ಕುತೋಽನ್ಯಃ ಕುರುಸತ್ತಮ" ॥ ಭಗವದ್ಗೀತಾ ೪.೩೧. ಎಂದು ಮುಂತಾಗಿ ಶಾಸ್ತ್ರಗಳಲ್ಲಿ ಹೇಳಿರುವುದರಿಂದ ಕರ್ಮವೇ ಮುಕ್ತಿಸಾಧನವೆಂದು ಗೊತ್ತಾಗುತ್ತದೆ. ಇದರಿಂದ ಜ್ಞಾನದಲ್ಲಿ ಅನಾದರವು ಉಂಟಾಗದಿರಲೆಂದೂ, ಜ್ಞಾನವೂ ಯಜ್ಞರೂಪವಾದುದೆಂದೂ ತಿಳಿಸಬೇಕಾಗಿದೆ. ಅಲ್ಲದೆ, "ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ । ಭ.ಗೀ. ೪.೩೩. ಎಂಬಂತೆ ಜ್ಞಾನವು ಕರ್ಮಕ್ಕಿಂತ ಹೆಚ್ಚಿನ ಶ್ರೇಯಸ್ಕರವಾದುದೆಂದೂ ತಿಳಿಸಬೇಕಾಗಿದೆ. ಇದಕ್ಕೋಸ್ಕರ ಈ ಖಂಡವನ್ನು ಆರಂಭಿಸುವಾಗ ಪರ ಮತ್ತು ಅಪರಶಿವತತ್ವದ ಸ್ವರೂಪದ ಧ್ಯಾನರೂಪವಾದ ಮಂಗಳವನ್ನು ಗ್ರಂಥಮಧ್ಯದಲ್ಲೂ ವ್ಯಾಸರು ಮಾಡಿದುದನ್ನು ಸೂತರು ಅನುವಾದ ಮಾಡಿರುತ್ತಾರೆ.

ಮೊದಲುತುದಿಗಳಿಲ್ಲದಂಥ, ಹೆಚ್ಚಾದ ಮಂಗಳವನ್ನುಂಟುಮಾಡುವಂಥ, ಪರತತ್ವದ ಪರಸ್ವರೂಪವನ್ನೂ, ಲೋಕಾನುಗ್ರಹಕ್ಕಾಗಿ ಜಗನ್ಮಾತೃವಾದ ಪಾರ್ವತಿ

ಸತ್ರಾವಸಾನೇ ಸನ್ನದ್ಧಾಃ ಸರ್ವವೇದಾರ್ಥವೇದನೇ ।
ಸರ್ವಲೋಕಹಿತೇ ಯುಕ್ತಾಃ ಸಾರಸಾರವಿವೇಕಿನಃ ॥೨॥

ಅಭ್ಯಾಗತಾನಾಮಾರ್ತಾನಾಮತಿಥೀನಾಂ ಪ್ರಿಯಂವದಾಃ ।
ಮೈತ್ರ್ಯಾ ಕರುಣಯಾ ಯುಕ್ತಾಃ ಕುಮತಾವಪ್ಯುಪೇಕ್ಷಕಾಃ ॥೩॥

ಸ್ವಾಧ್ಯಾಯಾಧ್ಯಯನೇ ಯುಕ್ತಾಃ ಸ್ವಸ್ಥಚಿತ್ತಾಃ ಸುನಿಶ್ಚಲಾಃ ।
ಸರ್ವೋಪದ್ರವನಿರ್ಮುಕ್ತಾಃ ಸರ್ವಶತ್ರುವಿವರ್ಜಿತಾಃ ॥೪॥

ಯಿಂದ ಕೂಡಿರುವಂಥ, ಜನನಮರಣಪ್ರವಾಹಸಂಬಂಧರೂಪವಾದ ಸಂಸಾರಬಂಧವೆಂಬ ದುಃಖಕರವಾದ ವಿಷಕ್ಕೆ ಔಷಧಪ್ರಾಯವಾದ, ಆ ಪರತತ್ವದ ಅಪರ ಅಥವಾ ಸಗುಣಸ್ವರೂಪವನ್ನೂ ಶ್ರದ್ಧಾಭಕ್ತಿಪೂರ್ವಕವಾಗಿ ಧ್ಯಾನಿಸಿ, ವಂದಿಸುತ್ತೇನೆ. ||೧||

ಸತ್ರವೆಂಬ ಮಹಾಯಜ್ಞವನ್ನು ಮಾಡಲು ಸೇರಿದ್ದ ಋಷಿಗಳೆಲ್ಲರೂ ಕಡೆಯಲ್ಲಿ ಸಭೆಸೇರಿ, ಸಮಸ್ತವಾದ ವೇದಗಳ ಮುಖ್ಯವಾದ ಅರ್ಥವನ್ನು ತಿಳಿಯಲು ಸಿದ್ಧರಾದರು. ಅವರು ಎಲ್ಲರಿಗೂ ಹಿತವನ್ನುಂಟುಮಾಡುವುದರಲ್ಲಿ ಆಸಕ್ತಿಯುಳ್ಳವರು, ಸಾರವುಳ್ಳ ಮತ್ತು ಸಾರವಿಲ್ಲದ ಪದಾರ್ಥಗಳನ್ನು ವಿವೇಚನೆಮಾಡಬಲ್ಲವರು. ಆ ಋಷಿಗಳು ಪರತತ್ವದ ಪರಸ್ವರೂಪವನ್ನು ತಿಳಿದು ಕೃತಾರ್ಥರಾಗಿದ್ದರೂ, ಲೋಕಾನುಗ್ರಹಕ್ಕಾಗಿ ವರ್ಣಾಶ್ರಮಧರ್ಮರೂಪವಾದ ಕರ್ಮಗಳನ್ನು ಫಲದಲ್ಲಿ ಆಸೆಯನ್ನಿಡದೇ, ಜನಸೇವೆ ಎಂಬ ಭಾವದಿಂದ ಆಚರಿಸುವುದೇ ಪರಮೇಶ್ವರನ ಆರಾಧನೆಯು. ಇದರಿಂದ ಚಿತ್ತಶುದ್ಧಿಯೂ, ಜ್ಞಾನಪ್ರಾಪ್ತಿಯೋಗ್ಯತೆಯೂ ಉಂಟಾಗಿ, ಪರತತ್ವದ ಸಾಕ್ಷಾತ್ಕಾರವು ಎಲ್ಲರಿಗೂ ಉಂಟಾಗಲೆಂದು ಋಷಿಗಳು ವಿಚಾರಪ್ರಚಾರಕಾರ್ಯಗಳಲ್ಲಿ ತೊಡಗಿದರೆಂದು ಭಾವವು. ||೨||

ಆ ಋಷಿಗಳು ಆಯಾಸಪಟ್ಟು ಮನೆಗೆ ಬಂದ ಅತಿಥಿಗಳನ್ನುಪಚರಿಸುವವರು ; ಸ್ನೇಹದಿಂದಲೂ ದಯೆಯಿಂದಲೂ ಕೂಡಿದವರು ; ತಿಳಿಗೇಡಿಗಳನ್ನು ಔದಾಸೀನ್ಯದಿಂದ ನೋಡತಕ್ಕವರು. ||೩||

ಅವರು ವೇದಗಳನ್ನು ಕಲಿಯುವುದರಲ್ಲಿ ಆಸಕ್ತಿಯುಳ್ಳವರು ; ವಿಷಯಗಳ ಕಡೆಗೆ ಓಡದೆ ತನ್ನಲ್ಲಿಯೇ ಶಾಂತವಾಗಿ ಚಾಂಚಲ್ಯವಿಲ್ಲದಿರುವ ಮನಸ್ಸುಳ್ಳವರು ; ಸುಖ ದುಃಖ ಮುಂತಾದ ದ್ವಂದ್ವಗಳ ಕೋಟಲೆಗಳಿಂದಲೂ ಕಾಮಕ್ರೋಧ ಮುಂತಾದ ಆರು ಬಗೆಯ ಹಗೆಗಳಿಂದಲೂ ಬಿಡಲ್ಪಟ್ಟಿರುವವರು. ||೪||

ಪರಪುಷ್ಟ್ಯಾ ಮಹಾಪ್ರೀತಾಃ ಪ್ರಾಜ್ಞಾ ಮಾನವಿವರ್ಜಿತಾಃ ।
ಗವಾಂ ಶುಶ್ರೂಷಣೇ ಯುಕ್ತಾಃ ಗುರುಶುಶ್ರೂಷಣೇ ರತಾಃ ॥೫॥

ವೃದ್ಧಸೇವಾಽಭಿಸಂಪನ್ನಾಃ ವೇದವಿತ್ಪೂಜನೇ ರತಾಃ ।
ಋಜವೋ ಮೃದವಃ ಸ್ವಸ್ಥಾಃ ಸರ್ವದ್ವಂದ್ವವಿವರ್ಜಿತಾಃ ॥೬॥

ರುದ್ರಾಕ್ಷಮಾಲಾಭರಣಾಃ ಸಿತಭಸ್ಮಾವಕುಂಠಿತಾಃ ।
ತ್ರಿಪುಂಡ್ರಾವಳಿಭಿರ್ದೀಪ್ತಾಃ ಜಟಾವಲ್ಕಲಸಂಯುತಾಃ ॥೭॥

ಲಿಂಗಾರ್ಚನಪರಾ ನಿತ್ಯಂ ಶಿವಸ್ಯಾಮಿತತೇಜಸಃ ।
ಶಿವಾಭಿಮಾನಸಂಪನ್ನಾಶ್ಶಿವಭಕ್ತಿಪರಾಯಣಾಃ ॥೮॥

ಆ ಋಷಿಗಳು ಇತರರ ಅಭಿವೃದ್ಧಿಯಲ್ಲಿ ಕರುಬದೆ ಸಂತೋಷಪಡುವವರು ; ತಿಳಿವಳಿಕೆಯುಳ್ಳವರು ; ಅಹಂಕಾರವಿಲ್ಲದವರು ; ಗೋವುಗಳ ಮತ್ತು ಗುರುಗಳ ಸೇವೆಯಲ್ಲಿ ಆಸಕ್ತಿಯುಳ್ಳವರು. ||೫||

ಆ ಋಷಿಗಳು ಹಿರಿಯರನ್ನು ಉಪಚರಿಸುವುದರಲ್ಲಿಯೂ, ವೇದಗಳನ್ನು ತಿಳಿದವರನ್ನು ಗೌರವಿಸುವುದರಲ್ಲಿಯೂ ಆದರವುಳ್ಳವರು ; ಕಪಟವಿಲ್ಲದೆ ಋಜುವಾದ, ಕಾಠಿಣ್ಯವಿಲ್ಲದೆ ಮೃದುವಾದ ಸ್ವಭಾವವುಳ್ಳವರು ; ರಾಗದ್ವೇಷಾದಿ ದ್ವಂದ್ವಗಳಿಂದ ಚಲನೆಯಿಲ್ಲದೆ ತಮ್ಮಲ್ಲಿಯೇ ಉಪಶಾಂತರಾಗಿರುವವರು. ||೬||

ರುದ್ರಾಕ್ಷಮಾಲಿಕೆಯಿಂದ ಅಲಂಕಾರವುಳ್ಳವರು ; ಶುಭ್ರವಾದ ವಿಭೂತಿಯಿಂದ ಲೇಪನವುಳ್ಳವರು ; ಶಾಸ್ತ್ರೋಕ್ತವಾದ ಆಯಾ ಸ್ಥಾನಗಳಲ್ಲಿ ಧರಿಸಿರುವ ತ್ರಿಪುಂಡ್ರಗಳಿಂದ ಪ್ರಕಾಶಮಾನರಾಗಿರುವವರು ; ಜಡೆಯಾಗಿರುವ ಕೇಶವನ್ನೂ ನಾರುಮಡಿಯನ್ನೂ ಧರಿಸಿರುವವರೂ ಆಗಿದ್ದಾರೆ. ||೭||

ಆ ಋಷಿಗಳು ಅಪಾರವಾದ ತೇಜಸ್ಸುಳ್ಳ ಶಿವನ ತೋರುವಿಕೆಗೆ ಸಹಕಾರಿಯಾದ ಲಿಂಗವನ್ನು ಸರ್ವದಾ ಪೂಜಿಸುವುದರಲ್ಲಿ ಆಸಕ್ತರಾದವರು ; ಶಿವನಲ್ಲಿ ಹೆಚ್ಚಾದ ಗೌರವದಿಂದ ಶಿವನನ್ನು ಎಡೆಬಿಡದೆ ಧ್ಯಾನಮಾಡುವುದೆಂಬ ಭಕ್ತಿಯೇ ಮೋಕ್ಷಕ್ಕೆ ಉತ್ತಮವಾದ ದಾರಿಯೆಂದು ನಂಬಿರುವವರು. ||೮||

ಶಿವಶಬ್ದಜಪಧ್ವಸ್ತಪಾಪಪಞ್ಜರಸುಂದರಾಃ ।
ಸಂಸಾರವಿಷವೃಕ್ಷಸ್ಯ ಮೂಲಚ್ಛೇದನತತ್ಪರಾಃ ॥೯॥

ಶ್ರೌತಸ್ಮಾರ್ತಸಮಾಚಾರಾಃ ಸರ್ವೇ ಗೋತ್ರರ್ಷಯೋ ವರಾಃ ।
ವ್ಯಾಸಪ್ರಸಾದಸಂಪನ್ನಂ ವಿಶ್ವಜ್ಞಾನಮಹೋದಧಿಂ ॥೧೦॥

ವಿಶ್ವಾತ್ಮವೇದಿಸಂ ಸಾಕ್ಷಾದ್ವಿಧ್ವಸ್ತಭವಕಾನನಂ ।
ಸ್ಮೃತ್ವಾ ಭಕ್ತ್ಯಾ ಮಹಾತ್ಮಾನಂ ತುಷ್ಟುವುಸ್ಸೂತಮುತ್ತಮಂ ॥೧೧॥

ಏತಸ್ಮಿನ್ನಂತರೇ ಶ್ರೀಮಾನ್ ಮಹಾಕಾರುಣಿಕೋತ್ತಮಃ ।
ಸರ್ವಜ್ಞಸ್ಸರ್ವಭೂತಾನಾಮಭೀಷ್ಟಫಲದಃ ಪ್ರಭುಃ ॥೧೨॥

ಅವರು ಪಂಜರದ ಹಾಗೆ ನಿರ್ಬಂಧ ದುಃಖವನ್ನುಂಟುಮಾಡಿರುವ ಪಾಪವು ಶಿವಪಂಚಾಕ್ಷರೀಮಂತ್ರವನ್ನು ಜಪಿಸುವುದರ ಮೂಲಕ ನಾಶವಾಗಿರುವುದರಿಂದ ಮನೋಹರರಾಗಿರುತ್ತಾರೆ; ಜನನಮರಣ ಪ್ರವಾಹರೂಪವಾದ ಸಂಸಾರವೆಂಬ ದುಃಖವನ್ನುಂಟುಮಾಡುವ ವಿಷವೃಕ್ಷದ ಬೇರನ್ನು ಕತ್ತರಿಸುವುದರಲ್ಲಿ ಆಸಕ್ತರಾಗಿರುತ್ತಾರೆ. ||೯||

ಅವರು ಅಗ್ನಿಹೋತ್ರ, ಇಷ್ಟಿ, ಯಾಗ ಮುಂತಾದ ವೇದವಲ್ಲಿ ಹೇಳಿರುವ ಶ್ರೌತ ಕರ್ಮಗಳನ್ನೂ, ತಿಳಿವಳಿಕೆಯನ್ನು ಸಂಪಾದಿಸಿ ಹರಡುವುದು, ಅತಿಥಿಸತ್ಕಾರಮಾಡುವುದು ಮುಂತಾದ ಸ್ಮೃತಿಗಳಲ್ಲಿ ಹೇಳಿರುವ ಸ್ಮಾರ್ತಕರ್ಮಗಳನ್ನೂ ಚೆನ್ನಾಗಿ ಆಚರಿಸುತ್ತಾ ಅವರೆಲ್ಲರೂ ಕಾಶ್ಯಪಾದಿಗೋತ್ರಗಳೆಂಬ ವಂಶಗಳನ್ನು ಸ್ಥಾಪಿಸಿದ ಮಹರ್ಷಿಗಳು.

ಹದಿನೆಂಟು ಪುರಾಣಗಳನ್ನು ಮಾಡಿದ ವ್ಯಾಸಮಹರ್ಷಿಯ ಅನುಗ್ರಹಕ್ಕೆ ಪಾತ್ರನಾಗಿರುವ, ಎಲ್ಲ ತಿಳಿವಳಿಕೆಗಳಿಗೂ ಆಶ್ರಯವಾಗಿರುವ, ಈ ಪ್ರಪಂಚ ಸ್ವರೂಪನಾದ ವಿರಾಟ್ಪುರುಷನನ್ನು ಮನಗಂಡಿರುವ, ಸಂಸಾರವೆಂಬ ಕಾಡನ್ನು ನಾಶಮಾಡಿಕೊಂಡಿರುವ, ಮಹಾತ್ಮನಾದ ಶ್ರೇಷ್ಠನಾದ ಸೂತಮಹರ್ಷಿಯನ್ನು ಆ ಋಷಿಗಳು ಭಕ್ತಿಪೂರ್ವಕವಾಗಿ ಸ್ಮರಿಸಿ ಸ್ತೋತ್ರಮಾಡಿದರು. ||೧೦-೧೧||

ಈ ಸಮಯವಲ್ಲಿ ತೇಜಸ್ಸಿನಿಂದ ಕೂಡಿರುವ, ದಯಾಳುಗಳಲ್ಲಿ ಶ್ರೇಷ್ಠನಾದ ಎಲ್ಲವನ್ನೂ ತಿಳಿದಿರುವ, ಎಲ್ಲರ ಕೋರಿಕೆಗಳನ್ನೂ ಸಲ್ಲಿಸುವುದರಲ್ಲಿ ಸಮರ್ಥನಾದ ಸೂತನು, ||೧೨||

ಪ್ರಾದುರಾಸೀನ್ಮಹಾತೇಜಾ ರಾತ್ರೌ ಸೂರ್ಯ ಇವ ಸ್ವಯಂ ।
ತಂ ದೃಷ್ಟ್ವಾ ಮುನಯಸ್ಸರ್ವೇ ವಿಸ್ಮಿತಾ ಗದ್ಗದಸ್ವರಾಃ ॥೧೩॥

ಪ್ರಣಮ್ಯ ದಂಡವದ್ಭೂಮೌ ದತ್ವಾ ತಸ್ಯಾಸನಂ ವರಂ ।
ಪಾದಪ್ರಕ್ಷಾಲನಂ ಕೃತ್ವಾ ಶ್ರದ್ಧಯಾ ಪರಯಾ ಸಹ ॥೧೪॥

ಗಂಧಪುಷ್ಪಾದಿಭಿರ್ದಿವ್ಯೈಃ ಪೂಜ್ಯ ಪುಣ್ಯವತಾಂ ವರಂ ।
ಸಮಾಶ್ವಾಸ್ಯ ಚಿರಂ ಕಾಲಂ ಪ್ರಸನ್ನಮುಖಪಂಕಜಂ ॥೧೫॥

ಪಪ್ರಚ್ಛುಸ್ಸರ್ವವೇದಾರ್ಥಂ ಪ್ರಸನ್ನಾ ಭಾಗ್ಯಗೌರವಾತ್ ।
ಸೋಽಪಿ ಸೂತಸ್ಸ್ವಮಾಚಾರ್ಯಂ ಸ್ಮೃತ್ವಾ ಶಂಭುಂ ಜಗದ್ಗುರುಂ ॥೧೬॥

ಸರ್ವವಿದ್ಯಾಮಯೀಮೀಶಾಂ ಸಾಕ್ಷಾದ್ವಿಘ್ನವಿನಾಯಕಂ ।
ಷಣ್ಮುಖಂ ಚ ಸದಾ ಶುದ್ಧಂ ಪ್ರಣಮ್ಯ ಭುವಿ ದಂಡವತ್ ॥೧೭॥

ರಾತ್ರಿಯ ಕತ್ತಲಲ್ಲಿ ಸೂರ್ಯನು ಉದಯಿಸಿದರೆ ಹೇಗೋ ಹಾಗೆ ಕಾಣಿಸಿಕೊಂಡನು. ಅವನನ್ನು ಕಂಡು ಎಲ್ಲ ಋಷಿಗಳೂ ಆಶ್ಚರ್ಯದಿಂದ ಮತ್ತು ಸಂತೋಷದಿಂದ ಗದ್ಗದ ಧ್ವನಿಯುಳ್ಳವರಾಗಿ— ॥೧೩॥

ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಉತ್ತಮವಾದ ಆಸನವನ್ನು ಕೊಟ್ಟು ಹೆಚ್ಚಾದ ಭಕ್ತಿಯಿಂದ ಸೂತಮಹರ್ಷಿಯ ಕಾಲುಗಳನ್ನು ತೊಳೆದು— ॥೧೪॥

ಉತ್ತಮವಾದ ಗಂಧ ಹೂವು ಮುಂತಾದವುಗಳಿಂದ ಪೂಜಿಸಿ ಬಹಳ ಹೊತ್ತು ಉಪಚರಿಸಲು, ಆಯಾಸವನ್ನು ಪರಿಹರಿಸಿಕೊಂಡು ಸಂತೋಷಹೊಂದಿದ ಮುಖಕಮಲವುಳ್ಳ ಸೂತನನ್ನು ಕುರಿತು, ॥೧೫॥

ಪುಣ್ಯವಿಶೇಷದಿಂದ ನಿರ್ಮಲವಾದ ಮನಸ್ಸುಳ್ಳ ಆ ಋಷಿಗಳು ಎಲ್ಲ ವೇದಗಳ ತಾತ್ಪರ್ಯಾರ್ಥವೇನೆಂಬುದನ್ನು ಕೇಳಿದರು.

ಆ ಸೂತಮುನಿಯು ಕೂಡ ಸಮಸ್ತ ಪ್ರಪಂಚಕ್ಕೂ ಜ್ಞಾನಪ್ರದನಾದ ಶಂಕರನನ್ನೂ, ಆಚಾರ್ಯನನ್ನೂ, ಸಮಸ್ತ ವಿದ್ಯಾಸ್ವರೂಪಳಾದ ಸರಸ್ವತಿಯನ್ನೂ, ನೇರವಾಗಿ ವಿಘ್ನಗಳನ್ನು ಪರಿಹರಿಸುವ ಗಣಪತಿಯನ್ನೂ, ನಿರ್ಮಲಸ್ವಭಾವವುಳ್ಳ

ಕೃತಾಂಜಲಿಪುಟೋ ಭೂತ್ವಾ ಮುನೀನಾಲೋಕ್ಯ ಸುವ್ರತಾನ್ ।
ವಕ್ತುಮಾರಭತೇ ಸೂತಃ ಸರ್ವವೇದಾರ್ಥಮುತ್ತಮಂ ॥೧೮॥

ಮಹೇಶ್ವರಂ ಸರ್ವಜಗದ್ವಿಭಾಸಕಂ
ದಿವಾಕರಾದಿಪ್ರಥಿತೌಜಸಾಮಪಿ ।
ಅಗೋಚರಂ ಭಕ್ತಿಪುರಸ್ಸರಂ ಸದಾ
ನಮಾಮಿ ಸಂಸಾರಮಹಾವಿಷೌಷಧಂ ॥೧೯॥

ಪರಾನುಭೂತಿಂ ಭವಪಾಶನಾಶಿನೀಂ
ಸದಾಶಿವಸ್ಯಾಪ್ಯತಿಶೋಭನಪ್ರದಾಂ ।
ಉಮಾಽಭಿಧಾಮುತ್ತಮಚಿತ್ತವೃತ್ತಿದಾಂ
ನಮಾಮಿ ನಾನಾವಿಧಲೋಕವೈಭವಾಂ ॥೨೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಸರ್ವವೇದಾರ್ಥಪ್ರಶ್ನೋ ನಾಮ ಪ್ರಥಮೋಽಧ್ಯಾಯಃ

ಕುಮಾರಸ್ವಾಮಿಯನ್ನೂ, ಉದ್ದೇಶಿಸಿ ಭೂಮಿಯಲ್ಲಿ ಸಾಷ್ಟಾಂಗ ಪ್ರಣಾಮವನ್ನು ಮಾಡಿ— ॥೧೬-೧೭॥

ಸೂತಪೌರಾಣಿಕನು ಜೊಗಸೆಗೂಡಿದ ಕೈಗಳುಳ್ಳವನಾಗಿ ಉತ್ತಮಾಚಾರ ಸಂಪನ್ನರಾದ ಮುನಿಗಳನ್ನು ನೋಡಿ ಎಲ್ಲ ವೇದಗಳ ಮುಖ್ಯಾರ್ಥವನ್ನು ಹೇಳಲು ಉಪಕ್ರಮಿಸಿ ಮಂಗಳವನ್ನು ಆಚರಿಸಿ ತಿಳಿಸುತ್ತಾನೆ. ॥೧೮॥

ಪ್ರಸಿದ್ಧವಾದ ಪ್ರಕಾಶವುಳ್ಳ ಸೂರ್ಯಾದಿಗಳಿಗೂ ಸರ್ವಪ್ರಪಂಚದ ಜ್ಞಾನವನ್ನುಂಟುಮಾಡಿಕೊಡುವಂಥ, ಜನನಮರಣಪ್ರವಾಹದ ಸಂಬಂಧವೆಂಬ ದೊಡ್ಡ ವಿಷಕ್ಕೆ ಔಷಧಿಯ ಹಾಗೆ ಪರಿಹಾರಕನಾದಂಥ, ಇಂದ್ರಿಯವಾಙ್ಮನಸ್ಸುಗಳಿಗೆ ವಿಷಯನಾಗದೆ ಇರುವಂಥ, ದೇವದೇವನಾದ ಈಶ್ವರನನ್ನು ಸರ್ವಕಾಲದಲ್ಲೂ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. ॥೧೯॥

ಉತ್ತಮವಾದ ಬ್ರಹ್ಮಾಪರೋಕ್ಷಾನುಭವಸ್ವರೂಪಳಾದಂಥ, ಸಂಸಾರವೆಂಬ ಬಲೆಯನ್ನು ತಪ್ಪಿಸುವಂಥ, ಸರ್ವದಾ ಮಂಗಳಸ್ವರೂಪನಾದ ಪರಮೇಶ್ವರನಿಗೂ

ಮಂಗಳವನ್ನುಂಟುಮಾಡುವಂಥ, ನಿರ್ಮಲವಾದ ಮನೋವೃತ್ತಿಯನ್ನು ಕೊಡುವಂಥ, ಅನೇಕಪ್ರಕಾರಗಳಾದ ಲೋಕಗಳ ಪ್ರಭುತ್ವವನ್ನು ಪಡೆದಿರುವ ಕೇನೋಪನಿಷತ್ತಿನಲ್ಲಿ ವಿವರಿಸಿರುವಂತೆ ಉಮಾ ಎಂಬ ಹೆಸರುಳ್ಳ ಜ್ಞಾನಪ್ರದಳಾದ ದೇವತೆಯನ್ನು ನಮಸ್ಕರಿಸುತ್ತೇನೆ. ||೨೦||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಎಲ್ಲ ವೇದಗಳ ಮುಖ್ಯತಾತ್ಪರ್ಯವನ್ನು ಕೇಳಿರುವ
ಮೊದಲನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

॥ ದ್ವಿತೀಯೋಽಧ್ಯಾಯಃ ॥

ಎರಡನೆಯ ಅಧ್ಯಾಯವು

(ಪರಾಪರವೇದಾರ್ಥವಿಚಾರಃ)

॥ ಓಂ ಸೂತ ಉವಾಚ ॥

ಅಥ ವಕ್ಷ್ಯಾಮಿ ವೇದಾರ್ಥಂ ಶೃಣುತ ಶ್ರದ್ಧಯಾ ದ್ವಿಜಾಃ ।
ಶ್ರದ್ಧಯಾ ರಹಿತಂ ಸರ್ವಂ ಫಲಾಯ ನ ಕದಾಚನ ॥೧॥

ಪರಾಪರವಿಭಾಗೇನ ವೇದಾರ್ಥೋ ದ್ವಿವಿಧಃ ಸ್ಮೃತಃ ।
ವೇದಾರ್ಥಃ ಪರಮಸ್ಸಾಕ್ಷಾತ್ ಪರಾತ್ಪರತರಂ ಪರಂ ॥೨॥

ಎಲೈ ದ್ವಿಜರೇ, ವೇದಗಳ ತಾತ್ಪರ್ಯವನ್ನು ಈಗ ವಿವರಿಸಿ ಹೇಳುವೆನು. ಆದರದೊಡನೆ ಕೇಳಿ. ಏಕೆಂದರೆ, ಆದರವಿಲ್ಲದ ಯಾವ ಕೆಲಸವೂ ಸಫಲವಾಗುವುದಿಲ್ಲ. ॥೧॥

ಮುಂಡಕೋಪನಿಷತ್ತಿನಲ್ಲಿ ೧.೪.ರಲ್ಲಿ ಸೂಚಿಸಿರುವಂತೆ ಪರವೇದಾರ್ಥವೆಂದೂ ಅಪರ ವೇದಾರ್ಥವೆಂದೂ ವೇದಾರ್ಥಜ್ಞಾನವು ಎರಡು ಬಗೆಯಾಗಿದೆ. ಅವುಗಳಲ್ಲಿ ಪರವೇದಾರ್ಥವು, ಬ್ರಹ್ಮಾತ್ಮೈಕ್ಯವು, ಎಲ್ಲಕ್ಕಿಂತಲೂ ಶ್ರೇಷ್ಠವಾದುದು. ॥೨॥

ಅಪರವೇದಾರ್ಥಕ್ಕೆ ಧರ್ಮವೆಂದು ಹೆಸರು. ಅದರ ಆಚರಣೆಯು ಚಿತ್ತಶುದ್ಧಿ, ಜ್ಞಾನಪ್ರಾಪ್ತಿಗಳ ಮೂಲಕವಾಗಿ ಸಾಧಕರಿಗೆ ಸಹಾಯಮಾಡುವಂಥದ್ದಾಗಿದೆ. ಹೀಗೆ ಅಪರವೇದಾರ್ಥವು ಧರ್ಮವನ್ನೂ ಅಧರ್ಮವನ್ನೂ ಒಳಗೊಳ್ಳುತ್ತದೆ; ಏಕೆಂದರೆ

ಅಪರೋ ಧರ್ಮಸಂಜ್ಞಸ್ಸ್ಯಾತ್ತತ್ಪರಪ್ರಾಪ್ತಿಸಾಧನಂ ।
ಅಧರ್ಮಃ ಪರಿಹಾರಾಯ ವೇದಾರ್ಥತ್ವೇನ ಭಕ್ತಿತಃ ॥೩॥

ಗೀಯತೇ ಮುನಿಶಾರ್ದೂಲೈಃ ಕದಾಚಿನ್ನ ತು ಮುಖ್ಯತಃ ।
ಅಧರ್ಮಪರಿಹಾರೇಣ ಧರ್ಮಸ್ತ್ವವ್ಯಾಕುಲೋ ಭವೇತ್ ॥೪॥

ಅವ್ಯಾಕುಲೇನ ಧರ್ಮೇಣ ಶ್ರದ್ಧಯಾಽನುಷ್ಠಿತೇನ ಚ ।
ವೇದಾರ್ಥಃ ಪರಮಸ್ಸಾಕ್ಷಾತ್ಸಿದ್ಧ್ಯತ್ಯೇವ ನ ಸಂಶಯಃ ॥೫॥

ಸೋಽಯಂ ಸ್ವಾಶ್ರಿತಯಾ ಶಕ್ತ್ಯಾ ಬದ್ಧವತ್ಪ್ರತಿಭಾಸತೇ ।
ಏಕೈವ ಪರಮಾ ಶಕ್ತಿಃ ಮಾಯಾ ದುರ್ಘಟಕಾರಿಣೀ ॥೬॥

ಶಿವಸ್ಯಾನಂತರೂಪಾ ಸಾ ವಿದ್ಯಯಾ ತಸ್ಯ ನಶ್ಯತಿ ।
ಯಾ ವಿನಶ್ಯತಿ ಸಾ ಮಾಯಾ ಚಿನ್ಮಾತ್ರೇ ಪರಿಕಲ್ಪಿತಾ ॥೭॥

ಮುನಿಶ್ರೇಷ್ಠರು ಅಧರ್ಮವನ್ನು ಆಚರಿಸದೆ ಇರುವುದಕ್ಕಾದರೂ ತಿಳಿಯಬೇಕಾಗಿರುವುದರಿಂದ ಮುಖ್ಯವಾಗಿ ಅಲ್ಲದಿದ್ದರೂ ಪರ್ಯಾಯವಾಗಿ ಅದೂ ವೇದಾರ್ಥವೆಂದು ಒಂದೊಂದು ಸಲ ಹೇಳುವುದುಂಟು. ಅಧರ್ಮವನ್ನು ಬಿಡುವುದರಿಂದ ಧರ್ಮವು ನಿರ್ಬಾಧಕವಾಗಿ ಆತಂಕವಿಲ್ಲದ್ದಾಗುತ್ತದೆ. ||೩-೪||

ಗುರುವೇದವಾಕ್ಯಗಳಲ್ಲಿ ವಿಶ್ವಾಸವಿಟ್ಟು ಆಚರಿಸಿದ ಆತಂಕವಿಲ್ಲದ ಧರ್ಮದಿಂದ ಪರವೇದಾರ್ಥದ ಸಾಕ್ಷಾತ್ಕಾರರೂಪವಾದ ಅನುಭವವು ಸಂದೇಹವಿಲ್ಲದೆ ಫಲಿಸುವುದು. ||೫||

ಆತ್ಮನು ಸ್ವರೂಪದಿಂದ ನಿತ್ಯಮುಕ್ತನಾದರೂ ತನ್ನನ್ನು ಅವಲಂಬಿಸಿ, ಆವರಿಸಿರುವ ಮಾಯಾಶಕ್ತಿಯಿಂದ ಜೀವರ ಹಾಗೆ ತೋರುತ್ತಾನೆ. ಎಲ್ಲಕ್ಕಿಂತ ಮೀರಿದ ಈ ಮಾಯಾಶಕ್ತಿಯು ಒಂದೇ ಆಗಿದೆ. ಜೀವರು ಅನೇಕರಾದರೂ ಈ ಮಾಯಾಶಕ್ತಿಯು ಎಲ್ಲವನ್ನೂ ಆವರಿಸಿ ಒಂದೇ ಆಗಿದೆ. ಅಲ್ಲದೆ ಇದು ಅಸಾಧ್ಯಕಾರ್ಯಗಳನ್ನೂ ಮಾಡಬಲ್ಲದ್ದಾಗಿದೆ. ||೬||

ಚೈತನ್ಯಾಶ್ರಯವಾದ ಎಂದರೆ ಚೈತನ್ಯವೇ ಅಧಿಷ್ಠಾನವಾಗಿ ಉಳ್ಳ ಮತ್ತು ಚೈತನ್ಯವಿಷಯಕವಾದ ಈ ಅಜ್ಞಾನವು ನಾನಾರೂಪವಾಗಿ ತೋರುತ್ತಿರುತ್ತದೆ. ಇದು ಆತ್ಮಜ್ಞಾನದಿಂದ ಎಂದರೆ ಶಿವನ ನಿಜಸ್ವರೂಪಜ್ಞಾನದಿಂದ ನಷ್ಟವಾಗುತ್ತದೆ.

ಅಧಿಷ್ಠಾನಾವಶೇಷೋ ಹಿ ನಾಶಃ ಕಲ್ಪಿತವಸ್ತುನಃ ।
ಭಾವಸ್ಯೈವ ಹ್ಯಭಾವತ್ವಂ ನಾಶೋಽಭಾವಸ್ಯ ಭಾವತಾ ॥೮॥

ಭಾವಾಭಾವಸ್ವರೂಪಾಭ್ಯಾಮನ್ಯ ಏವ ಹಿ ಕಲ್ಪಿತಃ ।
ಅಧಿಷ್ಠಾನಸ್ಯ ನಾಶೋ ನ ಸತ್ಯತ್ವಾದೇವ ಸರ್ವದಾ ॥೯॥

ಸರ್ವಾಧಿಷ್ಠಾನಮೀಶಾನಂ ಪಶ್ಯನ್ನೇವ ವಿಮುಚ್ಯತೇ ।
ಈಶಾನವಿಷಯಂ ಜ್ಞಾನಂ ವೇದಾಂತಶ್ರವಣಾದಿನಾ ॥೧೦॥

ಯಾವುದು ನಷ್ಟವಾಗುತ್ತದೋ ಅದೇ ಮಾಯೆ ಎನ್ನಿಸಿಕೊಳ್ಳುತ್ತದೆ. ಅದು ಚೈತನ್ಯ ಸಾಮಾನ್ಯದಲ್ಲಿ ಅಜ್ಞಾನದಿಂದ ಕಲ್ಪಿತವಾಗಿ ತೋರುತ್ತಿರುತ್ತದೆ. ॥೭॥

ಕಲ್ಪಿತವಾದ ವಸ್ತುವಿನ ನಾಶವೆಂದರೆ ಅದಕ್ಕೆ ಆಧಾರವಾಗಿರುವ ವಸ್ತು ಮಾತ್ರ ಉಳಿಯುವುದೇ ಆಗಿರುತ್ತದೆ. ಆದ್ದರಿಂದ ಆತ್ಮನಿಗಿಂತ ಬೇರೆಯಾದ ನಿತ್ಯವೂ ನಿರ್ವಿಕಾರಿಯೂ ಆಗಿರುವ ಮತ್ತೊಂದು ಪದಾರ್ಥವಿಲ್ಲವು.

ಭಾವಪದಾರ್ಥವು ಅಭಾವತ್ವವನ್ನು ಎಂದರೆ ಇಲ್ಲದಿರುವಿಕೆಯನ್ನು ಪಡೆಯುವುದಕ್ಕೆ ನಾಶವೆಂದು ಹೆಸರು. ಹಾಗೆಯೇ ಅಭಾವಕ್ಕೆ ಭಾವತ್ವವುಂಟಾಗುವುದೂ ನಾಶವೆನಿಸುತ್ತದೆ. ॥೮॥

ಕಲ್ಪಿತಪದಾರ್ಥವೆಲ್ಲವೂ ಭಾವಪದಾರ್ಥದಿಂದಲೂ ಅಭಾವಪದಾರ್ಥದಿಂದಲೂ ಭಿನ್ನವಾದುದಾಗಿರುತ್ತದೆ. ಹೇಗೆಂದರೆ, ಹಗ್ಗದಲ್ಲಿ ಕಲ್ಪಿತವಾಗಿ ತೋರುತ್ತಿರುವ ಹಾವು ಭಾವಪದಾರ್ಥವಾಗಲಾರದು. ಏಕೆಂದರೆ ರಜ್ಜುಜ್ಞಾನದಿಂದ ಅದು ನಷ್ಟವಾಗುತ್ತದೆ. ಹಾಗೆಯೇ ಆ ಹಾವು ಅಭಾವಪದಾರ್ಥವೂ ಆಗಲಾರದು. ಏಕೆಂದರೆ, ಅದು ತೋರುತ್ತಿರುತ್ತದೆ. ಆದುದರಿಂದ ಕಲ್ಪಿತಪದಾರ್ಥವೆಲ್ಲವೂ ಭಾವಾಭಾವ ಭಿನ್ನವಾದುದು. ಆದರೆ ಅಧಿಷ್ಠಾನವಾದ ಎಂದರೆ ಕಲ್ಪನೆಗೆ ಆಶ್ರಯವಾದ ಹಗ್ಗವು ರಜ್ಜುಜ್ಞಾನದಿಂದ ನಾಶವನ್ನು ಪಡೆಯದೆ ಇರುತ್ತದೆ. ಹಾಗೆಯೇ ಬ್ರಹ್ಮನಲ್ಲಿ ಕಲ್ಪಿತವಾದ ಪ್ರಪಂಚವು ಬ್ರಹ್ಮಜ್ಞಾನದಿಂದ ನಷ್ಟವಾದರೂ ಅಧಿಷ್ಠಾನವಾದ ಬ್ರಹ್ಮವು ಯಾವಾಗಲೂ ಸತ್ಯವಾದುದಾಗಿರುವುದರಿಂದ ನಾಶವಾಗುವುದಿಲ್ಲ. ॥೯॥

ಹಗ್ಗದ ತಿಳಿವಳಿಕೆ ಇಲ್ಲದಿರುವುದರಿಂದ ಕಲ್ಪಿತವಾಗಿರುವ ಹಾವು ಹೇಗೆ ರಜ್ಜುಜ್ಞಾನದಿಂದಲೇ ನಾಶವಾಗುವುದೋ ಹಾಗೆ ಬ್ರಹ್ಮನಲ್ಲಿ ಬ್ರಹ್ಮನ ಅಜ್ಞಾನದಿಂದ ಕಲ್ಪಿತವಾದ ಪ್ರಪಂಚವು ಬ್ರಹ್ಮಜ್ಞಾನದಿಂದಲೇ ನಾಶವಾಗುತ್ತದೆ. ಆದುದರಿಂದ

ಜಾಯತೇ ಪರಹಂಸಸ್ಯ ತಸ್ಯ ಮುಖ್ಯಾಧಿಕಾರಿಣಃ ।
ಆಶ್ರಮಾಂತರನಿಷ್ಠಸ್ಯ ಕ್ರಮಾತ್ತಸ್ಯಾಪಿ ಜಾಯತೇ ॥೧೧॥

ಬ್ರಹ್ಮಲೋಕಮವಾಪ್ನೋತಿ ವನಸ್ಥೋ ನೈಷ್ಠಿಕೋಽಪಿ ಚ ।
ಗೃಹಸ್ಥಃ ಪಿತೃಲೋಕಂ ಚ ಶಿವಜ್ಞಾನಂ ತು ಭಿಕ್ಷುಕಃ ॥೧೨॥

ತತ್ರಾಪಿ ಪ್ರಥಮೋ ಭಿಕ್ಷುಃ ಜ್ಞಾನೇಚ್ಛೋದಯಬಾಧಕಾತ್ ।
ಮಹಾಪಾಪಾದಯತ್ನೇನ ಮುಚ್ಯತೇ ಮುನಿಪುಙ್ಗವಾಃ ॥೧೩॥

ಎಲ್ಲ ಕಲ್ಪಿತಪದಾರ್ಥಗಳಿಗೂ ಅಧಿಷ್ಠಾನವಾದ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳು ವುದರಿಂದಲೇ ಜೀವನು ಮುಕ್ತಿಯನ್ನು ಪಡೆಯುತ್ತಾನೆ. ಅಂತಹ ಈಶ್ವರಜ್ಞಾನವು ವೇದಾಂತವಾಕ್ಯವಿಚಾರದಿಂದ ಉಂಟಾಗುತ್ತದೆ. ಬ್ರಹ್ಮಜ್ಞಾನವು ಮುಖ್ಯಾಧಿಕಾರಿ ಯಾದ ಪರಮಹಂಸಯತಿಗೆ ಉಂಟಾಗುತ್ತದೆ. ಇತರ ಆಶ್ರಮಗಳಲ್ಲಿರುವವರಿಗೂ ಕ್ರಮವಾಗಿ ಎಂದರೆ ಚಿತ್ತಶುದ್ಧಿಯನ್ನು ಪಡೆದು ಅನಂತರದಲ್ಲಿ ಬ್ರಹ್ಮಜ್ಞಾನದಿಂದ ಮೋಕ್ಷವಾಗುತ್ತದೆ. ||೧೦-೧೧||

ಇತರರೆಂದರೆ ನೈಷ್ಠಿಕಬ್ರಹ್ಮಚಾರಿಯು, ಉಪಕುರ್ವಾಣಬ್ರಹ್ಮಚಾರಿಯು, ಗೃಹಸ್ಥನು ಮತ್ತು ವಾನಪ್ರಸ್ಥನು ಎಂದರ್ಥವು. ನೈಷ್ಠಿಕಬ್ರಹ್ಮಚಾರಿಯೂ ವಾನ ಪ್ರಸ್ಥನೂ ಮರಣಾನಂತರದಲ್ಲಿ ಬ್ರಹ್ಮಲೋಕವನ್ನು ಪಡೆದು, ಅಲ್ಲಿ ವೇದಾಂತ ವಿಚಾರಮಾಡಿ ಬ್ರಹ್ಮಜ್ಞಾನವನ್ನು ಪಡೆದು, ಬ್ರಹ್ಮಕಲ್ಪಾಂತದಲ್ಲಿ ಬ್ರಹ್ಮನೊಡನೆ ಮೋಕ್ಷವನ್ನು ಪಡೆಯುತ್ತಾರೆ. ವಾನಪ್ರಸ್ಥನು ಈ ಲೋಕದಲ್ಲಿಯೇ ಕುಟೀಚಕ ಬಹೂದಕ, ಹಂಸ, ಪರಮಹಂಸರ ಆಶ್ರಮಗಳನ್ನು ಕ್ರಮವಾಗಿ ಪಡೆದು ಬ್ರಹ್ಮ ಜ್ಞಾನದಿಂದ ಇಲ್ಲಿಯೇ ಮುಕ್ತನಾಗುತ್ತಾನೆ. ಗೃಹಸ್ಥನು ಬರಿಯ ಕರ್ಮಿಯಾದರೆ ಪಿತೃಲೋಕಕ್ಕೆ ಹೋಗಿ ವಾಪಸುಬರುತ್ತಾನೆ; ಪಂಚಾಗ್ನಿಯ ಉಪಾಸಕನಾದರೆ ಬ್ರಹ್ಮಲೋಕಕ್ಕೆ ಹೋಗಿ ಮೇಲೆ ಹೇಳಿದ ಕ್ರಮದಲ್ಲಿ ಮುಕ್ತನಾಗುತ್ತಾನೆ. ಅಥವಾ ಇಲ್ಲಿಯೇ ವಾನಪ್ರಸ್ಥನಾಗಿ ಕುಟೀಚಕಾದಿ ಆಶ್ರಮಕ್ರಮದಿಂದ ಮುಕ್ತ ನಾಗುವುದೂ ಉಂಟು. ಉಪಕುರ್ವಾಣಬ್ರಹ್ಮಚಾರಿಯು ಗೃಹಸ್ಥಾದಿ ಆಶ್ರಮಕ್ರಮ ದಿಂದ ಮುಕ್ತನಾಗುತ್ತಾನೆ. ಭಿಕ್ಷುಕರು ಅಥವಾ ಸಂನ್ಯಾಸಿಗಳು ಕುಟೀಚಕ, ಬಹೂದಕ, ಹಂಸ, ಪರಮಹಂಸರೆಂದು ನಾಲ್ಕು ತೆರನಾಗಿದಾರೆ. ||೧೨||

ಬ್ರಹ್ಮಜಿಜ್ಞಾಸೆಗೆ ಅಡ್ಡಿಯಾಗಿರುವ ಪಾಪದ ನಿವೃತ್ತಿಯು ಕುಟೀಚಕ ಸಂನ್ಯಾಸದ ಫಲವು. ಶಮ, ದಮ, ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನಗಳ

ದ್ವಿತೀಯಶ್ಶಾಂತಿದಾಸ್ತ್ಯಾದಿಜ್ಞಾನಾಙ್ಗೇಚ್ಛಾಮವಾಪ್ನುಯಾತ್ ।
ತೃತೀಯೋಽಖಿಲವೇದಾಂತಶ್ರವಣೇಚ್ಛಾಮವಾಪ್ನುಯಾತ್ ॥೧೪॥

ಚತುರ್ಥೋಽ ಜ್ಞಾನಮಾಪ್ನೋತಿ ವೇದಾಂತಶ್ರವಣೇನ ತು ।
ಸ ಏವ ಕರ್ಮಸಂನ್ಯಾಸೀ ಪರಹಂಸಸಮಾಶ್ರಯಃ ॥೧೫॥

ಅನ್ಯೇ ಕಾಮ್ಯಪರಿತ್ಯಾಗಾತ್ ಭಿಕ್ಷುಕಾ ಇತಿ ಕೀರ್ತಿತಾಃ ।
ಪರೋಕ್ಷಂ ಬ್ರಹ್ಮವಿಜ್ಞಾನಂ ಶಾಬ್ದಂ ದೇಶಿಕಪೂರ್ವಕಂ ॥೧೬॥

ಬುದ್ಧಿಪೂರ್ವಕೃತಂ ಪಾಪಂ ಕೃತ್ಸ್ನಂ ದಹತಿ ವಹ್ನಿವತ್ ।
ಶಾಬ್ದಂ ಬ್ರಹ್ಮಾತ್ಮವಿಜ್ಞಾನಮಪರೋಕ್ಷಂ ಮಹತ್ತರಂ ॥೧೭॥

ಲಾಭವು ಬಹೂದಕಸಂನ್ಯಾಸದ ಫಲವು. ವೇದಾಂತಶ್ರವಣದಲ್ಲಿ ಇಚ್ಛೆಯು ಹಂಸಾಶ್ರಮದ ಪ್ರಯೋಜನವು. ಅದರಿಂದ ತತ್ತ್ವಜ್ಞಾನಲಾಭವು ಪರಮಹಂಸಾಶ್ರಮದಿಂದುಂಟಾಗುವ ಪ್ರಯೋಜನವು. ||೧೩-೧೪-೧೫||

ಇತರರು ಎಂದರೆ ಕುಟೀಚಕ ಬಹೂದಕ ಹಂಸಸನ್ಯಾಸಿಗಳು ಜ್ಞಾನವೈರಾಗ್ಯಗಳಿಂದ ಕಾಮ್ಯಕರ್ಮಗಳನ್ನು ಬಿಟ್ಟಿರುವುದರಿಂದ ಭಿಕ್ಷುಕರೆನ್ನಿಸಿಕೊಳ್ಳುತ್ತಾರೆ.

ಶ್ರವಣಕ್ಕೂ ಅಧಿಕಾರಿಭೇದದಿಂದ ಪರೋಕ್ಷಜ್ಞಾನ, ಅಪರೋಕ್ಷಜ್ಞಾನ ಎಂಬ ಫಲಗಳು ಉಂಟಾಗುವುವು. ಒಬ್ಬರಿಗೆ ಪೂರ್ವಸಂಸ್ಕಾರವಿದ್ದರೆ, ಗುರೂಪದೇಶವಾದ ಕೂಡಲೆ ಶಬ್ದದಿಂದಲೇ, "ದಶಮಸ್ತ್ವಮಸಿ." ಎಂಬ ರೀತಿಯಲ್ಲಿ ತತ್ತ್ವದ ಅಪರೋಕ್ಷಸಾಕ್ಷಾತ್ಕಾರವಾಗುವುದುಂಟು. ಜನಕ, ಶುಕಾದಿಗಳು ಉದಾಹರಣವು. ||೧೬||

ಪರೋಕ್ಷಜ್ಞಾನವು ಬುದ್ಧಿಪೂರ್ವಕವಾಗಿ ಮಾಡಿದ ಪಾಪವನ್ನು ಬೆಂಕಿಯಂತೆ ನಾಶಮಾಡುತ್ತದೆ; ಕರ್ತೃತ್ವಭೋಕ್ತೃತ್ವಾಭಿಮಾನವಿಲ್ಲದಿರುವುದರಿಂದ ಕರ್ಮಫಲವನ್ನೂ ಸುಖದುಃಖಾನುಭವವನ್ನೂ ತಪ್ಪಿಸುತ್ತದೆ.

ಉಪನಿಷದ್ವಾಕ್ಯದಿಂದ ಉಂಟಾಗುವ ಜೀವಾತ್ಮಪರಮಾತ್ಮರಿಗೆ ಇರುವ ಅಭೇದಜ್ಞಾನವು ಶ್ರೇಷ್ಠವಾದ ಅಪರೋಕ್ಷಜ್ಞಾನವೆನಿಸುತ್ತದೆ. ಆ ಜ್ಞಾನಕ್ಕೆ ವಿಷಯವಾದ ಆತ್ಮವು ಸನ್ನಿಕೃಷ್ಟವಾಗಿರುತ್ತದೆ. ಪ್ರಕಾಶಿಸುವ ಸೂರ್ಯನು ಕತ್ತಲೆಯನ್ನು ನಾಶಮಾಡುವಂತೆ ಅಂಥ ಜ್ಞಾನವು ಸಂಸಾರವನ್ನು ನಾಶಮಾಡುತ್ತದೆ. ಆಶ್ರಯತ್ವ ವಿಷಯತ್ವಭಾಗಿನೀ ನಿರ್ವಿಕಲ್ಪ ಚಿತಿರೇವಕೇವಲಾ ||ಸಂ.ಶಾ.||೧೭||

ಸಂಸಾರನಾಶಕಂ ಪ್ರೋಕ್ತಂ ತಮಸಶ್ಚಂಡಭಾನುವತ್ ।
ಅತೋ ವಿಜ್ಞಾನಲಾಭಾಯ ಪರಹಂಸೋ ಭವೇದ್ದ್ವಿಜಃ ॥೧೮॥

ಕುಟೀಚಕಾಶ್ಚ ಹಂಸಾಶ್ಚ ತಥಾಽನ್ಯೇ ಚ ಬಹೂದಕಾಃ ।
ಯೇ ಭವಿಷ್ಯಂತಿ ತೇ ಕುರ್ಯುಃ ಪ್ರಾಜಾಪತ್ಯೇಷ್ಟಿ ಸಂಜ್ಞಿತಾಂ॥೧೯॥

ಆಗ್ನೇಯೇಷ್ಟಿಂ ದ್ವಿಜಾಃ ಕುರ್ಯುಃ ಪರಹಂಸಾಭಿಲಾಷಿಣಃ ।
ಪಶ್ಚಾತ್ತ್ರೈಧಾತವೀಂ ಕುರ್ಯುಸ್ಸರ್ವೇ ಸಂಯುತಮಾನಸಾಃ ॥೨೦॥

ಯೇಽನಾಹಿತಾಗ್ನಯೋ ವಿಪ್ರಾಃ ತೇಷಾಂ ನೇಷ್ಟಿರ್ವಿಧೀಯತೇ ।
ಸ್ವಸ್ವಾಗ್ನಿಷು ತು ಹೋಮಂ ತೇ ಕುರ್ಯುಶ್ಶ್ರದ್ಧಾಪುರಸ್ಸರಂ ॥೨೧॥

ವಿರಜಾಖ್ಯೈರ್ಮಹಾಮಂತ್ರೈರಾಜ್ಯೇನ ಚರುಣಾಽಪಿ ಚ ।
ಹುತಶೇಷಂ ಚರುಂ ಸಾಜ್ಯಂ ಪ್ರಾಶ್ಯಾಚಮ್ಯೈವ ಸರ್ಪಿಷಾ ॥೨೨॥

ಆದ್ದರಿಂದ ನಿಶ್ಚಯವಾದ ಜ್ಞಾನವನ್ನು ಪಡೆಯುವುದಕ್ಕೋಸ್ಕರ ಪರಮ ಹಂಸಸಂನ್ಯಾಸವನ್ನು ಸ್ವೀಕರಿಸಬೇಕು. ||೧೮||

ಪರಮಹಂಸಾಶ್ರಮವನ್ನು ಸ್ವೀಕರಿಸುವವರು ಆಗ್ನೇಯೇಷ್ಟಿಯನ್ನು ಮಾಡಬೇಕು. ಕಡೆಗೆ ಈ ಎಲ್ಲ ಆಶ್ರಮಿಗಳೂ ಮನೋನಿಗ್ರಹವುಳ್ಳವರಾಗಿ ತ್ರೈಧಾತವೀಷ್ಟಿಯನ್ನು ಆಚರಿಸಬೇಕು. ||೨೦||

ಆಹಿತಾಗ್ನಿಗಳಲ್ಲದ ಬ್ರಾಹ್ಮಣರು ಈ ಮೇಲೆ ಹೇಳಿದ ಇಷ್ಟಿಗಳನ್ನು ಮಾಡಲಾಗದು. ಅಂಥವರು ತಮ್ಮ ತಮ್ಮ ಗೃಹ್ಯಾಗ್ನಿಗಳಲ್ಲಿಯೇ ಶ್ರದ್ಧೆಯುಳ್ಳವರಾಗಿ ವಿರಜಾಹೋಮವನ್ನು ಮಾಡಬೇಕು. ||೨೧||

ವಿರಜಾ ಪದದಿಂದ ಕೂಡಿರುವ ಮಂತ್ರಗಳಿಂದ ತುಪ್ಪದಿಂದಲೂ ಅನ್ನದಿಂದಲೂ ಹೋಮವನ್ನು ಮಾಡಬೇಕು. ಹೋಮ ಮಾಡಿದಮೇಲೆ, ಉಳಿದಿರುವ ಅನ್ನವನ್ನು ತುಪ್ಪದೊಡನೆ ಭೋಜನಮಾಡಿ, ತುಪ್ಪದಿಂದ ಆಚಮನವನ್ನು ಮಾಡಿ, ||೨೨||

ಪೂರ್ಣಾಹುತಿಂ ಪುನಃ ಕುರ್ಯಾತ್ ಪ್ರಣವೇನಾಗ್ನಿಜಾಯಯಾ ।
ಸಹಾಗ್ನಿಂ ಪುನರಾಘ್ರಾಯ ಅಯಂ ತೇ ಯೋನಿರ್ಋತ್ವಿಜಃ ॥೨೩॥

ಇತಿ ಮಂತ್ರೇಣ ಕುರ್ಯಾತ್ತು ಪ್ರೈಷೋಚ್ಚಾರಣಮಾದರಾತ್ ।
ಸಂನ್ಯಾಸಾಧ್ವರ್ಯುಣಾ ದತ್ತಂ ದಂಡಕಾಷಾಯಮೇವ ಚ ॥೨೪॥

ಪರಿಗೃಹ್ಯ ಗುರೋಃ ಪಾದಂ ಪ್ರಣಮ್ಯ ಶ್ರದ್ಧಯಾ ಸಹ ।
ವೇದಾಂತಶ್ರವಣಂ ಕುರ್ಯಾತ್ ಜ್ಞಾನಾರ್ಥಂ ಭಿಕ್ಷುಕೋತ್ತಮಃ ॥೨೫॥

ಕಾಮ್ಯಕರ್ಮಫಲೇ ದೋಷಂ ವಿದಿತ್ವಾ ಪ್ರತಿಷಿದ್ಧವತ್ ।
ಕಾಮ್ಯಕರ್ಮ ತ್ಯಜಂಸ್ತುಲ್ಯೋ ಭಿಕ್ಷುಣಾ ಫಲತೋ ಭವೇತ್ ॥೨೬॥

ಕರಗಿರುವ ತುಪ್ಪದಿಂದ ಪೂರ್ಣಾಹುತಿಯನ್ನು ಪುನಃ ಓಂಕಾರಸ್ವಾಹಾಕಾರಗಳಿಂದ ಹೋಮಮಾಡಿ, 'ಅಯಂ ತೇ ಆತ್ಮ' ಎಂಬ ಮಂತ್ರದಿಂದ ಅಗ್ನಿಯನ್ನು ಆಘ್ರಾಣಿಸಿ ಅಗ್ನಿಯನ್ನು ಆತ್ಮಸಮಾರೋಪಣಮಾಡಿಕೊಂಡು ಆದರಪೂರ್ವಕವಾಗಿ ಪ್ರೈಷೋಚ್ಚಾರಣವನ್ನು ಮಾಡಬೇಕು. ॥೨೩॥

ಸಂನ್ಯಾಸಕ್ರಮದಲ್ಲಿ ಅಧ್ವರ್ಯುವಾಗಿರುವ ಋತ್ವಿಜನಿಂದ ಕೊಡಲ್ಪಟ್ಟ ದಂಡ, ಕಾವೀಬಟ್ಟೆಗಳನ್ನು ಸ್ವೀಕರಿಸಿ ಭಕ್ತಿಪೂರ್ವಕವಾಗಿ ಗುರುಗಳ ಕಾಲುಗಳಿಗೆ ನಮಸ್ಕರಿಸಿ ಸಂನ್ಯಾಸಿಗಳಲ್ಲಿ ಶ್ರೇಷ್ಠರಾಗುವವರು ವೇದಾಂತವಾಕ್ಯಾರ್ಥವಿಚಾರವನ್ನು ಜ್ಞಾನಕ್ಕಾಗಿ ಮಾಡಬೇಕು. ॥೨೪-೨೫॥

ಶಾಸ್ತ್ರನಿಷಿದ್ಧಕರ್ಮವನ್ನು ಹೇಗೋ ಹಾಗೆ ಕಾಮ್ಯಕರ್ಮದ ಫಲದಲ್ಲೂ ದೋಷವನ್ನು ಮನಗಂಡು, ಎಂದರೆ ಫಲವನ್ನು ಅನುಭವಿಸುವುದರಿಂದ ಅಂತಹ ಫಲದಲ್ಲಿ ಆಶೆಯುಂಟಾಗುತ್ತದೆ; ಅದರಿಂದ ಅಂಥ ಕರ್ಮವನ್ನು ಮತ್ತೆ ಮಾಡುತ್ತಾನೆ; ಅದರಿಂದ ಪುನಃ ಫಲಪ್ರಾಪ್ತಿಯಾಗುತ್ತದೆ, ಮತ್ತೆ ಇಚ್ಛೆಯುಂಟಾಗುತ್ತದೆ; ಈ ರೀತಿಯಾಗಿ ಜನನಮರಣಪ್ರವಾಹರೂಪವಾದ ಸಂಸಾರ ಸಂಬಂಧದಿಂದ ಬಿಡುಗಡೆ ಹೊಂದದಿರುವಿಕೆ ಎಂಬ ದೋಷವನ್ನು ಮನಗಂಡು, ಕಾಮ್ಯಾದಿಕರ್ಮಗಳನ್ನು ಫಲಾಶೆಯನ್ನು ಬಿಡುವುದರಿಂದ ತ್ಯಾಗಮಾಡಿ, ಪರಮಹಂಸಸಂನ್ಯಾಸಿಯೊಡನೆ ಸಮನಾಗುತ್ತಾನೆ. ಹಾಗೆ ಕರ್ಮಮಾಡುವುದರಿಂದ ಹೊಸದಾಗಿ ಫಲಪ್ರಾಪ್ತಿಯಾಗದ ಹೋಗುವುದರಿಂದಲೂ, ಹಿಂದೆ ಮಾಡಿದ ಪ್ರಾರಬ್ಧವಾಗಿರುವ ಕರ್ಮದ ಫಲವನ್ನು ಅನುಭವಿಸುವುದರ ಮೂಲಕ ಅದು ನಾಶವಾಗುವುದರಿಂದಲೂ, ನಿತ್ಯನೈಮಿತ್ತಿಕ

ನ ಸಂತಿ ಜಪ್ಯಾ ಮಂತ್ರಾಶ್ಚ ಪರಹಂಸಸ್ಯ ಸರ್ವದಾ ।
ತ್ರಯೀಸಾರಮಿಮಂ ಮಂತ್ರಂ ಜಪೇನ್ನಿತ್ಯಂ ಸಮಾಹಿತಃ ॥೨೭॥

ಪ್ರಣವಾದಪರಂ ಜಪ್ತ್ವಾ ಕದಾ ಮುಕ್ತೋ ಭವಿಷ್ಯತಿ ।
ಓಂಕಾರಸ್ಸರ್ವಮಂತ್ರಾಣಾಮುತ್ತಮಃ ಪರಿಕೀರ್ತಿತಃ ॥೨೮॥

ಓಂಕಾರೇಣ ಪ್ಲವೇನೈವ ಸಂಸಾರಾಬ್ಧಿಂ ತರಿಷ್ಯತಿ ।
ಉಮಾರ್ಧವಿಗ್ರಹೋ ದೇವೋ ರುದ್ರಸ್ಸತ್ಯಾದಿಲಕ್ಷಣಃ ॥೨೯॥

ಕರ್ಮಗಳನ್ನು ಮಾಡುವುದರಿಂದ ಪಾಪನಾಶವಾಗುವುದರಿಂದಲೂ, ಆಮೇಲೆ ದೋಷವಿಲ್ಲದೆ ಚಿತ್ತವು ಶುದ್ಧವಾಗಿರಲು, ಜಿಜ್ಞಾಸಾ-ಬ್ರಹ್ಮಸ್ವರೂಪವನ್ನು ತಿಳಿಯಬೇಕೆಂಬ ಇಚ್ಛೆಯು ; ಶ್ರವಣ-ವೇದಾಂತವಾಕ್ಯಗಳ ತಾತ್ಪರ್ಯವಿಚಾರವು ; ಮನನ-ಯುಕ್ತಿಯಿಂದ ವೇದಾಂತವಾಕ್ಯ ತಾತ್ಪರ್ಯವನ್ನು ಸರಿ ಎಂದು ಮನಗಾಣುವುದು ; ನಿದಿಧ್ಯಾಸನ-ಎಡೆಬಿಡದೆ ಜೀವಬ್ರಹ್ಮೈಕ್ಯವನ್ನು ಅನುಸಂಧಾನಮಾಡುವುದು—ಈ ರೂಪವಾದ ಜ್ಞಾನಸಾಧನಗಳ ಅತಿಶಯದಿಂದ ಅಂಥವನು ಪರಮಹಂಸಸಂನ್ಯಾಸಿಯಂತಾಗುವನು. ||೨೬||

ಪರಮಹಂಸಸಂನ್ಯಾಸಿಗೆ ಜಪಿಸಬೇಕಾದಂಥ ಪ್ರಣವ ಹೊರತು ಇತರ ಮಂತ್ರಗಳು ಯಾವುವೂ ಇರುವುದಿಲ್ಲ. ಆದುದರಿಂದ ಮನಸ್ಸಮಾಧಾನವುಳ್ಳವನಾಗಿ ಯಾವಾಗಲೂ ಋಗ್ಯಜುಸ್ಸಾಮವೆಂಬ ಮೂರು ವೇದಗಳ ಸಾರಭೂತವಾದ ಈ ಓಂಕಾರಮಂತ್ರವನ್ನು ಪ್ರತಿನಿತ್ಯವೂ ಜಪಿಸುತ್ತಿರಬೇಕು. ||೨೭||

ಪ್ರಣವಕ್ಕಿಂತ ಬೇರೆಯಾದ ಮಂತ್ರವನ್ನು ಜಪಿಸಿ ಯಾರು ಯಾವಾಗ ಮುಕ್ತಿಯನ್ನು ಪಡೆದಿರುವರು ? ಯಾರೂ ಯಾವಾಗಲೂ ಪಡೆದಿಲ್ಲವೆಂದು ಅಭಿಪ್ರಾಯವು. ಎಲ್ಲ ಮಂತ್ರಗಳಲ್ಲಿ ಓಂಕಾರವೇ ಉತ್ತಮವಾದುದೆಂದು ವೇದಶಾಸ್ತ್ರಗಳಲ್ಲಿ ಹೇಳಿದೆ. ಕಠೋಪನಿಷತ್ ೨.೧೫-೧೭ ; ಭ. ಗೀ. ೧೭.೨೩-೨೫. ||೨೮||

ಓಂಕಾರವೆಂಬ ತೆಪ್ಪದಿಂದ ಸಂಸಾರವೆಂಬ ಸಾಗರವನ್ನು ದಾಟುವನು. ಪಾರ್ವತಿಯೇ ಅರ್ಧದೇಹವಾಗಿ ಉಳ್ಳ ಸತ್ಯಜ್ಞಾನಾನಂತಸ್ವರೂಪನಾದ ಪ್ರಕಾಶಸ್ವರೂಪನಾದ ರುದ್ರನು ಸಂಸಾರದಿಂದ ದಾಟಿಸುವ ಪ್ರಣವ ಶಬ್ದಕ್ಕೆ ಮುಖ್ಯಾರ್ಥವೆಂದು ವೇದಶಾಸ್ತ್ರಗಳಲ್ಲಿ ಹೇಳಿದೆ. ಶಿವನ ಸ್ವರೂಪವು ನಿಷ್ಕಳವೆಂದೂ ಸಕಳವೆಂದೂ ಎರಡು ತೆರನಾಗಿದೆ. ಅವುಗಳಲ್ಲಿ ನಿಷ್ಕಳವು ಸತ್ಯಜ್ಞಾನಾನಂತರೂಪಪ್ರಣ

ಸಂಸಾರತಾರಕಸ್ಯಾಸ್ಯ ಪ್ರಣವಸ್ಯಾರ್ಥ ಉಚ್ಯತೇ ।
ವಿಷ್ಣ್ವಾದಯೋಽಪಿ ದೇವಾಶ್ಚ ರುದ್ರಾದ್ಯಾ ಬ್ರಹ್ಮಣಾ ಸಹ ॥೩೦॥

ಕಥಂ ಚಿತ್ಪ್ರಣವಸ್ಯಾರ್ಥಾ ಭವಿಷ್ಯಂತಿ ನ ಮುಖ್ಯತಃ ।
ಯತಿಭಿರ್ಜ್ಞಾನಸಿದ್ಧ್ಯರ್ಥಮವಿಮುಕ್ತಂ ಮಹತ್ಪರಂ ॥೩೧॥

ಸ್ಥಾನಂ ಸಂಸೇವನೀಯಂ ಸ್ಯಾಚ್ಚಿಂತನೀಯಂ ತಥೈವ ಚ ।
ಅವಿಮುಕ್ತೇ ಮಹಾದೇವಸ್ಸಾಕ್ಷಾದ್ವಿಶ್ವೇಶ್ವರಃ ಪ್ರಭುಃ ॥೩೨॥

ಉಪಾಸ್ಯಮಾನಸ್ಸುಪ್ರೀತೋ ಜ್ಞಾನಂ ಸಾಕ್ಷಾತ್ಪ್ರಯಚ್ಛತಿ ।
ಅವಿಮುಕ್ತೇ ಮಹಾದೇವಂ ಅನುಪಾಸ್ಯ ವಿಮುಕ್ತಯೇ ॥೩೩॥

ವಕ್ಕೆ ಲಕ್ಷ್ಯವಾದ ಅರ್ಥವು. ಉಮಾರ್ಧವಿಗ್ರಹತ್ವಾದಿಗಳಿಂದ ವಿಶಿಷ್ಟವಾದುದೇ, ಸಕಳಸ್ವರೂಪವೇ, ಮುಖ್ಯವಾದ ವಾಚ್ಯಾರ್ಥವು. ಆದರೆ ಅದರಿಂದ ಉಪಲಕ್ಷಿತವಾದ ಚಿದ್ರೂಪವೇ ಪ್ರಣವಕ್ಕೆ ತಾತ್ಪರ್ಯವಿಷಯೀಭೂತವಾದ ಲಕ್ಷ್ಯಾರ್ಥವು. ॥೨೯॥

ವಿಷ್ಣುರುದ್ರಬ್ರಹ್ಮಾದಿಗಳಲ್ಲೂ ನಿಷ್ಕಳಸ್ವರೂಪವು ಅನುಗತವಾಗಿರುವುದರಿಂದ ಆ ಪದಗಳು ನಿಷ್ಕಳವಾದ ಶುದ್ಧರೂಪವನ್ನೂ ತಿಳಿಸುತ್ತವೆ. ಆದುದರಿಂದ ಅದಕ್ಕೆ ಹೇಗೋ ಹಾಗೆ ಅವರು ಪ್ರಣವಶಬ್ದಕ್ಕೆ ಅರ್ಥವೆಂದು ತಿಳಿಯುತ್ತದೆಯೇ ಹೊರತು ಲಕ್ಷ್ಯವಾದ ರೀತಿಯಿಂದ ಆ ಅರ್ಥವು ತಿಳಿಯುಬರುವುದಿಲ್ಲ. ಮುಖ್ಯವೆಂದರೆ ಅಭಿಧಾವೃತ್ತಿಯಿಂದ ಪ್ರಥಮೋಪಸ್ಥಿತವಾಗುವ ಅರ್ಥವು; ಲಕ್ಷ್ಯವೆಂದರೆ ಪರಮ ತಾತ್ಪರ್ಯವಿಷಯವೆಂದರ್ಥವು. ॥೩೦॥

ಯತಿಗಳಿಂದ ಜ್ಞಾನವನ್ನು ಪಡೆಯುವುದಕ್ಕೋಸ್ಕರ, ಅವಿಮುಕ್ತವೆಂಬ ಹುಬ್ಬುಗಳ ಮತ್ತು ಮೂಗಿನ ಸಂಧಿಸ್ಥಾನವು ಉಪಾಸನೆಗಾಗಿ ಸೇವಿಸಲ್ಪಡಬೇಕು. ಅವಿಮುಕ್ತನಾದ ಎಂದರೆ ಬದ್ಧನಾದ ಜೀವನು ದೇವನ ಉಪಲಬ್ಧಿಸ್ಥಾನವಾದ ಆ ಸ್ಥಳದಲ್ಲಿ ಧ್ಯಾನದ ಮೂಲಕ ಪರಬ್ರಹ್ಮೋಪಾಸನೆಮಾಡಿ ಪಾಪನಾಶಮಾಡಿ ಕೊಳ್ಳಬೇಕು. ಆದ್ದರಿಂದ ಅದು ಉತ್ತಮಸ್ಥಾನವು. ಅಲ್ಲಿ ಧ್ಯಾನಮಾಡೋಣದ ರಿಂದ ಪ್ರೀತನಾದ ವಿಶ್ವೇಶ್ವರನು ಜ್ಞಾನವನ್ನು ಸಾಕ್ಷಾತ್ತಾಗಿಯೇ ಅನುಗ್ರಹಿಸು ತ್ತಾನೆ. ಅವಿಮುಕ್ತವೆಂದು ಪ್ರಸಿದ್ಧವಾದ ಶಿವಕ್ಷೇತ್ರಗಳೂ ಕೆಲವು ಇವೆ. ಆ ಕ್ಷೇತ್ರ ಯಾತ್ರೆಯಿಂದ ಶೀಘ್ರವಾಗಿ ಸಿದ್ಧಿಯಾಗುತ್ತದೆ. ॥೩೧-೩೨॥

ಈ ಅವಿಮುಕ್ತಸ್ಥಾನದಲ್ಲಿ, ಭ್ರೂನಾಸಿಕಾಸಂಧಿಯಲ್ಲಿ, ಬದ್ಧನಾದ ಜೀವನ

ನರಃ ಕಿಂಚಿದ್ವಿಷಂ ಭುಕ್ತ್ವಾ ಕ್ಷುನ್ನಿವೃತ್ತಿಂ ಕರಿಷ್ಯತಿ ।
ತಸ್ಮಾನ್ಮುಮುಕ್ಷುಭಿರ್ಜ್ಞಾತ್ವಾ ಜ್ಞಾನಾರ್ಥಮವಿಮುಕ್ತಕಂ ॥೩೪॥

ಅಧಿಭೂತೇ ತಥಾಧ್ಯಾತ್ಮೇ ಸೇವನೀಯಂ ತಥೈವ ಚ ।
ಚಿಂತನೀಯೋ ಮಹಾದೇವಸ್ತತ್ರೋಪಾಸ್ಯೋ ನ ಸಂಶಯಃ ॥೩೫॥

ಗೃಹಸ್ಥೈಶ್ಚ ವನಸ್ಥೈಶ್ಚ ತಥಾ ವೈ ಬ್ರಹ್ಮಚಾರಿಭಿಃ ।
ಶತರುದ್ರೀಯಸಂಜ್ಞಸ್ತು ಮಂತ್ರೋ ಜಪ್ಯೋ ಮಹತ್ತರಃ ॥೩೬॥

ರುದ್ರಜಾಪೀ ವಿಮುಚ್ಯೇತ ಮಹಾಪಾತಕಪಂಜರಾತ್ ।
ಸಮ್ಯಜ್ಜ್ಞಾನಂ ಚ ಲಭತೇ ತೇನ ಮುಚ್ಯೇತ ಬಂಧನಾತ್ ॥೩೭॥

ಬಿಡುಗಡೆಗಾಗಿ ಈಶ್ವರೋಪಾಸನೆಯನ್ನು ಮಾಡದೆಹೋದರೆ ಮನುಷ್ಯನು ಹಸಿವನ್ನು ಹೋಗಲಾಡಿಸಿಕೊಳ್ಳಲು ವಿಷವನ್ನು ಊಟಮಾಡಿದಂತಾಗುತ್ತದೆ. ||೩೩||

ಆದ್ದರಿಂದ ಮೋಕ್ಷವನ್ನು ಪಡೆಯಲು ಇಚ್ಛೆಯುಳ್ಳವರಿಂದ ಜ್ಞಾನಕ್ಕೋಸ್ಕರ ಅವಿಮುಕ್ತಸ್ಥಾನವನ್ನು ಅಂದರೆ ಅವಿಮುಕ್ತನಾದ ಬದ್ಧನಾದ ಜೀವನ ವಾಸ್ತವಸ್ವರೂಪವನ್ನು, ಸತ್ಯಜ್ಞಾನಾನಂತಸ್ವರೂಪವನ್ನು, ಅಧಿಭೂತವಾದ ಪ್ರತಿಮಾಬ್ರಾಹ್ಮಣಾದಿಗಳಲ್ಲೂ, ಅಧ್ಯಾತ್ಮವಾದ ಭ್ರೂನಾಸಾಸಂಧಿಯಲ್ಲಿಯೂ, ಉಪಲಭ್ಯಮಾನವಾದ ಜೀವನ ಸ್ವಸ್ವರೂಪವನ್ನು ಉಪಾಸನೆಮಾಡಬೇಕು. ಅಲ್ಲಿಯೇ ಮಹಾದೇವನನ್ನು ಧ್ಯಾನಮಾಡಬೇಕು. ಇದರಲ್ಲಿ ಸಂದೇಹವಿಲ್ಲವು. ಅವಿಮುಕ್ತಕ್ಷೇತ್ರವೆಂದರೆ ಕಾಶಿಯು, ವಾರಾಣಸಿಯು. ||೩೪-೩೫||

ಗೃಹಸ್ಥರಿಂದಲೂ, ವಾನಪ್ರಸ್ಥರಿಂದಲೂ, ಬ್ರಹ್ಮಚಾರಿಗಳಿಂದಲೂ ಶ್ರೇಷ್ಠವಾದ ಶತರುದ್ರೀಯವೆಂಬ ಮಂತ್ರವು ಜಪಿಸಲ್ಪಡಬೇಕು. ||೩೬||

ರುದ್ರಮಂತ್ರವನ್ನು ಜಪಿಸುವ ಮನುಷ್ಯನು ಮಹಾಪಾಪಗಳೆಂಬ ಪಂಜರದಿಂದ ಬಿಡುಗಡೆಹೊಂದುತ್ತಾನೆ. ಅದರಿಂದ ಮೋಕ್ಷಸಾಧನವಾದ ಜೀವಬ್ರಹ್ಮೈಕ್ಯಜ್ಞಾನವನ್ನು ಪಡೆಯುತ್ತಾನೆ. ಸಂಸಾರಬಂಧದಿಂದಲೂ ಬಿಡುಗಡೆ ಹೊಂದುತ್ತಾನೆ. ||೩೭||

ಪಾವನೀ ಸರ್ವಪಾಪಾನಾಂ ರುದ್ರೈಕಾದಶಿನೀ ತಥಾ ।
ಅನೇನ ಸದೃಶಂ ಜಪ್ಯಂ ನಾಸ್ತಿ ಸತ್ಯಂ ಶ್ರುತೌ ಸ್ಮೃತೌ ॥೩೮॥

ಏಷಾ(ಂ) ಪಂಚಾಕ್ಷರೀ ವಿದ್ಯಾ ಶತರುದ್ರೀಯಮಧ್ಯಗಾ ।
ಪಂಚಾಕ್ಷರೇ ಮಹಾದೇವಸ್ಸರ್ವದಾ ಸುಪ್ರತಿಷ್ಠಿತಃ ॥೩೯॥

ಮಹಾದೇವಸ್ಯ ಸಾನ್ನಿಧ್ಯಾತ್ ವ್ಯಷ್ಟಿಭೂತಾಶ್ಚ ದೇವತಾಃ ।
ತತ್ರ ಪ್ರತಿಷ್ಠಿತಾ ಏವ ವೃಕ್ಷೇ ಶಾಖಾ ಯಥಾ ಸ್ಥಿತಾಃ ॥೪೦॥

ವೃಕ್ಷಸ್ಯ ಮೂಲಸೇಕೇನ ಶಾಖಾಃ ಪುಷ್ಯಂತಿ ವೈ ಯಥಾ ।
ಶಿವೇ ರುದ್ರಜಪಾತ್ಪ್ರೀತೇ ಪ್ರೀತಾ ಏವಾನ್ಯದೇವತಾಃ ॥೪೧॥

ಹನ್ನೊಂದು ಅನುವಾಕಗಳುಳ್ಳ ರುದ್ರಾಧ್ಯಾಯವು ಎಲ್ಲ ಪಾಪಗಳನ್ನೂ ಹೋಗಲಾಡಿಸಿ ಶುದ್ಧಿಯನ್ನುಂಟುಮಾಡುತ್ತದೆ. ವೇದಗಳಲ್ಲೂ ಸ್ಮೃತಿಗಳಲ್ಲೂ ಇದಕ್ಕೆ ಸಮನಾದ, ಜಪಿಸಲು ತಕ್ಕ ಮತ್ತೊಂದು ಮಂತ್ರವಿಲ್ಲವು. ಇದು ನಿಜವು. ||೩೮||

ಇವುಗಳ ಮಧ್ಯದಲ್ಲಿ ಎಂದರೆ ಶತರುದ್ರೀಯಮಂತ್ರದ ಮಧ್ಯದಲ್ಲಿ ಪಂಚಾಕ್ಷರೀ ವಿದ್ಯೆಯು ಇದೆ. ಈ ಪಂಚಾಕ್ಷರಿಯಲ್ಲಿ ಮಹಾದೇವನು ಯಾವಾಗಲೂ ನೆಲೆಸಿರುತ್ತಾನೆ. ಎಂದರೆ ಈ ಮಂತ್ರಜಪಸಿದ್ಧಿಯಿಂದ ಶಿವನ ಸಾಕ್ಷಾತ್ಕಾರವಾಗುವುದು.||೪೦||

ಎಲ್ಲ ವಿಧವಾದ ಉಪಾಧಿಗಳಿಂದ ವಾಸ್ತವವಾಗಿ ಸಂಬಂಧಪಡದೆ ಇರುವ, ಎಲ್ಲದರಲ್ಲೂ ಅನುಸ್ಯೂತನಾಗಿರುವವನಾದ, ಈಶ್ವರನೇ ಸಮಷ್ಟಿ ಎನ್ನಿಸಿಕೊಂಡಿರುತ್ತಾನೆ. ಸಮಸ್ತದಲ್ಲೂ ವ್ಯಾಪಿಸಿರುವನಾದುದರಿಂದ ಸಮಷ್ಟಿ ಎಂದು ಹೆಸರು. ಆ ಈಶ್ವರನಲ್ಲಿ ಕಲ್ಪಿತವಾದ ಮಾಯೋಪಾಧಿಭಾಗಗಳಿಗೆ ವ್ಯಷ್ಟಿಗಳೆಂದು ಹೆಸರು. ಅಂಥ ಮಹಾದೇವನ ಸಾನ್ನಿಧ್ಯದಿಂದ ವ್ಯಷ್ಟಿಭೂತರಾದ ಎಲ್ಲ ದೇವತೆಗಳೂ ಆ ಪಂಚಾಕ್ಷರೀಮಂತ್ರದಲ್ಲಿ, ಮರದಲ್ಲಿ ಕೊಂಬೆಗಳಿರುವಂತೆ, ನೆಲೆಸಿರುತ್ತಾರೆ. ||೪೦||

ಮರದ ಬುಡಕ್ಕೆ ನೀರನ್ನು ಹಾಕುವುದರಿಂದ ಕೊಂಬೆಗಳು ಬೆಳೆಯುವಂತೆ ಈಶ್ವರನು ರುದ್ರಜಪದಿಂದ ಸಂತುಷ್ಟನಾದರೆ ಇತರ ಎಲ್ಲಾ ದೇವತೆಗಳೂ ಪ್ರೀತರಾಗುತ್ತಾರೆ. ಹಾಗೆ ಸಮಷ್ಟಿಸೇವೆಯಿಂದ ವ್ಯಷ್ಟಿಸೇವಾಫಲಗಳೂ ದೊರೆಯುತ್ತವೆ. ||೪೧||

ಅತೋ ರುದ್ರಜಪಾದೇವ ಭುಕ್ತಿಮುಕ್ತೀ ಪ್ರಸಿಧ್ಯತಃ ।
ಮಾಯಾ ಮಾಹೇಶ್ವರೀ ಶಕ್ತಿಃ ಸತ್ತ್ವಾದಿಗುಣಭೇದತಃ ॥೪೨॥

ಜೀವಮಾಕ್ರಮ್ಯ ಸಂಸಾರೇ ಭ್ರಾಮಯತ್ಯನಿಶಂ ದ್ವಿಜಾಃ ।
ಸತ್ತ್ವಾತ್ಸುಖಂ ಚ ಜ್ಞಾನಂ ಚ ವೈರಾಗ್ಯಂ ಶೌಕ್ಲ್ಯಮೇವ ಚ ॥೪೩॥

ದುಃಖಂ ಪ್ರವೃತ್ತಿಃ ಕಾಮಶ್ಚ ಲೌಹಿತ್ಯಂ ರಜಸೋ ಭವೇತ್ ।
ಮೋಹೋ ಭ್ರಾಂತಿಸ್ತಥಾಲಸ್ಯಂ ಕಾರ್ಷ್ಣ್ಯಂ ಚ ತಮಸೋ ಭವೇತ್ ॥೪೪॥

ಏವಮುತ್ತಮರೂಪಾಶ್ಚ ಪದಾರ್ಥಾಸ್ಸತ್ತ್ವಸಂಭವಾಃ ।
ತಥಾ ಮಧ್ಯಮರೂಪಾಶ್ಚ ಪದಾರ್ಥಾ ರಾಜಸಾಃ ಸ್ಮೃತಾಃ ॥೪೫॥

ವಿಹೀನಾಸ್ತಾಮಸಾ ಏವ ಪದಾರ್ಥಾಸ್ಸಂಗ್ರಹೇಣ ತು ।
ಅತೋ ಮಾಯಾಮಯಸ್ಸಾಕ್ಷಾತ್ಸಂಸಾರಸ್ಸರ್ವದೇಹಿನಾಂ ॥೪೬॥

ಆದುದರಿಂದ ರುದ್ರಜಪದಿಂದಲೇ ಭುಕ್ತಿಮುಕ್ತಿಗಳೆರಡೂ ಸಿದ್ಧಿಸುತ್ತವೆ. ಮಹೇಶ್ವರಸಂಬಂಧಿಯಾದ ಶಕ್ತಿಗೆ ಮಾಯಾ ಎಂದು ಹೆಸರು. ಆ ಮಾಯೆಯು ಸತ್ತ್ವರಜಸ್ತಮೋರೂಪವಾದ ಗುಣಭೇದದಿಂದ ಜೀವನನ್ನು ಆಕ್ರಮಿಸಿ ಸರ್ವದಾ ಸಂಸಾರದಲ್ಲಿ ಭ್ರಾಂತಿಯನ್ನು ಹೊಂದಿ ತಿರುಗುತ್ತಿರುವಂತೆ ಅವನನ್ನು ಮಾಡುತ್ತದೆ. ||೪೨||

ಆ ಸತ್ತ್ವಾದಿಗುಣಗಳನ್ನು ಅವುಗಳಿಂದಾಗುವ ಕಾರ್ಯಗಳಿಂದ ವಿವರಿಸುತ್ತಾರೆ. ಸತ್ತ್ವಗುಣದಿಂದ ಸುಖವೂ ಜ್ಞಾನವೂ ವೈರಾಗ್ಯವೂ ನಿರ್ಮಲತ್ವವೂ (ದೋಷವಿಲ್ಲದಿರುವಿಕೆಯೂ) ಉಂಟಾಗುತ್ತವೆ. ರಜೋಗುಣದಿಂದ ದುಃಖವೂ, ಚಟುವಟಿಕೆಯೂ, ಆಶೆಯೂ, ರಾಗವೂ ಉಂಟಾಗುತ್ತದೆ. ||೪೩||

ತಮೋಗುಣದಿಂದ ಅಜ್ಞಾನವೂ, ಭ್ರಾಂತಿಯೂ, ಸೋಮಾರಿತನವೂ ಮಾಲಿನ್ಯವೂ ಉಂಟಾಗುತ್ತದೆ. ||೪೪||

ಈ ರೀತಿಯಾಗಿ ಇಂದ್ರಾದಿದೇವತೆಗಳೇ ಮುಂತಾದ ಉತ್ತಮಪದಾರ್ಥಗಳು ಸತ್ತ್ವಪ್ರಧಾನವಾದ ಮಾಯೆಯಿಂದಲೂ, ಮನುಷ್ಯರೇ ಮುಂತಾದ ಮಧ್ಯಮ ಪದಾರ್ಥಗಳು ರಜೋಗುಣಪ್ರಧಾನವಾದ ಮಾಯೆಯಿಂದಲೂ, ತಿರ್ಯಕ್ಪ್ರಾಣಿಗಳೇ

ಸ ಶಿವಜ್ಞಾನಮಾತ್ರೇಣ ಸದ್ಯ ಏವ ನಿವರ್ತತೇ ।
ಜ್ಞಾನಯಜ್ಞೇನ ವಿಪ್ರಾಣಾಮಾಸ್ತಿಕಾನಾಮಮಾನಿನಾಂ ॥೪೭॥

ಜಾಯತೇ ಪರಮಂ ಜ್ಞಾನಂ ನಾನ್ಯಥಾ ಮುನಿಪುಂಗವಾಃ ।
ಯಜ್ಞಶ್ಚ ದ್ವಿವಿಧಃ ಪ್ರೋಕ್ತಃ ಸ್ಥೂಲಸೂಕ್ಷ್ಮಪ್ರಭೇದತಃ ॥೪೮॥

ಕರ್ಮಯಜ್ಞಸ್ಸಮಾಖ್ಯಾತಃ ಸ್ಥೂಲಸ್ತತ್ತ್ವಾರ್ಥವಿತ್ತಮೈಃ ।
ಜ್ಞಾನಯಜ್ಞೋ ಭವೇತ್ಸೂಕ್ಷ್ಮಃ ಸಾಕ್ಷಾತ್ಸಂಸಾರಬಾಧಕಃ ॥೪೯॥

ಮುಂತಾದ ಹೀನಪದಾರ್ಥಗಳು ತಮೋಗುಣಪ್ರಧಾನವಾದ ಮಾಯೆಯಿಂದಲೂ ಉಂಟಾಗುತ್ತವೆ. ಆದುದರಿಂದ ಎಲ್ಲರ ಸಂಸಾರವೂ ಮಾಯಾರೂಪವಾದುದೆಂದು ವ್ಯಕ್ತವಾಗಿದೆ. ॥೪೫-೪೬॥

ಆ ಸಂಸಾರವು ಸಚ್ಚಿದಾನಂದರೂಪನಾದ ಶಿವನ ಜ್ಞಾನವೊಂದರಿಂದಲೇ ಆ ಕ್ಷಣವೇ ನಿವೃತ್ತವಾಗುತ್ತದೆ. ಗೀತೆಯಲ್ಲಿ ಹೇಳಿರುವಂತೆ ಅಮಾನಿತ್ವಾದಂಭಿತ್ವಾದಿ ಜ್ಞಾನಸಾಧನಸಂಪನ್ನರಾದ, ಶರೀರಾತಿರಿಕ್ತನಾದ ಆತ್ಮನು ಇದಾನೆಂದು ತಿಳಿದಿರುವ ದ್ವಿಜರಿಗೆ ಜ್ಞಾನರೂಪವಾದ ಯಜ್ಞದಿಂದ ಶ್ರೇಷ್ಠವಾದ ಆ ಸಮ್ಯಜ್ಜ್ಞಾನವು ಉಂಟಾಗುತ್ತದೆ. ಅದು ಕರ್ಮ, ಉಪಾಸನೆ ಮುಂತಾದವುಗಳಿಂದಲೂ ಇವಲ್ಲದೆ ಬೇರೆ ಏತರಿಂದಲೂ ಸಾಕ್ಷಾತ್ತಾಗಿ ಉಂಟಾಗುವುದಿಲ್ಲ. ॥೪೭॥

ಆ ಶ್ರೇಷ್ಠವಾದ ಜ್ಞಾನವು ಬೇರೆ ಯಾವ ರೀತಿಯಿಂದಲೂ ಉಂಟಾಗುವುದಿಲ್ಲ. ಈ ಯಜ್ಞವು ಸ್ಥೂಲವೆಂದೂ ಸೂಕ್ಷ್ಮವೆಂದೂ ಎರಡು ತೆರನಾಗಿರುವುದು. ಸ್ಥೂಲಫಲವುಳ್ಳ ಯಜ್ಞಕ್ಕೆ ಸ್ಥೂಲಯಜ್ಞವೆಂದೂ, ಸೂಕ್ಷ್ಮವಾದ ಬ್ರಹ್ಮವಿಷಯಕವಾದುದಕ್ಕೆ ಸೂಕ್ಷ್ಮಯಜ್ಞವೆಂದೂ ವ್ಯವಹರಿಸುತ್ತಾರೆ. ॥೪೮॥

ಸ್ಥೂಲಯಜ್ಞಕ್ಕೆ ಕರ್ಮಯಜ್ಞವೆಂದೂ ಹೆಸರು. ಸಮಿತ್ತು, ಆಜ್ಯ ಮುಂತಾದ ದ್ರವ್ಯಗಳಿಂದ ಸಾಧ್ಯವಾದ, ಫಲವನ್ನು ಕೊಡುವ, ಯಜ್ಞಕ್ಕೆ ಕರ್ಮಯಜ್ಞವೆಂದು ಹೆಸರೆಂಬು ಭಾವವು. ಹಾಗೆ ಸಾಧನಸಾಧ್ಯಗಳಿಲ್ಲದೆ ಸೂಕ್ಷ್ಮವಾದ ಬ್ರಹ್ಮವಿಷಯಕವಾದ ಯಜ್ಞಕ್ಕೆ ಜ್ಞಾನಯಜ್ಞವೆಂದು ಹೆಸರು. ಹೀಗೆ ಸಂಸಾರವು ಅಜ್ಞಾನಕಲ್ಪಿತವಾದುದರಿಂದ, ಜ್ಞಾನದಿಂದ ಅಜ್ಞಾನವು ಬಾಧಿತವಾಗಿ, ಅಜ್ಞಾನದ ಪರಿಣಾಮವಾದ ಸಂಸಾರವೂ ಸಾಕ್ಷಾತ್ತಾಗಿಯೇ ಬಾಧಿತವಾಗುವುದು. ಕಾರ್ಯವು

ಕರ್ಮಯಜ್ಞಾಭಿಧಃ ಸ್ಥೂಲಃ ತ್ರಿಪ್ರಕಾರೋ ವ್ಯವಸ್ಥಿತಃ ।
ಕಾಯಿಕೋ ವಾಚಿಕಶ್ಚೈವ ಮಾನಸಶ್ಚೈವ ಸುವ್ರತಾಃ ॥೫೦॥

ನಿತ್ಯನೈಮಿತ್ತಿಕಾದ್ಯಸ್ತು ಕಾಯಿಕಃ ಪರಿಕೀರ್ತಿತಃ ।
ಮಂತ್ರಾಣಾಂ ಜಪರೂಪಸ್ತು ವಾಚಿಕೋ ವೇದವಿತ್ತಮಾಃ ॥೫೧॥

ದೇವತಾಧ್ಯಾನರೂಪಸ್ತು ಮಾನಸಃ ಪರಿಕೀರ್ತಿತಃ ।
ಕಾಯಿಕಾದಧಿಕಃ ಪ್ರೋಕ್ತಃ ವಾಚಿಕೋ ಮತಿಮತ್ತಮೈಃ ॥೫೨॥

ಮಾನಸೋ ವಾಚಿಕಾಚ್ಛ್ರೇಷ್ಠೋ ಮಾನಸೋ ಬಹುಧಾ ಸ್ಮೃತಃ ।
ಧ್ಯೇಯಭೇದೇನ ಸೋಽಪ್ಯೇವಮುತ್ತಮಾಧಮಭೇದತಃ ॥೫೩॥

ಕಾರ್ಯಾವಸ್ಥೆಯನ್ನು ಬಿಟ್ಟು ಕಾರಣರೂಪಕ್ಕೆ ಬಂದರೆ ನಾಶವೆಂದು ಹೆಸರು. ಕಾರಣಸಹಿತವಾಗಿಯೇ ಕಾರ್ಯವು ಜ್ಞಾನದಿಂದ ನಿವೃತ್ತವಾದರೆ ಆ ನಿವೃತ್ತಿಗೆ ಬಾಧವೆಂದು ಹೆಸರು. ॥೪೯॥

ಈ ಸ್ಥೂಲವಾದ ಕರ್ಮಯಜ್ಞವು ಮೂರು ವಿಧವಾಗಿರುತ್ತದೆ. ಕಾಯಿಕ, ವಾಚಿಕ, ಮಾನಸವೆಂದು ಅವಕ್ಕೆ ಹೆಸರು. ॥೫೦॥

ನಿತ್ಯವಾದ ಪಂಚಮಹಾಯಜ್ಞಗಳೂ ದರ್ಶಪೂರ್ಣಮಾಸಯಾಗಗಳೂ, ಅತಿಪತ್ತಿನಿಮಿತ್ತಕವಾದ ಪಥಿಕೃತ್ ಮುಂತಾದ ನೈಮಿತ್ತಿಕಯಜ್ಞಗಳೂ, ಕಾಯಿಕವೆನ್ನಿಸಿಕೊಳ್ಳುತ್ತವೆ. ಅಂಗವಿಕಲರಿಗೆ ಈ ಯಜ್ಞಗಳಲ್ಲಿ ಅಧಿಕಾರವಿಲ್ಲವು. ಆದುದರಿಂದಲೂ ಕಾಯಿಕವೆನಿಸುತ್ತದೆ. ಮಂತ್ರಗಳ ಎಂದರೆ ಗಾಯತ್ರೀ ಮುಂತಾದವುಗಳ ಜಪರೂಪವಾದ ಯಜ್ಞಕ್ಕೆ ವಾಚಿಕಯಜ್ಞವೆಂದು ಹೆಸರು. ಮೊದಲನೆಯದರಲ್ಲಿ ಹಸ್ತಾದಿ ಶರೀರದ ಅವಯವಗಳ, ವಾಕ್ಕಿನ ಮತ್ತು ಮನಸ್ಸಿನ ವ್ಯಾಪಾರವಿರುತ್ತದೆ. ಎರಡನೆಯದರಲ್ಲಿ ವಾಙ್ಮನಸ್ಸುಗಳು ಮಾತ್ರ ವ್ಯಾಪೃತಗಳಾಗಿರುತ್ತವೆ. ॥೫೧॥

ಮಂತ್ರದಿಂದ ಪ್ರತಿಪಾದ್ಯವಾದ ಇಷ್ಟದೇವತಾಸ್ವರೂಪವನ್ನು ಧ್ಯಾನಮಾಡುವುದಕ್ಕೆ ಮಾನಸಯಜ್ಞವೆಂದು ಹೆಸರು. ಈ ಮೂರು ವಿಧವಾದ ಯಜ್ಞಗಳಲ್ಲಿ ಕಾಯಿಕಕ್ಕಿಂತ ವಾಚಿಕವೂ, ವಾಚಿಕಕ್ಕಿಂತ ಮಾನಸವೂ ಶ್ರೇಷ್ಠವೆಂದು ಹೇಳಿದೆ. ಇಂಥ ಮಾನಸಯಜ್ಞವು ಬಹುಪ್ರಕಾರವಾಗಿದೆ. ॥೫೨॥

ಆ ಮಾನಸ ಯಜ್ಞವು ಉಪಾಸ್ಯವಾದ ದೇವತಾಭೇದದಿಂದ ಉತ್ತಮವೆಂದೂ ಅಧಮವೆಂದೂ ಎರಡು ತೆರನಾಗಿದೆ. ॥೫೩॥

ದ್ವಿವಿಧಸ್ತತ್ರ ದೇವಸ್ಯ ಶಿವಸ್ಯ ಧ್ಯಾನಮುತ್ತಮಂ ।
ವಿಷ್ಣ್ವಾದೀನಾಂ ದೇವತಾನಾಂ ಧ್ಯಾನಂ ಚಾಧಮಮಿಷ್ಯತೇ ।
ಅತೋ ಮೋಕ್ಷಾರ್ಥಿಭಿಃಪ್ರಾಜ್ಞೈಃ ಶಿವ ಏಕಶ್ಶಿವಂಕರಃ ।
ಧ್ಯೇಯಸ್ಸರ್ವಂ ಪರಿತ್ಯಜ್ಯ ಶಿವಾದನ್ಯತ್ತು ದೈವತಂ ॥೫೪॥

ಅಸ್ಮಿನ್ನರ್ಥೇ ಶ್ರುತಿಸ್ಸಾಧ್ವೀ ಸಮಾಪ್ತಾ ವೇದವಿತ್ತಮಾಃ ।
ಅಪಕ್ವಚಿತ್ತೈಃ ಮೋಕ್ಷಾರ್ಥಂ ದೇವಾ ವಿಷ್ಣ್ವಾದಯೋಽಪಿ ಚ ॥೫೫॥

ಆ ಎರಡರಲ್ಲಿ ಶಿವಸ್ವರೂಪನಾದ ದೇವತೆಯ ಎಂದರೆ ಸಗುಣ ಪರಶಿವನ ಧ್ಯಾನಕ್ಕೆ ಉತ್ತಮಮಾನಸಯಜ್ಞವೆಂದು ಹೆಸರು. ವಿಷ್ಣು ಮುಂತಾದ ದೇವತೆಗಳ ಧ್ಯಾನಕ್ಕೆ ಅಧಮಮಾನಸಯಜ್ಞವೆಂದು ಹೆಸರು. ಇಂತಹ ಸಂದರ್ಭಗಳಲ್ಲಿ "ನ ಹಿ ನಿಂದಾ, ನಿಂದ್ಯಂ ನಿಂದಿತುಂ ಪ್ರವೃತ್ತಾ, ಅಪಿತುಸ್ತುತ್ಯಂ ಸ್ತೋತುಂ" ಎಂಬಂತೆ ಶಿವ ಪಾರಮ್ಯದಲ್ಲಿ ತಾತ್ಪರ್ಯವೆಂದು ಭಾವವು. ಆದುದರಿಂದ ಮೋಕ್ಷವನ್ನು ಅಪೇಕ್ಷಿಸುವ ವಿವೇಕಿಗಳಿಂದ ಇತರ ದೇವತೆಗಳನ್ನು ಬಿಟ್ಟು ಮಂಗಳಕರನಾದ ಶಿವನೇ ಧ್ಯಾನ ಮಾಡಲ್ಪಡಬೇಕು. ಆದರೆ ವಿಷ್ಣ್ವಾದಿ ನಿಂದೆಯಲ್ಲಿ ತಾತ್ಪರ್ಯವಿಲ್ಲವು. ॥೫೪॥

ವೇದಾರ್ಥವನ್ನು ತಿಳಿದವರಲ್ಲಿ ಶ್ರೇಷ್ಠರಾದ ಋಷಿಗಳೇ, ಶ್ರುತಿಗೆ ತಾತ್ಪರ್ಯವೂ ಈ ಅರ್ಥದಲ್ಲಿಯೇ ಇದೆ. ಎಂದರೆ, ಎಲ್ಲಕ್ಕೂ ಕಾರಣಭೂತನಾದವನು ಪರಶಿವ ನಾದುದರಿಂದ ಆ ಶಿವನ ಜ್ಞಾನವೇ ಮೋಕ್ಷವನ್ನುಂಟುಮಾಡಿಕೊಡುತ್ತದೆ. ಆ ಜ್ಞಾನಕ್ಕೆ ಧ್ಯಾನವು ಕಾರಣವಾದುದರಿಂದ ಶಿವಧ್ಯಾನದಿಂದ ಮೋಕ್ಷವಾಗುವುದು. ಇಂಥ ಧ್ಯಾನಕ್ಕೆ ಪಕ್ವಚಿತ್ತರಾದವರು ಅಧಿಕಾರಿಗಳು. ಯಾರ ಚಿತ್ತವು ಪಕ್ವವಾಗಿದೆಯೋ, ಪಾಪವು ಕರ್ಮಾನುಷ್ಠಾನದಿಂದ ನಷ್ಟವಾಗಿ ಚಿತ್ತವು ನಿರ್ಮಲವಾಗಿ ಶುದ್ಧವಾಗಿದೆಯೋ, ಅಂಥವರು ಈ ಧ್ಯಾನವನ್ನು ಮಾಡಲು ಸಮರ್ಥರಾಗುತ್ತಾರೆ. ಹಾಗೆ ಪಕ್ವವಾಗದೆ ಇರುವ ಚಿತ್ತವುಳ್ಳವರು ವಿಷ್ಣು ಮುಂತಾದ ದೇವತೆಗಳನ್ನು ಮೋಕ್ಷಕ್ಕೋಸ್ಕರ ಧ್ಯಾನಮಾಡುತ್ತಾರೆ. ಹಾಗೆ ವಿಷ್ಣು ಮುಂತಾದ ದೇವತಾಧ್ಯಾನದಿಂದ ಶಿವಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನು ಪಡೆದು ಶಿವಜ್ಞಾನದಿಂದ ಮುಕ್ತಿಯನ್ನು ಪಡೆಯುತ್ತಾರೆ. ಆದುದರಿಂದ ವಿಷ್ಣು ಮುಂತಾದವರ ಧ್ಯಾನವೂ ಸಫಲವೇ ಆಗಿರುತ್ತದೆ. ॥೫೫॥

ಧ್ಯೇಯಾಃ ಪಕ್ವೈಃ ಶಿವೋ ಧ್ಯೇಯಸ್ಸಾಕ್ಷಾತ್ಸಂಸಾರಮೋಚಕಃ ।
ರುದ್ರಂ ವಿಶ್ವಾಧಿಕಂ ವಿಷ್ಣುಂ ಬ್ರಹ್ಮಾಣಂ ಚಾನ್ಯಮೇವ ವಾ ॥೫೬॥

ಸಮಂ ಸಂಚಿಂತಯನ್ ಸಾಕ್ಷಾತ್ಸಂಸಾರೇ ಪರಿವರ್ತತೇ ।
ಮಹಾಪಾಪವತಾಂ ಪುಂಸಾಂ ಪೂರ್ವಜನ್ಮಸು ಸುವ್ರತಾಃ ॥೫೭॥

ವಿಷ್ಣುಸ್ಸರ್ವಾಧಿಕೋ ಭಾತಿ ನ ಸಾಕ್ಷಾತ್ಪರಮೇಶ್ವರಃ ।
ವಿಷ್ಣುಸ್ಸರ್ವಾಧಿಕೋ ನಾನ್ಯ ಇತಿ ಚಿಂತಯತಾಂ ನೃಣಾಂ ॥೫೮॥

ನಾಸ್ತಿ ಸಂಸಾರವಿಚ್ಛಿತ್ತಿಃ ಕಲ್ಪಕೋಟಿಶತೈರಪಿ ।
ತೇಷಾಂ ನೈವ ಚ ಮೋಕ್ಷಾಶಾ ಕಲ್ಪಕೋಟಿಶತೈರಪಿ ॥೫೯॥

ಬ್ರಹ್ಮಾದಿದೇವತಾನಾಂ ತು ವಿಶ್ವಾಧಿಕ್ಯಂ ವದಂತಿ ಯೇ ।
ಅಧೋಮುಖೋರ್ಧ್ವಪಾದಾಸ್ತೇ ಯಾಸ್ಯಂತಿ ನರಕಾರ್ಣವಂ ॥೬೦॥

ಪಕ್ವವಾದ ಚಿತ್ತವುಳ್ಳವರು ಶಿವನ ಧ್ಯಾನಕ್ಕೆ ಅರ್ಹರು. ಅವರನ್ನು ಪರಶಿವನು ಸಾಕ್ಷಾತ್ತಾಗಿಯೇ ಸಂಸಾರದಿಂದ ಬಿಡುಗಡೆಯನ್ನು ಕೊಟ್ಟು ಕಾಪಾಡುವನು. ಎಲ್ಲಕ್ಕಿಂತಲೂ ಹೆಚ್ಚಿನವನಾದ ರುದ್ರನನ್ನು ವಿಷ್ಣು, ಬ್ರಹ್ಮಾ ಮುಂತಾದ ಇತರ ದೇವತೆಗಳೊಡನೆ ಸಮಾನನೆಂದು ಯಾರು ಆಲೋಚಿಸುತ್ತಾರೋ ಅಂಥವರು ಸಂಸಾರದಲ್ಲಿ ಅಲೆಯುತ್ತಲೇ ಇರುತ್ತಾರೆ. ||೫೬||

ನಿಯಮಗಳನ್ನು ಚೆನ್ನಾಗಿ ಪಾಲಿಸುತ್ತಿರುವ ಋಷಿಗಳೇ, ಪೂರ್ವಜನ್ಮದಲ್ಲಿ ಮಹಾಪಾಪಗಳನ್ನು ಮಾಡಿರುವಂಥವರಿಗೆ ವಿಷ್ಣುವೇ ಸರ್ವದೇವತೆಗಳಿಗಿಂತಲೂ ಹೆಚ್ಚಿನವನೆಂದು ತೋರುತ್ತದೆ. ಆದರೆ ಪರಮೇಶ್ವರನೇ ಸಾಕ್ಷಾತ್ತಾಗಿ ಎಲ್ಲಕ್ಕಿಂತಲೂ ಹೆಚ್ಚಿನವನೆಂಬ ತತ್ತ್ವವು ಅವರಿಗೆ ತೋರುವುದಿಲ್ಲ. ||೫೭||

ವಿಷ್ಣುವೇ ಎಲ್ಲರಿಗಿಂತ ಹೆಚ್ಚಿನ ದೇವನು; ಇತರರಲ್ಲವು; ಎಂದು ಆಲೋಚಿಸುವ ಮನುಷ್ಯರಿಗೆ ಕಲ್ಪಗಳ ಕೋಟಿಶತಗಳ ಕಾಲದಲ್ಲೂ ಸಂಸಾರದಿಂದ ಬಿಡುಗಡೆಯಾಗಲಿ ಮೋಕ್ಷಾಶೆಯಾಗಲಿ ಶೀಘ್ರವಾಗಿ ಉಂಟಾಗುವುದಿಲ್ಲ. ||೫೮-೫೯||

ಬ್ರಹ್ಮವಿಷ್ಣುಮುಂತಾದವರು ಎಲ್ಲ ದೇವತೆಗಳಿಗಿಂತ ಹೆಚ್ಚಿನವರೆಂದು ಯಾರು ಹೇಳುತ್ತಾರೋ ಅಂಥವರು ತಲೆಕೆಳಗಾಗಿ ಕಾಲುಮೇಲಾಗಿ ನರಕ ಸಮುದ್ರವನ್ನು ಪಡೆಯುತ್ತಾರೆ. ಮೇಲಿನ ಶ್ಲೋಕ ೫೪ ನ್ನು ನೋಡಿ. ||೬೦||

ವಿಷ್ಣೋರ್ವಾ ಬ್ರಹ್ಮಣೋ ವಾಽಪಿ ತಥೈವಾನ್ಯಸ್ಯ ಕಸ್ಯಚಿತ್ ।
ಸಾಮ್ಯಂ ವದಂತಿ ಯೇ ತೇಷಾಂ ನ ಸಂಸಾರಾದ್ವಿಮೋಕ್ಷಣಂ ॥೬೧॥

ವಿಷ್ಣುಪ್ರಜಾಪತೀಂದ್ರಾದಿದೇವತಾಸು ಮುನೀಶ್ವರಾಃ ।
ನಿಹೀನಾಸು ಶಿವಂ ಪಶ್ಯನ್ ಮುಚ್ಯತೇ ಭವಬಂಧನಾತ್ ॥೬೨॥

ಶಿವರುದ್ರಮಹಾದೇವಬ್ರಹ್ಮೇಶಾನಾದಿನಾಮತಃ ।
ವಿಷ್ಣ್ವಾದಿದೇವತಾಃ ಪಶ್ಯನ್ ಕ್ರಮಾನ್ಮುಚ್ಯೇತ ಬಂಧನಾತ್ ॥೬೩॥

ಶಿವಂ ಸರ್ವೋತ್ತಮಂ ವಿಪ್ರಾ ಹರಿ ಬ್ರಹ್ಮಾದಿನಾಮತಃ ।
ಚಿಂತಯನ್ ಘೋರಸಂಸಾರೇ ಪತತ್ಯೇವ ನ ಸಂಶಯಃ ॥೬೪॥

ವಿಷ್ಣುವಿಗಾಗಲಿ ಬ್ರಹ್ಮನಿಗಾಗಲಿ ಅಥವಾ ಇನ್ನು ಯಾರಿಗಾಗಲಿ ಶಿವನೊಡನೆ ಸಮಾನತ್ವವನ್ನು ಯಾರು ಹೇಳುತ್ತಾರೋ ಅಂಥವರಿಗೆ ಸಂಸಾರದಿಂದ ಬಿಡುಗಡೆ ಇಲ್ಲವು. ಎಂದರೆ ಅವರಿಗೆ ಶ್ರೇಯೋಲಾಭವು ಸಾವಕಾಶವಾಗುತ್ತದೆ.॥೬೧॥

ಎಲೈ ಋಷಿಶ್ರೇಷ್ಠರೇ, ವಿಷ್ಣು ಬ್ರಹ್ಮ ಮುಂತಾದ ದೇವತೆಗಳಲ್ಲಿ ಶಿವನೆಂಬ ಬುದ್ಧಿಯನ್ನು ಯಾರು ಇಡುತ್ತಾರೋ ಅಂಥವರು ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾರೆ. ಉತ್ಕೃಷ್ಟದಲ್ಲಿ ನಿಕೃಷ್ಟಬುದ್ಧಿಯನ್ನು ಮಾಡಬಾರದು. ನಿಕೃಷ್ಟದಲ್ಲಿ ಉತ್ಕೃಷ್ಟಬುದ್ಧಿಯನ್ನಿಟ್ಟರೆ ಬಾಧಕವಿಲ್ಲ. ವಿಷ್ಣು ಮುಂತಾದ ನಿಕೃಷ್ಟ ದೇವತೆಗಳಲ್ಲಿಯೂ ಉತ್ಕೃಷ್ಟವಾದ ಶಿವನೆಂಬ ಬುದ್ಧಿಯನ್ನಿಟ್ಟು ಧ್ಯಾನಮಾಡಿದರೆ ಮೋಕ್ಷವಾಗುತ್ತದೆ. ಇದನ್ನು ವೈಷ್ಣವರೂ ಶೈವರೂ ಒಪ್ಪುವುದಿಲ್ಲ; ಅದ್ವೈತಿಗಳು ಎಲ್ಲ ದೇವರಲ್ಲೂ ಸಮ, ಬ್ರಹ್ಮ, ದರ್ಶನವುಳ್ಳವರಾಗಿ ಒಪ್ಪುತ್ತಾರೆ. ॥೬೨॥

ಆದುದರಿಂದ ಶಿವ, ರುದ್ರ, ಮಹಾದೇವ, ಬ್ರಹ್ಮ, ಈಶಾನ, ಮುಂತಾದ ನಾಮಗಳಿಂದ ವಿಷ್ಣು ಮುಂತಾದ ದೇವತೆಗಳನ್ನು ಧ್ಯಾನಮಾಡುವವನು ಕ್ರಮವಾಗಿ ಎಂದರೆ ಶಿವಜ್ಞಾನಯೋಗ್ಯತೆಯನ್ನು ಪಡೆದು ಶಿವಜ್ಞಾನವನ್ನು ಹೊಂದಿ ಸಂಸಾರದ ತೊಡಕಿನಿಂದ ಬಿಡುಗಡೆಯನ್ನು ಹೊಂದುತ್ತಾನೆ. ॥೬೩॥

ಸರ್ವದೇವತೆಗಳಲ್ಲೂ ಉತ್ತಮನಾದ ಶಿವನನ್ನು ಹರಿ, ಬ್ರಹ್ಮ ಮುಂತಾದ ನಿಕೃಷ್ಟದೇವತಾನಾಮಗಳಿಂದ ಧ್ಯಾನಮಾಡುವವನು ಭಯಂಕರವಾದ ಸಂಸಾರದಲ್ಲಿ ಬೀಳುತ್ತಾನೆ. ಇದರಲ್ಲಿ ಸಂದೇಹವಿಲ್ಲವು. ಉತ್ಕೃಷ್ಟವನ್ನು ನಿಕೃಷ್ಟದಿಂದ ಧ್ಯಾನ ಮಾಡಬಾರದೆಂದು ಭಾವವು. ಏಕೆಂದರೆ, ॥೬೪॥

ಯಥಾಽಮಾತ್ಯಾದಿ ಬುದ್ಧಿಸ್ತು ರಾಜ್ಞಿ ಬಾಧಾಯ ದೇಹಿನಾಂ ।
ತಥಾ ವಿಷ್ಣ್ವಾದಿಬುದ್ಧಿಸ್ತು ಶಿವೇ ಬಾಧಾಯ ದೇಹಿನಾಂ ॥೬೫॥

ಅತಶ್ಶಿವಸ್ಸದಾ ಧ್ಯೇಯಃ ಪ್ರಾಧಾನ್ಯೇನ ಮುನೀಷಿಭಿಃ ।
ಜ್ಞಾನಯಜ್ಞಾತ್ಪರೋ ಯಜ್ಞೋ ನಾಸ್ತಿ ನಾಸ್ತಿ ಶ್ರುತೌ ಸ್ಮೃತೌ ॥೬೬॥

ಜ್ಞಾನಯಜ್ಞೈಕನಿಷ್ಠಸ್ಯ ನ ಕಿಂಚಿದಪಿ ದುರ್ಲಭಂ ।
ಮಹಾಪಾಪವತಾಂ ನೃಣಾಂ ಜ್ಞಾನಯಜ್ಞೋ ನ ರೋಚತೇ ॥೬೭॥

ಪ್ರತ್ಯುತ ಜ್ಞಾನಯಜ್ಞಸ್ಯ ಪ್ರದ್ವೇಷೋ ಭಾಸತೇ ಸ್ವತಃ ।
ವಿಶುದ್ಧಂ ಜ್ಞಾನಮುತ್ಪನ್ನಂ ಯಸ್ಯ ತಸ್ಯ ಮಹಾತ್ಮನಃ ॥೬೮॥

ಶಿವರುದ್ರ ಮಹಾದೇವ ಬ್ರಹ್ಮೇಶಾನಾದಿನಾಮಸು ।
ರುದ್ರಮೂರ್ತಿಷು ಸರ್ವಾಸು ಶಾಂತಿದಾಂತ್ಯಾದಿಸಾಧನೇ ॥೬೯॥
ತಿರ್ಯಕ್ತ್ರಿಪುಂಡ್ರೇ ರುದ್ರಾಕ್ಷೇ ತಥಾ ಭಸ್ಮಾವಗುಂಠನೇ ।

ದೊರೆಯಲ್ಲಿ ಮಂತ್ರಿ ಮುಂತಾದ ಕೆಳಗಿನ ಅಧಿಕಾರಿ ಎಂದು ಭಾವಿಸುವುದು ಜನರಿಗೆ ಹೇಗೆ ಬಾಧಕವಾಗುತ್ತದೋ ಹಾಗೆ ಶಿವನಲ್ಲಿ ವಿಷ್ಣ್ವಾದಿಬುದ್ಧಿಯನ್ನಿಟ್ಟು ಧ್ಯಾನಿಸುವುದರಿಂದ ಜನರಿಗೆ ಬಾಧಕವಾಗುತ್ತದೆ. ॥೬೫॥

ಆದುದರಿಂದ ವಿವೇಕಿಗಳು ಶಿವನನ್ನೇ ಮುಖ್ಯವಾಗಿ ಸರ್ವದಾ ಧ್ಯಾನಮಾಡ ಬೇಕು. ವೇದದಲ್ಲೂ ಸ್ಮೃತಿಯಲ್ಲೂ ಜ್ಞಾನಯಜ್ಞಕ್ಕಿಂತಲೂ ಮೇಲಾದ ಯಜ್ಞ ವಿಲ್ಲವು. ಅಂತಹ ಧ್ಯಾನದಿಂದ ಜ್ಞಾನವುಂಟಾಗುತ್ತದೆಂದು ಭಾವವು. ॥೬೬॥

ಜ್ಞಾನಯಜ್ಞದಲ್ಲೇ ಮುಖ್ಯವಾಗಿ ಸರ್ವದಾ ನೆಲೆಸಿರುವವನಿಗೆ ಯಾವುದೂ ಅಲಭ್ಯವಾದುದೇ ಇರುವುದಿಲ್ಲ. ಮಹಾಪಾತಕವುಳ್ಳ ಜನರಿಗೆ ಜ್ಞಾನಯಜ್ಞದಲ್ಲಿ ಇಚ್ಛೆಯೂ ಉಂಟಾಗದು. ॥೬೭॥

ಅಲ್ಲದೆ ಸ್ವಾಭಾವಿಕವಾಗಿ ಅಂಥ ಪಾಪಿಗಳಿಗೆ ಜ್ಞಾನಯಜ್ಞದಲ್ಲಿ ದ್ವೇಷವೂ ಉಂಟಾಗುವುದುಂಟು. ವೀರವೈಷ್ಣವರಿಗೂ ವೀರಶೈವರಿಗೂ ಪರಮತಾಸಹನೆಯಿಂದ ಹೀಗಾಗಿರುತ್ತದೆ. ಯಾರಿಗೆ ಅವಿದ್ಯಾದೋಷವಿಲ್ಲದೆ ನಿರ್ಮಲವಾದ ಜ್ಞಾನವುಂಟಾ ಗಿರುತ್ತದೋ ಅಂಥ ಮಹಾತ್ಮರಿಗೆ ಶಿವ, ರುದ್ರ, ಮಹಾದೇವ, ಬ್ರಹ್ಮ, ಈಶಾನ ಇವೇ ಮುಂತಾದ ಹೆಸರುಳ್ಳ ಎಲ್ಲ ರುದ್ರಮೂರ್ತಿಗಳಲ್ಲೂ ಶಮ ದಮ ಮುಂತಾದ ಸಾಧನ

ಶಿವಸ್ಯ ಲಿಂಗಪೂಜಾಯಾಂ ಶಿವಸ್ಥಾನೇಷು ಸುವ್ರತಾಃ ॥೭೦॥

ಪ್ರಿಯಬುದ್ಧಿಃ ಪ್ರಜಾಯೇತ ಸ್ವಭಾವಾದೇವ ಸರ್ವದಾ ।
ಯಸ್ಯ ವಿಜ್ಞಾನಿನಸ್ತೇಷು ಪ್ರದ್ವೇಷೋ ವಾಽಪಿ ಜಾಯತೇ ॥೭೧॥

ಉಪೇಕ್ಷಾ ವಾ ನ ಸ ಜ್ಞಾನೀ ಪಶುರ್ವಿಜ್ಞಾನವಞ್ಚಕಃ ।
ಸರ್ವತ್ರ ನಾಸ್ತಿ ವಿದ್ವೇಷಃ ಸಾಧ್ಯಸಾಧನಪೂರ್ವಕೇ ॥೭೨॥

ಸಾಕ್ಷಾದ್ವಿಜ್ಞಾನಿನೋ ವಿಪ್ರಾಃ ಉಪೇಕ್ಷಾ ಬುದ್ಧಿರೇವ ಹಿ ।
ತಥಾಽಪ್ಯುಕ್ತೇಷು ಸರ್ವೇಷು ಶೈವೇಷು ದ್ವಿಜಪುಙ್ಗವಾಃ ॥೭೩॥
ಪ್ರಿಯಬುದ್ಧಿಸ್ಸ್ವತೋ ಭಾತಿ ಬಾಧಿತಾಕಾರರೂಪತಃ ।

ಗಳಲ್ಲೂ ಅಡ್ಡಲಾಗಿ ತ್ರಿಪುಂಡ್ರಧಾರಣದಲ್ಲೂ, ರುದ್ರಾಕ್ಷಧಾರಣದಲ್ಲೂ, ಭಸ್ಮಲೇಪದಲ್ಲೂ, ಲಿಂಗದಲ್ಲಿ ಶಿವನ ಪೂಜೆಯಲ್ಲೂ, ಶಿವಕ್ಷೇತ್ರಗಳಲ್ಲೂ ಹಿತಕಾರಿಗಳೆಂಬ ಬುದ್ಧಿಯು ಸರ್ವದಾ ಸ್ವಾಭಾವಿಕವಾಗಿಯೇ ಉಂಟಾಗುತ್ತದೆ. ||೬೮-೬೯-೭೦||

ಯಾವ ಜ್ಞಾನಿಗೆ ಮೇಲೆ ಹೇಳಿದವುಗಳಲ್ಲಿ ಪ್ರದ್ವೇಷವು ಉಂಟಾಗುತ್ತದೋ ಅಥವಾ ಉಪೇಕ್ಷೆಯೂ ಉಂಟಾಗುವುದೋ ಅಂಥವನು ಜ್ಞಾನಿಯೇ ಅಲ್ಲವು. ಸಮಸ್ತಪ್ರಪಂಚವನ್ನೂ ಶಿವನೆಂದು ತಿಳಿದಿರುವವನಿಗೆ ಯಾವುದರಲ್ಲೂ ದ್ವೇಷಬುದ್ಧಿಯುಂಟಾಗಬಾರದು. ಆದುದರಿಂದ ಅಂಥವನು ಪಶುವಿನಂತೆ ದಡ್ಡನು. ತಾನು ಜ್ಞಾನಿಯೆಂದು ಹೇಳಿಕೊಳ್ಳುತ್ತಾ ಇತರರನ್ನು ವಂಚಿಸುವವನಾಗುತ್ತಾನೆ. ಸಾಧ್ಯಗಳಾದ ಸ್ವರ್ಗಾದಿಲೋಕಗಳೂ ಸಾಧನವಾದ ಪುಂಡ್ರನಾಮಮೂರ್ತಿಪೂಜಾಯಾಗ ಉಪಾಸನಾದಿಗಳೂ ಇವುಗಳಲ್ಲಿ ಶಿವಸಾಕ್ಷಾತ್ಕಾರವುಳ್ಳ ಜ್ಞಾನಿಗೆ ದ್ವೇಷವುಂಟಾಗುವುದಿಲ್ಲ. ಆ ಸಾಧನಗಳಿಂದಲೇ ಅವನಿಗೆ ಜ್ಞಾನ ಉಂಟಾದುದರಿಂದ ಅವುಗಳಲ್ಲಿ ದ್ವೇಷ ಉಂಟಾಗುವುದಿಲ್ಲ. ಅಲ್ಲದೆ ಉಪೇಕ್ಷಾಬುದ್ಧಿಯೇ ಇರುತ್ತದೆ. ಹಾಗಾದರೂ ಮೇಲೆ ಹೇಳಿರುವ ಶಿವಜ್ಞಾನಸಾಧನಗಳಲ್ಲಿ ಎಲ್ಲದರಲ್ಲೂ ಪ್ರಿಯಬುದ್ಧಿಯು ಸ್ವಾಭಾವಿಕವಾಗಿ ತೋರುತ್ತಿರುತ್ತದೆ. ಆದರೆ ಅದು ಬಾಧಿತವಾದ ಸ್ವರೂಪವುಳ್ಳದ್ದಾಗಿ ಫಲಜನನ ಸಾಮರ್ಥ್ಯವಿಲ್ಲದೆ ದಗ್ಧಪಟದಂತೆ ಇರುತ್ತಾ "ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ" ಎಂಬ ಜ್ಞಾನಕ್ಕೆ ವಿರೋಧಿಯಾಗಿರುವುದಿಲ್ಲ. ||೭೧-೭೨-೭೩||

ಬಾಧಿತಾಕಾರತೋ ವಾಽಪಿ ಯಸ್ಯ ಬುದ್ಧಿಃ ಸ್ವತೋ ನ ಹಿ ॥೭೪॥

ಏಷ್ಟಸೌ ನೈವ ವಿಜ್ಞಾನೀ ಭ್ರಾಂತ ಏವ ನ ಸಂಶಯಃ ।
ಕರ್ಮಾವಲಂಬನೇನೈವ ಕೇಚಿಜ್ಜೀವಂತಿ ಮಾನವಾಃ ॥೭೫॥

ಜ್ಞಾನಾವಲಂಬನೇನೈವ ಜೀವಂತ್ಯನ್ಯೇ ವಿಮೋಹಿತಾಃ ।
ಅನೇಕಕೋಟಿಭಿಃ ಕಲ್ಪೈಃ ಜ್ಞಾನಯಜ್ಞಸ್ಯ ವೈಭವಂ ॥೭೬॥

ಹಿಂದಿನ ಶ್ಲೋಕಾರ್ಥವನ್ನೇ ವ್ಯತಿರೇಕಮುಖವಾಗಿಯೂ ಪ್ರತಿಪತ್ತಿ ದಾರ್ಢ್ಯಕ್ಕೋಸ್ಕರ ಹೇಳಿರುತ್ತದೆ. ಮೇಲೆ ಹೇಳಿದಂತೆ ಬಾಧಿತವಾದ ಸ್ವರೂಪಗಳಾದರೂ ಶಾಸ್ತ್ರದಲ್ಲಿ ಹೇಳಿದ ಜ್ಞಾನಸಾಧನಗಳಲ್ಲಿ ಸ್ವಾಭಾವಿಕವಾಗಿ ಪ್ರಿಯಬುದ್ಧಿಯು ಯಾರಿಗೆ ಉಂಟಾಗುವುದಿಲ್ಲವೋ ಅಂಥವನು ಜ್ಞಾನಿಯಲ್ಲ. ಶಿವಪೂಜಾದಿಗಳಲ್ಲಿ ಉದಾಸೀನನಾಗಿರುವ ಅವನು ಭ್ರಾಂತನೇ ಆಗಿರುತ್ತಾನೆ. ॥೭೪॥

ಕಾಮ್ಯಕರ್ಮಗಳನ್ನೇ ಅವಲಂಬಿಸಿ ಅವುಗಳ ಫಲವನ್ನು ಅನುಭವಿಸುತ್ತಲೇ ಇರುತ್ತಾ, ಜ್ಞಾನಮಾರ್ಗಕ್ಕೆ ತಿರುಗದೆ ಕೆಲವರು ಬದುಕುತ್ತಿರುತ್ತಾರೆ. ಅವರು ಜನನಮರಣರೂಪವಾದ ಆವರ್ತದಿಂದ ಬಿಡುಗಡೆಯನ್ನು ಹೊಂದುವುದಿಲ್ಲ. "ಕುರ್ವತೇ ಕರ್ಮಭೋಗಾಯ ಕರ್ಮಕರ್ತುಂಚ ಭುಞ್ಜತೇ । ಲಭಂತೇ ಜನ್ಮನೋ ಜನ್ಮ ಪ್ರಜನ್ಮೋ ನೈವ ನಿರ್ವೃತಿಮ್ । ನದ್ಯಾಂ ಕೀಟಾ ಇವಾವರ್ತಾದಾ ವರ್ತಾನ್ತರಮಾಶುತೇ ॥" ಇತಿ ಪಂಚದಶ್ಯುಕ್ತ ರೀತಿಯಲ್ಲಿರುತ್ತಾರೆ. ಹಾಗೆಯೇ ಜ್ಞಾನವನ್ನೇ ಅವಲಂಬಿಸುವವರು, ಎಂದರೆ ಅಪರಿಪಕ್ವವಾದ ಆಪಾತಜ್ಞಾನವನ್ನೇ ಪರಮಾರ್ಥವೆಂದು ಭ್ರಾಂತಿಯಿಂದ ತಿಳಿದು ಧೃಢಸಮ್ಯಜ್ಜ್ಞಾನಕ್ಕೆ ಪ್ರಯತ್ನವನ್ನು ಮುಂದುವರಿಸದೆ, ನಿತ್ಯಾನುಷ್ಠಾನವನ್ನೂ ಬಿಡುವವರಾಗಿ ಜೀವಿಸುತ್ತಾ, ಭ್ರಾಂತಿಯಿಂದ ಕರ್ಮಜ್ಞಾನಮಾರ್ಗಗಳಿಂದಲೂ, ಭೋಗಮೋಕ್ಷ ಎಂಬ ಫಲದ್ವಯದಿಂದಲೂ ಭ್ರಷ್ಟರಾಗಿ, ಅಜ್ಞಾನ ಆಲಸ್ಯಗಳಿಂದ ಹಾಳಾಗುತ್ತಾರೆ. ॥೭೫॥

ಅನೇಕಕೋಟಿಕಲ್ಪಗಳವರೆಗೆ ಹೇಳಿದರೂ ಜ್ಞಾನಯಜ್ಞದ ಮಹಿಮೆಯನ್ನು ನಾನಾಗಲಿ ನಮ್ಮ ಗುರುಗಳಾಗಲಿ ಅಥವಾ ಇತರರಾಗಲಿ ಹೇಳಿ ಮುಗಿಸಲಾಗುವುದಿಲ್ಲ. ಹಾಗಾದರೂ ಕಪಿಲಕಾಣಾದಾದಿಮುನಿಗಳು ತತ್ತ್ವವನ್ನು ಹೇಳಬೇಕೆಂಬ ಶ್ರದ್ಧಾಮಾತ್ರದಿಂದ ಪೂರ್ವಪುಣ್ಯವಶದಿಂದ ಜ್ಞಾನಯಜ್ಞದ ಮಹಿಮೆಯನ್ನು ಹೇಳಿ

ಮಯಾ ಮದ್ಗುರುಣಾಽನ್ಯೈರ್ವಾ ನ ಶಕ್ಯಂ ಪರಿಭಾಷಿತುಂ ।
ತಥಾಽಪಿ ಮುನಯಃ ಶದ್ಧಾಮಾತ್ರಮಾಸಾದ್ಯ ಕೇವಲಂ ॥೭೭॥

ಪ್ರಶಂಸಂತಿ ಮಹಾಭಾಗ್ಯಾತ್ ಜ್ಞಾನಯಜ್ಞಸ್ಯ ವೈಭವಂ ।
ಅಶಕ್ತಾ ಅಪಿ ವಿಜ್ಞಾತುಂ ಜ್ಞಾನಯಜ್ಞಸ್ಯ ವೈಭವಂ ॥೭೮॥

ಶ್ರದ್ಧಯಾ ಸ್ವಾಧಿಕಾರೇಣ ವದಂತಿ ಜ್ಞಾನವೈಭವಂ ।
ಪುನಃ ಕಾಣಾದಕಪಿಲಪ್ರಭೃತೀನಾಮಪಿ ಸ್ವತಃ ॥೭೯॥

ದೋಷೋ ನ ವಿದ್ಯತೇ ಜ್ಞಾನೇ ವಿರೋಧೇಽಪಿ ಪರಸ್ಪರಂ ।
ತೈಸ್ತೈರ್ನಿರೂಪಿತಂ ಜ್ಞಾನಂ ವಸ್ತುತೋ ನೈವ ದರ್ಶಿತಂ ॥೮೦॥
ಉಪಚಾರೇಣ ವಿಜ್ಞಾನಂ ಶ್ರದ್ಧಾಪೂತತಯಾ ದ್ವಿಜಾಃ ।

ಮುಗಿಸಲು ಪ್ರಯತ್ನಿಸಿರುತ್ತಾರೆ. ತತ್ತ್ವವು ಅತೀಂದ್ರಿಯವಾದುದರಿಂದ, ಯುಕ್ತಿಗಮ್ಯವಾದುದಲ್ಲವಾದುದರಿಂದ, ಶ್ರುತಿಸಿದ್ಧಾಂತವನ್ನು ಅರಿಯಲಾರದೆ ಇದಾರೆ. ಹೀಗೆ ಜ್ಞಾನಯಜ್ಞದ ವೈಭವವನ್ನು ಹೇಳಿ ಮುಗಿಸಲು ಅಶಕ್ತರಾದರೂ ಆಯಾ ಶಾಸ್ತ್ರಗಳ ಎಂದರೆ ಯೋಗಸಾಂಖ್ಯನ್ಯಾಯಮುಂತಾದ ದರ್ಶನಗಳ ಪ್ರವರ್ತಕರಾದುದರಿಂದ ಅಧಿಕಾರವಾಣಿಯಿಂದ ಜ್ಞಾನಮಹಿಮೆಯನ್ನು ಶ್ರದ್ಧೆಯಿಂದ ಹೇಳಿ ಮುಗಿಸಲು ಹೊರಟಿದಾರೆ. ಶ್ರದ್ಧಾಳುಗಳಾದುದರಿಂದ ಅವರ ಪ್ರಯತ್ನವು ಸಾರ್ಥಕವಾಗದೆ ಇದ್ದರೂ ದೋಷಸಂಬಂಧವು ಅವರಿಗಿಲ್ಲವು. ||೭೬-೭೭-೭೮||

ಕಣಾದ ಕಪಿಲ ಮುಂತಾದ ಮುನಿಗಳಿಗೂ ಸ್ವಾಭಾವಿಕವಾಗಿ ದೋಷವಿಲ್ಲವು. ಒಂದೊಂದು ದರ್ಶನದಲ್ಲೂ ಹೇಳಿರುವ ತತ್ತ್ವಸ್ವರೂಪಗಳಿಗೆ ಪರಸ್ಪರವಾಗಿ ಭೇದವಿದ್ದರೂ ಅವು ಜ್ಞಾನಮಾರ್ಗದಲ್ಲಿನ ಮಜಲುಗಳಂತಿರುವುದರಿಂದ ದೋಷವಿಲ್ಲವು. ಅವರು ಹೇಳಿರುವ ತತ್ತ್ವಜ್ಞಾನವು ಪರಮಾರ್ಥವಲ್ಲವು. ಆಯಾ ಮುನಿಗಳು ತತ್ತ್ವಸ್ವರೂಪವನ್ನು ಹೇಳಿದ್ದರೂ ಅದು ಶ್ರುತಿಯ ಕಡೆಯ ಸಿದ್ಧಾಂತಕ್ಕೆ ಸಮ್ಮತವಾದುದಲ್ಲವಾದ್ದರಿಂದ ಯಥಾರ್ಥಜ್ಞಾನವಲ್ಲವು. ಆದುದರಿಂದ ಕಪಿಲಾದಿಗಳಿಂದ ಪ್ರವರ್ತಿತವಾದ ಜ್ಞಾನಕ್ಕೆ ವಿಜ್ಞಾನವೆಂದು ವ್ಯವಹಾರವು ಔಪಚಾರಿಕವಾದುದು. ಆದರೂ ಅದು ಶ್ರದ್ಧೆಯಿಂದ ಪವಿತ್ರವಾದುದರಿಂದ, ಮೋಕ್ಷೇ ಧೀಃ ಜ್ಞಾನಮನ್ಯತ್ರ ವಿಜ್ಞಾನಂ ಶಿಲ್ಪಶಾಸ್ತ್ರಯೋಃ || ಎಂಬಂತೆ ವಿಜ್ಞಾನವೆನ್ನಿಸಿಕೊಳ್ಳಲು ಅರ್ಹವಾದುದು. ||೭೯-೮೦||

ವ್ಯಾಸಸ್ಸಾಕ್ಷಾತ್ ಶಿವಜ್ಞಾನೀ ಶಿವಸ್ಯೈವ ಪ್ರಸಾದತಃ ॥೮೧॥

ತತ್ಪ್ರಸಾದಾದಹಂ ಸಾಕ್ಷಾತ್ ಶಿವಜ್ಞಾನೀ ನ ಸಂಶಯಃ ।
ಮಯಾ ತತ್ಸಂಗ್ರಹೇಣೈವ ಪ್ರೋಕ್ತಂ ಯುಷ್ಮಾಕಮಾದರಾತ್ ॥೮೨॥

ತತ್ಪ್ರಸಾದೇನ ವಿಜ್ಞಾಯ ಯಜ್ಞವೈಭವಮಾಸ್ತಿಕಾಃ ।
ಜ್ಞಾತವಂತಃ ಕೃತಾರ್ಥಾಶ್ಚ ಯೂಯಂ ಸತ್ಯಂ ನ ಸಂಶಯಃ ॥೮೩॥

ಇತಃ ಪೂರ್ವಂ ಮಯಾಽನ್ಯೇಷಾಂ ನಾಯಮರ್ಥೋಽಭಿಭಾಷಿತಃ ।
ವ್ಯಾಸೋ ಮಮ ಗುರುಃ ಪೂರ್ವಂ ರಹಸ್ಯೋ ಮೇಽಭ್ಯಭಾಷತ ॥೮೪॥

ಸಾರಾತ್ಸಾರತರಸ್ಸಾಕ್ಷಾದಯಮರ್ಥಃ ಪ್ರಭಾಷಿತಃ ।
ಗೋಪನೀಯಸ್ತ್ವಯಂ ನಿತ್ಯಂ ಭವದ್ಭಿಃ ಪರಮಾಸ್ತಿಕೈಃ ॥೮೫॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಪರಾಪರವೇದಾರ್ಥವಿಚಾರೋ ನಾಮ ದ್ವಿತೀಯೋಽಧ್ಯಾಯಃ

ವ್ಯಾಸನು ಶಿವನ ಅನುಗ್ರಹದಿಂದಲೇ ಶಿವಜ್ಞಾನವನ್ನು ಪಡೆದನು. ಆ ವ್ಯಾಸನ ಅನುಗ್ರಹದಿಂದಲೇ ನಾನು ಶಿವಜ್ಞಾನವನ್ನು ಪಡೆದಿರುತ್ತೇನೆ. ಆ ಶಿವಜ್ಞಾನವನ್ನು ನಾನು ಸಂಗ್ರಹಮಾಡಿ ನಿಮಗೆ ಆದರದಿಂದ ಹೇಳಿದೇನೆ. ಆ ವ್ಯಾಸನ ಅನುಗ್ರಹ ದಿಂದಲೇ ಯಜ್ಞವೈಭವವನ್ನು ಆಸ್ತಿಕರಾದ ನಿಮಗೆ ಹೇಳಿದೇನೆ. ನೀವೂ ಸಹ ಆ ಜ್ಞಾನವನ್ನು ಪಡೆದು ಕೃತಕೃತ್ಯರಾಗಿದ್ದೀರಿ. ಇದು ನಿಜವು, ಸಂಶಯವಿಲ್ಲವು. ||೮೧-೮೨-೮೩||

ಇದಕ್ಕೆ ಮೊದಲು ನಾನು ಈ ಅರ್ಥವನ್ನು ಇತರರಿಗೆ ಹೇಳಲಿಲ್ಲವು. ನನ್ನ ಗುರುವಾದ ವ್ಯಾಸನು ಪೂರ್ವದಲ್ಲಿ ರಹಸ್ಯವಾಗಿ ನನಗೆ ಇದನ್ನು ಹೇಳಿದನು. ||೮೪||

ಮುಖ್ಯವಾದ ತತ್ತ್ವಾರ್ಥಗಳಿಗಿಂತಲೂ ಮುಖ್ಯತಮವಾದ ಈ ತತ್ತ್ವಾರ್ಥ ವನ್ನು ನಾನೇ ಸಾಕ್ಷಾತ್ತಾಗಿ ಹೇಳಿದ್ದೇನೆ. ನೀವು ಅತಿಶಯವಾದ ಆಸ್ತಿಕ್ಯಬುದ್ಧಿ ಯುಳ್ಳವರಾಗಿ ಈ ತತ್ತ್ವಾರ್ಥವನ್ನು ಸರ್ವದಾ ಕಾಪಾಡಿಕೊಂಡಿರಬೇಕು. ||೮೫||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಜ್ಞಾನಯಜ್ಞದ ಸ್ವರೂಪಮಹಿಮೆಗಳನ್ನು ವಿವರಿಸುವ
ಎರಡನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ತೃತೀಯೋಽಧ್ಯಾಯಃ ||

ಮೂರನೆಯ ಅಧ್ಯಾಯವು

(ಕರ್ಮಯಜ್ಞವೈಭವಂ)

ಅಥಾತಸ್ಸಂಪ್ರವಕ್ಷ್ಯಾಮಿ ಕರ್ಮಯಜ್ಞಸ್ಯ ವೈಭವಂ ।
ಕರ್ಮಯಜ್ಞಸ್ತ್ರಿಧಾ ಪ್ರೋಕ್ತಃ ಮುನಿಭಿಸ್ಸೂಕ್ಷ್ಮದರ್ಶಿಭಿಃ ॥೧॥

ಏಕಃ ಕಾಮ್ಯೋಽಪರೋ ನಿತ್ಯಃ ತಥಾ ನೈಮಿತ್ತಿಕೋಽಪರಃ ।
ಪ್ರಾಧಾನ್ಯೇನ ಫಲಂ ಶುದ್ಧಿಃ ಆರ್ಥಿಕೀ ಕಾಮ್ಯಕರ್ಮಣಃ ॥೨॥

ಜ್ಞಾನಯಜ್ಞವನ್ನು ಮುಖ್ಯವಾಗಿ ತಿಳಿಸಿ ಈಗ ಕ್ರಮಪ್ರಾಪ್ತವಾದ ಕರ್ಮರೂಪವಾದ ಯಜ್ಞದ ಮಹಿಮೆಯನ್ನು ಹೇಳುತ್ತೇನೆ. ಸೂಕ್ಷ್ಮಾರ್ಥಗಳನ್ನು ತಿಳಿಯಬಲ್ಲ ಮುನಿಗಳಿಂದ ಆ ಕರ್ಮಯಜ್ಞವು ಮೂರು ವಿಧವಾಗಿದೆ ಎಂದು ಹೇಳಲ್ಪಟ್ಟಿದೆ. ||೧||

ಆ ಮೂರರಲ್ಲಿ ಒಂದು ಕಾಮ್ಯಕರ್ಮವು, ಇನ್ನೊಂದು ನಿತ್ಯಕರ್ಮವು. ಮತ್ತೊಂದು ನೈಮಿತ್ತಿಕಕರ್ಮವು. ಅದರಲ್ಲಿ ಕಾಮ್ಯಕರ್ಮಕ್ಕೆ ಮುಖ್ಯವಾದ ಫಲವು ಆಯಾ ಪ್ರಯೋಜನಪ್ರಾಪ್ತಿಯೇ. ಆದರೆ ಫಲಾಶೆ ಇಲ್ಲದೆ ಧರ್ಮಾರ್ಥವಾಗಿ ಆಚರಿಸಿದರೆ ಚಿತ್ತಶುದ್ಧಿಯೂ ಆನುಷಂಗಿಕವಾಗಿ ಆಗುತ್ತದೆ. ||೨||

ಪ್ರಾಧಾನ್ಯೇ(ನಫಲಂಶು)ನಾತ್ಮನಶ್ಶುದ್ಧಿಃ ನಿತ್ಯಸ್ಯ ಫಲಮಾರ್ಥಿಕಂ ।
ಕೇವಲಂ ಪ್ರತ್ಯವಾಯಸ್ಯ ನಿವೃತ್ತಿರಿತಿ ಯಸ್ಯ ತು ॥೩॥

ಕಾಮ್ಯರೂಪೇಷು ಯಜ್ಞೇಷು ಯತಂತೇ ಶ್ರದ್ಧಯಾ ಸಹ ।
ಮಂದಭಾಗ್ಯಾ ನರಾ ವಿಪ್ರಾ ನಿತ್ಯನೈಮಿತ್ತಿಕಾತ್ಮಕೇ ॥೪॥

ಮಹಾಭಾಗ್ಯಾಃ ಪ್ರವರ್ತಂತೇ ತೇಷಾಂ ಮುಕ್ತಿರಯತ್ನತಃ ।
ವಿಧ್ಯುಕ್ತಮಿತಿ ಯೇ ಬುದ್ಧ್ಯಾ ವರ್ತಂತೇ ಶ್ರದ್ಧಯಾ ಸಹ ॥೫॥

ಏಷು ಸರ್ವೇಷು ಯಜ್ಞೇಷು ತೇಷಾಂ ಮಂದಂ ಫಲಂ ಭವೇತ್ ।
ಶಿವಾರಾಧನಬುದ್ಧ್ಯಾ ಯೇ ಯತಂತೇ ಶ್ರದ್ಧಯಾ ಸಹ ॥೬॥

ಏಷು ಯಜ್ಞೇಷು ತೇ ಶೀಘ್ರಂ ವಿಮುಕ್ತಿಫಲಮಾಪ್ನುಯುಃ ।

ನಿತ್ಯಕರ್ಮಾನುಷ್ಠಾನಕ್ಕೆ ಅಂತಃಕರಣಶುದ್ಧಿಯು ಮುಖ್ಯಫಲವು. ಏಕೆಂದರೆ ಅವರಿಗೆ ಫಲದಲ್ಲಿ ಅಭಿಸಂಧಿ ಇರುವುದಿಲ್ಲ. ನಿತ್ಯಕರ್ಮದಲ್ಲಿ ಅಕರಣೇಪ್ರತ್ಯವಾಯ ಪ್ರಾಪ್ತಿರೂಪದುರಿತದ, ಮಾಡದಿದ್ದರೆ ಬರುವ ದೋಷಮಾತ್ರದ, ನಿವೃತ್ತಿಯೇ ಫಲವು. ||೩||

ಫಲಕಾಮನೆಯನ್ನಿಟ್ಟುಕೊಂಡು ಕಾಮ್ಯಕರ್ಮಗಳನ್ನು ಶ್ರದ್ಧಾಪೂರ್ವಕವಾಗಿ ಆಚರಿಸುವವರು ಮಂದಭಾಗ್ಯರು. ಎಲೈ ವಿಪ್ರರೇ, ನಿತ್ಯನೈಮಿತ್ತಿಕ (ಸಂಧ್ಯಾವಂದನಪ್ರಾಯಶ್ಚಿತ್ತಾನುಷ್ಠಾನ)ಗಳನ್ನು ಚಿತ್ತಶುದ್ಧಿಜ್ಞಾನಪ್ರಾಪ್ತಿಯ ಮೂಲಕ ಕ್ರಮವಾಗಿ ಮೋಕ್ಷಹೇತುಗಳೆಂದು ತಿಳಿದು ಆಚರಿಸುವವರು ಅನಾಯಾಸವಾಗಿ ಮುಕ್ತಿಯನ್ನು ಪಡೆಯುತ್ತಾರೆ. ಅವರೇ ಭಾಗ್ಯಶಾಲಿಗಳು. ||೪||

ವೇದದಲ್ಲಿ ಹೇಳಿದೆಯಾದ್ದರಿಂದ ಮಾಡಬೇಕೆಂದು ಯಾರು ಈ ಮೂರು ವಿಧವಾದ ಕರ್ಮಗಳನ್ನು ಆದರದೊಡನೆ ಫಲಾಶೆಯನ್ನು ಬಿಡದೆ ಅನುಷ್ಠಾನ ಮಾಡುತ್ತಾರೋ ಅಂಥವರಿಗೆ ಪರಮಫಲವು ಮಂದವಾಗುತ್ತದೆ. ||೫||

ಈ ಕರ್ಮಗಳನ್ನೇ ಯಾರು ಈಶ್ವರಾರಾಧನೆ ಎಂಬ ಬುದ್ಧಿಯನ್ನು ಇಟ್ಟುಕೊಂಡು ಮಾಡುತ್ತಾರೋ ಅಂಥವರು ಶುದ್ಧವಾದ ಬುದ್ಧಿಯುಳ್ಳವರಾಗಿ ಜ್ಞಾನಪ್ರಾಪ್ತಿಯಿಂದ ಜಾಗ್ರತೆಯಾಗಿ ಮೋಕ್ಷವನ್ನು ಪಡೆಯುತ್ತಾರೆ. ||೬||

ಅಕರ್ತಾಽಹಮಭೋಕ್ತಾಽಹಮಸಂಗೋಽಹಮಹಂ ಶಿವಃ ॥೭॥

ಇತಿ ವಿಜ್ಞಾಯ ಮಾನೇನ ಸ್ವಾತ್ಮಾನಂ ತರ್ಕತೋಽಪಿ ಚ ।
ಕರ್ಮಯಜ್ಞೇಷು ಯೇ ನಿತ್ಯಂ ಯತಂತೇ ಶ್ರದ್ಧಯಾಽನ್ವಿತಾಃ ॥೮॥

ತೇ ಮಹಾದೇವವಿಜ್ಞಾನಂ ಅಪರೋಕ್ಷಮವಾಪ್ನುಯುಃ ।
ಯಜ್ಞರೂಪಂ ಮಹಾವಿಷ್ಣುಂ ಯಜ್ಞೇ ಪಶ್ಯಂತಿ ಯೇ ದ್ವಿಜಾಃ ॥೯॥

ತೇ ತು ವಿಜ್ಞಾನಮಾಸಾದ್ಯ ಕೈವಲ್ಯಂ ಜ್ಞಾನಮಾಪ್ನುಯುಃ ।
ಪ್ರಾಧಾನ್ಯೇನ ಮಹಾದೇವೋ ಯಜ್ಞೈರಿಜ್ಯೋ ನ ಚಾಪರಃ ॥೧೦॥

ಇತಿ ಜ್ಞಾತ್ವಾ ಯತಂತೇ ಯೇ ತೇಽಪಿ ವಿಜ್ಞಾನಮಾಪ್ನುಯುಃ ।
ವಿಷ್ಣುಂ ಬ್ರಹ್ಮಾಣಮಿಂದ್ರಂ ವಾ ದೇವತಾಂತರಮೇವ ವಾ ॥೧೧॥

ಪ್ರಧಾನಬುದ್ಧ್ಯಾ ಯೇ ಯಜ್ಞೈಃ ಯಜಂತೇ ಮೋಹತೋಽಪಿ ವಾ ।
ತೇ ಯಾಂತಿ ನರಕಂ ಘೋರಂ ಯಾವದಾಭೂತಸಂಪ್ಲವಂ ॥೧೨॥

ಯಾರು ಶ್ರುತಿಪ್ರಮಾಣದಿಂದಲೂ ಅದಕ್ಕೆ ಅನುಕೂಲವಾದ ಅನುಮಾನ ಯುಕ್ತಿಗಳಿಂದಲೂ, ನಾನು ಎಂದರೆ ಆತ್ಮನು ವಾಸ್ತವವಾಗಿ ಕರ್ತೃವೂ ಅಲ್ಲವು, ಕರ್ಮಫಲವನ್ನು ಅನುಭವಿಸುವವನೂ ಅಲ್ಲವು, ಅಜ್ಞಾನದ ಸಂಬಂಧವೂ ಇಲ್ಲವು. ಅವನು ಸಚ್ಚಿದಾನಂದಸ್ವರೂಪದಲ್ಲಿ ಪರಶಿವಸ್ವರೂಪನು. ಹೀಗೆಂದು ತಿಳಿದು ಕರ್ಮ ಯಜ್ಞಗಳಲ್ಲಿ ಆದರದಿಂದ ಪ್ರವರ್ತಿಸುತ್ತಾರೋ ಅಂಥವರು ಮಹಾದೇವನಾದ ಪರಶಿವನ ಅಪರೋಕ್ಷಸಾಕ್ಷಾತ್ಕಾರವನ್ನು ಹೊಂದುವರು. ॥೭-೮॥

ಯಜ್ಞಸ್ವರೂಪಿಯಾದ ಮಹಾವಿಷ್ಣುವನ್ನು ಶಿವನಿಗೆ ಅಂಗಭೂತನನ್ನಾಗಿ ಯಜ್ಞದಲ್ಲಿ ಯಾರು ನೋಡುತ್ತಾರೋ ಅಂಥವರು ಕ್ರಮವಾಗಿ ಪರಶಿವಜ್ಞಾನವನ್ನು ಪಡೆದು ಅಜ್ಞಾನಸಂಬಂಧವಿಲ್ಲದ ಜ್ಞಾನಸ್ವರೂಪವಾದ ಮೋಕ್ಷವನ್ನು ಪಡೆಯುತ್ತಾರೆ. ॥೯॥

ಕರ್ಮಯಜ್ಞಗಳಲ್ಲಿ ಮಹಾದೇವನನ್ನೇ ಪ್ರಧಾನನಾಗಿ ಪೂಜ್ಯನಾದವನೆಂದೂ ಇತರ ದೇವತೆಗಳಲ್ಲವೆಂದೂ ತಿಳಿದು ಯಾರು ಪ್ರವರ್ತಿಸುತ್ತಾರೋ ಅಂಥವರೂ ಕೂಡ ಕ್ರಮವಾಗಿ ತತ್ತ್ವಜ್ಞಾನವನ್ನು ಪಡೆಯುತ್ತಾರೆ. ॥೧೦॥

ಕರ್ಮಯಜ್ಞದಲ್ಲಿ ವಿಷ್ಣುವನ್ನಾಗಲಿ ಬ್ರಹ್ಮನನ್ನಾಗಲಿ ಇಂದ್ರನನ್ನಾಗಲಿ ಅಥವಾ ಬೇರೆ ದೇವರನ್ನಾಗಲಿ ಪ್ರಧಾನದೇವತೆಯನ್ನಾಗಿ ಭಾವಿಸಿ ಯಾರು

ನಾಮತಶ್ಚಾರ್ಥತೋ ಯಸ್ತು ಮಹಾದೇವೋ ಮಹೇಶ್ವರಃ ।
ಸ ಏವ ಸಾಂಬಸ್ಸರ್ವಜ್ಞ ಇಜ್ಯಸ್ಸರ್ವ ಮಹಾಮಖೈಃ ॥೧೩॥

ಯಾನಿ ಲೋಕೇಽನಿಷಿದ್ಧಾನಿ ಕರ್ಮಾಣ್ಯವಿಹಿತಾನಿ ಚ ।
ತಾನಿ ಶಂಭೋರ್ಮಹಾಪೂಜೇತ್ಯೇತತ್ ಜ್ಞಾನಂ ಮಹಾಮಖಃ ॥೧೪॥

ಯಾನಿ ಕರ್ಮಾಣಿ ಸರ್ವಾಣಿ ನಿಷಿದ್ಧಾನಿ ಶ್ರುತೌ ಸ್ಮೃತೌ ।
ತಾನಿ ಚಾರಾಧನಂ ಶಂಭೋರಿತಿ ಜ್ಞಾನಂ ಮಹಾಮಖಃ ॥೧೫॥

ಈಶ್ವರಾರ್ಥಧಿಯಾ ಪಾಪಾನ್ಯಪಿ ಕರ್ಮಾಣಿ ಸುವ್ರತಾಃ ।
ಭವಂತಿ ಪೂತಾನ್ಯತ್ಯಂತಂ ಸತ್ಯಮೇವ ನ ಸಂಶಯಃ ॥೧೬॥

ಕರ್ಮದಿಂದ ಪೂಜಿಸುತ್ತಾರೋ ಅಂಥವರು ಪರಮಫಲದಲ್ಲಿ ಸಾವಕಾಶವಾಗಿ, ಅಜ್ಞಾನದಿಂದ ಭಯಂಕರವಾದ ಪಶ್ಚಾತ್ತಾಪದ ನರಕವನ್ನು ಪ್ರಳಯದವರೆಗೂ ಹೊಂದುತ್ತಾರೆ. ಆದುದರಿಂದ ಹೆಸರಿನಿಂದಲೂ ಅರ್ಥದಿಂದಲೂ ಎಲ್ಲ ದೇವರಲ್ಲೂ ದೊಡ್ಡ ದೇವರಾದ, ಪ್ರಭುವಾದ ಸರ್ವಜ್ಞನಾದ ದೇವರೇ ಸಾಂಬನಾದ ಪರಶಿವನು ಎಂದು ಭಾವಿಸಿ ಎಲ್ಲ ದೊಡ್ಡ ಯಜ್ಞಗಳಲ್ಲೂ ಎಲ್ಲ ದೇವತೆಗಳಿಗಿಂತಲೂ ಹೆಚ್ಚು ಪೂಜ್ಯನಾಗಿರುವನು. ಎಂದು ತಿಳಿಯಬೇಕು. ||೧೧-೧೨-೧೩||

ಲೋಕದಲ್ಲಿ ಯಾವ ಕರ್ಮಗಳು ಅನಿಷಿದ್ಧಗಳಾಗಿವೆಯೋ ಮತ್ತು ಶಾಸ್ತ್ರಗಳಲ್ಲಿ ವಿಹಿತಗಳಾಗಿಲ್ಲವೋ ಅಂಥ ನಿಮೇಷ ಕಂಡೂಯನ ಮುಂತಾದ ಕರ್ಮಗಳೂ ಮಹಾದೇವನ ಶ್ರೇಷ್ಠವಾದ ಪೂಜೆ ಎಂದು ತಿಳಿಯುವುದಕ್ಕೆ ಮಹಾಮಖವೆಂದು ಹೆಸರು. ||೧೪||

ಯಾವ ಕರ್ಮಗಳು ವೇದದಲ್ಲೂ ಸ್ಮೃತಿಯಲ್ಲೂ ನಿಷಿದ್ಧಗಳಾಗಿವೆಯೋ ಅಂಥ ಕರ್ಮಗಳನ್ನೂ ಶಂಭುವಾದ ಪರಶಿವನ ಪೂಜೆಯೆಂದು ತಿಳಿಯುವುದಕ್ಕೆ ಮಹಾಮಖವೆಂದು ವ್ಯವಹಾರವಿದೆ. ||೧೫||

ನಿಯಮನಿಷ್ಠರಾದ ಋಷಿಗಳೇ, ಈಶ್ವರಾರ್ಪಣಬುದ್ಧಿಯಿಂದ ಮಾಡಲ್ಪಟ್ಟ ಪಾಪಕರ್ಮಗಳೂ ಕೂಡ ಅತಿಶಯವಾಗಿ ಪರಿಶುದ್ಧಕರ್ಮಗಳ ಹಾಗಾಗುತ್ತವೆ. ಇದು ಸತ್ಯವಾದುದು, ಸಂದೇಹವಿಲ್ಲವು. ||೧೬||

ಆರ್ದ್ರಂ ಕಾಷ್ಠಂ ಮಹಾವಹ್ನಿಃ ಶುಷ್ಕಂ ಕೃತ್ವಾ ದಹೇದ್ಯಥಾ ।
ತಥೇಶ್ವರಧಿಯಾ ಪಾಪಂ ಶುದ್ಧವಿಜ್ಞಾನದಂ ಭವೇತ್ ॥೧೭॥

ವಿಧ್ಯುಕ್ತಕರ್ಮನಿಷ್ಠಾನಾಮಿಷ್ಟಸ್ಯ ಕರಣಂ ತು ಯತ್ ।
ಸೋಽಪಿ ಸಾಕ್ಷಾನ್ಮಹಾಯಜ್ಞಃ ಸಮ್ಯಗ್ಜ್ಞಾನಸ್ಯ ಕಾರಣಂ ॥೧೮॥

ವಿಧ್ಯುಕ್ತಕರ್ಮನಿಷ್ಠಾನಾಮನಿಷ್ಟಕರಣಂ ತು ಯತ್ ।
ತನ್ಮಹಾಪಾತಕಂ ಪ್ರೋಕ್ತಂ ಸಂಸಾರಸ್ಯ ಪ್ರವರ್ತಕಂ ॥೧೯॥

ದುರಾಚಾರಿಷು ಸರ್ವೇಷು ವಿನಾ ದೋಷಸ್ಯ ದರ್ಶನಂ ।
ಉಪೇಕ್ಷಾಬುದ್ಧಿರುತ್ಪನ್ನಾ ಯಾ ತು ಸೋಽಯಂ ಮಹಾಮಖಃ ॥೨೦॥

ಬುದ್ಧಾರ್ಹತಾದಿಮಾರ್ಗಸ್ಥಾ ದೇವತಾಪ್ರತಿಮಾಸು ಚ ।
ದೇವತಾಬುದ್ಧಿಮಾತ್ರಂ ಯತ್ಸೋಽಪಿ ಯಜ್ಞಃ ಪ್ರಕೀರ್ತಿತಃ ॥೨೧॥

ಹಸಿಯ ಸೌದೆಯನ್ನೂ ಕೂಡ ದೊಡ್ಡ ಬೆಂಕಿಯು ಒಣಗಿಸಿ ಆಮೇಲೆ ಹೇಗೆ ಸುಡುತ್ತದೋ ಹಾಗೆ ಈಶ್ವರಜ್ಞಾನದಿಂದ ಕೂಡಿದವರು ಆಚರಿಸಿರಬಹುದಾದ ಪಾಪ ಕರ್ಮವೂ ಕೂಡ ಸಮ್ಯಜ್ಜ್ಞಾನಕ್ಕೆ ಕಾರಣವಾಗುತ್ತದೆ. ॥೧೭॥

ವಿಧ್ಯುಕ್ತವಾದ ಕರ್ಮವನ್ನು ಆಚರಿಸುವವರಿಗೆ ಸಹಾಯುಗಳನ್ನು ಒದಗಿಸುವಿಕೆಯೂ ಕೂಡ ಶ್ರೇಷ್ಠವಾದ ಯಾಗದಂತೆ ಸಮ್ಯಜ್ಜ್ಞಾನಕ್ಕೆ ಕಾರಣವಾಗುತ್ತದೆ. ॥೧೮॥

ಶಾಸ್ತ್ರವಿಹಿತವಾದ ಕರ್ಮಗಳನ್ನು ಅನುಷ್ಠಾನಮಾಡುವವರಿಗೆ ಅಹಿತವನ್ನು ಆಚರಿಸುವುದು ಮಹಾಪಾತಕವೆನಿಸುತ್ತದೆ. ಅದರಿಂದ ಸಂಸಾರಬಂಧವು ಪ್ರಾಪ್ತಿಯಾಗುತ್ತದೆ. ॥೧೯॥

ನಿಷಿದ್ಧಕರ್ಮಾಚರಣೆಯಲ್ಲಿ ತೊಡಗಿರುವವರ ವಿಷಯದಲ್ಲೂ ದೋಷಗಳನ್ನು ಗಮನಿಸಿ ದ್ವೇಷಿಸದೆ ಉದಾಸೀನತೆಯ ಬುದ್ಧಿಯಿಂದಿರುವುದೂ ಒಂದು ದೊಡ್ಡ ಶ್ರೇಷ್ಠವಾದ ಯಜ್ಞವೆನಿಸುತ್ತದೆ. “ಮೈತ್ರೀಕರುಣಾಮುದಿತೋಪೇಕ್ಷಾಣಾಂ ಸುಖದುಃಖಪುಣ್ಯಾಪುಣ್ಯವಿಷಯಾಣಾಂ ಭಾವನಾತಃ ಚಿತ್ತಪ್ರಸಾದನಮ್” ಎಂದು ಪತಂಜಲಿ ಯೋಗಶಾಸ್ತ್ರದಲ್ಲಿ ಹೇಳಿರುವಂತೆ ಆಚರಿಸಬೇಕು. ॥೨೦॥

ಬೌದ್ಧ, ಆರ್ಹತ ಮುಂತಾದ ಮತಗಳ ಮಾರ್ಗದಲ್ಲಿರುವವರು ತಮ್ಮ ದೇವತೆ

ವೈದಿಕಂ ತಾಂತ್ರಿಕಂ ಹಿತ್ವಾ ಮಾರ್ಗಂ ಸ್ವಪ್ರಜ್ಞಯಾ ದ್ವಿಜಾಃ ।
ಯತ್ರ ಯೋ ದೇವತಾಬುದ್ಧಿಂ ಕರೋತಿ ಶ್ರದ್ಧಯಾ ಸಹ ॥೨೨॥

ಸೋಽಪಿ ಯಜ್ಞ ಇತಿ ಪ್ರೋಕ್ತೋ ಮಯಾ ವೇದಾರ್ಥವಿತ್ತಮಾಃ ।
ಶ್ರದ್ಧಯಾ ಸಹಿತಂ ಸರ್ವಂ ಶ್ರೇಯಸೇ ಭೂಯಸೇ ಭವೇತ್ ॥೨೩॥

ಸ್ವಬುದ್ಧ್ಯಾ ವೇದಶಾಸ್ತ್ರೋಕ್ತೇ ತಂತ್ರೋಕ್ತೇಽಪಿ ದ್ವಿಜೋತ್ತಮಾಃ ।
ಆಸ್ತಿಕ್ಯಂ ದೇವತಾಬುದ್ಧಿರಪಿ ಲಾಭಾಯ ದೇಹಿನಾಂ ॥೨೪॥

ಗಳ ಪ್ರತಿಮೆಗಳಲ್ಲೂ ದೇವತಾಬುದ್ಧಿಮಾತ್ರವನ್ನು ಗಮನಿಸಿ ಮನ್ನಿಸುವುದೂ ಶ್ರೇಷ್ಠವಾದ ಯಾಗವೆನಿಸುತ್ತದೆ. "ಶುನಿ ಚೈವ ಶ್ವಪಾಕೇ ಚ ಪಣ್ಡಿತಾಸ್ಸಮದರ್ಶಿನಃ" ಎಂಬ ರೀತಿಯಲ್ಲಿ ನಡೆದುಕೊಳ್ಳಬೇಕು. ಭಕ್ತಿಶ್ರದ್ಧೆಗಳೇ ಮುಖ್ಯಗಳು. ||೨೧||

ವೇದಗಳಲ್ಲೂ, ಆಗಮಗಳಲ್ಲೂ ಹೇಳದೆ ಇರುವ ಯಾವುದಾದರೊಂದು ಆರಾಧನವೂ ಕೂಡ ಯಜ್ಞವೆನಿಸುತ್ತದೆ. ಹೀಗಿರಲು ತನ್ತ್ರೋಕ್ತವಾದ ಆರಾಧನೆಯು ಯಜ್ಞವೆನಿಸುತ್ತದೆ ಎಂದು ಹೇಳಬೇಕಾದುದೇ ಇಲ್ಲವೆಂದು ಹೇಳುತ್ತಾರೆ. ಶ್ರುತಿಯಲ್ಲಿ ಹೇಳಿರುವುದಾಗಲಿ ತಂತ್ರಗಳಲ್ಲಿ ಎಂದರೆ ಶೈವವೈಷ್ಣವಾದಿ ಆಗಮಗಳಲ್ಲಾಗಲಿ ಹೇಳಿರುವ ಮಾರ್ಗವನ್ನು ಬಿಟ್ಟು ಯಾರಾದರೂ ತನ್ನ ಸ್ವಪ್ರಜ್ಞೆಯಿಂದಲೇ ಒಂದು ಹೊಸ ಆರಾಧನೆಯನ್ನು ದೇವತಾಬುದ್ಧಿಯನ್ನು ಇಟ್ಟುಕೊಂಡು ದೃಢವಾದ ನಂಬಿಕೆಯೊಡನೆ ಯಾವುದಾದರೊಂದು ಚಿತ್ರಾದಿಗಳಲ್ಲೂ ಪೂಜೆಯನ್ನು ಮಾಡುತ್ತಾನೋ ಅದೂ ಕೂಡ ಯಜ್ಞವೆನಿಸುತ್ತದೆ ಎಂದು ನನ್ನಿಂದ ಹೇಳಲ್ಪಟ್ಟಿದೆ. ||೨೨||

ಶ್ರದ್ಧೆಯಿಂದ ಎಂದರೆ ಶ್ರುತಿಗುರುವಾಕ್ಯಗಳಲ್ಲಿ ದೃಢವಿಶ್ವಾಸದಿಂದ ಕೂಡಿದ ಎಲ್ಲ ವಿಧವಾದ ಆರಾಧನೆಯೂ ಮೇಲಾದ ಶ್ರೇಯಸ್ಸನ್ನುಂಟುಮಾಡುತ್ತದೆ. ||೨೩||

ವೇದತಂತ್ರಗಳ ಆಧಾರವಿಲ್ಲದೆ ತನ್ನ ಬುದ್ಧಿಯಿಂದಲೇ ಕಲ್ಪಿತವಾದರೂ, ವೇದಗಳಲ್ಲಾಗಲಿ ಶಾಸ್ತ್ರಗಳಲ್ಲಾಗಲಿ ಹೇಳಿರುವುದಾದರೂ, ತಂತ್ರಾಗಮಗಳಲ್ಲಿ ಹೇಳಿರುವುದಾದರೂ, ಆಸ್ತಿಕ್ಯಬುದ್ಧಿಯೂ ದೇವತಾಬುದ್ಧಿಯೂ ಇದ್ದರೆ ಅದೂ ಕೂಡ ಮನುಷ್ಯರಿಗೆ ಶ್ರೇಯಸ್ಸನ್ನುಂಟುಮಾಡುತ್ತದೆ. ||೨೪||

ಫಲೇಷು ತಾರತಮ್ಯಂ ತು ವಿದ್ಯತೇ ಸೂಕ್ಷ್ಮದರ್ಶನೇ ।
ಕಾಯಿಕಃ ಕರ್ಮಯಜ್ಞಸ್ತು ಕಥಿತಃ ಸಂಗ್ರಹೇಣ ತು ॥೨೫॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಕರ್ಮವಿಭವೋ ನಾಮ ತೃತೀಯೋಽಧ್ಯಾಯಃ

ಹೀಗೆ ಎಲ್ಲ ವಿಧವಾದ ಆರಾಧನೆಯೂ ಶ್ರದ್ಧೆಯಿಂದ ಶ್ರೇಯಸ್ಸನ್ನುಂಟು ಮಾಡುವುದಾದರೂ ಸೂಕ್ಷ್ಮವಾಗಿ ವಿಚಾರಮಾಡಿ ನೋಡಿದರೆ ಫಲಗಳಲ್ಲಿ ಹೆಚ್ಚು ಕಡಿಮೆ ಇದ್ದೇ ಇರುತ್ತದೆ. ಈ ರೀತಿಯಾಗಿ ಶರೀರಸಾಧ್ಯವಾದ ಕರ್ಮರೂಪವಾದ ಯಜ್ಞದ ಸ್ವರೂಪವನ್ನು ಸಂಗ್ರಹವಾಗಿ ಹೇಳಿದ್ದಾಯಿತು. ॥೨೫॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಕರ್ಮದ ಮಹಿಮೆಯನ್ನು ವಿವರಿಸುವ ಮೂರನೆಯ ಅಧ್ಯಾಯವು ಮುಗಿದುದು

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

ಯಜ್ಞವೈಭವಖಂಡಂ

॥ ಚತುರ್ಥೋಽಧ್ಯಾಯಃ ॥

ನಾಲ್ಕನೆಯ ಅಧ್ಯಾಯವು

(ವಾಚಿಕಯಜ್ಞದ ವಿವರಗಳು)

ಅಥಾಹಂ ವಾಚಿಕಂ ಯಜ್ಞಂ ವಕ್ಷ್ಯಾಮಿ ಶ್ರದ್ಧಯಾ ಸಹ ।
ಪರಾತ್ಪರತರಾತ್ತಸ್ಮಾತ್ ಶಿವಾತ್ ಚೈತನ್ಯಲಕ್ಷಣಾತ್ ॥೧॥

ಸ್ವಶಕ್ತಿಸಹಿತಾದೇವ ದ್ವಿಜಾಃ ಜ್ಯೋತಿರ್ಮಯಃ ಪರಃ ।
ಶಬ್ದಃ ಸೂಕ್ಷ್ಮಃ ಸ್ವಭಾವೇನ ಪ್ರಾದುರಾಸೀದಖಂಡಿತಃ ॥೨॥

ಉದ್ದೇಶಕ್ರಮವನ್ನು ಅನುಸರಿಸಿ ಕಾಯಿಕಯಜ್ಞವನ್ನು ಹೇಳಿದ ಮೇಲೆ ಈಗ ವಾಚಿಕಯಜ್ಞವನ್ನು ವಿವರಿಸುತ್ತಾರೆ. ಅನಂತರದಲ್ಲಿ ಶ್ರದ್ಧೆಯಿಂದ ಕೂಡಿದ ವಾಚಿಕಯಜ್ಞವನ್ನು ಹೇಳುತ್ತೇನೆ. ಪರನೆಂದರೆ ಈಶ್ವರನು. ಅವನಿಗಿಂತಲೂ ಶ್ರೇಷ್ಠವಾದ ಪರತರನೆಂದರೆ ನಿಷ್ಕಳವಾದ ಚೈತನ್ಯವು. ಆ ಚೈತನ್ಯವು ತನ್ನ ಶಕ್ತಿಯಾದ ಮಾಯೆಯಿಂದ ಕೂಡಿದ ಸ್ವರೂಪದಿಂದ ಮೊದಲು ಜ್ಯೋತೀರೂಪವಾದ ಪರ-ಶ್ರೇಷ್ಠವಾದ ಶಬ್ದಸೂಕ್ಷ್ಮವಾಗಿ ಶಬ್ದಬ್ರಹ್ಮವೆನಿಸುವುದು. ಅದು ಸ್ವಭಾವದಿಂದಲೇ ಉಂಟಾಯಿತು. ಅದು ಸರ್ವತ್ರ ಅನುಸ್ಯೂತವಾದುದರಿಂದ ಅಖಂಡಿತವೆನಿಸುತ್ತದೆ. ಪ್ರಳಯವಾದ ಮೇಲೆ ಸೃಷ್ಟಿಯಾಗುವ ಮೊದಲು ಶಬ್ದಬ್ರಹ್ಮವು ಸೃಷ್ಟಿಗಾಗಿ ಭಿದ್ಯಮಾನಾತ್ ಪರಾತ್ ಬಿಂದೋರವ್ಯಕ್ತಾತ್ಮಾರವೋಽಭವತ್ ॥ ಎಂಬಂತೆ ಎರಡಾಗುತ್ತಿರುವ ಬ್ರಹ್ಮನ ದೆಶೆಯಿಂದ ಉಂಟಾಗುತ್ತದೆ. ಎಂದು ಭಾವವು. ಸೂಕ್ಷ್ಮವೆಂದರೆ, ಶ್ರೋತ್ರೇಂದ್ರಿಯಕ್ಕೆ ಗೋಚರವಾಗದಿರುವಿಕೆಯು. ಆದುದರಿಂದ

ಸ ಶಬ್ದಃ ಪುನರಾಧಾರೇ ಪ್ರಾಣಿನಾಮಾಸ್ತಿಕೋತ್ತಮಾಃ ।
ಪಿಂಡೀಭೂತತಯಾ ಭಾತಿ ತಪ್ತಜಾಂಬೂನದಪ್ರಭಃ ॥೩॥

ಸ ಪುನರ್ಬ್ರಹ್ಮನಾಡ್ಯಾ ತು ಪ್ರವಿಶ್ಯ ಹೃದಯಾಂಬುಜಂ ।
ವಿಭಕ್ತಃ ಸೂಕ್ಷ್ಮರೂಪೇಣ ಭಾತಿ ವಹ್ನಿಪ್ರಭಃ ಸ್ವತಃ ॥೪॥

ಇಂದ್ರಿಯವಿಷಯವಾಗದೆ ಇರುವ ಆ ಸೂಕ್ಷ್ಮಶಬ್ದವು ತೋರುವುದು. ಹೇಗೆಂದರೆ, ಸ್ವಪ್ರಕಾಶವಾದ ಬಿಂದುವಿನ ಕಾರ್ಯವಾದುದರಿಂದ ಆ ಸೂಕ್ಷ್ಮಶಬ್ದವೂ ಸ್ವಪ್ರಕಾಶ ಸ್ವಭಾವವುಳ್ಳದ್ದಾಗಿ ತೋರುತ್ತದೆ. ಶುದ್ಧಚೈತನ್ಯವು ತನ್ನ ಶಕ್ತಿಯಾದ ಮಾಯೆಯಿಂದ ಕೂಡಿದ್ದರೆ ಅದಕ್ಕೆ ಬಿಂದುವೆಂದು ಹೆಸರು. ಶ್ರೋತ್ರಗ್ರಾಹ್ಯವಾದ ಶಬ್ದಕ್ಕೆ ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂದು ನಾಲ್ಕು ಅವಸ್ಥೆಗಳುಂಟು. ಆ ಶಬ್ದಬ್ರಹ್ಮದ ಪರಾವಾಗ್ರೂಪವಾದ ಅವಸ್ಥಾವಿಶೇಷವನ್ನು ಇಲ್ಲಿ ವರ್ಣಿಸಿರುತ್ತಾರೆ.॥೧-೨॥

ಶಬ್ದವು ಸರ್ವವ್ಯಾಪಿಯಾದುದಾದರೂ, ಪ್ರಾಣಿಗಳಿಗೆ (ಜನರಿಗೆ) ಅರ್ಥವನ್ನು ಇತರರಿಗೆ ತಿಳಿಸಬೇಕೆಂಬ ಇಚ್ಛೆಯುಂಟಾದ ಕೂಡಲೇ, ಪ್ರಾಣವಾಯುವಿನ ಸಂಬಂಧದಿಂದ ಮೂಲಾಧಾರದಲ್ಲಿ ಅಭಿವ್ಯಕ್ತಿಯಾಗುವಾಗ ಪಿಂಡೀಭೂತವಾಗಿ ತೋರುತ್ತದೆ. ಅದಕ್ಕೆ ಪರಾ ಎಂದು ಹೆಸರು. ಆ ಪರಾವಾಕ್ಕು ಹೆಚ್ಚಾಗಿ ವೈಶದ್ಯವನ್ನು ಪಡೆದು ಅಪರಂಜಿಚಿನ್ನದ ಕಾಂತಿಯುಳ್ಳದ್ದಾಗಿ ಸ್ವಪ್ರಕಾಶಸ್ವರೂಪವುಳ್ಳದ್ದಾಗಿ ತೋರುತ್ತದೆ. ಶಿವಮಾ.ಖಂ.ಪು. ೫೮-೬೦; ಪಂ.ಉ.ಪು. ೧೩-೧೫. ॥೩॥

ಆ ಶಬ್ದವೇ ಮೂಲಾಧಾರದಿಂದ ನಾಭಿಕಮಲದವರೆಗೆ ವಿಮರ್ಶರೂಪವಾದ ಮನಸ್ಸಿಗೆ ಗ್ರಾಹ್ಯವಾದಾಗ ಪಶ್ಯಂತೀ ಎಂದು ಹೆಸರನ್ನು ಪಡೆಯುತ್ತದೆ. ಆಗ ಇನ್ನೂ ಹೆಚ್ಚಾದ ವೈಶದ್ಯವನ್ನು ಪಡೆದು ಸಾಮಾನ್ಯಸ್ಪಂದರೂಪವಾಗಿ ತೋರುತ್ತದೆ. ಆ ಶಬ್ದವೇ ಬ್ರಹ್ಮನಾಡಿ ಅಂದರೆ ಸುಷುಮ್ನಾನಾಡಿಯ ಮೂಲಕವಾಗಿ ಆ ನಾಭಿಯಿಂದ ಹೃದಯಕ್ಕೆ ತಲಪಿ ಬುದ್ಧಿಗೆ ಗ್ರಾಹ್ಯವಾದರೆ ಮಧ್ಯಮಾ ಎಂದು ವ್ಯವಹಾರವನ್ನು ಪಡೆಯುತ್ತದೆ. ಅದು ವಿಶೇಷಸ್ಪಂದರೂಪವನ್ನು ಪಡೆದು ಹೆಚ್ಚು ವಿಶದವಾಗಿ ತೋರುತ್ತದೆ. ವೈಖರೀಗೂ ಮಧ್ಯಮಾಕ್ಕೂ ವಿಶೇಷವೇನೆಂದರೆ ಆಯಾ ಅರ್ಥವಿಶೇಷಗಳನ್ನು ಗ್ರಹಿಸಿರುವ ಬುದ್ಧಿಗೆ ವಿಷಯವಾಗಿ ನಿಶ್ಚಯಸ್ವರೂಪವನ್ನು ಪಡೆದು ಇತರರ ಕಿವಿಗೆ ಕೇಳದೆ ಇರುವಷ್ಟು ಸೂಕ್ಷ್ಮವಾಗಿರುತ್ತದೆ. ತನ್ನನ್ನು ಗ್ರಹಿಸಿರುವ ಬುದ್ಧಿಗೆ ಗೋಚರವಾಗಿ ವಿಶೇಷಸ್ಪಂದರೂಪವನ್ನು ಪಡೆದು ವಿಭಕ್ತವಾಗಿ ತೋರುತ್ತದೆ. ಪರಾಪಶ್ಯಂತೀಗಳಿಗೆ ಸಾಮಾನ್ಯಸ್ಪಂದವೇ ಹೊರತು

ಬ್ರಹ್ಮರಂಧ್ರಂ ಪುನಸ್ಸಾಕ್ಷಾತ್ ಶಿವಸ್ಯ ಸ್ಥಾನಮುತ್ತಮಂ ।
ಪಿಂಡೀಭೂತತಯಾ ಪ್ರಾಪ್ಯ ಪ್ರಕಾಶಾನಂದಲಕ್ಷಣೇ ॥೫॥

ತತ್ರ ಸನ್ನಿಹಿತೇ ಶಂಭೌ ವಿಶ್ರಾಂತಿಂ ಲಭತೇ ಸ್ವತಃ ।
ಆಧಾರೇ ಪರಶಕ್ತೇಸ್ತು ಸ್ಥಾನೇ ಶಬ್ದಃ ಪ್ರಕಾಶಿತಃ ॥೬॥

ಪರಮೇಕಾಕ್ಷರಂ ಸಾಕ್ಷಾತ್ ಭವತ್ಯತ್ಯಂತಶೋಭನಂ ।
ಆಜ್ಞಾಸಂಜ್ಞಾನ್ಮಹಾಸ್ಥಾನಾದೂರ್ಧ್ವಂ ಯತ್ಸ್ಥಾನಮುತ್ತಮಂ ॥೭॥
ತತ್ರಸ್ಥೋಽಯಂ ದ್ವಿಜಾಶ್ಶಬ್ದಃ ಸೂಕ್ಷ್ಮೈಕಾಕ್ಷರತಾಮಿಯಾತ್ ।

ವಿಶೇಷಸ್ಪಂದರೂಪವಿಲ್ಲ. ಪಶ್ಯಂತೀವಾಕ್ಕಿಗಿಂತ ಮಧ್ಯಮಾವಾಕ್ಕಿಗೆ ವೈಶದ್ಯಾತಿಶಯ ವಿರುತ್ತದೆ. ಈಗ ಬಾಹ್ಯತಮಸ್ಸನ್ನೂ ನಿವಾರಣೆಮಾಡುವಷ್ಟು ಪ್ರಕಾಶವುಳ್ಳದ್ದಾಗಿ ಅಗ್ನಿಸದೃಶಕಾಂತಿಯುಳ್ಳದ್ದಾಗುತ್ತದೆ. ॥೪॥

ಬ್ರಹ್ಮರಂಧ್ರವನ್ನು ಎಂದರೆ, ಶಿವನು ಜಗತ್ತಿಗೆ ಉಪಾದಾನಕಾರಣನಾದುದರಿಂದ ಸರ್ವತ್ರ ವ್ಯಾಪ್ತನಾಗಿದ್ದರೂ ಉಪಾಸಕರಿಗೆ ಇತರ ಹೃದಯಭ್ರೂಮಧ್ಯಾದಿಸ್ಥಾನಕ್ಕಿಂತಲೂ ಬ್ರಹ್ಮರಂಧ್ರದಲ್ಲಿ ಶಿವಸಾಕ್ಷಾತ್ಕಾರವು ಅತಿಶಯವಾಗಿ ಅಭಿವ್ಯಕ್ತಿಯಾಗುವುದರಿಂದ ಆ ಸ್ಥಾನವನ್ನು ಉತ್ತಮವೆನ್ನುತ್ತಾರೆ. ಅಂಥ ಬ್ರಹ್ಮರಂಧ್ರವನ್ನು ಪಡೆದು ಅಲ್ಲಿ ಹೆಚ್ಚು ವಿಶದವಾಗಿ ಅಭಿವ್ಯಕ್ತಿಯಾಗುವುದಕ್ಕೆ ಪಿಂಡೀಭಾವವೆಂದು ವ್ಯವಹಾರವು. ಆ ಸ್ಥಾನದಲ್ಲಿ ಆ ರೀತಿಯಲ್ಲಿ ಸಚ್ಚಿದಾನಂದಸ್ವರೂಪನಾದ ಶಂಭುವನ್ನು ಸಾಕ್ಷಾತ್ಕರಿಸಿಕೊಂಡು ಶಬ್ದವು ತಾನಾಗಿಯೇ ವಿಶ್ರಾಂತಿಯನ್ನು ಪಡೆಯುತ್ತದೆ. ಪ್ರಾಪ್ಯಾಂತರವಿಲ್ಲದೆ ಶಾಂತವಾಗಿರುತ್ತದೆ. ಹೀಗೆ ಶಬ್ದವು ಓಂಕಾರಲಕ್ಷ್ಯನಾದ ಶಿವನ ಸಾಕ್ಷಾತ್ಕಾರವನ್ನುಂಟುಮಾಡಿಕೊಡುತ್ತದೆ. ॥೫॥

ಪರಶಕ್ತಿಯ ಪ್ರಥಮೋಪಲಬ್ಧಿಸ್ಥಾನವಾದ ಮೂಲಾಧಾರದಲ್ಲಿ ಶಬ್ದವು ಪರಾವಾಗ್ರೂಪದಿಂದ ವ್ಯಕ್ತವಾಗಿ ನಾದಾತ್ಮಕವಾಗಿ ತೋರುತ್ತಿರುತ್ತದೆ. ಅನಂತರ ಮಂಗಳಕರವಾದ ನಾದಸ್ವರೂಪದಲ್ಲೂ ಹೆಚ್ಚು ವ್ಯಕ್ತವಾಗಿ ಸ್ಪಂದಸಾಮಾನ್ಯರೂಪವನ್ನು ಪಡೆಯುತ್ತದೆ. ಆಮೇಲೆ ನಾಭಿಹೃದಯಕಂಠಮೂಲಕವಾಗಿ ಭ್ರೂಮಧ್ಯದಲ್ಲಿ ಆಜ್ಞಾಸ್ಥಾನದ ಮೂಲಕ ಬ್ರಹ್ಮರಂಧ್ರವನ್ನು ಪಡೆದು ಹಿಂತಿರುಗಿ ಮುಖದಲ್ಲಿ ಕಂಠತಾಲ್ವಾದಿಸ್ಥಾನಾನುಸಾರವಾಗಿ ವ್ಯಕ್ತಿಯನ್ನು ಪಡೆದು ವೈಖರೀವಾಕ್ ಎನಿಸುತ್ತದೆ. ಈ ವೈಖರೀಸ್ಥಿತಿಗೆ ಪೂರ್ವಭಾವಿಯಾಗಿರುವ ಸ್ಥಿತಿಯಲ್ಲಿ ಏಕನಾದಾತ್ಮಕವಾಗಿ

ತೃತೀಯೇ ಪರಮಾಧಾರೇ ಪೂರಕೇ ಪುಣ್ಯಭಾಜನೇ ॥೮॥

ಏಕಾ(ಕಾ)ಕ್ಷರತ್ವಮಾಪ್ನೋತಿ ಸ್ವಭಾವೇನಾಕ್ಷರದ್ವಯಂ ।
ಅಯಮಾದ್ಯಃ ಪರೋ ಮಂತ್ರಃ ಸುಪ್ರಸಿದ್ಧಸ್ವಭಾವತಃ ॥೯॥

ಮನನತ್ರಾಣರೂಪತ್ವಾತ್ ಮಂತ್ರ ಇತ್ಯಭಿಶಬ್ದಿತಃ ।
ಮಾತೃಕಾ ಪರಮಾ ದೇವೀ ಮಂತ್ರಮಾತಾ ಮಹೇಶ್ವರೀ ॥೧೦॥

ವಿಭಕ್ತಿವ್ಯಕ್ತಿಗಳಿಲ್ಲದ ಸ್ಪಂದರೂಪವಾದ ನಾದಾತ್ಮಕವಾಗಿದ್ದು ಆಜ್ಞಾರೂಪವಾದ ಸ್ಥಾನದ ಮೂಲಕ ಉತ್ತಮಸ್ಥಾನವಾದ ಬ್ರಹ್ಮರಂಧ್ರಕ್ಕೆ ಪ್ರವೇಶಿಸಿ ಅಲ್ಲಿಂದ ಹಿಂತಿರುಗುವುದಕ್ಕೆ ಮುಂಚೆ ನಾದರೂಪವಾದ ಓಂಕಾರದ ಸೂಕ್ಷ್ಮರೂಪದಲ್ಲಿರುತ್ತದೆ. ಈ ಸ್ಥಿತಿಯಲ್ಲಿ ಶಬ್ದವು ಸೂಕ್ಷ್ಮರೂಪವಾದ ಏಕಾಕ್ಷರಸ್ವರೂಪವನ್ನು ಪಡೆದಿರುತ್ತದೆ ಎಂದು ತಾತ್ಪರ್ಯವು. ||೬-೭||

ಪಶ್ಯಂತೀ ಮಧ್ಯಮಾವಾಕ್ಕುಗಳಿಗೆ ವೈಖರೀವಾಕ್ಕಿಗೆ ಕಾರಣವಾದ ನಾದಾತ್ಮಕವಾದ ಪ್ರಣವದಲ್ಲಿ ಅನುಸರಿಸಿರುವಿಕೆಯನ್ನು ತಿಳಿಸುತ್ತಾರೆ. ಪಶ್ಯಂತೀಮಧ್ಯಮಾಗಳಿಗೆ ಸ್ಥಾನವಾದ ನಾಭಿಹೃದಯಗಳಿಗಿಂತ ಮೂರನೆಯದಾದ ಭ್ರೂಮಧ್ಯಾದಿಸ್ಥಾನಕ್ಕಿಂತ ಉತ್ಕರ್ಷವುಳ್ಳದ್ದರಿಂದ ಶ್ರೇಷ್ಠವಾದ ಸ್ಥಾನವಾಗಿರುವ ವೈಖರೀವಾಕ್ಕಿನ ಅಭಿವ್ಯಕ್ತಿಗೆ ಮುಂಚಿನ ಉತ್ಪತ್ತಿಸಾಧನಪೂರ್ಣತೆಯನ್ನು ಪಡೆದಿರುವ, ಎಲ್ಲ ಪುಣ್ಯಗಳಿಗೂ ಫಲವಾದ ಪರಮಾನಂದದ ಅಭಿವ್ಯಕ್ತಿಗೆ ಸ್ಥಾನವಾದುದರಿಂದ ಪುಣ್ಯಪಾತ್ರವಾದ, ಇಂಥ ಮೂರನೆಯ ಸ್ಥಾನವಾದ ಬ್ರಹ್ಮರಂಧ್ರದಲ್ಲಿ ಪಶ್ಯಂತೀಮಧ್ಯಮಾವಾಕ್ಕುಗಳು ಏಕಾಕಾರತ್ವವನ್ನು ಪಡೆಯುತ್ತವೆ; ಎಂದರೆ ಇವೆರಡೂ ಪ್ರಣವನಾದಾತ್ಮಕವಾಗಿರುವುದರಿಂದ ಅಭಿನ್ನವಾಗಿರುತ್ತವೆ. ಅಲ್ಲದೆ ಪ್ರಣವದ ಮಹಿಮೆಯನ್ನು ತಿಳಿಸುತ್ತಾರೆ. ಅಹಂ, ಸಃ ಇವೆರಡೂ ಅಕ್ಷರದ್ವಯವು. ಸೋಽಹಂ ಎಂಬುದು ಅಜಪಾಮಂತ್ರವು. ಅಹಂ ಎಂಬುದು ಶಿವಾಂಶವು. ಸಃ ಎಂಬುದು ಪ್ರಕೃತ್ಯಂಶವು. ಅದರಲ್ಲಿ ಸಕಾರಹಕಾರಗಳನ್ನು ಬಿಟ್ಟರೆ ಸಂಧಿಯಿಂದ ಸ್ವಕಾರಣವಾದ ಓಂಕಾರರೂಪ ಪ್ರಣವಾತ್ಮಕವಾದ ನಾದದಲ್ಲಿ ಅಭಿನ್ನವಾಗಿರುತ್ತದೆ. ಇದೇ ಅರ್ಧನಾರೀಶ್ವರಾಭೇದ ಭಾವವು. ಈ ವಿಷಯವನ್ನು ಏಕಾಕ್ಷರಮಂತ್ರದ ಟಿಪ್ಪಣಿಯಲ್ಲಿ ವಿವರಿಸಿದೆ. ||೮||

ಈ ಅಜಪಾಮಂತ್ರವು ಎಲ್ಲ ಮಂತ್ರಗಳಿಗೆ ಕಾರಣವಾದುದರಿಂದ ಶ್ರೇಷ್ಠವೂ ಮೊದಲನೆಯದೂ ಆಗಿದೆ. ಸ್ವಾಭಾವಿಕವಾಗಿಯೇ ತುಂಬ ಪ್ರಸಿದ್ಧವಾದುದು. ಇದು ಕಾರಣಭೂತವಾದ ನಾದರೂಪವಾದುದರಿಂದ ತಾಲ್ವಾದಿಸ್ಥಾನವನ್ನು ಅವಲಂಬಿಸದೆ

ಅಸ್ಮಾದಾದ್ಯಾನ್ಮಹಾಮಂತ್ರಾದಾವಿರ್ಭೂತಾ ಸ್ವಭಾವತಃ ।
ಅಧೋಮುಖೀ ಭವೇದೇಕಾ ಚೈಕಾ ತೂರ್ಧ್ವಮುಖೀ ಭವೇತ್ ॥೧೧॥

ತಸ್ಮಾಚ್ಛ್ರೀಮಾತೃಕಾ ಶುದ್ಧಾ ಚಾದ್ಯಮಂತ್ರಾತ್ಮಿಕೀ ಭವೇತ್ ।
ಆದ್ಯೋಽಯಂ ಪರಮೋ ಮಂತ್ರಃ ಸುಪ್ರಸಿದ್ಧೋಽಪಿ ಸುವ್ರತಾಃ ॥೧೨॥
ಗುರೂಪದೇಶತೋ ಜ್ಞೇಯೋ ನಾನ್ಯಥಾ ಶಾಸ್ತ್ರಕೋಟಿಭಿಃ ।

ಇದೆ. ಮಂತ್ರವೆಂದರೆ ತತ್ತ್ವಪದವಿಯ ಧ್ಯಾನರೂಪವಾದುದರಿಂದ ಮನನರೂಪವಾಗಿದೆ; ಉಪಾಸಕರನ್ನು ಸಂಸಾರಭಯದಿಂದ ಕಾಪಾಡುವುದಾದುದರಿಂದ ತ್ರಾಣರೂಪವಾಗಿದೆ. ಆದುದರಿಂದ ಮಂತ್ರವೆನಿಸಿದೆ. ವರ್ಣಮಾಲೆಗೆ ಮಾತೃಕೆ ಎಂದು ಹೆಸರು. ಅದು ಎಲ್ಲ ಮಂತ್ರಗಳ ಉದ್ಧಾರಕ್ಕೆ ಸಾಧನವಾದುದರಿಂದ ಮಂತ್ರಜನನಿಯಾಗಿದೆ. ಶ್ರೇಷ್ಠವಾದ ಪ್ರಕಾಶರೂಪವಾದ ಮಹಾಮಹಿಮೆಗಳಿಂದ ತಾಯಿಯಂತಿದೆ. ॥೯-೧೦॥

ಈ ಮಾತೃಕೆಯು ಈ ಮೊದಲನೆಯ ಮಂತ್ರದ ಮೂಲರೂಪವಾದ ನಾದದಿಂದ ಸ್ವಾಭಾವಿಕವಾಗಿ ಉಂಟಾಗಿರುತ್ತದೆ.

ಪ್ರಾಣಸಂಗಾತ್ಪ್ರಸೂತೇ, ಎಂದು ಹೇಳಿರುವುದರಿಂದ ಪ್ರಾಣವಾಯುವಿನ ಅಭಿಘಾತದಿಂದ ನಾದ ಅಭಿವ್ಯಕ್ತವಾಗಿ ನಾದದಿಂದ ವ್ಯಕ್ತವರ್ಣರೂಪವಾದ ವೈಖರೀ ವ್ಯಕ್ತವಾಗುತ್ತದೆ. ಆದುದರಿಂದ ಪ್ರಾಣವೇ ಕಾರಣವಾದರೂ ನಾದಕ್ಕೆ ಕಾರಣತ್ವವು ಹೇಗೆಂದರೆ, ಅಧೋಮುಖವಾದ ರೇಚಕವು ಅಪಾನವು, ಊರ್ಧ್ವಮುಖವಾದ ಪೂರಕವು ಪ್ರಾಣವು, ಪ್ರಾಣಾಪಾನಸಂಧಿರೂಪವಾದ ವ್ಯಾನವೇ ಹಿಡಿಯುವಿಕೆಯು. (ಯಥಾ ಅಗ್ನೇರ್ಮಥನಂ, ಆಜೇಸ್ಸರಣಂ, ದೃಢಸ್ಯ ಧನುಷಃ ಆಯಮನಂ, ಅಪ್ರಾಣನ್ ಅನಪಾನನ್ ತಾನಿ ಕರೋತಿ) ನಾದಾಭಿವ್ಯಂಜಕವು. ನಾದದಿಂದ ವೈಖರೀ ವ್ಯಕ್ತಿಯಾಗುತ್ತದೆ. ವ್ಯಾನವೃತ್ತ್ಯಾತ್ಮಕಪ್ರಾಣದಿಂದ ಅಭಿವ್ಯಕ್ತವಾದ ನಾದವು ವೈಖರಿಗೆ ಕಾರಣವು. ಆದುದರಿಂದ ಮೊದಲನೆಯ ಮಂತ್ರವಾದ ಓಂಕಾರರೂಪವಾಗಿ ಈ ವೈಖರೀರೂಪವಾದ ವರ್ಣಮಾಲೆಯಿಂದ ಮಂತ್ರಗಳೆಲ್ಲವೂ ಉಂಟಾಗುತ್ತವೆ. ಆದುದರಿಂದ ಈ ಮಾತೃಕೆಯು ಶುದ್ಧವೂ ಆದಿಮಂತ್ರರೂಪವೂ ಆಗಿದೆ. ॥೧೧॥

ಈ ಮಂತ್ರವು ಆದ್ಯವೆಂದರೆ ನಾದಾತ್ಮಕವಾದ ಪ್ರಣವಸ್ವರೂಪವಾಗಿ ರಹಸ್ಯವಾದುದು. ಗುರೂಪದೇಶದಿಂದ ಮಾತ್ರ ಗಮ್ಯವಾದುದು. ಶ್ರುತ್ಯುಕ್ತವಾದುದರಿಂದ ಪ್ರಸಿದ್ಧವಾದುದು. ಗುರೂಪದೇಶವಿಲ್ಲದೆ ಅನೇಕ ಶಾಸ್ತ್ರಸಹಾಯದಿಂದಲೂ ಲಭ್ಯವಾಗುವುದಲ್ಲವು. ॥೧೨॥

ಸರ್ವೇಷಾಮಾದಿಭೂತಸ್ಯ ಶಿವಸ್ಯ ಪರಮಾತ್ಮನಃ ॥೧೩॥

ಸ್ವಪ್ರಕಾಶಸ್ವರೂಪಸ್ಯ ವಾಚಕೋಽಯಂ ಪರೋ ಮನುಃ ।
ನಾಸ್ತ್ಯತಃ ಪರಮೋ ಮಂತ್ರಃ ನ ಸಮಶ್ಚಾಸ್ಯ ಸುವ್ರತಾಃ ॥೧೪॥

ಸತ್ಯಂ ಸತ್ಯಂ ಪುನಸ್ಸತ್ಯಮುದ್ಧೃತ್ಯ ಭುಜಮುಚ್ಯತೇ ।
ತ್ರಿಚತುರ್ವತ್ಸರಂ ಶಿಷ್ಯಂ ಪರೀಕ್ಷ್ಯ ಸತತಂ ಪುನಃ ॥೧೫॥

ಈಶ್ವರಾದೇಶತೋ ದೇಯೋ ಮಂತ್ರೋಽಯಂ ಮಂತ್ರಿಸತ್ತಮೈಃ ।
ಅಪರೀಕ್ಷ್ಯ ಪ್ರದಾನೇನ ಶೀಘ್ರಂ ಮೃತ್ಯುಮವಾಪ್ನುಯಾತ್ ॥೧೬॥

ಆರ್ಜಿತಃ ಪುರುಷಾರ್ಥೋಽಪಿ ವೃಥಾ ಭವತಿ ತಸ್ಯ ತು ।
ಅಸ್ಯ ಮಂತ್ರಸ್ಯ ವೈಶಿಷ್ಟ್ಯಂ ಮಯಾ ವಕ್ತುಂ ನ ಶಕ್ಯತೇ ॥೧೭॥

ಮುನಿಭಿಶ್ಚ ತಥಾ ದೇವೈಃ ಸರ್ವಜ್ಞೇನ ಶಿವೇನ ಚ ।
ಮಂತ್ರಾಣಾಂ ಮಾತೃಭೂತಾ ಚ ಮಾತೃಕಾ ಪರಮೇಶ್ವರೀ ॥೧೮॥
ಬುದ್ಧಿಸ್ಥಾ ಮಧ್ಯಮಾ ಭೂತ್ವಾ ವಿಭಕ್ತಾ ಬಹುಧಾ ಭವೇತ್ ।

ಸಮಸ್ತ ಪ್ರಪಂಚಕ್ಕೂ ಆದಿಭೂತನಾದ ಸ್ವಪ್ರಕಾಶಸ್ವರೂಪನಾದ ಪರಮಾತ್ಮಸ್ವರೂಪಿಯಾದ ಪರಶಿವನಿಗೆ ಈ ಮಹಾಮಂತ್ರರೂಪವಾದ ಪ್ರಣವವು ವಾಚಕವು. ತಿಳಿವಳಿಕೆಯನ್ನೂ ಸಾಕ್ಷಾತ್ಕಾರವನ್ನೂ ಉಂಟುಮಾಡುವ ಸಾಧನವು. ॥೧೩॥

ಈ ಪ್ರಣವಮಂತ್ರಕ್ಕಿಂತ ಹೆಚ್ಚಾದ ಮೇಲ್ಮೆಯುಳ್ಳ ಮಂತ್ರವಾಗಲಿ, ಇದಕ್ಕೆ ಸಮಾನವಾದ ಮಂತ್ರವಾಗಲಿ ಇನ್ನೊಂದು ಮಂತ್ರವಿಲ್ಲವೆಂಬುದು ಸತ್ಯವೆಂದು ಕೈಯೆತ್ತಿ ಹೇಳಲ್ಪಡುತ್ತದೆ. ಮೂರು ನಾಲ್ಕು ವರ್ಷಗಳವರೆಗೆ ಸಂತತವಾಗಿ ಶಿಷ್ಯನನ್ನು ಪರೀಕ್ಷೆಮಾಡಿ ಅವನು ಅರ್ಹನೆಂದು ಕಂಡುಬಂದರೆ, ಈಶ್ವರನ ಅಪ್ಪಣೆಯೂ ಆದರೆ, ಈ ಮಂತ್ರವು ಮಾಂತ್ರಿಕಶ್ರೇಷ್ಠರಿಂದ ಉಪದೇಶ ಮಾಡಲ್ಪಡಬೇಕು. ॥೧೪-೧೫॥

ಹಾಗೆ ಶಿಷ್ಯನನ್ನು ಪರೀಕ್ಷಿಸದೆ ಈ ಮಂತ್ರವನ್ನು ಉಪದೇಶಮಾಡುವುದರಿಂದ ಜಾಗ್ರತೆಯಾಗಿ ಅಕಾಲಮರಣವನ್ನು ಹೊಂದಿಯಾನು. ಅಂಥವನು ಸಂಪಾದಿಸಿದ್ದ ಪುರುಷಾರ್ಥವೂ ವ್ಯರ್ಥವಾಗುತ್ತದೆ. ॥೧೬॥

ಈ ಮಂತ್ರದ ವಿಶೇಷಗುಣವನ್ನು ವಿವರಿಸಲು ನನಗಾಗಲಿ, ಋಷಿಗಳಿಗಾಗಲಿ, ದೇವತೆಗಳಿಗಾಗಲಿ, ಸರ್ವಜ್ಞನಾದ ಶಿವನಿಗಾಗಲಿ ಅಸಾಧ್ಯವಾಗಿರುತ್ತದೆ. ॥೧೭॥

ಸಾ ಪುನಃ ಕ್ರಮಭೇದೇನ ಮಹಾಮಂತ್ರಾತ್ಮನಾ ತಥಾ ॥೧೯॥

ಮಂತ್ರಾತ್ಮನಾ ಚ ವೇದಾದಿಶಬ್ದಾಕಾರೇಣ ಚ ಸ್ವತಃ ।
ಸತ್ಯೇತರೇಣ ಶಬ್ದೇನಾಪ್ಯಾವಿರ್ಭವತಿ ಸುವ್ರತಾಃ ॥೨೦॥

ಯಥಾ ಪರತರಶ್ಶಂಭುಃ ದ್ವಿಧಾ ಶಕ್ತಿಶಿವಾತ್ಮನಾ ।
ತಥೈವ ಮಾತೃಕಾ ದೇವೀ ದ್ವಿಧಾ ಭೂತಾ ಭವೇತ್ಸ್ವಯಂ ॥೨೧॥

ಪರಾ ಮತ್ತು ಪಶ್ಯಂತೀಸ್ಥಿತಿಗಳಲ್ಲಿ ಒಂದೇ ರೂಪದಲ್ಲಿದ್ದ ಮಾತೃಕಾವರ್ಣ ಮಾಲೆಗೆ ಬುದ್ಧಿವಿಷಯವಾದ ಮಧ್ಯಮಾದೆಶೆಯಲ್ಲಿ ನಾನಾವಿಭಾಗಗಳುಂಟಾಗುತ್ತವೆ ಯೆಂದು ತಿಳಿಸುತ್ತಾರೆ. ಎಲ್ಲ ಮಂತ್ರಗಳ ಜನನಿಯಾದ ಪಾರಮೇಶ್ವರೀ ಶಕ್ತಿ ಸ್ವರೂಪಿಯಾದ ಮಾತೃಕಾರೂಪವಾದ ವರ್ಣಮಾಲೆಯು ಮಧ್ಯಮಾದಶೆಯಲ್ಲಿ ಬುದ್ಧಿಗೆ ಗೋಚರವಾಗಿ ನಾನಾವಿಭಾಗಗಳನ್ನು ಪಡೆಯುತ್ತದೆ. ||೧೮||

ಮೊದಲು ನಾದಾತ್ಮಕವಾದ ಪ್ರಣವರೂಪದಿಂದಲೂ, ಅನಂತರದಲ್ಲಿ ವ್ಯಾನ ರೂಪವಾದ ಪ್ರಾಣದ ಅಭಿವ್ಯಕ್ತಿಯಿಂದ ಕಂಠ ತಾಲು ಮುಂತಾದ ಸ್ಥಾನಭೇದಗಳಲ್ಲಿ ವರ್ಣ ಪದ ವಾಕ್ಯ ಮುಂತಾದ ರೂಪದಿಂದಲೂ, ಕ್ರಮವಾಗಿ ಅಭಿವ್ಯಕ್ತಿಯನ್ನು ಪಡೆಯುತ್ತದೆ. ನಾದಾತ್ಮಕವಾದ ಪ್ರಣವರೂಪದಿಂದಲೂ, ಋಗ್ಯಜುಸ್ಸಾಮಾದಿ ಮಂತ್ರರೂಪದಿಂದಲೂ ಸ್ವತಃ ಸ್ವರೂಪವಾದ ಪ್ರಣವರೂಪದಿಂದಲೂ ವ್ಯಕ್ತವಾಗು ತ್ತದೆ. ಶಬ್ದವು ವರ್ಣಪದವಾಕ್ಯರೂಪವಾದುದು ಮತ್ತು ಮೂರ್ತಾಮೂರ್ತವಸ್ತು ಗಳನ್ನೂ ಅವಸ್ತುಗಳನ್ನೂ ಹೇಳುತ್ತದೆ. ಸತ್ಯವಲ್ಲದ ವಸ್ತುಪರವಾಗಿಯೂ ವ್ಯಕ್ತ ವಾಗುತ್ತದೆ. ||೧೯-೨೦||

ಅಕಾರಾದ್ಯಾತ್ಮಕವಾದ ಮಾತೃಕೆಯು ಏಕರೂಪವಾದುದರಿಂದ ಶ್ರೀಕಂಠಾದಿ ಶಿವಮೂರ್ತಿಪ್ರತಿಪಾದನೆಯನ್ನೂ, ಪೂರ್ಣೋದರಯಾದಿಶಕ್ತಿ ಮೂರ್ತಿಪ್ರತಿಪಾದನೆ ಯನ್ನೂ ಹೇಗೆ ಮಾಡುತ್ತದೆಂದು ಆಕ್ಷೇಪಿಸಿ ಸಮಾಧಾನವನ್ನು ಹೇಳುತ್ತಾರೆ. ಪರಕ್ಕಿಂತ ಶ್ರೇಷ್ಠನಾದ ನಿಷ್ಕಳನಾದ ಪರಶಿವನು ಶಿವನೆಂದೂ ಶಕ್ತಿಯೆಂದೂ ಎರಡು ಭೇದವನ್ನು ಹೊಂದಿದಾನೆ. ಕಾರಣವಾದ ಸ್ವಸ್ವರೂಪದಲ್ಲಿ ಏಕರೂಪನೂ, ಕಾರ್ಯ ರೂಪದಲ್ಲಿ ಶಕ್ತಿರೂಪಕಾರ್ಯಾಭಿಮುಖವಾದವನೂ ಆಗುತ್ತಾನೆ. ಹಾಗೆ ಮಾತೃಕೆಯೂ ಸ್ವಕಾರಣವಾದುದರಿಂದ ತನ್ನಲ್ಲಿ ಸಂಬಂಧಿಸಿರುವ ಶಿವಸ್ವರೂಪದ ಪ್ರಾಮುಖ್ಯದಿಂದ ಶಿವಮೂರ್ತಿಯನ್ನು ತಿಳಿಸುತ್ತದೆ. ಹಾಗೆಯೇ ಅಂಥ ಶಕ್ತಿಯ (ಮಾಯೆಯ) ಪ್ರಾಮುಖ್ಯದಿಂದ ಪೂರ್ಣೋದರಯಾದಿಶಕ್ತಿಮೂರ್ತಿಯನ್ನೂ ತಿಳಿಸುತ್ತದೆ. ||೨೧||

ಏಕಾಕಾರೇಣ ಶಕ್ತೇಸ್ತು ವಾಚಕಶ್ಚೇತರೇಣ ತು ।
ಶಿವಸ್ಯ ವಾಚಕಸ್ಸಾಕ್ಷಾದ್ವಿದ್ಯೇಯಂ ಪರಗಾಮಿನೀ ॥೨೨॥

ಅಪದಂ ಪದಮಾಪನ್ನಂ ಪದಂ ಚಾಪ್ಯಪದಂ ಭವೇತ್ ।
ಪದಾಪದವಿಭಾಗಂ ಚ ಯಃ ಪಶ್ಯತಿ ಸ ಪಶ್ಯತಿ ॥೨೩॥

ಪದಸ್ಥಸ್ಯ ಜಿತಾ ಮಂತ್ರಾ ಭವೇಯುಃ ಪಂಡಿತೋತ್ತಮಾಃ ।
ಪದಾಭ್ಯಾಸಪರಾಣಾಂ ತು ನ ಕಿಂಚಿದಪಿ ದುರ್ಲಭಂ ॥೨೪॥

ಅಂಶ ಏಕಃ ಪದಸ್ಯಾಯಮುಪಕಾರಾಯ ದೇಹಿನಾಂ ।
ಭವೇತ್ ಷೋಡಶಧಾ ಪೂರ್ವಂ ಪಞ್ಚಧಾ ಚ ದ್ವಿಧಾ ಪುನಃ ॥೨೫॥

ಈ ಮಾತೃಕಾದೇವಿಯು ಒಂದು ರೂಪದಿಂದ (ಕಾರ್ಯರೂಪದಿಂದ) ಶಕ್ತಿಯನ್ನು ತಿಳಿಸುತ್ತದೆ. ಇನ್ನೊಂದು ರೂಪದಿಂದ (ಕಾರಣರೂಪದಿಂದ) ಶಿವನನ್ನು ತಿಳಿಸುತ್ತದೆ. ಆದ್ದರಿಂದ ಈ ಮಾತೃಕಾಜ್ಞಾನವು ಪರತತ್ತ್ವವನ್ನು ತಿಳಿಸುತ್ತದೆ. ಪದಂ ಎಂದರೆ ಇಂದ್ರಿಯ ಗೋಚರವಾಗುವ ವಸ್ತುವು. ಅಪದಂ—ಅತೀತವಾದ ತತ್ವವು. ||೨೨||

ಈ ಮಾತೃಕಾವಿದ್ಯೆಯು ಸ್ವವಿಷಯಕವಾದ ಅಜ್ಞಾನವನ್ನು ಬೇರುಸಹಿತವಾಗಿ ಕಿತ್ತುಹಾಕಿ ಮೇಲೆ ಹೇಳಿದ ಪರಶಿವಸ್ವರೂಪವನ್ನು ಜ್ಞಾನಿಯನ್ನು ಪಡೆಯಿಸುತ್ತದೆ. ನಾದಾತ್ಮಕವಾದ ಶಬ್ದಬ್ರಹ್ಮವೇ ಪರಾಪಶ್ಯಂತೀಮಧ್ಯಮಾವೈಖರೀರೂಪದಿಂದ ಪದವಾಯಿತು. ಆ ನಿಷ್ಕಳವಾದ ಪರಶಿವಸ್ವರೂಪವು ಇಂದ್ರಿಯಗಳಿಗೂ ವಾಕ್ಕಿಗೂ ವಿಷಯವಲ್ಲದಿದ್ದರೂ ಮಾತೃಕೆಯು ಅವಿದ್ಯಾರೂಪವಾದ ಉಪಾಧಿಯನ್ನು ಉಪಲಕ್ಷಣವನ್ನಾಗಿ ಮಾಡಿಕೊಂಡು ಅದರ ಸಂಬಂಧದ ಮೂಲಕ ತತ್ವವನ್ನು ತಿಳಿಸುತ್ತದೆ. ||೨೨-೨೩||

ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ನಾಲ್ಕು ಅವಸ್ಥೆಗಳುಳ್ಳ ಪದಸ್ವರೂಪವನ್ನು ತಿಳಿದವನಿಗೆ ಮಂತ್ರಗಳೆಲ್ಲವೂ ಸ್ವಾಧೀನವಾಗಿರುತ್ತವೆ. ಅದರ ತತ್ವಾನುಸಂಧಾನದಲ್ಲಿ ಆಸಕ್ತರಾದವರಿಗೆ ಅಸಾಧ್ಯವಾದುದು ಯಾವುದೂ ಇಲ್ಲವು. ||೨೪||

ಈ ಪದದ ರೂಪಗಳಲ್ಲಿ ವೈಖರೀರೂಪವಾದ ತುರಿಯರೂಪವೊಂದೇ ಮನುಷ್ಯರಿಗೆ ವ್ಯವಹಾರದಲ್ಲಿ ಉಪಯೋಗವುಳ್ಳದ್ದಾಗುತ್ತದೆ. ಕಿವಿಯಿಂದ ಕೇಳಬಹುದಾದ ವೈಖರೀವಾಕ್ಕನ್ನು ಮನುಷ್ಯಾದಿಗಳು ಹೇಳುತ್ತಾರೆ. ಅದು ತಾನು ಒಂದೇ ರೂಪವುಳ್ಳದ್ದಾದರೂ ಕಂಠತಾಲ್ವಾದಿ ಉಚ್ಚಾರಣಸ್ಥಾನಭೇದದಿಂದ ಅನೇಕವಾದ ಸ್ವರವ್ಯಂಜನಾದಿಭೇದವನ್ನು ಪಡೆಯುತ್ತದೆ. ಹದಿನಾರು ಸ್ವರರೂಪದಿಂದ

ಪದಸ್ಯಾಂಶೋಽಪರಃ ಪೂರ್ವ(ಃ)ಂ ದ್ವಾತ್ರಿಂಶದ್ಭೇದಮಾಪ್ನುಯಾತ್ ।
ತ್ರಯಸ್ತ್ರಿಂಶತ್ಪುನರ್ಭೇದಂ ತಥೈವ ದ್ವಿವಿಧಂ ಭವೇತ್ ॥೨೬॥

ಏವಂ ಲೋಕೋಪಕಾರಾಯ ಪದಂ ಬಹುವಿಧಂ ಭವೇತ್ ।
ಏಕೈಕಾಕಾರತಶ್ಚೈಕೇ ಕಾರ್ಯಸಿದ್ಧಿರ್ಭವೇತ್ಸ್ವತಃ ॥೨೭॥

ವೈದಿಕಾನ್ ಕೇಚನಾಕಾರಾನುಪಜೀವಂತಿ ಸಿದ್ಧಯೇ ।
ತಾಂತ್ರಿಕಾಂಶ್ಚ ತಥಾಕಾರಾನುಪಜೀವಂತಿ ಕೇಚನ ॥೨೮॥

'ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ' ಎಂದು ಹದಿನಾರು ಭೇದವುಳ್ಳದ್ದಾಗುತ್ತದೆ. ಹಾಗೆಯೇ 'ಕ ಚ ಟ ತ ಪ' ವೆಂಬ ಪಂಚವರ್ಗಾತ್ಮಕವಾಗಿ ಐದು ಬಗೆಯದಾಗುತ್ತದೆ. ಹಾಗೆಯೇ 'ಯ ರ ಲ ವ'ಗಳು ಅಂತಸ್ಥಗಳೆಂದೂ 'ಶ ಷ ಸ ಹ'ಗಳು ಊಷ್ಮಗಳೆಂದೂ ಎರಡು ತೆರನಾಗುತ್ತವೆ. ಈ ಮಾತೃಕೆಗೆ, ವರ್ಣಮಾಲೆಗೆ, ಪದವೆಂದೂ ವ್ಯವಹಾರವಿದೆ. ||೨೫||

ಈ ಪದದ ಪೂರ್ವಾಂಶವಾದ ಹದಿನಾರು ಸ್ವರಗಳೂ ಅನುನಾಸಿಕ ಅನನು ನಾಸಿಕಭೇದದಿಂದ ಮೂವತ್ತೆರಡು ಭೇದವುಳ್ಳವಾಗುತ್ತವೆ. ಹಾಗೆಯೇ ವರ್ಗೀಯ ವಾದ ಇಪ್ಪತ್ತೈದು ವರ್ಣಗಳೂ ಅವರ್ಗೀಯವಾದ ಎಂಟು ವರ್ಣಗಳೂ ಸೇರಿ ಮೂವತ್ತುಮೂರು ವ್ಯಂಜನರೂಪವಾಗಿ ಭೇದವನ್ನು ಪಡೆಯುತ್ತವೆ. ||೨೬||

ಈ ಪದವು ಜನೋಪಕಾರಕ್ಕೋಸ್ಕರ ಮೇಲೆ ಹೇಳಿದಂತೆ ಸ್ವರವ್ಯಂಜನಾದಿ ರೂಪದಿಂದ ಅನೇಕಪ್ರಕಾರವಾದ ಋಗ್ಯಜುಸ್ಸಾಮರೂಪಮಹಾಮಂತ್ರವೂ ಆಗು ತ್ತದೆ. ಹೀಗೆ ಸ್ವರವ್ಯಂಜನಾದಿರೂಪವಾದ ಪದದ ಒಂದೊಂದು ಆಕಾರದಲ್ಲೂ ಆಯಾ ಮಂತ್ರಸ್ವರೂಪದಿಂದ ಒಂದೊಂದು ಫಲಸಿದ್ಧಿಯು ತಾನಾಗಿಯೇ ಉಂಟಾಗುತ್ತದೆ||೨೭||

ಅಧಿಕಾರಭೇದವನ್ನು ಅನುಸರಿಸಿ ಆಯಾ ಮಂತ್ರಾಕಾರಭೇದಗಳನ್ನು ವಿಂಗಡಿಸಿ ಗೊತ್ತುಮಾಡಿ ವೇದಾರ್ಥಜ್ಞಾನವುಳ್ಳವರು ಹೇಳುತ್ತಾರೆ. ಕೆಲವರು ಋಗ್ಯಜುಸ್ಸಾಮಾತ್ಮಕವಾದ ಕೆಲವು ಮಂತ್ರಸ್ವರೂಪಗಳನ್ನು ತಮ್ಮ ಇಷ್ಟಾರ್ಥಸಿದ್ಧಿ ಗೋಸ್ಕರ ಅನುಸರಿಸುತ್ತಾರೆ. ಆಗಮಗಳನ್ನು ತಿಳಿದ ಇತರರು ಹುಂ ಫಟ್ ಮುಂತಾದ ಮಂತ್ರಸ್ವರೂಪಗಳನ್ನು ಆಗಮೋಕ್ತವಾಗಿರುವಂತೆ ಅನುಸರಿಸುತ್ತಾರೆ. ||೨೮||

ಲೌಕಿಕಾನಪಿ ಚಾಕಾರಾನುಪಜೀವಂತಿ ಕೇಚನ ।
ಯಥಾ ಸರ್ವೇ ಮಹಾದೇವಮುಪಜೀವಂತಿ ಸರ್ವದಾ ॥೨೯॥

ಯಥಾ ವಾ ಶಕ್ತಿಮಿಾಶಸ್ಯ ಯಥಾ ವಾ ಭೂತಪಞ್ಚಕಂ ।
ತಥಾ ಸರ್ವೇ ಪದಾಕಾರಾನುಪಜೀವಂತಿ ಸರ್ವದಾ ॥೩೦॥

ಮಾತೃಕಾ ಪರಮಾ ದೇವೀ ಸ್ವಪದಾಕಾರಭೇದಿತಾ ।
ವೈಖರೀರೂಪತಾಮೇತಿ ಕಾರಣೈರ್ವಿಶದಾ ಸ್ವಯಂ ॥೩೧॥

ಸ್ಥೂಲಾ ಸೂಕ್ಷ್ಮಾ ಸುಸೂಕ್ಷ್ಮಾ ಚ ತ್ರಿವಿಧಾ ಮಾತೃಕೇಶ್ವರೀ ।
ಸಾ ದೇವೀ ಶಕ್ತಿಸಂಭಿನ್ನಾ ಶಿವಸ್ಯಾಮಿತತೇಜಸಃ ॥೩೨॥

ಮತ್ತೆ ಕೆಲವರು ಲೌಕಿಕವಾದ ಮಂತ್ರಾಕಾರಗಳನ್ನು ಅನುಸರಿಸುತ್ತಾರೆ. ಹೀಗೆ ಎಲ್ಲ ಪ್ರಾಣಿಗಳೂ ಸ್ವಭಾಷಾನುಸಾರವಾಗಿ ಪದಾಕಾರಗಳನ್ನು ಅನುಸರಿಸುತ್ತಾರೆ. ಹೇಗೆ ಎಲ್ಲರೂ ಎಲ್ಲ ಕಾಲಗಳಲ್ಲೂ ಉತ್ಪತ್ತಿಸ್ಥಿತಿಲಯಾಧಿಷ್ಠಾನಭೂತನಾದ ಮಹಾದೇವನನ್ನು ಇಷ್ಟಾರ್ಥಸಿದ್ಧಿಗಾಗಿ ಆಶ್ರಯಿಸುತ್ತಾರೋ ಹಾಗೆ ಪದಾಕಾರಗಳನ್ನು ಅನುಸರಿಸುತ್ತಾರೆ. ॥೨೯॥

ಶಿವಶಕ್ತ್ಯಾತ್ಮಕವಾದ ಪರಮೇಶ್ವರಸ್ವರೂಪವನ್ನು ಉತ್ಪತ್ತಿಸ್ಥಿತಿಲಯಗಳಿಗೋಸ್ಕರ ಹೇಗೆ ಅನುಸರಿಸುತ್ತಾರೋ, ಹೇಗೆ ದೇಹಕ್ಕೋಸ್ಕರ ಪೃಥಿವ್ಯಾದಿ ಪಂಚಭೂತಗಳನ್ನು ಅನುಸರಿಸುತ್ತಾರೋ, ಹಾಗೆ ಎಲ್ಲರೂ ಎಲ್ಲ ಕಾಲಗಳಲ್ಲೂ ತಮ್ಮ ಭಾಷಾನುಸಾರವಾದ ಪದಾಕಾರಗಳನ್ನು ಸಿದ್ಧಿಗೋಸ್ಕರ ಅನುಸರಿಸುತ್ತಾರೆ. ॥೩೦॥

ಪರಾ ಪಶ್ಯಂತೀ ಮಧ್ಯಮಾ ವೈಖರೀರೂಪದಿಂದ ಅಭಿವ್ಯಕ್ತವಾದ ಅಕಾರಾದಿವರ್ಣಾತ್ಮಕವಾದ ಮಾತೃಕಾದೇವಿಯು ತನ್ನ ಉಚ್ಚಾರಣಸ್ಥಾನವನ್ನು ಅನುಸರಿಸಿ ಭಿನ್ನರೂಪವಾಗುತ್ತದೆ. ಹೀಗೆ ತನ್ನ ಉತ್ಪತ್ತಿಕಾರಣಗಳ ಸ್ವರೂಪಾನುಸಾರವಾಗಿ ವೈಖರೀರೂಪದಲ್ಲಿ ವಿಶದವಾಗಿ ಇತರರಿಗೆ ಕೇಳುವಂತೆ ವ್ಯಕ್ತವಾಗುತ್ತದೆ.॥೩೧॥

ವೈಖರೀಗಿಂತ ಬೇರೆಯಾಗಿ ಪರಾ ಪಶ್ಯಂತೀ ಮಧ್ಯಮಾರೂಪವಾದ ಮಾತೃಕೆಯು ಇಲ್ಲವೆಂದು ಭ್ರಮಿಸಬಾರದೆಂದು "ಮಾತೃಕಾ ಚ ತ್ರಿಧಾ ಸ್ಥೂಲಾ" ಇತ್ಯಾದಿ ಶಕ್ತಿಪೂಜಾವಿಧಿಯಲ್ಲಿ ಹೇಳಿದ್ದನ್ನು ಜ್ಞಾಪಿಸುತ್ತಾರೆ. ಸ್ಥೂಲಾ ಎಂದರೆ ವೈಖರೀರೂಪವಾದ ಮಾತೃಕೆಯು. ಸೂಕ್ಷ್ಮಾ ಎಂದರೆ ಪರಾ ಪಶ್ಯಂತೀ ಮಧ್ಯಮಾ

ವಾಚಾಮಗೋಚರಾಕಾರೋ ಮಾತೃಕಾಯಾಸ್ತಥಾ ಪರಃ ।
ಬ್ರಹ್ಮವಿಷ್ಣ್ವಾದಿದೇವಾನಾಮಚಿಂತ್ಯಃ ಸೂಕ್ಷ್ಮತಾ ವಿಧಿಃ ॥೩೩॥

ಚಿನ್ಮಯಃ ಪರಚಿದ್ರೂಪಃ ಶಿವಾಸಂಭಿನ್ನ ಏವ ಹಿ ।
ಬುದ್ಧ್ವಾ ಮಂತ್ರಜಪಂ ಕುರ್ಯಾದೇವಂ ಮಂತ್ರಸ್ಯ ವೈಭವಂ ॥೩೪॥

ರೂಪವಾದ ಮಾತೃಕೆಯು. ಸುಸೂಕ್ಷ್ಮಾ ಎಂದರೆ, ನಾದ, ಬಿಂದು ರೂಪವಾದ ಮಾತೃಕೆಯು. ಹೀಗೆ ಮಾತೃಕೆಯು ಈಶ್ವರಸ್ವರೂಪವಾಗಿ ಮೂರು ವಿಧವಾಗಿದೆ. ಈ ಮೂರು ವಿಧವಾದ ಮಾತೃಕೆಯು ಶಕ್ತ್ಯವಸ್ಥೆಯಲ್ಲಿರುವ ಎಂದರೆ ಸೃಷ್ಟ್ಯಭಿಮುಖ ವಾಗಿರುವ ಶಕ್ತಿಯಿಂದ ಕೂಡಿರುವ ಶಿವನನ್ನು ತಿಳಿಸುತ್ತದೆ. ಆ ಮಾತೃಕೆಯು ಶಿವ ಸ್ವರೂಪವಾದ ಶಕ್ತಿಯಿಂದ ಕೂಡಿದೆ. ಎಂದರೆ ಆ ಶಕ್ತಿಯನ್ನು ತಿಳಿಸುತ್ತದೆ. ಹೀಗೆ ಅಪಾರವಾದ ತೇಜಸ್ಸುಳ್ಳ ಶಿವಸ್ವರೂಪವಾದ ಶಕ್ತಿಯಲ್ಲಿ ಮಾತೃಕೆಯು ಕೂಡಿ ಕೊಂಡಿದೆ. ॥೩೨॥

ಪರಾ ಪಶ್ಯಂತ್ಯಾದಿ ಅವಸ್ಥೆಗಳಿಗಿಂತ ಮೊದಲು ಪರಬಿಂದುನಾದಾತ್ಮಕವಾದ ಮಾತೃಕೆಯ ಸೂಕ್ಷ್ಮರೂಪದಲ್ಲಿ ಇರುವ ಪರಶಿವಸ್ವರೂಪವನ್ನು ತಿಳಿಸುತ್ತಾ ಮಾತೃ ಕೆಯು ತತ್ಸ್ವರೂಪವೇ ಆಗಿರುತ್ತದೆಂದು ಹೇಳುತ್ತಾರೆ. ವಾಙ್ಮನಸ್ಸುಗಳಿಗೆ ವಿಷಯ ವಾಗದೆ ಸೂಕ್ಷ್ಮವಾದ ಬಿಂದುನಾದಾತ್ಮಕವಾದ ಸ್ವರೂಪವು, ಬ್ರಹ್ಮವಿಷ್ಣು ಮುಂತಾ ದವರಿಂದಲೂ ತಿಳಿಯಲಾಗದೆ ಇರುವ ಮಾತೃಕೆಯು, ಸ್ವಪ್ರಕಾಶರೂಪವಾದ ಪರಶಿವ ನಲ್ಲಿ ಅಧ್ಯಾಸದಿಂದ ತೋರುತ್ತಿರುವುದು. ಹೀಗೆ ಮಾತೃಕೆಯುಸೂಕ್ಷ್ಮವಾದ ಆಕಾರ ವುಳ್ಳದ್ದಾಗಿದೆ. ॥೩೩॥

ಹೀಗೆ ಚಿದ್ರೂಪನಾದ ಪರಶಿವನಲ್ಲಿ ಅಧ್ಯಾಸದಿಂದ ತೋರುವ ಮಾತೃಕೆಯೂ ಪ್ರತಿಪಾದ್ಯಪ್ರತಿಪಾದಕಭಾವದಿಂದ ಶಿವಸ್ವರೂಪವೇ ಆಗಿರುತ್ತದೆ. ಈ ಪ್ರಕಾರವಾದ ಸೂಕ್ಷ್ಮವಾದ ಮಾತೃಕೆಯ ಆಕಾರವು ಶಿವನಿಂದ ಕೂಡಿದೆ. ಮತ್ತು ತನ್ನಲ್ಲಿಯೇ ತಾನಿರುವ ಪರಶಿವನ ತಿಳಿವಳಿಕೆಯನ್ನುಂಟುಮಾಡಿಕೊಡುತ್ತದೆ.

ಈ ರೀತಿಯಾಗಿ ಈ ಮಾತೃಕೆಯ ಸ್ವರೂಪವನ್ನು ಗುರುಮುಖದಿಂದ ತಿಳಿದು ಪ್ರಣವಮಂತ್ರವನ್ನು ಜಪಿಸುವವರಿಗೇ ಫಲವಾಗುತ್ತದೆ. ಇತರರಿಗಿಲ್ಲವು. ಹೀಗೆ ಈ ಮಂತ್ರದ ಮಹಿಮೆಯು ಪ್ರಸಿದ್ಧವಾಗಿದೆ. ॥೩೪॥

ಆಚಾರ್ಯಮುಖತಃ ಪ್ರಾಜ್ಞಾಃ ಸ್ಸಿದ್ಧ್ಯತ್ಯೇವಾಚಿರೇಣ ತು ।
ಆಚಾರ್ಯರಹಿತೋ ಮಂತ್ರಃ ಪುಂಸೋಽನರ್ಥಸ್ಯ ಕಾರಣಂ ॥೩೫॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ವಾಚಿಕಯಜ್ಞೋ ನಾಮ ಚತುರ್ಥೋಽಧ್ಯಾಯಃ

ಗುರುಮುಖದಿಂದ ಈ ಮಂತ್ರವನ್ನು ತಿಳಿದು ಜಪಿಸಿದರೆ ಫಲಸಿದ್ಧಿಯು ತಪ್ಪದೆ ಉಂಟಾಗುತ್ತದೆ. ಗುರುವಿಲ್ಲದೆ ಕಲಿತ ಮಂತ್ರವು ಪುರುಷನಿಗೆ ಅನಿಷ್ಟವನ್ನು ಉಂಟುಮಾಡಲೂ ಕಾರಣವಾಗುತ್ತದೆ. ||೩೫||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ವಾಙ್ಮಯಜಪರೂಪವಾದ ಯಜ್ಞವನ್ನು ವಿವರಿಸಿರುವ
ನಾಲ್ಕನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಂದಪುರಾಣಾಂತರ್ಗತಾ

ಸೂತಸಂಹಿತಾ

ಯಜ್ಞವೈಭವಖಂಡಂ

ಪಂಚಮೋಽಧ್ಯಾಯಃ ॥

ಐದನೆಯ ಅಧ್ಯಾಯವು

(ಪ್ರಣವವಿಚಾರಃ)

॥ ಸೂತ ಉವಾಚ ॥

ಪ್ರಣವಂ ಸಂಪ್ರವಕ್ಷ್ಯಾಮಿ ಸಮಾಸೇನ ನ ವಿಸ್ತರಾತ್ ।
ಪರಾಪರವಿಭಾಗೇನ ಪ್ರಣವಸ್ತು ದ್ವಿಧಾ ಮತಃ ॥೧॥

ಪರಃ ಪರತರಂ ಬ್ರಹ್ಮ ಪ್ರಜ್ಞಾನಂದಾದಿಲಕ್ಷಣಂ ।
ಪ್ರಕರ್ಷೇಣ ನವಂ ಯಸ್ಮಾತ್ಪರಂ ಬ್ರಹ್ಮ ಸ್ವಭಾವತಃ ॥೨॥

ಹೀಗೆ ಎಲ್ಲ ಮಂತ್ರಗಳಿಗೂ ಮೂಲಭೂತವಾದ ಐವತ್ತು ವರ್ಣಗಳ ಸ್ವರೂಪವಾದ ಮತ್ತು ಪ್ರಣವದ ಅವಯವಗಳಾದ ಅಕಾರೋಕಾರಮಕಾರಬಿಂದುನಾದಗಳೆಂಬ ಐದರಿಂದ ಐವತ್ತು ಕಲಾರೂಪದಿಂದ ಉಂಟಾಗುವ ಮಾತೃಕೆಯನ್ನು ವಿವರಿಸಿ ಈಗ ಅದಕ್ಕೆ ಕಾರಣವಾದ ಪರಾಪರಬ್ರಹ್ಮಸ್ವರೂಪವಾದ ಪ್ರಣವಸ್ವರೂಪವನ್ನು ವಿವರಿಸುತ್ತಾರೆ. ಪ್ರಣವದ ಸ್ವರೂಪವನ್ನು ವಿಸ್ತಾರವಾಗಿ ಅಲ್ಲದೆ, ಸಂಗ್ರಹವಾಗಿ, ಹೇಳುತ್ತೇನೆ. ಪ್ರಣವವು ಪರವೆಂದೂ ಅಪರವೆಂದೂ ಎರಡು ವಿಧವಾಗಿರುತ್ತದೆ ಎಂದು ಶಾಸ್ತ್ರಗಳ ಅಭಿಪ್ರಾಯವು. ಅದರಲ್ಲಿ ಪರಪ್ರಣವದ ಸ್ವರೂಪವನ್ನು ತಿಳಿಸುತ್ತಾರೆ. ॥೧॥

ಸತ್ಯಜ್ಞಾನಾನಂದಸ್ವರೂಪವಾದ, ಮಾಯಾ ಮತ್ತು ಅದರ ಕಾರ್ಯವಾದ ಆಕಾಶಾದಿಪ್ರಪಂಚ ಇವುಗಳೊಡನೆ ವಾಸ್ತವವಾದ ಸಂಬಂಧವಿಲ್ಲದ, ಪರಶಿವಸ್ವರೂಪವೇ

ಅಪರಃ ಪ್ರಣವಃ ಸಾಕ್ಷಾತ್ ಶಬ್ದರೂಪಸ್ಸುನಿರ್ಮಲಃ ।
ಪ್ರಕರ್ಷೇಣ ನವತ್ವಸ್ಯ ಹೇತುತ್ವಾತ್ಪ್ರಣವಃ ಸ್ಮೃತಃ ॥೩॥

ಪರಮುಪ್ರಣವಪ್ರಾಪ್ತಿಹೇತುತ್ವಾತ್ ಪ್ರಣವಾಭಿಧಃ ।
ಪುರಾ ಪ್ರಜಾಪತಿಸ್ಸಾಕ್ಷಾತ್ ಶುದ್ಧಯಾ ಪರಯಾ ಸಹ ॥೪॥

ಭಸ್ಮೋದ್ಧೂಳಿತಸರ್ವಾಂಗಃ ತ್ರಿಪುಂಡ್ರಾಂಕಿತಮಸ್ತಕಃ ।
ಜಿತೇಂದ್ರಿಯೋ ಜಿತಕ್ರೋಧೋ ಜಟಾವಲ್ಕಲಸಂಯುತಃ ॥೫॥

ಸದಾ ಪಂಚಾಗ್ನಿಮಧ್ಯಸ್ಥಃ ಸಾಂಬಧ್ಯಾನಪರಾಯಣಃ ।
ತತಾಪ ಪರಮಂ ಘೋರಂ ತಪಸ್ಸಂವತ್ಸರತ್ರಯಂ ॥೬॥

ಸ ಪುನಶ್ಶಂಕರಸ್ಯಾಸ್ಯ ಪ್ರಸಾದಾದಂಬಿಕಾಪತೇಃ ।
ಪೃಥಿವೀಮಂತರಿಕ್ಷಂ ಚ ದಿವಂ ಚಾಸೃಜದಾಸ್ತಿಕಾಃ ॥೭॥

ಪರಪ್ರಣವಶಬ್ದದ ಅರ್ಥವು. ಪ್ರಣವ ಎಂದರೆ, ಪರಬ್ರಹ್ಮವು ಹೆಚ್ಚಾಗಿ ಹೊಸದಾಗಿಯೇ ಇರುತ್ತದೆ. ಸರ್ವದಾ ಸ್ವಪ್ರಕಾಶಸ್ವರೂಪವಾಗಿರುತ್ತದೆ. ಆದುದರಿಂದ ಸರ್ವದಾ ದೋಷಮಲಗಳಸಂಪರ್ಕವಿಲ್ಲದೆ ಹೊಸದಾಗಿಯೇ ಇರುತ್ತದೆ. ||೨||

ಅಪರಪ್ರಣವವಾದ ಓಂಕಾರವು ಶಬ್ದಸ್ವರೂಪವಾದುದು. ಅದು ಮಾಯಾ ಅಜ್ಞಾನರೂಪದೋಷಸಂಬಂಧವಿಲ್ಲದ್ದು. ಮತ್ತು ಸ್ವಪ್ರಕಾಶವಾಗಿ ಸರ್ವದಾ ಹೊಸದಾಗಿರುವ, ಯಾವಾಗಲೂ ಮಾಸದೆ ಇರುವ, ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯಲು ಸಹಾಯಕವಾದುದರಿಂದ ಈ ಶಬ್ದಕ್ಕೂ ಪ್ರಣವವೆಂದು ಹೆಸರು. ||೩||

ಈ ಪ್ರಣವಮಾಹಾತ್ಮ್ಯವನ್ನು ತಿಳಿಸುವ ಐತರೇಯಬ್ರಾಹ್ಮಣದಲ್ಲಿರುವ ಕಥೆಯನ್ನು ಹೇಳುತ್ತಾರೆ. ಪೂರ್ವಕಾಲದಲ್ಲಿ ಪ್ರಜಾಪತಿಯಾದ ಬ್ರಹ್ಮನು ಭಸ್ಮದಿಂದ ಎಲ್ಲ ಅವಯವಗಳನ್ನೂ ಲೇಪಿಸಿಕೊಂಡವನಾಗಿ, ನೆತ್ತಿಯಲ್ಲಿ ತ್ರಿಪುಂಡ್ರವನ್ನು ಧರಿಸಿ, ಇಂದ್ರಿಯಗಳನ್ನೂ ಕೋಪವನ್ನೂ ಜಯಿಸಿದವನಾಗಿ, ನಾರುಮಡಿ ಜಟೆ ಇವುಗಳಿಂದ ಕೂಡಿದವನಾಗಿ, ಐದು ಅಗ್ನಿಗಳ ಮಧ್ಯದಲ್ಲಿರುವವನಾಗಿ, ಸಾಂಬನಾದ ಶಿವನ ಧ್ಯಾನದಲ್ಲಿ ಏಕಾಗ್ರಚಿತ್ತನಾಗಿ, ಮೂರು ವರ್ಷಗಳವರೆಗೂ ಬಹು ಕಠಿನವಾದ ಮತ್ತು ಮೇಲಾದ ತಪಸ್ಸನ್ನು ಉತ್ತಮವಾದ ಶ್ರದ್ಧೆಯಿಂದ ಕೂಡಿ ಆಚರಿಸಿದನು. ||೪-೫-೬||

ಉಮಾಪತಿಯಾದ ಈಶ್ವರನ ಅನುಗ್ರಹದಿಂದ ಭೂಮಿಯನ್ನೂ ಅಂತರಿಕ್ಷವನ್ನೂ ಸ್ವರ್ಗವನ್ನೂ ಬ್ರಹ್ಮನು ಸೃಷ್ಟಿಮಾಡಿದನು. ಆಸ್ತಿಕರಾದ, ವೇದವನ್ನು

ಸ ತಾನಭ್ಯತಪಲ್ಲೋಕಾನ್ ತೇಭ್ಯೋ ವೇದವಿದಾಂ ವರಾಃ ।
ತ್ರೀಣಿ ಜ್ಯೋತೀಂಷ್ಯಜಾಯಂತ ಪೃಥಿವ್ಯಾ ಏವ ತತ್ರ ತು ॥೮॥

ಅಜಾಯತಾಗ್ನಿರ್ವಾಯುಶ್ಚ ಬ್ರಾಹ್ಮಣಾಶ್ಚಾಂತರಿಕ್ಷತಃ ।
ದಿವೋ ದಿವಾಕರಸ್ಸಾಕ್ಷಾಜ್ಜಗಚ್ಚಕ್ಷುರಜಾಯತ ॥೯॥

ತಾನಿ ಚಾಭ್ಯತಪಜ್ಜ್ಯೋತೀಂಷ್ಯಜಸ್ತೇಭ್ಯೋ ಮಹಾದ್ವಿಜಾಃ ।
ತ್ರಯೋ ವೇದಾ ಅಜಾಯಂತ ವೇದಾನಾಂ ಪ್ರಥಮೋಽನಲಾತ್ ॥೧೦॥

ಯಜುರ್ವೇದಸ್ತಥಾ ವಾಯೋರಾದಿತ್ಯಾತ್ಸಾಮಸಂಜ್ಞಿತಃ ।
ವೇದಾನಭ್ಯತಪತ್ತಾಂಶ್ಚ ಬ್ರಹ್ಮಾ ತೇಭ್ಯೋ ಮಹಾದ್ವಿಜಾಃ ॥೧೧॥

ತ್ರೀಣಿ ಶುಕ್ಲಾನ್ಯಜಾಯಂತ ತತ್ರ ಬ್ರಹ್ಮವಿದಾಂ ವರಾಃ ।
ಋಗ್ವೇದಾದೇವ ಭೂಸ್ತದ್ವದ್ಯಜುರ್ವೇದಾದ್ಭುವಸ್ತಥಾ ॥೧೨॥

ಸಾಮವೇದಾತ್ಸುವಸ್ತಾನಿ ಶುಕ್ಲಾನ್ಯಭ್ಯತಪತ್ಪ್ರಭುಃ ।
ತಥಾ ತೇಭ್ಯೋಽಭಿತಪ್ತೇಭ್ಯಃ ತ್ರಯೋ ವರ್ಣಾ ದ್ವಿಜೋತ್ತಮಾಃ ॥೧೩॥

ತಿಳಿದವರಲ್ಲಿ ಶ್ರೇಷ್ಠರಾದ ಶೌನಕಾದಿಋಷಿಗಳೇ, ಕೇಳಿ. ಆ ಬ್ರಹ್ಮನು ಆ ಮೂರು ಲೋಕಗಳನ್ನೂ ಸಾರಗ್ರಹಣಕ್ಕಾಗಿ ಧ್ಯಾನದೃಷ್ಟಿಯಿಂದ ಪರಿಶೀಲಿಸಿದನು. ಆ ಲೋಕಗಳಿಂದ ಮೂರು ಜ್ಯೋತಿಗಳು ಉದಯಿಸಿದುವು. ಭೂಮಿಯಿಂದ ಅಗ್ನಿಯೂ, ಅಂತರಿಕ್ಷದಿಂದ ವಾಯುವೂ, ಸ್ವರ್ಗಲೋಕದಿಂದ ಲೋಕಕ್ಕೆಲ್ಲಕ್ಕೂ ಕಣ್ಣಾದವನಾದ ಸೂರ್ಯನೂ ಉಂಟಾದರು. ||೭-೮-೯||

ಬ್ರಹ್ಮಜ್ಞಾನಿಗಳಾದ ಉತ್ತಮಬ್ರಾಹ್ಮಣರೇ, ಕೇಳಿರಿ. ಬ್ರಹ್ಮನು ಆ ಜ್ಯೋತಿಗಳನ್ನು ಧ್ಯಾನದೃಷ್ಟಿಯಿಂದ ಪರಿಶೀಲಿಸಿದನು. ಆಗ ಮೊದಲನೆಯದಾದ ಋಗ್ವೇದವು ಅಗ್ನಿಯಿಂದಲೂ, ವಾಯುವಿನಿಂದ ಯಜುರ್ವೇದವೂ, ಸೂರ್ಯನಿಂದ ಸಾಮವೇದವೂ ಉಂಟಾದುವು. ಆ ವೇದಗಳಿಂದ ಪ್ರಕಾಶಮಾನಗಳಾದ ವ್ಯಾಹೃತಿಗಳು ಉಂಟಾದುವು. ||೧೦-೧೧||

ಋಗ್ವೇದದಿಂದ ಭೂಃ ಎನ್ನುವ, ಯಜುರ್ವೇದದಿಂದ ಭುವಃ ಎನ್ನುವ, ಸಾಮವೇದದಿಂದ ಸುವಃ ಎಂಬ, ಈ ಶುಕ್ಲವಾದ ವ್ಯಾಹೃತಿಗಳನ್ನು ಬ್ರಹ್ಮನು

ಅಜಾಯಂತ ಕ್ರಮೇಣೈವ ಕೋಟಿಸೂರ್ಯಸಮಪ್ರಭಾಃ ।
ಅಕಾರಶ್ಚ ತಥೋಕಾರೋ ಮಕಾರಶ್ಚೇತಿ ಸುವ್ರತಾಃ ॥೧೪॥

ತಾನೇಕಧಾ ಸಮಾಹರದಜ ಓಮಿತ್ಯಯಂ ಪ್ರಭುಃ ।
ತಸ್ಮಿನ್ನೇವ ಶಿವಸ್ಸಾಂಬಸ್ಸರ್ವವಸ್ತ್ವವಭಾಸಕಃ ॥೧೫॥

ಪ್ರತಿಬಿಂಬಿತವಾಂಸ್ತೇನ ಪ್ರಣವಸ್ತಸ್ಯ ವಾಚಕಃ ।
ತಪ್ತಲೋಹಾದಿವಚ್ಛಂಭೋರಭೇದಾತ್ಪ್ರಣವೋ ಹಿ ಸಃ ॥೧೬॥

ಸರ್ವಾವಭಾಸಕೋ ನಿತ್ಯಮುಭವತ್ಪಂಡಿತೋತ್ತಮಾಃ ।
ಜ್ಞಾತಾರ್ಥೇ ಜ್ಞಾತಮಿತ್ಯೇವಂ ವಕ್ತವ್ಯೇ ಸತಿ ತದ್ವಿನಾ ॥೧೭॥

ಓಮಿತಿ ಪ್ರಾಹ ಲೋಕೋಽಯಂ ತೇನ ಜ್ಞಾತಸ್ಯ ವಾಚಕಃ ।

ಸಾರಗ್ರಹಣಕ್ಕಾಗಿ ಧ್ಯಾನಿಸಿದನು. ಆ ತಪಸ್ಸಿನಿಂದ ಕ್ರಮವಾಗಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರೆಂಬ ಮೂರು ವರ್ಣಗಳೂ ಉಂಟಾದುವು. ॥೧೨-೧೩॥

ಕ್ರಮವಾಗಿ ಅಕಾರ ಉಕಾರ ಮಕಾರಗಳು ಸೂರ್ಯಕೋಟಿಸದೃಶವಾದ ಕಾಂತಿಯುಳ್ಳವುಗಳಾಗಿ ಉಂಟಾದುವು. ಎಲೈ ನಿಯಮನಿಷ್ಠರಾದ ಋಷಿಗಳೆ, ಕೇಳಿ. ಸಮರ್ಥನಾದ ಬ್ರಹ್ಮನು ಆ ಮೂರು ವರ್ಣಗಳನ್ನೂ ಒಂದಾಗಿ ಸೇರಿಸಿ ಓಂಕಾರವಾಗಿ ಮಾಡಿದನು. ॥೧೪॥

ಆ ಪ್ರಣವದಲ್ಲಿ ಎಲ್ಲ ಪದಾರ್ಥಗಳನ್ನೂ ಪ್ರಕಾಶಪಡಿಸುವ ಸಾಂಬನಾದ ಶಿವನು ಪ್ರತಿಬಿಂಬಿಸಿದನು. ಆದುದರಿಂದ ಪ್ರಣವವು ಶಿವವಾಚಕವಾಗಿದೆ. ಕೆಂಪಗೆ ಕಾದಿರುವ ಲೋಹಕ್ಕೂ ಅಗ್ನಿಗೂ ಇರುವಂತೆ ಪ್ರಣವಕ್ಕೂ ಪರಶಿವನಿಗೂ ವ್ಯಾಪ್ತಿ ಇರುವುದರಿಂದ ಅವೆರಡೂ ಅಭಿನ್ನವಾದುವು. ಆದುದರಿಂದ ಪ್ರಣವವು ಸರ್ವಸ್ವರೂಪಿಯಾದ ಪರಶಿವನನ್ನು ತಿಳಿಸಿಕೊಡುತ್ತದೆ. ॥೧೫-೧೬॥

ಯಾವುದಾದರೂ ಒಂದು ವಿಷಯವು ತಿಳಿಯಿತೆ? ಎಂದು ಪ್ರಶ್ನಿಸಿದರೆ ಜ್ಞಾತವಾಯಿತು ಎಂದು ಹೇಳುವುದರ ಬದಲು 'ಓಂ' ಎಂದು ಜನರು ಉತ್ತರ ಕೊಡುತ್ತಾರೆ. ಆದುದರಿಂದ ಓಂಕಾರವು ಜ್ಞಾತವಸ್ತುವನ್ನು ಬೋಧಿಸುತ್ತದೆ. ॥೧೭॥

ಸಂದಿಗ್ಧಾರ್ಥೇ ತು ಸಂದಿಗ್ಧಮಿತಿ ಪ್ರಾಪ್ತೇ ತು ವಾಚಕೇ ॥೧೮॥

ಓಮಿತಿ ಪ್ರಾಹ ಲೋಕೋಽಯಂ ತೇನ ಸಂದಿಗ್ಧವಾಚಕಃ ।
ಆಕಾಶಾದಿಪದಾರ್ಥಾನಾಂ ಯೇ ಶಬ್ದಾ ವಾಚಕಾ ಭುವಿ ॥೧೯॥

ವಿನಾ ತಾನಖಿಲಾನ್ ಶಬ್ದಾನ್ ಲೋಕ ಓಮಿತಿ ಭಾಷತೇ ।
ಅತಃ ಪ್ರಯೋಗಬಾಹುಳ್ಯಾದ್ಘಟಕುಡ್ಯಾದಿಶಬ್ದವತ್ ॥೨೦॥

ಆಕಾಶಾದಿಪದಾರ್ಥಾನಾಂ ವಾಚಕಃ ಪ್ರಣವಃ ಸ್ಮೃತಃ ।
ಸರ್ವಾವಭಾಸಕತ್ವೇನ ಬ್ರಹ್ಮಣಾ ಸದೃಶಃ ಸ್ಮೃತಃ ॥೨೧॥

ಸರ್ವಾವಭಾಸಕಂ ಮಂತ್ರಮಿಮಂ ಜಪತಿ ಯೋ ದ್ವಿಜಃ ।
ಸರ್ವಮಂತ್ರಜಪಸ್ಯೋಕ್ತಫಲಂ ಸ ಲಭತೇಽಚಿರಾತ್ ॥೨೨॥
ಅತಸ್ಸರ್ವಂ ಪರಿತ್ಯಜ್ಯ ಸದಾ ಮಂತ್ರಮಿಮಂ ಜಪೇತ್ ।

ಸಂದೇಹವಾಗಿರುವ ವಿಷಯದಲ್ಲಿ ಸಂದಿಗ್ಧವೆಂದು ಹೇಳಬೇಕಾಗಿರುವಾಗಲೂ ಜನರು ‘ ಓಂ ’ ಎಂದು ಉತ್ತರ ಕೊಡುವುದರಿಂದ ಪ್ರಣವವು ಸಂದಿಗ್ಧವಸ್ತುವನ್ನೂ ತಿಳಿಸುತ್ತದೆ. ||೧೮||

ಆಕಾಶವೇ ಮುಂತಾದ ಪದಾರ್ಥಗಳಿಗೆ ಯಾವ ಶಬ್ದಗಳು ವಾಚಕಗಳಾಗಿವೆಯೋ ಅಂಥ ಶಬ್ದಗಳಿಗೆ ಬದಲಾಗಿ ಓಂಕಾರವನ್ನು ಜನರು ಉಪಯೋಗಿಸುತ್ತಾರೆ. ||೧೯||

ಆದುದರಿಂದ ಘಟಕುಡ್ಯ ಮುಂತಾದ ಶಬ್ದಗಳನ್ನು ಗಡಿಗೆ ಗೋಡೆ ಮುಂತಾದ ಅರ್ಥಗಳನ್ನು ತಿಳಿಸುವುದಕ್ಕಾಗಿ ಉಪಯೋಗಿಸುವಂತೆ ಆಕಾಶಾದಿ ಪದಾರ್ಥಗಳನ್ನು ತಿಳಿಸಲು ಪ್ರಣವವನ್ನು ಹೆಚ್ಚಾಗಿ ಉಪಯೋಗಿಸುವುದು ಕಂಡುಬಂದಿರುವುದರಿಂದ ಅವೆಲ್ಲಕ್ಕೂ ಪ್ರಣವವೇ ವಾಚಕವಾಗಿದೆ. ||೨೦||

ಎಲ್ಲ ಪದಾರ್ಥಗಳನ್ನೂ ತಿಳಿಸಿಕೊಡುವುದರಿಂದ ಪ್ರಣವವು ಬ್ರಹ್ಮಸದೃಶವೆಂದು ಹೇಳಲ್ಪಟ್ಟಿದೆ. ಹೀಗೆ ಸರ್ವವನ್ನೂ ತಿಳಿಸಿಕೊಡುವ ಈ ಪ್ರಣವಮಂತ್ರವನ್ನು ಯಾವ ದ್ವಿಜನು ಜಪಮಾಡುತ್ತಾನೋ ಅಂಥವನು ಎಲ್ಲ ಮಂತ್ರಗಳ ಜಪದಿಂದ ಆಗುವ ಫಲವೆಲ್ಲವನ್ನೂ ಜಾಗ್ರತೆಯಾಗಿ ಪಡೆಯುತ್ತಾನೆ. ||೨೧-೨೨||

ಆದುದರಿಂದ ಉಳಿದ ಎಲ್ಲ ಜಪಗಳನ್ನೂ ಬಿಟ್ಟು ಈ ಮಂತ್ರವನ್ನು ಯಾವಾಗಲೂ ಜಪಿಸುತ್ತಿರಬೇಕು.

ಋಷಿರ್ಬ್ರಹ್ಮಾಽಸ್ಯ ಮಂತ್ರಸ್ಯ ಗಾಯತ್ರೀ ಛಂದ ಉಚ್ಯತೇ ॥೨೩॥

ಪರಮಾತ್ಮಾಽಭಿಧಶ್ಶಂಭುರ್ದೇವತಾ ಪರಿಕೀರ್ತಿತಃ ।
ಅಕಾರೋ ಬಿಂದುಸಂಯುಕ್ತಃ ಶಕ್ತಿರಸ್ಯ ದ್ವಿಜೋತ್ತಮಾಃ ॥೨೪॥

ಉಕಾರಶ್ಚ ಮಕಾರಶ್ಚ ದ್ವಯಂ ಬೀಜಂ ಪ್ರಕೀರ್ತಿತಂ ।
ಮೋಕ್ಷಾರ್ಥೇ ವಿನಿಯೋಗೋಽಸ್ಯ ಪ್ರೋಕ್ತೋ ವೇದಾಂತವಾದಿಭಿಃ ॥೨೫॥

ಅಗ್ನಿಶ್ಚ ವಾಯುಸ್ಸೂರ್ಯಶ್ಚ ವರ್ಣಾನಾಮೃಷಯಃ ಕ್ರಮಾತ್ ।
ಗಾಯತ್ರೀಂ ಚ ತಥಾ ತ್ರಿಷ್ಟುಬ್ಬೃಹತೀಂ ಚ ಯಥಾಕ್ರಮಂ ॥೨೬॥

ಛಂದಾಂಸಿ ಬ್ರಹ್ಮವಿಚ್ಛ್ರೇಷ್ಠಾಃ ವರ್ಣಾನಾಂ ಚ ಯಥಾಕ್ರಮಂ ।
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ವರ್ಣಾನಾಂ ದೇವತಾಃ ಕ್ರಮಾತ್ ॥೨೭॥

ರಕ್ತಂ ಶುಕ್ಲಂ ಚ ಕೃಷ್ಣಂ ಚ ಕ್ರಮಾದ್ವರ್ಣಾ ಉದಾಹೃತಾಃ ।
ಜಾಗ್ರತ್ಸ್ವಪ್ನಸುಷುಪ್ತಿಶ್ಚಾವಸ್ಥಾಃ ಪ್ರೋಕ್ತಾ ಯಥಾಕ್ರಮಂ ॥೨೮॥
ಭೂಮ್ಯಂತರಿಕ್ಷಸ್ವರ್ಗಾಶ್ಚ ಸ್ಥಾನಾನಿ ಕ್ರಮಶೋ ವಿದುಃ ।

ಈ ಮಂತ್ರಕ್ಕೆ ಬ್ರಹ್ಮನೇ ಋಷಿಯು, ಗಾಯತ್ರಿಯೇ ಛಂದಸ್ಸು, ಪರಮಾತ್ಮನಾದ ಶಂಭುವೇ ದೇವತೆಯೆಂದು ಹೇಳಲ್ಪಟ್ಟಿದೆ. ॥೨೩॥

ಈ ಮಂತ್ರಕ್ಕೆ ಬಿಂದುಯುಕ್ತವಾದ ಅಕಾರವೇ ಶಕ್ತಿಯು, ಅಂತಹ ಉಕಾರ ಮಕಾರಗಳು ಬೀಜವು ಎಂದು ಹೇಳಲ್ಪಟ್ಟಿದೆ. ಎಲೈ ಬ್ರಾಹ್ಮಣಶ್ರೇಷ್ಠರೇ, ವೇದಾಂತ ಶಾಸ್ತ್ರವನ್ನು ತಿಳಿದವರು ಈ ಮಂತ್ರಕ್ಕೆ ಮೋಕ್ಷರೂಪಫಲದಲ್ಲಿ ವಿನಿಯೋಗವನ್ನು ಹೇಳಿದಾರೆ. ॥೨೪-೨೫॥

ಈ ಮೂರು ವರ್ಣಗಳಿಗೆ ಕ್ರಮವಾಗಿ ಅಗ್ನಿಯೂ ವಾಯುವೂ ಸೂರ್ಯನೂ ಋಷಿಗಳು ; ಗಾಯತ್ರೀ, ತ್ರಿಷ್ಟುಪ್, ಬೃಹತೀಗಳೇ ಕ್ರಮವಾಗಿ ಇವಕ್ಕೆ ಛಂದಸ್ಸುಗಳು ; ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಋಷಿಗಳೇ ಕೇಳಿರಿ. ॥೨೬॥

ಈ ವರ್ಣಗಳಿಗೆ ಕ್ರಮವಾಗಿ ಬ್ರಹ್ಮ ವಿಷ್ಣು ಮಹೇಶ್ವರರು ದೇವತೆಗಳಾಗಿದ್ದಾರೆ. ॥೨೭॥

ಈ ವರ್ಣಗಳು ಕ್ರಮವಾಗಿ ರಕ್ತ, ಶುಕ್ಲ, ಕೃಷ್ಣ, ಅಂದರೆ ಕೆಂಪು, ಬಿಳಪು, ಕಪ್ಪು, ಬಣ್ಣವುಳ್ಳವೆಂದು ಹೇಳಲ್ಪಟ್ಟಿವೆ. ಜಾಗ್ರತ್-ಎಚ್ಚರ, ಸ್ವಪ್ನ, ಗಾಢನಿದ್ರೆಗಳು

ಉದಾತ್ತಪ್ರಮುಖಾ ವಿಪ್ರಾಃ ಸ್ವರಾಃ ಪ್ರೋಕ್ತಾ ಮನೀಷಿಭಿಃ ॥೨೯॥

ಋಗ್ಯಜುಸ್ಸಾಮಸಂಜ್ಞಾಶ್ಚ ವೇದಾಃ ಪ್ರೋಕ್ತಾ ಯಥಾಕ್ರಮಂ ।
ಅಗ್ನಯೋ ಗಾರ್ಹಪತ್ಯಾಗ್ನಿರ್ದಕ್ಷಿಣಾಗ್ನಿಸ್ತಥೈವ ಚ ॥೩೦॥

ಪ್ರೋಕ್ತಶ್ಚಾಹವನೀಯಾಗ್ನಿರ್ವರ್ಣಾನಾಂ ಕ್ರಮಶೋ ದ್ವಿಜಾಃ ।
ಪ್ರಾತರ್ಮಧ್ಯಂದಿನಂ ಸಾಯಂ ಕಾಲಾ ಉಕ್ತಾ ಯಥಾಕ್ರಮಂ ॥೩೧॥

ರಜಸ್ಸತ್ತ್ವಂ ತಮಶ್ಚೈವ ಗುಣಾ ಉಕ್ತಾ ಯಥಾಕ್ರಮಂ ।
ಸೃಷ್ಟಿಸ್ಸ್ಥಿತಿಶ್ಚ ಸಂಹಾರಃ ಕ್ರಿಯಾಃ ಪ್ರೋಕ್ತಾ ಯಥಾಕ್ರಮಂ ॥೩೨॥

ಅಂಗುಷ್ಠಾದಿಕನಿಷ್ಠಾಂತಮಂಗುಳೀನಾಂ ಚ ಸಂಧಿಷು ।
ಕ್ರಮಾದ್ವರ್ಗತ್ರಯನ್ಯಾಸಃ ಕರ್ತವ್ಯಸ್ಸಿದ್ಧಿಮಿಚ್ಛತಾ ॥೩೩॥
ಅಂಗುಳೀಷು ಚ ಸರ್ವಾಸು ಪ್ರಣವನ್ಯಾಸ ಈರಿತಃ ।

ಕ್ರಮವಾಗಿ ಇವಕ್ಕೆ ಅವಸ್ಥೆಗಳೆಂದೂ, ಭೂಮಿ ಆಕಾಶ ಸ್ವರ್ಗಗಳು ಕ್ರಮವಾಗಿ ಇವಕ್ಕೆ ಸ್ಥಾನಗಳೆಂದೂ ಹೇಳಲ್ಪಟ್ಟಿವೆ. ||೨೮||

ಎಲೈ ಋಷಿಗಳೇ, ಉದಾತ್ತಾನುದಾತ್ತಸ್ವರಿತಗಳೇ ಇವಕ್ಕೆ ಸ್ವರಗಳು; ಋಗ್ಯಜುಸ್ಸಾಮಗಳೇ ಇವಕ್ಕೆ ಕ್ರಮವಾಗಿ ವೇದಗಳೆಂದು ಜ್ಞಾನಿಗಳು ಹೇಳುತ್ತಾರೆ. ||೨೯||

ಈ ವರ್ಣಗಳಿಗೆ ಕ್ರಮವಾಗಿ ಗಾರ್ಹಪತ್ಯ, ದಕ್ಷಿಣಾಗ್ನಿ ಆಹವನೀಯಗಳನ್ನು ಅಗ್ನಿಗಳೆಂದೂ, ಬೆಳಗ್ಗೆ ಮಧ್ಯಾಹ್ನ ಸಂಜೆಗಳನ್ನು ಕಾಲಗಳೆಂದೂ ಹೇಳಿದಾರೆ. ||೩೦-೩೧||

ಕ್ರಮವಾಗಿ ಈ ವರ್ಣಗಳಿಗೆ ರಜಸ್ಸತ್ತ್ವತಮಸ್ಸುಗಳನ್ನು ಗುಣಗಳೆಂದೂ, ಸೃಷ್ಟಿಸ್ಥಿತಿಲಯಗಳನ್ನು ಕ್ರಿಯೆಗಳೆಂದೂ ಹೇಳಿದಾರೆ. ||೩೨||

ಕೈ ಹೆಬ್ಬೆಟ್ಟು ಮೊದಲಾಗಿ ಕನಿಷ್ಠಬೆರಳಿನವರೆಗೆ ಇರುವ ಬೆಟ್ಟುಗಳ ಸಂಧಿಗಳಲ್ಲಿ ಕ್ರಮವಾಗಿ ಅಕಾರಾದಿವರ್ಗಗಳನ್ನು ನ್ಯಾಸಮಾಡಬೇಕೆಂದೂ ಮಂತ್ರ ಸಿದ್ಧಿಯನ್ನು ಬಯಸುವವನು ಎಲ್ಲ ಬೆರಳುಗಳಲ್ಲೂ ಪ್ರಣವವನ್ನು ನ್ಯಾಸಮಾಡ ಬೇಕೆಂದೂ ಹೇಳುತ್ತಾರೆ. ||೩೩||

ಭೂರಗ್ನ್ಯಾತ್ಮನೇ ಇತ್ಯಾದಿಮಂತ್ರಾಂಶ್ಚ ಕ್ರಮಶೋ ದ್ವಿಜಾಃ ॥೩೪॥

ವಿನ್ಯಸ್ತವ್ಯಾಶ್ಚ ಸಿದ್ಧ್ಯರ್ಥಮಙ್ಗುಳೀಷು ದ್ವಿಜನ್ಮನಾ ।
ಕ್ರಮಾದ್ವರ್ಗತ್ರಯನ್ಯಾಸೋ ನಾಭೌ ಹೃದಿ ಚ ಮೂರ್ಧನಿ ॥೩೫॥

ಕರ್ತವ್ಯಸ್ಸರ್ವಯತ್ನೇನ ಪ್ರಣವೇನ ತಥೈವ ಚ ।
ಹೃದಯಾದಿಪ್ರದೇಶೇಷು ಕ್ರಮೇಣೈವ ದ್ವಿಜೋತ್ತಮಾಃ ॥೩೬॥

ಭೂರಗ್ನ್ಯಾತ್ಮನ ಇತ್ಯಾದಿಮಂತ್ರಾಣಾಂ ನ್ಯಾಸ ಈರಿತಃ ।
ಏವಂ ನ್ಯಸ್ಯಂ ವಿಧಾನೇನ ಧ್ಯಾತ್ವಾ ಸಾಂಬಂ ತ್ರಿಯಂಬಕಂ ॥೩೭॥

ಜಪೇನ್ಮಂತ್ರವರಂ ಭಕ್ತ್ಯಾ ಲಕ್ಷಾಣಾಂ ದಶಕಂ ದ್ವಿಜಾಃ ।
ತತಸ್ಸಿಧ್ಯತಿ ಮಂತ್ರೋಽಯಂ ಸತ್ಯಮೇವ ನ ಸಂಶಯಃ ॥೩೮॥

ಷಟ್ಕರ್ಮಾಣಿ ಪ್ರಸಿಧ್ಯಂತಿ ತಥೈವಾಷ್ಟವಿಭೂತಯಃ ।
ಅಪವರ್ಗಸ್ಸ್ವತಸ್ಸಿದ್ಧಃ ಪಾಪೈಸ್ಸರ್ವೈಃ ಪ್ರಮುಚ್ಯತೇ ॥೩೯॥

'ಭೂರಗ್ನ್ಯಾತ್ಮನೇ' ಎಂದು ಮೊದಲಾಗುವ ಮಂತ್ರಗಳನ್ನು ಕ್ರಮವಾಗಿ ಬೆರಳುಗಳಲ್ಲಿ ಬ್ರಾಹ್ಮಣನು ವಿನ್ಯಾಸಮಾಡುತ್ತಾ ಧ್ಯಾನಿಸಬೇಕು. ಮತ್ತು ಕ್ರಮವಾಗಿ ಅ ಉ ಮಕಾರಗಳನ್ನು ಹೊಕ್ಕುಳು ಎದೆ, ತಲೆಗಳಲ್ಲಿ ನ್ಯಾಸಮಾಡಬೇಕು. ಆಮೇಲೆ ಪ್ರಣವದಿಂದ ನ್ಯಾಸಗಳನ್ನು ಮಾಡಬೇಕು. ||೩೪-೩೫||

ಆಮೇಲೆ ಭೂಃ, ಭುವಃ, ಸ್ವಃ ಎಂಬ ವರ್ಣಗಳನ್ನು ಅಗ್ನಿ, ವಾಯು, ಸೂರ್ಯ ಎಂಬ ದೇವತೆಗಳೊಡನೆ ಧ್ಯಾನಮಾಡುತ್ತಾ ಹೊಕ್ಕುಳು, ಎದೆ, ತಲೆಗಳಲ್ಲಿ ಮೇಲೆ ಹೇಳಿದ ಮಂತ್ರಗಳನ್ನು ನ್ಯಾಸಮಾಡಬೇಕು ಎಂದು ಹೇಳಿದೆ. ||೩೬||

ಈ ರೀತಿಯಾಗಿ ನ್ಯಾಸವನ್ನು ಮಾಡಿ ತ್ರಿನೇತ್ರನಾದ ಸಾಂಬಮೂರ್ತಿಯನ್ನು ಧ್ಯಾನಮಾಡುತ್ತಾ ಈ ಮಂತ್ರಶ್ರೇಷ್ಠವನ್ನು ಭಕ್ತಿಯಿಂದ ಹತ್ತುಲಕ್ಷ ಜಪಮಾಡಬೇಕು. ಅದರಿಂದ ಈ ಮಂತ್ರಸಿದ್ಧಿಯಾಗುತ್ತದೆ, ಸಂದೇಹವಿಲ್ಲವು. ||೩೭-೩೮||

ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಗಳೆಂಬ, ಅಥವಾ ಸ್ನಾನ, ಸಂಧ್ಯಾವಂದನ, ಜಪ, ಹೋಮ, ದೇವಪೂಜನ, ಆತಿಥ್ಯ,

ಸರ್ವವಿದ್ಯಾಲಯೋ ಭೂತ್ವಾ ಯಥೇಷ್ಟಫಲಮಾಪ್ನುಯಾತ್ ।

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಪ್ರಣವವಿಚಾರೋ ನಾಮ ಪಂಚಮೋಽಧ್ಯಾಯಃ

ವೈಶ್ವದೇವಗಳೆಂಬ, ಆರು ಕರ್ಮಗಳೂ ಈ ಪ್ರಣವಮಂತ್ರವನ್ನು ಯಥಾಕ್ರಮವಾಗಿ ಜಪಿಸುವವನಿಗೆ ಸಫಲಗಳಾಗುತ್ತವೆ. ಎಲ್ಲ ವಿಧವಾದ ಪಾಪಗಳೂ ಹೋಗುತ್ತವೆ. ಮೋಕ್ಷವು ತಾನಾಗಿಯೇ ಉಂಟಾಗುತ್ತದೆ. ಅವನು ಎಲ್ಲ ವಿದ್ಯೆಗಳನ್ನೂ ತಿಳಿದವನಾಗಿ ಇಷ್ಟಾನುಸಾರವಾದ ಫಲಗಳನ್ನೂ ಪಡೆಯುತ್ತಾನೆ. ||೩೯||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಪ್ರಣವಸ್ವರೂಪವನ್ನು ವಿವರಿಸಿರುವ ಐದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಷಷ್ಠೋಽಧ್ಯಾಯಃ ||

ಆರನೆಯ ಅಧ್ಯಾಯವು

(ಗಾಯತ್ರೀವಿವರಣಮ್)

|| ಓಂ ಸೂತ ಉವಾಚ ||

ಸಾವಿತ್ರೀಮಥ ವಕ್ಷ್ಯಾಮಿ ವ್ಯಾಹೃತ್ಯಾ ಶಿರಸಾ ಸಹ ।
ಭೂರಾದಿವ್ಯಾಹೃತೀನಾಂ ತು ಮುನಯಃ ಪರಿಕೀರ್ತಿತಾಃ ॥೧॥

ಅತ್ರಿರ್ಭೃಗುಶ್ಚ ಕುತ್ಸಶ್ಚ ವಸಿಷ್ಠೋ ಗೌತಮಸ್ತಥಾ ।
ಕಾಶ್ಯಪಶ್ಚಾಙ್ಗಿರಾಶ್ಚೇತಿ ಕ್ರಮೇಣ ಮುನಿಪುಙ್ಗವಾಃ ॥೨॥

ವೇದತ್ರಯದ ಸಾರವಾದ ಪ್ರಣವವನ್ನು ವಿವರಿಸಿ ವೇದತ್ರಯಕ್ಕೆ ಮಾತೃವಾದ ಗಾಯತ್ರಿಯನ್ನು ವಿವರಿಸುತ್ತಾರೆ. ವ್ಯಾಹೃತಿಯಿಂದಲೂ ಶಿರಸ್ಸಿನೊಡನೆಯೂ ಕೂಡಿರುವ ಸೂರ್ಯದೇವತಾಕವಾದ ಗಾಯತ್ರೀ ಸ್ವರೂಪವನ್ನು ವಿವರಿಸುತ್ತೇನೆ. ಭೂಃ ಮುಂತಾದ ಏಳು ವ್ಯಾಹೃತಿಗಳಿಗೆ ಕ್ರಮವಾಗಿ ಋಷಿಗಳನ್ನು ಹೇಳಿದೆ. ||೧||

'ಭೂಃ' ಕ್ಕೆ ಅತ್ರಿಯೂ, 'ಭುವಃ' ಕ್ಕೆ ಭೃಗುವೂ, 'ಸುವಃ' ಕ್ಕೆ ಕುತ್ಸನೂ, 'ಮಹಃ' ಕ್ಕೆ ವಸಿಷ್ಠನೂ, 'ಜನಃ' ಕ್ಕೆ ಗೌತಮನೂ, 'ತಪಃ' ಕ್ಕೆ ಕಾಶ್ಯಪನೂ 'ಸತ್ಯಂ' ಗೆ ಅಂಗಿರನೂ ಕ್ರಮವಾಗಿ ಋಷಿಗಳು. ||೨||

ವ್ಯಾಹೃತೀನಾಂ ಕ್ರಮೇಣೈವ ಛನ್ದಾಂಸಿ ಕಥಿತಾನಿ ತು ।
ದೇವೀ ಗಾಯತ್ರಿರಾದ್ಯಸ್ಯ ಸ್ಯಾದುಷ್ಣಿಕ್ತದನನ್ತರಮ್ ॥೩॥

ಅನುಷ್ಟುಬ್ಬೃಹತೀ ಪಙ್ಕ್ತಿಃ ತ್ರಿಷ್ಟುಪ್ಚ ಜಗತೀ ತಥಾ ।
ಅಗ್ನಿರ್ವಾಯುಸ್ತಥಾಽರ್ಕಶ್ಚ ವಾಗೀಶೋ ವರುಣಸ್ತಥಾ ॥೪॥

ಇನ್ದ್ರಶ್ಚ ವಿಶ್ವೇದೇವಾಶ್ಚ ಕ್ರಮೇಣೈವ ತು ದೇವತಾಃ ।
ವ್ಯಾಹೃತೀನಾಂ ತು ಸರ್ವತ್ರ ವಿನಿಯೋಗಃ ಪ್ರಕೀರ್ತಿತಃ ॥೫॥

ವಿಶ್ವಾಮಿತ್ರೋ ಮುನಿಶ್ಛನ್ದೋ ಗಾಯತ್ರೀ ದೇವತಾ ರವಿಃ ।
ಗಾಯತ್ರ್ಯಾ ವೇದವಿಚ್ಛ್ರೇಷ್ಠಾಃ ಶಿವ ಏವಾಧಿದೇವತಾ ॥೬॥

ತ್ರಿಪದಾ ಸಾ ತು ಸಾವಿತ್ರೀ ಷಡ್ಭಿರ್ವರ್ಣೈಶ್ಚತುಷ್ಪದಾ ।
ಜಪೇ ಸಾ ತ್ರಿಪದಾ ಜ್ಞೇಯಾ ಪೂಜಾಯಾಂ ಸಾ ಚತುಷ್ಪದಾ ॥೭॥

ಮೇಲೆ ಹೇಳಿದ ಭೂರಾದಿ ಏಳು ವ್ಯಾಹೃತಿಗಳಿಗೆ ಕ್ರಮವಾಗಿ ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಙ್ಕ್ತಿಃ, ತ್ರಿಷ್ಟುಪ್, ಜಗತೀ, ಇವು ಛಂದಸ್ಸುಗಳು ಎಂದು ಹೇಳಿದೆ. ॥೩॥

ಅಗ್ನಿ ವಾಯು ಸೂರ್ಯ ಬೃಹಸ್ಪತಿ ವರುಣ ಇಂದ್ರ ವಿಶ್ವೇದೇವರು ಕ್ರಮವಾಗಿ ಇವರು ಭೂರಾದಿಮಂತ್ರಗಳಿಗೆ ದೇವತೆಗಳೆಂದು ಹೇಳಿದೆ. ॥೪॥

ಈ ವ್ಯಾಹೃತಿ ಮಂತ್ರಗಳಿಗೆ ಯಜ್ಞಕರ್ಮಗಳಲ್ಲೂ ಪ್ರಾಣಾಯಾಮಾದಿ ಕರ್ಮಗಳಲ್ಲೂ ವಿನಿಯೋಗವನ್ನು ಹೇಳಿದೆ. ॥೫॥

ಗಾಯತ್ರೀಮಂತ್ರಕ್ಕೆ ವಿಶ್ವಾಮಿತ್ರನು ಋಷಿಯು. ಗಾಯತ್ರೀ ಛಂದಸ್ಸು, ಸೂರ್ಯನು ದೇವತೆಯು, ಆಧಿಕಾರಿಕಪುರುಷನು. ಅವನಿಗೂ ಅಂತರ್ಯಾಮಿಯಾಗಿರುವ ಪರಶಿವನು ಅಧಿಷ್ಠಾನದೇವತೆಯು ಎಂದು ಹೇಳಿದೆ. ॥೬॥

ಗಾಯತ್ರೀಮಂತ್ರಕ್ಕೆ ಪಾದಗಳ ನಿಯಮವನ್ನು ತಿಳಿಸುತ್ತಾರೆ. ಗಾಯತ್ರೀ ಮಂತ್ರವು ಮೂರು ಪಾದಗಳುಳ್ಳದ್ದಾಗಿದೆ. ಆದರೆ ಆರಾರು ಅಕ್ಷರಗಳ ನಾಲ್ಕು ಪಾದಗಳುಳ್ಳದ್ದೆಂದೂ, ಜಪದಲ್ಲಿ ಮೂರು ಪಾದಗಳುಳ್ಳದ್ದಾಗಿ ಜಪಿಸಬೇಕೆಂದೂ, ಪೂಜೆಯಲ್ಲಿ ನಾಲ್ಕು ಪಾದಗಳುಳ್ಳದ್ದಾಗಿ ಅರ್ಚನೆಮಾಡಬೇಕೆಂದೂ ಹೇಳಿದೆ. ॥೭॥

ಓಮಾಪೋ ಜ್ಯೋತಿರಿತ್ಯೇತದ್ಗಾಯತ್ರ್ಯಾಶ್ಶಿರ ಉಚ್ಯತೇ ।
ಋಷಿರ್ಬ್ರಹ್ಮಾಽಸ್ಯ ಮಂತ್ರಸ್ಯ ಛನ್ದೋಽನುಷ್ಟುಪ್ಪ್ರಕೀರ್ತಿತಃ ॥೮॥

ದೇವತಾ ಪರಮಾತ್ಮೈವ ಪ್ರೋಕ್ತೋ ವೇದಾರ್ಥವೇದಿಭಿಃ ।
ಯಥೇಷ್ಟಸಾಧನೇ ಚಾಸ್ಯ ವಿನಿಯೋಗ ಉದಾಹೃತಃ ॥೯॥

ಸಾವಿತ್ರೀ ತ್ರಿಪದಾ ಜ್ಞೇಯಾ ಷಟ್ಕುಕ್ಷಿಃ ಪಞ್ಚಶೀರ್ಷಕಾ ।
ಅಗ್ನಿವರ್ಣಮುಖಾ ಶುಕ್ಲಾ ಪುಣ್ಡರೀಕದಳೇಕ್ಷಣಾ ॥೧೦॥

ಋಗ್ಯಜುಸ್ಸಾಮರೂಪಾಶ್ಚ ಪಾದಾ ಅಸ್ಯಾಃ ಪ್ರಕೀರ್ತಿತಾಃ ।
ಪೂರ್ವಾ ದಿಕ್ ಪ್ರಥಮಾ ಕುಕ್ಷಿಃ ದ್ವಿತೀಯಾ ದಕ್ಷಿಣಾ ಮತಾ ॥೧೧॥

ಪಶ್ಚಿಮಾ ದಿಕ್ ತೃತೀಯಾ ಚ ಚತುರ್ಥೀ ಚೋತ್ತರಾ ಮತಾ ।
ಊರ್ಧ್ವಾ ದಿಕ್ ಪಞ್ಚಮೀ ಕುಕ್ಷಿರಧಃ ಷಷ್ಠೀ ಪ್ರಕೀರ್ತಿತಾ ॥೧೨॥

ಗಾಯತ್ರೀಮಂತ್ರದ ಶಿರಸ್ಸಿನ ಸ್ವರೂಪವನ್ನು ಹೇಳುತ್ತಾರೆ, "ಓಮಾಪೋ ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸ್ವರೋಮ್ ।" ಎಂಬುದು ಗಾಯತ್ರೀ ಶಿರಸ್ಸಾಗಿದೆ. ಈ ಮಂತ್ರಕ್ಕೆ ಬ್ರಹ್ಮನೇ ಋಷಿಯು, ಅನುಷ್ಟುಪ್ ಛಂದಸ್ಸು, ಪರಮಾತ್ಮನೇ ದೇವತೆಯು ಎಂದು ವೇದಾರ್ಥವನ್ನು ತಿಳಿದವರು ಹೇಳುತ್ತಾರೆ. ಬೇಕಾದ ಇಷ್ಟಾರ್ಥವನ್ನು ಪಡೆಯಲು ಈ ಮಂತ್ರವನ್ನು ಉಪಯೋಗಿಸಬಹುದು. ||೮-೯||

ಈಗ ಗಾಯತ್ರಿಯ ವಿರಾಡ್ರೂಪವನ್ನು ವಿವರಿಸುತ್ತಾರೆ. ಸವಿತೃದೇವತಾಕವಾದ ಮಂತ್ರಕ್ಕೆ ಮೂರು ಪಾದಗಳಿವೆ. ಆರು ಸ್ವರೂಪವಾದ ಹೊಟ್ಟೆಯೂ, ಐದು ತಲೆಗಳೂ ಇವೆ. ಈ ದೇವತೆಯು ಬೆಂಕಿಯ ಬಣ್ಣವುಳ್ಳ ಮುಖವನ್ನೂ ಕಮಲದ ಗರಿಯಂತಿರುವ ಕಣ್ಣುಗಳನ್ನೂ ಹೊಂದಿ ಶುಕ್ಲವರ್ಣವುಳ್ಳವಳು ಎಂದು ಧ್ಯಾನಮಾಡಬೇಕು. ||೧೦||

ಈ ಮಂತ್ರಕ್ಕೆ ಋಗ್ಯಜುಸ್ಸಾಮವೇದಗಳು ಪಾದಗಳು, ಪೂರ್ವ ದಕ್ಷಿಣ ಪಶ್ಚಿಮ ಉತ್ತರ ಊರ್ಧ್ವ ಅಧರ ದಿಕ್ಕುಗಳು ಆರು ಕುಕ್ಷಿಗಳು ಎಂದು ಹೇಳಿದೆ ||೧೧-೧೨||

ಅಷ್ಟಾದಶ ಪುರಾಣಾನಿ ನಾಭಿರಸ್ಯಾ ಮುನೀಶ್ವರಾಃ ।
ಜಗಚ್ಛರೀರಂ ಸಾವಿತ್ರ್ಯಾ ಆಕಾಶಮುದರಾನ್ತರಮ್ ॥೧೩॥

ಸ್ತನೌ ಛನ್ದಾಂಸಿ ಹೃದಯಂ ಧರ್ಮಶಾಸ್ತ್ರಮಕಲ್ಮಷಮ್ ।
ಬಾಹವೋ ನ್ಯಾಯಶಾಸ್ತ್ರಂ ತು ಕರ್ಣೌ ಸಾಙ್ಖ್ಯದ್ವಯಂ ತಥಾ ॥೧೪॥

ಶಿಕ್ಷಾದ್ಯಙ್ಗಾನಿ ಶೀರ್ಷಾಣಿ ವಕ್ತ್ರಮಗ್ನಿರ್ಮಹಾದ್ಯುತಿಃ ।
ಮೀಮಾಂಸಾ ಲಕ್ಷಣಂ ತಸ್ಯಾಶ್ಚೇಷ್ಟಾ ಚಾಥರ್ವಣೀ ಶ್ರುತಿಃ ॥೧೫॥

ಬ್ರಹ್ಮಾ ಮೂರ್ಧಾ ಶಿರೋ ರುದ್ರೋ ವಿಷ್ಣುರಾತ್ಮಾ ಪ್ರಕೀರ್ತಿತಃ ।
ತಸ್ಯಾಸ್ಸೂಕ್ಷ್ಮಶರೀರಂ ತು ಶಾಸ್ತ್ರಂ ವೇದಾನ್ತಸಂಜ್ಞಿತಮ್ ॥೧೬॥
ಅನ್ತರ್ಯಾಮೀ ಶಿವಸ್ಸಾಕ್ಷಾತ್ ಸಾಮ್ಬಶ್ಚನ್ದ್ರಾರ್ಧಶೇಖರಃ ।

ಗಾಯತ್ರೀದೇವತೆಗೆ ಹದಿನೆಂಟು ಪುರಾಣಗಳು ಹೊಕ್ಕುಳು, ಈ ಪ್ರಪಂಚವು ಶರೀರವು, ಆಕಾಶವು ಶರೀರದ ಒಳಭಾಗವು, ಛಂದಸ್ಸುಗಳು ಸ್ತನಗಳು, ನಿರ್ದೋಷವಾದ ಧರ್ಮಶಾಸ್ತ್ರವು ಹೃದಯವು, ನ್ಯಾಯಶಾಸ್ತ್ರವು ಭುಜಗಳು, ಸೇಶ್ವರನಿರೀಶ್ವರವೆಂಬ ಎರಡು ಸಾಂಖ್ಯಗಳು ಕಿವಿಗಳು, ಶಿಕ್ಷಾಕಲ್ಪವ್ಯಾಕರಣ ಛಂದಸ್ಸು ನಿರುಕ್ತ ಜ್ಯೋತಿಷಗಳೆಂಬ ಆರು ವೇದಾಂಗಗಳು ತಲೆಗಳು, ಕಾಂತ್ಯತಿಶಯವುಳ್ಳ ಅಗ್ನಿಯು ತಲೆಯು, ಕರ್ಮಮೀಮಾಂಸೆಯು ತಟಸ್ಥಲಕ್ಷಣವು (ಅಂದರೆ ಸ್ವರೂಪಜ್ಞಾನಕ್ಕೆ ಸಾಧನವಾದುದು), ಅಥರ್ವವೇದವು ವ್ಯಾಪಾರಗಳು, ಬ್ರಹ್ಮನೇ ಶಿರಸ್ಸು ಕಾಲರೂಪವಾದುದು, ರುದ್ರನು ಶಿರಸ್ಸು ಕೇಶರೂಪವಾದುದು, ವಿಷ್ಣುವು ಆತ್ಮಸ್ವರೂಪನು ಎಂದು ಧ್ಯಾನಮಾಡಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ||೧೩-೧೪-೧೫||

ಇದುವರೆಗೆ ಸ್ಥೂಲಶರೀರವನ್ನು ವರ್ಣಿಸಿ ಈಗ ಸೂಕ್ಷ್ಮಶರೀರವನ್ನು ವಿವರಿಸುತ್ತಾರೆ. ಈ ಎಲ್ಲ ನಾಮರೂಪಾತ್ಮಕವಾದ ಭೋಕ್ತೃಭೋಗ್ಯರೂಪವಾದ ದೃಶ್ಯಪ್ರಪಂಚವು ಈ ಸಾವಿತ್ರೀಮಂತ್ರಕ್ಕೆ ಶರೀರವು, 'ಅಥಾತೋ ಬ್ರಹ್ಮಜಿಜ್ಞಾಸಾ' ಇತ್ಯಾದಿಯಾದ ವೇದಾಂತಶಾಸ್ತ್ರವು ಸೂಕ್ಷ್ಮಶರೀರವು. ಶಿವನೇ, ಮಾಯೋಪಾಧಿಕನಾದ ಈಶ್ವರನೇ, ದೃಗ್ರೂಪನಾದ ಅಂಬಾಸಹಿತನಾದ ಚಂದ್ರಶೇಖರನಾದ ಶಿವನೇ, ಅಂತರ್ಯಾಮಿಯಾಗಿ ಪ್ರೇರಕನಾಗಿದಾನೆ. ||೧೬||

ಈ ಇಪ್ಪತ್ತುನಾಲ್ಕು ಅವಯವಗಳಲ್ಲಿ ಕ್ರಮವಾಗಿ ಗಾಯತ್ರೀಮಂತ್ರದ ಇಪ್ಪತ್ತುನಾಲ್ಕು ವರ್ಣಗಳನ್ನೂ ನ್ಯಾಸಮಾಡಬೇಕು. ವರೇಣ್ಯಂ ಎಂಬುದನ್ನು

ಸ್ವಶರೀರೇ ತು ಸಾವಿತ್ರೀಂ ವಿನ್ಯಸೇದಕ್ಷರಕ್ರಮಾತ್ ॥೧೭॥

ಪಾದಾಙ್ಗುಷ್ಠೇ ಚ ಗುಲ್ಫೇ ಚ ಜಙ್ಘೇ ಜಾನುಪ್ರದೇಶಕೇ ।
ಊರುದೇಶೇ ಚ ಗುಹ್ಯೇ ಚ ವೃಷಣೇ ಚ ತಥೈವ ಚ ॥೧೮॥

ಕಟಿಪ್ರದೇಶೇ ನಾಭೌ ಚ ಜಠರೇ ಸ್ತನಯೋರ್ಹೃದಿ ।
ಕಣ್ಠೇ ಚ ವದನೇ ತಾಲೌ ನಾಸಿಕಾಯಾಂ ಚ ಚಕ್ಷುಷೋಃ ॥೧೯॥

ಭ್ರುವೋರ್ಮಧ್ಯೇ ಲಲಾಟೇ ಚ ಪೂರ್ವವಕ್ತ್ರೇ ತಥೈವ ಚ ।
ದಕ್ಷಿಣೇ ಪಶ್ಚಿಮೇ ಚೈವ ತಥೈವ ಬ್ರಾಹ್ಮಣೋತ್ತಮಾಃ ॥೨೦॥

ಉತ್ತರೇ ಚ ತಥಾ ಮೂರ್ಧ್ನಿ ನ್ಯಾಸಸ್ಸಮ್ಯಕ್ಪ್ರಕೀರ್ತಿತಃ ।
ಪ್ರಥಮಶ್ಚಮ್ಪಕಾಕಾರಃ ದ್ವಿತೀಯಶ್ಶ್ಯಾಮ ಏವ ಹಿ ॥೨೧॥

ತೃತೀಯಃ ಪಿಙ್ಗಳಃ ಪ್ರೋಕ್ತಶ್ಚತುರ್ಥೋ ಮುನಿಸತ್ತಮಾಃ ।
ಇಂದ್ರನೀಲಸಮಪ್ರಖ್ಯಃ ಪಞ್ಚಮಃ ಪಾವಕ ಪ್ರಭಃ ॥೨೨॥

ಷಷ್ಠೋ ವಹ್ನಿಪ್ರಭಸ್ತದ್ವತ್ ಸಪ್ತಮಶ್ಚಾಗ್ನಿವರ್ಣಕಃ ।
ವಿದ್ಯುದ್ವರ್ಣನಿಭಸ್ಸಾಕ್ಷಾದಷ್ಟಮಃ ಪರಿಭಾಷಿತಃ ॥೨೩॥

ನವಮಸ್ತಾರಕಾವರ್ಣಃ ದಶಮಃ ಕೃಷ್ಣವರ್ಣಕಃ ।
ತತ್ಪರೋ ರಕ್ತಗೌರಾಭಶ್ಶ್ಯಾಮೋ ವೈ ತತ್ಪರಸ್ಸ್ಮೃತಃ ॥೨೪॥

ಶುಕ್ಲವರ್ಣಃ ರಕ್ತವರ್ಣಃ ಪೀತವರ್ಣಃ ಪರಃ ಸ್ಮೃತಃ ।
ಶುಕ್ಲವರ್ಣಃ ಪರೋ ವರ್ಣಃ ಪದ್ಮರಾಗಪ್ರಭಃ ಪರಃ ॥೨೫॥

ತತ್ಪರಶ್ಶಶಿಸಂಕಾಶಃ ಪಾಣ್ಡುರಃ ಪರಮೋ ಮತಃ ।
ತತ್ಪರೋ ರಕ್ತಗೌರಾಭ ಇಂದ್ರನೀಲಸಮೋಽಥವಾ ॥೨೬॥

ಗೋರಕ್ತಸದೃಶಶ್ಚಾನ್ಯಃ ತತ್ಪರಸ್ಸೂರ್ಯಸನ್ನಿಭಃ ।
ನೀಲೋತ್ಪಲದಳಪ್ರಖ್ಯಃ ವರ್ಣಸ್ತತ್ಪರಮಃ ಸ್ಮೃತಃ ॥೨೭॥

ವರೇಣಿಯಂ ಎಂದು ನಾಲ್ಕು ವರ್ಣಗಳುಳ್ಳದ್ದೆನ್ನಾಗಿ ತಿಳಿಯಬೇಕು. ॥೧೭-೧೮-೧೯-೨೦॥

ಶಙ್ಖಕುನ್ದೇನ್ದುವರ್ಣಾಭಃ ಸಾಕ್ಷಾದ್ವರ್ಣಃ ಪರಃ ಸ್ಮೃತಃ ।
ತತ್ಪರೋ ದೀಪಸಂಕಾಶಃ ಕ್ರಮಾದ್ವರ್ಣಾಃ ಪ್ರಕೀರ್ತಿತಾಃ ॥೨೮॥

ಕೇಚಿದ್ವರ್ಣಾಸ್ತು ಸಾವಿತ್ರ್ಯಾ ಮಹಾಪಾತಕನಾಶನಾಃ ।
ಉಪಪಾತಕಪಾಪಾನಾಂ ವರ್ಣಾಃ ಕೇಚನ ಬಾಧಕಾಃ ॥೨೯॥

ಕೇಚನ ಕ್ಷುದ್ರಪಾಪಾನಾಂ ನಾಶಕಾಸ್ಸ್ಯುರ್ನ ಸಂಶಯಃ ।
ನಾನ್ನತೋಯಸಮಂ ದಾನಂ ನ ಚಾಹಿಂಸಾ ಪರಂ ತಪಃ ॥೩೦॥

ನ ಸಾವಿತ್ರ್ಯಾ ಸಮಂ ಜಪ್ಯಂ ನ ವ್ಯಾಹೃತಿಸಮಂ ಹುತಮ್ ।
ಯೋ ನೋಽಸ್ಮಾಕಂ ಧಿಯಶ್ಚಿತ್ತಾನ್ಯನ್ತರ್ಯಾಮಿಸ್ವರೂಪತಃ ॥೩೧॥

ಪ್ರಚೋದಯಾತ್ಪ್ರೇರಯೇಚ್ಚ ತಸ್ಯ ದೇವಸ್ಯ ಸುವ್ರತಾಃ ।
ದೀಪ್ತಸ್ಯ ಸರ್ವಜನ್ತೂನಾಂ ಪ್ರತ್ಯಕ್ಷಸ್ಯ ಸ್ವಭಾವತಃ ॥೩೨॥

ಗಾಯತ್ರೀಮಂತ್ರದ ಇಪ್ಪತ್ತುನಾಲ್ಕು ವರ್ಣಗಳಿಗೆ ಕ್ರಮವಾಗಿ ಮೇಲೆ ಕಂಡ ಇಪ್ಪತ್ತುನಾಲ್ಕು ಬಣ್ಣಗಳುಂಟೆಂದು ಧ್ಯಾನಕ್ಕಾಗಿ ಹೇಳಿದೆ. ॥೨೧-೨೨-೨೩-೨೪-೨೫-೨೬-೨೭-೨೮॥

ಈ ವರ್ಣಜ್ಞಾನಕ್ಕೆ ಪ್ರಯೋಜನವನ್ನು ಹೇಳುತ್ತಾರೆ. ಈ ವರ್ಣಗಳಲ್ಲಿ ಕೆಲವು ಬ್ರಹ್ಮಹತ್ಯ, ಸುರಾಪಾನ, ಸ್ವರ್ಣಸ್ತೇಯ, ಗುರುತಲ್ಪಗಮನ, ಎಂಬ ಮಹಾಪಾತಕಗಳನ್ನೂ, ಅಂಥವರೊಡನೆ ಸವ್ಯವಹಾರದಿಂದ ಉಂಟಾದ ಮಹಾ ಪಾಪವನ್ನೂ ನಿವಾರಿಸುತ್ತವೆ. ಮತ್ತೆ ಕೆಲವು ವರ್ಣಗಳು ಉಪಪಾತಕಗಳನ್ನು ನಾಶಮಾಡುತ್ತವೆ. ಮತ್ತೆ ಕೆಲವು ಕ್ಷುದ್ರಪಾಪಗಳನ್ನು ಹೋಗಲಾಡಿಸುತ್ತವೆ, ॥೨೯॥

ಅನ್ನನೀರನ್ನು ಕೊಡುವುದಕ್ಕೆ ಸಮವಾದ ದಾನವಿಲ್ಲವು. ಅಹಿಂಸೆಗಿಂತಲೂ ಮೇಲಾದ ತಪಸ್ಸು ಇಲ್ಲವು. ಗಾಯತ್ರೀಮಂತ್ರಜಪಕ್ಕೆ ಸಮವಾದ ಜಪವಿಲ್ಲವು. ವ್ಯಾಹೃತಿಗಳ ಜಪಕ್ಕೆ ಸರಿಸಮವಾದ ಹೋಮವಿಲ್ಲವು. ॥೩೦॥

ಯಾವ ದೇವನು ಅಂತರ್ಯಾಮಿಸ್ವರೂಪನಾಗಿದ್ದು ನಮ್ಮ ಮನಸ್ಸನ್ನು ಪ್ರೇರಿಸುತ್ತಾನೋ ಅಂಥ ಪ್ರಕಾಶಸ್ವರೂಪನಾದ ಮತ್ತು ಎಲ್ಲ ಪ್ರಾಣಿಗಳಿಂದಲೂ ಸ್ವಾಭಾವಿಕವಾಗಿ ಪ್ರತ್ಯಕ್ಷನಾಗಿ ತಿಳಿಯಲ್ಪಟ್ಟಿರುವ ಸೂರ್ಯನಿಗೆ ಸ್ವಾತ್ಮಸ್ವರೂಪ

ಸವಿತುಸ್ಸ್ವಾತ್ಮಭೂತಂ ತು ವರೇಣ್ಯಂ ಸರ್ವಜನ್ತುಭಿಃ ।
ಭಜನೀಯಂ ದ್ವಿಜೈರ್ಭರ್ಗಃ ತೇಜಶ್ಚೈತನ್ಯಲಕ್ಷಣಮ್ ॥೩೩॥

ಸ್ವಮಾಯಾಶಕ್ತಿಸಂಭಿನ್ನ ಶಿವರುದ್ರಾದಿಸಂಜ್ಞಿತಮ್ ।
ನೀಲಗ್ರೀವಂ ವಿರೂಪಾಕ್ಷಂ ಸಾಮ್ಬಮೂರ್ತ್ಯುಪಲಕ್ಷಿತಮ್ ॥೩೪॥

ಆದಿತ್ಯದೇವತಾಯಾಸ್ತು ಪ್ರೇರಕಂ ಪರಮೇಶ್ವರಮ್ ।
ಆದಿತ್ಯೇನ ಪರಿಜ್ಞಾತಂ ವಯಂ ಧೀಮಹ್ಯುಪಾಸ್ಮಹೇ ॥೩೫॥

ಸಾವಿತ್ರ್ಯಾಃ ಕಥಿತೋ ಹ್ಯರ್ಥಃ ಸಂಗ್ರಹೇಣ ಮಯಾಽಽದರಾತ್ ।
ಏವಮರ್ಥಂ ಗುರೋರ್ಲಬ್ಧ್ವಾ ದತ್ವಾ ತಸ್ಮೈ ಚ ದಕ್ಷಿಣಾಮ್॥೩೬॥

ಚತುರ್ವಿಂಶತಿಕಂ ಲಕ್ಷಂ ಜಪೇದವ್ಯಗ್ರತಃ ಸುಧೀಃ ।
ಮಹಾಪಾತಕಯುಕ್ತೋಽಪಿ ಸಿದ್ಧಮನ್ತ್ರೋ ಭವೇದ್ದ್ವಿಜಾಃ ॥೩೭॥
ಆಜ್ಯೇನ ಜುಹುಯಾನ್ಮನ್ತ್ರೀ ಸಹಸ್ರಾಣಾಂ ಚತುಷ್ಟಯಮ್ ।

ವಾಗಿರುವ ತೇಜಸ್ಸೆಂದರೆ ಚೈತನ್ಯವನ್ನು ಎಲ್ಲ ದ್ವಿಜರೂ ಧ್ಯಾನಮಾಡುತ್ತಾರೆ. ಆ ಚೈತನ್ಯವು ತನ್ನ ಮಾಯಾಶಕ್ತಿಯಿಂದ ಕೂಡಿ ಶಿವ, ರುದ್ರ ಮುಂತಾದ ಹೆಸರನ್ನು ಪಡೆದಿದೆ. ಕಪ್ಪಾದ ಕತ್ತುಳ್ಳ, ವಿಜಾತೀಯವಾದ ಕಣ್ಣುಳ್ಳ, ಅಂಬಿಕಾಸಹಿತವಾದ ಮೂರ್ತಿಯಿಂದ ತಿಳಿಯಲ್ಪಡುವ, ಮತ್ತು ಆದಿತ್ಯಾಭಿಮಾನಿದೇವತೆಗೂ ಪ್ರೇರಕವಾದ, ಪರಮೇಶ್ವರನ ಸ್ವರೂಪವಾದ ಆದಿತ್ಯನಿಂದ ತಿಳಿಯಲ್ಪಡುವ, ತೇಜಸ್ಸನ್ನು, ಚೈತನ್ಯವನ್ನು ಧ್ಯಾನಮಾಡುತ್ತೇವೆ. ಗಾಯತ್ರೀಮಂತ್ರಕ್ಕೆ ಸಂಕ್ಷೇಪವಾದ ಅರ್ಥವು ಇದೇ ಆಗಿದೆ. ॥೩೧-೩೨-೩೩-೩೪-೩೫॥

ಈ ಅರ್ಥವನ್ನು ಗುರುವಿನಿಂದ ಉಪದೇಶಮೂಲಕವಾಗಿ ಪಡೆದು ಅವನಿಗೆ ದಕ್ಷಿಣೆಯನ್ನು ಕೊಟ್ಟು ಈ ಮಂತ್ರವನ್ನು ಬುದ್ಧಿವಂತನಾದವನು ಇಪ್ಪತ್ತುನಾಲ್ಕು ಲಕ್ಷ ಸಲ ಏಕಾಗ್ರತೆಯಿಂದ ಜಪಮಾಡಬೇಕು. ॥೩೬॥

ಓ ಋಷಿಗಳೇ, ಮಹಾಪಾಪಗಳುಳ್ಳವನಾದರೂ ಹೀಗೆ ಜಪಿಸುವುದರಿಂದಲೂ, ತುಪ್ಪದಿಂದ ನಾಲ್ಕುಸಾವಿರ ಸಲ ಈ ಮಂತ್ರದಿಂದ ಹೋಮಮಾಡುವುದರಿಂದಲೂ, ಮಂತ್ರಸಿದ್ಧಿಯನ್ನು ಹೊಂದುತ್ತಾನೆ. ॥೩೭॥

ವಿನಿಯೋಗಾನಥಾನೇನ ಮನ್ತ್ರೇಣೈವ ಪ್ರಸಾಧಯೇತ್ ॥೩೮॥

ಸ್ನಾತ್ವಾ ಪ್ರಾತರ್ಜಪೇನ್ನಿತ್ಯಂ ಸಹಸ್ರಂ ಶ್ರದ್ಧಯಾ ಸಹ ।
ಅಪೇಕ್ಷಿತಾರ್ಥಂ ಸಕಲಂ ಲಭತೇ ನಾತ್ರ ಸಂಶಯಃ ॥೩೯॥

ಹುತ್ವಾ ತು ಖಾದಿರಂ ಸಮ್ಯಕ್ ಘೃತಾಕ್ತಂ ಹವ್ಯವಾಹನೇ ।
ರಾಹುಗ್ರಸ್ತೇ ರವೌ ವಿಪ್ರಾಃ ಲಭತೇ ಧನಮುತ್ತಮಮ್ ॥೪೦॥

ರಾಹುಗ್ರಾಸಸಮಾಪ್ತೌ ತು ತರ್ಪಯನ್ ಭಾಸ್ಕರಂ ಜಲೈಃ ।
ಸರ್ವಕಾರ್ಯಸಮೃದ್ಧಿಸ್ಸ್ಯಾನ್ನಾತ್ರ ಕಾರ್ಯಾ ವಿಚಾರಣಾ ॥೪೧॥

ಕರೀಷಚೂರ್ಣಕೈರ್ಹುತ್ವಾ ಸರ್ಪಿಷಾ ಸಹ ಮಾನವಃ ।
ಗವಾಂ ಗೋಷ್ಠೇ ಸಹಸ್ರಂ ತು ಬಹುಕ್ಷೀರಾಂ ಲಭೇತ ಗಾಮ್॥೪೨॥

ಶಾಲ್ಯಾಸ್ತಣ್ಡುಲಹೋಮೇನ ಕನ್ಯಾಸಿದ್ಧಿರ್ಭವಿಷ್ಯತಿ ।
ಶಾಲಿಬೀಜಸ್ಯ ಹೋಮೇನ ಪ್ರಜಾಮಿಷ್ಟಾಮವಾಪ್ನುಯಾತ್ ॥೪೩॥

ಈ ಮಂತ್ರದಿಂದ ಅನೇಕ ಪ್ರಯೋಜನಗಳನ್ನು ಸಾಧಿಸಬಹುದು. ಪ್ರತಿದಿನವೂ ಪ್ರಾತಃಕಾಲದಲ್ಲಿ ಸ್ನಾನಮಾಡಿ ನಂಬಿಕೆಯೊಡನೆ ಸಾವಿರ ಸಲ ಇದನ್ನು ಜಪಿಸಬೇಕು. ॥೩೮॥

ಇದರಿಂದ ಉಪಾಸಕನು ಇಷ್ಟಾರ್ಥವನ್ನು ಪಡೆಯುತ್ತಾನೆ, ಸಂದೇಹವಿಲ್ಲವು. ಅಗ್ನಿಯಲ್ಲಿ ತುಪ್ಪದಿಂದ ಲಿಪ್ತವಾದ ಕಗ್ಗಲಿಸಮಿತ್ತುಗಳಿಂದ ರಾಹುಗ್ರಾಸದಿಂದ ಆದ ಸೂರ್ಯಗ್ರಹಣಕಾಲದಲ್ಲಿ ಹೋಮಮಾಡಿದರೆ ಐಶ್ವರ್ಯ ಮುಂತಾದ ಇಷ್ಟಾರ್ಥಗಳನ್ನೆಲ್ಲವನ್ನೂ ಪಡೆಯುತ್ತಾನೆ. ಗ್ರಹಣದ ಮೋಕ್ಷವಾದ ಮೇಲೆ ಭಾಸ್ಕರನನ್ನು ಉದ್ದೇಶಿಸಿ ಜಲತರ್ಪಣವನ್ನು ಕೊಟ್ಟರೆ ಎಲ್ಲ ಕಾರ್ಯಗಳೂ ಸಿದ್ಧಿಯಾಗುತ್ತವೆ, ಸಂದೇಹವಿಲ್ಲ. ॥೩೯-೪೦-೪೧॥

ಕಳಲೆಯ ಚೂರ್ಣದಿಂದ ಕರಗಿರುವ ತುಪ್ಪದೊಡನೆ ಹಸುವಿನ ಕೊಟ್ಟಿಗೆಯಲ್ಲಿ ಹೋಮಮಾಡಿದರೆ ಸಹಸ್ರ ಗೋವುಗಳನ್ನು ಪಡೆಯುತ್ತಾನೆ. ಅಕ್ಕಿಯನ್ನು ಹೋಮ ಮಾಡಿದರೆ ತುಂಬಾ ಹಾಲುಳ್ಳ ಸಹಸ್ರ ಗೋವುಗಳನ್ನು ಪಡೆಯುತ್ತಾನೆ. ॥೪೨॥

ಬತ್ತವನ್ನು ಹೋಮಮಾಡಿದರೆ ಇಷ್ಟವಾದ ಪ್ರಜೆಯನ್ನು ಪಡೆಯುತ್ತಾನೆ.

ಸಾವಿತ್ರ್ಯಾ ಜಲಮಾದಾಯ ಜಪ್ತ್ವಾ ಚಾಷ್ಟಸಹಸ್ರಕಮ್ ।
ಅಭಿಷೇಕಂ ದ್ವಿಜಃ ಕುರ್ಯಾದ್ದುಸ್ಸ್ವಪ್ನಾದಿನಿವೃತ್ತಯೇ ॥೪೪॥

ಕ್ಷೀರಾಹಾರೋ ಜಪೇಲ್ಲಕ್ಷಮಪಮೃತ್ಯುವಿನಾಶನೇ ।
ಘೃತಾಹಾರೋ ಜಪೇದ್ವಿದ್ಯಾಂ ಲಭತೇ ನಾತ್ರ ಸಂಶಯಃ ॥೪೫॥

ನಾಭಿಮಾತ್ರೇ ಜಲೇ ಸ್ಥಿತ್ವಾ ಜಪೇಲ್ಲಕ್ಷಂ ಸಮಾಹಿತಃ ।
ಅಕಣ್ಟಕಂ ಮಹಾರಾಜ್ಯಂ ಲಭತೇ ನಾತ್ರ ಸಂಶಯಃ ॥೪೬॥

ಪಲಾಶಮುಷ್ಟಹೋಮೇನ ಮಹತೀಂ ಶ್ರಿಯಮಶ್ನುತೇ ।
ವೈತಸೀಂ ಜುಹುಯಾದಗ್ನೌ ವೃಷ್ಟಿಂ ಶೀಘ್ರಮವಾಪ್ನುಯಾತ್॥೪೭॥

ಮಧುಹೋಮೇನ ವಿಪ್ರೇನ್ದ್ರ ರಾಜಾನಂ ವಶಮಾಪ್ನುಯಾತ್ ।
ಪಾಯಸಂ ಮಧುನಾ ಹುತ್ವಾ ಸ್ತ್ರೀವಶ್ಯಂ ಲಭತೇಽಚಿರಾತ್ ॥೪೮॥

ಗಾಯತ್ರೀಮಂತ್ರೋಚ್ಚಾರಣಪೂರ್ವಕವಾಗಿ ಜಲವನ್ನು ತೆಗೆದುಕೊಂಡು ಎಂಟು ಸಾವಿರ ಗಾಯತ್ರೀಮಂತ್ರಜಪವನ್ನು ಮಾಡಿ, ಹಾಗೆ ಅಭಿಮಂತ್ರಿತವಾದ ಜಲದಿಂದ ಸ್ನಾನಮಾಡಿದರೆ ದುಸ್ಸ್ವಪ್ನಾದಿ ದೋಷನಿವಾರಣೆಯು ಆಗುತ್ತದೆ. ||೪೪||

ಹಾಲನ್ನು ಮಾತ್ರ ಆಹಾರಮಾಡುತ್ತಾ ಲಕ್ಷಸಲ ಗಾಯತ್ರೀಜಪಮಾಡಿದರೆ ಅಪಮೃತ್ಯುಪರಿಹಾರವಾಗುತ್ತದೆ. ತುಪ್ಪವನ್ನೇ ಆಹಾರಮಾಡುತ್ತಾ ಜಪಿಸಿದರೆ ವಿದ್ಯಾಪ್ರಾಪ್ತಿಯಾಗುತ್ತದೆ. ||೪೫||

ಹೊಕ್ಕುಳುವರೆಗಿನ ನೀರಿನಲ್ಲಿ ನಿಂತು ಲಕ್ಷ ಗಾಯತ್ರೀಜಪಮಾಡಿದರೆ ನಿಷ್ಕಂಟಕವಾಗಿ ಮಹಾರಾಜ್ಯವನ್ನು ಪಡೆಯುತ್ತಾನೆ, ಸಂದೇಹವಿಲ್ಲವು. ||೪೬||

ಮುತ್ತುಗದ ಸಮಿತ್ತಿನಿಂದ ಎಂಟು ಹೋಮಮಾಡಿದರೆ ತುಂಬ ಐಶ್ವರ್ಯವನ್ನು ಪಡೆಯುತ್ತಾನೆ.

ಜೊಂಡುಹುಲ್ಲನ್ನು ಹೋಮಮಾಡುವುದರಿಂದ ಜಾಗ್ರತೆಯಾಗಿ ಮಳೆಯಾಗುತ್ತದೆ. ಜೇನುತುಪ್ಪವನ್ನು ಹೋಮಮಾಡುವುದರಿಂದ ರಾಜನು ವಶನಾಗುತ್ತಾನೆ. ||೪೭||

ಜೇನುತುಪ್ಪದೊಡನೆ ಪಾಯಸವನ್ನು ಹೋಮಮಾಡಿದರೆ ಸ್ತ್ರೀಯು ವಶಳಾಗುತ್ತಾಳೆ. ಬರೀ ತುಪ್ಪವನ್ನು ಹೋಮಮಾಡುವುದರಿಂದ ಎಲ್ಲ ಇಷ್ಟಗಳನ್ನೂ ಹೋತೃವು ಪಡೆಯುತ್ತಾನೆ. ||೪೮||

ಕೇವಲಂ ಘೃತಹೋಮೇನ ಸರ್ವಾನ್ಕಾಮಾನವಾಪ್ನುಯಾತ್ ।
ಅನ್ನಸ್ಯ ಹೋಮೇ ತಚ್ಚಾನ್ನಂ ಪ್ರಾಪ್ನುಯಾದಚಿರೇಣ ತು ॥೪೯॥

ಪಞ್ಚಗವ್ಯಾಶನೋ ಲಕ್ಷಂ ಜಪ್ತ್ವಾ ಜಾತಿಸ್ಮರೋ ಭವೇತ್ ।
ಜಾನುಮಾತ್ರೇ ಜಲೇ ಸ್ಥಿತ್ವಾ ಜಪೇತ್ಪ್ರತ್ಯರ್ಥಿದಿಙ್ಮುಖಃ ॥೫೦॥

ಯುದ್ಧೇ ವಿಜಯಮಾಪ್ನೋತಿ ಸಹಸ್ರಂ ಕ್ರೋಧಸಂಯುತಃ ।
ಅರ್ಕಸ್ಯ ಸಮಿಧೋ ಹುತ್ವಾ ತೀಕ್ಷ್ಣತೈಲೇನ ಸಾದರಮ್ ॥೫೧॥

ಸಪ್ತಾಹಾನ್ಮಾರಯೇಚ್ಛತ್ರುನ್ಮೃತೇ ವಿಪ್ರಂ ನ ಸಂಶಯಃ ।
ಶತ್ರೋಃ ಪ್ರತಿಕೃತಿಂ ಭೂಮಾವಾಲಿಖ್ಯಾಖ್ಯಾಂ ಚ ತದ್ಧೃದಿ ॥೫೨॥

ತಮಾಕ್ರಮ್ಯ ತು ಪಾದೇನ ಜಪೇಚ್ಛತ್ರುರ್ವಿನಶ್ಯತಿ ।
ಸಾವಿತ್ರೀ ಪ್ರತಿಲೋಮಾ ಸ್ಯಾದಾಭಿಚಾರಿಕಕರ್ಮಸು ॥೫೩॥
ಮಾರಣೇ ವರ್ಣಶಶ್ಶತ್ರೋಃ ಬ್ರಹ್ಮಾಸ್ತ್ರಂ ಪ್ರತಿಲೋಮತಃ ।

ಅನ್ನದಿಂದ ಹೋಮಮಾಡಿದರೆ ಅಂಥ ಅನ್ನವು ದೊರೆಯುತ್ತದೆ. ಪಂಚಗವ್ಯಗಳನ್ನು ಸೇವಿಸುತ್ತಾ ಲಕ್ಷ ಜಪಮಾಡಿದರೆ ಪೂರ್ವಜನ್ಮಗಳ ಜ್ಞಾಪಕವು ಉಂಟಾಗುತ್ತದೆ. ||೪೯||

ಮಂಡಿಯುದ್ದ ಆಳದ ನೀರಿನಲ್ಲಿ ನಿಂತು ಶತ್ರುಗಳಿರುವ ದಿಕ್ಕಿಗೆ ಎದುರಾಗಿ ಕೋಪಯುಕ್ತನಾಗಿ ಸಾವಿರ ಗಾಯತ್ರೀಜಪವನ್ನು ಮಾಡಿದರೆ ಯುದ್ಧದಲ್ಲಿ ಜಯವನ್ನು ಪಡೆಯುತ್ತಾನೆ. ||೫೦||

ಕಾದ ಎಣ್ಣೆಯೊಡನೆ ಎಕ್ಕದ ಸಮಿತ್ತುಗಳನ್ನು ಹೋಮಮಾಡಿದರೆ ಏಳು ದಿನಗಳಲ್ಲಿಯೇ ಶತ್ರುಗಳು ಸಾಯುವರು. ಬ್ರಾಹ್ಮಣರಿಗೆ (ಎಂದರೆ ಶತ್ರುವು ಬ್ರಾಹ್ಮಣನಾಗಿದ್ದರೆ) ಇದು ಅನ್ವಯಿಸುವುದಿಲ್ಲ. ಇದರಲ್ಲಿ ಸಂಶಯವಿಲ್ಲವು. ||೫೧||

ಗಾಯತ್ರೀಮಂತ್ರವನ್ನು ಹಿಂದುಮುಂದಾಗಿ ಜಪಿಸುತ್ತಾ ಮಾಟ ಮುಂತಾದ ಕರ್ಮಗಳಲ್ಲಿ ಉಪಯೋಗಿಸಬೇಕು. ಒಂದೊಂದು ವರ್ಣವಾಗಿ ಜಪಿಸಿ ಹೋಮ ಮಾಡಿದರೆ ಶತ್ರುವಿನ ಮರಣವಾಗುತ್ತದೆ. ಹಿಂದುಮುಂದಾಗಿ ಅದೇ ರೀತಿಯಲ್ಲಿ ಜಪಿಸುತ್ತಿದ್ದರೆ ಅದೇ ಬ್ರಹ್ಮಾಸ್ತ್ರವಾಗುತ್ತದೆ. ||೫೩||

ಗುರೂಪದೇಶತೋ ಜ್ಞೇಯಮನರ್ಥಕರಮನ್ಯಥಾ ॥೫೪॥

ಶಾನ್ತಯೇ ಜುಹುಯಾದಗ್ನೌ ಘೃತೇನ ಪಯಸಾऽಪಿ ವಾ ।
ಪಞ್ಚಗವ್ಯೇನ ವಾ ಹುತ್ವಾ ತಿಲೈರ್ವಾ ಶಾನ್ತಿಮಾಪ್ನುಯಾತ್ ॥೫೫॥

ಆಮ್ರಪರ್ಣಸ್ಯ ಹೋಮೇನ ಸರ್ವಜ್ವರವಿನಾಶನಮ್ ।
ಉದುಮ್ಬರಭವಾಶ್ವತ್ಥೈಗೋರ್ಗಜಾಶ್ವಾಮಯಕ್ಷಯಃ ॥೫೬॥

ಪಯಸಾऽऽಜ್ಯೇನ ವಾ ಹುತ್ವಾ ಶಾನ್ತಿಸ್ಸರ್ವಚತುಷ್ಪದಾಮ್ ।
ಶಾನ್ತಯೇ ಸರ್ವದೋಷಾಣಾಂ ಜಾನುಮಾತ್ರೇ ಜಲೇ ಜಪೇತ್ ॥೫೭॥

ಅಭಿಮನ್ತ್ರ್ಯ ಸಿತಂ ಭಸ್ಮ ನ್ಯಸೇದ್ಭೂತಾದಿಶಾನ್ತಯೇ ।
ಬಹುನೋಕ್ತೇನ ಕಿಂ ವಿಪ್ರಾಃ ಜಪೇನಾಸ್ಯಾಶ್ಚ ಹೋಮತಃ ॥೫೮॥
ಅಭೀಷ್ಟಂ ಸರ್ವಮಾಪ್ನೋತಿ ನಾತ್ರ ಸಂದೇಹಕಾರಣಮ್ ।

ಇವೆಲ್ಲವನ್ನೂ ಗುರುಗಳಿಂದ ಉಪದೇಶಮೂಲಕ ತಿಳಿಯಬೇಕು. ಹಾಗೆ ಮಾಡದೆ ಸ್ವತಂತ್ರವಾಗಿ ಪ್ರಯೋಗಿಸಿದರೆ ಹಾನಿಕರವಾಗುತ್ತದೆ. ॥೫೪॥

ಅಗ್ನಿಯಲ್ಲಿ ತುಪ್ಪದಿಂದಾಗಲಿ ಹಾಲಿನಿಂದಾಗಲಿ ಹೋಮಮಾಡಿದರೆ ಶಾಂತಿಯುಂಟಾಗುತ್ತದೆ. ಪಂಚಗವ್ಯಗಳಿಂದಾಗಲಿ ಎಳ್ಳಿನಿಂದಾಗಲಿ ಹೋಮ ಮಾಡಿದರೂ ಶಾಂತಿಯನ್ನು ಪಡೆಯುತ್ತಾನೆ. ॥೫೫॥

ಮಾವಿನ ಎಲೆಯನ್ನು ಹೋಮಮಾಡಿದರೆ ಎಲ್ಲ ಜ್ವರವೂ ನಾಶವಾಗುವುದು.

ಅತ್ತಿ, ಬನ್ನಿ, ಅರಳಿ, ಇವುಗಳ ಸಮಿತ್ತುಗಳಿಂದ ಹೋಮಮಾಡಿದರೆ ದನ, ಕುದುರೆ, ಆನೆ, ಇವುಗಳ ರೋಗವು ವಾಸಿಯಾಗುತ್ತದೆ. ಹಾಲಿನಿಂದಾಗಲಿ ತುಪ್ಪದಿಂದಾಗಲಿ ಹೋಮಮಾಡಿದರೆ ಎಲ್ಲ ನಾಗಾಲಿನ ಪ್ರಾಣಿಗಳಿಗೂ ಶಾಂತಿಯುಂಟಾಗುತ್ತದೆ. ॥೫೬॥

ಮಂಡಿಯುದ್ದ ನೀರಿನಲ್ಲಿ ಜಪಮಾಡಿದರೆ ಎಲ್ಲ ದೋಷಗಳೂ ಹೋಗುತ್ತವೆ. ಬೆಳ್ಳಗೆ ಶುದ್ಧವಾದ ಬೂದಿಯನ್ನು ಗಾಯತ್ರೀಮಂತ್ರದಿಂದ ಅಭಿಮಂತ್ರಿಸಿ ಹಾಕಿದರೆ ಭೂತ ಮುಂತಾದವುಗಳು ಶಾಂತವಾಗುತ್ತವೆ. ॥೫೭॥

ಹೆಚ್ಚು ಹೇಳಿ ಏನು? ಈ ಗಾಯತ್ರೀಮಂತ್ರವನ್ನು ಜಪಿಸುವುದರಿಂದಲೂ, ಹೋಮಮಾಡುವುದರಿಂದಲೂ ಎಲ್ಲ ಇಷ್ಟಾರ್ಥವೂ ದೊರೆಯುತ್ತದೆ. ಅಲ್ಲದೆ ॥೫೮॥

ಜ್ಞಾನೇಚ್ಛಾಂ ಚ ಪ್ರಸಾದೇನ ಲಭತೇ ಚ ದ್ವಿಜೋತ್ತಮಃ ॥೫೯॥
ಸಾವಿತ್ರೀಜಪಯಜ್ಞೇನ ಜ್ಞಾನಯಜ್ಞಮವಾಪ್ನುಯಾತ್ ।

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಗಾಯತ್ರೀವಿವರಣಂ ನಾಮ ಷಷ್ಠಾಧ್ಯಾಯಃ

ಪರಶಿವನ ಅನುಗ್ರಹದಿಂದ ಜ್ಞಾನದಲ್ಲಿ ಇಚ್ಛೆಯನ್ನು ಪಡೆಯುತ್ತಾನೆ. ಗಾಯತ್ರೀಜಪವೆಂಬ ಯಜ್ಞಾಚರಣೆಯಿಂದ ಜ್ಞಾನಯಜ್ಞದ ಫಲವುಂಟಾಗುತ್ತದೆ. ||೫೯||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಗಾಯತ್ರೀಮಂತ್ರದ ವಿವರಗಳನ್ನು ತಿಳಿಸುವ
ಆರನೆಯ ಅಧ್ಯಾಯವು ಮುಗಿದುದು

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

॥ ಸಪ್ತಮಾಧ್ಯಾಯಃ ॥

ಏಳನೆಯ ಅಧ್ಯಾಯವು

(ಹಂಸವಿದ್ಯಾವಿವರಣಮ್)

ಆತ್ಮಮನ್ತ್ರಂ ಪ್ರವಕ್ಷ್ಯಾಮಿ ಸಮಾಸೇನ ನ ವಿಸ್ತರಾತ್ ।
ಋಷಿರ್ಬ್ರಹ್ಮಾಸ್ಯ ಗಾಯತ್ರೀ ಛನ್ದ ಆತ್ಮೈವ ದೇವತಾ ॥೧॥

ಗಾಯತ್ರಿಯ ಉಪಾಸನೆಯಿಂದ ಆತ್ಮಜ್ಞಾನೇಚ್ಛೆಯುಂಟಾಗುತ್ತದೆ. ಯಜ್ಞದಾನತಪಃಕರ್ಮಗಳೂ ಉಪಾಸನೆಯೂ ಆತ್ಮಜ್ಞಾನಕ್ಕೇ ಉಪಯೋಗವಾಗುತ್ತವೆಂದು ವಿವರಣಕಾರರ ಮತವು. ವಿವಿದಿಷೆಯಲ್ಲಿ ವಿನಿಯೋಗವೆಂದು ಭಾಮತೀಕಾರರ ಮತವು. ಬ್ರಹ್ಮನಿಗೆ ವೃತ್ತಿವ್ಯಾಪ್ಯತ್ವ ಉಂಟು, ವೃತ್ತಿಸಂಬಂಧ ಉಂಟು, ಫಲವ್ಯಾಪ್ಯತ್ವವಿಲ್ಲ ಎಂದರೆ ಆ ವೃತ್ತಿಯಲ್ಲಿ ಪ್ರತಿಫಲಿತಚೈತನ್ಯತಾದಾತ್ಮ್ಯ ವಿಲ್ಲ. ಸ್ವಪ್ರಕಾಶವಾದುದರಿಂದ ವೃತ್ತಿಪ್ರತಿಫಲನವು ಅನವಶ್ಯಕವೆಂತ ವಿವರಣಮತವು. ವೃತ್ತಿವಿಷಯತ್ವವೂ ಇಲ್ಲವೆಂದು ಭಾಮಿತೀಕಾರರ ಮತ. ಕರ್ಮಾನುಷ್ಠಾನ ಉಪಾಸನೆಗಳು ಕೆಲಸಕ್ಕೆ ಶಿಫಾರಸುಮಾಡುವವರ ಹಾಗೆ ಎರಡು ಬಗೆಯವಾಗಿವೆ. ವಿವಿದಿಷೆಯಿಂದ ವೇದನಾ ಉಂಟಾಗುತ್ತದೆ. ಆದ್ದರಿಂದ ಅಂಥ ಜ್ಞಾನಕ್ಕೆ ಸಾಧನವಾದ ಆತ್ಮಮಂತ್ರವನ್ನು ಅತಿಯಾಗಿ ವಿಸ್ತರಿಸದೆ ಸಂಕ್ಷೇಪವಾಗಿ ಹೇಳುತ್ತಾರೆ. ಆತ್ಮ ಮಂತ್ರಕ್ಕೆ ಬ್ರಹ್ಮನೇ ಋಷಿಯು, ಗಾಯತ್ರಿಯೇ ಛಂದಸ್ಸು, ಆತ್ಮನೇ ದೇವತೆಯು. ಜೀವನಿಗೆ ಜಾಗ್ರದಾದಿ ಅವಸ್ಥೆಗಳಿಗೆ ಸಾಕ್ಷಿಯಾಗಿರುವ ಆತ್ಮನು ಪರಮಾತ್ಮ ಸ್ವರೂಪನೆಂದು ತಿಳಿಸುವುದರಿಂದ ಈ ಮಂತ್ರವು ಜೀವನಿಗೆ ರಕ್ಷಕವು. "ಮನನಾತ್ ತ್ರಾಯತ ಇತಿ ಮನ್ತ್ರಃ" ಎಂದು ವ್ಯುತ್ಪತ್ತಿಯು. ॥೧॥

ಶಾನ್ತಾನ್ತಂ ಶಕ್ತಿರಸ್ಯೋಕ್ತಾ ತದನ್ತಂ ಬೀಜಮುಚ್ಯತೇ ।
ವಿದ್ಯಾಶಕ್ತಿರ್ಭವೇದ್ಬೀಜಂ ಶಿವ ಏವ ನ ಚಾನ್ಯಥಾ ॥೨॥

ತೇನಾಯಂ ಪರಮೋ ಮನ್ತ್ರಃ ಶಿವಶಕ್ತ್ಯಾತ್ಮಕಃ ಸ್ಮೃತಃ ।
ಏತದ್ಬುದ್ಧ್ವಾ ಜಪೇನ್ಮನ್ತ್ರಂ ಬೀಜಶಕ್ತ್ಯಾತ್ಮನಾ ಬುಧಃ ॥೩॥

ಧ್ಯಾಯೇತ್ಸಾಮ್ಬಂ ಮಹಾದೇವಂ ಸಂಸಾರಾಮಯಭೇಷಜಮ್ ।
ಯಸ್ತು ದ್ವಾದಶಸಾಹಸ್ರಮಿಮಂ ಜಪತಿ ನಿತ್ಯಶಃ ॥೪॥

ತಸ್ಯ ಸರ್ವಾಣಿ ಪಾಪಾನಿ ವಿನಶ್ಯನ್ತಿ ನ ಸಂಶಯಃ ।
ಅಥವಾ ಪ್ರಾಣಸಂಚಾರಃ ಸಕಾರಃ ಪರಿಕೀರ್ತಿತಃ ॥೫॥
ಹಕಾರೋಽಪಾನಸಂಚಾರಃ ದೇಹೇ ದೇಹವತಾಂ ಸದಾ ।

ಶಕಾರದ ಮುಂದಿನ ಷಕಾರಕ್ಕೆ ಮುಂದಿರುವ ಸಕಾರವೇ ಈ ಆತ್ಮಮಂತ್ರಕ್ಕೆ ಶಕ್ತಿಯು ; ಆ ಸಕಾರಕ್ಕೆ ಮುಂದಿರುವ ಹಕಾರವೇ ಬೀಜವು ; ಪರಶಿವಸ್ವರೂಪ ಸಂವಿದ್ರೂಪಿಯಾದುದೇ ಶಕ್ತಿಯು ; ನಿಷ್ಕಲಪರಶಿವಸ್ವರೂಪವೇ ಬೀಜವು. ಆದುದರಿಂದ ಶಿವಶಕ್ತಿ ಸ್ವರೂಪವಾದುದು ಈ ಮಂತ್ರವು. ಸೋಽಹಂ ಎಂಬುದೇ ಮಂತ್ರವು. ಇದಕ್ಕೆ ಅಜಪಾಮಂತ್ರವೆಂದೂ ಹೆಸರಿದೆ. ||೨||

ಆದುದರಿಂದ ಈ ಗಾಯತ್ರೀಮಂತ್ರವು ಶಿವಶಕ್ತ್ಯಾತ್ಮಕವಾದುದೆಂದು ಹೇಳಿದೆ. ಹೀಗೆ ತಿಳಿವಳಿಕೆಯಿಂದ ಈ ಮಂತ್ರವನ್ನು ಬೀಜಶಕ್ತಿಸ್ವರೂಪದಿಂದ ಕೂಡಿ ಜಪಮಾಡಬೇಕು. ಜಪಕಾಲದಲ್ಲೇ ಸಂಸಾರವೆಂಬ ರೋಗಕ್ಕೆ ವೈದ್ಯಸ್ವರೂಪನಾದ ಭವರೋಗವೈದ್ಯನಾದ ಅಂಬಾಸಹಿತನಾದ ಮಹಾದೇವನನ್ನು ಧ್ಯಾನಿಸಬೇಕು. ||೩||

ಈ ಮಂತ್ರವನ್ನು ಯಾರು ಪ್ರತಿದಿನವೂ ಹನ್ನೆರಡು ಸಾವಿರ ಸಲ ಜಪಿಸುತ್ತಾರೋ ಅವರ ಎಲ್ಲ ಪಾಪಗಳೂ ನಾಶವಾಗುತ್ತವೆ. ಸಂದೇಹವಿಲ್ಲವು. ||೪||

ಹೀಗೆ ಮಂದಾಧಿಕಾರಿಗೆ ವರ್ಣೋಚ್ಚಾರಣರೂಪವಾದ ಜಪವನ್ನು ಹೇಳಿ, ಅಂಥವನಿಗಿಂತ ಮೇಲಾದ ಸಂಸ್ಕೃತಿಯುಳ್ಳ ಮಧ್ಯಮಾಧಿಕಾರಿಗೆ ಅನುಸಂಧಾನದಲ್ಲಿ ಮತ್ತೊಂದು ಬಗೆಯನ್ನು ಹೇಳುತ್ತಾರೆ. ಅಥವಾ ಸಕಾರವನ್ನು ಪ್ರಾಣವಾಯುಸಂಚಾರವನ್ನಾಗಿಯೂ, ಹಕಾರವನ್ನು ಅಪಾನವಾಯುಸಂಚಾರವನ್ನಾಗಿಯೂ, ಹೀಗೆ ಮನುಷ್ಯರ ಶರೀರದಲ್ಲಿ ಸರ್ವದಾ ಕೆಲಸಮಾಡುತ್ತಿರುವ ಪ್ರಾಣಾಪಾನಸ್ವರೂಪವನ್ನಾಗಿ ಬೀಜಶಕ್ತಿಗಳನ್ನು ಧ್ಯಾನಿಸಬೇಕು. ||೫||

ಏವಂ ಯಸ್ತು ವಿಜಾನಾತಿ ಮನ್ತ್ರಮಾಚಾರ್ಯಪೂರ್ವಕಮ್ ॥೬॥

ಸೋಽಜಪನ್ನಪಿ ಹಂಸಾಖ್ಯಂ ಜಪತ್ಯೇವ ನ ಸಂಶಯಃ ।
ಈದೃಶೀಮಜಪಾವಿದ್ಯಾಮಾಸ್ತಿಕ್ಯಾದ್ಗುರುಭಕ್ತಿತಃ ॥೭॥

ಯೋ ವಿಜಾನಾತಿ ಪಾಪಾನಿ ಬುದ್ಧಿಪೂರ್ವಕೃತಾನಿ ಚ ।
ತಸ್ಯ ನಶ್ಯನ್ತಿ ಸರ್ವಾಣಿ ನಾತ್ರ ಕಾರ್ಯಾ ವಿಚಾರಣಾ ॥೮॥

ಅಥವಾ ಜೀವಮನ್ತ್ರೋಽಯಂ ಜಿವಾತ್ಮಪ್ರತಿಪಾದಕಃ ।
ಅಹಂಶಬ್ದಸ್ಯ ರೂಢತ್ವಾಲ್ಲೋಕೇ ಜೀವಾತ್ಮವಸ್ತುನಿ ॥೯॥

ಶಕ್ತಿಮನ್ತ್ರಸ್ಸಕಾರಾಖ್ಯಃ ಪರಮೇಶ್ವರವಾಚಕಃ ।
ಪ್ರಕೃತಾರ್ಥೇ ಪ್ರಸಿದ್ಧತ್ವಾತ್ಪ್ರಸಿದ್ಧಃ ಪರಮೇಶ್ವರಃ ॥೧೦॥

ಹೀಗೆ ಯಾರು ಗುರೂಪದೇಶಪೂರ್ವಕವಾಗಿ ಈ ಮಂತ್ರವನ್ನು ಪ್ರಾಣಾಪಾನ ವೃತ್ತಿಸ್ವರೂಪವೆಂದು ಅನುಸಂಧಾನಮಾಡುತ್ತಾರೋ ಅಂಥವರು ತಾಲ್ವೋಷ್ಠ ಸಂಯೋಗರೂಪವಾದ ಉಚ್ಚಾರಣವನ್ನು ಮಾಡದಿದ್ದರೂ ಜಪಮಾಡಿದ ಫಲವನ್ನು ಪಡೆಯುತ್ತಾರೆ. ಆದುದರಿಂದಲೇ ಈ ಮಂತ್ರಕ್ಕೆ ಅಜಪಾಮಂತ್ರವೆಂದು ಹೆಸರು॥೬॥

ಗುರೂಪದೇಶದಲ್ಲಿ ನಂಬಿಕೆಯಿಂದಲೂ ಭಕ್ತಿಶ್ರದ್ಧೆಗಳಿಂದಲೂ ಇಂಥ ಈ ಅಜಪಾವಿದ್ಯೆಯನ್ನು ಯಾರು ತಿಳಿಯುತ್ತಾರೋ ಅಂಥವನ ಎಲ್ಲ ಪಾಪಗಳೂ, ಬುದ್ಧಿ ಪೂರ್ವಕವಾದ ಬುದ್ಧಿಪೂರ್ವಕವಲ್ಲದ ಎಲ್ಲ ಪಾಪಗಳೂ, ನಾಶವಾಗುತ್ತವೆ. ಈ ವಿಷಯದಲ್ಲಿ ಸಂದೇಹಪಡಬೇಕಾಗಿಲ್ಲವು. ॥೭-೮॥

ಹೀಗೆ ಮಂದಮಧ್ಯಾಧಿಕಾರಿಗಳಿಗೆ ಜಪಧ್ಯಾನಗಳನ್ನು ಹೇಳಿ ಈಗ ಶ್ರವಣ ಮನನಾದಿಗಳಿಂದ ಸಂಸ್ಕೃತವಾದ ಮನಸ್ಸುಳ್ಳ ಉತ್ತಮಾಧಿಕಾರಿಗೆ ಹಂಸಮಂತ್ರ ವೆಂದು ಧ್ಯಾನಮಾಡಲು ಹೇಳುತ್ತಾರೆ. ಮಂತ್ರದ ಹಂಸಃ ಎಂಬುದರ ಪೂರ್ವ ಭಾಗವು ಜಾಗ್ರದಾದಿ ಅವಸ್ಥೆಗಳಿಗೆ ಸಾಕ್ಷಿಯಾದ ಜೀವರೂಪವಾದುದು. ಆಕಾಶಾದಿ ಜಗತ್ಕಾರಣನೆಂದು ಪ್ರಸಿದ್ಧನಾದ ಈಶ್ವರನನ್ನು ಮಂತ್ರದ ಉತ್ತರಭಾಗವಾದ ಸಃ ಎಂಬುದು ಹೇಳುತ್ತದೆ. ಬೃಹದಾರಣ್ಯಕದಲ್ಲಿ ಪ್ರಾಕೃತವಾಗಿರುವ ಈ ಪ್ರಪಂಚಸೃಷ್ಟಿ ಸ್ಥಿತಿಲಯಕರ್ತೃವೆಂದೂ ಪ್ರಕೃತಪ್ರಸಿದ್ಧನಾದ ಈಶ್ವರನನ್ನು ಹೇಳುತ್ತದೆ. ॥೯-೧೦॥

ಮಹದಾದ್ಯಣುಪರ್ಯನ್ತಂ ಜಗತ್ಸರ್ವಂ ಚರಾಚರಮ್ ।
ಜಾಯತೇ ವರ್ತತೇ ಚೈವ ಲೀಯತೇ ಪರಮೇಶ್ವರೇ ॥೧೧॥

ಸಂಸಾರಿತ್ವೇನ ಭಾತೋಽಹಂ ಸ ಏವ ಪರಮೇಶ್ವರಃ ।
ಸೋಽಹಮೇವ ನ ಸಂದೇಹಃ ಸ್ವಾನುಭೂತಿಪ್ರಮಾಣತಃ ॥೧೨॥

ಮಹತ್, ಅಹಂಕಾರ, ಸೂಕ್ಷ್ಮಪಂಚಭೂತ, ಮನಸ್ಸು, ಪ್ರಾಣ, ಇಂದ್ರಿಯ ಸ್ಥೂಲಭೂತ, ಇದು ಸೃಷ್ಟಿಕ್ರಮವು. ಶುದ್ಧನಾದ ಪರಶಿವನಿಗೆ ಭಾವರೂಪವಾದ ತ್ರಿಗುಣಾತ್ಮಕವಾದ ಅಜ್ಞಾನಸಂಬಂಧದಿಂದ ಈಶ್ವರತ್ವವು ಉಂಟಾಗುತ್ತದೆ. ಆ ಈಶ್ವರನು ಜೀವಕರ್ಮಪ್ರೇರಿತನಾಗಿ ಸೂಕ್ಷ್ಮವಾದ ಅಪಂಚೀಕೃತವಾದ ಪಂಚಮಹಾಭೂತಗಳನ್ನು ಸೃಷ್ಟಿಸಿದನು. ಸತ್ತ್ವಪ್ರಧಾನಗಳಾದ ಪಂಚಭೂತಗಳ ಸಮುದಾಯದಿಂದ ಮನಸ್ಸೂ, ರಜೋಗುಣಪ್ರಧಾನಗಳಾದ ಅವುಗಳಿಂದ ಪ್ರಾಣವೂ, ಸತ್ವಗುಣಪ್ರಧಾನವಾದ ಒಂದೊಂದು ಭೂತದಿಂದ ಒಂದೊಂದು ಜ್ಞಾನೇಂದ್ರಿಯವೂ, ರಜೋಗುಣಪ್ರಧಾನವಾದ ಒಂದೊಂದು ಭೂತದಿಂದ ಪ್ರತ್ಯೇಕವಾಗಿಒಂದೊಂದು ಕರ್ಮೇಂದ್ರಿಯವೂ ಉಂಟಾದುವು; ಅಪಂಚೀಕೃತವಾಗಿದ್ದ ಭೂತಗಳಿಂದ ಸ್ಥೂಲಶರೀರವು ಉಂಟಾಯಿತು. ಹೀಗೆ ಮಹತ್ತಿನಿಂದ ಅಣುಪರ್ಯಂತವಾದ ಚರಾಚರಾತ್ಮಕವಾದ ಬ್ರಹ್ಮಾಂಡವೆಲ್ಲವೂ ಉಂಟಾಯಿತು. ಈ ಬ್ರಹ್ಮಾಂಡವು ಪರಮೇಶ್ವರನಿಂದ ಹುಟ್ಟಿ, ಇದ್ದು, ಅವನಲ್ಲಿಯೇ ಅಡಗುತ್ತದೆ. ॥೧೧॥

ಹೀಗೆ ತತ್, ತ್ವಂ, ಪದಾರ್ಥಗಳನ್ನು ವಿಶದವಾಗಿ ಹೇಳಿ ಈಗ ವಾಕ್ಯಾರ್ಥವನ್ನು ಹೇಳುತ್ತಾರೆ. ಅಜ್ಞಾನದಿಂದ ಸಂಸಾರಿಯು ಹಾಗೆ ತೋರುತ್ತಿರುವ ನಾನು ಸ್ವರೂಪದಲ್ಲಿ ಆ ಪರಮೇಶ್ವರನಾಗಿದೇನೆ. ವ್ಯವಹಾರರೀತಿಯಲ್ಲಿಯೂ ಅವನೇ ನಾನಾಗಿದೇನೆ. ಈ ಅಂಶವೂ ಜ್ಞಾನಿಗಳಿಗೆ ಸ್ವಾನುಭವದಿಂದ ತಿಳಿದುಬರುವುದರಿಂದ ಸಂದೇಹವಿಲ್ಲವು. ಭ್ರಾಂತಿಯಿಂದ ಜೀವಭಾವಾಪನ್ನನಂತೆ ತೋರುತ್ತಿರುವ ಜೀವನಿಗೆ ಪಾರಮಾರ್ಥಿಕವಾದ ಪರಶಿವೈಕ್ಯವೇ ತತ್ತ್ವಮಸಿವಾಕ್ಯಾರ್ಥವು. ಈ ಹಂಸಮಂತ್ರವೇ ಅಜಪಾ ಮಂತ್ರವು. ಈ ಅಭೇದಜ್ಞಾನದಿಂದ ಜೀವನಿಗಿರುವ, "ನಾನು ಬ್ರಹ್ಮನಲ್ಲ, ನನಗಿಂತಲೂ ಎರಡನೆಯ ವಸ್ತುವಿದೆ" ಎಂಬ ಭ್ರಾಂತಿಯು ಹೋಗುತ್ತದೆ. ಹಾಗೆಯೇ ಈಶ್ವರನು ಪರೋಕ್ಷನು ಮತ್ತು ಆತ್ಮನಲ್ಲವು ಎಂಬ ಭ್ರಮವೂ ಹೋಗುತ್ತದೆ. "ಪ್ರತ್ಯಗ್ಬೋಧೋ ಯ ಆಭಾತಿ ಸೋಽದ್ವಯಾನನ್ದ ಲಕ್ಷಣಃ । ಅದ್ವಯಾನನ್ದರೂಪಶ್ಚ ಪ್ರತ್ಯಗ್ಬೋಧೈಕಲಕ್ಷಣಃ । ಇತ್ಥಮನ್ಯೋನ್ಯ ತಾದಾತ್ಮ್ಯಪ್ರತಿಪತ್ತಿರ್ಯದಾ ಭವೇತ್ ।

ಹಂಸಯೋಶ್ಶಬಳಂ ಹಿತ್ವಾ ಪದಯೋಃ ಸ ದ್ವಿತೀಯಯೋಃ ।
ಪೂರ್ಣೋऽಹಮೇವ ಜಾನೀಯಾದ್ಬೋಧಮಾತ್ರಸ್ವಭಾವತಃ ॥೧೩॥

ಶ್ರುತಿರಪ್ಯೇವಮೇವಾಹ ಪರಮಾರ್ಥಪ್ರಕಾಶಿನೀ ।
ಸತ್ಯಸಂಪೂರ್ಣವಿಜ್ಞಾನಸುಖರೂಪೋ ಮಹೇಶ್ವರಃ ॥೧೪॥
ಅಹಂ ಚಾವ್ಯಭಿಚಾರಿತ್ವಾತ್ತತ್ಸ್ವಭಾವೋ ನ ಸಂಶಯಃ ।

ಅಬ್ರಹ್ಮತ್ವಂ ತ್ವಮರ್ಥಸ್ಯ ವ್ಯಾವರ್ತೇತ ತದೈವ ಹಿ । ತದರ್ಥಸ್ಯಚ ಪಾರೋಕ್ಷ್ಯಂ" ಇತಿ ॥೧೨॥

ಅಹಂ ಸಃ ಎಂಬ ಪದಾರ್ಥಗಳಿಗೆ ಪರಸ್ಪರವಾಗಿ ಎರಡನೆಯ ವಸ್ತುವುಳ್ಳದ್ದಾದುದರಿಂದ ಅಭೇದವು ಹೇಗೆ ಕೂಡುತ್ತದೆಂದರೆ, ಅವೆರಡಕ್ಕೂ ವಿರುದ್ಧವಾಗುವ ವಾಚ್ಯಾರ್ಥಗಳನ್ನು ಬಿಟ್ಟು, ಲಕ್ಷಣೆಯಿಂದ ಚೈತನ್ಯಮಾತ್ರರೂಪವಾದ ಅರ್ಥವನ್ನು ಇಟ್ಟುಕೊಂಡು ವಾಸ್ತವವಾಗಿ ನಾನು ಎಂದು ತೋರುತ್ತಿರುವ ಜೀವನು ಸ್ವರೂಪದಲ್ಲಿ ಜಾಗ್ರದಾದ್ಯವಸ್ಥೆಗಳಿಗೆ ಸಾಕ್ಷಿಯಾಗಿರುವ ಚಿನ್ಮಾತ್ರನೂ ಪೂರ್ಣನಾದ ಪರಶಿವನೊಡನೆ ಪರಮಾರ್ಥದಶೆಯಲ್ಲಿ ಅಭಿನ್ನನೆಂಬ ಅನುಭವವೂ ಶ್ರುತಿಸಹಾಯದಿಂದ ಉಂಟಾಗುತ್ತದೆ. ವ್ಯವಹಾರದಶೆಯಲ್ಲಿ ಪೂಜ್ಯಪೂಜಕಭಾವವೂ ಭೇದವೂ ತೋರಿದರೂ, ಪಾರಮಾರ್ಥಿಕವಾಗಿ ಅಭೇದವೆಂದು ತಾತ್ಪರ್ಯವು. ॥೧೩॥

ಶ್ರುತಿಯು ಈ ಅನುಭವವನ್ನೇ ತತ್ತ್ವಮಸಿ, ಅಹಂಬ್ರಹ್ಮಾಸ್ಮಿ, ಮುಂತಾದ ಉಪನಿಷದ್ವಾಕ್ಯಗಳಿಂದ ಸಮರ್ಥಿಸುತ್ತದೆ. ಆದ್ದರಿಂದ ಇದೇ ಪರಮಾರ್ಥವು. ಹಿಂದೆ ಜೀವನಿಗೂ ಈಶ್ವರನಿಗೂ ಅಭೇದವನ್ನು ಹೇಳಿ ಈಗ ಅದನ್ನು ವಿವರಿಸುವುದಕ್ಕಾಗಿ ಈಶ್ವರನ ನಿರುಪಾಧಿಕವಾದ ಸ್ವರೂಪವನ್ನು ಹೇಳುತ್ತಾರೆ.

ಸತ್ಯಪದದಿಂದ ಅನೃತವಸ್ತುವನ್ನೂ, ವಿಜ್ಞಾನಪದದಿಂದ ಜಡತ್ವವನ್ನೂ, ಸುಖಪದದಿಂದ ದುಃಖರೂಪತ್ವವನ್ನೂ, ವ್ಯಾವೃತ್ತಿಮಾಡಿ, ಸಚ್ಚಿದಾನಂದತ್ವದಿಂದ ಉಪಲಕ್ಷಿತಸ್ವರೂಪವೇ ಮಹೇಶ್ವರನ ಲಕ್ಷಣವು. ಆದುದರಿಂದ ಅಖಂಡವಾದ ಬ್ರಹ್ಮವೇ ಉಪಲಕ್ಷಿತಪದಾರ್ಥವು. ಧರ್ಮಸಾಮಾನ್ಯವೂ ಇಲ್ಲದ ಬ್ರಹ್ಮನಲ್ಲಿ ಪ್ರವೃತ್ತಿನಿಮಿತ್ತವಿಲ್ಲದಿರಲು ಸತ್ಯಾದಿಶಬ್ದಗಳ ಪ್ರಯೋಗವು ಏತರಿಂದ? ಎಂದರೆ, ಅನೇಕಪಾತ್ರೆಗಳಲ್ಲಿ ಪ್ರತಿಬಿಂಬಿಸಿರುವ ಕಲ್ಪಿತಚಂದ್ರಗಳಿಂದ ಇದೂ ಚಂದ್ರ, ಇದೂ ಚಂದ್ರ, ಎಂಬ ವ್ಯವಹಾರದ ಹಾಗೆ ಅಗುತ್ತದೆಂದು ಹೇಳಿದೆ. ಜೀವನು ಪ್ರತಿಬಿಂಬ

ಜ್ಞಾತಮಜ್ಞಾತಮಪ್ಯರ್ಥಂ ಸದಾಽಹಂ ವೇದ ಕೇವಲಃ ॥೧೫॥
ಸೋಽರ್ಥೋಽ ಮಾಂ ನ ವಿಜಾನಾತಿ ತತೋಽವಿಚ್ಛಿನ್ನ ಚೇತನಃ ।

ನೆನ್ನುವದು ವಿವರಣಕಾರಮತವು. ಭಾಮತೀಪಕ್ಷದಲ್ಲಿ ಜೀವನಿಗೆ ಅವಿಚ್ಛಿನ್ನತ್ವವನ್ನು ಸಿದ್ಧಾಂತಮಾಡಿದೆ. ಗೃಹಾಕಾಶಘಟಾಕಾಶಗಳು ಒಂದೇ ಆಕಾಶದಲ್ಲಿ ಕಲ್ಪಿತವಾಗಿ ಅವುಗಳಿಂದಲೇ ವ್ಯವಹಾರವೂ ಉಂಟು. ಹೀಗೆ ಪರಶಿವನ ನಿಜಸ್ವರೂಪವನ್ನು ಹೇಳಿ ಜೀವನೂ ಅಂತಹ ಸ್ವರೂಪವುಳ್ಳವನೆಂದು ತಿಳಿಸುವುದಕ್ಕಾಗಿ ಜೀವನೂ ಸತ್ಸ್ವರೂಪ ನೆಂದು ಹೇಳುತ್ತಾರೆ. ಸತ್ ಎಂದರೆ ಮೂರು ಕಾಲಗಳಲ್ಲೂ ಅಬಾಧಿತವಾಗಿರುವುದು. ವ್ಯಾವಹಾರಿಕಾದಿಸತ್ಯಗಳು ಆಯಾ ಕಾಲದಲ್ಲಿ ಮಾತ್ರ ಅಬಾಧಿತವಾದರೂ ಇತರ ಕಾಲದಲ್ಲಿ ಬಾಧಿತಗಳಾಗುತ್ತವೆ. ಆದ್ದರಿಂದ ಸತ್ಸ್ವಭಾವಃ ಎಂದರೆ ತ್ರಿಕಾಲಾಬಾಧಿತ ವಾದ ಪರಮಾರ್ಥಸತ್ಸ್ವರೂಪನೆಂದು ತಾತ್ಪರ್ಯವು. ಜೀವನೂ ಈಶ್ವರನ ಹಾಗೆ ಸತ್ಸ್ವರೂಪನು. ಜಾಗ್ರದಾದ್ಯವಸ್ಥೆಗಳು ಜೀವನಿಗೆ ಸ್ವಾಭಾವಿಕವಲ್ಲವು. ಕೆಲವು ಕಾಲವಿದ್ದು ಮತ್ತೆ ಕೆಲವು ಕಾಲಗಳಲ್ಲಿರುವುದಿಲ್ಲವು. ಆದರೆ ಅವೆಲ್ಲದರಲ್ಲೂ ಸನ್ ಸನ್ ಎಂದು ಸತ್ಸ್ವಭಾವ ಮಾತ್ರ ಅನುಸ್ಯೂತವಾಗಿರುವುದರಿಂದ ಸ್ವರೂಪದಲ್ಲಿ ಜೀವನೂ ಸತ್ಸ್ವಭಾವನು, ಎಂದರೆ ಪರಮಾರ್ಥಸತ್ಸ್ವರೂಪನು. ಆ ಮೂರು ಅವಸ್ಥೆ ಗಳಲ್ಲಿ ಚೈತನ್ಯರೂಪನಾಗಿ ಸಾಕ್ಷಿಯಾಗಿರುವುದರಿಂದ ಜೀವನು ಅವಸ್ಥಾತ್ರಯದಲ್ಲಿ ಸೇರದೆ ಅದನ್ನು ನೋಡುವವನಾಗಿದಾನೆ. ಆದ್ದರಿಂದ ಜೀವನೂ ಪರಶಿವನ ಹಾಗೆ ಶುದ್ಧಚೈತನ್ಯರೂಪನೆಂಬುದರಲ್ಲಿ ಸಂದೇಹವಿಲ್ಲವು. ॥೧೪॥

ಸರ್ವಕಾಲದಲ್ಲೂ ಇರುವುದರಿಂದ ಅಹಂಪದಾರ್ಥವು ಸತ್ಪದಾರ್ಥವೆಂಬು ದನ್ನು ನಿರ್ಧರಿಸಿ, ಈಗ ಆ ಅಹಂಪದಾರ್ಥವು ಚಿದ್ರೂಪವಾದುದೆಂಬುದನ್ನು ವಿವರಿಸು ತ್ತಾರೆ. ಜ್ಞಾತಂ ಎಂಬ ಘಟಾದಿವೃತ್ತಿಗೆ ವಿಷಯವಾದ ಅರ್ಥವನ್ನೂ, ಅಜ್ಞಾತಂ, ನನಗೆ ತಿಳಿಯದು. ಎಂದು ಹೇಳುವ ಅಜ್ಞಾನಕ್ಕೂ ವಿಷಯವಾದ ಪದಾರ್ಥವನ್ನೂ, ಕೇವಲ ಶುದ್ಧಚಿದ್ರೂಪನಾದ ಸಾಕ್ಷಿಸ್ವರೂಪನಾದ ನಾನು ಸರ್ವಕಾಲದಲ್ಲೂ ತಿಳಿಯುತ್ತಿರು ತ್ತೇನೆ. ಕಾದ ಗುಂಡು ಸುಡುತ್ತದೆ, ಎನ್ನುವಾಗ ಸುಡುವುದು ಅಗ್ನಿಯೇ ಹೇಗೋ, ಹಾಗೆ ಜ್ಞಾನಕ್ಕೇ ಪ್ರಕಾಶಕತ್ವವು ಇದೆ. ಕಾದ ಗುಂಡಿನ ಹಾಗೆ ಚಿದಚಿದ್ಗ್ರಂಥಿರೂಪ ವಾದ ಅಹಂಪದಾರ್ಥದಲ್ಲಿ ಅಚಿತ್ತಾದ ಅಂತಃಕರಣಕ್ಕೆ ಪ್ರಕಾಶಕತ್ವವಿಲ್ಲವು. ಪ್ರಾಪ್ತಾ ಪ್ರಾಪ್ತವಿವೇಕನ್ಯಾಯದಿಂದ ಚಿದ್ರೂಪನಾದ ಆತ್ಮನೇ ಪ್ರಕಾಶವು. ಆ ಘಟಾದಿ ಪದಾರ್ಥವು ಅಚಿತ್ಪದಾರ್ಥವಾದುದರಿಂದ ತಿಳಿಯಲಾರದು. ॥೧೫॥

ಚಿತೋಽನ್ಯಶೇಷತಾಽಭಾವಾಚ್ಚಿತೋಽಚಿಚ್ಛೇಷತಾ ನ ಹಿ ॥೧೬॥
ಶರಾವಾದಿಪದಾರ್ಥಾನಾಂ ಚೇತನತ್ವಪ್ರಸಕ್ತಿತಃ ।
ಚಿಚ್ಛೇಷತ್ವಂ ಚ ನಾಸ್ತ್ಯೇವ ಚಿತಶ್ಚಿನ್ನ ಹಿ ಭಿದ್ಯತೇ ॥೧೭॥
ಭಿದ್ಯತೇ ಚೇದಚಿಚ್ಚಿತ್ಸ್ಯಾಚ್ಚಿತೋಽಚಿತ್ತ್ವಂ ವಿರುಧ್ಯತೇ ।
ತಥಾ ಚಿಚ್ಚೇತನಸ್ಯಾಪಿ ನ ಶೇಷತ್ವಮವಾಪ್ನುಯಾತ್ ॥೧೮॥
ಶೇಷತ್ವೇ ಸತಿ ತತ್ಸಿದ್ಧಿಃ ತತ್ಸಿದ್ಧೌ ಶೇಷತಾ ಚಿತಃ ।

ನೈಯಾಯಿಕರು ಆತ್ಮನನ್ನು ಜ್ಞಾನಾಶ್ರಯವಾದ ದ್ರವ್ಯವೆನ್ನುತ್ತಾರೆ. ಆ ಮತದಲ್ಲಿ ಆತ್ಮನು ಜಡದ್ರವ್ಯವು. ಅವನ ಧರ್ಮವಾದ ಜ್ಞಾನಕ್ಕೇ ಪ್ರಕಾಶಕತ್ವವು. ಜ್ಞಾನವು ಜಡವಾದ ಆತ್ಮನಿಗೆ ಶೇಷ (ಗುಣ) ವಾಗಲಾರದು. (ಹಾಗೆ ಅಚಿತ್ ಎಂದರೆ ಜಡವು, ಚಿತ್ ಎಂದರೆ ಜ್ಞಾನವು. ಚೇತನವೆಂದರೆ ಜ್ಞಾನಾಶ್ರಯವು.) ಹಾಗಿಲ್ಲದಿದ್ದರೆ ಶರಾವಾದಿ ಜಡವಸ್ತುಗಳಿಗೂ ಚೇತನತ್ವವ್ಯವಹಾರವು, ಜಡವಾದುದ ರಿಂದ, ಗುಣಾಶ್ರಯವಾದುದರಿಂದ, ಶರಾವಾದಿಗಳು ಚೇತನಗಳು ಎಂದು ವ್ಯವಹಾರ ಉಂಟಾಗಬೇಕಾದೀತು. ಜ್ಞಾನಾಶ್ರಯವಾದ ಆತ್ಮನಿಗೆ ಜಡತ್ವವನ್ನು ಒಪ್ಪುವುದಾದರೆ ಜಡವಾದ ಶರಾವಕ್ಕೂ ಚೇತನತ್ವವು ಬರಲಿ. ಎಂದು ಆಪತ್ತಿಯುಂಟಾಗುತ್ತದೆ.॥೧೬॥

ಚಿತ್ಪದಾರ್ಥಕ್ಕೆ ಜಡವಾದ ಅಚಿತ್ಪದಾರ್ಥಕ್ಕೆ ಶೇಷ (ಗುಣ) ವಾಗಿರುವಿಕೆ ಯನ್ನು ಯುಕ್ತಿವಿರುದ್ಧವಾದುದೆಂದು ತೋರಿಸಿ, ಈಗ ಒಂದು ಚಿತ್ಪದಾರ್ಥಕ್ಕೆ ಇನ್ನೊಂದು ಚಿತ್ಪದಾರ್ಥವನ್ನು ಕುರಿತೂ ಶೇಷ(ಗುಣ)ಭಾವವಿಲ್ಲವೆಂದು ತೋರಿಸು ತ್ತಾರೆ. ಚಿತ್ತಿಗೆ ಚಿದಂತರಶೇಷ(ಗುಣ)ತ್ವವೂ ಸಂಭವಿಸಲಾರದು. ಏಕೆಂದರೆ ಒಂದು ಚಿತ್ ಇನ್ನೊಂದು ಚಿತ್ತಿನಿಂದ ಪಾರಮಾರ್ಥಿಕವಾಗಿ ಬೇರೆಯಾದುದಲ್ಲವು. ಹಾಗೆ ಭೇದವಿದೆ ಎಂದರೆ ಚಿತ್ ಅಚಿತ್ ಆಗಬೇಕಾಗುವುದು. ಏಕೆಂದರೆ, "ಚಿತ್ ಅಚಿತ್ ಚಿದ್ಭಿನ್ನತ್ವಾತ್ ಘಟವತ್." ಎಂದು ಅನುಮಾನಮಾಡಬಹುದಾಗುತ್ತದೆ. ಆಗಲಿ ಎನ್ನುವ ಹಾಗೂ ಇಲ್ಲವು. ಚಿತ್ ಅಚಿತ್ತಿಗಿಂತ ಬೇರೆಯಾದುದೆಂದು ಅನುಭವವಿದೆ. ಅದಕ್ಕೆ ವಿರೋಧವಾಗುವುದರಿಂದ ಈ ಅನುಮಾನವೂ ಕಾರ್ಯಕಾರಿಯಾಗಲಾರದು. ಭೇದವೆಲ್ಲವೂ ಔಪಾಧಿಕವಾದ ತೋರಿಕೆ ಮಾತ್ರವಾಗಿದೆ. ॥೧೭॥

ಚಿತ್ ಅಚಿತ್ತಿಗೆ ಶೇಷವೇ? ಚಿದಂತರಕ್ಕೆ ಶೇಷವೇ ? ಚೇತನಾಂತರಕ್ಕೆ ಶೇಷವೇ? ಎಂದು ಮೂರು ವಿಧವಾಗಿ ವಿಕಲ್ಪಮಾಡಿ ಕ್ರಮವಾಗಿ ಮೊದಲಿನ ಎರಡು ಪಕ್ಷಗಳನ್ನೂ ದೂಷಿಸಿ ಈಗ ಮೂರನೆಯ ಪಕ್ಷವನ್ನು ಖಂಡಿಸುತ್ತಾರೆ.

ಅತೋಽನ್ಯಶೇಷತಾ ಲೋಕೇ ಚಿತೋ ಭ್ರಾನ್ತ್ಯಾ ಪ್ರತೀಯತೇ ॥೧೯॥
ಸುಖಸ್ವರೂಪ ಏವಾಹಂ ಸದಾ ಪ್ರೇಮಾಸ್ಪದತ್ವತಃ ।
ಅಸುಖಸ್ಯ ನ ಹಿ ಪ್ರೇಮಾಸ್ಪದತ್ವಂ ಪರಿದೃಶ್ಯತೇ ॥೨೦॥

ಚಿತ್ ಚೇತನಕ್ಕೂ, ಜ್ಞಾನಾಶ್ರಯಕ್ಕೂ, ಶೇಷವಾಗಲಾರದು: ಏಕೆಂದರೆ, ಚಿತ್ ಯಾರಿಗೆ ಶೇಷವೋ ಅವನು ಚೇತನನು. ಚೇತನನಿಗೆ ಯಾವುದು ಶೇಷವೋ ಅದು ಚಿತ್, ಎಂದು ಅನ್ಯೋನ್ಯಾಶ್ರಯದೋಷವು ಬರುವುದು. ಆದುದರಿಂದ ಚಿತ್ತಿಗೆ ಅನ್ಯಶೇಷತ್ವವನ್ನು ನಿರೂಪಿಸಲಾಗುವುದಿಲ್ಲವಾದುದರಿಂದ ಕೇವಲ ಚಿದ್ರೂಪನೇ ಅಹಂಪದಾರ್ಥವೆಂದು ಸಿದ್ಧವಾಗುತ್ತದೆ. ||೧೮||

ಆದುದರಿಂದ ಅಹಂ ಜಾನಾಮಿ, ನಾನು ತಿಳಿಯುತ್ತೇನೆ ಎಂಬಲ್ಲಿ ಅಹಂ ಪದಾರ್ಥವು ಜ್ಞಾನಾಶ್ರಯವೆಂದು ತೋರಿದರೂ ಅದು ತೋರಿಕೆಮಾತ್ರವಾಗಿದೆ ಮತ್ತು ಭ್ರಾಂತಿಯಿಂದ ತೋರುತ್ತದೆ. ಚಿತ್ ಪರಪ್ರಕಾಶವೇ ? ಸ್ವಪ್ರಕಾಶವೇ ? ಎಂದು ವಿಮರ್ಶಿಸಿದರೆ, ಮೊದಲನೆಯ ಪಕ್ಷದಲ್ಲಿ ಅನವಸ್ಥಾದೋಷವೂ, ಎರಡನೆಯ ಪಕ್ಷದಲ್ಲಿ ಕರ್ಮತ್ವಕರ್ತೃತ್ವಗಳೆರಡೂ ಒಂದಕ್ಕೆ ಬರುವುದೂ, ವಿರುದ್ಧವಾದುದು. ಆದುದರಿಂದ ಈ ಪ್ರತೀತಿಯನ್ನು ಭ್ರಾಂತಿ ಎಂದು ತಿಳಿಯಬೇಕು. ಸರ್ಪವು ವಾಸ್ತವ ವಲ್ಲವಾದುದರಿಂದ ಅದರ ತೋರುವಿಕೆಯೂ ಭ್ರಾಂತಿ ಎಂದು ನಿಶ್ಚಯಮಾಡುವ ಹಾಗೆ ಇಲ್ಲೂ ತಿಳಿಯಬೇಕು. ||೧೯||

ಹೀಗೆ ಜೀವನಿಗೆ ಸದ್ರೂಪತ್ವವನ್ನೂ ಚಿದ್ರೂಪತ್ವವನ್ನೂ ಹೇಳಿ ಈಗ ಆನಂದ ರೂಪತ್ವವನ್ನು ಹೇಳುತ್ತಾರೆ. ಭೂತಭವಿಷ್ಯದ್ವರ್ತಮಾನರೂಪಕಾಲತ್ರಯದಲ್ಲೂ ನಿರುಪಾಧಿಕವಾದ ಅತ್ಯಂತಪ್ರೀತಿಗೆ ಪಾತ್ರವಾದ ಅಹಂಪದಾರ್ಥವು ಸುಖರೂಪವಾದುದು. ಸುಖಸ್ವರೂಪವಲ್ಲದ ಪದಾರ್ಥಕ್ಕೆ ಯಾವಾಗಲೂ ನಿರುಪಾಧಿಕವಾದ ಪರಮ ಪ್ರೀತಿಪಾತ್ರತ್ವವು ಕಾಣುವುದಿಲ್ಲ. ಯಾವಾಗಲೂ ನನಗೆ ಇಲ್ಲದಿರುವಿಕೆಯು ಉಂಟಾಗ ದಿರಲಿ ಎಂಬ ಇಚ್ಛೆಗೆ ವಿಷಯವಾಗಿರುವುದರಿಂದ ಆತ್ಮಪದಾರ್ಥವು ನಿರುಪಾಧಿಕವಾದ ಪ್ರೀತಿಪಾತ್ರವು. ಪುತ್ರಭಾರ್ಯಾದಿಗಳು ತನಗಾಗಿಯೂ, ತನ್ನ ಆನೃಣ್ಯಕ್ಕಾಗಿಯೂ ಬೇಕಾದವರಾಗುವುದರಿಂದ ಅವರೆಲ್ಲರಿಗಿಂತಲೂ ಆತ್ಮನುಹೆಚ್ಚಿನ ಪ್ರೀತಿಗೆ ಪಾತ್ರನು. ಎಲ್ಲ ಸಾಧನಗಳೂ ಸುಖಕ್ಕಾಗಿ ಬೇಕು. ಆದರೆ ಸುಖವು ಯಾವುದಕ್ಕೂ ಸಾಧನವಲ್ಲವು. ಆದುದರಿಂದ ನಿರುಪಾಧಿಕಪ್ರೀತಿವಿಷಯವು. ಹಾಗೆಯೇ ಎಲ್ಲ ಇತರ ಪದಾರ್ಥಗಳೂ ಆತ್ಮನಿಗೋಸ್ಕರ ಬೇಕಾಗಿವೆ. ಆದರೆ ಆತ್ಮನು ಇನ್ನೊಂದು ಪದಾರ್ಥಕ್ಕಾಗಿ ಬೇಕಾದು ದಲ್ಲವು. ಆದುದರಿಂದ ಅಹಂಪದಾರ್ಥವು ಸುಖರೂಪವು. ||೨೦||

ನಾಹಮನ್ಯಸ್ಯ ಶೇಷೋ ಹಿ ಶೇಷೀ ಸರ್ವಸ್ಯ ಸರ್ವದಾ ।
ಪೂರ್ಣೋಽಹಂ ಸರ್ವಸಾಕ್ಷಿತ್ವಾತ್ಸರ್ವದಾ ಪರಮಾರ್ಥತಃ ॥೨೧॥

ಅಪೂರ್ಣೋ ಯುಗಪತ್ಸರ್ವಂ ನ ವಿಜಾನಾತಿ ಕಶ್ಚನ ।
ಸಂಸಾರವರ್ಜಿತಸ್ಸಾಕ್ಷಾತ್ಸರ್ವದಾ ಪರಮೇಶ್ವರಃ ॥೨೨॥

ಅಹಂ ಸಂಸಾರಸಾಕ್ಷಿತ್ವಾತ್ಸದಾ ಸಂಸಾರವರ್ಜಿತಃ ।
ಏವಂ ವಾಕ್ಯಾನುಸಾರಿಣ್ಯಾ ಯುಕ್ತ್ಯಾಽಽಚಾರ್ಯಪುರಸ್ಸರಮ್ ॥೨೩॥
ಅಹಂ ಸ ಸೋಽಹಮೇವೇತಿ ವಿಜಾನೀಯಾದ್ವಿಚಕ್ಷಣಃ ।

ನಾನು ಇನ್ನೊಂದು ಪದಾರ್ಥಕ್ಕೆ ಅಂಗವಾದವನಲ್ಲವು. ನನಗಾಗಿಯೇ ಇತರ ಎಲ್ಲ ವಸ್ತುಗಳೂ ಭಾರ್ಯಾಪುತ್ರವಿತ್ತಾದಿಗಳೂ ಇವೆಯಾದುದರಿಂದ ನಾನು ಎಂಬುದು ಎಲ್ಲಕ್ಕೂ ಶೇಷಿಯಾದುದು.

ಬ್ರಹ್ಮನಲ್ಲಿರುವ ಪೂರ್ಣತ್ವವು ಜೀವನಲ್ಲೂ ಇದೆ ಎಂದು ಹೇಳಿ ಅಭೇದವನ್ನು ಸ್ಥಾಪಿಸುತ್ತಾರೆ. ಜಾಗ್ರದಾದಿಸರ್ವಪ್ರಪಂಚಕ್ಕೂ ಸಾಕ್ಷಿಯಾದುದರಿಂದ ಅಹಂಪದಾರ್ಥವು ಅಪರಿಚ್ಛಿನ್ನವಾದ ಪೂರ್ಣಸ್ವರೂಪವುಳ್ಳುದು. ಅಪೂರ್ಣವಾದ ವಸ್ತುವಿಗೆ ಯಾವಾಗಲೂ ಏಕಕಾಲದಲ್ಲಿ ಎಲ್ಲ ವಸ್ತುಜ್ಞಾನವೂ ಉಂಟಾಗುವ ಸಂಭವವಿಲ್ಲವು ; ಆತ್ಮನಿಗೆ ಅಂಥ ಸಂಭವವಿದೆ. ಆದುದರಿಂದ ಆತ್ಮನು ಪೂರ್ಣನು. ಆದುದರಿಂದ ಜೀವನಿಗೂ ಬ್ರಹ್ಮನಿಗೂ ಪಾರಮಾರ್ಥಿಕವಾಗಿ ಅಭೇದವು. ॥೨೧॥

ಹೀಗೆ ಜೀವನಿಗೆ ಪಾರಮಾರ್ಥಿಕವಾಗಿ ಸಚ್ಚಿದಾನಂದರೂಪತ್ವವನ್ನು ಹೇಳಿ ಈಗ ಸಂಸಾರಿತ್ವ ಅಸಂಸಾರಿತ್ವರೂಪಭೇದವೂ ವಾಸ್ತವವಲ್ಲವೆಂದು ಹೇಳುತ್ತಾರೆ. ಪರಮೇಶ್ವರನು ಯಾವಾಗಲೂ ಸಂಸಾರಿಯಲ್ಲವು. ಪಾರಮಾರ್ಥಿಕವಾಗಿ ತಾನೂ ಸಂಸಾರಕ್ಕೆ ಸಾಕ್ಷಿಯಾಗಿರುವುದರಿಂದ ಸಂಸಾರಸಂಬಂಧವಿಲ್ಲದವನೆಂಬುದು ಪಾರಮಾರ್ಥಿಕವಾದ ಸಾರ್ವದಿಕವಾದ ಸ್ವಭಾವವು. ಆದುದರಿಂದ ಸಂಸಾರವು ಭ್ರಾಂತಿಯಿಂದ ತೋರತಕ್ಕದ್ದಾಗಿದೆ. ಯಾವುದು ದೃಶ್ಯವೋ ಅದು ದ್ರಷ್ಟೃಸ್ವಭಾವದಲ್ಲಿ ಸೇರುವುದಿಲ್ಲವು. ॥೨೨॥

ಹೀಗೆ ಮಂತ್ರಕ್ಕೆ ಅರ್ಥವಾದ ಜೀವ ಈಶ್ವರ ಇವರಿಗೆ ಸರ್ವಾತ್ಮತ್ವವನ್ನು ಹೇಳಿ ಅಭೇದಪ್ರತಿಪಾದನೆಯನ್ನು ಉಪಸಂಹರಿಸುತ್ತಾರೆ. ಮೇಲೆ ಹೇಳಿದಂತೆ ಶ್ರುತಿಗೆ ಅನುಸಾರವಾದ ಯುಕ್ತಿಯಿಂದಲೂ ಆಚಾರ್ಯೋಪದೇಶಪುರಸ್ಸರವಾಗಿಯೂ ತಿಳಿದು

ಯ ಏವಮಾತ್ಮಮನ್ತ್ರೇಣ ಜೀವಾತ್ಮಪರಮಾತ್ಮನೋಃ ॥೨೪॥

ಪಾರಮಾರ್ಥಿಕಮೇಕತ್ವಂ ಸುದೃಢಂ ಪರಿಪಶ್ಯತಿ ।
ಸ ಏವ ಬ್ರಹ್ಮವಿನ್ಮುಖ್ಯೋ ನೇತರೋಽಜ್ಞಾನಮೋಹಿತಃ ॥೨೫॥

ಏವಂಭೂತಪರಿಜ್ಞಾನಂ ಯಸ್ಯ ಜಾತಂ ಯದಾ ಭುವಿ ।
ತದೈವ ತಸ್ಯ ಸಂಸಾರವಿನಾಶೋ ನಾಸ್ತಿ ಸಂಶಯಃ ॥೨೬॥

ಹಂಸವಿದ್ಯಾಮವಿಜ್ಞಾಯ ಮುಕ್ತೌ ಯತ್ನಂ ಕರೋತಿ ಯಃ ।
ಸ ನಭೋಭಕ್ಷಣೇನೈವ ಕ್ಷುನ್ನಿವೃತ್ತಿಂ ಕರಿಷ್ಯತಿ ॥೨೭॥

ಅಹಂಪದಾರ್ಥತತ್ಪದಾರ್ಥಗಳಿಗೆ ಬುದ್ಧಿವಂತನಾದವನು ಅಭೇದವನ್ನು ತಿಳಿಯಬೇಕು. "ಶ್ರವಣಂ ಯಾವದಜ್ಞಾನಂ ಮತಿರ್ಯಾವದಯುಕ್ತತಾ" ಎಂಬಂತೆ ಬ್ರಹ್ಮಾತ್ಮೈಕ್ಯದ ಅಜ್ಞಾನನಿವೃತ್ತಿಗೆ ಶ್ರವಣವೂ, ಅಯುಕ್ತತ್ವಶಂಕಾವಾರಣೆಗೆ ಮನನವೂ ಬೇಕು. ಸಮನ್ವಯಾಧ್ಯಾಯದಿಂದ ಉಪಕ್ರಮಾದಿ ಪ್ರಕರಣ ಮುಂತಾದ ಯುಕ್ತಿಗಳಿಂದ ಅಜ್ಞಾನನಿವೃತ್ತಿಯೂ, ಅವಿರೋಧಾಧ್ಯಾಯದಿಂದ ಅರ್ಥಾಸತ್ತ್ವನಿವೃತ್ತಿಯೂ ಆಗುತ್ತದೆ. ಶ್ರವಣದಿಂದ ಪ್ರಮಾಣಾಸಂಭಾವನಾ ನಿವೃತ್ತಿಯೂ, ಮನನದಿಂದ ಪ್ರಮೇಯಾಸಂಭಾವನಾನಿವೃತ್ತಿಯೂ, ನಿದಿಧ್ಯಾಸನದಿಂದ ವಿಪರೀತಭಾವನಾನಿವೃತ್ತಿಯೂ ಉಂಟಾಗಿ ಬ್ರಹ್ಮಾತ್ಮೈಕ್ಯಜ್ಞಾನವುಂಟಾಗುತ್ತದೆ. ॥೨೩॥

ಈ ರೀತಿಯಾಗಿ ಯಾವನು ಈ ಆತ್ಮಮಂತ್ರಸಹಾಯದಿಂದ ಜೀವಾತ್ಮಪರಮಾತ್ಮರಿಗೆ ಪಾರಮಾರ್ಥಿಕವಾಗಿರುವ ಏಕತ್ವ(ಅಭೇದ)ವನ್ನು ಚೆನ್ನಾಗಿ ಮನಗಾಣು (ಸಾಕ್ಷಾತ್ಕರಿಸು) ತ್ತಾನೋ ಅಂಥವನೇ ಬ್ರಹ್ಮಜ್ಞಾನಿಗಳಲ್ಲಿ ಮುಖ್ಯನಾದವನು. ಇತರನು ಅಜ್ಞಾನದಿಂದ ಭ್ರಾಂತನಾಗಿರುತ್ತಾನೆ. ॥೨೪-೨೫॥

ಇಂಥ ಸಾಕ್ಷಾತ್ಕಾರಾನುಭವವು ಯಾರಿಗೆ ಈ ಲೋಕದಲ್ಲಿ ಯಾವಾಗ ಉಂಟಾಗುತ್ತದೋ ಆಗಲೇ ಅಲ್ಲಿಯೇ ಅಂಥವನಿಗೆ ಸಂಸಾರವು (ಜನ್ಮಮರಣ ಪ್ರವಾಹಸಂಬಂಧವೂ ಕರ್ತೃತ್ವಭೋಕ್ತೃತ್ವಾಭಿಮಾನವೂ) ನಾಶಹೊಂದುತ್ತದೆ. ಇದರಲ್ಲಿ ಸಂದೇಹವಿಲ್ಲವು. ॥೨೬॥

ಈ ಹಂಸವಿದ್ಯೆಯನ್ನು ತಿಳಿದುಕೊಳ್ಳದೆ ಯಾವನು ಮೋಕ್ಷವನ್ನು ಪಡೆಯಲು ಯತ್ನಿಸುತ್ತಾನೋ ಅಂಥವನು ಆಕಾಶವನ್ನು ತಿನ್ನುವುದರಿಂದಲೇ ಹಸಿವನ್ನು

ಹಂಸವಿದ್ಯಾ ಪರಾ ಚೈಷಾ ಪರಮಂತ್ರವಿಭೇದಿನೀ ।
ಸರ್ವೈಶ್ವರ್ಯಪ್ರದಾ ಸರ್ವದೇವತಾತೃಪ್ತಿಕಾರಿಣೀ ॥೨೮॥

ಅಸ್ಯಾಶ್ಚ ಜಪಮಾತ್ರೇಣ ದೀರ್ಘಾಯುಷ್ಯಮವಾಪ್ನುಯಾತ್ ।
ಆರೋಗ್ಯಂ ವಿಜಯಂ ವಿದ್ಯಾಮವಾಪ್ನೋತಿ ನ ಸಂಶಯಃ ॥೨೯॥

ಬಹುನೋಕ್ತೇನ ಕಿಂ ವಿದ್ಯಾ ಹಂಸಾಖ್ಯಾ ಸರ್ವಕಾಮದಾ ।
ಹಂಸ ಹಂಸೇತಿ ಯೋ ಬ್ರೂಯಾತ್ಸರ್ವದಾ ಶಿವ ಏವ ಸಃ ॥೩೦॥

ಶಿವೇನ ವಿಷ್ಣುನಾ ಚೈವ ಬ್ರಹ್ಮಣಾ ಸರ್ವದೈವತೈಃ ।
ಆದೃತಾ ಹಂಸವಿದ್ಯೇಯಮಚಿರಾದೇವ ಸಿದ್ಧಿದಾ ॥೩೧॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಹಂಸವಿದ್ಯಾವಿವರಣಂ ನಾಮ ಸಪ್ತಮಾಧ್ಯಾಯಃ

ಹೋಗಲಾಡಿಸಿಕೊಳ್ಳಲು ಪ್ರಯತ್ನಿಸುವವನಂತಾಗುತ್ತಾನೆ, ಎಂದರೆ ಹಂಸವಿದ್ಯಾ ಸಹಾಯವಿಲ್ಲದೆ ಮೋಕ್ಷವಾಗುವುದಿಲ್ಲ. ಅಂಥ ಪ್ರಯತ್ನವು ವ್ಯರ್ಥವಾಗುತ್ತದೆ. ||೨೭||

ಈ ಹಂಸವಿದ್ಯೆಯು ಸರ್ವೋತ್ಕೃಷ್ಟವಾದುದು. ಇದು ಶತ್ರುಗಳು ಮಾಡಿರಬಹುದಾದ ಆಭಿಚಾರಿಕಮಂತ್ರಪ್ರಯೋಗಗಳನ್ನೂ ಒಡೆದು ನಿಷ್ಫಲಗಳನ್ನಾಗಿ ಮಾಡುತ್ತದೆ. ಎಲ್ಲ ವಿಧವಾದ ಐಶ್ವರ್ಯಗಳನ್ನೂ ಕೊಡುತ್ತದೆ. ಎಲ್ಲ ದೇವತೆಗಳಿಗೂ ತೃಪ್ತಿಯನ್ನುಂಟುಮಾಡಬಲ್ಲದು. ||೨೮||

ಈ ಮಂತ್ರವನ್ನು ಜಪಿಸುವುದು ಮಾತ್ರದಿಂದಲೇ ದೀರ್ಘಾಯುಸ್ಸನ್ನು ಪಡೆಯುತ್ತಾನೆ. ಆರೋಗ್ಯವನ್ನೂ ಹಿಡಿದ ಕೆಲಸದಲ್ಲಿ ಜಯವನ್ನೂ ತಿಳಿವಳಿಕೆಯನ್ನೂ ಪಡೆಯುತ್ತಾನೆ, ಸಂದೇಹವಿಲ್ಲವು. ಹೆಚ್ಚು ಹೇಳಿ ಏನು? ಈ ಹಂಸವೆಂಬ ವಿದ್ಯೆಯು ಎಲ್ಲ ಇಷ್ಟಾರ್ಥಗಳನ್ನೂ ಕೊಡಬಲ್ಲುದು. ||೨೯||

ಈ ಅನುಸಂಧಾನದಲ್ಲಿ ಅಶಕ್ತರಾದವರಿಗೆ, ಮಂದಾಧಿಕಾರಿಗಳಿಗೆ, ಬರಿಯ ಜಪವನ್ನು ಹೇಳುತ್ತಾರೆ. ಯಾರು ಹಂಸಃ, ಹಂಸಃ ಎಂದು ಜಪಮಾಡುತ್ತಿರುತ್ತಾರೋ ಅಂಥವರು ಯಾವಾಗಲೂ ಶಿವರೂಪರೇ ಆಗಿರುತ್ತಾರೆ. ಈ ಹಂಸವಿದ್ಯೆಯು

ಶಿವ, ವಿಷ್ಣು, ಬ್ರಹ್ಮಾ ಮುಂತಾದ ಎಲ್ಲ ದೇವತೆಗಳಿಂದಲೂ ಆದರಿಸಲ್ಪಟ್ಟಿದೆ, ಮತ್ತು ಜಾಗ್ರತೆಯಾಗಿ ಇಷ್ಟಾರ್ಥಸಿದ್ಧಿಯನ್ನುಂಟುಮಾಡುತ್ತದೆ. ||೩೦-೩೧||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಹಂಸವಿದ್ಯೆಯನ್ನು ವಿವರಿಸಿರುವ ಏಳನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ಅಷ್ಟಮೋಽಧ್ಯಾಯಃ ||

ಎಂಟನೆಯ ಅಧ್ಯಾಯವು

(ಷಡಕ್ಷರವಿಚಾರಃ)

ಷಡಕ್ಷರಂ ಪ್ರವಕ್ಷ್ಯಾಮಿ ಸಮಾಸೇನ ಸುಶೋಭನಮ್ ।
ಯೇನ ಸಂಸಾರವಿಚ್ಛಿತ್ತಿರ್ಬ್ರಹ್ಮೇನ್ದ್ರಾದಿವಿಭೂತಯಃ ॥೧॥

ಋಷಿರ್ಬ್ರಹ್ಮಾಽಸ್ಯ ಮನ್ತ್ರಸ್ಯ ಗಾಯತ್ರೀ ಛಂದ ಉಚ್ಯತೇ ।
ದೇವತಾಽಸ್ಯ ಶಿವಸ್ಸಾಕ್ಷಾತ್ಸತ್ಯಜ್ಞಾನಸುಖಾಹ್ವಯಃ ॥೨॥

ಶಕ್ತಿರ್ಮಾಹೇಶ್ವರೀ ಸಾ ಚ ಭುವನೇಶ್ಯಕ್ಷರಾ ಭವೇತ್ ।
ಬೀಜಂ ಮಾಯಾವಿಶಿಷ್ಟಸ್ತು ಶಿವಃ ಪೂರ್ವೋಕ್ತಲಕ್ಷಣಃ ॥೩॥

ಈ ರೀತಿಯಾಗಿ ಮುಕ್ತಿಸಾಧನವಾದ ಶಿವಶಕ್ತ್ಯಾತ್ಮಕವಾದ ಹಂಸವನ್ನು ಹೇಳಿ ಈಗ ಅದಕ್ಕೆ ಸಮಾನವಾದ ಯಾವ ಷಡಕ್ಷರೀಮಂತ್ರದ ಉಪಾಸನೆಯಿಂದ ಸಂಸಾರನಿರ್ಬಂಧದುಃಖವೆಲ್ಲವೂ ನಾಶಹೊಂದುವುದೋ ಮತ್ತು ಬ್ರಹ್ಮಪದವಿ ಇಂದ್ರಪದವಿಗಳೂ ಪ್ರಾಪ್ತವಾಗುವವೋ ಅಂಥ ಉತ್ತಮವಾದ ಷಡಕ್ಷರೀಮಂತ್ರವನ್ನು ಹೇಳುತ್ತಾರೆ. ||೧||

ಈ ಷಡಕ್ಷರೀಮಂತ್ರಕ್ಕೆ ಬ್ರಹ್ಮನೇ ಋಷಿಯು, ಗಾಯತ್ರಿಯೇ ಛಂದಸ್ಸು ಸಚ್ಚಿದಾನಂದಸ್ವರೂಪನಾದ ಸಾಕ್ಷಾತ್ ಶಿವನೇ ದೇವತೆಯು. ||೨||

ಈ ಮಂತ್ರಕ್ಕೆ ಜಗತ್ಕಾರಣಳಾದ ಆದಿಶಕ್ತಿಯೇ ಶಕ್ತಿಯು. ಮಾಯಾ ವಿಶಿಷ್ಟನಾದ ಸಚ್ಚಿದಾನಂದಸ್ವರೂಪನಾದ ಶಿವನೇ ಬೀಜವು. ||೩||

ಸೋಽಪಿ ತಚ್ಛಬ್ದ ಏವಸ್ಯಾನ್ನ್ಯಾಸಃ ಪಂಚಾಕ್ಷರೈಃ ಕ್ರಮಾತ್ ।
ಅಂಗುಷ್ಠಾದಿ ಕನಿಷ್ಠಾಂತಂ ವಿನ್ಯಸೇದಕ್ಷರೈಃ ಕ್ರಮಾತ್ ॥೪॥

ಮಸ್ತಕೇ ಚ ಲಲಾಟೇ ಚ ಹೃದಿನಾಭೌ ಪದದ್ವಯೇ ।
ಪುನಃ ಪಂಚಾಕ್ಷರೇಣೈವ ಪಂಚಾಂಗಾನಿ ಹೃದಿ ಕ್ರಮಾತ್ ॥೫॥

ಪ್ರಣವಂ ಪ್ರಥಮಂ ವಿದ್ಯಾದ್ದ್ವಿತೀಯಸ್ತು ನಕಾರಕಮ್ ।
ಮಕಾರಂ ತತ್ಪರಂ ವಿದ್ಯಾಚ್ಛಿಕಾರಸ್ತು ತತಃ ಪರಮ್ ॥೬॥

ವಾಕಾರಂ ಪಂಚಮಂ ವಿದ್ಯಾದ್ಯಕಾರಂ ಷಷ್ಠಮೇವ ಚ ।
ಇತ್ಥಂ ಷಡಕ್ಷರಂ ವಿದ್ಯಾಜ್ಜಾಬಾಲೋಪನಿಷದ್ಗತಾಮ್ ॥೭॥

ಮಂತ್ರಸ್ಸಾಂಗಸ್ಸಮಾಖ್ಯಾತೋ ಮಂತ್ರಾರ್ಥಃ ಕಥ್ಯತೇಽಧುನಾ ।
ಸತ್ಯಜ್ಞಾನಪರಾನಂದಸ್ವರೂಪಸ್ಯ ಶಿವಸ್ಯ ತು ॥೮॥

ಅಂಗುಷ್ಠ (ಹೆಬ್ಬೆರಳು) ಮೊದಲುಮಾಡಿಕೊಂಡು ಕನಿಷ್ಠಾಂತವಾಗಿ ಈ ಮಂತ್ರದ ಒಂದೊಂದು ಅಕ್ಷರವನ್ನು ಓಂಕಾರಸಹಿತವಾಗಿ ನ್ಯಾಸಮಾಡಬೇಕು. (ಎಂದರೆ ಆಯಾ ಅಕ್ಷರಸ್ವರೂಪನಾದ ಶಿವನು ಅಂಗುಷ್ಠಾದಿ ಅಂಗುಳಿಗಳಲ್ಲಿ ಇರುವಂತೆ ಭಾವನೆಮಾಡಬೇಕು.) ॥೪॥

ಪುನಃ ಇದೇ ಐದು ಅಕ್ಷರಗಳನ್ನು (ಬೀಜಾಕ್ಷರವನ್ನು ಬಿಟ್ಟು) ಐದು ಅಂಗಗಳಲ್ಲಿ ತಲೆ, ಹಣೆ, ಹೃದಯ, ನಾಭಿ, ಎರಡು ಕಾಲುಗಳು ಇವುಗಳಲ್ಲಿ ನ್ಯಾಸ ಮಾಡಬೇಕು. ॥೫॥

ಈಗ ಮಂತ್ರದ ಸ್ವರೂಪವನ್ನು ಹೇಳುತ್ತಾರೆ. ಮಂತ್ರದ ಆದಿಯಲ್ಲಿ ಓಂಕಾರವೂ ಅನಂತರ ನಕಾರವೂ, ಮೂರನೆಯದಾಗಿ ಮಕಾರವೂ, ಆಮೇಲೆ ಶಿಕಾರವೂ, ವಾಕಾರವು ಐದನೆಯದಾಗಿಯೂ, ಆರನೆಯ ಅಕ್ಷರವು ಯಕಾರವಾಗಿಯೂ ಇರಬೇಕು. ಈ ರೀತಿಯಾದ ಮಂತ್ರವು ಕೇವಲ ಮಂತ್ರವೇ ಅಲ್ಲದೆ ಜಾಬಾಲೋಪನಿಷತ್ಪ್ರತಿಪಾದ್ಯವಾಗಿಯೂ ಇರುವುದರಿಂದ ಇದರ ಮಹಿಮೆಯು ಅಪಾರವಾದುದು. ॥೬-೭॥

ಹೀಗೆ ಅಂಗಸಹಿತವಾದ ಮಂತ್ರಸ್ವರೂಪವನ್ನು ಹೇಳಿ, ಈಗ ಸಚ್ಚಿದಾನಂದ ಸ್ವರೂಪನಾದ ಆ ಶಿವನು ಮಂತ್ರದ ಅರ್ಥವು ಎಂಬುದನ್ನು ವಿವರಿಸಲಾಗುತ್ತದೆ. ॥೮॥

ಅಸಂಪೃಕ್ತ್ಯಾ ಶಿವಸ್ಯಾಯಂ ಶಿವಶಬ್ದಸ್ತು ವಾಚಕಃ ।
ನಮಶ್ಶಬ್ದೋ ನಮಸ್ಕಾರವಾಚಕಃ ಪರಿಕೀರ್ತಿತಃ ॥೯॥

ಪ್ರಹ್ವತಾ ಲಕ್ಷಣಃ ಪ್ರೋಕ್ತೋ ನಮಸ್ಕಾರಃ ಪುರಾತನೈಃ ।
ಪ್ರಹ್ವತಾ ನಾಮ ಜೀವಸ್ಯ ಶಿವಾತ್ ಸತ್ಯಾದಿಲಕ್ಷಣಾತ್ ॥೧೦॥

ಭೇದೇನ ಭಾಸಮಾನಸ್ಯ ಮಾಯಯಾ ನ ಸ್ವರೂಪತಃ ।
ಸಂಬಂಧ ಏವ ತೇನೈವ ಸೋಽಪಿ ತಾದಾತ್ಮ್ಯಲಕ್ಷಣಃ ॥೧೧॥

ನಿತ್ಯಸಿದ್ಧಶ್ಶಿವಸ್ಸಾಕ್ಷಾತ್ ಸ್ವರೂಪಸ್ಸರ್ವದೇಹಿನಾಮ್ ।
ತಸ್ಮಾದ್ವ್ಯಭುತ್ವೋರ್ಜೀವಸ್ಯ ನೋಪಾದೇಯಂ ಹಿತಂ ಸದಾ ॥೧೨॥
ನ ಹೇಯ ಮಹಿತಂ ತದ್ವತ್ ವಸ್ತುತೋ ನ ಪ್ರತೀತಿತಃ ।

ಅದರಲ್ಲಿಯೂ ಮೊದಲು ಶಿವಪದದ ಅರ್ಥವನ್ನು ಹೇಳುತ್ತಾರೆ. ಶಿವ ಎಂಬ ಪದಕ್ಕೆ ಸಚ್ಚಿದಾನಂದಸ್ವರೂಪವಾದ ಆ ಪರವಸ್ತು ಎಂದರ್ಥ. "ಯತೋ ವಾಚೋ ನಿವರ್ತನ್ತೇ" ಇತ್ಯಾದಿ ಶ್ರುತಿಪ್ರಮಾಣದಿಂದ ವಾಕ್ಕಿಗೂ ಮನಸ್ಸಿಗೂ ಗೋಚರ ವಾಗದ ಆ ವಸ್ತುವಿಗೆ ಶಿವಪದವಾಚ್ಯತ್ವವು ಹೇಗೆ? ಎಂದರೆ ಲಕ್ಷಣೆಯಿಂದ ಅಷ್ಟು ಅರ್ಥವೆಂದು ತಿಳಿಯಬೇಕು. ನಮಃ ಎಂಬ ಶಬ್ದಕ್ಕೆ ನಮಸ್ಕಾರ ಎಂದರ್ಥ.

ನಮಸ್ಕಾರಸ್ವರೂಪವನ್ನು ಹೇಳುತ್ತಾರೆ. ನಮಸ್ಕಾರವೆಂದರೆ, ತನಗಿಂತಲೂ ದೊಡ್ಡವರಲ್ಲಿ ಅವರು ದೊಡ್ಡವರು ಎಂಬ ಭಾವನೆಯಿಂದ, ಬಗ್ಗುವುದೇ ನಮಸ್ಕಾರವು-ಎಂದು ಪೂರ್ವಿಕರು ಹೇಳಿರುತ್ತಾರೆ. ॥೯॥

ಪ್ರಹ್ವತಾ ಎಂದರೆ, ವಸ್ತುತಃ ಜೀವನಿಗೂ ಪರಶಿವನಿಗೂ ಭೇದವಿಲ್ಲ ದಿದ್ದಾಗ್ಯೂ ಮಾಯೆಯಿಂದ ಜೀವನು ಬೇರೆ ಶಿವನು ಬೇರೆ ಎಂಬದಾಗಿ ತೋರುತ್ತಿರುವ ಜೀವನಿಗೂ ಪರಶಿವನಿಗೂ ಇರುವ ತಾದಾತ್ಮ್ಯರೂಪವಾದ ಸಂಬಂಧವೇ ಆಗಿದೆ. ಸತ್ಯಪಿ ಭೇದಾಪಗಮೇ ನಾಥ ತವಾಹಂ ನ ಮಾಮಕೀನಸ್ತ್ವಂ । ಎಂದು ಭಾವವು. ॥೧೦-೧೧॥

ಹೀಗೆ ಶಿವಪದ ನಮಃಪದಗಳ ಅರ್ಥವನ್ನು ಹೇಳಿ ಈಗ ವಾಕ್ಯಾರ್ಥವನ್ನು ಹೇಳುತ್ತಾರೆ. ಆ ಸಚ್ಚಿದಾನಂದಸ್ವರೂಪನಾದ ಪರಶಿವನನ್ನು ಕುರಿತು ಜೀವನಾದ ನಾನು ಪ್ರಹ್ವೀ ಭವಾಮಿ ಎಂದರೆ ಅವನೊಡನೆ ಬೆರೆತು ಅವನಂತೆ ಅಖಂಡೈಕರಸ ನಾಗುತ್ತೇನೆ. ಎಂಬುದೇ ವಾಕ್ಯಾರ್ಥವು. ಹೀಗೆ ಜೀವನು ಪರಶಿವನೊಡನೆ ಐಕ್ಯವನ್ನು

ನಹೇಯ ಮುಹಿತಂ ತದ್ವದ್ವಸ್ತುತೋ ನ ಪ್ರತೀತಿತಃ।
ಏವಂ ವಿದ್ವಾನ್ನಕಾರಾರ್ಥಂ ಮಕಾರಾರ್ಥ ಉದೀರ್ಯತೇ ॥೧೩॥

ಮಕಾರೋ ಮಮಶಬ್ದಾರ್ಥೋ ಲುಪ್ತಸ್ತ್ವೇಕೋ ಮಕಾರತಃ।
ವ್ಯಾವಹಾರಿಕದೃಷ್ಟ್ಯಾಽಯಂ ನಮಸ್ಕಾರಃ ಪ್ರಕೀರ್ತ್ಯತೇ ॥೧೪॥

ಪಡೆದನಂತರ, ನಿತ್ಯಸಿದ್ಧನಾದ ಎಲ್ಲಾ ಜೀವಸ್ವರೂಪನಾದ ಶಿವನೇ ಜೀವನಾದ್ದರಿಂದ ಅವನಿಗೆ ಲೋಕದಲ್ಲಿ ಪಡೆಯಬೇಕಾದ ಒಳ್ಳೆಯ ಪದಾರ್ಥಗಳಾಗಲಿ ಬಿಡಬೇಕಾದ ಅಹಿತಪದಾರ್ಥಗಳಾಗಲಿ ಯಾವುದೂ ಇಲ್ಲ. ||೧೨||

ಹೀಗೆ ಒಂದು ವಿಧವಾದ ವಾಕ್ಯಾರ್ಥವನ್ನು ಹೇಳಿ ಬೇರೆ ವಿಧದಿಂದಲೂ ಮಂತ್ರಾರ್ಥವನ್ನು ಹೇಳಲಪೇಕ್ಷೆಯಿಂದ ನಮಃ ಎಂಬ ಪದದಲ್ಲಿರುವ ನಕಾರಕ್ಕೆ ಅರ್ಥವನ್ನು ಹೇಳುತ್ತಾರೆ. ಪರಶಿವನನ್ನು ಬಿಟ್ಟು ಲೋಕದಲ್ಲಿ ಉಳಿದ ಪದಾರ್ಥಗಳೆಲ್ಲವೂ ಮಿಥ್ಯಾಭೂತಗಳು (ಸುಳ್ಳಾದ ಪದಾರ್ಥಗಳು); ಆದ್ದರಿಂದ ಸ್ವಸ್ವರೂಪವನ್ನು ತಿಳಿಯಲಪೇಕ್ಷೆಯುಳ್ಳ ಜೀವನಿಗೆ ಪರಶಿವನಿಗಿಂತಲೂ ಬೇರೆಯಾದ ನಾನು ಪಡೆಯಬೇಕಾದ ಪದಾರ್ಥಗಳು ಯಾವುವೂ ಇಲ್ಲ. ಪ್ರತೀತಿಯಿಂದ ತೋರುವ ಪ್ರಪಂಚವು ಇದೆಯಲ್ಲ? ಎಂದರೆ ಶುಕ್ತಿಯಲ್ಲಿ (ಚಿಪ್ಪಿನಲ್ಲಿ) ಬೆಳ್ಳಿ ಇಲ್ಲದೆ ಇದ್ದಾಗ್ಯೂ ಪ್ರತೀತಿಯಿಂದ ರಜತವು (ಬೆಳ್ಳಿಯು) ಇದೆ ಎಂದು ತೋರಿಕೆಮಾತ್ರವಾಗಿರುತ್ತದೆ. ಪರೀಕ್ಷೆಮಾಡಿದರೆ ಅದರಲ್ಲಿ ಸ್ವಲ್ಪವಾದರೂ ರಜತವು ಸಿಕ್ಕುವುದಿಲ್ಲ. ಆದ್ದರಿಂದ ಪ್ರತೀತಿಯಿಂದ ತೋರುವ ಪದಾರ್ಥವು ಸತ್ಯವಲ್ಲ. ಅದರಂತೆ ಪ್ರತೀತಿಯಿಂದ ತೋರುವ ಪ್ರಪಂಚವೂ ಸತ್ಯವಲ್ಲ. ಸುಳ್ಳುಪದಾರ್ಥವು. ಆದ್ದರಿಂದ ಜೀವನಿಗೆ ನಿತ್ಯನಾದ ಪರಶಿವನಿಗಿಂತಲೂ ಪ್ರಾಪ್ಯವಾದ ಬೇರೆ ಪದಾರ್ಥವು ಯಾವುದೂ ಇಲ್ಲ. ಹೀಗೆ ಹೇಳಿದ್ದರಿಂದ ದೃಶ್ಯಪ್ರಪಂಚದ ನಿಷೇಧವೇ ನಕಾರಕ್ಕೆ ಅರ್ಥ ಎಂತ ಹೇಳಿದ ಹಾಗಾಯಿತು. ಈಗ ಮಕಾರದ ಅರ್ಥವನ್ನು ಹೇಳುತ್ತಾರೆ. ||೧೩||

ಶ್ರುತಿಯಾದ್ದರಿಂದ ಒಂದು ಮಕಾರವು ಲೋಪವಾಗಿ ಒಂದು ಮಾತ್ರ ಉಳಿದು 'ಮ' ಎಂದು ಇದೆ. ಈ ಮಕಾರಕ್ಕೆ ಮಮ ಎಂಬ ಶಬ್ದದ ಅರ್ಥವೇ ಅರ್ಥವು. ಮಮ ಎಂಬ ಶಬ್ದಕ್ಕೆ ನನ್ನದು ಎಂಬ ಅಭಿಮಾನವೇ ಅರ್ಥವು. ಅಂತೂ ಈ ಪ್ರಪಂಚದಲ್ಲಿ ಯಾವುದೂ ನನ್ನದಲ್ಲ. ಎಲ್ಲಾ ಸುಳ್ಳು. ಎಂತ ಹೇಳಿದ ಹಾಗಾಯಿತು. ಈ ನಮಸ್ಕಾರವೂ ವ್ಯವಹಾರದೃಷ್ಟಿಯಿಂದ ಹೇಳಲ್ಪಟ್ಟಿದೆಯೇ ಹೊರತು ಪಾರಮಾರ್ಥಿಕದೃಷ್ಟಿಯಿಂದಲ್ಲ. ||೧೪||

ತಸ್ಮಾಚ್ಚತುರ್ಥೀ ಶಬ್ದಸ್ತು ಪ್ರೋಚ್ಯತೇ ನ ಹಿ ವಸ್ತುತಃ ।
ಓಂಕಾರಶಬ್ದಃ ಸರ್ವಾರ್ಥವಾಚಕಃ ಪರಿಕೀರ್ತಿತಃ ॥೧೫॥

ಪ್ರಯೋಗಾದೇವ ಸರ್ವತ್ರ ಸರ್ವಾರ್ಥಶ್ಶಿವ ಏವ ಹಿ ।
ತಸ್ಮಾಚ್ಛಿವಸ್ಯ ಪೂರ್ಣಸ್ಯ ಪ್ರಣವೋ ವಾಚಕಸ್ಸ್ಮೃತಃ ॥೧೬॥

ವಾಚ್ಯವಾಚಕಭಾವಾಚ್ಚ ಲಕ್ಷ್ಯಲಕ್ಷಣತಾಽಪಿ ಚ ।
ಅನ್ಯೋನ್ಯತಾಽಪಿ ನಾಸ್ತ್ಯೇವ ಪರಮಾರ್ಥನಿರೂಪಣೇ ॥೧೭॥

ಅಭಾವಾದೇವ ಸರ್ವಸ್ಯ ಶಿವಾದನ್ಯಸ್ಯ ಸರ್ವದಾ ।
ಅಸ್ತಿ ನಾಸ್ತಿ ಮೃಷಾ ಭಾತಿ ನ ಭಾತೀತ್ಯಾದಿ ಮಾಯಯಾ ॥೧೮॥

ಆದ್ದರಿಂದಲೇ ಶಿವಾಯ ಎಂಬದಾಗಿ ಶಿವಶಬ್ದದ ಮೇಲೆ ಚತುರ್ಥೀ ವಿಭಕ್ತಿಯು ಹೇಳಲ್ಪಟ್ಟಿದೆ.

ಓಂ ಎಂಬ ಶಬ್ದವು ಸರ್ವವನ್ನೂ ಎಂದರೆ ಸರ್ವಸ್ವರೂಪಿಯಾದ ಪರಶಿವನನ್ನು ತಿಳಿಸುವುದು. ಎಂದು ಹೇಳಲ್ಪಟ್ಟಿದೆ. ಸಕಲಪದಾರ್ಥಗಳೂ "ಆತ್ಮೈವೇದಗ್ಂ ಸರ್ವಂ, ಇದಗ್ಂ ಸರ್ವಂ ಯದಯಮಾತ್ಮಾ" ಇತ್ಯಾದಿ ಶ್ರುತಿಗಳಲ್ಲಿ ಹೇಳಿರುವಂತೆ ಆತ್ಮಸ್ವರೂಪವೇ ಆಗಿವೆಯಾದುದರಿಂದ, ಓಂ ಎಂಬ ಪದಕ್ಕೆ ಪರಶಿವನು ಎಂಬುದೇ ಅರ್ಥವು. ಓಂಕಾರವು ಸರ್ವವಾಙ್ಮಯಕ್ಕೂ ಕಾರಣವಾಗಿದೆ. ವಾಚಕವಾಚ್ಯಗಳಿಗೆ ಅಭೇದವೆಂದು ಭಾವವು. ||೧೫||

ಆದ್ದರಿಂದ ಸಕಲ ಪದಾರ್ಥಗಳನ್ನೂ ಪ್ರಕಾಶಗೊಳಿಸುವ ಓಂಕಾರವೇ ಪರಿಪೂರ್ಣನಾದ ಪರಶಿವನನ್ನು ತಿಳಿಸುವುದು. ಮಾತಿನಿಂದ ಇದು ಇಂಥದು ಎಂದು ಹೇಳುವುದಕ್ಕಾಗದ, ಮನಸ್ಸಿನಿಂದಲೂ ತಿಳಿಯಲಾಗದ, ಆ ವಸ್ತುವನ್ನು ಓಂಕಾರವು ಹೇಳುವುದು, ತೋರಿಸಿಕೊಡುವುದು ಎಂಬ ವಾಚ್ಯತ್ವಲಕ್ಷ್ಯತ್ವರೂಪಧರ್ಮಗಳು ಹೇಗೆ ಕೂಡುತ್ತವೆ? ಎಂದರೆ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ. ||೧೬||

ವ್ಯಾವಹಾರಿಕದೃಷ್ಟಿಯನ್ನು ಬಿಟ್ಟು ವಸ್ತುಸ್ಥಿತಿಯನ್ನು ಹೇಳುವಾಗ ವಾಚ್ಯವಾಚಕ (ಹೇಳುವುದು, ಹೇಳಿಸಿಕೊಳ್ಳುವುದು) ಭಾವವೂ, ಲಕ್ಷ್ಯಲಕ್ಷಣ (ತೋರುವುದು, ತೋರಿಸುವುದು) ಭಾವವೂ, ನಾನು ನೀನು ಬೇರೆ, ಎಂಬ ಭಾವವೂ, ಇವು ಯಾವುವೂ ಇಲ್ಲ. ||೧೭||

ಪರಮಾರ್ಥವಾದ ಶಿವಸ್ವರೂಪವನ್ನು ಬಿಟ್ಟು ಯಾವ ಪದಾರ್ಥವೂ ಇಲ್ಲದೆ

ಕಲ್ಪಿತಂ ಚಿತ್ಸುಖಾನಂದಪರಮಾರ್ಥೇ ಶಿವಾತ್ಮನಿ ।
ಮಾಯಾ ತತ್ಕಾರ್ಯಮಪ್ಯಸ್ಮಾಚ್ಛಿವಾತ್ಸತ್ಯಾದಿಲಕ್ಷಣಾತ್ ॥೧೯॥

ಅಥ ಕಿಂ ಬಹುನೋಕ್ತೇನ ಶಿವಾದನ್ಯಂ ನ ವಿದ್ಯತೇ ।
ಶಿವಸ್ವರೂಪಮೇವೈತತ್ ಜಗದಾಹುರ್ಮನೀಷಿಣಃ ॥೨೦॥

ಸರ್ವಸ್ವರೂಪಮಜ್ಞಾನಾತ್ ದೃಶ್ಯತೇ ನ ಚ ವಸ್ತುತಃ ।
ಏಷ ಏವ ಹಿ ಮಂತ್ರಾರ್ಥಃ ಸತ್ಯಂ ಸತ್ಯಂ ನ ಚಾನ್ಯಥಾ ॥೨೧॥

ಇರುವುದರಿಂದ ಇದೆ, ತೋರುತ್ತದೆ, ತೋರುವುದಿಲ್ಲ, ಇದು ಸುಳ್ಳು ಎಂಬ ಎಲ್ಲಾ ವ್ಯವಹಾರಗಳೂ ಇವಕ್ಕೆ ಕಾರಣವಾದ ಮಾಯೆಯೂ ಮಾಯಾಕಾರ್ಯವಾದ ಪ್ರಪಂಚವೂ ಇವೆಲ್ಲವೂ ಸಚ್ಚಿದಾನಂದಸ್ವರೂಪನಾದ ಪರಶಿವನಲ್ಲಿ ಕಲ್ಪಿತಗಳೇ ಹೊರತು ಸತ್ಯವಾದವುಗಳಲ್ಲ. ||೧೮-೧೯||

ಬಹಳ ಹೇಳುವುದರಿಂದ ಏನು ಪ್ರಯೋಜನ? ಆ ಪರಶಿವನನ್ನು ಬಿಟ್ಟು ಇತರ ಯಾವ ಪದಾರ್ಥಗಳೂ ಇಲ್ಲವೇ ಇಲ್ಲ. ಇದಕ್ಕೆ "ನೇಹ ನಾನಾಸ್ತಿ ಕಿಂಚನ" ಎಂಬ ಶ್ರುತಿಯೇ ಪ್ರಮಾಣವು.

ಹಾಗಾದರೆ ಕಣ್ಣೆದುರಿಗೆ ತೋರುತ್ತಿರುವ ಈ ಪ್ರಪಂಚವು ಇಲ್ಲ ಎಂತ ಹೇಳುವುದು ಹೇಗೆ? ಎಂದರೆ, ಆ ಪ್ರಪಂಚವು ಶಿವನ ಸ್ವರೂಪವೇ ಎಂದು ಪಂಡಿತರು ಹೇಳಿದ್ದಾರೆ. ಪ್ರಪಂಚವು ಅಧಿಷ್ಠಾನಸ್ವರೂಪನಾದ ಆ ಶಿವನಲ್ಲಿ ಕಲ್ಪಿತವಾದುದು. ಹೀಗೆ ಕಲ್ಪಿತವಾದ ಪ್ರಪಂಚವು ಇರಬೇಕಾದ ಆ ಶಿವನಲ್ಲಿಯೇ ಇಲ್ಲವೆಂದು ಹೇಳಿದ್ದರಿಂದ ಬೇರೆ ಎಲ್ಲಿಯೂ ಇಲ್ಲವೆಂತಲೇ ಸಿದ್ಧವಾಯಿತು. ಹೀಗೆ ಎಲ್ಲಿಯೂ ಇಲ್ಲದ್ದರಿಂದ ಪ್ರಪಂಚವು ಸುಳ್ಳಾದುದು. ಆದರೆ ಇದು ತೋರುತ್ತಿದೆಯಲ್ಲ? ಎಂದರೆ ಶಿವಸ್ವರೂಪವನ್ನು ತಿಳಿಯದ ಅಜ್ಞಾನದಿಂದ ಹಾಗೆ ತೋರುತ್ತಿದೆಯೇ ಹೊರತು ಇದು ವಸ್ತುತಃ ಇಲ್ಲವೇ ಇಲ್ಲ. ||೨೦||

ಹೀಗೆ ಈ ಷಡಕ್ಷರಮಂತ್ರಕ್ಕೆ ದೃಶ್ಯಪ್ರಪಂಚವೆಲ್ಲವೂ ಸುಳ್ಳು, ಕಾಣುತ್ತಿರುವುದೆಲ್ಲವೂ ಅದ್ವಿತೀಯನಾದ ಸಚ್ಚಿದಾನಂದಸ್ವರೂಪನಾದ ಪರಶಿವನಲ್ಲಿ ಕಲ್ಪಿತವಾದುದು, ಅಂಥ ಪರಶಿವನೇ ನಾನಾ(ಜೀವ) ಗಿದ್ದೇನೆ. ಎಂಬುದೇ ಅರ್ಥವು. ಇದೇ ಸತ್ಯವಾದ ಅರ್ಥವು. ಬೇರೆ ವಿಧವಾದ ಸರಿಯಾದ ಅರ್ಥವಿಲ್ಲವು. ||೨೧||

ವೇದಾಸ್ಸರ್ವೇ ಪುರಾಣಾನಿ ಸ್ಮೃತಯೋ ಭಾರತಂ ತಥಾ ।
ಅನ್ಯಾನ್ಯಪಿ ಚ ಶಾಸ್ತ್ರಾಣಿ ತಥಾ ತರ್ಕಾಶ್ಚ ಸರ್ವಶಃ ॥೨೩॥

ಶೈವಾಗಮಾಶ್ಚ ವಿವಿಧಾ ಆಗಮಾ ವೈಷ್ಣವಾ ಅಪಿ ।
ಅನ್ಯಾಗಮಾಶ್ಚ ವಿದುಷಾಮನುಭೂತಿಸ್ತಥೈವ ಚ ॥೨೪॥

ಅಸ್ಮಿನ್ನರ್ಥೇ ಸ್ವಸಂವೇದ್ಯೇ ಪರ್ಯವಸ್ಯಂತಿ ನಾನ್ಯಥಾ ।
ಬಾಧ್ಯಬಾಧಕತಾಂ ಯಾನ್ತಿ ವ್ಯವಹಾರೇ ಪರಸ್ಪರಮ್ ॥೨೫॥

ಸಮುದ್ರ ಇವ ಕಲ್ಲೋಲಾ ಇತಿ ವೇದಾರ್ಥಸಂಗ್ರಹಃ ।
ಮಂತ್ರಾರ್ಥಃ ಕಥಿತಃ ಕೃತ್ಸ್ನಃ ಪುರಶ್ಚರ್ಯಾಽಧುನೋಚ್ಯತೇ ॥೨೬॥

ಇದೇ ಅರ್ಥವನ್ನೇ ಎಲ್ಲಾ ವೇದಗಳೂ ತದನುಸಾರಿಗಳಾದ ಪುರಾಣಗಳೂ ಸ್ಮೃತಿಗಳೂ ಮಹಾಭಾರತವೂ ಇತರ ಶಾಸ್ತ್ರಗಳೂ, ಶೈವಾಗಮ ವೈಷ್ಣವಾಗಮಾದಿಗಳೂ ಹೇಳುತ್ತವೆ. ಅಲ್ಲದೆ ಜ್ಞಾನಿಗಳ ಅನುಭವವೂ ಹೀಗೆಯೇ ಇದೆ. ಸ್ವಸಂವೇದ್ಯವಾದ ಆ ವಸ್ತುವಿನಲ್ಲೇ ಸಕಲ ವೇದಶಾಸ್ತ್ರಾದಿಗಳಿಗೂ ತಾತ್ಪರ್ಯವಾದ್ದರಿಂದ ಜೀವಬ್ರಹ್ಮೈಕ್ಯವೇ ಈ ಮಂತ್ರಕ್ಕೆ ಸತ್ಯವಾದ ಅರ್ಥವು. ||೨೩-೨೪||

ನೈಯಾಯಿಕರು ಪ್ರಮಾಣಪ್ರಮೇಯಾದಿ ಹದಿನಾರು ಪದಾರ್ಥಗಳೆಂದೂ ವೈಶೇಷಿಕರು ದ್ರವ್ಯಗುಣಕರ್ಮಾದಿ ಆರು ಪದಾರ್ಥಗಳೆಂದೂ, ಸಾಂಖ್ಯರು ಅವ್ಯಕ್ತ ಮಹದಹಂಕಾರಾದಿ ಇಪ್ಪತ್ತುನಾಲ್ಕು ತತ್ತ್ವಗಳೆಂದೂ, ಶೈವರು, ಶಿವ, ಶಕ್ತಿ ಇತ್ಯಾದಿ ಮೂವತ್ತಾರುತತ್ತ್ವಗಳೆಂದೂ ಹೀಗೆ ಇತರ ಶಾಸ್ತ್ರಜ್ಞರು ಹೇಳುತ್ತಿರುವಾಗ ಅದ್ವಿತೀಯನಾದ ಪರಶಿವನೊಬ್ಬನೇ ಎಂತ ಹೇಳುವುದು ಹೇಗೆ? ಎಂದರೆ, ಸಮುದ್ರದಲ್ಲಿ ಉತ್ಪನ್ನವಾದ ತೆರೆಗಳು, ಒಂದಕ್ಕೊಂದು ಬಾಧಕವಾಗುವ ಹಾಗೆ, ಇತರ ಶಾಸ್ತ್ರಗಳೆಲ್ಲವೂ ಪರಸ್ಪರ ವಿರೋಧಿಗಳಾಗಿರುವುದರಿಂದ, ಇವುಗಳಲ್ಲಿ ಯಾವುದಕ್ಕೂ ಪ್ರಾಮಾಣ್ಯವನ್ನು ಹೇಳುವುದಕ್ಕಾಗುವುದಿಲ್ಲ. ಹೀಗೆ ಪ್ರಮಾಣವಿಲ್ಲದವುಗಳಾದ್ದರಿಂದ ತೋರುವ ಅವುಗಳೆಲ್ಲವೂ ಮಿಥ್ಯೆಯಾದವುಗಳು, ಯಾವ ವಿಧವಾದ ಬಾಧಕವೂ ಇಲ್ಲದ್ದರಿಂದ ಆ ಪರಶಿವನು ಮಾತ್ರ ಅದ್ವಿತೀಯನು. ಎಂಬುದೇ ನಿಜವು. ಇದೇ ಎಲ್ಲಾ ಶ್ರುತಿಸ್ಮೃತಿಗಳಿಗೂ ತಾತ್ಪರ್ಯವು. ||೨೫||

ಇದುವರೆಗೆ ಷಡಕ್ಷರೀಮಂತ್ರದ ಅರ್ಥವನ್ನು ಹೇಳಿ ಈಗ ಆ ಮಂತ್ರದ ಪುರಶ್ಚರಣೆಯನ್ನು ಹೇಳುತ್ತಾರೆ. ಗುರುಗಳ ಮುಖದಿಂದ ಮಂತ್ರವನ್ನು ಉಪದೇಶ

ಆಚಾರ್ಯಮುಖತೋ ಮಂತ್ರಂ ಜ್ಞಾತ್ವಾಽಸ್ಯಾರ್ಥಂ ಸಮಾಹಿತಃ ।
ಯಥಾಶಕ್ತಿ ಧನಂ ತಸ್ಮೈ ಪ್ರದತ್ವಾ ತದನುಜ್ಞಯಾ ॥೨೭॥

ಸ್ನಾನಂ ತ್ರಿಷವಣಂ ಕೃತ್ವಾ ಭಸ್ಮನಾ ಶಾಕಭೋಜನಃ ।
ಫಲಮೂಲಾಶನೋ ವಾಽಪಿ ಹವಿಷ್ಯಾಶೀ ಯಥಾಬಲಮ್ ॥೨೮॥

ಪರ್ವತಾಗ್ರೇ ನದೀತೀರೇ ಸಾಗರಾಂತೇ ಶಿವಾಲಯೇ ।
ವನೇ ಚ ನಿರ್ಜನೇ ಶುದ್ಧೇ ಪ್ರಾಙ್ಮುಖೋದಙ್ಮುಖೋಽಪಿ ವಾ ॥೨೯॥

ಸಮಾಹಿತಮನಾ ಭೂತ್ವಾ ಸುಖಮಾಸನಮಾಸ್ಥಿತಃ ।
ಪ್ರಾಣಾಯಾಮತ್ರಯಂ ಕೃತ್ವಾ ಮುನಿಂ ಛಂದಸ್ತಥೈವ ಚ ॥೩೦॥

ದೇವತಾಂ ಚ ಯಥಾಶಕ್ತಿ ಬೀಜಂ ಸ್ಮೃತ್ವಾ ಮನೋರಪಿ ।
ಕರನ್ಯಾಸಂ ಪುರಾ ಕೃತ್ವಾ ತಥಾಂಗನ್ಯಾಸಮೇವ ಚ ॥೩೧॥
ಪಂಚಾಂಗಮಪಿ ವಿನ್ಯಸ್ಯ ಗುರುಂ ಸ್ಮೃತ್ವಾಽಭಿವಾದ್ಯ ಚ ।

ಮಾಡಿಸಿಕೊಂಡು ಆ ಮಂತ್ರದ ಅರ್ಥವನ್ನು ಚೆನ್ನಾಗಿ ತಿಳಿದುಕೊಂಡು, ಯಥಾಶಕ್ತಿಯಾಗಿ ಆಚಾರ್ಯದಕ್ಷಿಣೆಯನ್ನು ಕೊಟ್ಟು, ಅವರ ಅಪ್ಪಣೆಯನ್ನು ಪಡೆದು ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಈ ಮೂರು ಕಾಲಗಳಲ್ಲಿಯೂ ಭಸ್ಮಸ್ನಾನವನ್ನು ಮಾಡಿ, ಗೆಡ್ಡೆಗೆಣಸು ಕಾಯಿಪಲ್ಯ ಹವಿಸ್ಸುಗಳನ್ನು ದೇವತೆಗಳಿಗೆ ನಿವೇದಿಸಿ, ಉಳಿದುವನ್ನು ತನಗೆ ಸಾಕಾದಷ್ಟು ಕ್ಲಪ್ತವಾಗಿ ಸೇವಿಸುತ್ತಾ ನದೀತೀರದಲ್ಲಾಗಲಿ, ಸಮುದ್ರತೀರದಲ್ಲಾಗಲಿ, ಅಥವಾ ಈಶ್ವರದೇವಾಲಯದಲ್ಲಾಗಲಿ, ಏಕಾಗ್ರವಾದ ಮನಸ್ಸಿನಿಂದ ಜಪಮಾಡಬೇಕು. ||೨೬.೨೭-೨೮||

ಅಥವಾ ಜನಸಂಚಾರವಿಲ್ಲದ ವನದಲ್ಲಾಗಲಿ ಜಪಮಾಡಬೇಕು. ಜಪಮಾಡುವಾಗ ಉತ್ತರಮುಖವಾಗಿಯಾಗಲಿ, ಪೂರ್ವಮುಖವಾಗಿಯಾಗಲಿ ಸುಖವಾದ ಆಸನದಲ್ಲಿ ಕುಳಿತುಕೊಂಡು ಮೂರು ಪ್ರಾಣಾಯಾಮಗಳನ್ನು ಮಾಡಿ ಮಂತ್ರದ ಆದಿಯಲ್ಲಿ ಹೇಳಬೇಕಾದ ಹಿಂದೆ ಹೇಳಿದ, ಋಷಿ, ಛಂದಸ್ಸು, ದೇವತಾ, ಬೀಜ, ಶಕ್ತಿ, ಕೀಲಕ–ಇವುಗಳೆಲ್ಲವನ್ನೂ ಸ್ಮರಿಸಬೇಕು. ಅನಂತರ ಮೊದಲು ಕರನ್ಯಾಸಮಾಡಿ ಆಮೇಲೆ ಅಂಗನ್ಯಾಸವನ್ನು ಮಾಡಬೇಕು. ಹಿಂದೆ ಹೇಳಿರುವಂತೆ ಅಂಗಗಳಲ್ಲಿ

ಹೃತ್ಪುಂಡರೀಕಮಧ್ಯೇ ತು ಸೋಮಸೂರ್ಯಾಗ್ನಿಮಂಡಲೇ ॥೩೨॥

ವಿದ್ಯುಲ್ಲೇಖೇವ ಕಲ್ಯಾಣಂ ಜ್ವಲಂತಂ ವಹ್ನಿರೂಪಿಣಮ್ ।
ಶಿವಂ ಧ್ಯಾತ್ವಾ ಜಪೇನ್ಮಂತ್ರಂ ಲಕ್ಷಾಣಾಂ ಷಟ್ ಸಮಾಹಿತಃ ॥೩೩॥

ತರ್ಪಯೇಲ್ಲಕ್ಷಮೇಕಂ ತು ಜುಹುಯಾತ್ತು ಸಹಸ್ರಕಮ್ ।
ಆಜ್ಯೇನ ಪಯಸಾ ವಾಽಪಿ ಪಲಾಶಕುಸುಮೇನ ವಾ ॥೩೪॥

ತತಸ್ಸಿಧ್ಯತಿ ಮಂತ್ರೋಽಯಂ ಭುಕ್ತಿಮುಕ್ತಿಫಲಪ್ರದಃ ।
ಅಥವಾ ಸಾಂಬಮೀಶಾನಂ ಶ್ರೀಸದಾಶಿವಮೇವ ಚ ॥೩೫॥
ನೃತ್ಯಮಾನಂ ಮಹಾದೇವಂ ಧ್ಯಾತ್ವಾ ಮಂತ್ರಂ ತು ಸಾಧಯೇತ್ ।

ಆಯಾಯ ಅಕ್ಷರಗಳನ್ನು ನ್ಯಾಸಮಾಡಬೇಕು. ಗುರುಗಳ ಸ್ಮರಣೆಯನ್ನು ಮಾಡಿ ಅವರಿಗೆ ನಮಸ್ಕಾರವನ್ನೂ ಮಾಡಬೇಕು. ||೨೯-೩೦-೩೧||

ಹೀಗೆ ಪೂರ್ವಾಂಗವನ್ನೆಲ್ಲವನ್ನೂ ಸಿದ್ಧಮಾಡಿಕೊಂಡು ಅನಂತರ ಹೃದಯ ಕಮಲದ ಮಧ್ಯದಲ್ಲಿ ಸೋಮಮಂಡಲ, ಸೂರ್ಯಮಂಡಲ, ಅಗ್ನಿಮಂಡಲ-ಇವುಗಳನ್ನು ಒಂದರ ಮೇಲೊಂದರಂತೆ, ಹನ್ನೆರಡು ಹದಿನಾರು ದಳಗಳು ಇರುವವುಗಳನ್ನಾಗಿ ಭಾವಿಸಿ, ಅವುಗಳ ಮಧ್ಯದಲ್ಲಿ ಮಿಂಚಿನಂತೆ ಪ್ರಕಾಶಮಾನನಾದ ಅಗ್ನಿಯಂತೆ ಉರಿಯುತ್ತಿರುವ ಪರಶಿವನನ್ನು ಧ್ಯಾನಿಸುತ್ತಾ ಷಡಕ್ಷರೀಮಂತ್ರವನ್ನು ಆರು ಲಕ್ಷ ಸಲ ಜಪಿಸಬೇಕು. ||೩೨-೩೩||

ಜಪಮಾಡಿದಮೇಲೆ ಒಂದು ಲಕ್ಷ ತರ್ಪಣವನ್ನೂ ಸಹಸ್ರಹೋಮವನ್ನೂ ಮಾಡಬೇಕು.

ತುಪ್ಪದಿಂದಲಾಗಲಿ, ಹಾಲಿನಿಂದಲಾಗಲಿ ಅಥವಾ ಮುತ್ತುಗದ ಹೂವಿನಿಂದ ಲಾಗಲಿ ಹೋಮಮಾಡಬೇಕು. ಹೀಗೆ ಮಾಡಿದರೆ ಇಹಪರಸುಖಗಳನ್ನೂ ಭೋಗ ಮೋಕ್ಷಗಳನ್ನೂ ಕೊಡುವ ಈ ಮಂತ್ರವು ಸಿದ್ಧಿಸುವುದು. ||೩೪||

ಹಾಗಿಲ್ಲದಿದ್ದರೆ ಅಂಬಾಸಮೇತನಾದ ಈಶ್ವರನನ್ನಾಗಲಿ, ಸದಾಶಿವನನ್ನಾಗಲಿ, ನರ್ತನಮಾಡುತ್ತಿರುವ ಮಹಾದೇವನನ್ನಾಗಲಿ, ಧ್ಯಾನಮಾಡುತ್ತಾ ಈ ಮಂತ್ರವನ್ನು ಜಪಿಸಿ ಸಿದ್ಧಿಮಾಡಿಕೊಳ್ಳಬೇಕು ||೩೫||

ಅಥವಾ ಪ್ರಾಕೃತಂ ಭಾವಂ ಸ್ವೀಯಮುತ್ಸೃಜ್ಯ ಸರ್ವದಾ ॥೩೬॥

ಶಿವೋಽಹಮಿತಿ ಸಂಚಿಂತ್ಯ ಸಾಧಯೇದಿದಮುತ್ತಮುಮ್ ।
ಮಂತ್ರಸ್ಯ ಸಾಧನಂ ಪ್ರೋಕ್ತಂ ವಿನಿಯೋಗಃ ಪ್ರಕೀರ್ತ್ಯತೇ ॥೩೭॥

ನಿತ್ಯಂ ದ್ವಾದಶಸಾಹಸ್ರಂ ಜಪೇದ್ಭಕ್ತ್ಯಾ ಸಮಾಹಿತಃ ।
ಸಮ್ಯಗ್ಜ್ಞಾನಪ್ಲವಂ ಲಬ್ಧ್ವಾ ಸಂಸಾರಾಬ್ಧಿಂ ತರಿಷ್ಯತಿ ॥೩೮॥

ಲಕ್ಷಪಂಚಾಶತಂ ಜಪ್ತ್ವಾ ಸಾರಮೇಶ್ವರಮಾಪ್ನುಯಾತ್ ।
ಲಕ್ಷಾಣಾಂ ತು ಶತಂ ಜಪ್ತ್ವಾ ಸಾಕ್ಷಾದ್ರುದ್ರತ್ವಮಾಪ್ನುಯಾತ್ ॥೩೯॥

ಅಶೀತಿಲಕ್ಷಂ ಜಪ್ತ್ವಾ ತು ನರೋ ವಿಷ್ಣುತ್ವಮಾಪ್ನುಯಾತ್ ।
ಷಷ್ಟಿಲಕ್ಷಜಪೇನೈವ ಲಭತೇ ಬ್ರಹ್ಮಣಃ ಪದಮ್ ॥೪೦॥

ಚತ್ವಾರಿಂಶತಿಭಿರ್ಲಕ್ಷೈರ್ವಿರಾಡಾತ್ಮಾನಮಾಪ್ನುಯಾತ್ ।

ಅಥವಾ ಪ್ರಕೃತಿಯಿಂದುತ್ಪನ್ನವಾದ ಅಂತಃಕರಣಾದಿಗಳೇ ನಾನೆಂಬ ಭಾವನೆಯನ್ನು ಬಿಟ್ಟು ಸಾಕ್ಷಾತ್ಪರಶಿವನೇ ನಾನಾಗಿದ್ದೇನೆ. ಎಂಬದಾಗಿ ಧ್ಯಾನಮಾಡುತ್ತಾ ಮಂತ್ರಜಪಮಾಡಿ ಸಿದ್ಧಿಮಾಡಿಕೊಳ್ಳಬೇಕು. ॥೩೬॥

ಮಂತ್ರಸಾಧನೆಯ ಕ್ರಮವನ್ನು ಹೇಳಿ ವಿನಿಯೋಗವನ್ನು ಹೇಳುತ್ತಾರೆ. ॥೩೭॥

ಪ್ರತಿದಿನವೂ ಹನ್ನೆರಡು ಸಾವಿರಸಲ ಈ ಮಂತ್ರದ ಜಪವನ್ನು ಭಕ್ತಿಯಿಂದ ಮಾಡಿದರೆ ಅದರಿಂದ ಜ್ಞಾನವುಂಟಾಗಿ, ಸಂಸಾರವೆಂಬ ಸಮುದ್ರವನ್ನು ದಾಟುತ್ತಾನೆ.

ಐವತ್ತುಲಕ್ಷಸಲ ಜಪಮಾಡಿದರೆ ಸಾಕ್ಷಾತ್ಪರಮೇಶ್ವರನೇ ಆಗುತ್ತಾನೆ. ॥೩೮॥

ನೂರು ಲಕ್ಷ ಜಪಮಾಡಿದರೆ ಸಾಕ್ಷಾದ್ರುದ್ರನೇ ಆಗುತ್ತಾನೆ.

ಎಂಬತ್ತು ಲಕ್ಷ ಜಪಮಾಡಿದರೆ ವಿಷ್ಣುವಿನ ರೂಪವನ್ನು ಪಡೆಯುತ್ತಾನೆ. ॥೩೯॥

ಅರವತ್ತುಲಕ್ಷ ಜಪಮಾಡೋಣದರಿಂದ ಬ್ರಹ್ಮಪದವಿಯು ಪ್ರಾಪ್ತವಾಗುವುದು. ॥೪೦॥

ಇಪ್ಪತ್ತುನಾಲ್ಕುಲಕ್ಷ ಜಪಗಳಿಂದ ವಿರಾಟ್ಸ್ವರೂಪವನ್ನು ಪಡೆಯುತ್ತಾನೆ.

ವಿಂಶಲ್ಲಕ್ಷ ಜಪೇನೈವ ದೀರ್ಘಮಾಯುರವಾಪ್ನುಯತ್ ॥೪೧॥

ಷಟ್ಕರ್ಮಾಣಿ ಪ್ರಸಿಧ್ಯಂತಿ ದಶಲಕ್ಷಜಪೇನ ತು ।
ವಿನಿಯೋಗಸ್ಸಮಾಖ್ಯಾತಃ ಪೂಜಾ ದೇವಸ್ಯ ಕೀರ್ತ್ಯತೇ ॥೪೨॥

ಹೃತ್ಪದ್ಮಕರ್ಣಿಕಾಮಧ್ಯೇ ಮಂತ್ರೇಣಾನೇನ ಪೂಜಯೇತ್ ।
ಅಥವಾ ಮಂಡಲೇ ಸೌರೇ ಚಂದ್ರಮಂಡಲಕೇ ತಥಾ ॥೪೩॥

ಅಗ್ನೌ ವಾ ಪ್ರತಿಮಾಯಾಂ ವಾ ಶಿವಂ ನಿತ್ಯಂ ಪ್ರಪೂಜಯೇತ್ ।
ಆಸನಂ ಪ್ರಥಮಂ ದದ್ಯಾದಾವಾಹನಮತಃಪರಮ್ ॥೪೪॥

ಅರ್ಘ್ಯಂ ತತಃ ಪರಂ ದದ್ಯಾತ್ ಪಾದ್ಯಂ ಚೈವ ತತಃ ಪರಮ್ ।
ಪುನರಾಚಮನಂ ದದ್ಯಾತ್ ಸ್ನಾಪಯೇತ್ತು ತತಃಪರಮ್ ॥೪೫॥

ವಾಸೋ ದದ್ಯಾತ್ಪುನರ್ಯಜ್ಞೋಪವೀತಂ ಭೂಷಣಾನಿ ಚ ।
ಗಂಧಂ ಪುಷ್ಪಂ ತಥಾ ಧೂಪಂ ದೀಪಮೋದನಮೇವ ಚ ॥೪೬॥

ಇಪ್ಪತ್ತುಲಕ್ಷ ಜಪಮಾಡಿದರೆ ದೀರ್ಘವಾದ ಆಯುಸ್ಸನ್ನು ಪಡೆಯುತ್ತಾನೆ. ॥೪೧॥

ಹತ್ತುಲಕ್ಷ ಜಪಮಾಡಿದ್ದೇ ಆದರೆ, ಅವನಿಗೆ ಷಟ್ಕರ್ಮಗಳು (ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ, ಯಜನ, ಯಾಜನ)—ಸಿದ್ಧಿಸುತ್ತವೆ.

ಹೀಗೆ ವಿನಿಯೋಗವನ್ನು ತಿಳಿಸಿ ದೇವರ ಪೂಜಾವಿಧಿಯನ್ನು ಹೇಳುತ್ತಾರೆ. ॥೪೨॥

ಹೀಗೆ ಮಾಡಲು ಅಶಕ್ತರಾದವರು ಹೃದಯಕಮಲದ ಎಸಳಿನ ಮಧ್ಯದಲ್ಲಿರುವ ಪರಮೇಶ್ವರನನ್ನು ಮೇಲೆ ಹೇಳಿದ ಮಂತ್ರದಿಂದ ಪೂಜೆಮಾಡಬೇಕು. ಎಂದರೆ ಈ ಹೃದಯಕಮಲದಲ್ಲಿ ಈಶ್ವರಧ್ಯಾನಮಾಡಬೇಕು.

ಅಥವಾ ಸೂರ್ಯಮಂಡಲದಲ್ಲಾಗಲಿ, ಚಂದ್ರಮಂಡಲದಲ್ಲಾಗಲಿ, ಅಗ್ನಿಯಲ್ಲಾಗಲಿ ಮುಂದೆ ಹೇಳುವ ರೀತಿಯಿಂದ ಪೂಜೆಮಾಡಬೇಕು. ಹಾಗೆ ಮಾಡುವುದಕ್ಕೂ ಶಕ್ತಿ ಇಲ್ಲದಿದ್ದಲ್ಲಿ ಈಶ್ವರನ ಪ್ರತಿಮೆಯಲ್ಲಾದರೂ ಪರಶಿವನ ಪೂಜೆಯನ್ನು ಮಾಡಬೇಕು. ॥೪೩॥

ಪೂಜೆಮಾಡಬೇಕಾದರೆ ಮೊದಲು ಆಸನವನ್ನು ಕೊಡಬೇಕು. ಅನಂತರ ಆವಾಹನೆಮಾಡಬೇಕು. ಆಮೇಲೆ ಅರ್ಘ್ಯವನ್ನೂ ಪಾದ್ಯವನ್ನೂ ಆಚಮನವನ್ನೂ

ಮಾಲ್ಯಮಾಲೇಪನಂ ದದ್ಯಾನ್ನಮಸ್ಕೃತ್ಯ ವಿಸರ್ಜಯೇತ್ ।
ಷಡಕ್ಷರೇಣ ಮಂತ್ರೇಣ ಸರ್ವಂ ಕುರ್ಯಾದ್ವಿಚಕ್ಷಣಃ ॥೪೭॥

ಹೃತ್ಪದ್ಮಕರ್ಣಿಕಾಮಧ್ಯಾತ್ಕುರ್ಯಾದಾವಾಹನಂ ಬುಧಃ ।
ಉದ್ವಾಸನಂ ಚ ತತ್ರೈವ ನರಃ ಕುರ್ಯಾತ್ಸಮಾಹಿತಃ ॥೪೮॥

ಸರ್ವಮುಕ್ತಂ ಸಮಾಸೇನ ನರಾಣಾಂ ಭುಕ್ತಿಮುಕ್ತಯೇ ।
ತಸ್ಮಾತ್ಸರ್ವಂ ಪರಿತ್ಯಜ್ಯ ಷಡಕ್ಷರಪರೋ ಭವೇತ್ ॥೪೯॥
ಷಡಕ್ಷರೇಣ ಸರ್ವಾಣಿ ಸಿಧ್ಯಂತ್ಯೇವ ನ ಸಂಶಯಃ ।

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಷಡಕ್ಷರವಿಚಾರೋ ನಾಮ ಅಷ್ಟಮಾಧ್ಯಾಯಃ

ಕ್ರಮವಾಗಿ ಸಮರ್ಪಿಸಬೇಕು. ಆಮೇಲೆ ಸ್ನಾನಮಾಡಿಸಬೇಕು. ಕ್ರಮವಾಗಿ ವಸ್ತ್ರವನ್ನೂ ಯಜ್ಞೋಪವೀತವನ್ನೂ ಆಭರಣಗಳನ್ನೂ ಸಮರ್ಪಿಸಬೇಕು. ॥೪೪-೪೫॥

ಅನಂತರದಲ್ಲಿ ಗಂಧವನ್ನೂ ಹೂವನ್ನೂ ಧೂಪ, ದೀಪ, ನೈವೇದ್ಯಗಳನ್ನೂ ಸಮರ್ಪಿಸಿ ಹೂವಿನ ಮಾಲೆಯನ್ನೂ ಸುವಾಸನಾದ್ರವ್ಯವನ್ನೂ ಭಕ್ತಿಯಿಂದ ಸಮರ್ಪಿಸಿ ಸಾಷ್ಟಾಂಗನಮಸ್ಕಾರಮಾಡಿ ವಿಸರ್ಜನೆಮಾಡಬೇಕು. ॥೪೬॥

ಈ ಎಲ್ಲಾ ಪೂಜೆಗಳನ್ನೂ ಷಡಕ್ಷರೀಮಂತ್ರದಿಂದಲೇ ಮಾಡಬೇಕು. ॥೪೭॥

ಈಶ್ವರನು ಸರ್ವವ್ಯಾಪಿಯಾಗಿದ್ದಾನೆ. ಆದಾಗ್ಯೂ ಹೃದಯಕಮಲವು ವಿಶೇಷ ಅಭಿವ್ಯಕ್ತಿಸ್ಥಾನವಾದ್ದರಿಂದ ಅಲ್ಲಿಯೇ(ಹೃದಯಕಮಲದಲ್ಲಿಯೇ)ಈಶ್ವರನ ಆವಾಹನೆಯನ್ನೂ ವಿಸರ್ಜನೆಯನ್ನೂ ಏಕಾಗ್ರಮನಸ್ಸಿನಿಂದ ಕೂಡಿ ಮಾಡಬೇಕು. ॥೪೮॥

ಮನುಷ್ಯರಿಗೆ ಇಹದಲ್ಲಿ ಸೌಖ್ಯವನ್ನೂ ಉತ್ತಮವಾದ ಗತಿಯನ್ನೂ ಕೊಡುವಂಥ ಷಡಕ್ಷರೀ ಉಪಾಸನೆಯು ಹೀಗೆ ಹೇಳಲ್ಪಟ್ಟಿದೆ. ಇಂಥ ಉಪಾಸನೆಯು ಸರ್ವ ಇಷ್ಟಾರ್ಥಗಳನ್ನೂ ಕೊಡುವುದಾದ್ದರಿಂದ ಎಲ್ಲವನ್ನೂ ಬಿಟ್ಟು ಷಡಕ್ಷರಿಯನ್ನೇ ಉಪಾಸನೆಮಾಡಬೇಕು. ಹೀಗೆ ಉಪಾಸನೆಮಾಡಿದರೆ ಉಪಾಸಕನ ಸಕಲ ಇಷ್ಟಾರ್ಥಗಳೂ ನೆರವೇರುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲವು. ॥೪೯॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಷಡಕ್ಷರಮಂತ್ರಜಪಪೂಜಾದಿಗಳನ್ನು ವಿವರಿಸುವ
ಎಂಟನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ನವಮೋಽಧ್ಯಾಯಃ ||

ಒಂಬತ್ತನೆಯ ಅಧ್ಯಾಯವು

(ಧ್ಯಾನಯಜ್ಞಃ)

|| ಸೂತ ಉವಾಚ ||

ಧ್ಯಾನಯಜ್ಞಮಥೇದಾನೀಂ ಪ್ರವಕ್ಷ್ಯಾಮಿ ಸಮಾಸತಃ ।
ಶೃಣುತ ಶ್ರದ್ಧಯಾ ಯೂಯಂ ಭುಕ್ತಿಮುಕ್ತಿಫಲಪ್ರದಮ್ ॥೧॥

ಪರಾತ್ಪರತರಂ ತತ್ತ್ವಂ ಧ್ಯೇಯಂ ಮೂರ್ತ್ಯಾತ್ಮನೈವ ತು ।
ನ ಸ್ವರೂಪೇಣ ಸಾಕ್ಷಿತ್ವಾದಾತ್ಮತ್ವಾದ್ವಿಷಯತ್ವತಃ ॥೨॥

ಇದುವರೆಗೆ ವಾಚಿಕವಾದ ಯಜ್ಞವನ್ನು ಹೇಳಿ ಅದಕ್ಕಿಂತಲೂ ಉತ್ಕೃಷ್ಟವಾದ ಮನಸ್ಸಿನಿಂದ ಮಾಡಲು ಸಾಧ್ಯವಾದ ಧ್ಯಾನಯಜ್ಞವನ್ನು ಹೇಳುತ್ತೇನೆ. ಇದನ್ನು ನೀವುಗಳೆಲ್ಲರೂ ಶ್ರದ್ಧೆಯಿಂದ ಕೇಳಿರಿ. ಈ ಧ್ಯಾನಯಜ್ಞವು ಇಹದಲ್ಲಿ ಅನೇಕ ಭೋಗಗಳನ್ನೂ ಅನಂತರ ಮುಕ್ತಿಯನ್ನೂ ಕೊಡುವಂಥದು. ||೧||

ಹೀಗೆ ಧ್ಯಾನಯಜ್ಞವನ್ನು ಹೇಳುತ್ತೇವೆಂದು ಪ್ರತಿಜ್ಞೆಮಾಡಿ ಧ್ಯೇಯವಾದ ವಸ್ತುವಿನ ಸ್ವರೂಪವು ಗೊತ್ತಿಲ್ಲದೆ ಧ್ಯಾನಮಾಡುವುದಕ್ಕೆ ಆಗುವುದಿಲ್ಲವಾದ್ದರಿಂದ ಧ್ಯೇಯವಸ್ತುವಿನ ಸ್ವರೂಪವನ್ನು ನಿರ್ಣಯಮಾಡುತ್ತಾರೆ.

ಆ ಪರಶಿವನು ಸಾಕ್ಷಿಯಾಗಿರುವುದರಿಂದಲೂ (ಸಾಕ್ಷಿ ಎಂದರೆ ಸ್ಥೂಲಸೂಕ್ಷ್ಮ ಕಾರಣದೇಹಗಳಿಂದ ಬೇರೆಯಾಗಿ ಉದಾಸೀನನಾಗಿದ್ದು ಅವುಗಳಿಂದ ನಡೆಯುವ

ಭೇದಾಭಾವಾಚ್ಚ ಭೇದಸ್ಯ ಭ್ರಮತ್ವಾದೇವ ವಸ್ತುತಃ ।
ಉಮಾರ್ಧವಿಗ್ರಹಾ ಶುಕ್ಲಾ ಚಂದ್ರಾರ್ಧಕೃತಶೇಖರಾ ॥೩॥

ನೀಲಗ್ರೀವಾ ತ್ರಿನೇತ್ರಾ ಚ ಪ್ರಸನ್ನವದನಾ ಶುಭಾ ।
ವರದಾಭಯಹಸ್ತಾ ಚ ವಿಚಿತ್ರಮುಕುಟೋಜ್ಜ್ವಲಾ ॥೪॥

ಸರ್ವಲಕ್ಷಣಸಂಪನ್ನಾ ಸರ್ವಾಭರಣಭೂಷಿತಾ ।
ಸ್ವಸ್ವರೂಪಾನುಸಂಧಾನ ಪ್ರಮೋದಾದೇವ ಕೇವಲಾತ್ ॥೫॥

ಕಾರ್ಯಗಳನ್ನು ತಿಳಿಯುವವನು. ಸ್ವತಃ ಬಹಿರ್ಮುಖವಾದ ಅಂತಃಕರಣಕ್ಕೆ ಗೋಚರನಾಗದೆ ಇರುವುದರಿಂದಲೂ, ಚೈತನ್ಯವು ಒಂದೇ ಆಗಿರುವುದರಿಂದಲೂ, ಧ್ಯಾನ ಮಾಡುವವನು, ಧ್ಯಾನಕ್ಕೆ ವಿಷಯನು ಎಂಬ ಭೇದಕ್ಕೆ ಅವಕಾಶವಿಲ್ಲವು. ಒಂದೇ ವಸ್ತುವಿಗೆ ಎರಡನ್ನೂ (ಧ್ಯಾತೃ, ಧ್ಯೇಯಭಾವಗಳನ್ನು) ಒಪ್ಪಿದರೆ ಕರ್ಮಕರ್ತೃಭಾವ ವಿರೋಧ ಬರುವುದರಿಂದಲೂ ಮಾಯಾತೀತನಾದ ಸಚ್ಚಿದಾನಂದ ಸ್ವರೂಪನಾದ ಪರಶಿವನ ಸ್ವರೂಪವನ್ನು ಧ್ಯಾನಮಾಡುವುದಕ್ಕೆ ಆಗುವುದಿಲ್ಲವಾದ್ದರಿಂದ ಯಾವು ದಾದರೊಂದು ಉಪಾಧಿವಿಶಿಷ್ಟನನ್ನಾಗಿಯೇ ಎಂದರೆ ಮೂರ್ತಿರೂಪದಿಂದ ಧ್ಯಾನ ಮಾಡಬೇಕು.

ಧ್ಯಾನಮಾಡುವವನು ಜೀವನು, ಧ್ಯೇಯನು ಆ ಪರಶಿವನು—ಆದ್ದರಿಂದ ಮೇಲೆ ಹೇಳಿದ ದೋಷ ಬರುವುದಲ್ಲ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆ.

ವಸ್ತುತಃ ಜೀವನಿಗೂ ಆತ್ಮನಿಗೂ ಭೇದವಿಲ್ಲ, ಪ್ರತೀತ್ಯಾದಿಗಳಿಂದ ತೋರು ತ್ತಿರುವ ಭೇದವು ಭ್ರಾಂತಿಯೇ ಹೊರತು ಅನ್ಯಥಾ ಇಲ್ಲ. ಆದ್ದರಿಂದ ನಿರುಪಾಧಿಕ ನಾದ ಪರಶಿವನನ್ನು ಉಪಾಧಿವಿಶಿಷ್ಟನನ್ನಾಗಿಯೇ ಧ್ಯಾನಮಾಡಬೇಕು. ಈಗ ಸೋಪಾಧಿಕನಾದ ಧ್ಯೇಯನಾದ ಪರಶಿವನ ಸ್ವರೂಪವನ್ನು ತಿಳಿಸುತ್ತಾರೆ. ॥೨॥

ಪಾರ್ವತಿಯೇ ಅರ್ಧಶರೀರವಾಗಿ ಉಳ್ಳದ್ದಾಗಿಯೂ, ಶುಭ್ರವಾದ ಬಣ್ಣವುಳ್ಳ ದ್ದಾಗಿಯೂ, ಮೂರು ಕಣ್ಣುಗಳುಳ್ಳದ್ದಾಗಿಯೂ, ಅರ್ಧಚಂದ್ರನನ್ನು ಧರಿಸಿರುವುದಾ ಗಿಯೂ, ಕಪ್ಪಾದ ಕುತ್ತಿಗೆಯುಳ್ಳದ್ದಾಗಿಯೂ, ಅನುರಾಗವಿಶಿಷ್ಟವಾದ ಮುಖವುಳ್ಳ ದ್ದಾಗಿಯೂ, ಮಂಗಳಕರವಾದದ್ದಾಗಿಯೂ, ವರವನ್ನೂ ಅಭಯವನ್ನೂ ಕೊಡುವ ಕೈಚಿಹ್ನೆಯುಳ್ಳದ್ದಾಗಿಯೂ, ವಿಚಿತ್ರವಾದ ಕಿರೀಟದಿಂದ ಶೋಭಿಸುವುದಾಗಿಯೂ,

ಮಹಾತಾಂಡವಸಂಯುಕ್ತಾ ಬ್ರಹ್ಮವಿಷ್ಣುಶಿವಾದಿಭಿಃ ।
ಧ್ಯೇಯಾಽದ್ಯಂತವಿನಿರ್ಮುಕ್ತಾ ಯಾ ಮೂರ್ತಿಶ್ಶ್ರುತಿದರ್ಶಿತಾ ॥೬॥

ಸೈವಾಸಾಧಾರಣಾ ಮೂರ್ತಿಃ ಪರಾತ್ಪರತರಸ್ಯ ತು ।
ಯೇ ಸದಾ ಪರಮಾಂ ಮೂರ್ತಿಂ ಧ್ಯಾಯನ್ತಿ ಹೃದಯಾಂಬುಜೇ॥೭॥

ಇಹ(ಮಾಂ)ತೇ ಪರಮಾಂ ಭುಕ್ತಿಂ ಮುಕ್ತಿಂ ಚ ಪ್ರಾಪ್ನುವಂತಿ ಹಿ ।
ಜ್ಞಾನಾಜ್ಞಾನಮಹಾಮಾಯಾಲಕ್ಷಣಾವಿದ್ಯಾಯಾ ಸಹ ॥೮॥

ಅಭೇದೇನಾಸ್ಥಿತಂ ವಿಪ್ರಾಃ ಪರಾತ್ಪರತರಂ ಪದಮ್ ।
ಸ್ವಪ್ರಧಾನತಯೋಽಪಾಸ್ಯಂ ತಥೈವಾಸ್ವಪ್ರಧಾನತಃ ॥೯॥

ಎಲ್ಲಾ ವಿಧವಾದ ಆಭರಣಗಳಿಂದ ಅಲಂಕಾರಮಾಡಲ್ಪಟ್ಟದ್ದಾಗಿಯೂ, ತನ್ನ ನಿಜ ಸ್ವರೂಪವನ್ನು ತಿಳಿದಿರುವುದರಿಂದ ಅದ್ಭುತವಾದ ನರ್ತನೆಯಲ್ಲಿ ಆಸಕ್ತಿಯುಳ್ಳದ್ದಾಗಿಯೂ, ಬ್ರಹ್ಮ, ವಿಷ್ಣು, ಶಿವ, ಇವರುಗಳಿಂದ ಧ್ಯಾನಮಾಡಿಸಿಕೊಳ್ಳುವುದಾಗಿಯೂ, ಆದ್ಯಂತರಹಿತವಾಗಿಯೂ, "ಉಮಾಸಹಾಯಂ" ಇತ್ಯಾದಿ ಶ್ರುತಿಸಿದ್ಧವಾಗಿಯೂ ಇರುವ ಆ ಪರಶಿವನ ಸರ್ವಜನಗಳಿಂದಲೂ ತಿಳಿಯಲು ಯೋಗ್ಯವಾದ ಮೂರ್ತಿಯನ್ನು ಧ್ಯಾನಮಾಡಬೇಕು. ॥೩-೪-೫-೬॥

ಇಂಥ ಪರಶಿವನ ಉತ್ತಮವಾದ ಮೂರ್ತಿಯನ್ನು ಯಾರು ಹೃದಯಕಮಲದಲ್ಲಿ ಧ್ಯಾನಮಾಡುತ್ತಾರೋ, ಅವರು ಇಹಲೋಕದಲ್ಲಿ ಅನೇಕವಿಧವಾದ ಭೋಗಗಳನ್ನೂ ಅನಂತರ ಮುಕ್ತಿಯನ್ನೂ ಹೊಂದುತ್ತಾರೆ. ॥೭॥

ಎಲೈ ಬ್ರಾಹ್ಮಣರಿರಾ, ಆ ಪರಶಿವನಿಗೆ ಮೇಲೆ ಹೇಳಿದ ಮೂರ್ತಿಸ್ವರೂಪವು ಒಂದು ಉಪಾಧಿ. ಅಲ್ಲದೆ ತ್ರಿಗುಣಾತ್ಮಕವಾದ ಮಾಯೆಯ ಸತ್ತ್ವಗುಣದ ಪರಿಣಾಮರೂಪವಾದ ಅಂತಃಕರಣವೃತ್ತಿಯೂ, ತಮೋಗುಣಪ್ರಧಾನವಾದ ವೃತ್ತ್ಯಭಾವರೂಪವಾದ ಅಜ್ಞಾನವೂ, ಸ್ವಾಶ್ರಯಮೋಹಕರವಾಗದ ಮಾಯೆಯೂ, ಅದರ ಕಾರ್ಯವಾದ ಅಜ್ಞಾನವೂ ಹೀಗೆ ಬೇರೆಬೇರೆ ನಾಲ್ಕು ಉಪಾಧಿಗಳು : ಇಂಥ ನಾಲ್ಕು ಉಪಾಧಿಗಳಿಂದಲೂ ಭೇದವಿಲ್ಲದೆ ಅವುಗಳನ್ನು ಮೀರಿ ಇರುವುದೇ ಆ ಪರಶಿವನ ಸ್ಥಾನವು. ॥೮॥

ಹೀಗೆ ನಾಲ್ಕು ವಿಧವಾದ ಉಪಾಧಿಗಳಲ್ಲಿ ಒಂದೊಂದರಿಂದಲೂ ಬೇರೆಬೇರೆಯಾಗಿ ಕೂಡಿದ ಪರಶಿವನನ್ನು ಉತ್ತಮಮಧ್ಯಮಾಧಿಕಾರಿಗಳು ತಮತಮಗೆ

ಸ್ವಪ್ರಧಾನತಯಾ ತತ್ತ್ವಮುಪಾಸ್ತೇ ಶುದ್ಧಮಾನಸಃ ।
ತಥೈವಾಪಕ್ವಚಿತ್ತಸ್ತು ಪರತತ್ತ್ವಂ ದ್ವಿಜೋತ್ತಮಾಃ ॥೧೦॥

ಅಸ್ವಪ್ರಧಾನರೂಪೇಣ ತಥಾ ಮರ್ತ್ಯಸ್ತು ಮಧ್ಯಮಃ ।
ಸಮಪ್ರಧಾನರೂಪೇಣ ತತ್ತ್ವಂ ಧ್ಯಾಯತಿ ಸಾದರಮ್ ॥೧೧॥

ಜಾಡ್ಯಾಕಾರಸ್ತು ಯಶ್ಶಕ್ತೇಸ್ತೇನಾಭಿನ್ನಂ ಪರಂ ಪದಮ್ ।
ಸ್ವಪ್ರಧಾನಾದಿರೂಪೇಣ ತ್ರಿಧೋಪಾಸ್ಯಂ ವಿಚಕ್ಷಣೈಃ ॥೧೨॥

ತಥಾಶಕ್ತೇಸ್ತು ಯೋ ಜ್ಞಾನಾಕಾರಸ್ತೇನೈಕತಾಂ ಗತಮ್ ।
ಪರತತ್ತ್ವಂ ತಥೋಪಾಸ್ಯಂ ಪರಿಜ್ಞಾನವತಾಂ ವರಾಃ ॥೧೩॥

ಎಂದರೆ ತಮ್ಮ ಮನಃಪರಿಪಾಕದ ಅಂತಸ್ತಿಗೆ ಯೋಗ್ಯವಾದ. ಸ್ವಪ್ರಧಾನ, ಸಮಪ್ರಧಾನ, ಅಸ್ವಪ್ರಧಾನ ಎಂಬ ಮೂರು ವಿಧಗಳಲ್ಲಿ ಒಂದರಿಂದ ಧ್ಯಾನಮಾಡಬೇಕು. ||೯||

ಪರಿಪಕ್ವವಾದ ಮನಸ್ಸುಳ್ಳ ಉತ್ತಮಾಧಿಕಾರಿಯು ಸ್ವಪ್ರಧಾನವಾಗಿ (ಉಪಧೇಯವಾದ ಪರವಸ್ತುವೇ ಮುಖ್ಯವಾದದ್ದು, ಮೂರ್ತಿಯು ಅಮುಖ್ಯವಾದುದು ಎಂಬದಾಗಿ) ಧ್ಯಾನಮಾಡಬೇಕು. ಮನಃಪರಿಪಾಕವನ್ನು ಪಡೆಯದ ಅಧಮಾಧಿಕಾರಿಯು ಅಸ್ವಪ್ರಧಾನವಾಗಿ (ಉಪಧೇಯವಾದ ಪರಶಿವನ ಸ್ವರೂಪವನ್ನು ಪ್ರಧಾನವನ್ನಾಗಿ ತಿಳಿಯದೆ) ಮೂರ್ತಿಯನ್ನೇ ಧ್ಯಾನಮಾಡಬೇಕು. ಮಧ್ಯಮಾಧಿಕಾರಿಯು ಮೂರ್ತಿ, ಪರತತ್ವಗಳನ್ನು ಸಮಪ್ರಧಾನವಾಗಿ ತಿಳಿದು ಧ್ಯಾನಮಾಡಬೇಕು. ||೧೦-೧೧||

ಪ್ರಕೃತಿಯ ಯಾವ ಜಡವಾದ ಆಕಾರವುಂಟೋ ಅದೂ ಕೂಡ ಆ ಪರವಸ್ತುವಿಗಿಂತಲೂ ಬೇರೆಯಾದುದಲ್ಲವಾದ್ದರಿಂದ ಅದನ್ನೂ ಮೇಲೆ ಹೇಳಿದ ಮೂರು ರೀತಿಯಿಂದ ಉಪಾಸನೆಮಾಡಬೇಕು. ||೧೨||

ತಿಳಿವಳಿಕೆಯುಳ್ಳವರಲ್ಲಿ ಶ್ರೇಷ್ಠರಾದ ಎಲೈ ಋಷಿಗಳಿರಾ, ಪ್ರಕೃತಿಸಂಬಂಧವಾದ ಯಾವ ವೃತ್ತಿರೂಪವಾದ ಜ್ಞಾನವುಂಟೋ ಅದೂ ಪರತತ್ತ್ವದಿಂದ ಬೇರೆಯಲ್ಲವಾದ್ದರಿಂದ ಅದನ್ನೂ ಮೇಲೆ ಹೇಳಿದ ಮೂರು ಬಗೆಯಿಂದ ಉಪಾಸನೆಮಾಡಬೇಕು. ||೧೩||

ಮಾಯಾಕಾರ್ಯೈಕತಾಪನ್ನಮಪಿ ತತ್ತ್ವಂ ಮನೀಷಿಭಿಃ ।
ಉಪಾಸ್ಯಂ ತ್ರಿವಿಧಂ ಪ್ರೋಕ್ತಂ ತಥೈವಾವಿದ್ಯಯೈವ ತು ॥೧೪॥

ಪಂಡಿತರು ಮಾಯಾ, ಅವಿದ್ಯಾ—ಇವುಗಳ ಆಕಾರದಿಂದಲೂ ಬೇರೆಯಾಗದ ಬ್ರಹ್ಮನನ್ನ ಮೇಲೆ ಹೇಳಿದ ರೀತಿಯಿಂದ ಧ್ಯಾನಮಾಡಬೇಕು.

ಈ ಸಂದರ್ಭದಲ್ಲಿ ಮಾಯೆಗೂ ಅವಿದ್ಯೆಗೂ ಭೇದವನ್ನು ವಿಶದವಾಗಿ ತಿಳಿದಿರಬೇಕಾದುದು ಆವಶ್ಯಕವಾಗಿದೆ. ಸೃಜ್ಯಮಾನವಾಗಿರುವ ಪ್ರಾಣಿಗಳ ಕರ್ಮವಶದಿಂದ ಸೃಷ್ಟ್ಯುನ್ಮುಖವಾದ ಬ್ರಹ್ಮತತ್ವವು ಪ್ರಕಟಶಕ್ತಿಯಿಂದ ಸಗುಣಬ್ರಹ್ಮವೆನಿಸುತ್ತದೆ. ಈ ಅಹಂವೃತ್ತಿಯಿಂದಲೂ, "ಅನೇಕವಾಗಿ ಸೃಜಿಸುವೆನು." ಎಂಬ ವೃತ್ತಿಯಿಂದಲೂ, ಕೂಡಿರುವ ಬ್ರಹ್ಮಕ್ಕೇ ಈಶ್ವರನೆಂದು ಹೆಸರು. ಈ ಈಶ್ವರನ ಉಪಾಧಿಗೆ ಮಾಯೆ ಎಂದು ಹೆಸರು. ಇದು ತನಗೆ ಆಶ್ರಯವಾಗಿರುವ ಈಶ್ವರನಿಗೆ ಅಜ್ಞಾನವನ್ನುಂಟು ಮಾಡದು. ಇದರ ಕಾರ್ಯಗಳು ಅನಂತವಾಗಿಯೂ ಆಶ್ಚರ್ಯಕರಗಳಾಗಿಯೂ ಇವೆ. ಈ ಕಾರ್ಯಕರಣಸಾಮರ್ಥ್ಯಕ್ಕೇ ಶಕ್ತಿ ಎಂದು ಹೆಸರು. ಈ ಮಾಯಾಶಕ್ತಿಯ ಅಂಶಗಳು ನಾನಾಬಗೆಯಾಗಿ ತಮ್ಮ ಸ್ವರೂಪ, ಸಾಮರ್ಥ್ಯಗಳಲ್ಲಿ ತಾರತಮ್ಯಗಳಿಂದ ಕೂಡಿರುತ್ತವೆ. ಈ ಮಾಯಾವಿಶಿಷ್ಟಬ್ರಹ್ಮವೇ ಅರ್ಧನಾರೀಶ್ವರ, ಪರಶಿವ ಎಂದೂ ವ್ಯವಹಾರವನ್ನು ಪಡೆದಿದೆ. ಈ ಮಾಯೆಯು ಅಥವಾ ಉಪಾಧಿಯು ಸತ್ತ್ವ ರಜಸ್ ತಮಸ್ ಎಂಬ ಮೂರು ಗುಣಗಳೇ ಸ್ವರೂಪವಾಗಿ ಉಳ್ಳದು. ಇದರ ಸತ್ವಪ್ರಧಾನವಾದ ಶಕ್ತಿಯಿಂದ ವಿಷ್ಣುವೂ, ರಜಃಪ್ರಧಾನವಾದ ಶಕ್ತಿಯಿಂದ ಬ್ರಹ್ಮನೂ, ತಮಃಪ್ರಧಾನವಾದ ಶಕ್ತಿಯಿಂದ ರುದ್ರನೂ, ಈ ಉಪಾಧಿಶಕ್ತಿಯ ಅಂಶರಾದ ಲಕ್ಷ್ಮೀ, ವಾಣೀ, ಉಮಾದೇವಿಯರೆಂಬ ಮಾಯಾರೂಪರಾದ ಸಹಧರ್ಮಿಣಿಯರಿಂದ ಸಹಕೃತರಾಗಿ ಈ ತ್ರಿಮೂರ್ತಿಗಳು ಜಗತ್ತಿನ ಸ್ಥಿತಿ, ಸೃಷ್ಟಿ, ಲಯ ಕಾರ್ಯಗಳನ್ನು ನೆರವೇರಿಸುತ್ತಿರುತ್ತಾರೆ.

ಇದರಂತೆಯೇ ಈ ಮಹಾಮಾಯಾಶಕ್ತಿಯ ಅಲ್ಪಾಂಶಗಳೂ ಕಾರ್ಯಗಳೂ ಆಗಿರುವ ಅವಿದ್ಯೆಗಳು ಜೀವರಿಗೆ ಉಪಾಧಿಗಳಾಗಿರುತ್ತವೆ. ಈಶ್ವರನಿಗೆ ಮಾಯೆಯು ಉಪಾಧಿಯು ಎಂದರೆ ವೃತ್ತಿರೂಪವಾದ ಕಾರ್ಯನಿರ್ವಾಹಸಾಧನವು. ಜೀವರಿಗೆ ಅವಿದ್ಯೆಗಳೇ ಉಪಾಧಿಯು, ಎಂದರೆ ವೃತ್ತಿರೂಪವಾದ ನಾನಾಕಾರ್ಯಗಳಿಗೆ ಸಾಧನವು. ಮಾಯೆಯು ತನಗೆ ಆಶ್ರಯವಾಗಿರುವ ಈಶ್ವರನಿಗೆ ಅಜ್ಞಾನಮೋಹಗಳನ್ನು ಉಂಟುಮಾಡಲಾರದು. ಆದರೆ ಇತರ ಜೀವರಿಗೆ ಅಜ್ಞಾನ, ಮೋಹಗಳನ್ನು ಉಂಟು

ಅಭೇದೇನಸ್ಥಿತಂ ಬ್ರಹ್ಮ ತ್ರಿಧೋಪಾಸ್ಯಂ ಮನೀಷಿಭಿಃ ।
ಅನ್ಯೇ ಚ ಶಕ್ತೇರಾಕಾರಾ ಯೇ ವಿದ್ಯಂತೇ ವಿಚಕ್ಷಣಾಃ ॥೧೫॥

ತೈರಪ್ಯೇಕತ್ವಮಾಪನ್ನಂ ತತ್ತ್ವಂ ತದ್ವನ್ಮನೀಷಿಭಿಃ ।
ಉಪಾಸ್ಯಂ ತ್ರಿವಿಧಂ ನಿತ್ಯಮತೀವ ಶ್ರದ್ಧಯಾ ಸಹ ॥೧೬॥

ಈಕ್ಷಣೋಪಾಧಿಸಂಪನ್ನಂ ಪರತತ್ತ್ವಮಪಿ ದ್ವಿಜಾಃ ।
ಸ್ವಪ್ರಧಾನಾದಿರೂಪೇಣ ತ್ರಿಧೋಪಾಸ್ಯಮತಿಪ್ರಿಯಾತ್ ॥೧೭॥

ಮಾಡುತ್ತದೆ. ಹೇಗೆಂದರೆ, ಪೋಲೀಸಿನವನು ನ್ಯಾಯಾಧಿಪತಿಯ ಜೊತೆಯಲ್ಲೂ, ಖೈದಿಯ ಜೊತೆಯಲ್ಲೂ ಇರುತ್ತಾನೆ. ಆದರೂ ಅವನು ಜಡ್ಜಿಗೆ ಅಧೀನನಾಗಿರುತ್ತಾನೆ. ಆದರೆ ಬಂದಿಗೆ ನಿಯಾಮಕನಾಗಿರುತ್ತಾನೆ. ಅದರಂತೆ ಮಾಯೆಯು ಈಶ್ವರಾಧೀನವಾಗಿರುತ್ತದೆ. ಅವಿದ್ಯೆಯು ಜೀವನಿಗೆ ಅಜ್ಞಾನಮೋಹಗಳನ್ನುಂಟು ಮಾಡುತ್ತಾ ಅವನಿಗೆ ಅಧೀನವಾಗದೆ ಇರುತ್ತದೆ. ಇಂತಹ ಅವಿದ್ಯೆಯನ್ನು ಜೀವನು (ಬ್ರಹ್ಮಸ್ವರೂಪನಾದುದರಿಂದ) ಧರ್ಮಾಚರಣೆಯಿಂದ ಧ್ಯಾನ, ಉಪಾಸನೆ, ಪೂಜಾ, ವೇದಾಂತವಿಚಾರ, ನಿಷ್ಕಾಮಕರ್ಮಾಚರಣೆ ಇವೇ ಮುಂತಾದ ಮಾರ್ಗಗಳಿಂದ ತನ್ನ ಸ್ವಾಧೀನಕ್ಕೆ ತಂದುಕೊಳ್ಳುತ್ತಾನೆ. ಅಥವಾ ಅದರ ಪ್ರಭಾವದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಇದೇ ಮೋಕ್ಷವು. ಈ ಮೋಕ್ಷರೂಪ ಪರಮಪುರುಷಾರ್ಥ ಸಾಧನೆಗೆ ಧರ್ಮಾಚರಣೆಯು ವೇದಶಾಸ್ತ್ರಗಳಲ್ಲಿ ವಿಹಿತವಾಗಿದೆ ಎಂದು ತಾತ್ಪರ್ಯವು. ||೧೪||

ಇದಲ್ಲದೆ ಆ ಶಕ್ತಿಯ ಯಾವ ಬೇರೆಬೇರೆ ಆಕಾರಗಳಿವೆಯೋ ಅವೂ ಕೂಡ ಬ್ರಹ್ಮನಿಂದ ಬೇರೆಯಲ್ಲವಾದ್ದರಿಂದ ಅವುಗಳನ್ನು, ಜ್ಞಾನ, ಅಜ್ಞಾನ, ಮಾಯಾ, ಅವಿದ್ಯಾ ಎಂಬಿವನ್ನೂ ಮೇಲೆ ಹೇಳಿದಂತೆಯೇ ಉಪಾಸನೆ ಮಾಡಬೇಕು. ||೧೫||

ಎಲೈ ಬ್ರಾಹ್ಮಣರಿರಾ, ಪ್ರಾಣಿಗಳ ಅದೃಷ್ಟಾಧೀನವಾಗಿ ಈ ಪ್ರಪಂಚವನ್ನು ಸೃಷ್ಟಿಮಾಡಬೇಕು ಎಂಬ ಇಚ್ಛಾರೂಪವಾದ "ಬಹುಸ್ಯಾಂ ಪ್ರಜಾಯೇಯ", "ಸ ಈಕ್ಷತ ಲೋಕಾನ್‌ಸೃಜಾ ಇತಿ" ಇತ್ಯಾದಿ ಶ್ರುತಿಸಿದ್ಧವಾದ ಯಾವ ಶಿವನ ಈಕ್ಷಣೆಯುಂಟೋ ಅಂಥ ಈಕ್ಷಣೆಯೇ ಉಪಾಧಿಯಾಗಿ ಉಳ್ಳ ಬ್ರಹ್ಮನನ್ನು ಪ್ರತಿದಿನವೂ ಬಹಳ ಶ್ರದ್ಧೆಯಿಂದ ಸ್ವಪ್ರಧಾನಾದಿಭೇದಗಳಿಂದ ಉಪಾಸಕರು ತಮ್ಮ ಮನಃಪರಿಪಾಕದ ಅಂತಸ್ತಿಗೆ ತಕ್ಕಂತೆ ಉಪಾಸನೆಮಾಡಬೇಕು. ||೧೬-೧೭||

ಸತ್ತ್ವಂ ರಜಸ್ತಮಶ್ಚೇತಿ ಗುಣಾ ಯೇ ಬ್ರಹ್ಮಶಕ್ತಿಜಾಃ ।
ತೈರಪ್ಯೇಕತ್ವಮಾಪನ್ನಂ ಪರಂ ಬ್ರಹ್ಮ ಯಥಾಕ್ರಮಮ್ ॥೧೮॥

ರುದ್ರಃ ಪ್ರಜಾಪತಿರ್ವಿಷ್ಣುರಿತಿ ಭೇದಮುಪೈತಿ ಚ ।
ತ್ರಿಜಗನ್ನಾಶಸರ್ಗಾದೇಃ ಕರ್ತಾರಃ ಕಾರ್ಯರೂಪಿಣಃ ॥೧೯॥

ಉಪಾಸ್ಯಾಸ್ತ್ರಿವಿಧಾ ನಿತ್ಯಂ ತೇಽಪಿ ಸ್ವಂ ಸ್ವಮುಪಾಧಿಭಿಃ ।
ತೈರ್ಗೃಹೀತಾಸ್ತಥಾ ವಿಪ್ರಾ ಮೂರ್ತಯಸ್ತ್ರಿಪ್ರಕಾರತಃ ॥೨೦॥

ಚಿತ್ತಪಾಕಾನುಗುಣ್ಯೇನ ಚಿಂತನೀಯಾ ಮನೀಷಿಭಿಃ ।
ಅಗ್ನ್ಯಾದಿತ್ಯಾದಿದೇವಾ ಯೇ ವಿಹೀನಾ ಮಧ್ಯಮಾಃ ಪರಾಃ ॥೨೧॥
ತೇಽಪಿ ಬ್ರಹ್ಮಾತ್ಮನಾ ನಿತ್ಯಮುಪಾಸ್ಯಾ ಏವ ಸಾದರಮ್ ।

ಪರಮೇಶ್ವರನನ್ನು ಆಶ್ರಯಿಸಿರುವ ಅವನ ಶಕ್ತಿಯಿಂದುಂಟಾದ ಮಾಯೆಯು ಸತ್ತ್ವರಜಸ್ತಮೋಗುಣಸ್ವರೂಪವಾದುದು. ಈಶ್ವರನಿಗೆ ಸೃಷ್ಟಿಮಾಡಬೇಕೆಂದು ಇಚ್ಛೆಯುಂಟಾದಾಗ ಈಶ್ವರಾಧೀನವಾದ ಮಾಯೆಯಲ್ಲೂ ವೃತ್ತಿಯುಂಟಾಗುವುದು. ಹೀಗೆ ಇಚ್ಛೆಯುಂಟಾದ ಕೂಡಲೆ ಮಾಯೆಯಲ್ಲಿರುವ ಸತ್ತ್ವಾದಿಗುಣಗಳು ಬೇರೆ ಬೇರೆ ಪ್ರಕಾಶವಾಗುವುವು. ಹೀಗೆ ಪ್ರಕಾಶಗಳಾದ ಸತ್ತ್ವರಜಸ್ತಮೋಗುಣಗಳೇ ಉಪಾಧಿಯಾಗಿ ಉಳ್ಳ ಪರಶಿವನು ಕ್ರಮವಾಗಿ ರುದ್ರ, ಬ್ರಹ್ಮ, ವಿಷ್ಣು—ಎಂಬ ಮೂರು ಹೆಸರುಗಳುಳ್ಳವನಾಗಿ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುತ್ತಾನೆ. ಹೀಗೆ ರುದ್ರ, ಬ್ರಹ್ಮ, ವಿಷ್ಣುಗಳ ರೂಪನಾದ ಆ ಪರಶಿವನನ್ನೂ ಆಯಾ ಉಪಾಧಿಗಳೊಡನೆ ಮೇಲೆ ಹೇಳಿದ ರೀತಿಯಿಂದ ಉಪಾಸನೆಮಾಡಬೇಕು. ॥೧೮-೧೯॥

ಹೀಗೆ ರುದ್ರಬ್ರಹ್ಮವಿಷ್ಣುಗಳೆಂದು ಮೂರು ವಿಧವಾದ ಹೆಸರನ್ನು ಹೊಂದಿದ ಪ್ರಸಿದ್ಧವಾದ ಯಾವ ಆಕಾರಗಳುಂಟೋ ಅವುಗಳನ್ನು ವಿವೇಕಿಗಳಾದ ಉಪಾಸಕರು ಅವರವರ ಮನಃಪರಿಪಾಕಕ್ಕೆ ತಕ್ಕಂತೆ ಆರಿಸಿಕೊಂಡು ಧ್ಯಾನಮಾಡಬೇಕು. ॥೨೦॥

ಅಗ್ನಿ ಸೂರ್ಯರೇ ಮೊದಲಾದ ಅಧಿಕಾರಿಭೇದದಿಂದ ಉತ್ತಮಮಧ್ಯಮಾಧಮಭೇದವನ್ನು ಪಡೆದಿರುವ ದೇವತೆಗಳನ್ನೂ ಬ್ರಹ್ಮವೆಂದು ತಿಳಿದು ನಿತ್ಯವೂ ಶ್ರದ್ಧೆಯಿಂದ ಉಪಾಸನೆಮಾಡಬೇಕು. ॥೨೧॥

ಶಬ್ದಸ್ಪರ್ಶಾದಿಸಂಜ್ಞಾ ಯೇ ಪದಾರ್ಥಾಃ ಪಂಚ ತೇಽಪಿ ಚ ॥೨೨॥

ಉಪಾಸ್ಯಾ ಬ್ರಹ್ಮರೂಪೇಣ ಮಹಾಪ್ರಾಜ್ಞೈರ್ಮನೀಷಿಭಿಃ ।
ಆಕಾಶಾದೀನಿ ಭೂತಾನಿ ಯಾನಿ ತಾನಿ ಮನೀಷಿಭಿಃ ॥೨೩॥

ಬ್ರಹ್ಮರೂಪತಯಾ ನಿತ್ಯಮುಪಾಸ್ಯಾನಿ ಮಹಾತ್ಮಭಿಃ ।
ಭೌತಿಕಾ ಅಂಡಭೇದಾಶ್ಚ ಬ್ರಹ್ಮರೂಪೇಣ ಸಾದರಮ್ ॥೨೪॥

ಚಿಂತನೀಯಾಶ್ಚ ವಿದ್ವದ್ಭಿರ್ವೇದವೇದಾನ್ತಪಾರಗೈಃ ।
ಅಂಡಮಧ್ಯೇ ಸ್ಥಿತಾ ಲೋಕಾ ಏತೇಽಪಿ ಬ್ರಹ್ಮವಿತ್ತಮಾಃ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಾ ಏವ ಸೂರಿಭಿಃ ॥೨೫॥

ಲೋಕಾಂತರ್ವರ್ತಿನೋ ದೇಶಾ ಏತೇಽಪಿ ದ್ವಿಜಪುಂಗವಾಃ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಾಃ ಪುರುಷೋತ್ತಮೈಃ ॥೨೬॥

ಮೇರುಮಂದರಪೂರ್ವಾಶ್ಚ ಪರ್ವತಾ ವಿವಿಧಾ ದ್ವಿಜಾಃ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಾಃ ಮುನಿಸತ್ತಮೈಃ ॥೨೭॥

ಶಬ್ದ, ಸ್ಪರ್ಶ—ಇವುಗಳಿಗೆ ಆಶ್ರಯಗಳಾದ, ಆಕಾಶಾದಿ ಪಂಚಮಹಾಭೂತಗಳಿಗೆ ಕಾರಣಗಳಾದ ಯಾವ ಸೂಕ್ಷ್ಮಭೂತಗಳುಂಟೋ, ಅವನ್ನೂ ವಿವೇಕಿಗಳು ಬ್ರಹ್ಮರೂಪದಿಂದ ಉಪಾಸನೆಮಾಡಬೇಕು. ||೨೨||

ಆಕಾಶ, ವಾಯು, ತೇಜಸ್ಸು, ಜಲ, ಪೃಥಿವೀ—ಎಂಬ ಪಂಚಮಹಾಭೂತಗಳನ್ನು ವಿವೇಕಿಗಳಾದ ದೊಡ್ಡವರು ಬ್ರಹ್ಮವನ್ನಾಗಿ ತಿಳಿಯಬೇಕು. ||೨೩||

ವೇದವೇದಾಂತಗಳನ್ನು ತಿಳಿದಿರುವ ಪಂಡಿತರಿಂದ ಮಹಾಭೂತಗಳಿಂದುತ್ಪನ್ನವಾದ ಬ್ರಹ್ಮಾಂಡಗಳೂ ಬ್ರಹ್ಮವೆಂದು ತಿಳಿಯಲ್ಪಟ್ಟು ಪ್ರೀತಿಯಿಂದ ಧ್ಯಾನಮಾಡಲ್ಪಡಬೇಕು. ||೨೪||

ಎಲೈ ಬ್ರಾಹ್ಮಣೋತ್ತಮರಿರಾ, ಬ್ರಹ್ಮಾಂಡಮಧ್ಯದಲ್ಲಿರುವ ಹದಿನಾಲ್ಕು ಲೋಕಗಳನ್ನೂ ಅವುಗಳ ಮಧ್ಯದಲ್ಲಿರುವ ದೇಶಗಳನ್ನೂ ದೇಶದಲ್ಲಿರುದ ಮೇರುಮಂದರಾದಿಪರ್ವತಗಳನ್ನೂ ದೇವತೆಗಳಿಂದಾಗಲಿ ಋಷಿಗಳಿಂದಾಗಲಿ ನಿರ್ಮಿತ

ನದೀ ನದಾದಯಸ್ಸರ್ವೇ ದೇವಷ್ಯಾರ್ದಿವಿನಿರ್ಮಿತಾಃ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಾ ವೇದವಿತ್ತಮೈಃ ॥೨೮॥

ವಾಪೀಕೂಪತಟಾಕಾದ್ಯಾ ಅಪಿ ವೇದಪರಾಯಣಾಃ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಾಃ ಪುರುಷಾಧಿಕೈಃ ॥೨೯॥

ವನಾನಿ ಯಾನಿ ಲೋಕೇಷು ವಿವಿಧಾನಿ ಮಹತ್ತಮಾಃ ।
ತಾನಿ ಬ್ರಹ್ಮಾತ್ಮನಾ ನಿತ್ಯಮುಪಾಸ್ಯಾನಿ ತಪೋಧನೈಃ ॥೩೦॥

ಸಮುದ್ರಾಶ್ಚ ಸದಾ ವಿಪ್ರಾಸ್ಸಮುದ್ರಾಂತರ್ಗತಾ ಅಪಿ ।
ಸಂಗಮಾ ಅಪಿ ತದ್ಬ್ರಹ್ಮ ಧ್ಯಾತವ್ಯಾ ಏವ ಕೇವಲಮ್ ॥೩೧॥

ದಿಶಶ್ಚ ವಿದಿಶಶ್ಚೈವ ದಿವಾರಾತ್ರಂ ತಥೈವ ಚ ।
ಅನಾಗತಾದಯಃ ಕಾಲಾ ಉಪಾಸ್ಯಾ ಬ್ರಹ್ಮರೂಪತಃ ॥೩೨॥

ಅಂಡಜಂ ಜಾರುಜಂ ಚೈವ ಸ್ವೇದಜಂ ಚೋದ್ಭಿಜಂ ತಥಾ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಾ ಮೋಹವರ್ಜಿತೈಃ ॥

ಬ್ರಾಹ್ಮಣಾ ಕ್ಷತ್ರಿಯಾ ವೈಶ್ಯಾಶ್ಶೂದ್ರಾ ಅಪಿ ಚ ಸಂಕರಾಃ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಾ ಏವ ಸೂರಿಭಿಃ ॥೩೩॥

ಗಳಾದ ನದಿ, ನದ, ಬಾವಿ, ಕೆರೆ, ಕೊಳಗಳನ್ನೂ ಅನೇಕ ವಿಧಗಳಾದ ತೋಟಗಳನ್ನೂ ದೊಡ್ಡ ಕಾಡುಗಳನ್ನೂ ಬ್ರಹ್ಮಸ್ವರೂಪವೆಂದು ತಿಳಿಯಬೇಕು. ||೨೫-೨೬-೨೭-೨೮-೨೯-೩೦||

ದೊಡ್ಡ ಸಮುದ್ರಗಳನ್ನೂ ಸಂಗಮಸ್ಥಳಗಳನ್ನೂ ಬ್ರಹ್ಮವನ್ನಾಗಿ ತಿಳಿಯಬೇಕು. ||೩೧||

ಪೂರ್ವಾದಿ ದಿಕ್ಕುಗಳನ್ನೂ ಆಗ್ನೇಯಾದಿ ವಿದಿಕ್ಕುಗಳನ್ನೂ ಹಗಲು ರಾತ್ರಿಗಳನ್ನೂ ಭೂತಭವಿಷ್ಯದ್ವರ್ತಮಾನಾದಿಕಾಲಗಳನ್ನೂ ಬ್ರಹ್ಮವೆಂದು ಉಪಾಸನೆ ಮಾಡಬೇಕು. ||೩೨||

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರನ್ನಾಗಲಿ, ಸಂಕರಜಾತಿಯವರನ್ನಾಗಲಿ ಪಂಡಿತರಾದವರು ಬ್ರಹ್ಮವನ್ನಾಗಿ ತಿಳಿಯಬೇಕು, ಹಾಗೆಯೇ ಬ್ರಹ್ಮಚರ್ಯ,

ಆಶ್ರಮಾ ಬ್ರಹ್ಮಚರ್ಯಾದ್ಯಾಸ್ತಥಾಽಽಚಾರಾ ಅಪಿ ದ್ವಿಜಾಃ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಾಃ ಪರಮಾಸ್ತಿಕೈಃ ॥೩೪॥

ಮಹಾಪಾತಕಪೂರ್ವಾಣಿ ಪಾಪಾನಿ ಸುಬಹೂನಿ ಚ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಾನಿ ಮಹತ್ತಮೈಃ ॥೩೫॥

ಧರ್ಮಸಂಜ್ಞಾಶ್ಚ ಯೇ ವಿಪ್ರಾ ಉತ್ತಮಾ ಮಧ್ಯಮಾಧಮಾಃ ।
ತೇಽಪಿ ಬ್ರಹ್ಮತಯಾ ನಿತ್ಯಮುಪಾಸ್ಯಾಃ ಪಂಡಿತೋತ್ತಮೈಃ ॥೩೬॥

ಸುಖಂ ದುಃಖಂ ತಯೋರ್ಭೋಗಸ್ಸಾಧನಂ ತಸ್ಯ ಸುವ್ರತಾಃ ।
ಬ್ರಹ್ಮರೂಪತಯಾ ಸರ್ವಮುಪಾಸ್ಯಂ ಸತ್ಯವಾದಿಭಿಃ ॥೩೭॥

ಕರ್ತಾ ಕಾರಯಿತಾ ಕರ್ಮ ಕರಣಂ ಕಾರ್ಯಮೇವ ಚ ।
ಬ್ರಹ್ಮರೂಪತಯಾ ಸರ್ವಮುಪಾಸ್ಯಂ ಚೇತನೋತ್ತಮೈಃ ॥೩೮॥

ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸಾದ್ಯಾಶ್ರಮಗಳನ್ನೂ, ಆಯಾಯ ಆಶ್ರಮಗಳ ಆಚಾರಗಳನ್ನೂ ಆಸ್ತಿಕರಾದವರು ಬ್ರಹ್ಮನನ್ನಾಗಿ ತಿಳಿಯಬೇಕು. ॥೩೩-೩೪॥

ಮೋಹವಿಲ್ಲದ ಮಹಾತ್ಮರಿಂದ ಬ್ರಹ್ಮಹತ್ಯಾದಿಮಹಾಪಾತಕಗಳೂ, ಇತರ ಎಲ್ಲ ಬಗೆಯ ಪಾಪಗಳೂ, ನಿತ್ಯವೂ ಬ್ರಹ್ಮವಾಗಿ ತಿಳಿಯಲ್ಪಡಬೇಕು. ॥೩೫॥

ನೆಪಮಾತ್ರದಿಂದ ಧರ್ಮಿಷ್ಠರಾದ ಉತ್ತಮಮಧ್ಯಮಾಧಮರಾದ ಯಾವ ಬ್ರಾಹ್ಮಣರುಂಟೋ ಅವರನ್ನೂ ಬ್ರಹ್ಮವನ್ನಾಗಿ ಉಪಾಸನೆಮಾಡಬೇಕು. ॥೩೬॥

ಸುಖವನ್ನೂ ದುಃಖವನ್ನೂ ಅವುಗಳಿಂದಾಗುವ ಅನುಭವಗಳನ್ನೂ ಅವಕ್ಕೆ ಕಾರಣವಾದದ್ದನ್ನೂ ಹೀಗೆ ಎಲ್ಲವನ್ನೂ ಸತ್ಯಪರರಾದ, ವೇದಾಂತ ವಿಚಾರದಿಂದ ಸತ್ವವೂ ಬ್ರಹ್ಮಸ್ವರೂಪವೆಂದು ಮನಗಂಡಿರುವ, ಉಪಾಸಕರು ಬ್ರಹ್ಮವಾಗಿ ಉಪಾಸನೆ ಮಾಡಬೇಕು. ॥೩೭॥

ಯಾವುದಾದರೊಂದು ಕರ್ಮವನ್ನು ಮಾಡುವವನನ್ನೂ ಮಾಡಿಸುವವನನ್ನೂ ಆ ಕೆಲಸವನ್ನೂ, ಅದಕ್ಕೆ ಸಾಧನನಾದವುಗಳನ್ನೂ, ಅದಕ್ಕೆ ಸಂಬಂಧಪಟ್ಟ ಎಲ್ಲವನ್ನೂ ಜ್ಞಾನಿಗಳಲ್ಲಿ ಶ್ರೇಷ್ಠರಾದ ಉಪಾಸಕರು ಬ್ರಹ್ಮವನ್ನಾಗಿ ಉಪಾಸನೆಮಾಡಬೇಕು. ॥೩೮॥

ಪ್ರಮಾತಾ ಚ ಪ್ರಮಾಣಂ ಚ ಪ್ರಮೇಯಂ ಪ್ರಮಿತಿಸ್ತಥಾ ।
ಬ್ರಹ್ಮರೂಪತಯಾ ಸರ್ವಮುಪಾಸ್ಯಂ ಮಾನಮಾನಿಭಿಃ ॥೩೯॥

ವಿಧಯಶ್ಚ ನಿಷೇಧಾಶ್ಚ ವಿದ್ಯಾವಿದ್ಯೇ ತಥೈವ ಚ ।
ಬ್ರಹ್ಮರೂಪತಯಾ ನಿತ್ಯಮುಪಾಸ್ಯಂ ವೇದವೇದಿಭಿಃ ॥೪೦॥

ಅವಂಧ್ಯಾಶ್ಚ ತಥಾ ವಂಧ್ಯಾ ವಾದಾಶ್ಚ ವಿವಿಧಾ ಅಪಿ ।
ಬ್ರಹ್ಮರೂಪತಯಾ ಸರ್ವಮುಪಾಸ್ಯಂ ವಾಕ್ಯವೇದಿಭಿಃ ॥೪೧॥

ಯದ್ಯದಸ್ತಿತಯಾ ಭಾತಿ ಯದ್ಯನ್ನಾಸ್ತಿತಯಾಽಪಿ ಚ ।
ತತ್ತದ್ಬ್ರಹ್ಮತಯಾ ನಿತ್ಯಮುಪಾಸ್ಯಂ ಬ್ರಹ್ಮವಿತ್ತಮೈಃ ॥೪೨॥

ಇತ್ಥಂ ಸರ್ವತ್ರ ಯಸ್ಸಾಕ್ಷಾದ್ಬ್ರಹ್ಮೋಪಾಸ್ತೇ ಸನಾತನಮ್ ।
ಸ ಯಾತಿ ಧ್ಯಾನಯಜ್ಞೇನ ಸಾಕ್ಷಾದ್ವಿಜ್ಞಾನಮೈಶ್ವರಮ್ ॥೪೩॥

ಪ್ರಮಾಣನಿರ್ಣಯಮಾಡಲಪೇಕ್ಷೆಯುಳ್ಳವರಿಂದ (ಪ್ರಮಾತಾ) ಪ್ರಮಾಣವನ್ನಾಗಿ ತಿಳಿಯುವವನೂ, ಪ್ರಮಾಣವೂ (ತಿಳಿಯಲು ಸಾಧನಗಳಾದ ಇಂದ್ರಿಯಗಳು), ಪ್ರಮೇಯವೂ (ತಿಳಿಯುವ ವಿಷಯ—ಘಟಪಟಾದಿಗಳು) ಪ್ರಮಿತಿ(ಜ್ಞಾನ) ತಿಳಿವಳಿಕೆ ಇವುಗಳೂ ಬ್ರಹ್ಮವೆಂದು ತಿಳಿಯಲ್ಪಡಬೇಕು. ॥೩೯॥

ವೇದವನ್ನು ತಿಳಿದವರು "ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ" ಇತ್ಯಾದಿ ಶ್ರುತಿಗಳಿಂದ ವಿಹಿತವಾದ ವಿಧಿಗಳನ್ನೂ, "ನ ಕಲಂಜಂ ಭಕ್ಷಯೇತ್" ಇತ್ಯಾದಿ ಶ್ರುತಿಗಳಿಂದ ವಿಹಿತವಾದ ನಿಷೇಧಗಳನ್ನೂ, ವಿದ್ಯಾ ಅವಿದ್ಯೆಗಳನ್ನೂ ಬ್ರಹ್ಮವನ್ನಾಗಿ ತಿಳಿಯಬೇಕು. ॥೪೦॥

ನಿಷ್ಫಲಗಳಾದ ಸಫಲಗಳಾದ ಎಲ್ಲಾವಸ್ತುಗಳೂ ಸಕಲವಾದ ವಾದಗಳೂ ಬ್ರಹ್ಮವೆಂದು ತಿಳಿಯಲ್ಪಡಬೇಕು. ॥೪೧॥

ಬ್ರಹ್ಮವನ್ನು ತಿಳಿದವರು ಲೋಕದಲ್ಲಿ ಯಾವಯಾವ ಪದಾರ್ಥವು ಇದೆಯೆಂದು ತೋರುವದೋ ಯಾವುದು ಇಲ್ಲವೆಂತ ತೋರುವುದೋ ಅವೆಲ್ಲವನ್ನೂ ಬ್ರಹ್ಮವೆಂದು ತಿಳಿಯಬೇಕು. ॥೪೨॥

ಈ ರೀತಿಯಾಗಿ ಯಾರು ಸರ್ವಪದಾರ್ಥಗಳಲ್ಲಿಯೂ ಬ್ರಹ್ಮೋಪಾಸನೆಯನ್ನು ಮಾಡುತ್ತಾರೋ (ಬ್ರಹ್ಮವನ್ನಾಗಿ ತಿಳಿಯುತ್ತಾರೊ) ಅವರು ಈ ರೀತಿಯಾದ

ಧ್ಯಾನಯಜ್ಞಸ್ಯ ಮಾಹಾತ್ಮ್ಯಂ ಕಲ್ಪಾನಾಂ ಕೋಟಿಕೋಟಿಭಿಃ ।
ಮಯಾ ಮತ್ತೋಽಧಿಕೈರನ್ಯೈರಪಿ ವಕ್ತುಂ ನ ಶಕ್ಯತೇ ॥೪೪॥

ಧ್ಯಾನಯಜ್ಞಂ ವಿನಾ ಮುಕ್ತೌ ಯತಂತೇ ಮೋಹಿತಾ ಜನಾಃ
ಪಾಯಸಾನ್ನಂ ಪರಿತ್ಯಜ್ಯ ಭಕ್ಷಯಂತಿ ಮಹಾವಿಷಮ್ ॥೪೫॥

ಧ್ಯಾನಯಜ್ಞಂ ವಿನಾ ಕಿಂಚಿತ್ಕುರ್ವಾಣೋ ಮುಕ್ತಿಸಿದ್ಧಯೇ ।
ಅಕ್ಷ್ಣಾಽಪಿ ಶಬ್ದಂ ಗೃಹ್ಣಾತಿ ವಿನಾ ಶ್ರೋತ್ರೇಣ ಕೇವಲಮ್ ॥೪೬॥

ಅಶ್ವಮೇಧಾದಯೋ ಯಜ್ಞಾ ಅಶೇಷಾ ವೇದದರ್ಶಿತಾಃ ।
ಮುನೀಂದ್ರಾ ಧ್ಯಾನಯಜ್ಞಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥೪೭॥

ಧ್ಯಾನಯಜ್ಞದಿಂದ, ಈಶ್ವರಜ್ಞಾನವನ್ನು ಪಡೆಯುತ್ತಾರೆ. (ಎಂದರೆ ಕಲ್ಪಿತಗಳಾಗಿ ಕಾಣುತ್ತಿರುವ, ತೋರುತ್ತಿರುವ, ಸಕಲಪದಾರ್ಥಗಳಿಗೂ ಅಧಿಷ್ಠಾನಭೂತವಾದ ಬ್ರಹ್ಮವಸ್ತುವನ್ನು ಧ್ಯಾನಮಾಡಿ, ಮಾಡಿ, ಚಿತ್ತಸ್ಥೈರ್ಯವನ್ನು ತಂದುಕೊಂಡು ತನ್ಮೂಲಕ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುತ್ತಾರೆ. ॥೪೩॥

ಇಂಥ ಧ್ಯಾನಯಜ್ಞದ ಮಹಿಮೆಯನ್ನು ನಾನೇ ಆಗಲಿ ನನಗಿಂತ ಅಧಿಕರಾಗಲಿ ಅನೇಕ ಕೋಟಿ ಕಲ್ಪಗಳನ್ನು ಕಳೆದಾಗ್ಯೂ ಹೇಳಿ ಮುಗಿಸಲಾಗುವುದಿಲ್ಲ. ॥೪೪॥

ಯಾರು ಇಂಥ ಧ್ಯಾನಯಜ್ಞವನ್ನು ಬಿಟ್ಟು ಬೇರೆ ಮಾರ್ಗದಿಂದ ಮೋಕ್ಷವನ್ನು ಪಡೆಯಲಿಚ್ಛೆಯಿಂದ ಯತ್ನಮಾಡುತ್ತಾರೋ ಅವರು ಉತ್ತಮವಾದ ಪಾಯಸವನ್ನು ಬಿಟ್ಟು ಅನರ್ಥಕರವಾದ ವಿಷವನ್ನು ತಿಂದವರ ಹಾಗಾಗುತ್ತಾರೆ. ॥೪೫॥

ಧ್ಯಾನಯಜ್ಞವನ್ನು ಬಿಟ್ಟು ಯಾರು ಮೋಕ್ಷಕ್ಕಾಗಿ ಬೇರೆ ಯತ್ನಮಾಡುತ್ತಾರೋ ಅವರು ಚಕ್ಷುರಿಂದ್ರಿಯದಿಂದ ತಿಳಿಯಲಾಗದ, ಶ್ರೋತ್ರೇಂದ್ರಿಯದಿಂದ ಮಾತ್ರ ತಿಳಿಯಲು ಶಕ್ಯವಾದ ಶಬ್ದವನ್ನು ಚಕ್ಷುರಿಂದ್ರಿಯದಿಂದ ತಿಳಿಯಲು ಯತ್ನಿಸುವವರಾಗುತ್ತಾರೆ. (ಎಂದರೆ ಚಕ್ಷುರಿಂದ್ರಿಯದಿಂದ ಶಬ್ದವನ್ನು ತಿಳಿಯಬೇಕೆಂಬ ಪ್ರವೃತ್ತಿಯು ಹೇಗೆ ಫಲವಿಲ್ಲದ್ದಾಗುವುದೊ ಅದರಂತೆ ಧ್ಯಾನಯಜ್ಞವನ್ನು ಬಿಟ್ಟು ಬೇರೆ ಮಾರ್ಗಾವಲಂಬನೆಯು ವ್ಯರ್ಥವಾಗುತ್ತದೆ.) ॥೪೬॥

ವೇದೋಕ್ತವಾದ ಸಂಪೂರ್ಣಫಲಗಳಿಂದ ಕೂಡಿದ ಅಶ್ವಮೇಧಾದಿಯಾಗಗಳೂ ಕೂಡ ಧ್ಯಾನಯಜ್ಞದ ಹದಿನಾರನೆಯ ಒಂದು ಭಾಗಕ್ಕೂ ಸರಿತೂಗಲಾರವು. ॥೪೭॥

ಧ್ಯಾನಯಜ್ಞ ಪರೋ ಮರ್ತ್ಯಶ್ಶಿವ ಏವ ನ ಚಾಪರಃ ।
ಧ್ಯಾನಯಜ್ಞೈಕನಿಷ್ಠಸ್ಯ ನ ಕಿಂಚಿದಪಿ ದುರ್ಲಭಮ್ ॥೪೮॥

ಧ್ಯಾನಯಜ್ಞಪರಾಣಾಂ ತು ಪ್ರಸಾದಂ ಕುರುತೇ ಶಿವಃ ।
ಶಿವೋಽಪಿ ಸಾಕ್ಷಾತ್ಸರ್ವಜ್ಞಸ್ಸಂಸಾರವಿನಿವರ್ತಕಃ ॥೪೯॥

ಬಹುನೋಕ್ತೇನ ಕಿಂ ಸರ್ವಂ ಸಮಾಸೇನ ಮಯೋದಿತಮ್ ।
ಕುರುಧ್ವಂ ವೇದವಿನ್ಮುಖ್ಯಾಃ ಧ್ಯಾನಯಜ್ಞಮಶಂಕಿತಾಃ ॥೫೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಧ್ಯಾನಯಜ್ಞವಿವರಣಂ ನಾಮ ನವಮಾಧ್ಯಾಯಃ

ಧ್ಯಾನಯಜ್ಞದಲ್ಲಿ ಆಸಕ್ತನಾದ ಮನುಷ್ಯನು ಸಾಕ್ಷಾಚ್ಛಿವನೇ ಆಗಿರುತ್ತಾನೆ. ಧ್ಯಾನಯಜ್ಞದಲ್ಲಿ ಬಹಳ ಆಸಕ್ತನಾದವನಿಂದ ಪಡೆಯುವುದಕ್ಕಾಗದ ಫಲವು ಯಾವುದೂ ಇಲ್ಲ. ||೪೮||

ಧ್ಯಾನಯಜ್ಞದಲ್ಲಿ ಆಸಕ್ತರಾದವರಿಗೆ ಸರ್ವಜ್ಞನೂ ಸಂಸಾರನಿವರ್ತಕನೂ ಆದ ಶಿವನೂ ಅನುಗ್ರಹಮಾಡುತ್ತಾನೆ. ||೪೯||

ವೇದವನ್ನು ತಿಳಿದವರಲ್ಲಿ ಮುಖ್ಯರಾದ ಬ್ರಾಹ್ಮಣರಿರಾ, ಎಷ್ಟು ಹೇಳಿ ಏನು ಪ್ರಯೋಜನ? ನೀವು ನನ್ನಿಂದ ಕ್ರೋಢೀಕರಿಸಿ ಹೇಳಲ್ಪಟ್ಟಿರುವ ಈ ಧ್ಯಾನ ಯಜ್ಞವನ್ನು ಸ್ವಲ್ಪವೂ ಸಂಶಯವನ್ನು ಇಟ್ಟುಕೊಳ್ಳದೆ ಆಚರಿಸಿರಿ, ಎಂದು ಸೂತರು ಹೇಳಿದರು. ||೫೦||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಧ್ಯಾನಯಜ್ಞವನ್ನು ವಿವರಿಸಿರುವ ಒಂಬತ್ತನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ದಶಮೋಽಧ್ಯಾಯಃ ||

ಹತ್ತನೆಯ ಅಧ್ಯಾಯವು

(ಜ್ಞಾನಯಜ್ಞವಿವರಣಮ್)

|| ಓಂ ಸೂತ ಉವಾಚ ||

ಅಥೇದಾನೀಂ ಪ್ರವಕ್ಷ್ಯಾಮಿ ಜ್ಞಾನಯಜ್ಞಸ್ಯ ವೈಭವಮ್ ।
ಜ್ಞಾನಯಜ್ಞಾತ್ಪರೋ ಯಜ್ಞೋ ನಾಸ್ತಿ ವಿಪ್ರಾಃ ಶ್ರುತೌ ಸ್ಮೃತೌ ॥೧॥

ಹಿಂದೆ ಹೇಳಿದಂತೆ ಕಾಯಿಕವಾದ, ವಾಚಿಕವಾದ, ಮಾನಸಿಕವಾದ ಕರ್ಮಗಳಿಂದ ನಷ್ಟವಾದ ಪಾಪಗಳುಳ್ಳ, ಮೋಕ್ಷವನ್ನು ಪಡೆಯಲು ಇಚ್ಛೆಯುಳ್ಳ, ಉಪಾಸಕನಿಗೆ ಪರಶಿವನ ಸ್ವರೂಪವನ್ನು ತಿಳಿಯಲು ಆದರವುಂಟಾಗುವುದಕ್ಕಾಗಿ ಜ್ಞಾನಯಜ್ಞವನ್ನು ಹೊಗಳುತ್ತಾರೆ. ಈಗ ಜ್ಞಾನಯಜ್ಞದ ಮಹಿಮೆಯನ್ನು ಹೇಳುತ್ತೇನೆ. ಈ ಜ್ಞಾನಯಜ್ಞಕ್ಕಿಂತ ಮೇಲಾದ ಇನ್ನೊಂದು ಯಜ್ಞವು ಶ್ರುತಿಯಲ್ಲಾಗಲಿ ಸ್ಮೃತಿಯಲ್ಲಾಗಲಿ ಹೇಳಿಲ್ಲವು. 'ಬ್ರಹ್ಮವಿದಾಪ್ನೋತಿ ಪರಂ', ತೈ.ಉ. ಆ. ೧. 'ಬ್ರಹ್ಮವೇದ ಬ್ರಹ್ಮೈವಭವತಿ', ಮುಂ.ಉ. ೬.೯. 'ತಸ್ಯೈವಾತ್ಮಾ ಪದವಿತ್ತಂ ವಿದಿತ್ವಾ ನ ಕರ್ಮಣಾ ಲಿಪ್ಯತೇ ಪಾಪಕೇನ' ಇತ್ಯಾದಿ ಶ್ರುತಿವಾಕ್ಯಗಳಿಂದ ಜ್ಞಾನಕ್ಕೆ ಇತರ ಸಾಧನಗಳನ್ನು ನಿರೀಕ್ಷಿಸದೆ ಸಾಕ್ಷಾತ್ತಾಗಿ ಮೋಕ್ಷವನ್ನು ಕುರಿತು ಸಾಧನವಾಗುವ ಯೋಗ್ಯತೆ ಇದೆ ಎಂದು ಹೇಳಿದೆ. "ಕ್ಷೇತ್ರಜ್ಞಸ್ಯಾತ್ಮವಿಜ್ಞಾನಾದ್ವಿಶುದ್ಧಿಃ ಪರಮಾ ಮತಾ ।" ಎಂದು ಮನುಸ್ಮೃತಿಯೂ "ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ ॥" ೪.೩೩. ಎಂದು ಗೀತೆಯೂ ಹೇಳುತ್ತವೆ.॥೧॥

ಜ್ಞಾನಂ ಬಹುವಿಧಂ ಪ್ರೋಕ್ತಂ ವೇದಾರ್ಥಜ್ಞಾನಪಾರಗೈಃ ।
ಸ್ವರೂಪಮೇಕಂ ವಿಜ್ಞಾನಂ ಶಿವಸ್ಯ ಪರಮಾತ್ಮನಃ ॥೨॥

ಮಾಯಾಕಾರೇಣ ಸಂಬದ್ಧಂ ಜಡಶಕ್ತೇಶ್ಶಿವಸ್ಯ ತು ।
ಜ್ಞಾನಮೀಶ್ವರಸಂಜ್ಞಂ ಚ ನಿಯಂತೃ ಜಗತೋ ಭವೇತ್ ॥೩॥

ಶಕ್ತೇರವಿದ್ಯಾಕಾರೇಣ ಸಂಬದ್ಧಂ ಜೀವಸಂಜ್ಞಿತಮ್ ।
ಜೀವಸಂಜ್ಞಂ ತು ವಿಜ್ಞಾನಂ ದ್ವಿಧಾ ಲೋಕೇ ವ್ಯವಸ್ಥಿತಮ್ ॥೪॥
ಅರ್ಥತೋ ಮುಖ್ಯಮೇಕಂ ತು ಜ್ಞಾನಮನ್ಯತ್ಪ್ರತೀತಿತಃ ।

ಅದ್ವಿತೀಯನಾದ ಪರಶಿವನಸ್ವರೂಪವಾದುದು ಈ ಜ್ಞಾನವು. ಅದೇ ಸೃಷ್ಟಿಯಾಗುವದಕ್ಕಿಂತ ಮೊದಲು ಏಕರೂಪವಾಗಿದ್ದು, ಸೃಷ್ಟಿಯಾದಮೇಲೆ ಮಾಯೆಯೂ ಅದರ ಕಾರ್ಯವಾದ ಅಂತಃಕರಣವೂ ಉಪಾಧಿಯಾಗಿ ಉಳ್ಳ ಈಶ್ವರನೂ ಮತ್ತು ಹಿರಣ್ಯಗರ್ಭಾದಿ ಜೀವರೂ ಮುಂತಾದ ಭೇದಗಳನ್ನು ಪಡೆಯುತ್ತದೆ---ಎಂದು ವೇದಗಳ ಅರ್ಥವನ್ನು ತಿಳಿದವರು ಹೇಳುತ್ತಾರೆ. ॥೨॥

ಜಗತ್ತಿಗೆ ನಿಯಾಮಕನಾದ ಈಶ್ವರನ ಸ್ವರೂಪವನ್ನು ಹೇಳುತ್ತಾರೆ. ವೇದಾಂತಿಗಳು ಮಾಯೆ ಎಂದು ಯಾವುದನ್ನು ಹೇಳುತ್ತಾರೋ, ಸಾಂಖ್ಯರು ಅವ್ಯಕ್ತವೆಂದೂ, ಮೂಲಪ್ರಕೃತಿಯೆಂದೂ, ಯಾವುದನ್ನು ಹೇಳುತ್ತಾರೋ, ಅದೇ ಇಲ್ಲಿ ಪರಶಿವನ ಜಡಶಕ್ತಿ ಎಂದು ಹೇಳಿದೆ. ಈ ಜಡಶಕ್ತಿಯು ಸತ್ತ್ವರಜಸ್ತಮೋರೂಪಗುಣಸಾಮ್ಯಸ್ವರೂಪವಾದುದು. ಈ ಶುದ್ಧಸತ್ತ್ವವು ಪ್ರಧಾನವಾದರೆ, ಎಂದರೆ ರಜಸ್ತಮಸ್ಸುಗಳಿಂದ ಅಭಿಭವವನ್ನು ಪಡೆಯದೆ ಮೇಲಾಗಿದ್ದರೆ, ಮಾಯಾ ಎನ್ನಿಸಿಕೊಳ್ಳುತ್ತದೆ. ಈ ಮಾಯಾಕಾರವಾದ ಪರಿಣಾಮದೊಡನೆ ಜ್ಞಾನವು ಸಂಬಂಧಿಸಿದರೆ ಅಂಥ ಜ್ಞಾನವೇ ಈಶ್ವರನೆನಿಸಿ ಜಗತ್ತಿಗೆಲ್ಲಕ್ಕೂ ನಿಯಾಮಕವಾಗುತ್ತದೆ. ॥೩॥

ಆ ಮಾಯೆಯೇ ಮಲಿನಸತ್ತ್ವಪ್ರಧಾನವಾದರೆ, ಎಂದರೆ ರಜಸ್ತಮಸ್ಸುಗಳಿಂದ ಅಭಿಭವವನ್ನು ಪಡೆದಿರುವ ಸತ್ತ್ವಗುಣಪ್ರಧಾನವಾದರೆ, ಅವಿದ್ಯೆ ಎನ್ನಿಸಿಕೊಳ್ಳುತ್ತದೆ. ಮೊದಲು ಮಾಯಾರೂಪದಲ್ಲಿದ್ದುದು ಅನಂತರ ಪರಿಣಾಮದಿಂದ ಅವಿದ್ಯೆ ಎನ್ನಿಸಿಕೊಳ್ಳುತ್ತದೆ. ಈ ಅವಿದ್ಯೆಯೇ ಉಪಾಧಿಯಾಗುಳ್ಳ, ವಾಸ್ತವವಾಗಿ ಪರಶಿವಸ್ವರೂಪವಾದ, ಚಿತ್ತಿಗೆ ಜೀವನೆಂದು ವ್ಯವಹಾರವು.

ಅವಿದ್ಯಾಬದ್ಧವಿಜ್ಞಾನಂ ಅರ್ಥತೋ ಮುಖ್ಯಮುಚ್ಯತೇ ॥೫॥

ಸ್ಥೂಲಸೂಕ್ಷ್ಮಶರೀರಾಭ್ಯಾಂ ಅವಚ್ಛಿನ್ನಂ ಪ್ರತೀತಿತಃ ।
ಸ್ವಪ್ರಚಾರಾಶ್ರಯಂ ಚಿತ್ತಂ ಜೀವರೂಪಪ್ರಕಾಶಕಮ್ ॥೬॥
ಜ್ಞಾತೃತ್ವಹೇತುರ್ಜೀವಸ್ಯ ದುಃಖಿತ್ವಾದೇಶ್ಚ ಕಾರಣಮ್ ।

ಈ ಜೀವನೇ ಅರ್ಥದಿಂದ ಮುಖ್ಯನೆಂದೂ ಪ್ರತೀತಿಯಿಂದ ಮುಖ್ಯನೆಂದೂ ಎರಡು ಬಗೆಯಾಗಿ ವ್ಯವಹರಿಸಲ್ಪಡುತ್ತಾನೆ. ॥೪॥

ಮಲಿನಸತ್ವಪ್ರಧಾನವಾದ ಮಾಯಾಶಕ್ತಿಯ ಅಲ್ಪಾಂಶಗಳು ಜೀವರಿಗೆ ಉಪಾಧಿಯಾಗಿರುತ್ತಾ ಅವರಿಗೆ ಅಜ್ಞಾನಮೋಹಗಳನ್ನು ಉಂಟುಮಾಡಬಲ್ಲವಾಗಿರುತ್ತವೆ. ಇವಕ್ಕೆ ಅವಿದ್ಯೆ ಎಂದು ಹೆಸರು. ಇದು ತನಗೆ ಆಶ್ರಯನಾದ ಜೀವನಿಗೆ ಮೋಹಕವಾಗಿರುತ್ತದೆ. ಈ ಅವಿದ್ಯೆಯು ಜೀವನ ಸ್ಥೂಲಸೂಕ್ಷ್ಮಶರೀರಗಳಿಗೆ ಕಾರಣವಾಗಿರುವುದರಿಂದ ಕಾರಣಶರೀರವೆನ್ನಿಸಿಕೊಂಡಿದೆ. ಈ ಅವಿದ್ಯೆಯಿಂದ ಕೂಡಿರುವ ಪರಶಿವಸ್ವರೂಪಭೂತವಾದ್ಯಚೈತನ್ಯವೇ ಅರ್ಥತೋಮುಖ್ಯವೆನಿಸಿಕೊಳ್ಳುತ್ತದೆ. ಇದು ತನ್ನ ವ್ಯವಹಾರಕ್ಕೂ, ಇತರ ವ್ಯವಹಾರಕ್ಕೂ ಹೇತುಭೂತವಾಗುತ್ತದೆ. ವ್ಯವಹಾರವೆಂದರೆ ಜ್ಞಾನ, ಕ್ರಿಯಾ, ಶಬ್ದಪ್ರಯೋಗರೂಪವಾದುದು. ತಿಳಿದುಕೊಳ್ಳುವುದು, ವೃತ್ತಿವಿಷಯವಾಗುವುದು, ಹಾನೋಪಾದನಾದಿ ಕ್ರಿಯೆಗೆ ವಿಷಯವಾಗುವುದು, ಅದನ್ನು ತಿಳಿಸುವ ಶಬ್ದಕ್ಕೆ ವಿಷಯವಾಗುವುದು—ಇವುಗಳಿಗೆ ವ್ಯವಹಾರವೆಂದು ಹೆಸರು. ಈ ರೀತಿಯಲ್ಲಿ ಸ್ವಪರವ್ಯವಹಾರಕ್ಕೆ ಕಾರಣವಾಗುವುದೇ ಅರ್ಥತೋಮುಖ್ಯವೆನಿಸುತ್ತದೆ. ಈ ಮೇರೆ ಇದು ಸ್ವಪ್ರಕಾಶಚಿದ್ರೂಪವಾಗಿ ತನ್ನ ತೋರುವಿಕೆಗೆ ಇತರ ಸಹಾಯಾಪೇಕ್ಷೆ ಇಲ್ಲದೆ ಇರುತ್ತದೆ ಎಂದು ಭಾವವು.

ಹೀಗೆ ಅವಿದ್ಯಾಕಾರ್ಯವಾದ ಸೂಕ್ಷ್ಮಸ್ಥೂಲಶರೀರಗಳಿಗೆ ಕಾರಣವಾಗಿ ಅವುಗಳಲ್ಲಿ ಅನುಸರಿಸಿರುವ ಅಂತಃಕರಣೋಪಾಧಿಕವಾದ ಚಿತ್ ಎಂದರೆ ಸ್ವಪ್ರಕಾಶಸ್ವರೂಪಚಿತ್ತಿನಲ್ಲಿ ಅಧ್ಯಾಸವನ್ನು ಪಡೆದಿರುವ, ಚಿತ್ತಿನಂತೆ ತೋರುತ್ತಿರುವ ವೃತ್ತಿರೂಪವಾಗಿರುವ ಸತ್ತ್ವವು ಪ್ರತೀತಿತೋಮುಖ್ಯವೆನಿಸುತ್ತದೆ. ಹೀಗೆ ಅಂತಃಕರಣವೃತ್ತಿಗೆ ಉಪಾದಾನಕಾರಣವಾದ ಸತ್ತ್ವವು ಚಿತ್ಪ್ರಕಾಶದೊಡನೆ ಸೇರಿಯೇ ತೋರುತ್ತದೆ. ಸ್ವತಂತ್ರವಾಗಿ ಅಲ್ಲವು. ॥೫॥

ಇಂಥ ಸತ್ತ್ವಪರಿಣಾಮರೂಪವಾದ ಅಂತಃಕರಣ ಮತ್ತು ಅದರ ವೃತ್ತಿಯ ಸಂಬಂಧದಿಂದ ಅವಿದ್ಯೋಪಹಿತವಾದ ಜೀವಚೈತನ್ಯಕ್ಕೆ ಕರ್ತೃತ್ವಭೋಕ್ತೃತ್ವ

ಪ್ರಮಾಣಭ್ರಾಂತಿ ಸಂದೇಹಾದ್ಯಾಕಾರೇಣ ಮುನೀಶ್ವರಾಃ ॥೬॥

ಬಹುರೂಪಂ ಭವೇಚ್ಚಿತ್ತಂ ಕಾಲಕರ್ಮವಿಪಾಕತಃ ।
ತತ್ತದಾಕಾರಸಂಭಿನ್ನಂ ವಿಜ್ಞಾನಂ ಮುನಿಪುಂಗವಾಃ ॥೮॥

ಪ್ರಮಾಣಭ್ರಾಂತಿಸಂದೇಹಜ್ಞಾನಮಿತ್ಯುಚ್ಯತೇ ಬುಧಾಃ ।
ಅದುಷ್ಟಕರಣೋತ್ಪನ್ನಂ ವಿಜ್ಞಾನಂ ಮುನಿಪುಂಗವಾಃ ॥೯॥

ಪ್ರಮಾಣಜ್ಞಾನಮಿತ್ಯುಕ್ತಂ ಮುನಿಭಿಃ ಸೂಕ್ಷ್ಮದರ್ಶಿಭಿಃ ।
ದುಷ್ಟಕಾರಣವಿಜ್ಞಾನಂ ಭ್ರಾಂತಿಜ್ಞಾನಂ ಪ್ರಚಕ್ಷತೇ ॥೧೦॥

ಜ್ಞಾತೃತ್ವ ಮುಂತಾದ ಸಕಲ ವ್ಯವಹಾರಸಂಬಂಧವಿರುತ್ತದೆ. ಸ್ವಪ್ರಚಾರವೆಂದರೆ ಅಂತಃಕರಣವೃತ್ತಿಗಳು, ಅವಕ್ಕೆ ಆಶ್ರಯವಾದುದು ಚಿತ್ತವು. ಅದರಲ್ಲಿ ಅಧ್ಯಾಸ ದಿಂದ ಚೈತನ್ಯಕ್ಕೂ ಕರ್ತೃತ್ವಾದಿಸಂಬಂಧವು ತೋರುತ್ತದೆ. ಹೀಗೆ ಜೀವನರೂಪ ವಾದ ಕರ್ತೃತ್ವಾದಿಗಳನ್ನು ಪ್ರಕಾಶಪಡಿಸುತ್ತದೆ. ಈ ಚಿತ್ತವೇ ಜೀವನದಲ್ಲಿ ತೋರುವ ಜ್ಞಾತೃತ್ವ, ದುಃಖಿತ್ವ ಮುಂತಾದ ಧರ್ಮಗಳಿಗೆ ಕಾರಣವಾಗಿರುತ್ತದೆ. ಈ ಕಾರಣತ್ವ ವನ್ನೇ ವಿವರಿಸುತ್ತಾರೆ. ||೬||

ಈ ಚಿತ್ತವು ಪ್ರಮಾಣ, ಭ್ರಾಂತಿ, ಸಂದೇಹ, ನಿಶ್ಚಯ, ಸ್ಫುರಣ ಮುಂತಾದ ರೂಪಗಳಿಂದ ನಾನಾರೂಪವಾಗಿ ತೋರುತ್ತದೆ. ಇದು ಕಾಲಕರ್ಮಗಳ ಪರಿಪಾಕ ವಶದಿಂದ ಕರ್ಮವು ಫಲೋನ್ಮುಖವಾದಾಗ ಸಂಭವಿಸುತ್ತದೆ. ||೭||

ಸ್ವರೂಪಚೈತನ್ಯದೊಡನೆ ತಾದಾತ್ಮ್ಯಾಧ್ಯಾಸದಿಂದ ಚಿತ್ತದೊಡನೆ ಏಕೀ ಭೂತವಾದ ಅಂತಃಕರಣವೃತ್ತಿಜ್ಞಾನಕ್ಕೆ ವಿಜ್ಞಾನವೆಂದು ವ್ಯವಹಾರವು. ಈ ವಿಜ್ಞಾ ನವು ಆಯಾ ವಿಷಯಾಕಾರವಿಶಿಷ್ಟವಾಗಿ ಪ್ರಮಾಣ, ಭ್ರಾಂತಿ, ಸಂದೇಹ, ನಿಶ್ಚಯ ಗಳೆಂಬ ವ್ಯವಹಾರವನ್ನು ಹೊಂದುತ್ತದೆ. ||೮||

ಅವುಗಳಲ್ಲಿ ದೋಷ (ಕಾಚಕಾಮಲಾದಿ ಕರಣದೋಷ)ಗಳಿಲ್ಲದ ಕಣ್ಣು ಮುಂತಾದ ಕರಣಗಳಿಂದ ಉಂಟಾದ ವೃತ್ತಿಜ್ಞಾನವು ಪ್ರಮಾಣಜ್ಞಾನವು. ||೯||

ದೋಷವುಳ್ಳ ಕಾರಣದಿಂದ ಉಂಟಾಗುವ ಶುಕ್ತಿರೂಪ್ಯ, ಚಿಪ್ಪಿನಲ್ಲಿ ಬೆಳ್ಳಿ, ಎಂಬ ಜ್ಞಾನಕ್ಕೆ ಭ್ರಾಂತಿಜ್ಞಾನವೆಂದು ವ್ಯವಹಾರವಿದೆ. ||೧೦||

ಕೋಟಿದ್ವಯಾವಲಂಬಿ ಸ್ಯಾತ್ ಸಂದೇಹಜ್ಞಾನಮಾಸ್ತಿಕಾಃ ।
ಇತ್ಥಮೇವೇದಮಿತ್ಯೇವಂ ರೂಪಂ ಯತ್ಸ್ಫುರಣಂ ಬುಧಾಃ ॥೧೧॥

ಸ ಏವ ನಿಶ್ಚಯಃ ಪ್ರೋಕ್ತಸ್ಸಮ್ಯಗ್ದರ್ಶನತತ್ಪರೈಃ ।
ಜ್ಞಾನಸ್ಯ ತೇನ ಸಂಬಂಧಃ ಪ್ರಾಮಾಣ್ಯಂ ಕಥಿತಂ ಮಯಾ ॥೧೨॥

ಪ್ರಮಾಣಜ್ಞಾನಸಾಮಗ್ರ್ಯಃ ಷಣ್ಮಯಾಭಿಹಿತಾ ಬುಧಾಃ ।
ತತ್ರೈಕಾಭಾವವಿಜ್ಞಾನಸಾಮಗ್ರೀ ಕಥಿತಾ ದ್ವಿಜಾಃ ॥೧೩॥

ಅನ್ಯಾ ತು ಭಾವವಿಜ್ಞಾನಸಾಮಗ್ರೀ ಪರಿಕೀರ್ತಿತಾ ।
ಯದ್ಯೋಗ್ಯಾನುಪಲಬ್ಧ್ಯೈವ ಜನ್ಯಂ ವಿಜ್ಞಾನಮಾಸ್ತಿಕಾಃ ॥೧೪॥
ತತ್ಸ್ಯಾದಭಾವವಿಜ್ಞಾನಂ ಧಾರ್ಮಿಕಾ ವೇದವಿತ್ತಮಾಃ ।

ವಿರೋಧಿಧರ್ಮಗಳನ್ನು ಒಳಗೊಳ್ಳುವ ಜ್ಞಾನವನ್ನು ಸಂದೇಹವನ್ನುತ್ತಾರೆ. ಇದು ಇಂಥಾದ್ದೇ ಎಂಬ ತಿಳುವಳಿಕೆಯು ನಿಶ್ಚಯವೆನಿಸುತ್ತದೆ. ॥೧೧॥

ವೃತ್ತಿರೂಪಜ್ಞಾನಕ್ಕೆ ಘಟಾದಿಸ್ಫುರಣದೊಡನೆ ಸಂಬಂಧವಿದ್ದರೆ ಅಂಥ ಜ್ಞಾನವು ಪ್ರಮಾಣವೆನಿಸುತ್ತದೆ. ವೃತ್ತಿಯೂ ಸ್ಫುರಣವೂ ಏಕವಿಷಯಕವಾದರೆ ಆ ಜ್ಞಾನವು ಪ್ರಾಮಾಣ್ಯವುಳ್ಳದ್ದಾಗಿರುತ್ತದೆ. ಪ್ರಮಾತ್ಮಕವಾದ ನಿಜವಾದ ಜ್ಞಾನಕ್ಕೆ ಸಾಮಗ್ರಿಗಳು ಆರೆಂದು ಹೇಳುತ್ತಾರೆ. ॥೧೨॥

ಅವುಗಳಲ್ಲಿ ಅಭಾವದ ತಿಳುವಳಿಕೆಗೆ ಅನುಪಲಬ್ಧಿಯೇ ಸಾಮಗ್ರಿ ಎಂದು ಹೇಳಿದೆ. ಭಾವಪದಾರ್ಥದ ತಿಳಿವಳಿಕೆಗೆ ಇಂದ್ರಿಯವೇ ಜ್ಞಾನಸಾಧನವು. ಕಾರಣಗಳ ಸಮುದಾಯಕ್ಕೆ ಸಾಮಗ್ರೀ ಎಂದು ಹೆಸರು. ॥೧೩॥

ಒಂದು ಅಭಾವದ ಪ್ರತಿಯೋಗಿ ಹೊರತು ಉಳಿದ ಜ್ಞಾನಸಾಮಗ್ರಿಯು ಎಲ್ಲವೂ ಇದ್ದರೆ, ಘಟಾಭಾವಜ್ಞಾನವು ಬರಬೇಕಾದರೆ ಘಟ ಒಂದು ಹೊರತು ಉಳಿದ ಇಂದ್ರಿಯ, ಆಲೋಕ ಮುಂತಾದ ಸಾಮಗ್ರಿ ಎಲ್ಲವೂ ಇದ್ದರೆ, ಅಂಥ ಅನುಪಲಬ್ಧಿಯು ಯೋಗ್ಯಾನುಪಲಬ್ಧಿಯೆನಿಸುತ್ತದೆ. ಅದರಿಂದ ಉಂಟಾಗುವ ಜ್ಞಾನಕ್ಕೆ ಅಭಾವಜ್ಞಾನವೆಂದು ರೂಢಿಯಾಗಿದೆ. ॥೧೪॥

ಚಕ್ಷುರಾದಿಯಾದ ಪಂಚಜ್ಞಾನೇಂದ್ರಿಯಗಳಿಂದ ಉಂಟಾಗುವ ಜ್ಞಾನಕ್ಕೆ ಪ್ರತ್ಯಕ್ಷವೆಂದು ಹೆಸರು. ಹೇತು ಮತ್ತು ಸಾಧ್ಯಗಳಿಗೆ ನಿಯತವಾದ ಸಾಹಚರ್ಯ

ಇಂದ್ರಿಯೋತ್ಪನ್ನವಿಜ್ಞಾನಂ ಪ್ರತ್ಯಕ್ಷಂ ಪರಿಭಾಷಿತಮ್ ॥೧೫॥

ವ್ಯಾಪ್ತಿಜನ್ಯಪರಿಜ್ಞಾನಮನುಮಾನಮಿತೀಷ್ಯತೇ ।
ಸಾದೃಶ್ಯಹೇತುಜಂ ಜ್ಞಾನಂ ಉಪಮಾನಮುದಾಹೃತಮ್ ॥೧೬॥

ಅರ್ಥಾಪತ್ತಿರಿತಿ ಪ್ರೋಕ್ತಂ ವಿಪ್ರಾ ಅನುಪಪತ್ತಿಜಂ ।
ತಾತ್ಪರ್ಯೋಪೇತಶಬ್ದೋತ್ಥಜ್ಞಾನಂ ಶಾಬ್ದಮುದಾಹೃತಮ್ ॥೧೭॥

ಶಬ್ದಸ್ತು ಬ್ರಹ್ಮವಿತ್ ಶ್ರೇಷ್ಠಾಸ್ತ್ರಿವಿಧಃ ಪರಿಕೀರ್ತಿತಃ ।
ಅಕ್ಷರಾಣಿ ತಥಾ ವಿಪ್ರಾಃ ಪದಾನಿ ಚ ತಥೈವ ಚ ॥೧೮॥

ವಾಕ್ಯಾನಿ ಚೇತಿ ತತ್ರಾಪಿ ಕೇಷಾಂಚಿದ್ದ್ವಿಜಪುಂಗವಾಃ ।
ಅರ್ಥಾನಾಮಕ್ಷರಾಣ್ಯೇವ ವಾಚಕಾನಿ ತಥೈವ ಚ ॥೧೯॥

ವೆಂಬ ವ್ಯಾಪ್ತಿಜ್ಞಾನದಿಂದ ಉಂಟಾಗುವ ಜ್ಞಾನಕ್ಕೆ ಅನುಮಾನ (ಅನುಮಿತಿ) ಎಂದು ಹೆಸರು. ॥೧೫॥

ಹೋಲಿಕೆಯಿಂದ ಉಂಟಾಗುವ ಜ್ಞಾನಕ್ಕೆ ಉಪಮಾನ (ಉಪಮಿತಿ) ಎಂದು ಹೆಸರು. ಅನುಪಪನ್ನವಾದ ಅರ್ಥವನ್ನು ನೋಡೋಣದರಿಂದ ಉಂಟಾಗುವ, ಅದನ್ನು ಉಪಪಾದನೆಮಾಡುವ, ಅರ್ಥದ ಜ್ಞಾನವು ಅನುಪಪತ್ತಿ ಎನಿಸುತ್ತದೆ. ಪೀನತ್ವವನ್ನು ನೋಡೋಣದರಿಂದ ಹಗಲು ಊಟಮಾಡದೆ ಇರುವವನ ರಾತ್ರಿ ಭೋಜನಫಲರೂಪವಾದ, ಪೀನತ್ವವನ್ನು ಉಪಪಾದಿಸುವ, ಅರ್ಥದ ಜ್ಞಾನವು ಅರ್ಥಾಪತ್ತಿಯು. ॥೧೬॥

ವೇದಾದಿಗಳ ವಿಷಯದಲ್ಲಿ ಈಶ್ವರನ, ಲೌಕಿಕವಾಕ್ಯಗಳ ವಿಷಯದಲ್ಲಿ ಆಯಾ ವಾಕ್ಯಗಳನ್ನು ಹೇಳುವವರ, ತಾತ್ಪರ್ಯವಿಶಿಷ್ಟವಾದ ಶಬ್ದದ ಜ್ಞಾನದಿಂದ ಉಂಟಾಗುವ ಜ್ಞಾನಕ್ಕೆ ಶಾಬ್ದಜ್ಞಾನವೆಂದು ಹೆಸರು. ॥೧೭॥

ಈ ಪ್ರಮಾಣಭೂತವಾದ ಶಬ್ದವು ಅಕ್ಷರಗಳೆಂದೂ, ಪದಗಳೆಂದೂ, ವಾಕ್ಯಗಳೆಂದೂ ಮೂರು ವಿಧವಾಗಿದೆ. ॥೧೮॥

ಅದರಲ್ಲೂ ಅಕ್ಷರಗಳೇ ಅರ್ಥವನ್ನು ಹೇಳುತ್ತವೆಂದು ಕೆಲವರ ಮತವು. ಒಂದು ಅರ್ಥವನ್ನು ಹೇಳುವ ಧರ್ಮದಿಂದ ಕೂಡಿದ ವರ್ಣಗಳೇ ವಾಚಕಗಳೆಂದು ಅವರ ತಾತ್ಪರ್ಯವು. "ವರ್ಣಾ ಏವ ತು ಶಬ್ದ ಇತಿ ಭಗವಾನುಪವರ್ಷಃ" ಎಂದು

ಅರ್ಥಾನಾಮಪಿ ಕೇಷಾಂ ಚಿತ್ ಪದಾನ್ಯೇವ ದ್ವಿಜೋತ್ತಮಾಃ ।
ವಾಚಕಾನಿ ಚ ವಾಕ್ಯಾನಿ ತಥೈವ ಬ್ರಹ್ಮವಿತ್ತಮಾಃ ॥೨೦॥

ಅರ್ಥಾನಾಮಪಿ ಕೇಷಾಂಚಿತ್ ಪ್ರಮಾಣಾನಿ ಪ್ರದೀಪವತ್ ।
ಭವಂತ್ಯೇಕಾಕ್ಷರಾಣ್ಯೇವ ಪದಾನಿ ದ್ವಿಜಪುಂಗವಾಃ ॥೨೧॥

ಅಕ್ಷರಾಣಿ ಚ ಸಂಭೂಯ ಪದಾನಿ ಸ್ಯುಸ್ತಥೈವ ಚ ।
ಪದಾನಾಂ ಸಮುದಾಯಸ್ತು ಭವೇದ್ವಾಕ್ಯಂ ದ್ವಿಜೋತ್ತಮಾಃ ॥೨೨॥

ಪ್ರಧಾನಂ ಗುಣಭೂತಂ ಚ ದ್ವಿವಿಧಂ ವಾಕ್ಯಮೀರಿತಂ ।
ಮಹಾವಾಕ್ಯಮಿತಿ ಪ್ರೋಕ್ತಂ ಪ್ರಧಾನಂ ಮುನಿಪುಂಗವೈಃ ॥೨೩॥
ಗುಣಭೂತಂ ತು ಯದ್ವಾಕ್ಯಂ ತದವಾಂತರಸಂಜ್ಞಿತಮ್ ।

ಶಾಂಕರಸೂತ್ರಭಾಷ್ಯದಲ್ಲಿ ಹೇಳಿದೆ. ವೈಯಾಕರಣಿಗಳ ಮತದಲ್ಲಿ ಒಂದೊಂದು ವರ್ಣವನ್ನು ಉಚ್ಚರಿಸಿದ ಕೂಡಲೆ ಅದು ನಷ್ಟವಾಗುವುದರಿಂದ ಒಂದು ಪದದ ಕಡೆಯ ವರ್ಣವನ್ನು ಉಚ್ಚರಿಸುವವರೆಗೆ ಪ್ರಥಮವರ್ಣವು ಇರಲಾರದು. ಆದುದರಿಂದಲೂ, "ಇದು ಒಂದು ಪದವು" ಎಂದು ವ್ಯವಹಾರವಿರುವುದರಿಂದಲೂ, ವರ್ಣಗಳಿಂದ ಸ್ಫೋಟವೆಂಬ ಪದಾರ್ಥವು ಉಂಟಾಗಿ ಅದರಿಂದ ಅರ್ಥದ ತಿಳಿವಳಿಕೆಯುಂಟಾಗುತ್ತದೆಂದು ಹೇಳಿದೆ. ವರ್ಣಗಳು ಸ್ಫೋಟಕ್ಕೆ ವ್ಯಂಜಕಗಳೇ ಹೊರತು ಅರ್ಥವನ್ನು ಹೇಳಲಾರವೆಂದು ಅವರ ತಾತ್ಪರ್ಯವು. ಆ ವೈಯಾಕರಣಿಗಳಲ್ಲೇ ಕೈಯಟಾದ್ಯಾಚಾರ್ಯರು "ವಾಕ್ಯಮೇವ ವಾಚಕಂ । ವಾಕ್ಯಾರ್ಥ ಏವ ವಾಚ್ಯಃ । ಪದಾನಿ ತು ವರ್ಣವದನರ್ಥಕಾನ್ಯೇವ । ಪದಾನಿ ಪರಂ ವಾಕ್ಯಸ್ಫೋಟಸ್ಯ ವ್ಯಂಜಕಾನಿ ।" ಎಂದು ಹೇಳುತ್ತಾರೆ. ಆದುದರಿಂದ ವಾಕ್ಯಗಳೇ ಅರ್ಥವನ್ನು ಹೇಳುತ್ತವೆ. ದೀಪದ ಹಾಗೆ ವಾಕ್ಯಗಳೇ ಅರ್ಥವನ್ನು ಪ್ರಕಾಶಪಡಿಸುತ್ತವೆ ಎಂದು ಅವರ ಆಶಯವು. ||೧೯-೨೦||

ಪದಗಳು ಒಂದೇ ವರ್ಣದಿಂದಲೂ, ಅನೇಕ ವರ್ಣಗಳಿಂದಲೂ, ಉಂಟಾಗಿರುತ್ತವೆ. ಹಾಗೆಯೇ ವರ್ಣಗಳು ಒಟ್ಟು ಸೇರಿ ಪದಗಳಾಗುತ್ತವೆ. ||೨೧-೨೨||

ಮುಖ್ಯವೆಂದೂ ಅಮುಖ್ಯವೆಂದೂ ವಾಕ್ಯವು ಎರಡು ವಿಧವಾಗಿರುತ್ತದೆ. ಆಕಾಂಕ್ಷಾ, ಯೋಗ್ಯತಾ, ಸನ್ನಿಧಿಗಳಿಂದ ಕೂಡಿದ ಪದಗಳ ಸಮೂಹಕ್ಕೇ ವಾಕ್ಯವೆಂದು ಹೆಸರು.

ಉಭಯಂ ಚೈಕವಾಕ್ಯಂ ಸ್ಯಾತ್ ಅರ್ಥೈಕತ್ವವಿವಕ್ಷಯಾ ॥೨೪॥

ಪದಾನಿ ಶಕ್ತ್ಯಾ ಸ್ವಾರ್ಥಾನಾಂ ವಾಚಕಾನಿ ತಥೈವ ಚ ।
ತಾತ್ಪರ್ಯಾದೇವ ವಾಕ್ಯಾನಿ ಸ್ವಾರ್ಥಾನಾಂ ಬೋಧಕಾನಿ ಚ ॥೨೫॥

ತಾತ್ಪರ್ಯಂ ತು ದ್ವಿಧಾ ವಿಪ್ರಾಃ ಪ್ರೋಕ್ತಂ ವಾಕ್ಯವಿಶಾರದೈಃ ।

ಆ ಎರಡರಲ್ಲಿ ಮಹಾವಾಕ್ಯಗಳಿಗೆ ಪ್ರಧಾನವಾಕ್ಯಗಳೆಂದು ಹೆಸರು. ಸ್ವರ್ಗಾದಿಪ್ರಯೋಜನಗಳಿಂದ ಕೂಡಿದ ಅರ್ಥವನ್ನು ಕೊಡುವ "ದರ್ಶಪೂರ್ಣಮಾಸಾಭ್ಯಾಂ ಸ್ವರ್ಗಕಾಮೋ ಯಜೇತ," "ವಾಯವ್ಯಂ ಶ್ವೇತಮಾಲಭೇತ ಭೂತಿಕಾಮಃ" ಮುಂತಾದ ವಾಕ್ಯಗಳಿಗೆ ಪ್ರಧಾನವಾಕ್ಯಗಳೆಂದು ಹೆಸರು. ಹಾಗೆಯೇ "ಸಮಿಧೋ ಯಜತಿ, ತನೂನಪಾತಂ ಯಜತಿ, ಇಡೋ ಯಜತಿ, ಬರ್ಹಿರ್ಯಜತಿ, ಸ್ವಾಹಾಕಾರಂ ಯಜತಿ" ಎಂಬಿವೇ ಮುಂತಾದ ಫಲವಿಶೇಷವನ್ನು ಬೋಧಿಸದ ಅಂಗವಾಕ್ಯಗಳಿಗೆ ಗುಣಭೂತವಾಕ್ಯಗಳೆಂದು ಹೆಸರು. ||೨೩||

ಈ ಪ್ರಧಾನವಾಕ್ಯಗಳೂ ಗುಣವಾಕ್ಯಗಳೂ ಸೇರಿ ಒಂದು ಅರ್ಥದಲ್ಲಿ, ಎಂದರೆ ಪ್ರಯಾಜಾದ್ಯಂಗಗಳಿಂದ ಕೂಡಿದ ದರ್ಶಪೂರ್ಣಮಾಸಯಾಗವು ಇಷ್ಟಾರ್ಥವನ್ನು ಕುರಿತು ಸಾಧನವು ಎಂಬ ಅರ್ಥದಲ್ಲಿ, ವಿವಕ್ಷೆ ಇರುವುದರಿಂದ ಒಂದು ವಾಕ್ಯವೆನಿಸುತ್ತದೆ.

ಪದಗಳು ಶಕ್ತಿಯಿಂದ, ಎಂದರೆ ಅರ್ಥವನ್ನು ತಿಳಿಸುವ ಸಾಮರ್ಥ್ಯದಿಂದ, ಅರ್ಥಗಳಿಗೆ ವಾಚಕಗಳೆಂದು ವ್ಯವಹಾರವು.

ವಾಕ್ಯವು ಅರ್ಥಕ್ಕೆ ಬೋಧಕವೇ ಹೊರತು ವಾಚಕವಲ್ಲವು. ಏಕೆಂದರೆ ವಿಶಿಷ್ಟಾರ್ಥದಲ್ಲಿ ವಾಕ್ಯಕ್ಕೆ ಶಕ್ತಿ ಇಲ್ಲವು, ಸಂಕೇತವಿಲ್ಲವು. ಪದಗಳಾದರೂ ಆಯಾ ಅರ್ಥಗಳಿಗೆ ವಾಚಕಗಳು. ಏಕೆಂದರೆ ಆಯಾ ಅರ್ಥಗಳಲ್ಲಿ ಆಯಾ ಪದಗಳಿಗೆ ಶಕ್ತಿ ಇದೆ. ಅರ್ಥಬೋಧನಸಾಮರ್ಥ್ಯಕ್ಕೆ ಶಕ್ತಿ ಎಂದು ಹೆಸರು. ||೨೪||

ವಾಕ್ಯಗಳು ತಮ್ಮ ವಿಶಿಷ್ಟವಾದ ಅರ್ಥವನ್ನು ತಾತ್ಪರ್ಯದಿಂದಲೇ ತಿಳಿಸುತ್ತವೆ. ಆ ತಾತ್ಪರ್ಯವು ಎರಡು ತೆರನಾಗಿದೆ ಎಂದು ಹೇಳಿದೆ. ||೨೫||

ಮಹಾತಾತ್ಪರ್ಯಮೇಕಂ ಸ್ಯಾತ್ ಅವಾಂತರಮಥೇತರತ್ ॥೨೬॥

ಮಹಾತಾತ್ಪರ್ಯಶೇಷಂ ಸ್ಯಾತ್ ಅವಾಂತರಸಮಾಹ್ವಯಂ ।
ತತ್ರೈವಂ ಸತಿ ವಾಕ್ಯಾನಿ ಕಾನಿಚಿತ್ಪಂಡಿತೋತ್ತಮಾಃ ॥೨೭॥

ನಿಷೇಧರೂಪಾಣ್ಯೇವ ಸ್ಯುಃ ತಥಾ ವಿಪ್ರಾಸ್ತು ಕಾನಿಚಿತ್ ।
ವಿಧಿರೂಪಾಣಿ ಚಾನ್ಯಾನಿ ಕಾನಿಚಿನ್ಮುನಿಪುಂಗವಾಃ ॥೨೮॥
ಸಿದ್ಧಾರ್ಥಬೋಧಕಾನ್ಯೇವ ತತ್ರೈವಂ ಸತಿ ವಾಡವಾಃ ।

ಅದು ಮಹಾತಾತ್ಪರ್ಯವೆಂದೂ ಅವಾಂತರತಾತ್ಪರ್ಯವೆಂದೂ ದ್ವಿವಿಧವು. ಎಂದರೆ ಪದದಲ್ಲೂ ವಾಕ್ಯದಲ್ಲೂ ಇರುವ ಅರ್ಥಬೋಧನಸಾಮರ್ಥ್ಯ ಅಥವಾ ಶಕ್ತಿಯು ಎರಡು ವಿಧವಾಗಿದೆ. ಮುಖ್ಯ ಅಥವಾ ಪ್ರಧಾನವಾಕ್ಯದಿಂದ ಮಹಾ ತಾತ್ಪರ್ಯವೂ, ಅಂಗವಾಕ್ಯಗಳಿಂದ ಅವಾಂತರತಾತ್ಪರ್ಯವೂ, ತಿಳಿದುಬರುತ್ತದೆ. ಆದರೂ ಅಷ್ಟೇ ಅಲ್ಲದೆ ಅಂಗವಾಕ್ಯಗಳಿಗೂ ಮತ್ತು ವಾಕ್ಯಗಳಲ್ಲಿರುವ ಪದಗಳಿಗೂ ಮಹಾತಾತ್ಪರ್ಯದಲ್ಲೂ ಮತ್ತು ವಾಕ್ಯಾರ್ಥಬೋಧನದಲ್ಲೂ ತಾತ್ಪರ್ಯವಿರುತ್ತದೆ. ಪದಗಳು ತಮ್ಮ ಅರ್ಥಗಳನ್ನು ಮಾತ್ರ ತಿಳಿಸಿ ಪರ್ಯವಸಿತವಾಗವು. ಏಕೆಂದರೆ ಆಯಾ ಪದಾರ್ಥವನ್ನು ಮಾತ್ರ ತಿಳಿಸುವುದರಲ್ಲಿ ವಕ್ತೃವಿಗೆ ವಿವಕ್ಷೆಯು ಪರ್ಯ ವಸಿತವಾಗುವುದಿಲ್ಲ. ಏಕೆಂದರೆ, "ಸಾಕ್ಷಾದ್ಯದ್ಯಪಿ ಕುರ್ವಂತಿ ಪದಾರ್ಥಪ್ರತಿ ಪಾದನಂ । ವರ್ಣಾಸ್ತಥಾಽಪಿ ನೈತಸ್ಮಿನ್ ಪರ್ಯವಸ್ಯಂತಿ ನಿಷ್ಫಲೇ । ವಾಕ್ಯಾರ್ಥ ಮಿತಯೇ ತೇಷಾಂ ಪ್ರವೃತ್ತ್ಯಾನಾಂತರೀಯಕಂ । ಪಾಕಜ್ವಾಲೇವ ಕಾಷ್ಠಾನಾಂ ಪದಾರ್ಥ ಪ್ರತಿಪಾದನಮ್ ॥" ಎಂದು ಹೇಳಿದೆ. ಪದಸಮೂಹಕ್ಕೆ ವಾಕ್ಯಾರ್ಥದಲ್ಲಿ ಶಕ್ತಿ ಇಲ್ಲದ್ದರಿಂದ ಅಭಿಧಾಯಕತ್ವವಿಲ್ಲವು. ಆದುದರಿಂದ ಅದು ಬೋಧಕವಾಗು ತ್ತದೆ ಎಂದು ಭಾವವು. ॥೨೬॥

ಹೀಗೆ ವಾಕ್ಯವು ಮೂರು ವಿಧವು; ವಿಧಿ, ನಿಷೇಧ, ಸಿದ್ಧಾರ್ಥ ಬೋಧಕ ವೆಂದು. ಕೆಲವು ವಾಕ್ಯಗಳು, "ನ ಕಳಂಜಂ ಭಕ್ಷಯೇತ್" ಮುಂತಾದುವು ನಿಷೇಧ ರೂಪಗಳಾಗಿರುತ್ತವೆ. ॥೨೭॥

ಮತ್ತೆ ಕೆಲವು ವಾಕ್ಯಗಳು "ಅಗ್ನಿಹೋತ್ರಂ ಜುಹುಯಾತ್" ಮುಂತಾ ದುವು ವಿಧಿರೂಪಗಳಾಗಿಯೂ, ಇನ್ನು ಕೆಲವು, ಸಿದ್ಧಾರ್ಥಬೋಧಕಗಳಾಗಿಯೂ ಇರುತ್ತವೆ. "ಸತ್ಯಂ ಜ್ಞಾನಮನಂತಂ ಬ್ರಹ್ಮ" ಮುಂತಾದವು ವೈದಿಕಸಿದ್ಧಾರ್ಥ

ಕರ್ತವ್ಯವಿಷಯಾ ಏವ ನಿಷೇಧಾ ವಿಧಯೋಽಪಿ ಚ ॥೨೯॥

ಸಿದ್ಧಾರ್ಥಬೋಧಕಂ ವಾಕ್ಯಂ ಲೌಕಿಕಂ ವೈದಿಕಂ ತು ವಾ ।
ದ್ವಿಪ್ರಕಾರಮಿತಿ ಪ್ರೋಕ್ತಂ ಮುನಿಭಿಸ್ಸೂಕ್ಷ್ಮದರ್ಶಿಭಿಃ ॥೩೦॥

ಪ್ರಾಪ್ತಪ್ರಾಪ್ತಿಪರಂ ಚೈಕಮಪರಂ ಪಂಡಿತೋತ್ತಮಾಃ ।
ನಿವೃತ್ತಸ್ಯ ಸ್ವತಸ್ಸಾಕ್ಷಾತ್ ದೋಷಸ್ಯೈವ ನಿವರ್ತಕಮ್ ॥೩೧॥

ಪ್ರತ್ಯಕ್ಷಾದಿ ಪ್ರಮಾಣಾನಿ ಪಂಚ ಚ ಬ್ರಾಹ್ಮಣೋತ್ತಮಾಃ ।
ಕರ್ತವ್ಯವಿಷಯಂ ವಾಕ್ಯಂ ಅನಾತ್ಮ ವಿಷಯಾಣಿ ತು ॥೩೨॥

ಪರಾಗರ್ಥೈಕನಿಷ್ಠತ್ವಾತ್ ಪ್ರತ್ಯಕ್ತ್ವಾದಾತ್ಮವಸ್ತುನಃ ।
ಅತಃ ಪ್ರತ್ಯಕ್ಷಪೂರ್ವೈಸ್ತು ಪ್ರಮಾಣೈರಖಿಲೈರಪಿ ॥೩೩॥
ಪ್ರತ್ಯಗ್ಭೂತಶ್ಶಿವೋ ಜ್ಞಾತುಂ ನ ಶಕ್ಯಸ್ಸರ್ವಜಂತುಭಿಃ ।

ಬೋಧಕಗಳು; "ಪುತ್ರಸ್ತೇ ಜಾತಃ" ಮುಂತಾದ ವಾಕ್ಯಗಳು ಲೌಕಿಕಸಿದ್ಧಾರ್ಥ ಬೋಧಕಗಳು. ||೨೮||

ನಿಷೇಧವಾಕ್ಯಗಳೂ ವಿಧಿವಾಕ್ಯಗಳೂ ಯಾವುದಾದರೊಂದು ಕ್ರಿಯಾವಿಷಯಗಳೇ ಆಗಿರುತ್ತವೆ. ವಸ್ತುಯಾಥಾತ್ಮ್ಯವನ್ನು ಬೋಧಿಸುವಂಥವಲ್ಲವು. ಸಿದ್ಧಾರ್ಥ ವಾಕ್ಯಗಳೂ ಲೌಕಿಕ ಮತ್ತು ವೈದಿಕವೆಂದು ಎರಡು ತೆರನಾಗಿರುತ್ತವೆ. ಅವಲ್ಲಿ ಒಂದು ಪ್ರಾಪ್ತಪ್ರಾಪ್ತಿಪರವು; "ಕಂಠೇ ಹಾರಃ" ಮುಂತಾದುದು. ಇನ್ನೊಂದು ತಾನಾಗಿಯೇ ನಿವೃತ್ತವಾದ ದೋಷವನ್ನು ನಿವರ್ತನೆಮಾಡುತ್ತದೆ. "ಶೂದ್ರಸ್ತ್ವಂ ನ ಭವಸಿ" ಇತ್ಯಾದಿ ವಾಕ್ಯಗಳು. ಇವೆರಡರಲ್ಲೂ ಭ್ರಾಂತಿಯಿಂದ ತೋರಿದ ದೋಷವು ನಿವೃತ್ತಿಯಾಗುತ್ತದೆ. ||೨೯-೩೦-೩೧||

ಪ್ರತ್ಯಕ್ಷ, ಅನುಮಾನ, ಉಪಮಾನ, ಅರ್ಥಾಪತ್ತಿ, ಅನುಪಲಬ್ಧಿ ಎಂದು ಐದು ಪ್ರಮಾಣಗಳೂ, ಕರ್ತವ್ಯವಿಷಯಕವಾದ ವಾಕ್ಯದಲ್ಲಿ ಬಾಹ್ಯವಿಷಯಗಳನ್ನು ಅವಲಂಬಿಸಿರುವುದರಿಂದ ಅನಾತ್ಮವಿಷಯಕಗಳಾಗಿರುತ್ತವೆ. ಏಕೆಂದರೆ ಅಂಥ ವಾಕ್ಯಗಳು ಇತರರು ಮಾಡಬೇಕಾದ ಯಾವುದಾದರೊಂದು ವಿಷಯವನ್ನು ಬೋಧಿಸುವುದರಿಂದಲೂ, ಆತ್ಮವಸ್ತುವು ಪ್ರತ್ಯಗ್ರೂಪವಾದುವರಿಂದಲೂ, ಆತ್ಮವಿಷಯಕಗಳಾಗಲಾರವು. ಆದ್ದರಿಂದ ಪ್ರತ್ಯಕ್ಷಾದಿ ಐದು ಪ್ರಮಾಣಗಳೂ ಪ್ರತ್ಯಗ್ಭೂತನಾದ ಶಿವನನ್ನು ತಿಳಿಸಲಾರವು. ||೩೨-೩೩||

ಪ್ರತ್ಯಗಾತ್ಮಾ ಶಿವಸ್ಸಾಕ್ಷಾತ್ ನ ಪರಾಗರ್ಥ ಆಸ್ತಿಕಾಃ ॥೩೪॥
ಪರಾಚೀನಸ್ಯ ಸರ್ವಸ್ಯ ಹ್ಯನಾತ್ಮತ್ವಪ್ರದರ್ಶನಾತ್ ।
ಸಿದ್ಧಾರ್ಥಬೋಧಕಂ ವಾಕ್ಯಂ ಲೌಕಿಕಂ ಕಿಂಚಿದಾಸ್ತಿಕಾಃ ॥೩೫॥
ಅನಾತ್ಮವಿಷಯಂ ತೇನ ಶಿವೋ ಜ್ಞಾತುಂ ನ ಶಕ್ಯತೇ ।
ಕಿಂಚಿತ್ಸಿದ್ಧಾರ್ಥಕಂ ವಾಕ್ಯಂ ಲೌಕಿಕಂ ಶ್ರುತಿಪೂರ್ವಕಂ ॥೩೬॥
ಪ್ರತ್ಯಗ್ರೂಪಶಿವೇ ಸಾಕ್ಷಾತ್ ಪ್ರಮಾಣಂ ಭವತಿ ದ್ವಿಜಾಃ ।
ವೇದಾಂತಾನಾಂ ಮಹಾವಾಕ್ಯಂ ಪ್ರತ್ಯಗ್ಬ್ರಹ್ಮೈಕತಾರ್ಥಗಮ್॥೩೭॥
ಭೂಮಾನಂದಶಿವಪ್ರಾಪ್ತಿ ಸಾಧನಂ ಪರಿಕೀರ್ತಿತಮ್ ।

ಎಲ್ಲ ಶರೀರಗಳಲ್ಲಿರುವ ಪ್ರತ್ಯಗಾತ್ಮನು ಪಾರಮಾರ್ಥಿಕವಾದ ಸಚ್ಚಿದಾನಂದ ರೂಪದಲ್ಲಿ ಸಾಕ್ಷಾತ್ ಶಿವಸ್ವರೂಪನಾಗಿದಾನೆ. ಆ ಪರಶಿವನು ಪರಾಗರ್ಥಸ್ವರೂಪ ನಲ್ಲವು. ಏಕೆಂದರೆ ಎಲ್ಲ ಪರಾಚೀನಪದಾರ್ಥವೂ ಅನ್ವಯವ್ಯತಿರೇಕವ್ಯಾಪ್ತಿಗಳಿಂದ ಆತ್ಮನಲ್ಲಿ ಕೂಡದೆ ಇರುವುದರಿಂದ ಆತ್ಮನಲ್ಲವೆಂದು ಕಂಡುಬಂದಿದೆ. ॥೩೪॥

ಆತ್ಮಸ್ವರೂಪವನ್ನು ತಿಳಿಸದೆ ಇರುವ, 'ಪುತ್ರಸ್ತೇ ಜಾತಃ' ಇತ್ಯಾದಿ ಸಿದ್ಧವಾದ ಅರ್ಥವನ್ನು ತಿಳಿಸುವುದಾದರೂ ಈ ವಾಕ್ಯವು ಲೌಕಿಕವಾದ ಬಾಹ್ಯವಿಷಯವನ್ನು ತಿಳಿಸುವ ವಾಕ್ಯವಾದ್ದರಿಂದ ಆತ್ಮಸ್ವರೂಪವನ್ನು ತಿಳಿಸಲಾರದು. ॥೩೫॥

ಆದರೆ ಕೆಲವು ಸ್ಮೃತಿಪುರಾಣಗಳ ವಾಕ್ಯಗಳು ಬ್ರಹ್ಮಾತ್ಮೈಕ್ಯ ಮುಂತಾದ ಸಿದ್ಧಾರ್ಥವನ್ನು ಹೇಳುವುವಾದರೂ, ತತ್ತ್ವಮಸಿ ಮುಂತಾದ ಶ್ರುತಿಯಂತೆ ಪ್ರಮಾಣ ಗಳಾಗಿ, ಸಿದ್ಧಾರ್ಥವನ್ನು ತಿಳಿಸುವ ಲೌಕಿಕವಾಕ್ಯಗಳು ಸಿದ್ಧವಾಗಿರುವ ಲೌಕಿ ಕಾರ್ಥವನ್ನು ತಿಳಿಸುವಂತೆ, ಪ್ರತ್ಯಗಾತ್ಮಸ್ವರೂಪವಾದ ಪರಶಿವನನ್ನೂ ತಿಳಿಸುತ್ತವೆ. ಅಂತಹ ಲೌಕಿಕವಾಕ್ಯಗಳಿಗೂ ಶ್ರುತಿಮೂಲಕವಾಗಿಯೇ ಪ್ರಾಮಾಣ್ಯವು. ನೇರವಾಗಿ ಅಲ್ಲವು. ॥೩೬॥

ವೇದಾಂತವಾಕ್ಯಗಳಲ್ಲಿಯೂ ಪ್ರತ್ಯಗಾತ್ಮಕ್ಕೂ ಮತ್ತು ಬ್ರಹ್ಮತತ್ವಕ್ಕೂ ಅಭೇದವನ್ನು ತಿಳಿಸುವ "ತತ್ತ್ವಮಸಿ" ಮುಂತಾದ ಶ್ರುತಿವಾಕ್ಯಗಳು ಮುಮುಕ್ಷು ವಾದವನಿಗೆ ಸರ್ವಾತಿಶಾಯಿಯಾದ ಆನಂದಸ್ವರೂಪನಾದ ಪರಶಿವಪ್ರಾಪ್ತಿಗೆ ಸಾಧನ ವಾಗುತ್ತವೆ. ॥೩೭॥

ತದೇವ ಭ್ರಾಂತಿಸಿದ್ಧಸ್ಯ ಸಂಸಾರಸ್ಯ ನಿವರ್ತಕಮ್ ॥೩೮॥

ಆತ್ಮಾ ಸ್ವಭಾವತೋ ಬದ್ಧಃ ಯದಿ ಸ್ಯಾದ್ವೇದವಿತ್ತಮಾಃ ।
ನೈವ ಮುಚ್ಯೇತ ಸಂಸಾರಾತ್ ಜನ್ಮಾಂತರಶತೈರಪಿ ॥೩೯॥

ಯಸ್ಯ ಯೋ ವೇದವಿಚ್ಛ್ರೇಷ್ಠಾಃ ಸ್ವತೋ ಧರ್ಮೋ ನ ಚಾನ್ಯಥಾ ।
ಧರ್ಮಿಣಾ ಸಹ ತನ್ನಾಶಃ ಭವತ್ಯೇವ ನ ಚಾನ್ಯಥಾ ॥೪೦॥

ಆತ್ಮನೋ ನೈವ ನಾಶೋಽಸ್ತಿ ಕದಾಚಿದಪಿ ಸುವ್ರತಾಃ ।
ಯತೋ ಘಟಾದೇರ್ನಾಶಸ್ತು ದೃಷ್ಟೋ ವಿಪ್ರಾ ಅನಾತ್ಮನಃ ॥೪೧॥

ಇಂತಹ ವೇದವಾಕ್ಯಗಳೇ ಭ್ರಾಂತಿಯಿಂದ ಬಂದಿರುವ, ಸ್ವಭಾವದಿಂದ ಇಲ್ಲದಿರುವ, ಸಂಸಾರವನ್ನು, ಎಂದರೆ ಕರ್ತೃತ್ವಭೋಕ್ತೃತ್ವಾಭಿಮಾನ, ಜನನಮರಣ, ಸುಖದುಃಖಾನುಭವದ ನಿರ್ಬಂಧದಲ್ಲಿ ಸಿಕ್ಕಿಸಿಕೊಂಡಿರುವೆನೆಂಬ ಅಜ್ಞಾನವನ್ನು, ನಿವೃತ್ತವಾಗುವಂತೆ ಮಾಡುತ್ತವೆ. ||೩೮||

ಆತ್ಮನು ಸ್ವಾಭಾವಿಕವಾಗಿಯೇ ಸಂಸಾರದಲ್ಲಿ ಬದ್ಧನಾಗಿರುವುದಾದರೆ, ಸಂಸಾರವು ಕಲ್ಪಿತವಾಗಿರದೆ ವಾಸ್ತವವಾಗಿರುವುದಾದರೆ, ಜೀವನಿಗೆ ಅನೇಕ ನೂರಾರು ಜನ್ಮಗಳು ಕಳೆದರೂ ಯಾವಾಗಲೂ ಮುಕ್ತಿಯಾಗುವ ಸಂಭವವೇ ಇಲ್ಲದೆಹೋಗುವುದು. ||೩೯||

ಯಾವ ವಸ್ತುವಿಗೆ ಯಾವುದು ಸ್ವಾಭಾವಿಕವಾದ ಧರ್ಮವೋ ಅಂಥ ಧರ್ಮಕ್ಕೆ ನಾಶವು ಆ ವಸ್ತುವಿನ ನಾಶದಿಂದಲೇ ಆಗಬೇಕೇ ಹೊರತು ಬೇರೆ ಗತಿ ಇಲ್ಲವು. ಧರ್ಮಿಯೊಡನೆಯೇ ಧರ್ಮನಾಶವಾಗುತ್ತದೆ. ಆದ್ದರಿಂದ ಸ್ವಾಭಾವಿಕವಾದ ಧರ್ಮಕ್ಕೆ ನಾಶವಾಗುವುದಾದರೆ ಆತ್ಮನಿಗೂ ನಾಶವಾಗಬೇಕಾಗಿ ಬರುತ್ತದೆ. ಅದನ್ನು ಯಾರೂ ಒಪ್ಪುವುದಿಲ್ಲ. ಏಕೆಂದರೆ ಆತ್ಮನು ನಿತ್ಯನೆಂದು ಎಲ್ಲರೂ ಒಪ್ಪಿರುತ್ತಾರೆ. ||೪೦||

ಆತ್ಮವಸ್ತುವಿಗೆ ಯಾವಾಗಲೂ ನಾಶವಿಲ್ಲವು. ಏಕೆಂದರೆ ಆತ್ಮನ ನಾಶವನ್ನು ಯಾರೂ ಕಂಡಿಲ್ಲವು. ಅಲ್ಲದೆ ಆತ್ಮನಲ್ಲದ ಘಟ ಮುಂತಾದ ವಸ್ತುಗಳಿಗೆ ಮಾತ್ರವೇ ನಾಶವು ಕಂಡುಬರುತ್ತದೆ. ಆತ್ಮನಿಗೆ ನಾಶವಿರುವುದಾದರೆ ಆ ನಾಶವನ್ನು ಕಾಣುವ, ಆ ನಾಶಕ್ಕೂ ಸಾಕ್ಷಿಯಾಗಿರಬೇಕಾದ, ಆತ್ಮವು ನಾಶವಾಗದೇ ಇರಬೇಕು. ಆದುದ ರಿಂದ ಆತ್ಮನು ನಿತ್ಯನು. ||೪೧||

ಆತ್ಮಭೇದಸ್ತಥೈವಾತ್ಮಬ್ರಹ್ಮಭೇದಶ್ಚ ಸುವ್ರತಾಃ ।
ಉಪಾಧಿನೈವ ಕ್ರಿಯತೇ ನ ಸ್ವತೋ ಮುನಿಪುಂಗವಾಃ ॥೪೨॥

ಘಟಾದ್ಯುಪಾಧಿಸಂಪರ್ಕಾದಾಕಾಶಸ್ಯ ಭಿದಾ ಯಥಾ ।
ಏಕಮೇವೇತಿ ವೇದಾಂತಾಸ್ತಾತ್ಪರ್ಯೇಣ ಮಹೇಶ್ವರಮ್ ॥೪೩॥
ಆಹುಶ್ಚಿದ್ರೂಪತೋ ಭೇದಶ್ಚಿತೋ ನಾಸ್ತ್ಯೇವ ಸರ್ವಥಾ ।

ಅಲ್ಲದೆ ಒಂದು ಜೀವಕ್ಕೆ ಇನ್ನೊಂದು ಜೀವದೊಡನೆ ಭೇದವಿಲ್ಲವು. ಹಾಗೆಯೇ ಜೀವನಿಗೂ ಈಶ್ವರನಿಗೂ ಭೇದವಿಲ್ಲವು. ಭೇದವೆಲ್ಲವೂ ತೋರುತ್ತಿದೆಯೇ ಹೊರತು ವಾಸ್ತವವಾಗಿಲ್ಲವು. ಏಕೆಂದರೆ ಭೇದವು ಉಪಾಧಿಕೃತವೇ ಹೊರತು ಸ್ವಾಭಾವಿಕವಾದುದಲ್ಲ. ಸ್ವಗತಧರ್ಮವನ್ನು ಇನ್ನೊಂದರಲ್ಲಿಯೂ ತೋರುವಂತೆ ಮಾಡುವ ಪದಾರ್ಥಕ್ಕೆ ಉಪಾಧಿ ಎಂದು ಹೆಸರು. ಆತ್ಮವು ಸಚ್ಚಿದಾನಂದರೂಪವಾದುದೆಂದು ಎಚ್ಚರ ಕನಸು ನಿದ್ರೆಗಳೆಂಬ ಅವಸ್ಥಾತ್ರಯದ ಪರೀಕ್ಷೆಯಿಂದ ಗೊತ್ತಾಗುತ್ತದೆ. ಬ್ರಹ್ಮವೂ ಸಚ್ಚಿದಾನಂದರೂಪವಾದುದೆಂದು ಶ್ರುತಿಯಿಂದಲೂ ಅನುಭವಯುಕ್ತಿಗಳಿಂದಲೂ ಗೊತ್ತಾಗುತ್ತದೆ. ಅಲ್ಲದೆ ಜೀವಬ್ರಹ್ಮರಿಗೆ, ಮತ್ತು ಜೀವಜೀವರಿಗೆ ಭೇದವು ತೋರುವಿಕೆಯಾಗಿದೆಯೇ ಹೊರತು ವಾಸ್ತವವಾಗಿಲ್ಲವೆಂಬುದೂ ಶ್ರುತಿಯುಕ್ತಿಗಳಿಂದ ಗೊತ್ತಾಗುತ್ತದೆ. ಹೀಗೆ ಭೇದಕ್ಕೆ ಪ್ರಮಾಣವಿಲ್ಲದೆ ಅದ್ವೈತವು ಸಿದ್ಧಾಂತವಾಗುತ್ತದೆ. ॥೪೨॥

ಒಂದೇ ಆಗಿರುವ ಆಕಾಶಕ್ಕೆ ಘಟ, ಮಠ, ಗುಹಾ ಮುಂತಾದ ಉಪಾಧಿಸಂಬಂಧದಿಂದ ಹೇಗೆ ಭೇದವು ತೋರುತ್ತಿರುವುದೋ, ಹಾಗೆ ವೇದಾಂತವಾಕ್ಯಗಳು ಎಂದರೆ, 'ಏಕಮೇವಾದ್ವಿತೀಯಂ ಬ್ರಹ್ಮ', 'ಏಕ ಏವ ತು ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ ।', 'ಏಕಧಾ ಬಹುಧಾ ಚೈವ ದೃಶ್ಯತೇ ಜಲಚಂದ್ರವತ್ ।', 'ನೇಹ ನಾನಾಸ್ತಿ ಕಿಂಚನ ।' ಮುಂತಾದ ವಾಕ್ಯಗಳು ಬ್ರಹ್ಮನು ವಾಸ್ತವವಾಗಿ ಒಂದೇ ಎಂದೂ, ಭೇದವಿಲ್ಲವೆಂದೂ, ಔಪಾಧಿಕವಾಗಿ ಭೇದವು ತೋರುತ್ತಿದೆ ಎಂದೂ ಹೇಳುತ್ತವೆ. ಒಂದು ಚಿತ್ತಿಗೂ ಇನ್ನೊಂದು ಚಿತ್ತಿಗೂ ಹೇಗೆ ಭೇದವಿಲ್ಲದೆ ಅಭೇದವೇ ಇದೆಯೋ ಹಾಗೆ ಚಿದ್ರೂಪರಾದ ಜೀವರಿಗೂ ಈಶ್ವರನಿಗೂ ಭೇದವಿಲ್ಲವು.

ಆತ್ಮರು ಅನೇಕರೆಂದು ಹೇಳುವವರನ್ನು ಕುರಿತು, ಆತ್ಮನಿಗೆ ಸ್ವಪ್ರಕಾಶಚಿದ್ರೂಪದಿಂದ ನಾನಾತ್ವವೋ? ಅಥವಾ ಅಹಂಕಾರವಿಶಿಷ್ಟವಾದ ಅಂತಃಕರಣಾದಿಗಳಿಂದ ಕೂಡಿರುವ ಚೇತ್ಯರೂಪದಿಂದ ಆತ್ಮಭೇದವು ತೋರುತ್ತದೋ? ಎಂದು

ಚೇತ್ಯರೂಪೇಣ ಭೇದಸ್ತು ಚೇತ್ಯಸ್ಯೈವ ಚಿತೋ ನ ಹಿ ॥೪೪॥

ಆತ್ಮಭೂತಶ್ಶಿವಸ್ಸಾಕ್ಷಾಚ್ಚಿನ್ಮಾತ್ರಜ್ಯೋತಿರೇವ ಹಿ ।
ಘಟಾದೀನಾಂ ತು ಚೇತ್ಯಾನಾಮನಾತ್ಮತ್ವಸ್ಯ ದರ್ಶನಾತ್ ॥೪೫॥
ಆತ್ಮನೋಽಪಿ ಸ್ವತೋ ಭೇದಂ ಆಹುಃ ಕೇಚಿನ್ಮುನೀಶ್ವರಾಃ ।

ವಿಕಲ್ಪಮಾಡಿ ಕೇಳಿ, ಮೊದಲನೆಯ ವಿಕಲ್ಪಕ್ಕೆ ಉತ್ತರಹೇಳುತ್ತಾರೆ: ಚಿದ್ರೂಪದಿಂದ ಅಭೇದವೇ ಹೊರತು ಚಿತ್ತಿಗೆ ಹೇಗೂ ಭೇದವೇ ಇಲ್ಲವು. ಚಿತ್ಪದಾರ್ಥವು ಎಲ್ಲದರಲ್ಲೂ ಅನುವೃತ್ತವಾಗಿರುವುದರಿಂದ, ವ್ಯಾವೃತ್ತಕ್ಕೆ ಭೇದಹೇಳಬಹುದೇ ಹೊರತು ಅನುವೃತ್ತವಸ್ತುವಿಗೆ ಭೇದವನ್ನು ಹೇಳಲಾಗುವುದಿಲ್ಲವೆಂದು ಭಾವವು. ||೪೩||

ಎರಡನೆಯ ವಿಕಲ್ಪವನ್ನು ನಿವಾರಿಸುತ್ತಾರೆ. ಅಹಂಕಾರವಿಶಿಷ್ಟವಾದ ಅಂತಃಕರಣದಿಂದ ಕೂಡಿರುವ ಚೇತ್ಯನಿಗೆ ಭೇದವೆಂದರೆ, ಉಪಾಧಿರೂಪವಾದ ಅಂತಃಕರಣಮುಂತಾದುವಕ್ಕೆ ಭೇದವಿದೆ ಎಂದಹಾಗಾಯಿತೇ ಹೊರತು ಚಿದ್ರೂಪವಾದ ಆತ್ಮಕ್ಕೆ ಭೇದವಿಲ್ಲವು. ಪರಶಿವನು ಆತ್ಮಸ್ವರೂಪನಾಗಿಯೂ ಸ್ವಪ್ರಕಾಶಚೈತನ್ಯಜ್ಯೋತಿಸ್ಸ್ವರೂಪನಾಗಿಯೂ ಇದಾನೆ. ಚಿತ್ಸಂವಳಿತ ಜ್ಯೋತಿಸ್ಸಿನಲ್ಲಿ ಭೇದವು ತೋರುತ್ತದೆಯೇ ವಿನಾ ಶುದ್ಧಚೈತನ್ಯದಲ್ಲಿ ಭೇದವಿಲ್ಲವೆಂದು ಭಾವವು. ಚೇತ್ಯದಲ್ಲಿ ಭೇದವು ತೋರಿದರೂ ಅನುವೃತ್ತಚೈತನ್ಯವು ಒಂದೇ ಆಗಿದೆ. ಆದುದರಿಂದ ಚೇತ್ಯವಾದ ಅಂತಃಕರಣ, ದೇಹಾದಿಗಳಿಗೆ ಭೇದವಿದೆ ಎಂದು ಗೊತ್ತಾಗುತ್ತದೆಯೇ ಹೊರತು, ಎಲ್ಲರಲ್ಲೂ ಅನುವೃತ್ತವಾಗಿರುವ ಚಿತ್ತಿಗೆ ಭೇದವನ್ನು ತಿಳಿಯಲಾಗುವುದಿಲ್ಲವೆಂದು ಭಾವವು. ||೪೪||

ಅಹಂಕಾರಾದಿಗಳು ಆತ್ಮವಲ್ಲವು. ಏಕೆಂದರೆ ಅವು ಚಿದ್ಭಾಸ್ಯವಾಗಿವೆ ಎಂದರೆ ಚಿತ್ತಿಗೆ ವಿಷಯವಾಗಿ ತೋರುತ್ತಿರುತ್ತವೆ.

ಆದರೂ ನೈಯಾಯಿಕರೂ ಸಾಂಖ್ಯರೂ 'ನಾನಾತ್ಮಾನೋ ವ್ಯವಸ್ಥಾತಃ । ಜನನಮರಣಕರಣಾನಾಂ ಪ್ರತಿನಿಯಮಾದಯುಗಪತ್ಪ್ರವೃತ್ತೇಶ್ಚ ॥ ಪುರುಷ ಬಹುತ್ವಂ ಸಿದ್ಧಂ । ತ್ರೈಗುಣ್ಯವಿಪರ್ಯಯಾಚ್ಚೈವ ॥' ಇತ್ಯಾದಿ ರೀತಿಯಲ್ಲಿ ಆತ್ಮರಿಗೆ ವಿಲಕ್ಷಣ ಸುಖದುಃಖಾದಿವ್ಯವಸ್ಥೆ ಇರುವುದರಿಂದ, ಜನನಮರಣಾದಿಗಳಲ್ಲೂ ತ್ರೈಗುಣ್ಯದಲ್ಲೂ ಭೇದವಿರುವದರಿಂದ, ಪುರುಷರು, ಆತ್ಮರು. ಅನೇಕರೆಂದು ಹೇಳುತ್ತಾರೆ. ||೪೫||

ತನ್ನ ಸಂಗತನೋವ ಸ್ಯಾದಾತ್ಮಾಭೇದಸ್ಯ ಸಾಧಕಃ ॥೪೬॥

ಭೇದಸಾಕ್ಷೀ ಶಿವೋ ಹ್ಯಾತ್ಮಾ ಕಥಂ ಭಿನ್ನೋ ಭವೇದ್ದ್ವಿಜಾಃ ।
ಅತ ಆತ್ಮನಿ ಭೇದಸ್ತು ಭ್ರಾಂತಿಸಿದ್ಧೋ ನ ವಸ್ತುತಃ ॥೪೬॥

ಏಕಸ್ಯ ನಭಸೋ ಭೇದೋ ಯಥಾ ಭ್ರಾಂತ್ಯಾ ಪ್ರತೀಯತೇ ।
ಯಸ್ಯ ಯತ್ಸ್ವತ ಏವ ಸ್ಯಾತ್ ತದನ್ಯತ್ತಸ್ಯ ಸುವ್ರತಾಃ ॥೪೭॥
ಅನ್ಯೋಪಾಧಿಪ್ರಯುಕ್ತಂ ಸ್ಯಾದಿತಿ ಲೋಕೇ ವ್ಯವಸ್ಥಿತಮ್ ।

ಎಲೈ ಋಷಿಗಳೇ, ನೈಯಾಯಿಕರು ವಿಭುವಾದ ಪದಾರ್ಥಗಳ ಎಂದರೆ ಆಕಾಶ, ಕಾಲ, ದಿಕ್, ಆತ್ಮ ಇವುಗಳ ಪೈಕಿ ಆಕಾಶ, ಕಾಲ, ದಿಕ್ಕುಗಳಲ್ಲಿ ತೋರುವ ಭೇದವು ಔಪಾಧಿಕವೆಂದೂ ಹೇಳುತ್ತಾರೆ. ಅದು ಅಲ್ಲದೆ ಆತ್ಮಭೇದವು ಸುಖ ದುಃಖಾದಿವ್ಯವಸ್ಥೆಯಿಂದ ಆಗುತ್ತದೆ ಎಂದು ಅವರು ಹೇಳುವುದೂ ಸರಿಯಲ್ಲ. ಆತ್ಮ ಒಂದೇ ಆಗಿದ್ದರೂ ಉಪಾಧಿಗಳಾದ ಶರೀರಾದಿಗಳಿಂದಲೇ ಸುಖದುಃಖಾದಿ ವ್ಯವಸ್ಥೆಯು ಸಂಭವಿಸುತ್ತಿರಲು, ವಾಸ್ತವವಾದ ಆತ್ಮಭೇದವನ್ನು ಅಂಗೀಕರಿಸಬೇಕಾದ ಅವಶ್ಯಕತೆ ಇಲ್ಲವು. ಅಲ್ಲದೆ ಆತ್ಮಭೇದವೂ ಪ್ರಪಂಚದಲ್ಲಿ ಸೇರಿದ ಪದಾರ್ಥವಾದುದರಿಂದ ಅದರ ಅರಿವೂ ಆತ್ಮನಿಂದ ಉಂಟಾಗುತ್ತೆಂದು ಹೇಳಬೇಕು. ಆದುದರಿಂದ ಭೇದವು ಆಗಂತುಕಧರ್ಮವು; ಆತ್ಮವಾದರೋ ಅನಾದಿವಸ್ತುವು. ಔಷ್ಣ್ಯಪ್ರಕಾಶಗಳು ಯಾವಾಗಲೂ ಅಗ್ನಿಯಲ್ಲಿರುವುದರಿಂದ ಅಗ್ನಿಧರ್ಮಗಳೆನ್ನಬಹುದು. ಆದರೆ ಭೇದವು ಆತ್ಮಧರ್ಮವಾಗಲಾರದು. ಅಲ್ಲದೆ ಈ ಭೇದವು ಆತ್ಮಭಾಸ್ಯವಾಗಿದೆ. ಆದುದರಿಂದಲೂ ಆತ್ಮಧರ್ಮವಾಗಲಾರದು. ಭೇದಸಾಮಾನ್ಯಕ್ಕೂ ಸಾಕ್ಷಿಯಾದವನು ಆ ಆತ್ಮನು. ಆತ್ಮನೇ ಪರಶಿವಸ್ವರೂಪನು. ಆದ್ದರಿಂದ ಆತ್ಮ ಭೇದವು ಹೇಗೆತಾನೇ ಸಿದ್ಧಿಸೀತು? ॥೪೬॥

ಆದುದರಿಂದ ಆತ್ಮಭೇದವು ಭ್ರಾಂತಿಯಿಂದ ತೋರುತ್ತಿದೆ ಎನ್ನಬೇಕು. ಅದು ವಾಸ್ತವವಲ್ಲವು. ಒಂದೇ ಆಗಿರುವ ಆಕಾಶಕ್ಕೆ ಭ್ರಾಂತಿಯಿಂದ ಉಪಾಧಿಮಹಿಮೆಯಿಂದ ಭೇದವು ತೋರುವಂತೆ ಆತ್ಮಭೇದದ ತೋರುವಿಕೆಯೂ ಶರೀರಾದಿ ಉಪಾಧಿಭೇದದಿಂದ ತೋರುತ್ತದೆಯೇ ಹೊರತು ವಾಸ್ತವವಾದುದಲ್ಲವು. ॥೪೬॥

ಯಾವ ಪದಾರ್ಥಕ್ಕೆ ಯಾವ ರೂಪವು ಸ್ವಾಭಾವಿಕವೋ, ಅದಕ್ಕಿಂತ ಬೇರೆ ಯಾದ ಧರ್ಮವು ಉಪಾಧಿಯಿಂದ ಉಂಟಾಗಿರುತ್ತದೆಂಬುದು ಲೋಕದಲ್ಲಿ ಕಂಡು

ಅತಸ್ಸ್ವತೋಽದ್ವಿತೀಯಸ್ಯ ಭೇದೋ ಭ್ರಾಂತೇಃ (ತಃ)ಪರಾತ್ಮನಃ ॥೪೮॥

ಅಂಗೀಕೃತ್ಯ ಘಟಾದೀನಾಂ ಭೇದಂ ವೇದಾರ್ಥಪಾರಗಾಃ ।
ನಿರಸ್ತಶ್ಚಾತ್ಮಭೇದಸ್ತು ಘಟಾದೀನಾಂ ಭಿದಾಽಪಿ ಚ ॥೪೯॥

ಭ್ರಾಂತಿಸಿದ್ಧಾ ನ ಸತ್ಯೇತ್ಯುಕ್ತಾ ತರ್ಕತಶ್ಚ ಪ್ರಮಾಣತಃ ।
ಘಟಾದೀನಾಂ ಭಿದಾ ತಾವನ್ನ ಭ್ರಾಂತ್ಯೈವ ಪ್ರತೀತಿತಃ ॥೫೦॥

ಪ್ರತೀತ್ಯಾ ಸತ್ಯರೂಪೈವ ವ್ಯವಹಾರೇ ಮುನೀಶ್ವರಾಃ ।
ಸ್ವರೂಪತ್ವೇನ ವಾ ವಿಪ್ರಾಃ ಧರ್ಮತ್ವೇನೈವ ವಾ ಭಿದಾ ॥೫೧॥
ಅಪಿ ವರ್ಷಶತೇನಾಪಿ ವಸ್ತುತೋ ನ ನಿರೂಪ್ಯತೇ ।

ಬಂದಿದೆ. ಹೇಗೆಂದರೆ ಸ್ಫಟಿಕಕ್ಕೆ ಸ್ವಚ್ಛತೆಯು ಸ್ವಾಭಾವಿಕವು. ಕೆಂಪುಬಣ್ಣವು ಜಪಾಪುಷ್ಪಸಂಬಂಧದಿಂದ ಉಂಟಾಗುವಂತೆ ತೋರುತ್ತದೆ. ಆದುದರಿಂದ ಕೆಂಪು ಬಣ್ಣವು ಜಪಾಕುಸುಮಸನ್ನಿಧಾನರೂಪವಾದ ಉಪಾಧಿಯಿಂದ ಉಂಟಾದುದೇ ಹೊರತು ವಾಸ್ತವವಲ್ಲವು. ಹಾಗೆಯೇ ಆತ್ಮಭೇದವು ಅಂತಃಕರಣಾದಿಸನ್ನಿಧಾನದಿಂದ ತೋರುತ್ತಿದೆಯೇ ಹೊರತು ವಾಸ್ತವವಲ್ಲವು. ॥೪೭॥

ಆದುದರಿಂದ ಪರಮಾತ್ಮನಲ್ಲಿ ತೋರುತ್ತಿರುವ ಭೇದವು ಭ್ರಾಂತಿಯಿಂದ ಅನಾದಿಯಾದ ಅವಿದ್ಯೆಯಿಂದ ಉಂಟಾದುದೇ ಹೊರತು ವಾಸ್ತವವಲ್ಲವು. ಏಕೆಂದರೆ ಆತ್ಮನು ಸ್ವಾಭಾವಿಕವಾಗಿ ಅದ್ವಿತೀಯನಾದ ವಸ್ತುವು. ॥೪೮॥

ಘಟಾದಿ ಅಚೇತನಪದಾರ್ಥಗಳಿಗಿಂತ ಚೇತನನಾದ ಆತ್ಮನು ಭಿನ್ನನೆಂದು ಹೇಳಲಾಯಿತು. ಆದರೆ ವಾಸ್ತವವಾಗಿ ವಿಚಾರಮಾಡಿದರೆ ಆತ್ಮನಿಗೆ ಅನಾತ್ಮ ಭೇದವೂ ಭ್ರಾಂತಿಮೂಲಕವಾದುದು—ಎಂದು ತರ್ಕಯುಕ್ತಿಯಿಂದಲೂ ಪ್ರಮಾಣ ದಿಂದಲೂ ಸಿದ್ಧವಾಗುತ್ತದೆ. ॥೪೯॥

ಘಟಪಟಾದಿಗಳಿಗೆ ಇರುವ ಭೇದವೂ ಕೂಡ ಭ್ರಾಂತಿಮೂಲಕವಾದುದಲ್ಲವು. ಏಕೆಂದರೆ ವ್ಯವಹಾರದಲ್ಲಿ ತೋರುವುದರಿಂದಲೂ ವಿಫಲಪ್ರವೃತ್ತಿಜನಕವಲ್ಲವಾದುದ ರಿಂದಲೂ, ವ್ಯವಹಾರದ ದೃಷ್ಟಿಯಿಂದ ಮಾತ್ರ ಸತ್ಯವಾದುದೆಂದೇ ಹೇಳಬೇಕು. ॥೫೦॥

ಭೇದವು ಅಧಿಕರಣಸ್ವರೂಪವೆಂದು ಪ್ರಾಭಾಕರರು ಹೇಳುತ್ತಾರೆ. ಅದು ಅಧಿಕರಣದ ಧರ್ಮವೆಂದು ವೈಶೇಷಿಕರು ವಾದಿಸುತ್ತಾರೆ. “ಘಟವು ಪಟಕ್ಕಿಂತ

ಅನ್ಯತೋಽನ್ಯಸ್ಯ ಭೇದಸ್ಸ್ಯಾತ್ ನೈಕಸ್ಯೈವ ಸದಾ ಖಲು ॥೫೨॥
ಅನ್ಯತ್ವಂ ವಸ್ತುನೋ ಭೇದೇ ಸಿದ್ಧೇ ಸಿಧ್ಯತಿ ಯೌಕ್ತಿಕಂ ।

ಬೇರೆಯಾದುದು." ಎನ್ನುವಲ್ಲಿ ಪ್ರಥಮಾಂತವು ಅನುಯೋಗಿಯೆಂದೂ ಪಂಚಮ್ಯಂತವು ಪ್ರತಿಯೋಗಿಯೆಂದೂ ವ್ಯವಹಾರವಿದೆ. ಇಂತಹ ಅನ್ಯೋನ್ಯಾಭಾವಸ್ಥಲದಲ್ಲಿ ಅಭಾವವು ಅಥವಾ ಭೇದವು ಅನುಯೋಗಿಸ್ವರೂಪವೆಂದು ಪ್ರಾಭಾಕರರೂ, ಅನುಯೋಗಿಯ ಒಂದು ಧರ್ಮವೆಂದು ವೈಶೇಷಿಕರೂ ಹೇಳುತ್ತಾರೆ. ಅಭಾವಜ್ಞಾನಕ್ಕೆ ಪ್ರತಿಯೋಗಿಜ್ಞಾನವು ಹೇಗೆ ಅವಶ್ಯಕವೊ ಹಾಗೆ ಭೇದಜ್ಞಾನಕ್ಕೆ ಪ್ರತಿಯೋಗಿಜ್ಞಾನವು ಬೇಕಿಲ್ಲವು. ಭೇದವು ಘಟಸ್ವರೂಪವೆನ್ನುವುದಾದರೂ ಭೇದಜ್ಞಾನವೂ ಪ್ರತಿಯೋಗಿಜ್ಞಾನವನ್ನು ಅಪೇಕ್ಷಿಸದೆ ಬರಲಿ ಎಂದು ಆಪತ್ತಿಯನ್ನು ವೈಶೇಷಿಕರು ಹಾಕುತ್ತಾರೆ. ಆದ್ದರಿಂದ 'ಅಯಮನಯೋರ್ಭೇದಃ' ಎಂದರೆ 'ಇವೆರಡಕ್ಕೂ ಇದೇ ಭೇದವು' ಎಂದು ಪ್ರತೀತಿ ಇರುವುದರಿಂದ ಭೇದವು ಧರ್ಮವೆಂದು ಹೇಳುವುದೇ ಯುಕ್ತವೆಂದು ವೈಶೇಷಿಕರ ಭಾವವು. ಭೇದವ್ಯವಹಾರದಲ್ಲಿ ಎಂದರೆ 'ಘಟಃ ಪಟೋ ನ' ಎಂದು ಮುಂತಾದ ವ್ಯವಹಾರದಲ್ಲಿ ವಿಸಂವಾದವಿಲ್ಲದಿರುವುದರಿಂದ ವಿಫಲಪ್ರವೃತ್ತಿಜನಕವಾಗದಿರುವುದರಿಂದ ಭೇದ ಸತ್ಯವಾಗುವುದರಿಂದ ಅದ್ವೈತಹಾನಿಯೆಂದು ಆಪತ್ತಿಯು ಬಂದರೆ ಅದಕ್ಕಾಗಿ ಉತ್ತರವು: ಅನೇಕ ವರ್ಷಗಳು ಪ್ರಯತ್ನಿಸಿದರೂ ಭೇದವನ್ನು ಪಾರಮಾರ್ಥಿಕವಾಗಿ ಸತ್ಯವೆಂದು ನಿರೂಪಿಸಲಾಗುವುದಿಲ್ಲ. ಹಾಗಲ್ಲದೆ ಭೇದವು ವ್ಯಾವಹಾರಿಕಸತ್ಯವೆಂದರೆ, ವ್ಯವಹಾರಕಾಲದಲ್ಲಿ ಅಬಾಧಿತವೆಂದರೆ, ಅದ್ವಿತೀಯತ್ವಪಕ್ಕೆ ಬಾಧಕವಾಗುವುದಿಲ್ಲವು. ಪಾರಮಾರ್ಥಿಕಸತ್ಯವೆಂದರೆ, ಬ್ರಹ್ಮನಂತೆ ತ್ರಿಕಾಲಾಬಾಧಿತವೆಂದರೆ, ಭೇದವು ವಸ್ತುಸ್ವರೂಪವೆಂಬ ಪಕ್ಷದಲ್ಲಿ ಭೇದಕ್ಕೆ ವಿಶೇಷಣವಾಗಿರುವ ಪ್ರತಿಯೋಗಿಯೂ ಸಹ ವಸ್ತುಸ್ವರೂಪವೆನ್ನಬೇಕಾಗುವುದು. ಹಾಗೆ ಹೇಳಿದರೆ 'ಪ್ರಪಂಚಾತ್ ಆತ್ಮಾ ಭಿನ್ನಃ' ಎಂಬ ಭೇದಪ್ರತೀತಿಯಲ್ಲಿ ವಿಶೇಷಣವಾಗಿ ಭೇದವೂ ಅದಕ್ಕೆ ವಿಶೇಷಣವಾಗಿರುವ ಪ್ರಪಂಚವೂ ಆತ್ಮಸ್ವರೂಪವಾಗಬೇಕಾಗುವುದು, ಎಂದರೆ ದ್ವೈತವೆಲ್ಲವೂ ಆತ್ಮ ಸ್ವರೂಪವಾದುದೆಂದು ಫಲಿಸುತ್ತದೆ. ಆದುದರಿಂದ ಸ್ವರೂಪಪಕ್ಷವು, ಎಂದರೆ ಭೇದವು, ಅನುಯೋಗಿಸ್ವರೂಪವೆಂಬ ಪಕ್ಷವು, ಅಸಂಗತವಾದುದು. ವಸ್ತುವಿನ ಧರ್ಮವೆಂಬ ಪಕ್ಷವೂ ಯುಕ್ತವಲ್ಲವೆಂದು ಹೇಳುತ್ತಾರೆ: ॥೫೧॥

ಭೇದವೆಂದರೆ ಒಂದು ಪದಾರ್ಥದಿಂದ ಇನ್ನೊಂದು ಪದಾರ್ಥವು ಭಿನ್ನವಾಗಿರುತ್ತದೆ. ಎಂದು ಅರ್ಥವು. ಒಂದೇ ವಸ್ತುವಿಗೆ ತನ್ನ ಭೇದವು ತನ್ನಲ್ಲಿರಲಾರದು.

ಏಕಮೇವಾದ್ವಿತೀಯಂ ಸದಿತ್ಯಾಹ ಶ್ರುತಿರಾದರಾತ್ ॥೫೩॥
ಮಾಯಾಮಾತ್ರಮಿದಂ ದ್ವೈತಂ ಅದ್ವೈತಂ ಪರಮಾರ್ಥತಃ ।

ಏಕೆಂದರೆ ಭೇದಜ್ಞಾನವು ಪ್ರತಿಯೋಗಿಜ್ಞಾನವನ್ನು ಅವಲಂಬಿಸಿಯೇ ಇರುತ್ತದೆ. ಹೀಗಿರುವಾಗ ಇನ್ನೊಂದು ಪದಾರ್ಥವೆಂದರೆ ಅದರಲ್ಲಿ ತೋರುವ ಭೇದವು ಈ ಮೊದಲನೆಯ ಭೇದಕ್ಕಿಂತಲೂ ಭಿನ್ನವೆ ಅಥವಾ ಅಲ್ಲವೆ? ಎಂದು ಪ್ರಶ್ನೆಯುಂಟಾಗುತ್ತದೆ. ಆದ್ದರಿಂದ ಭೇದವು ಸಿದ್ಧಿಸದೆ ಅನ್ಯತ್ವಸಿದ್ಧಿಯಾಗದು, ಅನ್ಯತ್ವಸಿದ್ಧಿಯಾಗದೆ ಭೇದಸಿದ್ಧಿಯಾಗದು—ಎಂದು ಅನ್ಯೋನ್ಯಾಶ್ರಯದೋಷವು ಬರುತ್ತದೆ. ಹಾಗಲ್ಲದೆ ಅದು ಭಿನ್ನವಲ್ಲವು, ಒಂದೇ. ಎಂದು ಹೇಳಿದರೆ ಆತ್ಮಾಶ್ರಯದೋಷವು. ಜ್ಞಪ್ತಿಯಲ್ಲಿ ಸ್ವಜ್ಞಾನದಲ್ಲಿ ಸ್ವಜ್ಞಾನವೇ ಅಪೇಕ್ಷಿತವಾಗುತ್ತಾದ್ದರಿಂದ ಆತ್ಮಾಶ್ರಯದೋಷವು ಬರುತ್ತದೆ. ಹಾಗಲ್ಲದೆ ಅನ್ಯೋನ್ಯಾಶ್ರಯದೋಷದಿಂದ ತಪ್ಪಿಸಿಕೊಳ್ಳಲು ಅನ್ಯದಲ್ಲಿ ತೋರುವ ಭೇದವು ಇವೆರಡು ಭೇದಗಳಿಗಿಂತ ಬೇರೆಯಾದುದೆಂದು ಹೇಳಿದರೆ ಅನ್ಯೋನ್ಯಾಶ್ರಯ ಆತ್ಮಾಶ್ರಯಗಳು ತಪ್ಪುವುದೇನೋ ನಿಜ, ಆದರೆ ಚಕ್ರಕದೋಷವು ಬರುತ್ತದೆ. ಹೇಗೆಂದರೆ (ಸ್ವಗ್ರಹಾಧೀನಗ್ರಹಾಧೀನಗ್ರಹಾಧೀನ ಗ್ರಹಕಸ್ವರೂಪವಾದ ಚಕ್ರಕದೋಷವು ಎಂದರೆ—ಸ್ವಂ ಪ್ರಥಮೋ ಭೇದಃ, ತದ್ಗ್ರಹಾಧೀನಃ ತೃತೀಯಭೇದಗ್ರಹಃ, ತದ್ಗ್ರಹಾಧೀನಃ ದ್ವಿತೀಯಭೇದಗ್ರಹಃ, ತದ್ಗ್ರಹಾಧೀನಃ ಪ್ರಥಮಭೇದಗ್ರಹಃ ತದ್ವತ್ತ್ವಂ ಪ್ರಥಮಭೇದೇ ಇತಿ ಚಕ್ರಕದೋಷಾಪತ್ತಿಃ) ಹೇಗೆಂದರೆ ಆ ಮೂರನೆಯ ಭೇದವು ಭಿನ್ನದಲ್ಲಿರಬೇಕು, ಆ ಭೇದವು ಚತುರ್ಥವೋ, ಮೊದಲನೆಯದೋ? ಮೊದಲನೆಯ ಭೇದಕ್ಕಿಂತ ಭಿನ್ನವೋ? ಅಲ್ಲವೋ? ಎಂದು ವಿಕಲ್ಪಮಾಡಿದರೆ ಆ ಭೇದವು ಪ್ರಥಮಭೇದಕ್ಕಿಂತ ಬೇರೆಯಾದ ಚತುರ್ಥವೆಂದರೆ ಅನವಸ್ಥಾದೋಷವು ಬರುತ್ತದೆ. ಭಿನ್ನವಲ್ಲವೆಂದರೆ ಚಕ್ರಕದೋಷವು ಬರುತ್ತದೆ. ಪ್ರಥಮಭೇದಸಿದ್ಧಿಗಾಗಿ ತೃತೀಯಭೇದಸಿದ್ಧಿಯು ದ್ವಿತೀಯಭೇದದ್ವಾರಾ ಪ್ರಥಮಭೇದಸಿದ್ಧಿಯನ್ನವಲಂಬಿಸಿದೆ ಎಂದು ಚಕ್ರಕದೋಷವು ಬರುತ್ತದೆ. ಆದುದರಿಂದ ಭೇದವೇ ಸಿದ್ಧಿಸುವುದಿಲ್ಲ. ॥೫೨॥

ಈ ರೀತಿಯಲ್ಲಿ ಕೇವಲ ಯುಕ್ತಿಯಿಂದಲೇ ಭೇದಸಿದ್ಧಿಯಾಗದೆಂದು ವಿವರಿಸಿ ಆ ಭೇದಸಿದ್ಧ್ಯಭಾವಕ್ಕೆ ಪ್ರಮಾಣವನ್ನು ಹೇಳುತ್ತಾರೆ. ಏಕಂ ಅಂದರೆ ಸ್ವಗತಭೇದವಿಲ್ಲದ ಅಖಂಡೈಕರಸಸ್ವರೂಪವಾದ ವಸ್ತುವೆಂದು ಅರ್ಥವು. ಏವ ಎಂದರೆ ಸಜಾತೀಯಭೇದವಿಲ್ಲದ್ದೆಂದೂ, ಅದ್ವಿತೀಯಂ ಎಂದರೆ ವಿಜಾತಿಯಭೇದವೂ ಇಲ್ಲ

ಏಕತ್ವಂ ಪಶ್ಯತೋ ಮೋಹಃ ಕಶ್ಶೋಕ ಇತಿ ಚಾಹ ಹಿ ॥೫೪॥
ದ್ವಿತೀಯಾದ್ವೈ ಭಯಂ ನಾಲ್ಪೇ ಸುಖಮಿತ್ಯಪಿ ಚಾಹ ಹಿ ।

ದ್ದೆಂದೂ ಭಾವವು. ಸತ್ಪದಾರ್ಥಸ್ವರೂಪವು ಹೀಗಿದೆ. ಎಂದು ಶ್ರುತಿಯ ತಾತ್ಪರ್ಯವು. ಪಾರಮಾರ್ಥಿಕವಾಗಿ ಸದ್ರೂಪವಾದ ಪರಮಶಿವಸ್ವರೂಪವಾದ ವಸ್ತುವಿಗೆ ಅದ್ವಿತೀಯತ್ವವಿಷಯದಲ್ಲಿ ಪ್ರಮಾಣವನ್ನು ಹೇಳಿ ಈಗ ಆತ್ಮಭಿನ್ನವಾದ ಭೇದಪ್ರಪಂಚದ ಮಿಥ್ಯಾತ್ವದಲ್ಲೂ ಶ್ರುತಿಪ್ರಮಾಣವಿದೆಯೆಂಬುದನ್ನು ತಿಳಿಸುತ್ತಾರೆ. ಈ ಪರಾಗ್ರೂಪವಾದ ದೃಶ್ಯವಾದ ಪ್ರಪಂಚವೆಲ್ಲವೂ ತೋರಿಕೆಯಾದುದರಿಂದ ಮಾಯಾಸ್ವರೂಪವಾದುದು. ಏಕೆಂದರೆ ಇದು ಬ್ರಹ್ಮನಲ್ಲಿ ಮಾಯೆಯಿಂದ ಕಲ್ಪಿತವಾಗಿದೆ. ಹಾಗಿಲ್ಲದಿದ್ದರೆ ಮಾಯೆಗೆ ಅಧಿಷ್ಠಾನವಾದ ಬ್ರಹ್ಮನ ಜ್ಞಾನದಿಂದ ಕಾರಣವಾದ ಮಾಯೆಗೆ ಅಥವಾ ಅಜ್ಞಾನಕ್ಕೆ ನಿವೃತ್ತಿಯುಂಟಾಗದು. ಆ ಮಾಯಾಕಾರ್ಯವಾದ ಪ್ರಪಂಚಕ್ಕೂ ನಿವೃತ್ತಿಯು ಆವಶ್ಯಕವಾಗಿ ಆಗಿಯೇ ಆಗುವುದು. ಆದುದರಿಂದ ಪಾರಮಾರ್ಥಿಕವಾಗಿ ಅದ್ವಿತೀಯವಾದ ಬ್ರಹ್ಮವೇ ಉಳಿಯುತ್ತದೆ. ಭೇದದ ವಾಸನೆಯೂ ಉಳಿಯುವುದಿಲ್ಲ. ॥೫೩॥

ಪ್ರಪಂಚಕ್ಕೆ ಮಿಥ್ಯಾತ್ವವನ್ನು ತಿಳಿಸಿ ಪ್ರತ್ಯಗಾತ್ಮನಿಗೂ ಪರಶಿವನಿಗೂ ಅದ್ವೈತವೇ ವಾಸ್ತವವೆಂಬ ತಿಳಿವಳಿಕೆಯಿಂದಾಗುವ ಫಲಕ್ಕೂ ಶ್ರುತಿಪ್ರಮಾಣವನ್ನು ತೋರಿಸುತ್ತಾರೆ. "ತತ್ರ ಕೋ ಮೋಹಃ ಕಶ್ಶೋಕ ಏಕತ್ವಮನುಪಶ್ಯತಃ" ಎಂಬ ಈಶಾವಾಸ್ಯೋಪನಿಷದ್ವಾಕ್ಯದಿಂದ ನಿರತಿಶಯಾನಂದಬ್ರಹ್ಮಾತ್ಮೈಕ್ಯವನ್ನು ಸಾಕ್ಷಾತ್ಕರಿಸಿಕೊಂಡಿರುವ ಜ್ಞಾನಿಗೆ ಶೋಕಮೋಹಗಳ ಪ್ರಸಕ್ತಿಯೇ ಇಲ್ಲವು ಎಂಬ ಎಂಬ ಬೋಧೆಯಾಗುತ್ತದೆ.

ಹಾಗಲ್ಲದೆ ಜಗನ್ಮಿಥ್ಯಾತ್ವವನ್ನು ಅಂಗೀಕರಿಸದೆ ಆತ್ಮನಿಗಿಂತ ಬೇರೆಯಾದ ವಸ್ತುವಿದೆಯೆಂದು ಹೇಳಿದರೆ ಶ್ರುತಿಪ್ರಮಾಣದಿಂದ ಬಾಧ ಬರುತ್ತದೆಂದು ಹೇಳುತ್ತಾರೆ. 'ದ್ವಿತೀಯಾದ್ವೈ ಭಯಂ ಭವತಿ' ಬೃ. ಉ. ೧.೪.೨. ದ್ವೈತವನ್ನು ಅಂಗೀಕರಿಸಿದರೆ ಎರಡನೆಯ ವಸ್ತುವಿನಿಂದ ಒಂದಲ್ಲ ಒಂದುವೇಳೆ ಭಯವು ಆವಶ್ಯಕವಾಗಿ ಉಂಟಾಗುವುದು. ಆದುದರಿಂದ ದ್ವೈತವೇ ಭಯಕ್ಕೆ ಕಾರಣವಾದುದು. ಅಲ್ಲದೆ ಬ್ರಹ್ಮಸಾಕ್ಷಾತ್ಕಾರದಿಂದ ಅಭಯವು ಉಂಟಾಗುತ್ತದೆಯೆಂದು 'ಯದಾ ಹ್ಯೇವೈಷ ಏತಸ್ಮಿನ್ನದೃಶ್ಯೇ....' ತೈ. ಉ. ೨. ೭. ಇತ್ಯಾದಿ ಶ್ರುತಿಯಿಂದ

ಅತಸ್ತರ್ಕಪ್ರಮಾಣಾಭ್ಯಾಂ ವಸ್ತ್ವೇಕತ್ವಂ ಸುನಿಶ್ಚಿತಮ್ ॥೫೫॥

ವಿದುಷಾಮನುಭೂತ್ಯಾ ಚ ವಸ್ತ್ವೇಕತ್ವಂ ಸುನಿಶ್ಚಿತಮ್ ।
ವಸ್ತ್ವೇಕತ್ವಂ ಮಹಾವಾಕ್ಯಾದೇವ ಜಾನಂತಿ ಯೇ ಜನಾಃ ॥೫೬॥
ತೇ ಮುಚ್ಯಂತೇ ಹಿ ಸಂಸಾರಾತ್ ಯಥಾ ಸ್ವಪ್ನ ಪ್ರಬೋಧನಾತ್ ।

ತಿಳಿದುಬರುತ್ತದೆ. ಮತ್ತು ದ್ವೈತದಿಂದ ಭಯವೇ ಉಂಟಾಗುತ್ತದೆಂದೂ 'ಯದಾ ಹ್ಯೇವೈಷ ಏತಸ್ಮಿನ್ನುದರಮಂತರಂ ಕುರುತೇ । ಅಥ ತಸ್ಯ ಭಯಂ ಭವತಿ ।' ಎಂಬ ಶ್ರುತಿಯಿಂದ ಗೊತ್ತಾಗುತ್ತದೆ ಎಂದು 'ದ್ವಿತೀಯಾದ್ವೈ ಭಯಂ' ಬೃ. ಉ. ೧.೪.೨. ಎಂಬುದರ ಭಾವವು. ಹೀಗೆ ದ್ವೈತದಿಂದ ಭಯರೂಪವಾದ ಅನಿಷ್ಟವಾಗುವುದನ್ನು ತೋರಿಸಿ, ಸುಖರೂಪವಾದ ಇಷ್ಟದ ಹಾನಿಯೂ ಆಗುತ್ತದೆಂದು 'ನಾಲ್ಪೇ ಸುಖಂ' ಛಾಂ. ಉ. ೭.೨೩.೧. ಎಂಬ ಶ್ರುತಿಯಿಂದ ತೋರಿಸಿರುವುದು ಗೊತ್ತಾಗುತ್ತದೆ. ಸಾರ್ವಭೌಮ ಮೊದಲುಗೊಂಡು ಸತ್ಯಲೋಕದವರೆಗೂ ಇರುವ ಪರಿಚ್ಛಿನ್ನವಾದ ಆನಂದಗಳಲ್ಲಿ ಒಂದೊಂದೂ ಅದರ ಹಿಂದಿನದಕ್ಕಿಂತ ನೂರರಷ್ಟು ಹೆಚ್ಚಾದರೂ, ನಷ್ಟವಾಗುವುದಾದುದರಿಂದ ನಿತ್ಯಸುಖಸ್ವರೂಪವಾದುದಲ್ಲವೆಂದು ಆ ಶ್ರುತಿಯ ತೈ.ಉ. ೨.೮. ಭಾವವು. ಆದುದರಿಂದ ನಿತ್ಯವಾದ ನಿರತಿಶಯವಾದ ಸುಖರೂಪ ವಾದ ಭೂಮವನ್ನು, ಎಂದರೆ ಎಲ್ಲಕ್ಕಿಂತಲೂ ದೊಡ್ಡ ತತ್ವವನ್ನು, ತಿಳಿಯಬೇಕೆಂದು ಛಾಂದೋಗ್ಯಸಪ್ತಮಾಧ್ಯಾಯದಲ್ಲಿ ಸನತ್ಕುಮಾರ ಛಾಂ. ಉ. ೭.೧೩.೧ ನಾರದಸಂವಾದದಿಂದ ತಿಳಿದುಬರುತ್ತದೆ. ॥೫೪॥

ಆದುದರಿಂದ ಯುಕ್ತಿಯಿಂದಲೂ ಶ್ರುತಿಪ್ರಮಾಣದಿಂದಲೂ ಏಕತ್ವವು ನಿಶ್ಚಿತವಾಗಿದೆ. ಹಾಗೆಯೇ ಜ್ಞಾನಿಗಳ ಅನುಭವದಿಂದಲೂ ಬ್ರಹ್ಮಾತ್ಮೈಕ್ಯರೂಪ ವಾದ ಅದ್ವೈತವು ನಿಶ್ಚಿತವಾಗುತ್ತದೆ. ॥೫೫॥

ಈ ರೀತಿಯಿಂದ ವಸ್ತುವು ಪಾರಮಾರ್ಥಿಕವಾಗಿ ಒಂದೇ ಎಂಬ ಅದ್ವೈತ ತತ್ತ್ವವನ್ನು ಯಾರು ಶ್ರುತಿಪ್ರಮಾಣದಿಂದಲೇ ತಿಳಿಯುತ್ತಾರೋ, ಅವರಿಗೆ, ಸ್ವಪ್ನ ಪ್ರಪಂಚವು ಎಚ್ಚರಿಕೆಯಿಂದಲೇ ಹೇಗೆ ನಿವೃತ್ತವಾಗುತ್ತದೋ, ಅದಕ್ಕಾಗಿ ಕರ್ಮಾಂತರದ ಅಪೇಕ್ಷೆ ಹೇಗೆ ಇಲ್ಲವೋ, ಹಾಗೆ ಅಂಥವರು ಈ ಅದ್ವೈತಜ್ಞಾನ ದಿಂದಲೇ ಮುಕ್ತಿಯನ್ನು ಪಡೆಯುತ್ತಾರೆಂದು ಭಾವವು. ॥೫೬॥

ಭೇದದರ್ಶನಮಾಸ್ಥಾಯ ಮುಕ್ತಿಂ ವಾಂಛಂತಿ ಯೇ ನರಾಃ ॥೫೭॥

ತೇ ಮಹಾಘೋರಸಂಸಾರೇ ಪತಂತ್ಯೇವ ನ ಸಂಶಯಃ ।
ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ॥೫೮॥

ಸಂಪಶ್ಯನ್ನಾತ್ಮಯಾಜೀ ಸ್ಯಾತ್ ಸ್ವಾರಾಜ್ಯಮಧಿಗಚ್ಛತಿ ।
ಸರ್ವಭೂತಾನಿ ಸಂಪಶ್ಯನ್ನಾತ್ಮನ್ಯೇವ ಮುನೀಶ್ವರಾಃ ॥೫೯॥

ಸಂಸಾರಸಾಗರಾದಸ್ಮಾದುತ್ತೀರ್ಣಸ್ಸ್ಯಾದಸಂಶಯಃ ।
ಬಹವೋಽದ್ವೈತವಿಜ್ಞಾನಾದ್ವಿಮುಕ್ತಾ ಭವಬಂಧನಾತ್ ॥೬೦॥
ಅದ್ವೈತಜ್ಞಾನಯಜ್ಞೇನ ನ ತುಲ್ಯೋ ವಿದ್ಯತೇ ಕ್ವಚಿತ್ ।

ಹೀಗೆ ಶ್ರುತಿಪ್ರಮಾಣದಿಂದಲೂ ಯುಕ್ತಿಯಿಂದಲೂ ಸಿದ್ಧವಾದ ಅಭೇದವನ್ನು ಬಿಟ್ಟು ಭೇದವನ್ನೇ ಪರಮಾರ್ಥವೆಂದು ಹೇಳುವವರಿಗೆ ಉಂಟಾಗುವ ಬಾಧಕವನ್ನು ಹೇಳುತ್ತಾರೆ. ಯಾರು ತಾನು ಬೇರೆ, ಈಶ್ವರ ಬೇರೆ. ಎಂಬ ಮುಂತಾದ ಭೇದವನ್ನು ಅವಲಂಬಿಸಿ ಮುಕ್ತಿಯನ್ನು ಅಪೇಕ್ಷಿಸುತ್ತಾರೋ ಅಂಥವರು ಈ ಭಯಂಕರವಾದ ಜನನಮರಣಪ್ರವಾಹದಲ್ಲಿ ಖಂಡಿತವಾಗಿಯೂ ಬೀಳುತ್ತಾರೆ. ||೫೭||

“ ಪ್ರತೀತಃ ಸರ್ವಾತ್ಮಾನುಭವ ಏವ ಜ್ಞಾನಯಜ್ಞಃ ” ಎಂದರೆ ಸರ್ವಭೂತಗಳಲ್ಲಿ ಆತ್ಮಾಭೇದವನ್ನೂ, ಆತ್ಮನಲ್ಲಿ ಸರ್ವಭೂತಾಭೇದವನ್ನೂ ಮನಗಾಣುವುದೇ ಜ್ಞಾನಯಜ್ಞವೆನಿಸುತ್ತದೆ. ಇದನ್ನು ತಿಳಿದವರನ್ನು ಆತ್ಮಯಾಜೀ ಎನ್ನುತ್ತಾರೆ. ಅಂಥವರೇ ಸ್ವಾರಾಜ್ಯವನ್ನು ಪಡೆದವರಾಗುತ್ತಾರೆ. ||೫೮||

ಹೀಗೆ ಅನ್ವಯವ್ಯತಿರೇಕಗಳಿಂದ ಮುಕ್ತಿಗೆ ಜ್ಞಾನವೇ ಸಾಕ್ಷಾತ್ತಾದ ಸಾಧನವು. ಕರ್ಮವಲ್ಲವು. ಎಂದು ತಿಳಿಸುತ್ತಾರೆ. ಯಾರು ಎಲ್ಲ ಭೂತಗಳನ್ನೂ ಆತ್ಮನಲ್ಲಿ ಅಭೇದದಿಂದ ನೋಡುತ್ತಾರೋ ಅಂಥವರು ಈ ಸಂಸಾರಸಾಗರವನ್ನು ಖಂಡಿತವಾಗಿಯೂ ದಾಟುತ್ತಾರೆ. ||೫೯||

ಈ ಜೀವಾತ್ಮಪರಮಾತ್ಮೈಕ್ಯದ ಸಾಕ್ಷಾತ್ಕಾರದಿಂದ ಸಂಸಾರದ ನಿರ್ಬಂಧದ ದೆಸೆಯಿಂದ ಬಿಡುಗಡೆಯನ್ನು ಹೊಂದುತ್ತಾರೆ. ಆದುದರಿಂದ ಅದ್ವೈತಜ್ಞಾನವೆಂಬ ಈ ಯಜ್ಞಕ್ಕೆ ಸಮವಾದ ಸದ್ಗತಿಸಾಧನವು ಬೇರೊಂದಿಲ್ಲವು. ||೬೦||

ದ್ವೈತವಿಜ್ಞಾನಮಾಸಾದ್ಯ ಮುಕ್ತಿಂ ವಾಂಛಂತಿ ಯೇ ನರಾಃ ॥೬೧॥

ತೇ ಮಹಾಮೋಹಸಂಸಾರಸರ್ಪದಷ್ಟಾ ನ ಸಂಶಯಃ ।
ಆತ್ಮಯಾಥಾತ್ಮ್ಯ ವಿಜ್ಞಾನಯಜ್ಞಂ ಮುಕ್ತ್ವಾ ನರಾಧಮಾಃ ॥೬೨॥

ಕ್ರಿಯಾರೂಪೇಷು ಯಜ್ಞೇಷು ಯತಂತೇ ಮಾಯಯಾಽಽವೃತಾಃ ।
ಯೇ ಲಂಘಯಂತಿ ಸಂಸಾರಸಮುದ್ರಂ ಕರ್ಮಯಜ್ಞತಃ ॥೬೩॥

ತೇ ಮಹಾತಮಸಾ ಸರ್ವಂ ಪಶ್ಯಂತ್ಯೇವ ರವಿಂ ವಿನಾ ।
ಜ್ಞಾನಯಜ್ಞೋಡುಪೇನೈವ ಬ್ರಾಹ್ಮಣೋ ವಾಽಂತ್ಯಜೋಽಪಿ ವಾ ॥೬೪॥
ಸಂಸಾರಸಾಗರಂ ತೀರ್ತ್ವಾ ಮುಕ್ತಿಸಾರಂ ಹಿ ಗಚ್ಛತಿ ।

ಜೀವಬ್ರಹ್ಮಭೇದಜ್ಞಾನವನ್ನೇ ಪಡೆದೂ ಯಾರು ಮೋಕ್ಷವನ್ನು ಪಡೆಯಲು ಅಪೇಕ್ಷಿಸುತ್ತಾರೋ ಅಂಥವರು ಈ ದೊಡ್ಡ ಅಜ್ಞಾನಮೂಲಕವಾದ ಸಂಸಾರವೆಂಬ ಹಾವಿನಿಂದ ಕಡಿಯಲ್ಪಟ್ಟು ದುಃಖಿತರೇ ಆಗುತ್ತಾರೆ. ॥೬೧॥

ಈ ಜೀವನ ಪರಮಾರ್ಥಸ್ವರೂಪವನ್ನು ಎಂದರೆ ಜೀವಬ್ರಹ್ಮೈಕ್ಯಜ್ಞಾನ ವೆಂಬ ಯಜ್ಞವನ್ನು ಬಿಟ್ಟು ಯಾರು ಕ್ರಿಯಾರೂಪವಾದ ಯಜ್ಞಗಳಲ್ಲಿ ತೊಡಗಿರುತ್ತಾರೋ ಅಂಥವರು ಅಜ್ಞಾನದಿಂದ ಆವರಿಸಲ್ಪಟ್ಟವರಾಗಿ ಪ್ರಯತ್ನಗಳನ್ನು ಮಾಡುವವರಾಗಿರುತ್ತಾರೆ. ॥೬೨॥

ಕ್ರಿಯಾರೂಪಗಳಾದ ಕರ್ಮಯಜ್ಞಗಳನ್ನು ಆಚರಿಸುವುದರಿಂದಲೇ ಯಾರು ಈ ಸಂಸಾರಸಾಗರವನ್ನು ದಾಟಲು ಪ್ರಯತ್ನಿಸುತ್ತಾರೋ ಅಂಥವರು ಸೂರ್ಯನನ್ನು ಬಿಟ್ಟು ಬಲವಾದ ಕತ್ತಲೆಯ ಸಹಾಯದಿಂದಲೇ ಎಲ್ಲ ಪದಾರ್ಥಗಳನ್ನೂ ನೋಡಲು ತೊಡಗಿರುವವರ ಹಾಗಿರುತ್ತಾರೆ. ॥೬೩॥

ಈ ಜ್ಞಾನಯಜ್ಞವೆಂಬ ತೆಪ್ಪದ ಸಹಾಯದಿಂದಲೇ ಯಾರು ಪ್ರಯತ್ನಿಸುತ್ತಾರೋ ಅಂಥವರು ಬ್ರಾಹ್ಮಣರಾಗಲಿ ಚಂಡಾಲರಾಗಲಿ ಸಂಸಾರಸಮುದ್ರವನ್ನು ದಾಟಿ ಮೋಕ್ಷವೆಂಬ ದಡವನ್ನು ಸೇರುತ್ತಾರೆ. ॥೬೪॥

ಅಹೋ ಮಾಹೇಶ್ವರಜ್ಞಾನಂ ಯಜ್ಞವೈಭವಮಾಸ್ತಿಕಾಃ ॥೬೫॥

ಅವಿಜ್ಞಾಯ ನರಾ ಲೋಕೇ ಯತಂತೇ ಸಾರವರ್ಜಿತೇ ।
ಅಪಿ ದೇವಾ ನ ಜಾನಂತಿ ಜ್ಞಾನಯಜ್ಞಸ್ಯ ವೈಭವಂ ॥೬೬॥

ಕಿಂ ಪುನರ್ಮಾನವಾ ವಿಪ್ರಾಃ ಶಿವೋ ಜಾನಾತಿ ಸರ್ವವಿತ್ ।
ಸರ್ವಧರ್ಮಸಮೋಪೇತಾಶ್ಶಿವಭಕ್ತಿಪರಾಯಣಾಃ ॥೬೭॥

ಪ್ರಸಾದಾದೇವ ರುದ್ರಸ್ಯ ಜಾನಂತಿ ಜ್ಞಾನವೈಭವಮ್ ।
ಪ್ರಸಾದಹೀನೈಃ ಪಾಪಿಷ್ಠೈಃ ಮನುಷ್ಯೈಃ ಬ್ರಾಹ್ಮಣೋತ್ತಮಾಃ ॥೬೮॥

ಜ್ಞಾನಯಜ್ಞಃ ಪರಿಜ್ಞಾತುಂ ನ ಶಕ್ಯಸ್ಸರ್ವಸಾಧನೈಃ ।
ಜ್ಞಾನಯಜ್ಞೈಕನಿಷ್ಠಾನಾಂ ನಾವಾಪ್ಯಂ ವಿದ್ಯತೇ ಕ್ವಚಿತ್ ॥೬೯॥

ನ ಹೇಯಂ ವಿದ್ಯತೇ ಸರ್ವಂ ಬ್ರಹ್ಮರೂಪೇಣ ಭಾತಿ ಹಿ ।

ಹೀಗೆ ಪರಶಿವಾಭೇದಜ್ಞಾನರೂಪವಾದ ಯಜ್ಞಮಹಿಮೆಯನ್ನು ಯಾರು ತಿಳಿಯದೆ ಇರುತ್ತಾರೋ ಅಂಥವರು ನಿಸ್ಸಾರವಾದ ಈ ಲೋಕದಲ್ಲಿಯೇ ತೊಡಗಿರುತ್ತಾರೆ. ॥೬೫॥

ಈ ಜ್ಞಾನಯಜ್ಞದ ಮಹಿಮೆಯನ್ನು ದೇವತೆಗಳೂ ತಿಳಿಯರು. ಇನ್ನು ಮನುಷ್ಯರು ತಿಳಿಯರೆಂದು ಹೇಳಬೇಕಾಗಿಯೇ ಇಲ್ಲವು. ಆದರೆ ಪರಶಿವನು ಮಾತ್ರ ಸರ್ವಜ್ಞನಾದುದರಿಂದ ಈ ಮಹಿಮೆಯನ್ನು ತಿಳಿದಿದಾನೆ. ॥೬೬॥

ಎಲ್ಲ ಧರ್ಮಗಳನ್ನೂ ಆಚರಿಸಿದವರಾಗಿ ಶಿವನಲ್ಲಿ ಭಕ್ತಿಯುಳ್ಳವರಾಗಿರುವವರು ಮಾತ್ರ ಈ ಬ್ರಹ್ಮಾತ್ಮೈಕ್ಯಜ್ಞಾನದ ಮಹಿಮೆಯನ್ನು ಪರಶಿವಸ್ವರೂಪನಾದ ರುದ್ರನ ಅನುಗ್ರಹದಿಂದಲೇ ತಿಳಿಯುತ್ತಾರೆ. ॥೬೭॥

ಈಶ್ವರನ ಅನುಗ್ರಹವಿಲ್ಲದ ಪಾಪಿಗಳಾದ ಮಾನವರಿಂದ ಈ ಜ್ಞಾನಯಜ್ಞವು ಇತರ ಎಲ್ಲ ಸಾಧನಗಳಿಂದಲೂ ತಿಳಿಯಲಾಗುವುದಿಲ್ಲವು. ॥೬೮॥

ಈ ಜ್ಞಾನಯಜ್ಞವೊಂದರಲ್ಲೇ ನಿರತರಾಗಿರುವವರಿಗೆ ಪಡೆಯಬೇಕಾದುದು ಬೇರೆ ಯಾವುದೂ ಇರುವುದಿಲ್ಲವು; ಹೇಯವಾದ ಪದಾರ್ಥವು ಯಾವುದೂ ಇರುವುದಿಲ್ಲವು; ಎಲ್ಲವೂ ಬ್ರಹ್ಮರೂಪವಾಗಿಯೇ ತೋರುತ್ತಿರುತ್ತದೆ. ॥೬೯॥

ನ ಮಯಾ ಶಕ್ಯತೇ ವಕ್ತುಂ ಜ್ಞಾನಯಜ್ಞಸ್ಯ ವೈಭವಮ್ ॥೭೦॥

ಮುನಿಭಿಶ್ಚ ತಥಾ ದೇವೈಃ ತಥಾಽನ್ಯೈರಪಿ ಜಂತುಭಿಃ ।
ಶ್ರುತ್ಯಾ ಶಿವೇನ ವಾ ವಿಪ್ರಾ ಜ್ಞಾನಯಜ್ಞಸ್ಯ ವೈಭವಮ್ ॥೭೧॥
ಕಥಂಚಿಚ್ಛಕ್ಯತೇ ವಕ್ತುಂ ಸತ್ಯಮೇವ ನ ಸಂಶಯಃ ।

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಜ್ಞಾನಯಜ್ಞವಿವರಣಂ ನಾಮ ದಶಮಾಧ್ಯಾಯಃ

ಜ್ಞಾನಯಜ್ಞದ ಮಹಿಮೆಯನ್ನು ಹೇಳಲು ನನಗೂ ಸಾಧ್ಯವಲ್ಲವು. ಹಾಗೆಯೇ ಮುನಿಗಳಿಗೂ ದೇವತೆಗಳಿಗೂ, ಇತರರಿಗೂ ಸಾಧ್ಯವಲ್ಲವು. ||೭೧||

ಆದರೆ ವೇದದಿಂದಲೂ, ಪರಶಿವನಿಂದಲೂ ಈ ಜ್ಞಾನಯಜ್ಞದ ಮಹಿಮೆಯನ್ನು ಹೇಳಲು ಹೇಗೋ ಹಾಗೆ ಸಾಧ್ಯವಾಗುತ್ತದೆ. ಇದರಲ್ಲಿ ಸಂದೇಹವಿಲ್ಲವು. ||೭೧||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಹತ್ತನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

॥ ಏಕಾದಶೋಽಧ್ಯಾಯಃ ॥

ಹನ್ನೊಂದನೆಯ ಅಧ್ಯಾಯವು

(ಜ್ಞಾನಯಜ್ಞವಿಶೇಷಃ)

॥ ಓಂ ಸೂತ ಉವಾಚ ॥

ಭೂಯೋಽಪಿ ಜ್ಞಾನಯಜ್ಞಂ ತು ಪ್ರವಕ್ಷ್ಯಾಮಿ ಸಮಾಸತಃ ।
ಮಹಾಪ್ರೀತ್ಯಾ ಮುನಿಶ್ರೇಷ್ಠಾಃ ಶೃಣುತಾನಂದಸಿದ್ಧಯೇ ॥೧॥

ಸೂತರು ಗುರುವಾದ ವ್ಯಾಸಮಹರ್ಷಿಯ ಅನುಗ್ರಹದಿಂದ ವಿವರಿಸುತ್ತಾರೆ. ಈ ರೀತಿಯಾಗಿ ಜೀವಾತ್ಮನಿಗೆ ಪರಶಿವನೊಡನೆ ಅಭೇದಜ್ಞಾನವೇ ಮುಕ್ತಿಗೆ ಸಾಧನವು. ಆ ಅಂಶದಲ್ಲಿ ವೇದಾಂತವಾಕ್ಯಗಳೇ ಪ್ರಮಾಣಗಳು. ಇತರವಾದ ಅನುಮಾನ ಮುಂತಾದವು ಪ್ರಮಾಣವಾಗಲಾರವು. ಎಂಬ ಅಂಶವನ್ನು ಹೇಳಿದ್ದಾಯಿತು. ಈಗ ಸಂಸಾರಿಯಾಗಿರುವಿಕೆ, ಸಂಸಾರಸಂಬಂಧವಿಲ್ಲದಿರುವಿಕೆ ಮುಂತಾದ ವಿರುದ್ಧಸ್ವಭಾವಗಳುಳ್ಳ ಪ್ರತ್ಯಗಾತ್ಮಪರಮಾತ್ಮಗಳಿಗೆ ಈ ಅಭೇದವು ಹೇಗೆ ಕೂಡುತ್ತದೆ? ಎಂಬ ಅಂಶವನ್ನು ವಿವರಿಸುವುದಕ್ಕಾಗಿ ಈ ಅಧ್ಯಾಯವನ್ನು ಹೇಳುತ್ತಾರೆ.

ಎಲೈ ಮುನಿಶ್ರೇಷ್ಠರೇ, ಇನ್ನೊಂದಾವೃತ್ತಿ ಜ್ಞಾನಯಜ್ಞವನ್ನು ಸಂಕ್ಷೇಪವಾಗಿ ಹೇಳುತ್ತೇನೆ. ಆನಂದವನ್ನು ಪಡೆಯುವುದಕ್ಕೋಸ್ಕರ ಹೆಚ್ಚಾದ ಆದರದಿಂದ ಕೇಳಿ. ॥೧॥

ಧರ್ಮಾಧರ್ಮಸ್ಥಿತಾ ಬುದ್ಧಿಃ ಯೇಷಾಮಸ್ತಿ ಮುನೀಶ್ವರಾಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨॥

ಧರ್ಮಾಧರ್ಮಫಲಾಸ್ತಿತ್ವಜ್ಞಾನಂ ಯೇಷಾಂ ಹೃದಿ ಸ್ಥಿತಂ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೩॥

ಶ್ರುತಿಸ್ಮೃತ್ಯಾದಿ ವಿಶ್ವಾಸೋ ಯೇಷಾಮಸ್ತಿ ಸದಾ ಹೃದಿ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೪॥

ಪರಲೋಕಾಸ್ತಿತ್ವಬುದ್ಧಿಃ ಯೇಷಾಮಸ್ತಿ ಮುನೀಶ್ವರಾಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೫॥

ಯಮ ತತ್ಕಿಂಕರಾಸ್ತಿತ್ವಜ್ಞಾನಂ ಯೇಷಾಂ ಹೃದಿ ಸ್ಥಿತಂ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೬॥

ಧರ್ಮದಲ್ಲಿ ಆದರವೂ, ಅಧರ್ಮದಲ್ಲಿ ಅನಾದರವೂ, ಅನುಷ್ಠಾನದ್ವಾರಾ ಚಿತ್ತ ಶುದ್ಧಿಯನ್ನುಂಟುಮಾಡಿ ಬ್ರಹ್ಮಾತ್ಮೈಕ್ಯಜ್ಞಾನವನ್ನು ಪಡೆಯಲು ಸಾಧನವಾಗಿದೆ ಎಂಬ ಜ್ಞಾನವು ಯಾರಿಗೆ ಇದೆಯೋ ಅಂಥವರೂ ಶಾಸ್ತ್ರದ ತಿಳಿವಳಿಕೆ ಅನುಭವ ಗಳನ್ನು ಪಡೆದವರಾಗಿರುತ್ತಾರೆಂದು ನನ್ನ ಖಂಡಿತವಾದ ಅಭಿಪ್ರಾಯವು. ||೨||

ಧರ್ಮ ಅಧರ್ಮ ಇವುಗಳ ಫಲವಾದ ಸ್ವರ್ಗ ನರಕಾದಿಲೋಕಗಳಿವೆ ಎಂಬ ತಿಳಿವಳಿಕೆಯು ಯಾರ ಹೃದಯದಲ್ಲಿದೆಯೋ ಅಂಥವರೂ ಶಾಸ್ತ್ರಜ್ಞಾನವನ್ನು ಪಡೆದವರಾಗಿರುತ್ತಾರೆಂದು ನನ್ನ ಖಚಿತವಾದ ಭಾವವು. ||೩||

ಶ್ರುತಿ ಸ್ಮೃತಿ ಮುಂತಾದ ಪ್ರಮಾಣಗಳಲ್ಲಿ ಯಾರಿಗೆ ನಂಬಿಕೆಯೂ ಆದರವೂ ಇವೆಯೋ ಅಂಥವರೂ ಈ ಶಾಸ್ತ್ರಜ್ಞಾನವನ್ನು ಪಡೆದವರಾಗಿರುತ್ತಾರೆ. ಎಂದು ನನ್ನ ದೃಢವಾದ ಅಭಿಪ್ರಾಯವು. ||೪||

ಯಾರಿಗೆ ಪರಲೋಕವಿದೆ ಎಂಬ, ಮತ್ತು ತಕ್ಕ ಕರ್ಮಗಳನ್ನು ಆಚರಿಸು ವುದರಿಂದ ಒಳ್ಳೆಯ ಲೋಕಗಳಲ್ಲಿ ಸದ್ಗತಿಯುಂಟಾಗುತ್ತದೆಂಬ ನಂಬಿಕೆಯು ಇದೆಯೋ ಅಂಥವರು ಜ್ಞಾನವಂತರಾಗಿರುತ್ತಾರೆಂದು ನನ್ನ ಅಭಿಪ್ರಾಯವು. ಏಕೆಂದರೆ ಅವರು ಆ ನಂಬಿಕೆಯಿಂದ, ||೫||

ಪಾಪಿಗಳನ್ನು ಶಿಕ್ಷಿಸುವ ಯಮನೂ, ಅವನಿಗೆ ಸಹಾಯಕರಾದ ಸೇವಕರೂ

ಭೂತಪ್ರೇತಾದಿಸದ್ಭಾವಜ್ಞಾನಂ ಯೇಷಾಂ ಹೃದಿ ಸ್ಥಿತಂ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೭॥

ಯಕ್ಷರಕ್ಷಾದಿಸದ್ಭಾವಃ ಯೇಷಾಂ ಭಾತಿ ಪ್ರಮಾಣತಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೮॥

ಮುನೀನಾಮಾಸ್ತಿಕಾ ಬುದ್ಧಿಃ ಯೇಷಾಮಸ್ತಿ ಮುನೀಶ್ವರಾಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೯॥

ಇಂದ್ರಾದಿದೇವತಾಽಸ್ತಿತ್ವಂ ಯೇಷಾಂ ಚಿತ್ತೇ ಪ್ರಕಾಶತೇ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೦॥

ಇದಾರೆಂದು ಅದಕ್ಕನುಸಾರವಾಗಿ ಆಚರಿಸುತ್ತಿರುವರು. ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆದವರಾಗಿರುತ್ತಾರೆ, ಎಂದು ನನ್ನ ದೃಢವಾದ ಅಭಿಪ್ರಾಯವು. ॥೬॥

ಭೂತ ಪ್ರೇತ ಪಿಶಾಚಾದಿ ಚೇತನಗಳೂ ಇವೆ. ಪಾಪಿಗಳಿಗೆ ಬರುವ ಜನ್ಮಗಳು ಅವು ಎಂಬ ತಿಳಿವಳಿಕೆಯು ಯಾರಿಗೆ ಇದೆಯೋ ಅಂಥವರೂ ಈ ಶಾಸ್ತ್ರಜ್ಞಾನವನ್ನು ಪಡೆದಿರುವವರೆಂದು ನನ್ನ ದೃಢವಾದ ಅಭಿಪ್ರಾಯವು. ॥೭॥

ಯಕ್ಷರು, ರಾಕ್ಷಸರು ಮುಂತಾದ ಅತೀಂದ್ರಿಯಚೇತನರೂ ಇದಾರೆಂಬ ತಿಳಿವಳಿಕೆಯು ಪ್ರಮಾಣಗಳ ಸಹಾಯದಿಂದ ಯಾರಿಗೆ ತೋರಿಬಂದಿರುತ್ತದೆಯೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆದವರಾಗಿರುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ॥೮॥

ಮುನಿಗಳು, ಇಂದ್ರಿಯನಿಗ್ರಹಾದಿ ಸಾತ್ತ್ವಿಕಗುಣಶಾಲಿಗಳು, ಇದಾರೆಂದು ಯಾರಿಗೆ ತಿಳಿವಳಿಕೆ ಇದೆಯೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆದಿರುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ॥೯॥

ಇಂದ್ರಾದಿದೇವತೆಗಳು, ಪುಣ್ಯಫಲವಾದ ಪದವೀಧರರಾದವರು, ಇದಾರೆಂದು ಯಾರಿಗೆ ತಿಳಿವಳಿಕೆ ಇದೆಯೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆಯುತ್ತಾರೆ— ಎಂದು ನನ್ನ ದೃಢವಾದ ಅಭಿಪ್ರಾಯವು. ॥೧೦॥

ಬ್ರಹ್ಮಾ ವಿಶಿಷ್ಟೋ ದೇವಾನಾಮಿತಿ ಜಾನಂತಿ ಯೇ ಜನಾಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೧॥

ಬ್ರಹ್ಮಣೋ ವಿಷ್ಣುಮುತ್ಕೃಷ್ಟಂ ಯೇ ಜಾನಂತಿ ಪ್ರಮಾಣತಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೨॥

ವಿಷ್ಣೋರ್ವಿಶಿಷ್ಟಂ ರುದ್ರಂ ಯೇ ವಿಜಾನಂತಿ ಪ್ರಮಾಣತಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೩॥

ರುದ್ರಾದೀಶ್ವರಮುತ್ಕೃಷ್ಟಂ ಯೇ ಜಾನಂತಿ ಸುನಿಶ್ಚಿತಂ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೪॥

ಇಂದ್ರಾದಿತೇವತೆಗಳಿಗಿಂತ ಬ್ರಹ್ಮನು ಅಧಿಕಾರದಲ್ಲಿ ಹೆಚ್ಚಾದವನೆಂದು ಯಾರು ತಿಳಿದಿದ್ದಾರೆಯೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆದಿರುತ್ತಾರೆ. ಎಂದು ನನ್ನ ದೃಢವಾದ ಅಭಿಪ್ರಾಯವು. ಹೀಗೆ ಬ್ರಹ್ಮಾದಿಗಳಲ್ಲೂ ಮೇಲುಮೇಲಾದವರನ್ನು ತಿಳಿಸುತ್ತಾ ಪರಶಿವನವರೆಗೂ ಇರುವವರನ್ನು ತೋರಿಸುತ್ತಾ ತತ್ಪದಾರ್ಥಶೋಧನೆಯನ್ನು ಮಾಡಿರುತ್ತಾರೆ. ಪೃಥಿವ್ಯಾದಿ ಪಂಚಭೂತಗಳಲ್ಲಿ ಮೇಲಿಮೇಲಿನವು ಕಾರಣಗಳಾಗಿರುವುದರಿಂದ ಹೆಚ್ಚಿಗೆಯುಳ್ಳ ಅವುಗಳಿಗೆ ಕ್ರಮವಾಗಿ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರು ಅಧಿಪತಿಗಳಾಗಿದ್ದಾರೆ. ಈ ಐವರೂ ಪರಬ್ರಹ್ಮನ ಸಗುಣವಾದ ಔಪಾಧಿಕವಾದ ಮೂರ್ತಿಗಳು. "ಪೃಥ್ವ್ಯಬಗ್ನ್ಯನಿಲಾಕಾಶಾಃ ತೇಷಾಮಪ್ಯಧಿಪಾ ನ್ಯಸೇತ್" ಎಂದು ಆಗಮಗಳಲ್ಲಿ ಹೇಳಿದೆ. ॥೧೧॥

ಚತುರ್ಮುಖಬ್ರಹ್ಮನಿಗಿಂತ ವಿಷ್ಣುವನ್ನು ಉತ್ಕೃಷ್ಟನೆಂದು ಯಾರು ತಿಳಿಯುತ್ತಾರೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆದಿರುತ್ತಾರೆ—ಎಂದು ನನ್ನ ದೃಢವಾದ ಅಭಿಪ್ರಾಯವು. ॥೧೨॥

ವಿಷ್ಣುವಿಗಿಂತಲೂ ರುದ್ರನನ್ನು ಯಾರು ಶ್ರೇಷ್ಠನೆಂದು ತಿಳಿಯುತ್ತಾರೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆದಿರುತ್ತಾರೆ—ಎಂದು ನನ್ನ ದೃಢವಾದ ಅಭಿಪ್ರಾಯವು. ॥೧೩॥

ರುದ್ರನಿಗಿಂತ ಈಶ್ವರನನ್ನು ಉತ್ಕೃಷ್ಟನೆಂದು ಯಾರು ತಿಳಿಯುತ್ತಾರೋ, ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆದಿರುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ॥೧೪॥

ಈಶ್ವರಾದಧಿಕೋ ಭಾತಿ ಯೇಷಾಂ ಚಿತ್ತೇ ಸದಾಶಿವಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೫॥

ಸದಾಶಿವಾದಪಿ ಶ್ರೇಷ್ಠಂ ಬ್ರಹ್ಮಾಣಂ ಯೇ ಜನಾ ವಿದುಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೬॥

ಬ್ರಹ್ಮಣಃ ಪರಮಂ ಸಾಕ್ಷಾದ್ವಿಷ್ಣುಂ ಜಾನಂತಿ ಯೇ ಜನಾಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೭॥

ವಿಷ್ಣೋಽಸ್ತು ಪರಮಂ ಸಾಕ್ಷಾದ್ರುದ್ರಂ ಜಾನಂತಿ ಯೇ ಜನಾಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೮॥

ಈಶ್ವರನಿಗಿಂತ ಸದಾಶಿವನು ಮೇಲಾದವನೆಂದು ಯಾರು ತಿಳಿದಿರುತ್ತಾರೋ, ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆದಿರುತ್ತಾರೆ—ಎಂದು ನನ್ನ ದೃಢವಾದ ಅಭಿಪ್ರಾಯವು. ॥೧೫॥

ಈ ಸದಾಶಿವನಿಗಿಂತಲೂ ಬ್ರಹ್ಮನನ್ನು ಯಾರು ಶ್ರೇಷ್ಠನೆಂದು ತಿಳಿದಿರುತ್ತಾರೊ ಅಂಥವರೂ ಈ ಶಾಸ್ತ್ರಜ್ಞಾನವನ್ನು ಪಡೆದಿರುತ್ತಾರೆ—ಎಂದು ನನ್ನ ದೃಢವಾದ ಅಭಿಪ್ರಾಯವು. ॥೧೬॥

ಈ ಬ್ರಹ್ಮನಿಗಿಂತ ವಿಷ್ಣುವನ್ನು ಶ್ರೇಷ್ಠನೆಂದು ಯಾರು ತಿಳಿದಿರುತ್ತಾರೋ, ಅವರು ಜ್ಞಾನಿಗಳೆಂದು ನನ್ನ ಅಭಿಪ್ರಾಯವು; ॥೧೭॥

ಈ ವಿಷ್ಣುವಿಗಿಂತ ರುದ್ರನನ್ನು ಶ್ರೇಷ್ಠನೆಂದು ಯಾರು ತಿಳಿದಿರುತ್ತಾರೋ, ಅಂಥವರೂ ಈ ಶಾಸ್ತ್ರಜ್ಞಾನವನ್ನು ಪಡೆದಿರುತ್ತಾರೆ—ಎಂದು ನನ್ನ ದೃಢವಾದ ಅಭಿಪ್ರಾಯವು.

ಆಕಾಶಕ್ಕೆ ಅಭಿಮಾನಿಯಾಗಿ ಅಧಿಪತಿಯಾಗಿರುವ ಸದಾಶಿವನಿಗಿಂತ ರಜಸ್ಸತ್ತ್ವತಮೋಗುಣೋಪಾಧಿಕರಾಗಿಯೂ ಮಹಾಭೂತಸೃಷ್ಟಿಸ್ಥಿತಿಸಂಹಾರಗಳನ್ನು ಮಾಡುವವರಾಗಿಯೂ ಇರುವ ಬ್ರಹ್ಮವಿಷ್ಣುರುದ್ರರು ಉತ್ತರೋತ್ತರವಾಗಿ ಶ್ರೇಷ್ಠರು. ಮೊದಲು ಹೇಳಿದ ಬ್ರಹ್ಮವಿಷ್ಣುರುದ್ರರು ಭೌತಿಕಪದಾರ್ಥಗಳ ಸೃಷ್ಟಿಸ್ಥಿತಿಸಂಹಾರಗಳಿಗೆ ಕಾರಣರಾಗಿರುತ್ತಾರೆಂದು ಭಾವವು. ॥೧೮॥

ಈಕ್ಷಿತಾರಂ ಪರಂ ರುದ್ರಾತ್ ಯೇ ವಿಜಾನಂತಿ ಮಾನವಾಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೧೯॥

ಈಕ್ಷಿತುರ್ಯೇ ವಿಜಾನಂತಿ ಸರ್ವಜ್ಞಂ ನಿತರಾಂ ಪರಂ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೦॥

ಕಾರಣಂ ಬ್ರಹ್ಮ ಸರ್ವೇಷಾಂ ವಿಶಿಷ್ಟಮಿತಿ ಯೇ ವಿದುಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೧॥

ಕಾರಣತ್ವೋಪಲಕ್ಷ್ಯಂ ಯೇ ಸರ್ವೋತ್ಕೃಷ್ಟಂ ಶಿವಂ ವಿದುಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೨॥

"ಈಷದ್ರಜಸ್ಸಂಸ್ಪೃಷ್ಟಸತ್ತ್ವಪರಿಣಾಮರೂಪಂ ಸ್ರಷ್ಟವ್ಯವಿಷಯಕಪರ್ಯಾಲೋಚನಂ ಈಕ್ಷಣಂ ।" ರಜೋಗುಣದೊಡನೆ ಸ್ವಲ್ಪ ಸಂಬಂಧವನ್ನು ಪಡೆದಿರುವ ಸತ್ತ್ವಗುಣದ ಪರಿಣಾಮವೇ ಸೃಷ್ಟಿಮಾಡಬೇಕಾಗಿರುವ ಪದಾರ್ಥಗಳ ವಿಷಯದಲ್ಲಿ ಪರ್ಯಾಲೋಚನಸ್ವರೂಪವಾಗಿದೆ. ಇದೇ "ಸ ಈಕ್ಷತಲೋಕಾನ್ನು ಸೃಜಾ ಇತಿ" ಎಂದು ಮುಂತಾದ ಶ್ರುತಿಗಳಲ್ಲಿ ಹೇಳಿರುವ ಈಕ್ಷಣವು.

ಇಂಥ ಈಕ್ಷಿತೃವನ್ನು ರುದ್ರನಿಗಿಂತ ಶ್ರೇಷ್ಠನೆಂದು ಯಾರು ತಿಳಿಯುತ್ತಾರೋ ಅಂಥವರೂ ಈ ಶಾಸ್ತ್ರಜ್ಞಾನವನ್ನು ಪಡೆದಿರುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ॥೧೯॥

ಇಂಥ ಈಕ್ಷಿತೃವಿಗಿಂತಲೂ ಉತ್ತಮನಾದ ಎಂದರೆ "ವಿಶುದ್ಧಸತ್ತ್ವಪ್ರಧಾನ ಮಾಯೋಪಾಧಿಕಪರಶಿವಚೈತನ್ಯಮೇವ ಸರ್ವಜ್ಞಃ ।" ರಜೋಗುಣಸಂಬಂಧವಿಲ್ಲದೆ ಶುದ್ಧಸತ್ತ್ವಗುಣವೇ ಸ್ವರೂಪವಾಗಿ ಉಳ್ಳ ಮಾಯೆಯೇ ಉಪಾಧಿಯಾಗಿರುವ ಪರಶಿವಚೈತನ್ಯವೇ ಸರ್ವಜ್ಞನೆನಿಸಿಕೊಳ್ಳುತ್ತದೆ. ॥೨೦॥

ಈ ಸರ್ವಜ್ಞಬ್ರಹ್ಮವೇ ಹಿಂದೆ ಹೇಳಿದ ಬ್ರಹ್ಮಾದಿಗಳಿಗೆಲ್ಲಕ್ಕೂ ಕಾರಣವಾಗಿರುವುದರಿಂದ ಕಾರ್ಯಕ್ಕಿಂತ ಕಾರಣತ್ವವಿಶಿಷ್ಟವು ಉತ್ಕೃಷ್ಟವಾದುದು ಎಂದು ಯಾರು ತಿಳಿಯುತ್ತಾರೊ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆಯುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ॥೨೧॥

ಕಾರಣತ್ವವಿಶಿಷ್ಟವಾದುದರಿಂದ ಸರ್ವಜ್ಞನೆನಿಸುವ ಚೈತನ್ಯಕ್ಕಿಂತ ಕಾರಣತ್ವೋಪಲಕ್ಷಿತವಾದ ಪರಶಿವಸ್ವರೂಪವಾದ ಶುದ್ಧಚೈತನ್ಯವು ಎಲ್ಲ ಸೋಪಾಧಿಕ

ಅಸ್ತಿ ಜೀವೋ ನ ನಾಸ್ತೀತಿ ಯೇ ಜಾನಂತಿ ಪ್ರಮಾಣತಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೩॥

ದೇಹಾದನ್ಯತಯಾ ಜೀವಂ ಯೇ ಜಾನಂತಿ ಪ್ರಮಾಣತಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೪॥

ಚೈತನ್ಯಕ್ಕಿಂತಲೂ ಶ್ರೇಷ್ಠವಾದುದು ಎಂದು ಯಾರು ತಿಳಿಯುತ್ತಾರೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆಯುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು.॥೨೨॥

ಈ ರೀತಿಯಲ್ಲಿ ಸರ್ವೋತ್ಕೃಷ್ಟವಸ್ತುವನ್ನು ವಿವರಿಸುವ ನೆವದಿಂದ "ಅಸ್ಥೂಲಂ ಅನಣು" ಮುಂತಾದ ಶ್ರುತಿಗಳಿಂದ ತಿಳಿದುಬರುವ ಸರ್ವಧರ್ಮ ರಹಿತನೆಂದು ಸಿದ್ಧವಾಗುವ ಪರಬ್ರಹ್ಮವು "ತತ್ತ್ವಮಸಿ" ಮುಂತಾದ ವಾಕ್ಯಗಳಲ್ಲಿ ತತ್ಪದಕ್ಕೆ ಲಕ್ಷ್ಯಾರ್ಥವೆಂದು ವಿವರಿಸಲಾಯಿತು. ಈಗ ತ್ವಂಪದದ ಲಕ್ಷ್ಯಾರ್ಥಸ್ವರೂಪವನ್ನು ತಿಳಿಸುತ್ತಾರೆ. ಶೂನ್ಯವಾದಿಗಳು "ಅಸದ್ವಾ ಇದಮಗ್ರೇ" ಇತ್ಯಾದಿ ಶ್ರುತಿಪ್ರಮಾಣ ದಿಂದ ಪ್ರಪಂಚದ ಹಾಗೆ ಜೀವನೂ ಇಲ್ಲವೆಂದು ತಿಳಿಯುತ್ತಾರೆ. ಅದು ಸರಿಯಲ್ಲವು. ಏಕೆಂದರೆ, ಜೀವನು ಅಬಾಧಿತನೂ ಬಾಧಾಧಿಷ್ಠಾನರೂಪನೂ ಆಗಿದ್ದಾನೆ ಎಂದು "ಸದೇವ ಸೌಮ್ಯೇತಿ, ಅಸ್ತೀತ್ಯೇವೋಪಲಬ್ಧವ್ಯಃ" ಇತ್ಯಾದಿ ಶ್ರುತಿಪ್ರಮಾಣಗಳಿಂದ ಯಾರು ತಿಳಿಯುತ್ತಾರೊ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆಯುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ಬಾಧ ಮತ್ತು ಭ್ರಮೆಗಳನ್ನು ವಿವರಿಸಬೇಕಾದರೆ ಬಾಧಕ್ಕೆ ಅವಧಿಯನ್ನೂ ಭ್ರಮಕ್ಕೆ ಅಧಿಷ್ಠಾನವನ್ನೂ ಹೇಳಬೇಕು. ಅದೇ ಬ್ರಹ್ಮ ವಾಗುತ್ತಾದ್ದರಿಂದ ಶೂನ್ಯವಾದಿಯೂ ಬ್ರಹ್ಮವನ್ನು ಅಂಗೀಕರಿಸಬೇಕು. ॥೨೩॥

ಅಥವಾ ಜೀವಾತ್ಮನು ಇರಲಿ, ಆದರೂ ಆ ಜೀವನು ದೇಹಕ್ಕಿಂತ ಬೇರೆ ಯಾಗಿಲ್ಲವು. ಅಚೇತನವಾದ ಭೂತಗಳಿಗೇ ಸಮ್ಮೇಳನವಿಶೇಷದಿಂದ ದೇಹಾಕಾರ ಉಂಟಾದ ಕೂಡಲೆ ಚೈತನ್ಯವೂ ಉಂಟಾಗುತ್ತದೆ. ಆದ್ದರಿಂದ ದೇಹವೇ ಆತ್ಮವು. ಎಂಬ ಈ ಚಾರ್ವಾಕಮತವು ಸರಿಯಲ್ಲವು. ಏಕೆಂದರೆ, "ಅಸ್ತೀತ್ಯೇವೋಪಲಬ್ಧವ್ಯಃ", "ನಜಾಯತೇ ಮ್ರಿಯತೇ ವಾ ಕದಾಚಿತ್", "ಏಕ ಆತ್ಮನಶ್ಶರೀರೇ ಭಾವಾತ್" ಇತ್ಯಾದಿ ಪ್ರಮಾಣಗಳಿಂದ ಯಾರು ದೇಹಕ್ಕಿಂತ ಬೇರೆಯಾದ ಜೀವಾತ್ಮನಿದಾನೆಂದು ತಿಳಿಯುತ್ತಾರೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆಯುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ॥೨೪॥

ಪ್ರಾಣಾದನ್ಯತಯಾಽಽತ್ಮಾನಂ ಯೇ ಜಾನಂತಿ ಪ್ರಮಾಣತಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೫॥

ಇಂದ್ರಿಯೇಭ್ಯಃ ಪರಂ ಜೀವಂ ಯೇ ಜಾನಂತಿ ಪ್ರಮಾಣತಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೬॥

ಮನಸೋಽನ್ಯತಯಾಽಽತ್ಮಾನಂ ಯೇ ಜಾನಂತಿ ಪ್ರಮಾಣತಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೭॥

ಕ್ಷಣಪ್ರಧ್ವಂಸಿವಿಜ್ಞಾನಾದಾತ್ಮಾನಂ ಯೇ ಪರಂ ವಿದುಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೮॥

ಪ್ರಾಣಾಪಾನವ್ಯಾನೋದಾನಸಮಾನರೂಪಗಳಾದ ವೃತ್ತಿಸ್ವರೂಪವಾದ ಪ್ರಾಣವು ಸುಷುಪ್ತಿಯಲ್ಲಿದ್ದರೂ ಅವುಗಳ ವಿಶೇಷರೂಪದಿಂದ ಅದರ ಜ್ಞಾನವಾಗುವುದಿಲ್ಲವಾದುದರಿಂದ ಅವೆಲ್ಲಕ್ಕಿಂತ ಬೇರೆಯಾದವನೇ ಆತ್ಮನೆಂದು ತಿಳಿಯಬೇಕು. ಪ್ರಾಣಾದಿಗಳು ವೃತ್ತಿಸ್ವರೂಪಗಳಾದುದರಿಂದ ಕ್ರಿಯಾರೂಪವಾಗಿಯೂ ವಿಕಾರವಾಗಿಯೂ ಇರುವುದರಿಂದ ಆತ್ಮನು ಅವಕ್ಕಿಂತ ಬೇರೆಯಾದವನೆಂದು ತಾತ್ಪರ್ಯವು. ಹೀಗೆಂದು ಯಾರು ತಿಳಿಯುತ್ತಾರೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆಯುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ॥೨೫॥

ಕಣ್ಣು ಮೊದಲಾದ ಇಂದ್ರಿಯಗಳು ಮತ್ತು ಮನಸ್ಸು ಕರಣಗಳಾದುದರಿಂದ ಅವುಗಳನ್ನು ಪ್ರೇರಿಸುವ ವಸ್ತುವು ಅವಕ್ಕಿಂತ ಬೇರೆಯಾಗಿರಬೇಕು. ಎಂದು ಯಾರು ತಿಳಿಯುತ್ತಾರೊ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆಯುತ್ತಾರೆ. ಎಂದು ನನ್ನ ದೃಢವಾದ ಅಭಿಪ್ರಾಯವು. ॥೨೬-೨೭॥

ಬುದ್ಧಿ, ಅಹಂಕಾರ, ಚಿತ್ತ ಮೊದಲಾದುವೂ, ಬಾಚಿ ಮುಂತಾದ ಬಡಗಿಯ ಸಾಧನಗಳ ಹಾಗೆ, ಕರಣವಾದುದರಿಂದ ಅವುಗಳನ್ನು ಪ್ರೇರಿಸುವವನಾಗಿರುವ ಆತ್ಮನು ಅವಕ್ಕಿಂತ ಬೇರೆಯಾದವನು. ವಿಜ್ಞಾನವೆಂದರೆ ಬುದ್ಧಿಯು, ನಿಶ್ಚಯರೂಪವಾದ ಮನೋವೃತ್ತಿಯು. ಅದು ಕ್ಷಣಿಕವಾದುದು. ಆತ್ಮನ ಸ್ವರೂಪವಾದ ಜ್ಞಾನವು ನಿತ್ಯವಾದುದರಿಂದ ಬುದ್ಧಿಗಿಂತ ಆತ್ಮವಸ್ತುವು ಬೇರೆಯಾದುದು ಎಂದು ಯಾರು ತಿಳಿಯುತ್ತಾರೋ ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆಯುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು.

ಬುದ್ಧ್ಯಹಂಕಾರತೋ ಜೀವಂ ಯೇ ವಿದುರ್ಭಿನ್ನಮಾಸ್ತಿಕಾಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೨೯॥

ಚಿತ್ತಾದನ್ಯತಯಾಽಽತ್ಮಾನಂ ಯೇ ಜಾನಂತಿ ಪ್ರಮಾಣತಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೩೦॥

ಸರ್ವಪ್ರತ್ಯಯಿನೋ ಜೀವಂ ವಿವಿಕ್ತಂ ಯೇ ವಿದುರ್ಬುಧಾಃ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೩೧॥

ಜಾಗ್ರತ್ಸ್ವಪ್ನಸುಷುಪ್ತ್ಯಾಖ್ಯಂ ವೇದ ಧಾಮತ್ರಯಂ ಪುನಃ ।
ಸ ಏವಾತ್ಮಾ ನ ತದ್ದೃಶ್ಯಂ ದೃಶ್ಯಂ ತಸ್ಮಿನ್ ಪ್ರಕಲ್ಪಿತಂ ॥೩೨॥

"ಆತ್ಮವಿಷಯಾ ತದವಿವಿಕ್ತಾ ಮನೋವೃತ್ತಿಃ ಅಹಂಕಾರಃ ।" ಆತ್ಮನನ್ನು ಗೋಚರಿಸಿರುವ ಆತ್ಮನಿಗಿಂತ ಬೇರೆಯಾದುದೆಂದು ವಿವೇಚಿಸಲಾಗದೆ ಇರುವ ಮನೋವೃತ್ತಿಯೇ ಅಹಂಕಾರವೆನಿಸುತ್ತದೆ. ಸಂಸಾರವೆಲ್ಲವೂ ಅಹಂಕಾರಮೂಲಕ ವಾದುದರಿಂದ ಸಂಸಾರದಂತೆ ಅಹಂಕಾರವೂ ದುಃಖರೂಪವಾದುದು.

"ಸಂಶಯಿತಮರ್ಥಂ ನಿಶ್ಚೇತುಂ ತಲ್ಲೀನಾ ಯಾ ಮನೋವೃತ್ತಿಃ ಚಿತ್ತಂ" ಸಂದಿಗ್ಧವಾದ ವಿಷಯವನ್ನು ನಿಶ್ಚಯಿಸುವುದಕ್ಕಾಗಿ ಮನಸ್ಸನ್ನು ಅದರಲ್ಲಿಯೇ ಲಯವಾಗುವಂತೆ ಮಾಡುವುದುಂಟು; ಹಾಗೆ ಲಯವಾದ ಮನೋವೃತ್ತಿಯೇ ಚಿತ್ತವೆನಿಸುತ್ತದೆ. ॥೨೮-೨೯-೩೦॥

ಕಾಮಸಂಕಲ್ಪಾದಿ ಎಲ್ಲ ವೃತ್ತಿಗಳನ್ನುಳ್ಳದ್ದು ಅಂತಃಕರಣವು, ಅದಕ್ಕಿಂತಲೂ ಆತ್ಮನು ಬೇರೆಯಾದವನೆಂದು ಯಾರು ತಿಳಿಯುತ್ತಾರೋ ಅಂಥವರು ಈ ಶಾಸ್ತ್ರ ಜ್ಞಾನವನ್ನು ಪಡೆಯುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ॥೩೧॥

ಎಚ್ಚರ, ಕನಸು, ನಿದ್ರೆಗಳೆಂಬ ಮೂರು ಅವಸ್ಥೆಗಳನ್ನು ಯಾರು ಸಾಕ್ಷಿರೂಪ ನಾಗಿದ್ದು ತಿಳಿಯುತ್ತಾನೊ ಅವನೇ ಆತ್ಮನು. ಅವನು ದ್ರಷ್ಟೃವೇ ಹೊರತು ದೃಶ್ಯವಲ್ಲವು. ದೃಶ್ಯವೆಲ್ಲವೂ ಅವನಲ್ಲಿಯೇ ಕಲ್ಪಿತವಾಗಿದೆ. ಆತ್ಮವಸ್ತುವು ಇದೆಯೆ? ಇಲ್ಲವೆ? ಎಂದು ವಿಕಲ್ಪಿಸಿ, ಅದು ಇಲ್ಲವೆಂದರೆ ಮೊಲದಕೊಂಬಿನಹಾಗೆ ತುಚ್ಛಪದಾರ್ಥ ವಾಗಬೇಕಾಗುತ್ತದೆ. ಇದೆ ಎಂದು ಹೇಳಿದರೆ ಗಡಿಗೆ ಮುಂತಾದವುಗಳ ಹಾಗೆ ದೃಶ್ಯತ್ವವು ಬರುತ್ತದೆ. ಆದ್ದರಿಂದ ಆತ್ಮವಸ್ತುವು ದೃಶ್ಯವಲ್ಲವು ಎಂದು ಹೇಳಬೇಕು.

ತ್ರಿಧಾಮಸಾಕ್ಷಿಣಂ ಸತ್ಯಜ್ಞಾನಾನಂದಾದಿಲಕ್ಷಣಂ ।
ತ್ವಮಹಂ ಶಬ್ದಲಕ್ಷ್ಯಾರ್ಥಂ ಅಸಕ್ತಂ ಸರ್ವದೋಷತಃ ॥೩೩॥

ಜ್ಞಾತಾಜ್ಞಾತದ್ವಯಾದನ್ಯಂ ಜ್ಞಾತಾಜ್ಞಾತಸ್ಯ ಭಾಸಕಂ ।
ಪ್ರಮಾಣಭ್ರಾಂತಿವೃತ್ತೀನಾಮಗಮ್ಯಂ ತತ್ಪ್ರಕಾಶಕಂ ॥೩೪॥

ಸ್ವಯಂ ಭಾತಂ ನಿರಾಧಾರಂ ಯೇ ಜಾನಂತಿ ಸುನಿಶ್ಚಿತಂ ।
ತೇಽಪಿ ವಿಜ್ಞಾನಸಂಪನ್ನಾ ಇತಿ ಮೇ ನಿಶ್ಚಿತಾ ಮತಿಃ ॥೩೫॥

ಎಂದರೆ ಆತ್ಮವಸ್ತುವು ಉಪನಿಷದ್ವಾಕ್ಯದಿಂದ ಉಂಟಾಗುವ ವೃತ್ತಿಗೆ ವಿಷಯವಾದರೂ ಎಂದರೆ ವೃತ್ತಿವ್ಯಾಪ್ಯವಾದರೂ, ಫಲವ್ಯಾಪ್ಯವಲ್ಲವು, ಎಂದರೆ ಆ ವೃತ್ತಿಯಲ್ಲಿ ಪ್ರತಿ ಬಿಂಬಿಸುವ ಚೈತನ್ಯರೂಪವಲ್ಲವು. ಸ್ವಯಂಪ್ರಕಾಶರೂಪವಾದುದರಿಂದ ಪ್ರತಿಬಿಂಬನ ಸಂಬಂಧವು ಆತ್ಮನಿಗೆ ಇಲ್ಲವೆಂದು ತಾತ್ಪರ್ಯವು. ||೩೨||

"ತತ್ತ್ವಮಸಿ" ಎಂಬ ವಾಕ್ಯದಲ್ಲಿ "ತತ್" ಪದದ ಮತ್ತು "ತ್ವಂ" ಪದದ ವಾಚ್ಯಾರ್ಥವನ್ನು ಹೇಳಿ, ಅವೆರಡಕ್ಕೂ "ಅಸಿ" ಪದದಿಂದ ತೋರುವ ಅಭೇದವು ಅನುಪಪನ್ನವಾಗುವುದರಿಂದ ತತ್ತ್ವಂಪದಾರ್ಥಗಳಿಗೆ ಲಕ್ಷ್ಯವಾದ ಅರ್ಥವನ್ನು ಹೇಳುತ್ತಾರೆ. ಎಚ್ಚರ, ಸ್ವಪ್ನ, ನಿದ್ರೆಗಳೆಂಬ ಮೂರು ಅವಸ್ಥೆಗಳಿಗೂ ಸಾಕ್ಷಿಸ್ವರೂಪನಾದ, ಸತ್ಯಜ್ಞಾನಾನಂದಸ್ವರೂಪನೂ ಆದ, ತ್ವಂಪದದ ಲಕ್ಷ್ಯಾರ್ಥವೂ, 'ಅಹಂ ಬ್ರಹ್ಮಾಸ್ಮಿ' ಮುಂತಾದ ವಾಕ್ಯಗಳಲ್ಲಿನ ಅಹಂಪದದ ಲಕ್ಷ್ಯಾರ್ಥವೂ ಒಂದೇ ಎಂದೂ, ಇದು ಸರ್ವದೋಷಗಳಿಂದ ಸಂಬಂಧವಿಲ್ಲದೆ ಇರುವುದು ಎಂದೂ ತಾತ್ಪರ್ಯವು. ||೩೩||

'ಅಯಂ ಘಟಃ' ಇದು ಗಡಿಗೆಯು, ಎಂದು ಮುಂತಾದ ವೃತ್ತಿಗೆ ವಿಷಯವಾದ, ಗಡಿಗೆ ಮುಂತಾದ ಪದಾರ್ಥಕ್ಕಿಂತಲೂ ಭಿನ್ನವಾದ, ಹಾಗೆಯೇ 'ತ್ವದುಕ್ತಂ ಅರ್ಥಂ ನ ಜಾನಾಮಿ', ನೀನು ಹೇಳಿದ್ದನ್ನು ನಾನು ತಿಳಿಯೆನು, ಎಂದು ಮುಂತಾದ ಅಜ್ಞಾನಕ್ಕೂ ವಿಷಯವಾದ ಪದಾರ್ಥಕ್ಕಿಂತಲೂ ಭಿನ್ನವಾದ, (ಚೈತನ್ಯವು ಸ್ವತಃ ಅಜ್ಞಾನವಿರೋಧಿಯಲ್ಲವು. ವೃತ್ತ್ಯುಪಾರೂಢಚೈತನ್ಯವೇ ಅಜ್ಞಾನವಿರೋಧಿಯು. ಹುಲ್ಲನ್ನು ತಿಳಿಸಿಕೊಡುವ ಬಿಸಿಲು ಸೂರ್ಯಕಾಂತದಲ್ಲಿ ಉಪಾರೂಢವಾದರೆ ಅದೇ ಹುಲ್ಲನ್ನು ಹೇಗೆ ನಾಶಮಾಡುತ್ತದೋ ಹಾಗೆ.) ಆದುದರಿಂದ ಜ್ಞಾತಾಜ್ಞಾತಪದಾರ್ಥವೆಲ್ಲವನ್ನೂ ಪ್ರಕಾಶಪಡಿಸಿ ತಿಳಿಸುವ, ಪ್ರಮಾಣವೃತ್ತಿಗೂ, ಚಕ್ಷುರಾದಿಮೂಲಕ ಉಂಟಾದ ವೃತ್ತಿಗೂ, ಭ್ರಾಂತಿವೃತ್ತಿಗೂ, ಶುಕ್ತಿಯನ್ನು ನೋಡಿದಾಗ ಬರುವ 'ಇದಂ

ಉಕ್ತಲಕ್ಷಣಮಾತ್ಮಾನಮುಕ್ತಲಕ್ಷಣಮೀಶ್ವರಂ ।
ಏಕಂ ಪಶ್ಯಂತಿ ಯೇ ವಿಪ್ರಾಃ ತರ್ಕತಶ್ಚ ಪ್ರಮಾಣತಃ ॥೩೬॥

ತಥಾ ಸ್ವಾನುಭವೇನೈವ ಗುರೂಕ್ತ್ಯಾ ಚ ಪ್ರಸಾದತಃ ।
ತ ಏವ ಜ್ಞಾನಸಂಪನ್ನಾಃ ತ್ರಿರ್ವಃ ಶಪಥಯಾಮ್ಯಹಂ ॥೩೭॥

ಅತಿರಹಸ್ಯಮಿದಂ ಕಥಿತಂ ಮಯಾ ಗುರುಪರಂಪರಯಾ ಚ ಸಮಾಗತಂ ।
ಶ್ರುತಿಭಿರೀರಿತಮಾತ್ಮವಿಶುದ್ಧಯೇ ನ ಪಠಿತವ್ಯಮಸಜ್ಜನಸಂಸದಿ ॥೩೮॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಜ್ಞಾನಯಜ್ಞವಿಶೇಷೋ ನಾಮ ಏಕಾದಶೋಽಧ್ಯಾಯಃ

ರಜತಂ ' ಎಂಬ ವೃತ್ತಿಗೂ, ಗೋಚರವಾಗದೆ ಇರುವ, ಈ ಪ್ರಮಾಣವೃತ್ತಿಭ್ರಾಂತಿವೃತ್ತಿಗಳನ್ನೂ ಪ್ರಕಾಶಪಡಿಸಿ ತಿಳಿಸುವ, ಸ್ವಪ್ರಕಾಶವಾದ ಇತರಾಪೇಕ್ಷೆ ಇಲ್ಲದೆ ತಾನೇ ತೋರುವ, ಎಲ್ಲಕ್ಕೂ ಅಧಿಷ್ಠಾನವಾಗಿಯೂ ಅಧಿಷ್ಠಾನಾಂತರವನ್ನು ಅಪೇಕ್ಷಿಸದೆ ತನ್ನಲ್ಲಿಯೇ ತಾನಿರುವ, ತ್ವಂಪದಲಕ್ಷ್ಯಾರ್ಥವನ್ನು ಯಾರು ಚನ್ನಾಗಿ ತಿಳಿಯುತ್ತಾರೋ, ಅಂಥವರು ಈ ಶಾಸ್ತ್ರಜ್ಞಾನವನ್ನು ಪಡೆಯುತ್ತಾರೆ ಎಂದು ನನ್ನ ದೃಢವಾದ ಅಭಿಪ್ರಾಯವು. ॥೩೪-೩೫॥

ಹೀಗೆ ತತ್ಪದಾರ್ಥವನ್ನೂ ತ್ವಂಪದಾರ್ಥವನ್ನೂ ವಿಮರ್ಶಿಸಿ ಅವುಗಳ ಅಭೇದವನ್ನು ಯುಕ್ತಿಯಿಂದಲೂ ಶ್ರುತ್ಯಾದಿಪ್ರಮಾಣಗಳಿಂದಲೂ ತಿಳಿಯಬೇಕು. ಮೇಲೆ ಹೇಳಿದ ಲಕ್ಷಣಗಳುಳ್ಳ ಜೀವಾತ್ಮನನ್ನೂ, ಹಾಗೆಯೇ ಮೇಲೆ ವಿವರಿಸಿದ ಲಕ್ಷಣಗಳುಳ್ಳ ಪರಮೇಶ್ವರನನ್ನೂ ವಾಸ್ತವಸ್ವರೂಪವಾದ ಸಚ್ಚಿದಾನಂದಾಂಶದಲ್ಲಿ ಒಂದೇ ಚೈತನ್ಯವೆಂದು ಯುಕ್ತಿಯಿಂದಲೂ ವೇದಾದಿಪ್ರಮಾಣದಿಂದಲೂ, ಹಾಗೆಯೇ ಸ್ವಂತ ಅನುಭವದಿಂದಲೂ, ಗುರೂಪದೇಶ ಅನುಗ್ರಹಗಳಿಂದಲೂ, ಯಾರು ತಿಳಿಯುತ್ತಾರೋ ಅಂಥವರೇ ನಿಜವಾದ ಜ್ಞಾನಿಗಳೆಂದು ಅನೇಕಾವೃತ್ತಿ ಶಪಥಮಾಡಿ ಸಾರಿ ಸಾರಿ ಹೇಳುತ್ತೇನೆ. ॥೩೬-೩೭॥

ವೇದಗಳಲ್ಲಿ ಹೇಳಿರುವ, ಗುರುಶಿಷ್ಯಪರಂಪರೆಯಾಗಿ ಉಪದೇಶಮೂಲಕವಾಗಿ ಬಂದಿರುವ ಈ ಬಹಳ ಗುಟ್ಟಾದ ತತ್ತ್ವವನ್ನು ಜೀವಾತ್ಮನಿಗೆ ಭ್ರಾಂತಿಯಿಂದ

ತೋರುತ್ತಿರುವ, ಅವಿದ್ಯಾಕಾಮಕರ್ಮಸಂಬಂಧದಿಂದ ಉಂಟಾಗಿರುವ, ಕರ್ತೃತ್ವ ಭೋಕ್ತೃತ್ವಜನನಮರಣಪ್ರವಾಹದಲ್ಲಿ ಸಿಕ್ಕಿರುವಿಕೆಯ ದೆಶೆಯಿಂದ ಬಿಡುಗಡೆಯಾಗುವುದಕ್ಕೋಸ್ಕರ ಹೇಳಲಾಗಿದೆ. ಇದನ್ನು ಅಸತ್ಪುರುಷರ ಗುಂಪಿನಲ್ಲಿ ಹೇಳಬಾರದು.

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ವಿಜ್ಞಾನಸ್ವರೂಪವನ್ನು ವಿವರಿಸಿರುವ
ಹನ್ನೊಂದನೆಯ ಅಧ್ಯಾಯವು ಮುಗಿದುದು

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

॥ ದ್ವಾದಶೋಽಧ್ಯಾಯಃ ॥

ಹನ್ನೆರಡನೆಯ ಅಧ್ಯಾಯವು

॥ ಸೂತ ಉವಾಚ ॥

ಭೂಯೋಽಪಿ ಜ್ಞಾನಯಜ್ಞಂ ತು ಪ್ರವಕ್ಷ್ಯಾಮಿ ಸಮಾಸತಃ ।
ಮುನಯಃ ಪರಯಾ ಭಕ್ತ್ಯಾ ಶೃಣುತಾತೀವ ಶೋಭನಂ ॥೧॥

ಬ್ರಹ್ಮ ಸತ್ಯಪರಾನಂದಪ್ರಕಾಶಾನಂತಲಕ್ಷಣಂ ।
ಅಪ್ರಚ್ಯುತಾತ್ಮಭಾವೇನ ಸಂಸ್ಥಿತಂ ಸರ್ವದೈವ ತು ॥೨॥

ಹಿಂದಿನ ಅಧ್ಯಾಯದಲ್ಲಿ 'ದೃಶ್ಯಂತಸ್ಮಿನ್ ಪ್ರಕಲ್ಪಿತಂ' ಎಂದು ದೃಶ್ಯವಾದ ಈ ಪ್ರಪಂಚವು ಕಲ್ಪಿತವಾದುದರಿಂದ ಮಿಥ್ಯಾಭೂತವಾದುದೆಂದು ಸೂಚಿಸಿದೆ. ಅದೇ ಮಿಥ್ಯಾತ್ವವನ್ನು ಈಗ ಪರಶಿವಸ್ವರೂಪವಾದ ಬ್ರಹ್ಮನಲ್ಲಿ ಆ ಪ್ರಪಂಚದ ಅಧ್ಯಾರೋಪ-ಅಪವಾದಕ್ರಮದಿಂದ ವಿವರಿಸುತ್ತಾರೆ. ||೧||

ಇನ್ನೊಂದಾವೃತ್ತಿ ಜ್ಞಾನಯಜ್ಞವನ್ನು ಸಂಗ್ರಹವಾಗಿ ವಿವರಿಸುತ್ತೇನೆ. ಎಲೈ ಋಷಿಗಳಿರಾ, ಕಲ್ಯಾಣಕಾರಕವಾದ ಈ ತತ್ತ್ವವನ್ನು ಹೆಚ್ಚಾದ ಆದರದಿಂದ ಕೇಳಿರಿ. ಪ್ರತೀತಸರ್ವಾತ್ಮಾನುಭವೇ ಜ್ಞಾನಯಜ್ಞವು. ||೧||

ಅಧ್ಯಾರೋಪಕ್ಕೆ ಎಂದರೆ ಪ್ರಪಂಚಾಧ್ಯಾಸಕ್ಕೆ ಅಧಿಷ್ಠಾನವಾದ ಬ್ರಹ್ಮವು ಸತ್ಯವೆಂದರೆ ಅನೃತವಲ್ಲದ್ದು, ಪರಾನಂದ, ಅಥವಾ ನಿರತಿಶಯಸುಖಸ್ವರೂಪವಾದದ್ದು ಎಂದರೆ ದುಃಖರೂಪವಲ್ಲದ್ದು, ಪ್ರಕಾಶವೆಂದರೆ ಜಡವಲ್ಲದ್ದು, ಅನಂತವೆಂದರೆ ದೇಶಕಾಲವಸ್ತುಪರಿಚ್ಛೇದವಿಲ್ಲದ್ದು. ಇಂಥ ಬ್ರಹ್ಮವು ಯಾವಾಗಲೂ

ಆತ್ಮಶಕ್ತಿಸಮಾಯೋಗಾದನಾದ್ಯಂತಾದತರ್ಕಿತಾತ್ ।
ಅಪ್ರತೀತಮಿವಾಭಾತಿ ಸ್ವಯಂ ಭಾತಮಪಿ ದ್ವಿಜಾಃ ॥೩॥

ಸದಪ್ಯಸದಿವ ಪ್ರಾಜ್ಞಾಃ ಸದೈಕಮಪಿ ಭಿನ್ನವತ್ ।
ತಾದೃಶಾಕಾರಮಾಪನ್ನಸ್ಸಂಸಾರೀ ವಾವಭಾಸತೇ ॥೪॥

ಬ್ರಹ್ಮಣೋಽಭಿನ್ನರೂಪೇ ತು ಚೇತನಾಚೇತನಾತ್ಮಕಃ ।
ವಿಭಾಗಃ ಕಲ್ಪಿತಶ್ಶಕ್ತ್ಯಾ ನ ಸ್ವತಃ ಪಂಡಿತೋತ್ತಮಾಃ ॥೫॥

ತನ್ನ ಸ್ವರೂಪವನ್ನು ಬಿಡದೆ ಇದೆ. ಇತ್ಯಾದಿ ವಿಶೇಷಣಗಳು ಶುದ್ಧಬ್ರಹ್ಮೋಪ ಲಕ್ಷಕಗಳು. ॥೨॥

ಸಾಮಾನ್ಯಾಕಾರದಿಂದ ಜ್ಞಾತವಾಗಿಯೂ ವಿಶೇಷಾಕಾರದಿಂದ ಅಜ್ಞಾತ ವಾಗಿಯೂ ಇರುವ ವಸ್ತುವೇ ಅಧಿಷ್ಠಾನವೆನಿಸುತ್ತದೆ. ಹೇಗೆಂದರೆ ಕಪ್ಪೆಚಿಪ್ಪು ಬೆಳ್ಳ ಗಿರುವ ಯಾವುದೋ ಒಂದು ಪದಾರ್ಥವೆಂದು ತಿಳಿದಾಗ, ಅದರ ಹಿಂಭಾಗ ಕಪ್ಪಗಿದೆ, ಮುಮ್ಮೂಲೆಯಾಗಿದೆ, ಎಂದು ಮುಂತಾದ ವಿಶೇಷಲಕ್ಷಣಗಳು ತಿಳಿಯದೆ ಇರುವಾಗ, ಆ ಕಪ್ಪೆಚಿಪ್ಪು ರಜತಕ್ಕೆ ಅಧಿಷ್ಠಾನವೆನಿಸುತ್ತದೆ. ಹಾಗೆ ಬ್ರಹ್ಮನಲ್ಲಿ ಅನಾದಿ ಯಾಗಿಯೂ ಬ್ರಹ್ಮಜ್ಞಾನ ಹೊರತು ಬೇರೆ ಯಾವುದರಿಂದಲೂ ನಾಶವಾಗದಿರುವ, ವಿಚಾರಮಾಡಿದರೆ ನಿಲ್ಲದೆ ಹೋಗುವ, ಆತ್ಮಶಕ್ತಿಯು ಎಂದರೆ ಆತ್ಮನನ್ನು ಆಶ್ರಯಿಸಿ ಕೊಂಡಿರುವ, ಸಾಂಖ್ಯರ ಪ್ರಕೃತಿಯಂತೆ ಸ್ವತಂತ್ರವಲ್ಲದ, ಮಾಯೆಯ ಸಂಬಂಧದಿಂದ ಸ್ವಪ್ರಕಾಶಸ್ವಭಾವವುಳ್ಳದ್ದಾದರೂ ಮಾಯೆಯಿಂದ ಆವೃತವಾಗಿ ಸ್ವಪ್ರಕಾಶವಲ್ಲದ್ದೋ ಎಂಬ ಹಾಗೆ ಬ್ರಹ್ಮಚೈತನ್ಯವೇ ಜೀವಜಗದ್ರೂಪವಾಗಿ ತೋರುತ್ತಿರುತ್ತದೆ. ॥೩॥

ಸ್ವಪ್ರಕಾಶಜ್ಞಾನಸ್ವರೂಪವಾದ ಚೈತನ್ಯವು ಸದ್ರೂಪವಾದರೂ ಮಾಯೆಯ ಆವರಣಶಕ್ತಿಯಿಂದ ಇಲ್ಲದಿರುವಂತೆಯೂ, ಅದ್ವಿತೀಯವಾದರೂ ಬೇರೆ ಬೇರೆ ಯಾದುದೆಂದೂ, ಆಯಾ ಅಂತಃಕರಣದ ಅಜ್ಞಾನವನ್ನನುಸರಿಸಿ ಆಯಾ ರೂಪ ಗಳುಳ್ಳಂತೆಯೂ ಸಂಸಾರಿಯಾಗಿಯೂ ತೋರುತ್ತಿರುತ್ತದೆ. 'ಅಕ್ಷಮಾ ಭವತಃ ಕೇಯಂ ಸಾಧಕತ್ವಪ್ರಕಲ್ಪನೇ । ಕಿಂ ನ ಪಶ್ಯಸಿ ಸಂಸಾರಂ ತತ್ರೈವಾಜ್ಞಾನ ಕಲ್ಪಿತಂ ॥' ಎಂದು ವಾರ್ತಿಕದಲ್ಲಿ ಹೇಳಿರುವಂತೆ ಶುದ್ಧಚೈತನ್ಯವೇ ಅವಾಸ್ತವವಾಗಿ ತೋರುತ್ತಿರುತ್ತದೆ. ॥೪॥

ಹೀಗೆ ಸ್ವಪ್ರಕಾಶವಾದರೂ ಆ ಶುದ್ಧಚೈತನ್ಯದಲ್ಲಿ ಮಾಯಾಸಂಬಂಧದಿಂದ

ಬ್ರಹ್ಮಣಶ್ಚೇತನಾಕಾರೇ ಕಲ್ಪಿತಾ ಚೇತನಾಭಿದಾ ।
ಸರ್ವಜ್ಞತ್ವಾದಿಕಾ ಸ್ತಂಬಪರ್ಯಂತಾ ಮಾಯಯೈವ ತು ॥೬॥

ಉತ್ಕರ್ಷಶ್ಚಾಪಕರ್ಷಶ್ಚ ಮಾಯಯಾ ತೇಷು ಕಲ್ಪಿತಃ ।
ನಿಯಂತೃತ್ವ ನಿಯಮ್ಯತ್ವಾದ್ಯಾಕಾರಾಶ್ಚ ಪ್ರಕಲ್ಪಿತಾಃ ॥೭॥

ಬ್ರಹ್ಮಣೋಽಚೇತನಾಕಾರೇ ಮಹಾಮಾಯಾಬಲೇನ ತು ।
ಮಹದಾದಿಜಗಚ್ಛೂನ್ಯಪರ್ಯಂತಂ ಪರಿಕಲ್ಪಿತಂ ॥೮॥

ಎಲ್ಲವೂ ಸಂಭವಿಸಬಹುದು. ಆದುದರಿಂದ ಆ ಚೈತನ್ಯಕ್ಕೆ ಅಧಿಷ್ಠಾನತ್ವವನ್ನು ಹೇಳಿ ಚೇತನಾಚೇತನಾತ್ಮಕವಾದ ಎರಡು ಬಗೆಯ ಜಗತ್ತನ್ನೂ ಆರೋಪಿಸಲಾಗಿದೆ ಎಂದು ತಿಳಿಸುವುದಕ್ಕಾಗಿ ಆ ಅಧಿಷ್ಠಾನಕ್ಕೆ ಮಾಯಾವಶದಿಂದ ಎರಡು ವಿಧವಿದೆ ಎಂದು ಹೇಳುತ್ತಾರೆ. ಅಭಿನ್ನವಾಗಿಯೂ ಅಖಂಡವಾಗಿಯೂ ಇರುವ ಶುದ್ಧ ಬ್ರಹ್ಮರೂಪದಲ್ಲಿ ಮಾಯಾಶಕ್ತಿಯಿಂದ ಸತ್ತ್ವರಜಸ್ತಮೋಗುಣಗಳಲ್ಲಿ ಒಂದು ಮುಂದೂ ಇನ್ನೆರಡು ಹಿಂದೂ ಆಗುವುದರಿಂದಲೂ ಚೇತನಾಚೇತನರೂಪದಿಂದ ಕಲ್ಪನೆಯುಂಟಾಗಿದೆ. ಇದು ಕಲ್ಪಿತವೇ ಹೊರತು ಸ್ವಾಭಾವಿಕವಾದುದಲ್ಲವು. ॥೫॥

ಈ ಎರಡು ಆಕಾರಗಳ ಪೈಕಿ ಚೇತನಾಕಾರದಲ್ಲಿ ಸರ್ವಜ್ಞನಾದ ಈಶ್ವರ ಮೊದಲುಗೊಂಡು ಸ್ತಂಬದವರೆಗಿನ ಎಲ್ಲ ವಸ್ತುಗಳಲ್ಲೂ ಚೇತನಭೇದವು ಮಾಯೆಯಿಂದ ತೋರುತ್ತಿದೆ. ಈ ಎರಡರಲ್ಲಿ ಯಾವುದು ಎಲ್ಲಿ ಕಲ್ಪಿತವಾಗಿದೆ ಎಂದರೆ ಸತ್ತ್ವಗುಣವು ಪ್ರಕಾಶಾತ್ಮಕವಾದುದರಿಂದ ಸತ್ತ್ವೋಪಾಧಿಕವಾದ ಆಕಾರವು ಚೇತನವೆನಿಸುತ್ತದೆ. ರಜಸ್ತಮಸ್ಸುಗಳು ಅದಕ್ಕೆ ಎದುರಾದುದರಿಂದ ರಜೋಗುಣವೂ ತಮೋಗುಣವೂ ಪ್ರಧಾನವಾದ ಉಪಾಧಿಯಾಗಿ ಉಳ್ಳ ಆಕಾರವು ಅಚೇತನಾಕಾರವು. ॥೬॥

ಈಶ್ವರ ಮೊದಲಾದ ಭೋಕ್ತೃಗಳು ಕಲ್ಪನೆಯ ಅನಂತರದಲ್ಲಿ ಅವರ ಕರ್ಮವಶದಿಂದ ಸುಖದುಃಖಗಳ ಹೆಚ್ಚು ಕಡಿಮೆಯೂ, ಈಶ್ವರನಿಗೆ ನಿಯಂತೃತ್ವವೂ, ಇತರ ಚೇತನಗಳಿಗೆ ನಿಯಮ್ಯತ್ವವೂ ಮಾಯೆಯಿಂದಲೇ ಕಲ್ಪಿತವಾಗುತ್ತವೆ. ॥೭॥

ಬ್ರಹ್ಮನ ಈ ವ್ಯಾವಹಾರಿಕವಾದ ಅಚೇತನಾಕಾರದಲ್ಲಿ ಮಾಯಾಬಲದಿಂದ ಮಹದಾದಿ ಭೋಗ್ಯರೂಪವೆಲ್ಲವೂ ಎಂದರೆ ಆಕಾಶ ಮುಂತಾದ ಭೂತಭೌತಿಕಾತ್ಮಕ

ಉತ್ಕರ್ಷಶ್ಚಾಪಕರ್ಷಶ್ಚ ಜಗತ್ಯಪಿ ಮುನೀಶ್ವರಾಃ ।
ಕಲ್ಪಿತಸ್ಸರ್ವತೋದ್ರಿಕ್ತಂ ವ್ಯವಹಾರೇ ತು ಮಾಯಯಾ ॥೯॥

ವರ್ಣಾಶ್ರಮಾಸ್ತಥಾ ವಿಪ್ರಾಃ ವರ್ಣಸಾಂಕರ್ಯಮೇವ ಚ ।
ತದ್ಧರ್ಮಾಶ್ಚ ವಿಭಾಗೇನ ಮಾಯಯೈವ ಪ್ರಕಲ್ಪಿತಾಃ ೧೦॥

ನಿಯೋಜ್ಯತ್ವಂ ಚ ಕರ್ತೃತ್ವಂ ಭೋಕ್ತೃತ್ವಂ ಚ ತಥೈವ ಚ ।
ವರ್ಣಾಶ್ರಮಾದಿನಿಷ್ಠಾನಾಂ ಮಾಯಯೈವ ಪ್ರಕಲ್ಪಿತಂ ॥೧೧॥

ವಾದ ಜಗತ್ತೆಲ್ಲವೂ ಕಲ್ಪಿತವಾಗುತ್ತದೆ. ಸೃಷ್ಟಿಸ್ಥಿತಿಪ್ರಳಯಗಳು ಕಲ್ಪಿತವಾಗಿ ತೋರುತ್ತವೆ. ಭೋಕ್ತೃಪ್ರಪಂಚದಲ್ಲಿ ಹೇಗೋ ಹಾಗೆ ಜಡವಾದ ಭೋಗ್ಯಪ್ರಪಂಚದಲ್ಲಿಯೂ ಮೇಲುಕೀಳೆಂಬುದೂ, ಉತ್ಕರ್ಷಾಪಕರ್ಷಗಳಲ್ಲಿ ತಾರತಮ್ಯವೂ, ಈ ಎಲ್ಲವೂ ಮಾಯೆಯಿಂದ ಕಲ್ಪಿತವಾಗಿ ತೋರುತ್ತಿರುತ್ತವೆ. ಹೀಗೆ ವ್ಯವಹಾರದಲ್ಲಿ ಎಲ್ಲವೂ ಮಾಯೆಯಿಂದ ಎದ್ದು ಕಾಣುವಂತಿರುತ್ತದೆ. "ತಮಃಪ್ರಧಾನಃ ಕ್ಷೇತ್ರಾಣಾಂ ಚಿತ್ಪ್ರಧಾನಶ್ಚಿದಾತ್ಮನಾಂ । ಪರಃ ಕಾರಣತಾಮೇತಿ ಭಾವನಾ ಜ್ಞಾನಕರ್ಮಭಿಃ ॥" ಎಂದು ಹೇಳಿರುವಂತೆ ಚೇತನವಾದ ಜೀವಾಧ್ಯಾಸದಲ್ಲಿ ಸತ್ತ್ವಪ್ರಧಾನವಾದ ಪರಬ್ರಹ್ಮವೂ, ಜಡವಾದ ಅಚೇತನವಾದ ಕ್ಷೇತ್ರಾದಿ ಪ್ರಪಂಚಾಧ್ಯಾಸದಲ್ಲಿ ತಮಃ ಪ್ರಧಾನಬ್ರಹ್ಮವೂ, ಕಾರಣತ್ವವನ್ನು ಭಾವನಾ=ಉಪಾಸನಾ=ಕಾಮ, ಅಜ್ಞಾನ= ಅವಿದ್ಯಾ, ಕರ್ಮ, ಇವುಗಳಿಂದ, ಅವಿದ್ಯಾಕಾಮಕರ್ಮಗಳಿಂದ, ಪಡೆಯುತ್ತದೆ.॥೮-೯॥

ಹೀಗೆ ಪ್ರಪಂಚದೊಳಗೆ ಸೇರಿರುವ ವರ್ಣಾಶ್ರಮಧರ್ಮಗಳೂ ಮಾಯಾಕಲ್ಪಿತವು ಎಂದು ಹೇಳುತ್ತಾರೆ. ಬ್ರಾಹ್ಮಣಾದಿ ವರ್ಣಗಳೂ, ಬ್ರಹ್ಮಚರ್ಯಾದ್ಯಾಶ್ರಮಗಳೂ, ಅವುಗಳ ಬೆರಿಕೆಯೂ, ಅವುಗಳ ಧರ್ಮಗಳೂ ಪ್ರತ್ಯೇಕವಾಗಿ ಮಾಯೆಯಿಂದಲೇ ಕಲ್ಪಿತವಾಗಿವೆ. ॥೧೦॥

ಈ ಧರ್ಮವನ್ನು ನಾನು ಆಚರಿಸಬೇಕೆಂದು ತಿಳಿದು, ಮಾಡುವುದು ನಿಯೋಜ್ಯತ್ವವು. ಆ ಧರ್ಮಾನುಷ್ಠಾನದಿಂದ ಉಂಟಾಗುವ ಫಲಾನುಭವಮಾಡುವಿಕೆಯು ಭೋಕ್ತೃತ್ವವು. ಈ ಮೂರು ವರ್ಣಾಶ್ರಮಧರ್ಮಾನುಷ್ಠಾನದಲ್ಲಿ ಆಸಕ್ತರಾದವರಿಗೆ ಮಾಯೆಯಿಂದಲೇ ಕಲ್ಪಿತವಾಗಿ ಉಂಟಾಗುತ್ತವೆ. ॥೧೧॥

ವಿಧಯಶ್ಚ ನಿಷೇಧಾಶ್ಚ ಶ್ರುತಿಸ್ಮೃತ್ಯಾದಿರೂಪಿಣಃ ।
ಮಾಯಯಾ ದೇವದೇವಸ್ಯ ಸತ್ಯವತ್ಪರಿಕಲ್ಪಿತಾಃ ॥೧೨॥

ಧರ್ಮಾಧರ್ಮೌ ತಯೋರ್ವಿಪ್ರಾಃ ಫಲೇ ತತ್ಸಾಧನಾನ್ಯಪಿ ।
ಕಲ್ಪಿತಾನಿ ಮಹಾಮೋಹಾತ್ ಬ್ರಹ್ಮಣೋ ನ ಸ್ವಭಾವತಃ ॥೧೩॥

ರಾಗದ್ವೇಷಾದಯೋ ದೋಷಾಃ ಶಾಂತಿದಾಂತ್ಯಾದಯೋ ಗುಣಾಃ ।
ಅಪಿ ಮಾಹೇಶ್ವರಂ ಜ್ಞಾನಂ ಮಾಯಯೈವ ಪ್ರಕಲ್ಪಿತಂ ॥೧೪॥

ವೈದಿಕಾಸ್ತಾಂತ್ರಿಕಾ ಮಾರ್ಗಾ ಅಪಭ್ರಂಶಾಸ್ತಥೈವ ಚ ।
ಸ್ವತಂತ್ರಸ್ಯಾಂಬಿಕಾಭರ್ತುಃ ಮಾಯಯೈವ ಪ್ರಕಲ್ಪಿತಾಃ ॥೧೫॥

ಶ್ರುತಿಗಳಲ್ಲೂ ಸ್ಮೃತಿಗಳಲ್ಲೂ ಹೇಳಿರುವ ವಿಧಿಗಳೂ ನಿಷೇಧಗಳೂ ದೇವಾಧಿದೇವನಾದ ಪರಶಿವನ ಮಾಯಾಶಕ್ತಿಯಿಂದ ಸತ್ಯವಾಗಿ ತೋರುವಂತೆ ಕಲ್ಪಿಸಲ್ಪಟ್ಟಿವೆ. ||೧೨||

ಶ್ರೌತಸ್ಮಾರ್ತಧರ್ಮಗಳೂ, ನಿಷಿದ್ಧವಾದ ಅಧರ್ಮಗಳೂ, ಅವುಗಳ ಫಲಗಳಾದ ಸುಖದುಃಖಗಳೂ, ಅವುಗಳಿಗೆ ಸಾಧನಗಳಾದ ಅಪೂರ್ವಗಳೂ ಬ್ರಹ್ಮನ ಮಾಯಾಶಕ್ತಿಯಿಂದ ಕಲ್ಪಿತಗಳಾಗಿವೆಯೇ ಹೊರತು ಅವು ಪಾರಮಾರ್ಥಿಕವಾಗಿ ವಾಸ್ತವವಾದವುಗಳಲ್ಲವು. ||೧೩||

ರಾಗದ್ವೇಷ ಮುಂತಾದ ದ್ವಂದ್ವಗಳೂ, ಶಾಂತಿದಾಂತಿ ಮೊದಲಾದ ಮೋಕ್ಷಸಾಧಕವಾದ ಗುಣಗಳೂ, ಹಾಗೆಯೇ ಪರಶಿವವಿಷಯಕವಾದ ವೃತ್ತಿರೂಪಜ್ಞಾನವೂ, ಮಾಯೆಯಿಂದಲೇ ಕಲ್ಪಿತವಾಗಿವೆ. ಈ ಜ್ಞಾನವು ಮಾತ್ರ ಮಾಯೆಯ ಆವರಣಶಕ್ತಿಯನ್ನು ನಿವಾರಿಸಿ ಕತಕರೇಣುವಿನ ಹಾಗೆ ತಾನೂ ನಷ್ಟವಾಗುತ್ತದೆ. ||೧೪||

ಶ್ರುತ್ಯುಕ್ತವಾದ ಧರ್ಮಮಾರ್ಗವೂ, ಪಾಂಚರಾತ್ರಾದಿ ಆಗಮೋಕ್ತವಾದ ದಾರಿಯೂ, ಇವೆರಡು ಪ್ರಮಾಣಗಳನ್ನೂ ಬಿಟ್ಟಿರುವ ಕಾಪಾಲಿಕಾದಿ ಮಾರ್ಗವೂ ಸರ್ವತಂತ್ರಸ್ವತಂತ್ರನಾದ ಪಾರ್ವತೀಪತಿಯಾದ ಪರಶಿವನ ಮಾಯೆಯಿಂದಲೇ ಕಲ್ಪಿತವಾಗಿವೆ. ||೧೫||

ಯದ್ಯದಸ್ತಿತಯಾ ಭಾತಿ ಯದ್ಯನ್ನಾಸ್ತಿತಯಾ ತಥಾ ।
ತತ್ತತ್ಸರ್ವಂ ಮಹಾದೇವಮಾಯಯಾ ಪರಿಕಲ್ಪಿತಂ ॥೧೬॥

ಚೇತನಾಚೇತನಾಕಾರೌ ಬ್ರಹ್ಮಣೋ ಯೌ ಪ್ರಕಲ್ಪಿತೌ ।
ತೌ ಶಿವಾದನ್ಯತೋ ನ ಸ್ತಃ ಸಮ್ಯಗರ್ಥನಿರೂಪಣೇ ॥೧೭॥

ಸರ್ವಜ್ಞತ್ವಾದಿಕಾ ಭೇದಾಃ ಸಂಭ್ರಾಂತಾ ಯೇ ಪ್ರಕಲ್ಪಿತಾಃ ।
ತೇ ಶಿವಾದನ್ಯತೋ ನಿತ್ಯಂ ನ ಸಂತ್ಯೇವ ನಿರೂಪಣೇ ॥೧೮॥

ಉತ್ಕರ್ಷಶ್ಚಾಪಕರ್ಷಶ್ಚ ಯಸ್ತೇಷು ಪರಿಕಲ್ಪಿತಃ ।
ಸೋಽಪಿ ನೈವಾಸ್ತಿ ಭೇದೇನ ಶಿವಾತ್ಸಮ್ಯಙ್ನಿರೂಪಣೇ ॥೧೯॥

ಯಾವಯಾವುದು ಇರುವುದಾಗಿ ತೋರುತ್ತಿದೆಯೋ, ಯಾವುದು ಇಲ್ಲದ್ದಾಗಿ ತೋರುತ್ತಿದೆಯೋ, ಎಂದರೆ ಅಭಾವವು, ಆಯಾಯ ಎಲ್ಲ ಪದಾರ್ಥಗಳೂ ಮಹಾದೇವನಾದ ಪರಶಿವನ ಮಾಯೆಯಿಂದ ಕಲ್ಪಿತವಾಗಿವೆ. ॥೧೬॥

ಚೇತನಾಚೇತನಾತ್ಮಕವಾದ ಬ್ರಹ್ಮನ ಈ ಕಲ್ಪಿತವಾದ ಆಕಾರಗಳು ಅಧಿಷ್ಠಾನಭೂತನಾದ ಪರಶಿವನಿಗಿಂತ ಬೇರೆ ಇಲ್ಲವು. ಏಕೆಂದರೆ ಪರಶಿವನ ಪಾರಮಾರ್ಥಿಕವಾದ ಸ್ವರೂಪವನ್ನು 'ಏಕಮೇವಾದ್ವಿತೀಯಂ ಬ್ರಹ್ಮ', 'ನೇಹನಾಸ್ತಿ ಕಿಂಚನ' ಮುಂತಾದ ಶ್ರುತಿವಾಕ್ಯಗಳ ಸಹಾಯದಿಂದ ವಿಮರ್ಶೆಮಾಡಿದರೆ ಭೋಕ್ತೃಭೋಗ್ಯಸ್ವರೂಪವಾದ ಈ ಪ್ರಪಂಚವೆಲ್ಲವೂ ಕಲ್ಪಿತವಾದುದೆಂದೇ ಒಪ್ಪಬೇಕಾಗುತ್ತದೆ. ಇಲ್ಲದಿದ್ದರೆ ಬ್ರಹ್ಮನ ಅದ್ವಿತೀಯತ್ವಕ್ಕೆ ಭಂಗಬರುತ್ತದೆ. ॥೧೭॥

ಈಶ್ವರನ ಸರ್ವಜ್ಞತ್ವ ಜಗತ್ಸ್ರಷ್ಟೃತ್ವ ಮೊದಲಾದ ಮತ್ತು ಹುಲ್ಲುಕಡ್ಡಿಯವರೆಗಿನ ಭೇದಗಳೂ, ತತ್ತ್ವವಿಚಾರಮಾಡಿ ನೋಡಿದರೆ ಪರಶಿವನಿಗಿಂತ ಬೇರೆಯಾಗಿ ವಾಸ್ತವವಾಗಿಲ್ಲವು. ॥೧೮॥

ಈಶ್ವರ ಮೊದಲುಗೊಂಡು ಹುಲ್ಲುಕಡ್ಡಿಯವರೆಗಿನ ಪದಾರ್ಥಗಳಲ್ಲಿ ಕಲ್ಪಿತವಾಗಿರುವ ಮೇಲ್ಮೆಕೀಳ್ಮೆಗಳೂ ಶಿವನಿಗಿಂತಲೂ ಬೇರೆಯಾಗಿಲ್ಲವೆಂಬುದು ವಿಮರ್ಶೆಮಾಡಿದಲ್ಲಿ ಗೊತ್ತಾಗುತ್ತದೆ. ॥೧೯॥

ಬ್ರಹ್ಮಣೋಽಚೇತನಾಕಾರೇ ಕಲ್ಪಿತಂ ಯಜ್ಞಗದ್ಬುಧಾಃ ।
ತಚ್ಚ ನೈವಾಸ್ತಿ ಭೇದೇನ ಶಿವಾತ್ಸಮ್ಯಗ್ನಿರೂಪಣೇ ॥೨೦॥

ಉತ್ಕರ್ಷಶ್ಚಾಪಕರ್ಷಶ್ಚ ಯೋ ಜಗತ್ಯಪಿ ಕಲ್ಪಿತಃ ।
ಸೋಽಪಿ ನೈವಾಸ್ತಿ ಭೇದೇನ ಶಿವಾತ್ಸಮ್ಯಗ್ನಿರೂಪಣೇ ॥೨೧॥

ವರ್ಣಾಶ್ರಮಾದಯೋ ಭಾವಾ ಮಾಯಯಾ ಯೇ ಪ್ರಕಲ್ಪಿತಾಃ ।
ತೇಽಪಿ ಶಂಭೋರ್ನ ಭೇದೇನ ಸಂತಿ ಸಮ್ಯಗ್ನಿರೂಪಣೇ ॥೨೨॥

ನಿಯೋಜ್ಯತ್ವಾದಯೋ ಭಾವಾ ಮಾಯಯಾ ಯೇ ಪ್ರಕಲ್ಪಿತಾಃ ।
ತೇಽಪಿ ಶಂಭೋರ್ನ ಭೇದೇನ ಸಂತಿ ಸಮ್ಯಗ್ನಿರೂಪಣೇ ॥೨೩॥

ವಿಧಯಶ್ಚ ನಿಷೇಧಾಶ್ಚ ಮಾಯಯಾ ಯೇ ಪ್ರಕಲ್ಪಿತಾಃ ।
ತೇಽಪಿ ಶಂಭೋರ್ನ ಭೇದೇನ ಸಂತಿ ಸಮ್ಯಗ್ನಿರೂಪಣೇ ॥೨೪॥

ಬ್ರಹ್ಮನಲ್ಲಿ ಮಾಯೆಯ ರಜಸ್ತಮೋಗುಣಗಳು ಮುಂದಾಗುವುದರಿಂದ ತೋರುವ ಆಕಾಶಾದಿ ಭೂತಾತ್ಮಕವಾದ ಅಚೇತನವಾದ ಬ್ರಹ್ಮನ ಆಕಾರದಲ್ಲಿ ಕಲ್ಪಿತವಾದ ಜಗತ್ತೂ ವಿಚಾರಮಾಡಿದರೆ ಪರಶಿವನ ಸ್ವರೂಪವಾದ ಬ್ರಹ್ಮನಿಗಿಂತಲೂ ವಾಸ್ತವವಾಗಿ ಬೇರೆ ಇಲ್ಲವು. ॥೨೦॥

ಹೀಗೆ ಕಲ್ಪಿತವಾಗಿ ತೋರುತ್ತಿರುವ ಪ್ರಪಂಚದಲ್ಲೂ ಮೇಲ್ಮೆಕೀಳ್ಮೆಗಳೂ ಪರಶಿವನಿಗಿಂತ ಬೇರೆಯಾಗಿ ವಾಸ್ತವವಾಗಿ ಇಲ್ಲವೆಂಬುದು ಚನ್ನಾಗಿ ಪರಿಶೀಲಿಸಿದರೆ ಗೊತ್ತಾಗುತ್ತದೆ. ॥೨೧॥

ಬ್ರಾಹ್ಮಣಾದಿವರ್ಣಗಳೂ ಬ್ರಹ್ಮಚರ್ಯಾದ್ಯಾಶ್ರಮಗಳೂ ಮಾಯೆಯಿಂದ ಕಲ್ಪಿತಗಳಾಗಿವೆ ಎಂಬುದೂ, ಪರಶಿವನಿಗಿಂತ ಬೇರೆಯಾಗಿಲ್ಲವೆಂಬುದೂ, ವಿಚಾರದಿಂದ ಗೊತ್ತಾಗುತ್ತದೆ. ॥೨೨॥

ನಿಯೋಜ್ಯತ್ವಾದಿ ಧರ್ಮಗಳು ಜೀವರಲ್ಲೂ ಪ್ರಪಂಚದಲ್ಲೂ ಮಾಯೆಯಿಂದ ಕಲ್ಪಿತವಾಗಿರುವುದರಿಂದ ವಿಚಾರಮಾಡಿನೋಡಿದರೆ ಪರಶಿವನಿಗಿಂತ ಬೇರೆ ಅವು ವಾಸ್ತವವಾಗಿಲ್ಲವೆಂದು ಗೊತ್ತಾಗುತ್ತದೆ. ॥೨೩॥

ವಿಧಿಗಳೂ ನಿಷೇಧಗಳೂ ಮಾಯೆಯಿಂದ ಕಲ್ಪಿತವಾದುದರಿಂದ ಪರಶಿವನಿಗಿಂತ ಬೇರೆಯಾಗಿ ನಿಜವಾಗಿಲ್ಲವು. ॥೨೪॥

ಧರ್ಮಾಧರ್ಮಾದಿರೂಪೇಣ ಮಾಯಯಾ ಯೇ ಪ್ರಕಲ್ಪಿತಾಃ ।
ತೇಽಪಿ ಶಂಭೋರ್ನ ಭೇದೇನ ಸಂತಿ ಸಮ್ಯಙ್ನಿರೂಪಣೇ ॥೨೫॥

ರಾಗದ್ವೇಷಾದಿರೂಪಾಶ್ಚ ಮಾಯಯಾ ಯೇ ಪ್ರಕಲ್ಪಿತಾಃ ।
ತೇಽಪಿ ಶಂಭೋರ್ನ ಭೇದೇನ ಸಂತಿ ಸಮ್ಯಙ್ನಿರೂಪಣೇ ॥೨೬॥

ವೈದಿಕಾಸ್ತಾಂತ್ರಿಕಾ ಮಾರ್ಗಾ ಅಪಭ್ರಂಶಾಶ್ಚ ಯೇ ದ್ವಿಜಾಃ ।
ತೇಽಪಿ ಶಂಭೋರ್ನ ಭೇದೇನ ಸಂತಿ ಸಮ್ಯಙ್ನಿರೂಪಣೇ ॥೨೭॥

ಯದ್ಯದಸ್ತಿತಯಾ ಯದ್ಯನ್ನಾಸ್ತಿ ವಸ್ತು ಮುನೀಶ್ವರಾಃ ।
ತತ್ತಚ್ಛಂಭೋರ್ನ ಭೇದೇನ ವಿದ್ಯತೇ ಸೂಕ್ಷ್ಮದರ್ಶನೇ ॥೨೮॥

ಅತಶ್ಚ ಸಂಕ್ಷೇಪಮಿಮಂ ಶೃಣುಧ್ವಂ ಜಗತ್ಸಮಸ್ತಂ ಚಿದಚಿತ್ಪ್ರಭಿನ್ನಂ ।
ಸ್ವಶಕ್ತಿಕ್ಲೃಪ್ತಂ ಶಿವಮಾತ್ರಮೇವ ನ ದೇವದೇವಾತ್ಪೃಥಗಸ್ತಿ ಕಿಂಚಿತ್॥೨೯॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಜ್ಞಾನಯಜ್ಞವಿಶೇಷವಿವರಣಂ ನಾಮ ದ್ವಾದಶೋಽಧ್ಯಾಯಃ

ಧರ್ಮ ಅಧರ್ಮರೂಪವಾದ ಪದಾರ್ಥಗಳೂ ಬ್ರಹ್ಮದಲ್ಲಿ ಮಾಯೆಯಿಂದ ಕಲ್ಪಿತವಾದುದರಿಂದ ವಾಸ್ತವವಾಗಿ ಬೇರೆ ಇಲ್ಲ. ॥೨೫॥

ರಾಗ ದ್ವೇಷ ಸುಖ ದುಃಖ ಮುಂತಾದುವೂ ಮಾಯೆಯಿಂದಲೇ ಕಲ್ಪಿತವಾದುದರಿಂದ ಬ್ರಹ್ಮನಿಗಿಂತ ಬೇರೆ ವಾಸ್ತವವಾಗಿ ಇಲ್ಲವೆಂದು ಗೊತ್ತಾಗುತ್ತದೆ. ॥೨೬॥

ವೇದೋಕ್ತಗಳಾದ ಆಗಮೋಕ್ತಗಳಾದ ಮಾರ್ಗಗಳೂ, ಕಾಪಾಲಾದಿ ಶಾಸ್ತ್ರ ವಿರುದ್ಧ ಮಾರ್ಗಗಳೂ ವಾಸ್ತವವಾಗಿ ಬ್ರಹ್ಮನಿಗಿಂತ ಬೇರೆ ಇಲ್ಲ. ॥೨೭॥

ಯಾವ ಯಾವ ಪದಾರ್ಥಗಳು ಇವೆ ಎಂದು ತೋರುತ್ತಿವೆಯೋ, ಹಾಗೆಯೇ ಯಾವುವು ಇಲ್ಲವೆಂದು ತೋರುತ್ತಿವೆಯೋ, ಅವೆಲ್ಲವೂ ಪರಶಿವನಿಗಿಂತ ಬೇರೆಯಾಗಿ ನಿಜವಾಗಿಲ್ಲವೆಂದು ಸೂಕ್ಷ್ಮವಾಗಿ ವಿಚಾರಿಸಿದರೆ ಗೊತ್ತಾಗುತ್ತದೆ. ॥೨೮॥

ಆದುದರಿಂದ ಸಂಗ್ರಹವಾಗಿ ಹೇಳಿದರೆ ಚೇತನಾಚೇತನಾತ್ಮಕವಾದ ಈ ಎಲ್ಲ ಪ್ರಪಂಚವೂ ಬ್ರಹ್ಮನ ಮಾಯಾಶಕ್ತಿಯಿಂದ ಕಲ್ಪಿತವಾದುದರಿಂದ ಬ್ರಹ್ಮನಿಗಿಂತ

ಬೇರೆ ಇಲ್ಲ. ಬ್ರಹ್ಮ ಒಂದೇ ಪಾರಮಾರ್ಥಿಕಸತ್ಯವಾದುದು. ಇತರವಾದ ಪ್ರಪಂಚ ವೆಲ್ಲವೂ ಮಾಯಾಕಲ್ಪಿತವಾಗಿ ಮಿಥ್ಯಾಭೂತವಾದುದು. ಆದುದರಿಂದ ಬ್ರಹ್ಮವು ಅದ್ವಿತೀಯವಾದುದೆಂದು ಸಿದ್ಧವಾಗಿದೆ. ||೨೯||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಜ್ಞಾನಯಜ್ಞದ ವಿಶೇಷಗಳನ್ನು ವಿವರಿಸಿರುವ
ಹನ್ನೆರಡನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ತ್ರಯೋದಶೋಽಧ್ಯಾಯಃ ||

ಹದಿಮೂರನೆಯ ಅಧ್ಯಾಯವು

(ಶಕ್ತಿಸ್ವರೂಪವಿವರಣಂ)

|| ಸೂತ ಉವಾಚ ||

ಭೂಯೋಽಪಿ ಜ್ಞಾನಯಜ್ಞಂ ತು ಪ್ರವಕ್ಷ್ಯಾಮಿ ಸಮಾಸತಃ ।
ಗುಹ್ಯಾದ್ಗುಹ್ಯತಮಂ ಸೂಕ್ಷ್ಮಂ ಶೃಣುತ ಶ್ರದ್ಧಯಾ ದ್ವಿಜಾಃ ॥೧॥

ಚಿನ್ಮಾತ್ರಾಶ್ರಯಮಾಯಾಯಾಃ ಶಕ್ತ್ಯಾಕಾರೇ ದ್ವಿಜೋತ್ತಮಾಃ ।
ಅನುಪ್ರವಿಷ್ಟಾ ಯಾ ಸಂವಿತ್ ನಿರ್ವಿಕಲ್ಪಾ ಸ್ವಯಂಪ್ರಭಾ ॥೨॥

ಇನ್ನೂ ಒಂದಾವೃತ್ತಿ ಸಂಗ್ರಹವಾಗಿ ಜ್ಞಾನಯಜ್ಞವನ್ನು ಹೇಳುತ್ತೇನೆ. ಇದು ಗುಟ್ಟಾಗಿರಬೇಕಾದ ಎಲ್ಲ ವಿಷಯಗಳಲ್ಲೂ ತುಂಬ ಗುಟ್ಟಾಗಿರಬೇಕಾದುದು ; ಆದುದರಿಂದ ಓ ಬ್ರಾಹ್ಮಣರೇ, ಆದರದೊಡನೆ ಕೇಳಿರಿ. ||೧||

ಮಾಯೆಯೇ ಪರಶಕ್ತಿ ಎಂದು ಕೆಲವರು ಭ್ರಮಿಸಿರುತ್ತಾರೆ. ಅಂಥವರ ಭ್ರಾಂತಿಯನ್ನು ನಿವಾರಿಸಲು ಪರಶಕ್ತಿಸ್ವರೂಪವನ್ನು ವಿವರಿಸುತ್ತಾರೆ. ಶುದ್ಧ ಚಿದ್ರೂಪವಾದ ಅಧಿಷ್ಠಾನದಲ್ಲಿರುವ ಮಾಯೆಯಲ್ಲಿ ಸೃಷ್ಟಿಸಲ್ಪಡುವ ಪ್ರಾಣಿಗಳ ಕರ್ಮಗಳು ಫಲೋನ್ಮುಖವಾದಾಗ ಮಾಯೆಯಲ್ಲಿ ಉಂಟಾಗುವ ಉಬ್ಬುವಿಕೆಗೆ, ಜಗದಾಕಾರವಾಗಿ ಪರಿಣಾಮವಾಗುವ ಮಾಯೆಯ ಅಂಕುರಾವಸ್ಥೆಗೆ, ಶಕ್ತಿ ಎಂದು ಹೆಸರು. ಈ ಶಕ್ತ್ಯವಚ್ಛಿನ್ನವಾದ ಚೈತನ್ಯದಲ್ಲಿ ಅನುಪ್ರವಿಷ್ಟವಾದ ಸಂವಿತ್ ಎಂದರೆ

ಸದಾಕಾರಾ ಪರಾನಂದಾ ಸಂಸಾರೋಚ್ಛೇದಕಾರಿಣೀ ।
ಸಾ ಶಿವಾ ಪರಮಾ ದೇವೀ ಶಿವಾಭಿನ್ನಾ ಶಿವಂಕರೀ. ॥೩॥

ಜಗತ್ಕಾರಣಮಾಪನ್ನಶ್ಶಿವೋ ಯೋ ಮುನಿಸತ್ತಮಾಃ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೪॥

ಸರ್ವಜ್ಞತ್ವಂ ಗತೋ ಯಸ್ತು ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೫॥

ಈಶಿತೃತ್ವಂ ಗತೋ ಯಸ್ತು ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೬॥

ಚಿತ್ತಿಗೆ ಪರಾಶಕ್ತಿ ಎಂದು ಹೆಸರು. ಈ ಚಿದ್ರೂಪವೇ ನಿಜಸ್ವರೂಪದಲ್ಲಿ ನಿರ್ವಿಕಲ್ಪವಾದುದೂ ಸ್ವಯಂಪ್ರಕಾಶವಾದುದೂ ಆಗಿರುತ್ತದೆ. ॥೨॥

ಸದಾಕಾರಾ ಅಂದರೆ ಬ್ರಹ್ಮಾಕಾರವಾದ ಮನೋವೃತ್ತ್ಯವಚ್ಛಿನ್ನಸಂವಿತ್, ಇದೇ ಸಂಸಾರನಾಶಕ್ಕೂ ಕಾರಣವಾದುದು, ಪರಮಾನಂದಸ್ವರೂಪವಾದುದು, ಎಂದರೆ ಪರಮಾನಂದಸ್ವರೂಪವಾದ ಮೋಕ್ಷಕ್ಕೂ ಕಾರಣಭೂತವಾದುದು. ಇಂತಹ ಗುಣವುಳ್ಳ ಸಂವಿತ್=ಚಿತ್ತೇ ಎಲ್ಲ ಪ್ರಾಣಿಗಳಿಗೂ ಸುಖವನ್ನುಂಟುಮಾಡುವಂಥಾದ್ದು. ಆದುದರಿಂದಲೇ ಶಿವಪದಬೋಧ್ಯವಾದುದು. ದೇವೀ=ಮೇಲೆ ಹೇಳಿದ ಶಕ್ತಿಕಾರ್ಯವಾದ ಪ್ರಪಂಚಕ್ಕೆ ಈಶ್ವರಿಯು. ಪರಮಾ=ಇತರ ಎಲ್ಲಕ್ಕೂ ಕಾರಣಭೂತವಾದುದರಿಂದ ಶ್ರೇಷ್ಠವಾದುದು. ಈ ಪರಾಶಕ್ತಿಗೂ ಶಿವನಿಗೂ ಔಪಾಧಿಕವಾಗಿ ಬೇರೆ ಹೆಸರಿದ್ದರೂ ಸ್ವಸ್ವರೂಪದಲ್ಲಿ ಇವೆರಡಕ್ಕೂ ಭೇದವಿಲ್ಲವು. ಇವು ಶುದ್ಧಚಿದ್ರೂಪವಾದುವು. ॥೩॥

ಸಾಮಾನ್ಯರೂಪವಾದ ಪರಾಶಕ್ತಿಯ ಸ್ವರೂಪವನ್ನು ಹೇಳಿದರು. ಅದೇ ಶಕ್ತಿವಿಶೇಷರೂಪವೂ ಆಗುತ್ತದೆ. ಶಕ್ಯ=ಶಕ್ತಿವಿಶಿಷ್ಟ, ಶಕ್ಯವಿಶೇಷವಾದ ಪ್ರಪಂಚ ಶಕ್ತಿರೂಪಪ್ರತಿಯೋಗಿಯಿಂದ ನಿರೂಪಿತವಾಗಿ ಆ ಪರಾಶಕ್ತಿಯೇ ಆಯಾ ಶಕ್ತಿವಿಶೇಷರೂಪವಾಗುತ್ತದೆ. ಅದಿಲ್ಲದೆ ಯಾವ ಪ್ರಯೋಜನವೂ ಸಾಗದು. ॥೪॥

ಪರಶಿವನು ಜಗತ್ಕಾರಣಾವಸ್ಥೆಯನ್ನು ಪಡೆದಾಗ ಮಾಯೋಪಾಧಿಕನಾಗಿರುತ್ತಾನೆ. ಆ ಮಾಯೆಯು ಅನುದ್ಭೂತವಾದ ಜ್ಞಾನಕ್ರಿಯಾಶಕ್ತಿಗಳ ಸಾಮ್ಯರೂಪವಾಗಿರುತ್ತದೆ. ಆ ಮಾಯೆಯೇ ಉಪಾಧಿಯಾಗಿರುವಾಗ ಆ ಶಿವನು ಸರ್ವಜ್ಞನೆನಿಸುತ್ತಾನೆ. ಆ ಶಕ್ತಿಯು ಉಪಾಧಿಯಾಗಿ ಇಲ್ಲದಿದ್ದರೆ ಜಗನ್ನಿರ್ಮಾಣ ರಕ್ಷಣಸಂಹರಣ

ಯಸ್ತು ರುದ್ರತ್ವಮಾಪನ್ನಃ ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೭॥

ಯಸ್ತು ವಿಷ್ಣುತ್ವಮಾಪನ್ನಃ ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೮॥

ಯಸ್ತು ಬ್ರಹ್ಮತ್ವಮಾಪನ್ನಃ ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೯॥

ಸದಾಶಿವತ್ವಂ ಯಃ ಪ್ರಾಪ್ತಃ ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೧೦॥

ಈಶ್ವರತ್ವಂ ಗತೋ ಯಸ್ತು ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೧೧॥

ಕಾರ್ಯಗಳು ನೆರವೇರಲಾರದೆ ಹೋಗುತ್ತವೆ. ಜ್ಞಾನಶಕ್ತಿಯು ಅಧಿಕವಾಗಿರುವಾಗ ಸರ್ವಜ್ಞನೂ, ಕ್ರಿಯಾಶಕ್ತಿ ಮುಂದಾಗಿರುವಾಗ ಸ್ರಷ್ಟವ್ಯಾಲೋಚನೆಮಾಡುತ್ತಾ ಈಕ್ಷಿತೃತ್ವ ಉಳ್ಳವನೂ ಆಗಿರುತ್ತಾನೆ. ಅದಿಲ್ಲದೆ ಯಾವ ಫಲವೂ ಇಲ್ಲವು. ||೬||

ಈಕ್ಷಣದ ಅನಂತರದಲ್ಲಿ ಚಿಕೀರ್ಷೆಯು ಬರುತ್ತದೆ. ಅವ್ಯಕ್ತವಾಗಿದ್ದ ಪ್ರಪಂಚವನ್ನು ವ್ಯಕ್ತಮಾಡುವುದಕ್ಕಾಗಿ ಇಚ್ಛೆಯುಂಟಾಗುತ್ತದೆ. ಆಮೇಲೆ ಮಾಯೆಯ ಸತ್ತ್ವರಜಸ್ತಮೋಗುಣಗಳು ವಿಭಕ್ತಗಳಾಗುತ್ತವೆ. ಆ ಪೈಕಿ ಬಹಿಃ ಸತ್ವಗುಣವುಳ್ಳ ಒಳಗೆ ತಮೋಗುಣವುಳ್ಳ ಉಪಾಧಿಯಿಂದ ವಿಷ್ಣುವೆನಿಸುತ್ತಾನೆ. ಒಳಗೂ ಹೊರಗೂ ರಜೋಗುಣ ಉಪಾಧಿಯಾಗಲು ಬ್ರಹ್ಮನೆನಿಸುತ್ತಾನೆ. ಇವರಲ್ಲಿ ಒಳಗೆ ಸತ್ತ್ವಗುಣವುಳ್ಳ ಹೊರಗೆ ತಮೋಗುಣವುಳ್ಳ ರುದ್ರನೇ ಶ್ರೇಷ್ಠನೆನಿಸುತ್ತಾನೆ. ಆ ಶಕ್ತಿ ಇಲ್ಲದೆ ಅವರಿಂದ ಯಾವ ಕಾರ್ಯವೂ ಆಗದು. ಹೀಗೆ ಶಿವನೊಬ್ಬನೇ ಉಪಾಧಿಗಳಿಂದ ಐದು ಬಗೆಯಾಗುತ್ತಾನೆ. ||೭-೮-೯||

ಸತ್ತ್ವರಜಸ್ತಮೋಗುಣವಿಭಾಗವಾದಮೇಲೆ ಶಬ್ದಸ್ಪರ್ಶ ಮುಂತಾದ ತನ್ಮಾತ್ರಾ ರೂಪವಾದ ಸೂಕ್ಷ್ಮಭೂತಗಳು ಕ್ರಮವಾಗಿ ಉಂಟಾಗುತ್ತವೆ. ಶಬ್ದತನ್ಮಾತ್ರೋಪಾಧಿಕನು ಸದಾಶಿವನೂ, ಸ್ಪರ್ಶತನ್ಮಾತ್ರೋಪಾಧಿಯಿಂದ ಈಶ್ವರನೂ, ರೂಪತನ್ಮಾತ್ರೋಪಾಧಿಯಿಂದ ರುದ್ರನೂ, ರಸತನ್ಮಾತ್ರೋಪಾಧಿಯಿಂದ ವಿಷ್ಣುವೂ, ಗಂಧತನ್ಮಾತ್ರೋಪಾಧಿಯಿಂದ ಬ್ರಹ್ಮನೂ ಆಗುತ್ತಾರೆ. ||೧೦-೧೧||

ಹಿರಣ್ಯಗರ್ಭತ್ವಂ ಯಸ್ತು ಶಿವಃ ಪ್ರಾಪ್ತ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೧೨॥

ಸೂತ್ರಾತ್ಮತ್ವಂ ತಥಾ ಯಸ್ತು ಶಿವಃ ಪ್ರಾಪ್ತ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಸ್ತಯಾ ಹೀನೋ ನಿರರ್ಥಕಃ ॥೧೩॥

ವಿರಾಡ್ರೂಪಂ ಗತೋ ಯಸ್ತು ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಸ್ತಯಾ ಹೀನೋ ನಿರರ್ಥಕಃ ॥೧೪॥

ಸ್ವರಾಡ್ರೂಪಂ ಗತೋ ಯಸ್ತು ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಸ್ತಯಾ ಹೀನೋ ನಿರರ್ಥಕಃ ॥೧೫॥

ಸಮ್ರಾಡ್ರೂಪಂ ಗತೋ ಯಸ್ತು ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಸ್ತಯಾ ಹೀನೋ ನಿರರ್ಥಕಃ ॥೧೬॥

ಇಂದ್ರಾದಿಲೋಕಪಾಲಾನಾಂ ರೂಪಂ ಯಃ ಪ್ರಾಪ್ತವಾನ್ ಶಿವಃ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೧೭॥

ಆಕಾಶಾದಿ ಐದು ಭೂತಗಳಲ್ಲಿರುವ ಸತ್ವಾಂಶಗಳಿಂದ ಉಂಟಾಗಿರುವ ಸಮಷ್ಟಿ ಅಂತಃಕರಣವು ಉಪಾಧಿಯಾಗಿರುವುದರಿಂದ ಹಿರಣ್ಯಗರ್ಭನಾಗುತ್ತಾನೆ॥೧೨॥

ಆಕಾಶಾದಿ ಪಂಚಭೂತಗಳಲ್ಲಿ ರಜೋಂಶಗಳಿಂದ ಉಂಟಾಗುವ ಸಮಷ್ಟಿ ಪ್ರಾಣವು ಉಪಾಧಿಯಾಗಲು ಸೂತ್ರಾತ್ಮನೆನಿಸುತ್ತಾನೆ. ॥೧೩॥

ಆಕಾಶಾದಿ ಪಂಚಭೂತಗಳು ಉಂಟಾದಮೇಲೆ ಅವುಗಳಿಂದ ಉಂಟಾಗುವ ಬ್ರಹ್ಮಾಂಡವೆಂಬ ಸ್ಥೂಲಪ್ರಪಂಚವು ಉಪಾಧಿಯಾಗಿರಲು ವಿರಾಟ್ ಎನಿಸುತ್ತಾನೆ. ॥೧೪॥

ಲಿಂಗಶರೀರಸಮಷ್ಟಿಯು ಉಪಾಧಿಯಾಗಿರಲು ಸ್ವರಾಟ್ ಎನಿಸುತ್ತಾನೆ॥೧೫॥

ಸ್ಥೂಲಸೂಕ್ಷ್ಮಶರೀರಗಳೆರಡಕ್ಕೂ ಕಾರಣರೂಪದಿಂದ ಅನುಸರಿಸಿರುವ ಅವ್ಯಾಕೃತವೆಂದರೆ ಅಜ್ಞಾನವೇ ಉಪಾಧಿಯಾಗಿರಲು ಸಮ್ರಾಟ್ ಎನಿಸುತ್ತಾನೆ. ॥೧೬॥

ಇಂದ್ರಾದಿಲೋಕಪಾಲಕತ್ವವನ್ನು ಉಪಾಧಿಯಾಗಿ ಪಡೆದಿರುವ ಶಿವನೇ ಇಂದ್ರಾದಿ ಲೋಕಪಾಲನೆನಿಸುತ್ತಾನೆ. ಆಯಾ ಆಧಿಪತ್ಯಗಳೇ ಅವರಿಗೆ ಶಕ್ತಿಯು.

ವೇದಾದೀನಾಂ ಗತೋ ಯಸ್ತು ರೂಪಂ ಶಂಭುರುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೧೮॥

ಮನುಷ್ಯತ್ವಂ ಗತೋ ಯಸ್ತು ಶಿವಸ್ಸಾಕ್ಷಾದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೧೯॥

ತಿರ್ಯಗಾದಿ ಸ್ವರೂಪಂ ಯಃ ಶಿವಃ ಪ್ರಾಪ್ತ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೨೦॥

ಓಷಧೀನಾಂ ಸ್ವರೂಪಂ ಯಶ್ಶಿವಃ ಪ್ರಾಪ್ತ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೨೧॥

ಆ ಶಕ್ತಿ ಇಲ್ಲದಿದ್ದರೆ ವ್ಯರ್ಥವಾಗುವನು. ಎಂದರೆ ಆಯಾ ಕಾರ್ಯಗಳನ್ನು ನೆರವೇರಿಸಲು ಸಮರ್ಥನಾಗುವುದಿಲ್ಲವು. ॥೧೭॥

ದೇವತೆಗಳ ರೂಪವನ್ನು ಪಡೆದ ಶಿವನೇ ದೇವನೆನಿಸುವನು. ಆ ಶರೀರದಿಂದ ಅವರು ಮಾಡಬಲ್ಲ ಕಾರ್ಯಗಳನ್ನು ನೆರವೇರಿಸಲು ಶಕ್ತನಾಗುತ್ತಾನೆ. ದೇವಾದಿ ಅಂದರೆ ದೇವತೆಗಳು ಅಸುರರು ಗಂಧರ್ವಾದಿಗಳೆಂದರ್ಥವು. ॥೧೮॥

ಮನುಷ್ಯರೂಪವನ್ನು ಉಪಾಧಿಯಾಗಿ ಪಡೆದು ಶಿವನು ಮರ್ತ್ಯಧರ್ಮವುಳ್ಳವನಾಗುತ್ತಾನೆ. ಹೀಗೆ ಉಪಾಧಿಸಂಬಂಧವಿಲ್ಲದ ಶುದ್ಧಸ್ವರೂಪವು ವ್ಯಾವಹಾರಿಕವಾದ ಕಾರ್ಯಕಾರಣಸಂಬಂಧವಿಲ್ಲದ್ದಾಗಿರುತ್ತದೆ. ॥೧೯॥

ತಿರ್ಯಕ್ ಪ್ರಾಣಿಗಳ ಸ್ವರೂಪವನ್ನು ಉಪಾಧಿಯಾಗಿ ಪಡೆದಿರುವ ಶಿವನು ಆಯಾ ಶಕ್ತಿಯಿಂದ ಆಯಾ ಕಾರ್ಯನಿರ್ವಾಹಮಾಡುತ್ತಾನೆ. ॥೨೦॥

ಓಷಧಿಗಳ ಸ್ವರೂಪವನ್ನು ಪಡೆದ ಶಿವನು ಉಪಾಧಿಯ ಶಕ್ತಿಯಿಂದ ಆಯಾ ಕಾರ್ಯಗಳನ್ನು ನಿರ್ವಹಿಸುತ್ತಾನೆ. ಆಯಾ ಶಕ್ತಿಯ ಸಂಬಂಧವಿಲ್ಲದಿದ್ದರೆ ಆಯಾ ಕಾರ್ಯನಿರ್ವಾಹದಲ್ಲಿ ಸಮರ್ಥನಾಗನು. ಸರ್ವಪ್ರಪಂಚವೂ ಶಿವಸ್ವರೂಪವೆಂದೂ ಶಿವಾತಿರಿಕ್ತವಾದುದೆಲ್ಲವೂ ಮಿಥ್ಯಾಭೂತ (ಎಲ್ಲಿ ತೋರುತ್ತಿದೆಯೋ ಅಲ್ಲಿಯೇ ಆ ಪದಾರ್ಥವು ಕಾಲತ್ರಯದಲ್ಲೂ ಇಲ್ಲದಿರುವ) ಸ್ವಭಾವವಾದುದೆಂದೂ ತಾತ್ಪರ್ಯವು. ಹೀಗೆಯೇ ಎಲ್ಲ ಕಡೆಗಳಲ್ಲೂ ತಿಳಿಯಬೇಕು. ॥೨೧॥

ವನಸ್ಪತೀನಾಂ ರೂಪಂ ಯಶ್ಶಿವಃ ಪ್ರಾಪ್ತ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೨೨॥

ಭಕ್ಷ್ಯಭೋಜ್ಯಾದಿ ರೂಪಂ ಯಶ್ಶಿವಃ ಪ್ರಾಪ್ತ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೨೩॥

ನದೀನದಾದಿರೂಪಂ ಯಶ್ಶಿವಃ ಪ್ರಾಪ್ತ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೨೪॥

ಪರ್ವತಾದಿ ಸ್ವರೂಪಂ ಯಶ್ಶಿವಃ ಪ್ರಾಪ್ತ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೨೫॥

ಸಮುದ್ರರೂಪಂ ಯಃ ಪ್ರಾಪ್ತಃ ಶಿವಸಾಕ್ಷಾತ್ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಃ ತಯಾ ಹೀನೋ ನಿರರ್ಥಕಃ ॥೨೬॥

ವಿದ್ಯುದ್ರೂಪಂ ಗತೋಯಸ್ತು ಶಿವಃ ಸಾಕ್ಷಾತ್ ಉಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಸ್ತಯಾ ಹೀನೋ ನಿರರ್ಥಕಃ ॥೨೭॥

ಸರ್ವಾಕಾರಂ ಗತೋ ಯಸ್ತು ಶಿವಸ್ಸಾಕ್ಷದುಪಾಧಿನಾ ।
ಸಾ ತಸ್ಯಾಪಿ ಭವೇಚ್ಛಕ್ತಿಸ್ತಯಾ ಹೀನೋ ನಿರರ್ಥಕಃ ॥೨೮॥

ವನಸ್ಪತಿ (ಹೂವಿಲ್ಲದೆ ಹಣ್ಣನ್ನು ಬಿಡುವ ಮರ)ಗಳ ರೂಪವನ್ನು ಉಪಾಧಿಯಾಗಿ ಪಡೆದಿರುವ ಪರಶಿವನು ಆಯಾ ಉಪಾಧಿಶಕ್ತಿಯಿಂದ ಆಯಾ ಕಾರ್ಯನಿರ್ವಾಹಮಾಡಲಾಪನೇ ಹೊರತು ಬೇರೆ ಇಲ್ಲವು. ॥೨೨॥

ಭಕ್ಷ್ಯ (ಅಗಿದು ತಿನ್ನಬೇಕಾದ ಆಹಾರ)ಗಳ, ಅನ್ನ ಮೊದಲಾದವುಗಳ ರೂಪವನ್ನು, ಪೂರ್ವಸಮುದ್ರಕ್ಕೆ ಸೇರುವ ನದಿಗಳ, ಪಶ್ಚಿಮುಸಮುದ್ರಕ್ಕೆ ಸೇರುವ ನದಗಳ ಸ್ವರೂಪವನ್ನು, ಬೆಟ್ಟಗಳ ರೂಪನ್ನು, ಸಾಗರಗಳ ಸ್ವರೂಪವನ್ನು, ಮಿಂಚಿನ ರೂಪವನ್ನು ಉಪಾಧಿಯಾಗಿ ಪಡೆದಿರುವ ಪರಶಿವನು ಆಯಾ ಶಕ್ತಿಯಿಂದಲೇ ಆಯಾ ಕಾರ್ಯನಿರ್ವಾಹಮಾಡಬಲ್ಲನು. ಅದಿಲ್ಲದಿದ್ದರೆ ವ್ಯರ್ಥವು. ॥೨೩-೨೪-೨೫-೨೬-೨೭॥

ಈ ಎಲ್ಲ ಪ್ರಪಂಚದ ರೂಪವನ್ನೇ ಉಪಾಧಿಯಾಗಿ ಪಡೆದ ಪರಶಿವನು ಆಯಾ ಉಪಾಧಿಶಕ್ತಿಸಂಬಂಧದಿಂದಲೇ ಆಯಾ ಕಾರ್ಯನಿರ್ವಾಹಮಾಡಬಲ್ಲವನಾಗುತ್ತಾನೆ. ಅದಿಲ್ಲದೆ ಯಾವ ಅರ್ಥಕ್ರಿಯಾಕಾರಿಯೂ ಆಗನು. ॥೨೮॥

ಏಷಾ ಸಾ ಸಾಕ್ಷಿಣೀ ಶಕ್ತಿಃ ಶಂಕರಸ್ಯಾಪಿ ಶಂಕರೀ ।
ಶಿವಾಭಿನ್ನಾ ತಯಾ ಹೀನಶ್ಶಿವಸ್ಸಾಕ್ಷಾನ್ನಿರರ್ಥಕಃ ॥೨೯॥

ನ ಶಿವೇನ ವಿನಾ ಶಕ್ತಿಃ ನ ಶಕ್ತಿರಹಿತಶ್ಶಿವಃ ।
ಉಮಾಶಂಕರಯೋರೈಕ್ಯಂ ಯಃ ಪಶ್ಯತಿ ಸ ಪಶ್ಯತಿ ॥೩೦॥

ಉಮಾಶಂಕರಯೋರ್ಭೇದಂ ಯೇ ಪಶ್ಯಂತಿ ನರಾಧಮಾಃ ।
ಅಧೋಮುಖೋರ್ಧ್ವಪಾದಾಸ್ತೇ ಯಾಸ್ಯಂತಿ ನರಕಾರ್ಣವಮ್ ॥೩೧॥

ಯಥಾ ಮಾತಾಪಿತೃಭ್ಯಾಂ ತು ವರ್ಧಂತೇ ಮಾನವಾ ಭುವಿ ।
ತಥೈವಾಭ್ಯಾಮಿದಂ ಕೃತ್ಸ್ನಂ ವರ್ಧತೇ ನಾತ್ರ ಸಂಶಯಃ ॥೩೨॥

ಹೀಗೆ ಉಪಾಧಿಗಳನ್ನು ಹೇಳಿ ಪರಶಕ್ತಿಯು ಒಂದೇ ಆಗಿದ್ದರೂ ಆಯಾ ಉಪಾಧಿರೂಪವಾದ ಪ್ರತಿಯೋಗಿಭೇದದಿಂದ ನಾನಾರೂಪವುಳ್ಳಂತೆ ತೋರುತ್ತಿರುತ್ತದೆ. ಇದೇ ಸಾಕ್ಷಿರೂಪವಾಗಿರುವ ಪರಶಿವನಿಗೆ ಜಗತ್ಕಾರಣತ್ವರೂಪದಿಂದ ಆಯಾ ಕಾರ್ಯವನ್ನು ನಿರ್ವಹಿಸಲು ಅನುವಾಗುವುದರಿಂದ ಪರಶಿವನಿಗೂ ಸುಖರೂಪವಾಗಿರುತ್ತದೆ. ಈ ಶಿವಶಕ್ತಿತತ್ವಗಳಿಗೆ ಭೇದವಿಲ್ಲವು. ಪರಶಿವನಿಗಿಂತಲೂ ಶಕ್ತಿಯು ಬೇರೆ ಇಲ್ಲವು. ಆ ಶಕ್ತಿ ಇಲ್ಲದೆ ಪರಶಿವನು ಶುದ್ಧಚಿತ್ಸ್ವರೂಪನಾಗಿದ್ದಾಗ ಆಯಾ ಕಾರ್ಯ ನಿರ್ವಾಹಕನಾಗನು. ಶುದ್ಧನಾದ ಪರಶಿವನಿಗೆ ಶಿವಶಕ್ತ್ಯಾತ್ಮಕವಾದ ಈ ಸಗುಣ ರೂಪದ ಲೀಲಾವತಾರದಲ್ಲಿ ಸುಖಕಾರಣಳಾಗಿರುವುದರಿಂದ ಶಕ್ತಿಯು ಶಂಕರಿ ಎನಿಸಿಕೊಂಡಿರುತ್ತಾಳೆ. ॥೨೯॥

ಈ ಶಿವಶಕ್ತಿಗಳಿಬ್ಬರೂ ಕೇವಲ ಚಿತ್ಸ್ವರೂಪವಾದ ಒಂದೇ ಶರೀರವುಳ್ಳವರಾದುದರಿಂದ ಇವರು ಪರಸ್ಪರವಾಗಿ ಅಗಲಿರುವುದಿಲ್ಲವೆಂದು ಹೇಳುತ್ತಾರೆ. ಶಿವನನ್ನು ಬಿಟ್ಟು ಶಕ್ತಿ ಇಲ್ಲವು; ಶಕ್ತಿ ಇಲ್ಲದೆ ಶಿವನು ಇಲ್ಲವು. ಹೀಗೆ ಉಮಾಶಂಕರರಿಗೆ ಅಭೇದವನ್ನು ಯಾರು ತಿಳಿಯುತ್ತಾರೋ ಅವರೇ ಜ್ಞಾನಿಗಳು. ॥೩೦॥

ಇದೇ ಅಂಶವನ್ನು ವ್ಯತಿರೇಕಮುಖದಿಂದಲೂ ದೃಢಪಡಿಸುತ್ತಾರೆ. ಈ ಶಿವಶಕ್ತಿಸ್ವರೂಪರಾದ ಉಮಾಶಂಕರರನ್ನು ಭಿನ್ನರೆಂದು ಯಾರು ತಿಳಿಯುತ್ತಾರೋ ಅಂಥವರು ತಲೆಕೆಳಗಾಗಿಯೂ ಕಾಲುಮೇಲಾಗಿಯೂ ನರಕಸಮುದ್ರದಲ್ಲಿ ಪ್ರವೇಶಿಸುತ್ತಾರೆ. ॥೩೧॥

ಹೇಗೆ ಲೋಕದಲ್ಲಿ ಮನುಷ್ಯರು ತಾಯಿತಂದೆಗಳಿಂದ ಹುಟ್ಟಿ ಬೆಳೆಯು

ಉಪಾಸತೇ ಯೇ ಪರಮಾಂ ಸರ್ವಲೋಕೈಕಮಾತರಂ ।
ತೇಽಭೀಷ್ಟಂ ಸಕಲಂ ಯಾಂತಿ ವಿದ್ಯಾಂ ಮುಕ್ತಿಪ್ರದಾಮಪಿ ॥೩೩॥

ಪಾರ್ವತೀ ಪರಮಾ ದೇವೀ ಬ್ರಹ್ಮವಿದ್ಯಾಪ್ರದಾಯಿನೀ ।
ವಿಶೇಷೇಣೈವ ಜಂತೂನಾಂ ನಾತ್ರ ಸಂದೇಹಕಾರಣಮ್ ॥೩೪॥

ಲಕ್ಷ್ಮೀವಾಗಾದಿರೂಪೈಷಾ ಶಿಖಾ ಖಲು ಮುನೀಶ್ವರಾಃ ।
ನರ್ತಕೀವಾನಯಾ ಸರ್ವಂ ಅಚಿರಾದೇವ ಸಿಧ್ಯತಿ ॥೩೫॥

ಅಸ್ಯಾ ಏವ ಪ್ರಸಾದೇನ ಬ್ರಹ್ಮೇಂದ್ರಾದಿ ವಿಭೂತಯಃ ।
ಅನಯಾ ರಹಿತಂ ಸರ್ವಂ ಅಸದೇವ ನ ಸದ್ಭವೇತ್ ॥೩೬॥

ತ್ತಾರೋ, ಹಾಗೆ ಜಗತ್ಕಾರಣರಾದ ಈ ಉಮಾಶಂಕರರಿಂದ ಈ ಸಮಸ್ತಪ್ರಪಂಚವೂ ಹುಟ್ಟಿ ಬೆಳೆಯುತ್ತದೆ. ಇದರಲ್ಲಿ ಸಂದೇಹವಿಲ್ಲವು. ॥೩೨॥

ಯಾರು ಈ ಪರಶಕ್ತಿಸ್ವರೂಪಳಾದ, ಎಲ್ಲ ಪ್ರಪಂಚಕ್ಕೂ ಮುಖ್ಯವಾದ ತಾಯಿಯಾಗಿರುವ, ಉಮಾದೇವಿಯನ್ನು ಉಪಾಸನೆಮಾಡುತ್ತಾರೋ, ಅವರು ಎಲ್ಲ ವಿಧವಾದ ಐಹಿಕಾಮುಷ್ಮಿಕಭೋಗಗಳನ್ನೂ ಆನುಷಂಗಿಕವಾಗಿ ಪಡೆಯುವುದಲ್ಲದೆ ಮುಖ್ಯವಾಗಿ ಮುಕ್ತಿಯನ್ನು ಕೊಡುವ ಬ್ರಹ್ಮಜ್ಞಾನವನ್ನೂ ಪಡೆಯುತ್ತಾರೆ. ॥೩೩॥

ಕೇನೋಪನಿಷತ್ತಿನಲ್ಲಿ ಹೇಳಿರುವಂತೆ ಬ್ರಹ್ಮಜ್ಞಾನವನ್ನು ಅನುಗ್ರಹಿಸಿರುವ ಈ ಪಾರ್ವತಿಯು ಶ್ರೇಷ್ಠದೇವತೆಯು. ಆದುದರಿಂದ ಈ ದೇವಿಯು ಎಲ್ಲ ಪ್ರಾಣಿಗಳಿಗೂ ವಿಶೇಷವಾಗಿ ಉತ್ತಮಫಲವನ್ನು ಕೊಡುತ್ತಾಳೆ. ಈ ವಿಷಯದಲ್ಲಿ ಸಂದೇಹವಿಲ್ಲವು. ॥೩೪॥

ಈ ಪರಶಕ್ತಿಯೇ, ನಾಟಕದಲ್ಲಿ ನಟಿಯು ನಾನಾವೇಷಗಳನ್ನು ಧರಿಸಿ ನಾನಾಕಾರ್ಯಗಳನ್ನು ನಿರ್ವಹಿಸುವಂತೆ, ಶಂಕರಿಯೇ ಲಕ್ಷ್ಮೀ, ಸರಸ್ವತೀ ಮುಂತಾದ ರೂಪಗಳಲ್ಲಿ ಆಯಾ ಕಾರ್ಯಗಳನ್ನು ನೆರವೇರಿಸುತ್ತಾಳೆ. ಆದುದರಿಂದ ಇವಳಿಂದಲೇ ಎಲ್ಲ ಪ್ರಯೋಜನಗಳೂ ಜಾಗ್ರತೆಯಾಗಿ ದೊರೆಯುತ್ತವೆ. ॥೩೫॥

ಈ ಪರಶಕ್ತಿಯ ಅನುಗ್ರಹದಿಂದಲೇ ಬ್ರಹ್ಮ ಇಂದ್ರ ಮುಂತಾದ ಅಧಿಕಾರಿಗಳು ಉಂಟಾಗುತ್ತಾರೆ. ಇವಳಿಲ್ಲದಿದ್ದರೆ ಎಲ್ಲವೂ ಸತ್ತ್ವಶೂನ್ಯವಾಗಿ ಬಲಹೀನವಾಗಿ ತುಚ್ಛವಾಗುತ್ತದೆ; ಸತ್ತ್ವವುಳ್ಳದ್ದೂ ಸಾಮರ್ಥ್ಯವುಳ್ಳದ್ದೂ ಆಗುವುದಿಲ್ಲ. ॥೩೬॥

ಏತಾಮೇವ ಸಮಾರಾಧ್ಯ ಶ್ರದ್ಧಯಾ ಸಹ ವೈದಿಕಾಃ ।
ಲಭಂತೇ ಕಾಂಕ್ಷಿತಂ ಸರ್ವಂ ನಾನ್ಯಥಾ ಮುನಿಪುಂಗವಾಃ ॥೩೭॥

ಶೈವಾ ಭಾಗವತಾಸ್ತೇಷಾಂ ಉಪಭೇದಾವಲಂಬಿನಃ ।
ಅಸ್ಯಾ ಆರಾಧನೇನೈವ ಲಭಂತೇಽಭೀಪ್ಸಿತಂ ಫಲಮ್ ॥೩೮॥

ದಿಗಂಬರಾಸ್ತಥಾ ಬೌದ್ಧಾಃ ಅಪಭ್ರಂಶಾವಲಂಬಿನಃ ।
ಅಸ್ಯಾ ಆರಾಧನೇನೈವ ಲಭಂತೇಽಭೀಪ್ಸಿತಂ ಫಲಮ್ ॥೩೯॥

ಯಥಾಯಥಾ ಶಿವಾಮೇತಾಂ ಯೋ ವಾ ಕೋ ವಾಽಽದರೇಣ ತು ।
ಆರಾಧಯತಿ ಸೋಽಭಿಷ್ಟಂ ಲಭತೇ ಫಲಮಾಸ್ತಿಕಾಃ ॥೪೦॥

ಕರುಣಾಸಾಗರಾಮೇತಾಂ ಯಃ ಪೂಜಯತಿ ಶಾಂಕರೀಂ ।
ಕಿಂ ನ ಸಿದ್ಧ್ಯತಿ ತಸ್ಯೇಷ್ಟಂ ತಸ್ಯಾ ಏವ ಪ್ರಸಾದತಃ ॥೪೧॥

ಈ ಶಕ್ತಿಯನ್ನೇ ಆದರದಿಂದ ಪೂಜಿಸಿ ವೇದೋಕ್ತಮಾರ್ಗವನ್ನನುಸರಿಸುವ ಶ್ರೋತ್ರಿಯರು ಎಲ್ಲ ಮನೋರಥಗಳನ್ನೂ ಹೊಂದುತ್ತಾರೆಯೇ ಹೊರತು ಬೇರೆ ಇಲ್ಲವು. ॥೩೭॥

ಶೈವಮಾರ್ಗದಲ್ಲಿ ಉಪಭೇದಗಳಾದ ಪಾಶುಪತಾದಿ ಮಾರ್ಗಗಳನ್ನೂ, ಭಾಗವತಮಾರ್ಗದಲ್ಲಿ ಉಪಭೇದಗಳಾದ ಪಾಂಚರಾತ್ರ, ವೈಖಾನಸ ಮುಂತಾದ ಮಾರ್ಗಗಳನ್ನೂ ಯಾರು ಅವಲಂಬಿಸುತ್ತಾರೋ ಅವರೂ ಈ ಪರಶಕ್ತಿಯ ಉಪಾಸನೆಯಿಂದಲೇ ಇಷ್ಟಾರ್ಥವನ್ನು ಪಡೆಯುತ್ತಾರೆ. ॥೩೮॥

ದಿಗಂಬರಜೈನರೂ, ಬೌದ್ಧರೂ, ಅಪಭ್ರಂಶಭಾಷೆಯನ್ನು ಆಡುವವರೂ ಕೂಡ ಈ ಪರಶಕ್ತಿಯ ಆರಾಧನೆಯಿಂದಲೇ ಇಷ್ಟಾರ್ಥವನ್ನು ಪಡೆಯುತ್ತಾರೆ.॥೩೯॥

ಈ ಪರಶಕ್ತಿಗೆ ಉಪಾಧಿಭೂತವಾದ ಯಾವುದಾದರೊಂದು ರೂಪವನ್ನು ಯಾರು ಯಾರು ಉಪಾಸನೆಮಾಡುತ್ತಾರೋ ಅವರೆಲ್ಲರೂ ಇಷ್ಟಾರ್ಥಗಳನ್ನು ಪಡೆಯುತ್ತಾರೆ. ಆ ಎಲ್ಲ ಮೂರ್ತಿಗಳಲ್ಲೂ ಪರಶಕ್ತಿಯೇ ಇದ್ದು ಅನುಗ್ರಹಿಸುತ್ತಾಳೆ. ॥೪೦॥

ಸಮುದ್ರದ ಹಾಗೆ ಅಪಾರವಾದ ದಯೆಯುಳ್ಳ ಶಂಕರಪ್ರಿಯೆಯಾದ ಈ ಪರಶಕ್ತಿಯನ್ನು ಯಾರು ಧ್ಯಾನಮಾಡುತ್ತಾರೋ, ಅಂಥವರಿಗೆ ಆ ದೇವಿಯ ಅನುಗ್ರಹ

ಶಿವಾಮೇತಾಮುಮೂಮೇನಾಂ ಜಡಶಕ್ತಿಂ ತಥೈವ ಚ ।
ಜಡಕಾರ್ಯಂ ಜಗಜ್ಜೀವಂ ತೇಷಾಂ ಭೇದಂ ತಥೈವ ಚ ॥೪೨॥

ಅನ್ಯಚ್ಚಾಸ್ತಿತಯಾ ಭಾತಂ ತಥಾ ನಾಸ್ತೀತಿ ಶಬ್ದಿತಂ ।
ಸರ್ವಂ ಪೂರ್ಣಂ ಶಿವಂ ಪಶ್ಯನ್ ಸ್ವಯಂ ಪೂರ್ಣಃ ಶಿವೋ ಭವೇತ್॥೪೩॥

ಪೂರ್ಣಮೇವ ಸ್ವಕಂ ರೂಪಂ ಅಪೂರ್ಣಂ ಭಾತಿ ಮಾಯಯಾ ।
ಪೂರ್ಣರೂಪತಯಾ ಮಾಯಾಂ ಪಶ್ಯನ್ ಪೂರ್ಣೋ ಭವೇತ್ಸ್ವಯಂ॥೪೪॥

ಸ್ವಪೂರ್ಣಾತ್ಮಾತಿರೇಕೇಣ ಜಗಜ್ಜೀವೇಶ್ವರಾದಯಃ ।
ನ ಸಂತಿ ನಾಸ್ತಿ ಮಾಯಾ ಚ ತದ್ವಿಶುದ್ಧಾತ್ಮವೇದನಮ್ ॥೪೫॥

ದಿಂದ ಯಾವ ಇಷ್ಟಾರ್ಥವು ತಾನೆ ಸಿದ್ಧಿಸದು ? ಎಲ್ಲವೂ ಕೈಗೂಡುತ್ತದೆಂದು ಭಾವವು. ||೪೧||

ಕಲ್ಯಾಣರೂಪವಾದ ಪರಾಶಕ್ತಿಯನ್ನೂ, ಲೀಲಾವಿಗ್ರಹವನ್ನು ಧರಿಸಿರುವ ಉಮಾಮೂರ್ತಿಯನ್ನೂ, ಜಡಪ್ರಪಂಚಕ್ಕೆ ಕಾರಣವಾದ ಮಾಯಾಶಕ್ತಿಯನ್ನೂ, ಜಡಕಾರ್ಯವಾದ ಪ್ರಪಂಚವನ್ನೂ, ಜಗತ್ ಮತ್ತು ಜೀವತ್ವಕಾರಣವಾದ ಅಜ್ಞಾನವನ್ನೂ, ಹಾಗೆಯೇ ಇವುಗಳ ಭೇದವನ್ನೂ, ಇದರಂತೆಯೇ ಇನ್ನೂ ಬೇರೆಯಾದ ಯಾವುಯಾವುದು ತೋರುತ್ತಿದೆಯೋ ಅದೆಲ್ಲವನ್ನೂ, ಯಾವುದು ಇಲ್ಲವೆಂಬ ಅರಿವಿಗೆ ಗೋಚರವಾಗುತ್ತದೋ ಅದನ್ನೂ, ಇವೆಲ್ಲವನ್ನೂ ಪೂರ್ಣನಾಗಿ ಸರ್ವತ್ರ ವ್ಯಾಪ್ತನಾಗಿರುವ ಪರಶಿವನೆಂದೂ, ಈ ಎಲ್ಲ ತೋರಿಕೆಗೂ ಬ್ರಹ್ಮವೇ ಅಧಿಷ್ಠಾನವೆಂದೂ ಯಾರು ತಿಳಿಯುತ್ತಾರೋ, ಅಂಥವರು ಶಿವಸ್ವರೂಪರೇ ಆಗುತ್ತಾರೆ. ||೪೨-೪೩||

ಜೀವರ ನಿಜಸ್ವರೂಪವು ಸರ್ವತ್ರ ವ್ಯಾಪ್ತವಾಗಿ ಅಪರಿಚ್ಛಿನ್ನವಾಗಿರುವ ಚೈತನ್ಯವೇ ಆಗಿದ್ದರೂ, ಮಾಯಾಶಕ್ತಿಯಾದ ಅಜ್ಞಾನದ ಪ್ರಭಾವದಿಂದ, ಅಪೂರ್ಣವಾಗಿರುವಂತೆ ತೋರುತ್ತಿರುತ್ತದೆ. ಮಾಯೆಯನ್ನೂ ತನ್ನ ಸ್ವರೂಪವಾದ ಅಪರಿಚ್ಛಿನ್ನ ಚೈತನ್ಯರೂಪವನ್ನಾಗಿಯೂ, ಕಲ್ಪಿತವಾಗಿ ತೋರುತ್ತಿರುವ ವಸ್ತುವಿನ ಸ್ವರೂಪವು ಅಧಿಷ್ಠಾನಕ್ಕಿಂತ ಬೇರೆಯಾಗಿ ವಾಸ್ತವವಾಗಿ ಇಲ್ಲವೆಂದೂ, ತಿಳಿದು ತಾನೂ ತನ್ನ ನಿಜ ರೂಪವಾದ ಅಪರಿಚ್ಛಿನ್ನವ್ಯಾಪ್ತರೂಪವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ||೪೪||

ಘಟಪಟಾದಿ ಪ್ರಪಂಚವೂ, ಅಲ್ಪಜ್ಞತ್ವಾದಿವಿಶಿಷ್ಟರಾದ ಜೀವರೂ, ಸರ್ವಜ್ಞ ಸರ್ವಶಕ್ತನಾದ ಈಶ್ವರನೂ, ಇವೆಲ್ಲವೂ ಕಲ್ಪನೆಯಿಂದ ತೋರುತ್ತಿರುವ ಮಾಯೆಯೂ,

ಸ್ವಪೂರ್ಣಾತ್ಮಶಿವಾನಂದನಿಷ್ಠಾಮಾಸಾದ್ಯ ಮಾನವಃ ।
ತದೈವ ಲಭತೇ ಮುಕ್ತಿಂ ಸ್ವಪೂರ್ಣಾತ್ಮಶಿವಾತ್ಮಿಕಾಮ್ ॥೪೬॥

ಸ್ವಪೂರ್ಣಾತ್ಮಶಿವಾನಂದಪ್ರಕಾಶಬಲತಃ ಪುಮಾನ್ ।
ಸ್ವಚ್ಛಂದಂ ವರ್ತತೇ ಲೋಕೇ ಕೋ ವಾ ತಸ್ಯ ನಿವಾರಕಃ ॥೪೭॥

ಸಾರ್ವಭೌಮೋ ಯಥಾ ರಾಜಾ ಸ್ವಚ್ಛಂದಂ ವರ್ತತೇ ಭುವಿ ।
ಸ್ವಪೂರ್ಣಾತ್ಮಶಿವಜ್ಞಾನೇ ಸ್ವಚ್ಛಂದಂ ವರ್ತತೇ ತಥಾ ॥೪೮॥

ಪ್ರತೀತಮಖಿಲಂ ಯಸ್ಯ ಸ್ವಾತ್ಮನಾ ಭಾಸತೇ ಸ್ವಯಂ ।
ಸಂಸಾರಸ್ತಸ್ಯ ಮುಕ್ತಿರ್ವಾ ಕಥಂ ಸಿಧ್ಯತಿ ಯೋಗಿನಃ ॥೪೯॥

ಸರ್ವವ್ಯಾಪ್ತನಾದ ಸ್ವಾತ್ಮಸ್ವರೂಪನಾದ ಪರಮಾತ್ಮನಿಗಿಂತ ಬೇರೆ ಇಲ್ಲವು ಎಂದು ತಿಳಿಯುವುದೇ ಪರಿಶುದ್ಧಾತ್ಮಜ್ಞಾನವೆನಿಸುವುದು. ಕಾರಣದ ಇರುವಿಕೆಗಿಂತ ಬೇರೆಯಾದ ಇರುವಿಕೆಯು ಪ್ರಪಂಚಕ್ಕೆ ಇಲ್ಲವು. ಕಾರ್ಯಪ್ರಪಂಚವು ಮಿಥ್ಯಾಭೂತವಾದುದು, ಎಂದರೆ ಪಾರಮಾರ್ಥಿಕವಾದ ಇರುವಿಕೆ ಇಲ್ಲದ್ದು. ಎಂದು ಭಾವವು.॥೪೫॥

ಸರ್ವತ್ರ ವ್ಯಾಪ್ತವಾಗಿ ಅಪರಿಚ್ಛಿನ್ನವಾದ ತನ್ನ ಆತ್ಮಸ್ವರೂಪನಾದ ಪರಶಿವನ ಆನಂದಸ್ವರೂಪದಲ್ಲಿ ವಿಕ್ಷೇಪವಿಲ್ಲದ ಧ್ಯಾನನಿಷ್ಠೆಯನ್ನು ಪಡೆದು ಮನುಷ್ಯನು ತನ್ನ ಸ್ವಸ್ವರೂಪವಾದ ಮುಕ್ತಿಯನ್ನು ಆಗಲೇ ಅಲ್ಲಿಯೇ ಎಂದರೆ ಕಾಲಾಂತರ ದೇಶಾಂತರ ನಿರೀಕ್ಷಿಸದೆ ಜ್ಞಾನವಾದ ಕೂಡಲೆ ಪಡೆಯುತ್ತಾನೆ ; ಜೀವನ್ಮುಕ್ತನಾಗಿರುತ್ತಾನೆ.॥೪೬॥

ಎಲ್ಲೆಡೆಯಲ್ಲೂ ತುಂಬ ಅಖಂಡವಾಗಿರುವ ಪರಮಾತ್ಮನೇ ಸ್ವಸ್ವರೂಪವೆಂದು ಸಾಕ್ಷಾತ್ಕರಿಸಿಕೊಂಡು ಆನಂದಾನುಭವದ ಬಲದಿಂದ ಪುರುಷನು ಸ್ವೇಚ್ಛೆಯಿಂದ ಯಾರಿಗೂ ಹೆದರದೆ ಇರುತ್ತಾನೆ. ಅಂಥವನನ್ನು ತಡೆಯುವವರಾರು ? ॥೪೭॥

ಈ ಲೋಕದಲ್ಲಿ ಚಕ್ರವರ್ತಿಯಾದವನು ಹೇಗೆ ಸ್ವತಂತ್ರನಾಗಿರುತ್ತಾನೋ ಹಾಗೆ ಅಖಂಡಾತ್ಮಸಾಕ್ಷಾತ್ಕಾರವನ್ನು ಪಡೆದ ಜ್ಞಾನಿಯೂ ಸ್ವತಂತ್ರನಾಗಿರುತ್ತಾನೆ. ॥೪೮॥

ಬುದ್ಧಿಗೋಚರವಾಗುವ ಈ ಎಲ್ಲ ಪ್ರಪಂಚವೂ ತನ್ನ ಆತ್ಮಸ್ವರೂಪವಾದುದೆಂದು ಯಾರಿಗೆ ಅನುಭವಕ್ಕೆ ಬರುವುದೋ, ಅಂಥವನಿಗೆ ಸಂಸಾರವಾಗಲಿ ಮುಕ್ತಿಯಾಗಲಿ ಹೇಗೆತಾನೆ ಉಂಟಾದೀತು ? ಯೋಗಿಯಾದ ಅವನ ವಿಷಯದಲ್ಲಿ ಬಂಧಮೋಕ್ಷಾದಿವ್ಯವಹಾರಗಳು ಪಾರಮಾರ್ಥಿಕವಾಗಿ ಸಲ್ಲವು. ॥೪೯॥

ಸಂಸಾರೋ ವಾ ವಿಮುಕ್ತಿರ್ವಾ ಯಸ್ಯ ಭಾತಿ ಮುನೀಶ್ವರಾಃ ।
ತಸ್ಯೈವ ಹಿ ನಿಷೇಧಾಶ್ಚ ವಿಧಯಶ್ಚ ನ ಯೋಗಿನಃ ॥೫೦॥

ಸ್ಪೃಶ್ಯತೇ ಮೃತ್ತಿಕಾ ವಿಪ್ರೈಃ ಚಂಡಾಲೈರಪಿ ಕೇವಲಾ ।
ಸೈವ ಕುಂಭಾದಿರೂಪೇಣ ನೀಚೈರ್ನ ಸ್ಪೃಶ್ಯತೇ ಯಥಾ ॥೫೧॥

ತಥಾ ಬ್ರಹ್ಮಾತ್ಮನಾ ಸರ್ವಮನಿಂದ್ಯಮಪಿ ಯೋಗಿನಃ ।
ನಿಂದ್ಯಾನಿಂದ್ಯತಯಾಽಜ್ಞಸ್ಯ ಭಾತಿ ಸರ್ವಂ ಸ್ವರೂಪತಃ ॥೫೨॥

ವೈದಿಕೋ ಲೌಕಿಕಶ್ಚಾಪಿ ವ್ಯವಹಾರಸ್ತು ಕಲ್ಪಿತಃ ।
ಭೇದವಿಜ್ಞಾನಿನೋ ಮೋಹಾತ್ ಭಾಸತೇ ಸ ನ ಯೋಗಿನಃ ॥೫೩॥

ಸಂಸಾರಬಂಧವು, ಮೋಕ್ಷವು ಎಂಬ ವ್ಯವಹಾರವು ಯಾರಿಗೆ ತೋರುತ್ತದೋ, ಅಂಥ ಅಜ್ಞಾನಿಗೇ ವಿಧಿನಿಷೇಧಗಳು ಅನ್ವಯಿಸುತ್ತವೆ. ಆದರೆ ಅವು ಯೋಗಿಯಾದ ಜ್ಞಾನಿಗೆ ಅನ್ವಯಿಸುವುದಿಲ್ಲ. ॥೫೦॥

ಮಣ್ಣನ್ನು ಬ್ರಾಹ್ಮಣರಾಗಲಿ ಚಂಡಾಲರಾಗಲಿ ಮುಟ್ಟಬಹುದು. ಆದರೆ ಅದೇ ಮಣ್ಣು ಗಡಿಗೆಯಾದ ಮೇಲೆ ನೀಚರಾದ ಚಂಡಾಲರಿಂದ ಮುಟ್ಟಲ್ಪಡಬಾರದು. ಮುಟ್ಟಿದರೆ ದೋಷವಾಗಿ ಬ್ರಾಹ್ಮಣಾದಿಗಳಿಗೆ ಅಗ್ರಾಹ್ಯವಾಗುತ್ತದೆ. ॥೫೧॥

ಜ್ಞಾನಿಯಾದ ಯೋಗಿಗೆ ನಿಂದ್ಯತ್ವ ಅನಿಂದ್ಯತ್ವ ಮುಂತಾದ ಧರ್ಮವನ್ನು ಮೀರಿರುವ ಬ್ರಹ್ಮಸ್ವರೂಪವಾಗಿ ತೋರುವುದರಿಂದ ಈ ಎಲ್ಲವೂ ಅನಿಂದ್ಯವಾಗಿರುತ್ತದೆ. ಆದರೆ ಅಜ್ಞಾನಿಗೆ ಎಲ್ಲವೂ ನಿಂದ್ಯವಾಗಿಯಾಗಲಿ ಅನಿಂದ್ಯವಾಗಿಯಾಗಲಿ ಕಾರ್ಯರೂಪದಲ್ಲಿ ಕಾಣಬರುತ್ತದೆ. ॥೫೨॥

ಅಜ್ಞಾನಿಯಾದವನಿಗೆ ಲೌಕಿಕವಾದ, (ಅಲೌಕಿಕ) ವೈದಿಕವಾದ ಎರಡು ವಿಧವಾದ ವ್ಯವಹಾರವೂ ಭೇದವನ್ನು ಕಾಣುತ್ತಿರುವುದರಿಂದ ಕಲ್ಪಿತವಾಗಿ ತೋರುತ್ತಿರುತ್ತದೆ. ಆದರೆ ಜ್ಞಾನಿಗೆ ಹಾಗೆ ತೋರುವುದಿಲ್ಲ. ॥೫೩॥

ಆತ್ಮವಿಜ್ಞಾನಿನೋ ವಿಪ್ರಾ ಲೌಕಿಕೋ ನ ಹಿ ವೈದಿಕಃ ।
ವ್ಯವಹಾರಸ್ಸ್ವತಸ್ಸರ್ವಃ ಸ್ವಾತ್ಮನಾ ಭಾತಿ ಕೇವಲಮ್ ॥೩೪॥

ಆತ್ಮವಿಜ್ಞಾನಯಜ್ಞಸ್ಯ ಮಹಾಯಜ್ಞಸ್ಯ ವೈಭವಂ ।
ಕಲ್ಪಕೋಟಿಶತೇನಾಪಿ ಮಯಾ ವಕ್ತುಂ ನ ಶಕ್ಯತೇ ॥೩೫॥

ಭವಂತೋಽಪಿ ಮಹಾಭಾಗ್ಯಾನ್ಮಹಾದೇವಪ್ರಸಾದತಃ ।
ಮತ್ತೋ ಲಬ್ಧಪರಿಜ್ಞಾನಾಃ ಕೃತಾರ್ಥಾಶ್ಚ ನ ಸಂಶಯಃ ॥೩೬॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಜ್ಞಾನಯಜ್ಞವಿಶೇಷೋ ನಾಮ ತ್ರಯೋದಶಾಧ್ಯಾಯಃ

ಆತ್ಮಜ್ಞಾನವನ್ನು ಹೊಂದಿದವನಿಗೆ ಲೌಕಿಕವಾದ ವೈದಿಕವಾದ ಎರಡು ವಿಧವಾದ ವ್ಯವಹಾರಗಳೂ ತೋರುವುದಿಲ್ಲ. ಏಕೆಂದರೆ ಎಲ್ಲವೂ ತಾನಾಗಿಯೇ ಅಖಂಡಾತ್ಮಸ್ವರೂಪದಿಂದ ತೋರುತ್ತಿರುತ್ತದೆ. ॥೩೪॥

ಈ ದೊಡ್ಡ ಯಜ್ಞದಂತೆ ಶ್ರೇಷ್ಠವಾಗಿರುವ ಆತ್ಮಜ್ಞಾನವೆಂಬ ಯಜ್ಞದ ಮಹಿಮೆಯನ್ನು ನೂರಾರು ಕೋಟಿ ಕಲ್ಪಗಳವರೆಗೆ ಹೇಳಿದರೂ ನನ್ನಿಂದ ಹೇಳಿ ಮುಗಿಸಲಾಗುವುದಿಲ್ಲ—ಎಂದು ಸೂತರು ಋಷಿಗಳನ್ನು ಕುರಿತು ಹೇಳುತ್ತಾರೆ. ॥೩೫॥

ಓ ಋಷಿಗಳೇ, ನೀವೂ ನಿಮ್ಮ ಪುಣ್ಯವಿಶೇಷದಿಂದಲೂ ಮಹಾದೇವನಾದ ಪರಶಿವನ ಅನುಗ್ರಹದಿಂದಲೂ ನನ್ನಿಂದ ಜ್ಞಾನವನ್ನು ಪಡೆದು ಕೃತಾರ್ಥರಾದಿರಿ, ಸಂಶಯವಿಲ್ಲವು. ॥೩೬॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಜ್ಞಾನಯಜ್ಞದ ವಿಶೇಷವನ್ನು, ಎಂದರೆ ಪರಶಕ್ತಿ ಪರಶಿವ ಇವರ ಅಭೇದವನ್ನು ತಿಳಿಸುವ ಹದಿಮೂರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಚತುರ್ದಶಾಧ್ಯಾಯಃ ||

ಹದಿನಾಲ್ಕನೆಯ ಅಧ್ಯಾಯವು

(ಜ್ಞಾನಯಜ್ಞವಿಶೇಷಃ)

|| ಓಂ ಸೂತ ಉವಾಚ ||

ಭೂಯೋಽಪಿ ಜ್ಞಾನಯಜ್ಞಂ ತು ಪ್ರವಕ್ಷ್ಯಾಮಿ ಸಮಾಸತಃ ।
ಇತಃಪೂರ್ವಂ ಮಯಾ ನೋಕ್ತಮಪಿ ಕಸ್ಯಚಿದಾಸ್ತಿಕಾಃ ॥೧॥

ಏಕ ಏವ ಶಿವಸ್ಸಾಕ್ಷಾತ್ ಸತ್ಯಜ್ಞಾನಾದಿಲಕ್ಷಣಃ ।
ವಿಕಾರರಹಿತಶ್ಶುದ್ಧಃ ಸ್ವಶಕ್ತ್ಯಾ ಪಂಚಧಾ ಸ್ಥಿತಃ ॥೨॥

ಈ ಪ್ರಕಾರವಾಗಿ ಪರಶಕ್ತಿಗೆ ಪರಶಿವಾಭೇದವನ್ನು, ಬೇರೆಯಾಗಿ ಸ್ವತಂತ್ರವಾಗಿ ಇಲ್ಲದಿರುವಿಕೆಯನ್ನು ವಿವರಿಸಿ ಈಗ ಸದ್ಯೋಜಾತಾದಿ ಪಂಚಬ್ರಹ್ಮರೂಪದಿಂದ ತೋರುವ ಭೇದಪ್ರತೀತಿಯೂ ಪಾರಮಾರ್ಥಿಕವಾದುದಲ್ಲವೆಂದು ವಿವರಿಸಲು ತೊಡಗುತ್ತಾರೆ. ಓ ಋಷಿಗಳೇ, ಪುನಃ ಜ್ಞಾನಯಜ್ಞವನ್ನು ಸಂಗ್ರಹವಾಗಿ ಹೇಳುತ್ತೇನೆ. ಇದು ವರೆಗೂ ನಾನು ಯಾರಿಗೂ ಇದನ್ನು ಹೇಳಿರಲಿಲ್ಲ. ||೧||

ಸಜಾತೀಯ ವಿಜಾತೀಯ ಸ್ವಗತಭೇದರಹಿತನಾದ, ಸಚ್ಚಿದಾನಂದಸ್ವರೂಪನಾದ ಆರು ಭಾವವಿಕಾರವಿಲ್ಲದವನಾದ, ಶುದ್ಧನಾದ ಪರಶಿವನು ತನ್ನ ಶಕ್ತಿಯ ಮಹಿಮೆಯಿಂದಲೇ ಐದು ರೂಪವುಳ್ಳವನಾಗಿದಾನೆ. ಸೃಷ್ಟಿಶಕ್ತಿಯಿಂದ ಕೂಡಿರುವಾಗ ಸದ್ಯೋಜಾತನೆಂದೂ, ಪಾಲನಶಕ್ತಿಯಿಂದ ಕೂಡಿರುವಾಗ ವಾಮದೇವ

ಈಶಾನಶ್ಚೇತಿ ತತ್ಪೂರ್ವ ಪುರುಷಶ್ಚೇತಿ ಸುವ್ರತಾಃ ।
ಅಘೋರಶ್ಚೇತಿ ವಿಪ್ರೇಂದ್ರಾ ವಾಮದೇವ ಇತಿ ದ್ವಿಜಾಃ ॥೩॥

ಸದ್ಯೋಜಾತ ಇತಿ ಪ್ರಾಜ್ಞಾ ನ ಸ್ವರೂಪೇಣ ಭೇದಿನಃ ।
ತತ್ರೈವಂ ಸತಿ ಶಬ್ದಸ್ತು ಸಾಕ್ಷಾದೀಶಾನಸಂಜ್ಞಿತಃ ॥೪॥

ಸ್ಪರ್ಶಃ ತತ್ಪುರುಷೋ ರೂಪಂ ಅಘೋರಃ ಪರಿಕೀರ್ತಿತಃ ।
ವಾಮದೇವೋ ರಸಃ ಪ್ರೋಕ್ತಃ ಗಂಧಸ್ಸದ್ಯ ಉದಾಹೃತಃ ॥೫॥

ಸದಾಶಿವೇಶ್ವರೌ ರುದ್ರೋ ವಿಷ್ಣುಃ ಬ್ರಹ್ಮಾ ಚ ಸುವ್ರತಾಃ ।
ಕ್ರಮಾಚ್ಛಬ್ದಾದಿರೂಪಾಣಾಂ (ಭೂತಾನಾಂ) ದೇವತಾಶ್ಚ ಪ್ರಕೀರ್ತಿತಾಃ ॥

ನೆಂದೂ, ಸಂಹಾರಶಕ್ತಿಯಿಂದ ಕೂಡಿರುವಾಗ ಅಘೋರನೆಂದೂ, ತಿರೋಭಾವ ಶಕ್ತಿಯಿಂದ ಕೂಡಿರುವಾಗ ತತ್ಪುರುಷನೆಂದೂ, ಅನುಗ್ರಹಶಕ್ತಿಯಿಂದ ಕೂಡಿರುವಾಗ ಚಿನ್ಮಾತ್ರಸ್ವರೂಪನಾದ ಈಶಾನನೆಂದೂ ಪ್ರಸಿದ್ಧನಾಗಿದಾನೆ. ||೨||

ಸರ್ವಲೋಕಕ್ಕೂ ಒಡೆಯನಾದುದರಿಂದ ಈಶಾನನೆಂದೂ, ಆಯಾಯ ಶರೀರಗಳಲ್ಲಿರುವವನಾದುದರಿಂದ ತತ್ಪುರುಷನೆಂದೂ, ಭಯಂಕರನಲ್ಲದ್ದರಿಂದ, ಪಾಪಗಳನ್ನು ನಿವಾರಿಸುವುದರಿಂದ ಅಘೋರನೆಂದೂ, ಧರ್ಮಾರ್ಥಕಾಮಗಳಿಗಿಂತ ಶ್ರೇಷ್ಠನಾದುದರಿಂದ ವಾಮದೇವನೆಂದೂ, ಈ ಪರಶಿವನಿಗೆ ವ್ಯವಹಾರವಿದೆ. ಯಾರ ಇಚ್ಛಾಮಾತ್ರದಿಂದ ಎಲ್ಲ ಶರೀರಗಳೂ ಉಂಟಾಗುತ್ತವೋ, ಅಂಥ ಪರಶಿವನಿಗೆ ಸದ್ಯೋಜಾತನೆಂದು ವ್ಯವಹಾರವಿದೆ. ಇವೆಲ್ಲವೂ ವ್ಯಾವಹಾರಿಕಭೇದವೇ ಎಂದರೆ, ಔಪಾಧಿಕಭೇದವೇ ಹೊರತು, ಸ್ವಾಭಾವಿಕವಾದ ಪಾರಮಾರ್ಥಿಕವಾದುದಲ್ಲವು. ||೩||

ಹಾಗೆಯೇ ಶಬ್ದವು ಈಶಾನರೂಪವಾದುದು, ಸ್ಪರ್ಶವು ತತ್ಪುರುಷಸ್ವರೂಪವಾದುದು, ರೂಪವು ಅಘೋರರೂಪವಾದುದು, ರಸವು ವಾಮದೇವರೂಪವಾದುದು, ಗಂಧವು ಸದ್ಯೋಜಾತಸ್ವರೂಪವಾದುದೆಂದು ಪಂಚಭೂತಗುಣಗಳನ್ನು ಹೇಳಿದೆ. ||೪-೫||

ಶಬ್ದಸ್ಪರ್ಶರೂಪರಸಗಂಧತನ್ಮಾತ್ರಾರೂಪವಾದ ಭೂತಗಳಿಗೆ ಕ್ರಮವಾಗಿ ಸದಾಶಿವ, ಈಶ್ವರ, ರುದ್ರ, ವಿಷ್ಣು, ಬ್ರಹ್ಮರು ಅಭಿಮಾನಿದೇವತೆಗಳೆಂದು ಹೇಳಿದೆ. ||೬||

ತಾಶ್ಚೇಶಾನಾದಯಃ ಪ್ರೋಕ್ತಾಃ ಕ್ರಮೇಣೈವ ಮುನೀಶ್ವರಾಃ ।
ಸರ್ವಾಣ್ಯೇತಾನಿ ವಿಪ್ರೇಂದ್ರಾಶ್ಶಿವ ಏವ ನ ಸಂಶಯಃ ॥೭॥

ಏತಾನಿ ಶಿವರೂಪೇಣ ಪಶ್ಯನ್ಮುಚ್ಯೇತ ಬಂಧನಾತ್ ।
ಆಕಾಶಾಖ್ಯಂ ಮಹಾಭೂತಂ ಈಶಾನಃ ಪರಿಕೀರ್ತಿತಃ ॥೮॥

ವಾಯುಸ್ತತ್ಪುರುಷೋ ಜ್ಞೇಯಃ ವಹ್ನಿಶ್ಚಾಘೋರ ಈರಿತಃ ।
ಅಂಭೋ ವಾಮಃ ತಥಾ ಭೂಮಿಸ್ಸದ್ಯೋಜಾತಃ ಪ್ರಕೀರ್ತಿತಃ ॥೯॥

ಅನಂತಶಿವಸಂಜ್ಞಶ್ಚ ತಥಾಽನಂತೇಶ್ವರಾಭಿಧಃ ।
ಕಾಲಾಗ್ನಿರುದ್ರೋ ವಿಪ್ರೇಂದ್ರಾಃ ತಥಾ ನಾರಾಯಣಾಭಿಧಃ ॥೧೦॥

ಬ್ರಹ್ಮಾ ಚತುರ್ಮುಖಸ್ಸಾಕ್ಷಾತ್ ಆಕಾಶಾದೇಸ್ತು ದೇವತಾಃ ।
ಏತಾನಿ ಶಿವರೂಪೇಣ ಪಶ್ಯನ್ಮುಚ್ಯೇತ ಬಂಧನಾತ್ ॥೧೧॥

ಶಬ್ದಾದಿಭೂತಗಳಿಗೆ ಅಭಿಮಾನಿಗಳಾದ ಸದಾಶಿವಾದಿ ದೇವತೆಗಳೂ ಕ್ರಮವಾಗಿ ಈಶಾನಾದಿಸ್ವರೂಪರೆಂದು ಹೇಳಿದೆ. ಇವರೆಲ್ಲರೂ ಪರಶಿವಸ್ವರೂಪರೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲವು. ॥೭॥

ಇವರೆಲ್ಲರನ್ನೂ ಶಿವಸ್ವರೂಪರೆಂದು ತಿಳಿಯುವವರು ಸಂಸಾರವೆಂಬ ಸಂಕೋಲೆಯಿಂದ ಮುಕ್ತರಾಗುತ್ತಾರೆ. ನಿಕೃಷ್ಟವಾದ ಪ್ರತೀಕಗಳಲ್ಲಿ ಉತ್ಕೃಷ್ಟತತ್ವದ ಭಾವನೆಯೇ ಉಪಾಸನೆಯು. ಈ ಉಪಾಸನೆಯಿಂದ ಜ್ಞಾನವಾಗುತ್ತದೆ. ಎಂದುಭಾವವು.

ಸ್ಥೂಲಭೂತಗಳಾದ ಆಕಾಶ, ವಾಯು, ವಹ್ನಿ, ಜಲ, ಭೂಮಿಗಳಿಗೆ ಕ್ರಮವಾಗಿ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತರು ಅಭಿಮಾನಿದೇವತೆಗಳೆಂದು ಹೇಳಿದೆ. ಸೂಕ್ಷ್ಮಭೂತಗಳಿಗೆ ಸದಾಶಿವಾದಿಗಳು ಅಭಿಮಾನಿಗಳು. ॥೮-೯॥

ಅನಂತಶಿವ, ಅನಂತೇಶ್ವರ, ಕಾಲಾಗ್ನಿರುದ್ರ, ನಾರಾಯಣ, ಚತುರ್ಮುಖಬ್ರಹ್ಮ, ಈ ಐವರೂ ಆಕಾಶಾದಿ ಭೂತಗಳಿಗೆ ಅಧಿಷ್ಠಾತೃದೇವತೆಗಳೆಂದು ಉಪಾಸನೆಗಾಗಿ ಹೇಳಿದೆ. ॥೧೦॥

ಇವರೆಲ್ಲರನ್ನೂ ಪರಶಿವಸ್ವರೂಪರೆಂದು ತಿಳಿದವರು ಸಂಸಾರದ ಬಲೆಯಿಂದ ಮುಕ್ತರಾಗುತ್ತಾರೆ. ॥೧೧॥

ಶ್ರೋತ್ರಮೀಶಾನ ಏವ ಸ್ಯಾತ್ ತ್ವಕ್ಚ ತತ್ಪುರುಷಸ್ಸ್ಮೃತಃ ।
ಚಕ್ಷುಶ್ಚಾಘೋರ ಏವ ಸ್ಯಾತ್ ಜಿಹ್ವಾ ವಾಮಸ್ಸಮೀರಿತಃ ॥೧೨॥

ಘ್ರಾಣಂ ಸದ್ಯಸ್ಸಮಾಖ್ಯಾತಃ ಕ್ರಮಾತ್ತ್ವಾನಾಂ ಮುನೀಶ್ವರಾಃ ॥೧೩॥

ದಿಗ್ವಾಯ್ವಾದಿತ್ಯವರುಣಪೃಥಿವ್ಯಾಖ್ಯಾಸ್ತು ದೇವತಾಃ ।
ಏತಾನಿ ಶಿವರೂಪೇಣ ಪಶ್ಯನ್ಮುಚ್ಯೇತ ಬಂಧನಾತ್ ॥೧೪॥

ಪಾದ ಈಶಾನ ಏವ ಸ್ಯಾತ್ ಪಾಣಿಸ್ತತ್ಪುರುಷಸ್ಸ್ಮೃತಃ ।
ವಾಗಘೋರ ಇತಿ ಪ್ರೋಕ್ತೋ ಹ್ಯುಪಸ್ಥೋ ವಾಮ ಈರಿತಃ ॥೧೫॥

ಪಾಯುಸ್ಸದ್ಯ ಇತಿ ಪ್ರೋಕ್ತಃ ಸಾಕ್ಷಾದ್ವೇದಾಂತಪಾರಗೈಃ ।
ತ್ರಿವಿಕ್ರಮಸ್ತಥಾ ಚೇಂದ್ರೋ ವಹ್ನಿಶ್ಚೈವ ಪ್ರಜಾಪತಿಃ ॥೧೬॥

ಮಿತ್ರಶ್ಚ ಮುನಿಶಾರ್ದೂಲಾಃ ಕ್ರಮಾತ್ತ್ವಾನಾಂ ಚ ದೇವತಾಃ ।
ಏತಾನಿ ಶಿವರೂಪೇಣ ಪಶ್ಯನ್ಮುಚ್ಯೇತ ಬಂಧನಾತ್ ॥೧೭॥

ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಎಂಬ ಐದು ಜ್ಞಾನೇಂದ್ರಿಯಗಳಿಗೆ ಕ್ರಮವಾಗಿ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ ಎಂಬ ಐವರು ಅಧಿಷ್ಠಾತೃದೇವತೆಗಳೆಂದು ಹೇಳಿದೆ. ॥೧೨॥

ಈ ಘ್ರಾಣವೇ ಮೊದಲಾದವುಗಳಿಗೆ ಕ್ರಮವಾಗಿ ದಿಕ್, ವಾಯು, ಆದಿತ್ಯ, ವರುಣ, ಪೃಥಿವೀ ಇವುಗಳು ಅಧಿಪತಿಗಳೆಂದೂ, ಅವರೆಲ್ಲರೂ ಪರಶಿವಸ್ವರೂಪರೆಂದೂ ಉಪಾಸನೆಮಾಡಿ ಸಂಸಾರಬಂಧದಿಂದ ಬಿಡುಗಡೆಹೊಂದುತ್ತಾನೆ. ॥೧೩-೧೪॥

ಪಾದ, ಪಾಣಿ, ವಾಕ್, ಉಪಸ್ಥ, ಪಾಯು ಈ ಐದು ಕರ್ಮೇಂದ್ರಿಯಗಳಿಗೆ ಕ್ರಮವಾಗಿ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ ಇವರು ಸ್ವರೂಪರಾಗಿಯೂ; ತ್ರಿವಿಕ್ರಮ, ಇಂದ್ರ, ಅಗ್ನಿ, ಪ್ರಜಾಪತಿ, ಮಿತ್ರ, ಇವರು ಕ್ರಮವಾಗಿ ಅಧಿದೇವತೆಗಳಾಗಿಯೂ ಇರುತ್ತಾರೆ, ಎಂದು ಉಪಾಸನೆಮಾಡಬೇಕು. ॥೧೫-೧೬॥

ಇವರೆಲ್ಲರನ್ನೂ ಶಿವಸ್ವರೂಪರೆಂದು ತಿಳಿಯುವವನು ಸಂಸಾರದಿಂದ ಬಿಡುಗಡೆಯನ್ನು ಪಡೆಯುತ್ತಾನೆ. ॥೧೭॥

ಮನ ಈಶಾನ ಏವ ಸ್ಯಾತ್ ಬುದ್ಧಿಸ್ತತ್ಪುರುಷಸ್ಸ್ಮೃತಃ ।
ಅಹಂಕಾರಸ್ತ್ವಘೋರಸ್ಸ್ಯಾಚ್ಚಿತ್ತಂ ವಾಮಸ್ಸಮೀರಿತಃ ॥೧೮॥

ಏಷಾಂ ಚ ಕಾರಣಂ ವಿಪ್ರಾ ಅಂತಃಕರಣಸಂಜ್ಞಿತಂ ।
ಸದ್ಯೋಜಾತ ಇತಿ ಪ್ರೋಕ್ತಂ ಸರ್ವವೇದಾರ್ಥಪಾರಗೈಃ ॥೧೯॥

ಮನಸೋ ದೇವತಾ ಚಂದ್ರೋ ಬುದ್ಧೇರ್ವಾಚಸ್ಪತಿಸ್ತಥಾ ।
ಅಹಂಕಾರಸ್ಯ ಕಾಲಾಗ್ನಿರುದ್ರಃ ಕಾಲಹರೋಽಪಿ ವಾ ॥೨೦॥

ಚಿತ್ತಸ್ಯ ದೇವತಾ ದೇವೀ ಶಿವೋಽಂತಃಕರಣಸ್ಯ ತು ।
ಹಿರಣ್ಯಗರ್ಭೋ ಭಗವಾನ್ ದೇವತಾ ಮುನಿಪುಂಗವಾಃ ॥೨೧॥

ಏತಾನ್ ಹಿ ಶಿವರೂಪೇಣ ಪಶ್ಯನ್ಮುಚ್ಯೇತ ಬಂಧನಾತ್ ।
ಪ್ರಾಣ ಈಶಾನ ಏವ ಸ್ಯಾತ್ ಅಪಾನಃ ಪುರುಷಸ್ಸ್ಮೃತಃ ॥೨೨॥

ವ್ಯಾನೋಽಘೋರಸ್ತಥೋದಾನಃ ವಾಮದೇವಸ್ಸಮೀರಿತಃ ।
ಸಮಾನಸ್ಸದ್ಯ ಏವ ಸ್ಯಾತ್ ಸೂತ್ರಾತ್ಮಾ ಕಾರಣೋಽನಿಲಃ ॥೨೩॥

ಮನಸ್ಸು, ಬುದ್ಧಿ, ಅಹಂಕಾರ, ಚಿತ್ತಗಳು ಇವಕ್ಕೆ ಕಾರಣವಾದ ಅಂತಃಕರಣ ಇವುಗಳಿಗೆ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ ಇವರು ಸ್ವರೂಪರಾಗಿಯೂ ಇರುತ್ತಾರೆಂದು ವೇದಾರ್ಥಜ್ಞಾನಿಗಳು ಹೇಳುತ್ತಾರೆ. ||೧೮-೧೯||

ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಅಂತಃಕರಣ ಇವುಗಳಿಗೆ ಕ್ರಮವಾಗಿ ಚಂದ್ರ, ಗುರು, ದೇವೀ, ಶಿವ, ಹಿರಣ್ಯಗರ್ಭ ಇವರು ಅಧಿಪತಿಗಳಾಗಿರುತ್ತಾರೆ. ಇವರನ್ನು ಶಿವರೂಪದಿಂದ ಉಪಾಸನೆಮಾಡುವವವರು ಸಂಸಾರದ ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾರೆ. ||೨೦-೨೧||

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ಎಂಬ ಈ ಐದು ಪ್ರಾಣ ವಾಯುಗಳಿಗೆ ಕ್ರಮವಾಗಿ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ ಇವರೂ, ಸೂತ್ರಾತ್ಮನಾದ ಸಮಷ್ಟಿಲಿಂಗಶರೀರಾಭಿಮಾನಿಯಾದ ಹಿರಣ್ಯಗರ್ಭನೂ ಸ್ವರೂಪರಾಗಿಯೂ ಇರುತ್ತಾರೆ. ||೨೨-೨೩||

ವಿಶಿಷ್ಟೋ ವಿಶ್ವಸೃಷ್ಟಿಶ್ಚ ವಿಶ್ವಯೋನಿರಜಾ ಜಯಾ ।
ಕ್ರಮೇಣ ದೇವತಾಃ ಪ್ರೋಕ್ತಾಃ ಪ್ರಾಣಾದೀನಾಂ ಮುನೀಶ್ವರಾಃ॥೨೪॥

ಏತಾನಿ ಶಿವರೂಪೇಣ ಪಶ್ಯನ್ಮುಚ್ಯೇತ ಬಂಧನಾತ್ ।
ಪೃಥಿವ್ಯಾದಿಷು ಭೂತೇಷು ಯೋ ಗುಣಸ್ಸತ್ತ್ವಸಂಜ್ಞಿತಃ ॥೨೫॥

ಸ ಕ್ರಮೇಣ ನಿವೃತ್ತ್ಯಾದಿ ಕಲಾಸಂಜ್ಞಾಮುಪೈತಿ ಚ ।
ಭೂಮೌ ನಿವೃತ್ತಿರ್ವಿಪ್ರೇಂದ್ರಾಃ ಪ್ರತಿಷ್ಠಾ ಪಯಸಿ ಸ್ಥಿತಾ ॥೨೬॥

ವಿದ್ಯಾ ವಹ್ನೌ ತಥಾ ಶಾಂತಿಃ ವಾಯೌ ವ್ಯೋಮ್ನಿ ಮುನೀಶ್ವರಾ ।
ಶಾಂತ್ಯತೀತಾ ಕಲಾ ಚೈತಾ ವ್ಯುತ್ಕ್ರಮೇಣ ಮುನೀಶ್ವರಾಃ ॥೨೭॥
ಭವಂತಿ ಪಂಚಬ್ರಹ್ಮಾಣಿ ತಥಾ ಭೂತೇಷು ಪಂಚಸು ।

ವಿಶಿಷ್ಟ, ವಿಶ್ವಸೃಷ್ಟಿ, ವಿಶ್ವಯೋನಿ, ಅಜಾ, ಜಯಾ ಇವರು ಕ್ರಮವಾಗಿ ಪ್ರಾಣಾದಿಗಳಿಗೆ ಅಧಿದೇವತೆಗಳೆಂದು ಹೇಳಿದೆ. ಇವರನ್ನು ಪರಶಿವರೂಪದಿಂದ ನೋಡುವ ಉಪಾಸಕರು ಸಂಸಾರದಿಂದ ಬಿಡುಗಡೆಯನ್ನು ಹೊಂದುತ್ತಾರೆ. ||೨೪||

ಪೃಥಿವಿಯಲ್ಲಿರುವ ಸತ್ತ್ವಗುಣವು ವಿಷಯಭೋಗನಿವೃತ್ತಿಗೆ ಕಾರಣವಾಗಿ ನಿವೃತ್ತಿಕಲಾ ಎಂಬ ಸಂಜ್ಞೆಯನ್ನು ಪಡೆಯುತ್ತದೆ. ||೨೫||

ಭೂಮಿಯಲ್ಲಿ ನಿವೃತ್ತಿಕಲೆಯೂ, ಜಲದಲ್ಲಿ ಪ್ರತಿಷ್ಠಾನಾಮಕ ಕಲೆಯೂ (ಪುರುಷತತ್ತ್ವದಲ್ಲಿ ಅಚೇತನತತ್ತ್ವಗಳನ್ನು ಶಿವಭಕ್ತಿಯಿಂದ ನಿಲ್ಲಿಸುತ್ತದೆಯಾದುದರಿಂದ ಪ್ರತಿಷ್ಠಾ ಎಂದು ಸಂಜ್ಞೆಯು.), ತೇಜಸ್ಸಿನಲ್ಲಿ ವಿದ್ಯಾಕಲೆಯೂ (ಮಾಯಾ ಮತ್ತು ಅದರ ಕಾರ್ಯಗಳನ್ನು ವಿವೇಚಿಸುವ ತಿಳಿವಳಿಕೆ), ವಾಯುವಿನಲ್ಲಿ ಶಾಂತಿ ಕಲೆಯೂ (ಮಾಯಾವಿಕಾರಗಳಾದ ಕಾಮುಕರ್ಮರಾಗದ್ವೇಷಾದಿ ಮಲವನ್ನು ಶಾಂತಿಗೊಳಿಸುವುದರಿಂದ.), ಆಕಾಶದಲ್ಲಿ ಶಾಂತ್ಯತೀತಕಲೆಯೂ (ಶಾಂತಿಯನ್ನೂ ದಾಟಿ ಅದ್ವೈತನಿರ್ವಾಣಾನಂದಾನುಭವವನ್ನುಂಟುಮಾಡುವುದರಿಂದ) ಈ ಐದೂ ಅಂದರೆ ಶಾಂತ್ಯತೀತ, ಶಾಂತಿ, ವಿದ್ಯಾ, ಪ್ರತಿಷ್ಠಾ, ನಿವೃತ್ತಿಕಲೆಗಳು ಕ್ರಮವಾಗಿ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತಸ್ವರೂಪಗಳಾಗಿರುತ್ತವೆ. ||೨೬-೨೭||

ಸ್ಥಿತೋ ರಜೋಗುಣೋ ವಿಪ್ರಾ ಆಕಾಶಾದಿಕ್ರಮೇಣ ಚ ॥೨೮॥

ಸ್ಪಂದಶ್ಚೈವ ಪರಿಸ್ಪಂದಃ ಪ್ರಕ್ರಮಃ ಪರಿಶೀಲನಂ ।
ಪ್ರಚಾರ ಇತಿ ವಿದ್ವದ್ಭಿಃ ಕಥಿತಾಃ ಪಂಚ ಚ ಕ್ರಿಯಾಃ ॥೨೯॥

ಏತಾನಿ ಪಂಚ ಬ್ರಹ್ಮಾಣಿ ಭವಂತಿ ಮುನಿಸತ್ತಮಾಃ ।
ತಥಾ ಭೂತೇಷು ಸರ್ವೇಷು ಸಂಸ್ಥಿತಸ್ತು ತಮೋಗುಣಃ ॥೩೦॥

ಛಾದಕಂ ಬಾಧಕಂ ಮುಗ್ಧಂ ನೋದಕಂ ಭಂಜಕಂ ಭವೇತ್ ।
ಏತಾನಿ ಚ ತಥಾ ಪಂಚ ಬ್ರಹ್ಮಾಣಿ ಮುನಿಸತ್ತಮಾಃ ॥೩೧॥

ಏತಾನಿ ಶಿವರೂಪೇಣ ಪಶ್ಯನ್ಮುಚ್ಯೇತ ಬಂಧನಾತ್ ।
ಅನ್ಯಾನಿ ಯಾನಿ ವಿಪ್ರೇಂದ್ರಾಃ ಪಂಚಧಾ ಸಂಸ್ಥಿತಾನಿ ಚ ।
ತಾನಿ ಚ ಬ್ರಾಹ್ಮಣಾಃ ಪಂಚ ಬ್ರಹ್ಮಾಣಿ ಸ್ಯುಃ ನ ಸಂಶಯಃ ॥೩೨॥

ಪಂಚಬ್ರಹ್ಮತಯಾ ಭಿನ್ನಂ ಜಗತ್ಸರ್ವಂ ಚರಾಚರಂ ।
ಶಿವರೂಪೇಣ ಸಂಪಶ್ಯನ್ಮುಚ್ಯತೇ ಭವಬಂಧನಾತ್ ॥೩೩॥

ರಜೋಗುಣವು ಆಕಾಶ, ವಾಯು, ತೇಜಸ್ಸು, ಜಲ, ಪೃಥಿವಿಗಳಲ್ಲಿ ಕ್ರಮವಾಗಿ ಸ್ಪಂದ, ಪರಿಸ್ಪಂದ, ಪ್ರಕ್ರಮ, ಪರಿಶೀಲನ ಪ್ರಚಾರರೂಪವಾದ ಐದು ಕ್ರಿಯಾರೂಪಗಳಾಗಿರುತ್ತದೆ. ॥೨೮-೨೯॥

ಈ ಐದು ಭೂತಗಳಲ್ಲಿರುವ ತಮೋಗುಣವು ಛಾದಕ (ದೃಷ್ಟಿಯನ್ನು ಮರೆಮಾಡುವ), ಬಾಧಕ, ನಾಶಕ; ಮುಗ್ಧ, (ಮೋಹಕ) ನೋದಕ, ಪ್ರೇರಕ; ಭಂಜಕ ಮುರಿಯುವ ರೂಪವಾಗಿರುತ್ತದೆ. ॥೩೦॥

ಈ ಐದು ಈಶಾನಾದಿರೂಪವಾಗಿವೆ. ಇವನ್ನು ಪರಶಿವರೂಪದಿಂದ ಉಪಾಸನೆ ಮಾಡುವವನು ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದುತ್ತಾನೆ. ॥೩೧॥

ಇನ್ನೂ ಇತರವಾದ ಪ್ರಾಣಾಪಾನಗತಿ ಮುಂತಾದವೂ ಕ್ರಮವಾಗಿ ಈಶಾನಾದಿಸ್ವರೂಪಗಳಾಗಿವೆ. ಈ ಚರಾಚರಪ್ರಪಂಚವೆಲ್ಲವೂ ಈಶಾನಾದಿ ಪಂಚಬ್ರಹ್ಮರೂಪವಾದುದರಿಂದ ಇದನ್ನು ಪರಶಿವಸ್ವರೂಪವಾದುದೆಂದು ಉಪಾಸನೆಮಾಡುವವನು ಸಂಸಾರಬಂಧದಿಂದ ಬಿಡುಗಡೆಹೊಂದುತ್ತಾನೆ. ॥೩೨-೩೩॥

ಮಾಯಯೈವ ಶಿವಸ್ಸಾಕ್ಷಾತ್ಪಂಚಧಾ ಸಮವಸ್ಥಿತಃ ।
ಸಾ ಶಿವಸ್ಯ ಸದಾ ಮಾಯಾ ಸರ್ವದುರ್ಘಟಕಾರಿಣೀ ॥೩೪॥

ಏವಮಾತ್ಮಿಕಯಾ ಬ್ರಹ್ಮಮಾಯಯಾ ಕಾರಣಂ ಭವೇತ್ ।
ತತ್ಸರ್ವಂ ಚ ತಥಾऽನ್ಯೇಷಾಂ ನಿಯಂತೃ ನ ನಿರೂಪಣೇ ॥೩೫॥

ವಸ್ತುತಶ್ಶಂಭುರಾನಂದಃ ಸತ್ಯಸಂಪೂರ್ಣ ಚಿದ್ಘನಃ ।
ಮಾಯಯಾ ಮೋಹಿತಾ ಮರ್ತ್ಯಾಃ ತಂ ಭೇದೇನ ವಿದುರ್ಬುಧಾಃ ॥೩೬॥

ದಾಸೋऽಹಮಿತಿ ಸಂಮೋಹಃ ತತಸ್ಸೋऽಹಮಿತಿ ಭ್ರಮಃ ।
ಅಹಂ ಸ ಇತಿ ಸಂಮೋಹಃ ತಥಾ ತ್ರೀಣಿ ಪರಿತ್ಯಜೇತ್ ॥೩೭॥

ಪರಶಿವನು ಕ್ರಿಯಾರಹಿತನೂ, ಸಂಗರಹಿತನೂ ಆದರೂ ಮಾಯಾಸಂಬಂಧದಿಂದ ಈ ಮೇಲೆ ಹೇಳಿದ ಪಂಚಸ್ವರೂಪವಾಗಿರುತ್ತಾನೆ. ಪರಶಿವನ ಈ ಮಾಯೆಯು ಯಾವಾಗಲೂ ಅಘಟನಘಟನಾಸಮರ್ಥವಾಗಿರುತ್ತದೆ. ॥೩೪॥

ಇಂಥ ದುರ್ಘಟಘಟನೆಯಲ್ಲಿ ಸಮರ್ಥವಾದ ಮಾಯೆಯ ಸಂಬಂಧದಿಂದ ಅಕ್ರಿಯ ಅಸಂಗವಾದ ಬ್ರಹ್ಮಕ್ಕೂ ಕಾರಣತ್ವ ಬರುತ್ತದೆ. ಇದೆಲ್ಲವೂ ಎಂದರೆ ಜಗತ್ಕಾರಣತ್ವ ಸರ್ವಜಗದಾತ್ಮಕತ್ವ, ಇತರ ಜಗನ್ನಿಯಂತೃತ್ವ ಮುಂತಾದುವೆಲ್ಲವೂ ಮಾಯಾಸಂಬಂಧವನ್ನು ಅವಲಂಬಿಸಿದೆ. ಪರಶಿವನ ಪಾರಮಾರ್ಥಿಕಸ್ವರೂಪದಲ್ಲಿ ಇದೊಂದೂ ಇಲ್ಲವು. ॥೩೫॥

ವಾಸ್ತವವಾಗಿ ಪರಶಿವನು ಸಚ್ಚಿದಾನಂದರೂಪನೂ ಸರ್ವಪೂರ್ಣನೂ ಆಗಿದಾನೆ. ಅಜ್ಞಾನದಿಂದ ಮಾನವರು ಆ ಶಿವನನ್ನು ಬೇರೆಯಾಗಿರುವಂತೆ ಭ್ರಮಿಸುತ್ತಾರೆ. ॥೩೬॥

ನಾನು ಪರಶಿವನಿಗೆ ದಾಸನೆಂದೂ, ಆಮೇಲೆ ಆ ಶಿವನೇ ನಾನೆಂದೂ, ನಾನೇ ಆ ಶಿವನೆಂದೂ ಉಂಟಾಗುವ ಮುಮುಕ್ಷುವ್ಯವಹಾರವೂ ವೃತ್ತಿರೂಪವಾಗಿ ಭ್ರಮವೆನಿಸುತ್ತದೆ. ಆದುದರಿಂದ ಆ ಮೂರನ್ನೂ ಬಿಡಬೇಕು, ಮೀರಬೇಕು, ಕೇವಲಾತ್ಮಸ್ವರೂಪಾನುಸಂಧಾನಮಾಡಬೇಕು. ॥೩೭॥

ನಿರ್ಭೇದೇ ನಿರ್ಮಲೇ ನಿತ್ಯೇ ನಿರಾಧಾರೇ ನಿರಂಜನೇ ।
ದಾಸಸ್ಸೋಽಹಮಹಂ ಸೋಽಪೀತ್ಯಾತ್ಮನ್ಯೇತತ್ಕಥಂ ಭವೇತ್ ॥೩೮॥

ತಸ್ಮಾದಜ್ಞಾನಮಾಯೋತ್ಥಂ ಇದಂ ಸರ್ವಂ ಜಗದ್ಬುಧಾಃ ।
ತದ್ವಿವೇಕೇ ಪ್ರದೀಪೇನ ಶಿವಂ ಪಶ್ಯನ್ ವಿಮುಚ್ಯತೇ ॥೩೯॥

ವಿವೇಕಾಲೋಕಹಸ್ತಸ್ಯ ಜ್ಞಾನಮಾರ್ಗೇಣ ಗಚ್ಛತಃ ।
ಸ್ವಾತ್ಮಮುಕ್ತಿಗೃಹಪ್ರಾಪ್ತಿಃ ಸಿದ್ಧ್ಯತ್ಯೇವಾಚಿರೇಣ ತು ॥೪೦॥

ಸಂಸಾರಾರ್ಣವಮಗ್ನಾನಾಂ ಜಂತೂನಾಮವಿವೇಕಿನಾಂ ।
ಅಗತೀನಾಂ ಗತಿಸ್ಸಾಕ್ಷಾತ್ ಜ್ಞಾನಮೇವ ಹಿ ಕೇವಲಂ ॥೪೧॥

ಸ್ವಶಕ್ತೇಶ್ಶತ್ರುಭೂತಾನಾಂ ರಾಗಾದೀನಾಂ ದುರಾತ್ಮನಾಂ ।
ಛೇದನೇ ವೇದನಂ ಶಸ್ತ್ರಂ ಕೇವಲಂ ಖಲು ನೇತರತ್ ॥೪೨॥

ಭೇದರಹಿತನಾದ, ಧರ್ಮಾಧರ್ಮರಹಿತನಾದ, ನಿತ್ಯನಾದ, ನಿರಾಧಾರನಾದ, ಮಾಯಾ ತತ್ಕಾರ್ಯಗಳಿಂದ ಲೇಪವನ್ನು ಪಡೆಯದೆ ಇರುವ ಪರಶಿವನಲ್ಲಿ ನಾನು ದಾಸನು, ಅವನೇ ನಾನು ಎಂದು ಮುಂತಾದ ಭೇದದ ವೃತ್ತಿವ್ಯವಹಾರಗಳು ಹೇಗೆತಾನೆ ಸಂಭವಿಸಿಯಾವು ? ||೩೮||

ಆದುದರಿಂದ ಈ ಪ್ರಪಂಚವೆಲ್ಲವೂ ಸ್ವಸ್ವರೂಪಾಜ್ಞಾನರೂಪವಾದ ಮಾಯೆಯಿಂದುಂಟಾಗಿರುವಂತೆ ತೋರುತ್ತಿರುವುದು. ವಿವೇಚನವೆಂಬ ದೀಪದ ಸಹಾಯದಿಂದ ಪರಶಿವನ ಪಾರಮಾರ್ಥಿಕಸ್ವರೂಪವನ್ನು ತಿಳಿದು ಮುಕ್ತನಾಗಬೇಕು. ||೩೯||

ವಿವೇಚನೆ ಎಂಬ ಬೆಳಕನ್ನು ಕೈಯಲ್ಲಿ ಹಿಡಿದುಕೊಂಡು ಜ್ಞಾನವೆಂಬ ದಾರಿಯಲ್ಲಿ ಹೋಗುತ್ತಿರುವವನಿಗೆ ಸಂಸಾರದಿಂದ ಮುಕ್ತಿ ಎಂಬ, ಸ್ವಸ್ವರೂಪಪ್ರಾಪ್ತಿ ಎಂಬ, ತನ್ನ ಮನೆಯನ್ನು ಪಡೆಯುವಿಕೆಯು ಜಾಗ್ರತೆಯಾಗಿ ಸಿದ್ಧಿಸುತ್ತದೆ. ಸಂದೇಹವಿಲ್ಲವು. ||೪೦||

ಸಂಸಾರಸಾಗರದಲ್ಲಿ ಮುಳುಗಿರುವ ವಿವೇಕವಿಲ್ಲದ ಪ್ರಾಣಿಗಳಿಗೆ ಜ್ಞಾನ ಒಂದೇ, ಜೀವಬ್ರಹ್ಮಾಭೇದಸಾಕ್ಷಾತ್ಕಾರ ಒಂದೇ, ರಕ್ಷಣಮಾರ್ಗವು. ||೪೧||

ತನ್ನ ಚಿಚ್ಛಕ್ತಿಯ ಸ್ವರೂಪವನ್ನು ಶತ್ರುಗಳಂತೆ ಮುಚ್ಚಿರುವ ದುಷ್ಟಗಳಾದ ರಾಗದ್ವೇಷಾದಿಗಳನ್ನು ಕತ್ತರಿಸುವುದರಲ್ಲಿ ತಿಳಿವಳಿಕೆಯೊಂದೇ, ಬ್ರಹ್ಮಾತ್ಮೈಕ್ಯ ಸಾಕ್ಷಾತ್ಕಾರ ಒಂದೇ, ಸಾಧನವು. ಬೇರೆ ಸಾಧನವಿಲ್ಲವು. ||೪೨||

ಸಂಸಾರದುಃಖತಪ್ತಾನಾಂ ಆತ್ಮಜ್ಞಾನಾಮೃತಾಂಭಸಾ ।
ತಾಪಶಾಂತಿ ರ್ನ ಚಾನ್ಯೇನ ಸತ್ಯಮೇವ ನ ಸಂಶಯಃ ॥೪೩॥

ಸ್ವತಸ್ಸಿದ್ಧಂ ಸ್ವಯಂ ಸರ್ವಂ ಜಗತ್ಸ್ವೇನ ಪ್ರಕಾಶಿತಂ ।
ಸ್ವಸ್ವರೂಪತಯಾ ಬುದ್ಧ್ವಾ ತದತ್ತಿ ಸ್ವಾತ್ಮನಾ ಸ್ವಯಂ ॥೪೪॥

ಯಥಾ ಸುವರ್ಣಂ ರುಚಕಂ ಸೃಜತಿ ಗ್ರಸತೇ ಸ್ವಯಂ ।
ತಥಾ ಶಂಭುರಿದಂ ಸರ್ವಂ ಸೃಜತಿ ಗ್ರಸತೇ ಸ್ವಯಮ್ ॥೪೫॥

ಕರ್ತೃತ್ವಭೋಕ್ತೃತ್ವ ಜನನಮರಣಚಕ್ರದಲ್ಲಿ ಸಿಕ್ಕಿರುವಿಕೆಯು ದುಃಖವು. ಇದರಿಂದ ತಾಪವನ್ನು ಪಡೆದಿರುವವರ ತಾಪದ ಶಾಂತಿಯು ಆತ್ಮನ ಪಾರಮಾರ್ಥಿಕ ಸ್ವರೂಪಜ್ಞಾನವೆಂಬ, ಅಮೃತದ ಹಾಗೆ ಆನಂದಕರವಾದ, ನೀರಿನಿಂದಲೇ ಆಗುತ್ತದೆ, ಮತ್ತೊಂದರಿಂದ ಆಗುವುದಿಲ್ಲ. ॥೪೩॥

ಈ ಪ್ರಪಂಚವೆಲ್ಲವೂ ಆತ್ಮನ ಸ್ವರೂಪವಾದರೂ ತನ್ನಿಂದಲೇ ಉಂಟಾಗಿರುವಂತೆ ತೋರುತ್ತಿದೆ. ಸ್ವಸ್ವರೂಪದ ಜ್ಞಾನದಿಂದ, ಬ್ರಹ್ಮಾತ್ಮೈಕ್ಯಜ್ಞಾನದಿಂದ, ಅಜ್ಞಾನವು ಹೋದಮೇಲೆ ಅಧಿಷ್ಠಾನ ಮಾತ್ರ ಉಳಿಯಲು, ಸ್ವಸ್ವರೂಪಕ್ಕಿಂತಲೂ ಬೇರೆಯಾಗಿ ಜಗತ್ತಿಲ್ಲವೆಂಬ ಸಾಕ್ಷಾತ್ಕಾರದಿಂದ ಆತ್ಮನು ಅದನ್ನು ನುಂಗಿಬಿಡುತ್ತಾನೆ. ಎಂದರೆ ಅದು ಉಪಸಂಹೃತವಾಗಿ ಇಲ್ಲದ್ದಾಗುತ್ತದೆ. ॥೪೪॥

ಚಿನ್ನದಿಂದಾಗಿರುವ ಆಭರಣಗಳು ಕರಗಿಸುವುದರಿಂದ ಚಿನ್ನವೇ ಆಗುವಂತೆ, ಪರಶಿವನಿಂದ ಈ ಜಗತ್ತು ಉಂಟಾದಂತೆ ತೋರಿ ಕಡೆಗೆ ಅವನಲ್ಲೇ ಲಯವನ್ನು ಹೊಂದುತ್ತದೆ. ಆಭರಣಗಳು ನಾಮರೂಪಗಳಿಂದ ಮಾತ್ರ ಬೇರೆಯಾಗಿರುತ್ತವೆ. ಕರಗಿಸಿದಾಗ ನಾಮರೂಪಗಳು ಮಾತ್ರ ನಷ್ಟವಾಗಿ ಚಿನ್ನವು ಎಂದಿನಂತೆಯೇ ಉಳಿದಿರುತ್ತದೆ. ಹಾಗೆ ಬ್ರಹ್ಮತತ್ವದಲ್ಲಿ ತೋರಿದ ನಾಮರೂಪಾತ್ಮಕವಾದ ಈ ಪ್ರಪಂಚವೆಲ್ಲವೂ ಬ್ರಹ್ಮರೂಪವಾದ ಅಧಿಷ್ಠಾನದ ಜ್ಞಾನದಿಂದ ನಷ್ಟವಾಗಲು, ಬ್ರಹ್ಮತತ್ವವು ಮಾತ್ರ ಎಂದಿನಂತೆಯೇ ಉಳಿದಿರುತ್ತದೆ. ಎಂದು ಭಾವವು. ಚಿನ್ನಕ್ಕೆ ವಿಕಾರವೂ ಪರಿಣಾಮವೂ ಉಂಟು. ಆದರೆ ಬ್ರಹ್ಮತತ್ವಕ್ಕೆ ವಿಕಾರಪರಿಣಾಮಗಳಿಲ್ಲವು. ಏಕೆಂದರೆ ನಾಮರೂಪಗಳು ಕಲ್ಪಿತವಾಗಿ ತೋರಿಕೆಯ ಸ್ವಭಾವವುಳ್ಳವು. ಅದರಿಂದ ಅಧಿಷ್ಠಾನ ತತ್ವಕ್ಕೆ ವಿಕಾರವಾಗಲಾರದು. ಹೇಗೆಂದರೆ ಮರೀಚಿಕೆಯಲ್ಲಿ ತೋರಿದ್ದ ನೀರಿನಿಂದ

ಯಥೋರ್ಣನಾಭಿಃ ಸೃಜತಿ ತಂತುಂ ಗೃಹ್ಣಾತಿ ಚ ಸ್ವಯಂ ।
ತಥಾ ಶಂಭುರಿದಂ ಸರ್ವಂ ಸೃಷ್ಟ್ವಾ ಚ ಗ್ರಸತೇ ಸ್ವಯಮ್ ॥೪೬॥

ಭೂಮಿಃ ಸೃಜತಿ ಗೃಹ್ಣಾತಿ ಯಥೌಷಧಿವನಸ್ಪತೀನ್ ।
ತಥಾ ಶಂಭುರಿದಂ ಸರ್ವಂ ಸೃಷ್ಟ್ವಾ ಚ ಗ್ರಸತೇ ಸ್ವಯಮ್ ॥೪೭॥

ಸ್ವಯಮೇವ ಯಥಾ ಸ್ವಪ್ನಂ ಸೃಷ್ಟ್ವಾ ಗೃಹ್ಣಾತಿ ಚೇತನಃ ।
ತಥಾ ಶಂಭುರಿದಂ ಸರ್ವಂ ಸೃಷ್ಟ್ವಾ ಚ ಗ್ರಸತೇ ಸ್ವಯಮ್ ॥೪೮॥

ಸ್ವಸ್ವಪ್ನಃ ಸ್ವಪ್ರಬೋಧೇನ ಸ್ವಾತ್ಮಮಾತ್ರಂ ಯಥಾ ಭವೇತ್ ।
ತಥೈವ ಸ್ವಪ್ರಪಂಚೋಽಪಿ ಸ್ವಯಂ ಸ್ಯಾತ್ ಸ್ವಪ್ರಬೋಧತಃ ॥೪೯॥

ಆ ಸ್ಥಳವು ನೆನೆಯುವುದಿಲ್ಲವು. ಅದು ತೋರದಿದ್ದಾಗ ಒಣಗುವಿಕೆಯೂ ಉಂಟಾಗುವುದಿಲ್ಲವು. ಎಂದು ಭಾವವು. ॥೪೫॥

ಕಾರಣಾಂತರದ ಅಪೇಕ್ಷೆ ಇಲ್ಲದೆ ಸ್ವತಂತ್ರನಾಗಿ ಶಿವನು ಜಗತ್ತನ್ನು ಸೃಷ್ಟಿ ಮಾಡಿ ಸಂಹರಿಸುತ್ತಾನೆಂಬುದಕ್ಕೆ ದೃಷ್ಟಾಂತವನ್ನು ತಿಳಿಸುತ್ತಾರೆ. ಜೇಡರ ಹುಳುವು ದಾರವನ್ನು ಸೃಷ್ಟಿಸಿ ಉಪಸಂಹರಿಸುವಂತೆ ಶಿವನೂ ಈ ಜಗತ್ತನ್ನು ಸೃಷ್ಟಿಸಿ ಉಪಸಂಹರಿಸುತ್ತಾನೆ. ॥೪೬॥

ಭೂಮಿಯು ಹೇಗೆ ಓಷಧಿ (ಹೂವು ಹಣ್ಣುಗಳನ್ನು ಕೊಡುವ ಬಳ್ಳಿಗಿಡಗಳು) ವನಸ್ಪತಿ (ಹೂವು ಹಣ್ಣುಗಳನ್ನು ಬಿಡದವುಗಳು)ಗಳನ್ನು ಸೃಷ್ಟಿಸಿ ಕಡೆಗೆ ತನ್ನಲ್ಲಿಯೇ ಅಡಗಿಸಿಕೊಳ್ಳುವಂತೆ, ಪರಶಿವನೂ ಈ ಪ್ರಪಂಚವನ್ನು ಸೃಷ್ಟಿಸಿ ಕಡೆಗೆ ತಾನೇ ತನ್ನಲ್ಲಿಯೇ ಅದನ್ನು ಉಪಸಂಹರಿಸುತ್ತಾನೆ. ॥೪೭॥

ಸೃಷ್ಟಿಸಿದ ಈ ಜಗತ್ತು ಅವಿದ್ಯೆಯಿಂದ ಆದುದರಿಂದ ಮಿಥ್ಯಾರೂಪವುಳ್ಳ (ಕಾಲತ್ರಯದಲ್ಲೂ ಯಾವುದು ಇರುವುದಿಲ್ಲವೋ, ಆದರೆ ತೋರುತ್ತಿರುವುದೋ ಅಂಥ) ದ್ದೆಂದು ತಿಳಿಸುತ್ತಾರೆ. ಪ್ರತಿಮಾನವನೂ ತಾನೇ ಸ್ವಪ್ನವನ್ನು ಸೃಷ್ಟಿಸಿ ಉಪಸಂಹರಿಸುತ್ತಾನೆ. ಹಾಗೆಯೇ ಪರಶಿವನೂ. ॥೪೮॥

ತನ್ನಲ್ಲಿ ನಿದ್ರಾದೋಷದಿಂದ ಕಲ್ಪಿತವಾದ ಕನಸ್ಸು ತನ್ನ ಎಚ್ಚರಿಕೆಯಿಂದ ನಷ್ಟವಾಗಿ, ತಾನು (ಚೈತನ್ಯ) ಮಾತ್ರ ಹೇಗೆ ಉಳಿಯುತ್ತದೋ, ಹಾಗೆ ಈ ಪ್ರಪಂಚವೂ ಸ್ವಸ್ವರೂಪಸಾಕ್ಷಾತ್ಕಾರದಿಂದ ಲಯವಾಗುತ್ತದೆ. ಮತ್ತು ಅಧಿಷ್ಠಾನವಾಗಿದ್ದ

ಸ್ವಸ್ವರೂಪತಯಾ ಸರ್ವಂ ವೇದ ಸ್ವಾನುಭವೇನ ಯಃ ।
ಸ ಧೀರ ಸ್ಸ ತು ಸರ್ವಜ್ಞಃ ಸ ಶಿವ ಸ್ಸ ತು ದುರ್ಲಭಃ ॥೫೦॥

ಲೋಕವಾಸನಯಾ ಜಂತೋಶ್ಶಾಸ್ತ್ರವಾಸನಯಾಽಪಿ ಚ ।
ದೇಹವಾಸನಯಾ ಜ್ಞಾನಂ ಯಥಾವನ್ನೈವ ಜಾಯತೇ ॥೫೧॥

ಜಾಯತೇ ಪೂರ್ಣವಿಜ್ಞಾನಂ ಕೇಷಾಂಚಿತ್ಪುಣ್ಯಗೌರವಾತ್ ।
ತಥಾಽಪಿ ಪ್ರತಿಬದ್ಧಂ ಸ್ಯಾತ್ ಪ್ರಸಾದೇನ ವಿನಾ ಕೃತಮ್ ॥೫೨॥

ಪ್ರಸಾದಾದೇವ ರುದ್ರಸ್ಯ ಜ್ಞಾನಂ ವೇದಾಂತವಾಕ್ಯಜಂ ।
ಪ್ರತಿಬಂಧವಿನಿರ್ಮುಕ್ತಂ ಭವೇತ್ತದ್ಧಿ ವಿಮುಕ್ತಿದಮ್ ॥೫೩॥

ಚೈತನ್ಯಮಾತ್ರ ಉಳಿಯುತ್ತದೆ. ಏಕೆಂದರೆ, ಕಲ್ಪಿತವಾದ ವಸ್ತುವಿನ ನಾಶವೆಂದರೆ ಅಧಿಷ್ಠಾನಮಾತ್ರದ ಉಳಿಯುವಿಕೆಯಾಗಿರುತ್ತದೆ. ಮೇಲಿನ ಅ. ೩. ಶ್ಲೋ. ೮. ನೋಡಿ. ॥೪೯॥

ಯಾವನು ಈ ಎಲ್ಲ ಪ್ರಪಂಚವನ್ನೂ ತನ್ನ ಸ್ವರೂಪವೆಂದು, ಆ ತೋರುವಿಕೆಗೆ ಅಧಿಷ್ಠಾನವಾಗಿರುವ ತನ್ನಲ್ಲಿ ತೋರುತ್ತಿದ್ದುದರಿಂದ ಸ್ವಸ್ವರೂಪವಾದುದೆಂದು ಅಪರೋಕ್ಷಾನುಭವದಿಂದ ತಿಳಿಯುತ್ತಾನೋ, ಅವನು ಧೀರನೂ ಸರ್ವಜ್ಞನೂ ಶಿವಸ್ವರೂಪನೂ ಆಗಿರುತ್ತಾನೆ. ಅಂಥವನು ದೊರೆಯುವುದು ದುರ್ಲಭವಾದುದು.॥೫೦॥

ಲೋಕವಾಸನಾ–ಪುಣ್ಯಪಾಪದಿಂದ ಸ್ವರ್ಗಾದಿ ವಿಷಯಕವಾದ ವಾಸನೆಯೂ, ಶಾಸ್ತ್ರವಾಸನಾ–ಶ್ರುತಶಾಸ್ತ್ರದಲ್ಲಿ ಅಭಿನಿವೇಶವೂ, ದೇಹವಾಸನಾ–ದೇಹರಕ್ಷಣೆಗಾಗಿ ಅನ್ನಪಾನ, ಸ್ತ್ರೀ ಮುಂತಾದವುಗಳಲ್ಲಿ ವಾಸನೆಯೂ, ಈ ಮೂರೂ ಅಡ್ಡಬಂದು ಪಾರಮಾರ್ಥಿಕಜ್ಞಾನವು ಉಂಟಾಗದಂತೆ ಮಾಡುತ್ತವೆ. ಇಲ್ಲಿ ವಾಸನಾ ಎಂದರೆ ಸುಖಸಾಧನವೆಂಬ ಅಭಿಮಾನವು. ಇದು ಅವುಗಳ ಯೋಗಕ್ಷೇಮಗಳಲ್ಲಿ ನಮ್ಮನ್ನು ತೊಡಗಿಸುತ್ತದೆ. ॥೫೧॥

ಕೆಲವರು ಪುಣ್ಯಶಾಲಿಗಳಿಗೆ ಮಾತ್ರ ಪೂರ್ಣನಾದ ಆತ್ಮನ ಜ್ಞಾನವು ಅವರ ಪುಣ್ಯದ ಅತಿಶಯದಿಂದ ಉಂಟಾಗುತ್ತದೆ. ಆದರೆ ಪರಶಿವನ ಅನುಗ್ರಹವಿಲ್ಲದೇ ಹೋದರೆ ಆ ಜ್ಞಾನವು ಪ್ರತಿಬದ್ಧವಾಗಿರುತ್ತದೆ. ॥೫೨॥

ಪರಶಿವನ ಅನುಗ್ರಹದಿಂದಲೇ ಉಪನಿಷದ್ವಾಕ್ಯಶ್ರವಣದಿಂದ ಆತ್ಮಜ್ಞಾನವು ಉಂಟಾಗಿ ಪ್ರತಿಬಂಧಕವಿಲ್ಲದೆ ಇದ್ದರೆ, ಪರಶಿವನ ಅನುಗ್ರಹದಿಂದ, ಆ ಜ್ಞಾನವು

ಶಿವಶಂಕರರುದ್ರಾಖ್ಯಸ್ಸಾಂಬಸ್ಸತ್ಯಾದಿ ಲಕ್ಷಣಃ ।
ಪರಮಾತ್ಮಾ ಹಿ ವಿಜ್ಞಾನಪ್ರಸಾದಂ ಕುರುತೇ ಸದಾ ॥೫೪॥

ಜ್ಞಾನಪ್ರಸಾದಂ ಕುರುತೇ ನ ವಿಷ್ಣುರ್ನ ಪಿತಾಮಹಃ ।
ನ ಚೇಂದ್ರೋ ನ ಚ ತಿಗ್ಮಾಂಶುಃ ನ ಚಂದ್ರೋ ನಾನ್ಯದೇವತಾಃ॥೫೫॥

ವಿಶುದ್ಧಮನಸಾಂ ನೃಣಾಂ ವಿಷ್ಣುಪೂರ್ವಾಶ್ಚ ದೇವತಾಃ ।
ಯಥಾಽಧಿಕಾರಂ ಕುರ್ವಂತಿ ಪ್ರಣಾಡ್ಯಾ ಸತ್ಯಮೀರಿತಮ್ ॥೫೬॥

ಕಲುಷೀಕೃತಚಿತ್ತಾನಾಂ ವಿಷ್ಣುಬ್ರಹ್ಮಪುರೋಗಮಾಃ ।
ಯಥಾಽಧಿಕಾರಂ ಕುರ್ವಂತಿ ಪ್ರಸಾದಂ ಭುಕ್ತಿಸಿದ್ಧಯೇ ॥೫೭॥

ಮುಕ್ತಿಯನ್ನು ಕೊಡುವಂಥದ್ದಾಗುತ್ತದೆ. "ಈಶ್ವರಾನುಗ್ರಹಾದೇವ ಪುಂಸಾಮದ್ವೈತವಾಸನಾ । ಮಹಾಭಯಕೃತತ್ರಾಣಾದ್ದ್ವಿತ್ರಾಣಾಮುಪಜಾಯತೇ ॥" ಎಂಬಂತೆ ಈಶ್ವರಾನುಗ್ರಹವು ಅದ್ವೈತವಾಸನೆಯ ಉದ್ಬೋಧನೆಗೆ ಆವಶ್ಯಕವಾದುದು. ॥೫೩॥

ಶಿವನೂ, ಶಂಕರನೂ, ರುದ್ರನೂ ಎಂಬ ನಾಮಗಳಿಂದ ಪ್ರಸಿದ್ಧನಾದ ಸತ್ಯಜ್ಞಾನಾನಂತಸ್ವರೂಪನಾದ ಪರಮಾತ್ಮನಾದ ಪರಶಿವನು, ಅಂತಃಕರಣದ ಪ್ರಸಾದವನ್ನು, ನೈರ್ಮಲ್ಯವನ್ನು, ರಾಗದ್ವೇಷ ಮುಂತಾದ ಮನಸ್ಸಿನ ಕೊಳಕನ್ನು ಹೋಗಲಾಡಿಸುವುದರಿಂದ ನೈರ್ಮಲ್ಯವನ್ನು, ಯಾವಾಗಲೂ ಅನುಗ್ರಹಿಸುತ್ತಾನೆ. ಸಂದೇಹವಿಲ್ಲವು. ॥೫೪॥

ಈ ವಿಧವಾದ ಚಿತ್ತಶುದ್ಧಿಯನ್ನು ವಿಷ್ಣುವಾಗಲಿ, ಬ್ರಹ್ಮನಾಗಲಿ, ಇಂದ್ರನಾಗಲಿ, ಸೂರ್ಯನಾಗಲಿ, ಚಂದ್ರನಾಗಲಿ ಇತರ ದೇವತೆಗಳಾಗಲಿ, ನೇರವಾಗಿ ಅನುಗ್ರಹಿಸುವುದಿಲ್ಲವು. ಜ್ಞಾನಂ ಮಹೇಶ್ವರಾದಿಚ್ಛೇತ್ । ಎಂಬ ಪ್ರಮಾಣದಿಂದಲೂ ಇದು ತಿಳಿಯುತ್ತದೆ. ॥೫೫॥

ಈಶ್ವರಪ್ರೀತಿಗಾಗಿ ಫಲದಲ್ಲಿ ಆಶೆಯಿಡದೆ ಕರ್ಮಮಾಡುವುದರಿಂದ ಚಿತ್ತಶುದ್ಧಿಯನ್ನು ಪಡೆದಿರುವ ಮಾನವರಿಗೆ ವಿಷ್ಣುವೇ ಮೊದಲಾದ ದೇವತೆಗಳೂ ತಮ್ಮತಮ್ಮ ಅಧಿಕಾರದ ಪ್ರಣಾಳಿಕೆಯನ್ನು ಅನುಸರಿಸಿ ಪರಶಿವನ ಮೂಲಕವಾಗಿ ಅನುಗ್ರಹವನ್ನು ಮಾಡುತ್ತಾರೆ. ॥೫೬॥

ಫಲಾಭಿಸಂಧಿಪೂರ್ವಕವಾಗಿ ಕರ್ಮಗಳನ್ನು ಮಾಡುವುದರಿಂದ ರಾಗಾದಿ ದೋಷಗಳಿಂದ ಕೊಳಕಾಗಿರುವ ಮನಸ್ಸುಳ್ಳ ಜನರಿಗೆ ಬ್ರಹ್ಮವಿಷ್ಣು ಮುಂತಾದ

ಅತೋ ಜ್ಞಾನಪ್ರಸಾದಾರ್ಥಂ ಶಿವಸ್ಸಾಂಬಸ್ಸನಾತನಃ ।
ಉಪಾಸಿತವ್ಯೋ ಮಂತವ್ಯಃ ಶ್ರೋತವ್ಯಶ್ಚ ಮುಮುಕ್ಷುಭಿಃ ॥೫೮॥

ಶಿವಪ್ರಸಾದೇನ ಹಿ ಭುಕ್ತಿರುತ್ತಮಾ
ಶಿವಪ್ರಸಾದೇನ ಹಿ ಮುಕ್ತಿರುತ್ತಮಾ ।
ಶಿವಪ್ರಸಾದೇನ ವಿನಾ ನ ಭುಕ್ತಯಃ
ಶಿವಪ್ರಸಾದೇನ ವಿನಾ ನ ಮುಕ್ತಯಃ ॥೫೯॥

ಶಿವಪ್ರಸಾದೇನ ಗುರುಪ್ರಸಾದತಃ
ಶಿವಪ್ರಸಾದೇನ ಚ ಶಂಭುಭಕ್ತಿತಃ ।

ದೇವತೆಗಳು ತಮ್ಮ ತಮ್ಮ ಅಧಿಕಾರಕ್ಕೆ ಅನುಗುಣವಾಗಿ ನಾನಾವಿಧವಾದ ಕರ್ಮ ಫಲಭೋಗಗಳು ದೊರೆಯುವ ಹಾಗೆ ಮಾಡುತ್ತಾರೆ. ॥೫೭॥

ಆದುದರಿಂದ ಮೋಕ್ಷವನ್ನು ಪಡೆಯಲು ಇಚ್ಛಿಸುವವರು ಅಂಬಾಸಹಿತನಾದ ನಿತ್ಯನಾದ ಪರಶಿವನನ್ನು ಶ್ರವಣಮನನನಿದಿಧ್ಯಾಸನಗಳಿಂದ ಉಪಾಸನೆಮಾಡಬೇಕು. ಶ್ರವಣವೆಂದರೆ ವೇದಾಂತದ ಮಹಾವಾಕ್ಯಗಳಿಗೆ ತಾತ್ಪರ್ಯವನ್ನು ನಿಶ್ಚಯವಾಗಿ ತಿಳಿಯುವುದು ; ಮನನವೆಂದರೆ ಹೀಗೆ ತಿಳಿದ ವಿಷಯದ ಮೇಲೆ ತೋರಬಹುದಾದ ಅಸಂಭಾವನಾವಿಪರೀತಭಾವನೆಗಳನ್ನು ಹೋಗಲಾಡಿಸುವಂತೆ ಯುಕ್ತಿಗಳಿಂದ ವಿಮರ್ಶೆಮಾಡಿ ನಿಶ್ಚಯಿಸಿಕೊಳ್ಳುವುದು. ನಿಧಿಧ್ಯಾಸನವೆಂದರೆ ಹಾಗೆ ಯುಕ್ತಿಗಳಿಂದ ನಿಶ್ಚಯಿಸಿ ತಿಳಿದ ವಿಷಯವನ್ನು ಚಿತ್ತೈಕಾಗ್ರತೆಯಿಂದ ಅನುಭವಕ್ಕೆ ತಂದುಕೊಳ್ಳುವುದಕ್ಕೆ ಬೇರೆ ಯಾವ ಯೋಚನೆಯನ್ನೂ ಮಾಡದೆ ಅದೊಂದನ್ನೇ ಸರ್ವದಾ ಧ್ಯಾನಿಸುತ್ತಿರುವುದು. ॥೫೮॥

ಪರಶಿವನ ಅನುಗ್ರಹದಿಂದಲೇ ಐಹಿಕಾಮುಷ್ಮಿಕಭೋಗಸಿದ್ಧಿಗಳೂ, ಕಡೆಗೆ ಸರ್ವೋತ್ತಮವಾದ ಮುಕ್ತಿಯೂ ಉಂಟಾಗುತ್ತವೆ. ಅಲ್ಲದೆ ಪರಶಿವನ ಅನುಗ್ರಹ ವಿಲ್ಲದೆ ಭೋಗಗಳಾಗಲಿ ಮೋಕ್ಷಗಳಾಗಲಿ (ಕ್ರಮವಾಗಿ ಸಾಲೋಕ್ಯಸಾಮೀಪ್ಯ ಸಾರೂಪ್ಯಸಾಯುಜ್ಯಗಳೆಂಬ ಮುಕ್ತಿಪ್ರಕಾರಗಳಾಗಲಿ) ಸಿದ್ಧಿಸುವುದಿಲ್ಲವು. ॥೫೯॥

ಇಶ್ವರನ ಅನುಗ್ರಹದಿಂದ ಗುರುವಿನ ಪ್ರಸಾದವೂ, ಪರಶಿವನಲ್ಲಿ ಅನನ್ಯವಾದ ಭಕ್ತಿಯೂ ಉಂಟಾಗಿ ಅದರಿಂದ ರಾಗದ್ವೇಷಾದಿ ಮಲವು ನಷ್ಟವಾಗಲು ಶುದ್ಧ

ವಿಶುದ್ಧವಿಜ್ಞಾನದಿವಾಕರಸ್ಸ್ವಯಂ
ಪ್ರದಗ್ಧಪಾಪಸ್ಯ ತಮೋವಿನಾಶಕೃತ್ ॥೬೦॥

ಶಿವಸ್ಸಮಸ್ತಂ ಪರಮಾರ್ಥತಸ್ತಥಾ
ಶಿವಸ್ಸಮಸ್ತಂ ವ್ಯವಹಾರತೋಽಪಿ ಚ ।
ಇತಿ ಪ್ರಜಾತಂ ಯದಿ ವೇದನಂ ನೃಣಾಂ
ತರಂತಿ ಸಂಸಾರಮಹೋದಧಿಂ ತೇ ॥೬೧॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಜ್ಞಾನಯಜ್ಞವಿಶೇಷೋ ನಾಮ ಚತುರ್ದಶಾಧ್ಯಾಯಃ

ಚಿತ್ತನಾದ ಭಕ್ತನಿಗೆ ಅವಿದ್ಯಾನಾಶಕವಾದ ಸ್ವಸ್ವರೂಪದ ಅನುಭವವು, ಸೂರ್ಯೋದಯವಾದರೆ ಕತ್ತಲೆಯು ತಾನೆ ಹೋಗಿ ಬೆಳಕು ಉಂಟಾಗುವ ಹಾಗೆ, ತಾನಾಗಿಯೇ ಉಂಟಾಗುತ್ತದೆ. ॥೬೦॥

ಈ ಸಮಸ್ತ ಪ್ರಪಂಚವೂ ಪಾರಮಾರ್ಥಿಕವಾಗಿ ಪರಶಿವಸ್ವರೂಪವಾದುದು. ವ್ಯವಹಾರದೃಷ್ಟಿಯಿಂದಲೂ ಇದೆಲ್ಲವೂ ಆ ಶಿವನ ವಿಭೂತಿಗಳ ಅತಿಶಯವಾಗಿರುತ್ತದೆ. ಹೀಗೆಂದು ಯಾವ ಮಾನವರಿಗೆ ತಿಳಿವಳಿಕೆಯುಂಟಾಗಿರುತ್ತದೋ ಅಂಥವರು ಸಂಸಾರವನ್ನು ದಾಟುತ್ತಾರೆ. ॥೬೧॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಶಿವಭಕ್ತಿತತ್ವಗಳ ಅಭೇದವನ್ನು ವಿವರಿಸಿರುವ
ಹದಿನಾಲ್ಕನೆಯ ಅಧ್ಯಾಯವು ಮುಗಿದುದು

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

॥ ಪಂಚದಶೋಽಧ್ಯಾಯಃ ॥

ಹದಿನೈದನೆಯ ಅಧ್ಯಾಯವು

॥ ಸೂತ ಉವಾಚ ॥

ಭೂಯೋಽಪಿ ಜ್ಞಾನಯಜ್ಞಂ ತು ಪ್ರವಕ್ಷ್ಯಾಮಿ ಸಮಾಸತಃ ।
ಶೃಣುತ ಶ್ರೇಯಸೇ ವಿಪ್ರಾಃ ಶ್ರದ್ಧಯಾ ಪರಯಾ ಸಹ ॥೧॥

ಘಟಕುಡ್ಯಕುಸೂಲಾದಿಪದಾರ್ಥೇಷು ಮುನೀಶ್ವರಾಃ ।
ಸತ್ತಾ ಯಾ ಭಾಸತೇ ಸೈಕಾ ಸತ್ತಾऽऽಕಾರತಯೈವ ತು ॥೨॥

ಸೂತಪೌರಾಣಿಕರು ಹೇಳಿದರು.—ಪೂರ್ವಾಧ್ಯಾಯದಲ್ಲಿ ನಿರೂಪಿಸಿದ ಅದ್ವಿತೀಯತ್ವವನ್ನು ಆಕ್ಷೇಪಸಮಾಧಾನಗಳಿಂದ ಸ್ಥಾಪಿಸುತ್ತಾರೆ. ಗಡಿಗೆ ಮುಂತಾದ ಪದಾರ್ಥಗಳಿರುವಾಗ ಬ್ರಹ್ಮನಿಗೆ ಅದ್ವಿತೀಯತ್ವವು ಹೇಗೆ? ಎಂದು ಆಕ್ಷೇಪವು.

ಋಷಿಗಳಿರಾ, ಜ್ಞಾನಯಜ್ಞವನ್ನು ಸಂಗ್ರಹವಾಗಿ ಪುನಃ ಹೇಳುತ್ತೇನೆ. ಉತ್ತಮವಾದ ಶ್ರದ್ಧೆಯೊಡನೆ ಕೇಳಿ, ಮುಕ್ತಿರೂಪಕಲ್ಯಾಣವನ್ನು ಪಡೆಯಿರಿ. ॥೧॥

ಗಡಿಗೆ, ಗೋಡೆ, ಕಣಜ ಇವುಗಳಲ್ಲಿ ಸನ್ ಘಟಃ ಸತ್ ಕುಡ್ಯಂ ಸನ್ ಕುಸೂಲಃ ಎಂದರೆ ಗಡಿಗೆ ಇದೆ, ಗೋಡೆ ಇದೆ, ಕಣಜ ಇದೆ—ಎಂದು ನಾನಾವಿಧವಾದ ಪ್ರತೀತಿಯಲ್ಲಿ ತೋರುವ ಸತ್ತೆಯು ಒಂದೇ ಎಂದು ಹೇಳಬೇಕು, ಅದು ಸಾಮಾನ್ಯಾಕಾರದಲ್ಲಿ ಸತ್ತಾರೂಪದಲ್ಲಿ ಎಲ್ಲ ಕಡೆಯಲ್ಲೂ ಒಂದೇ ಆಗಿದೆ. ॥೨॥

ಸಾ ವಿಶೇಷೇಣ ರೂಪೇಣ ವಿಭಿನ್ನೇತಿ ಚ ಕೇಚನ ।
ತದಸಂಗತಮೇವೇತಿ ಪ್ರವದಂತಿ ಮನೀಷಿಣಃ ॥೩॥

ವಿಶೇಷರೂಪಸ್ಯಾಭಾವಾತ್ ಭೇದಾಭಾವೇನ ಹೇತುನಾ ।
ಸತಿ ಭೇದೇ ವಿಶೇಷಸ್ಸ್ಯಾತ್ ನಾಭೇದೇ ಹಿ ಮುನೀಶ್ವರಾಃ ॥೪॥

ಭೇದಾಕಾರಸ್ತು ಸತ್ತಾಯಾ ವಿದ್ಯತೇ ಯದಿ ವಸ್ತುತಃ ।
ಭೇದಾಕಾರಸ್ತು ಸತ್ತಾಯಾ ಭಿನ್ನಶ್ಚೇತ್ ಶೂನ್ಯತತ್ತ್ವವತ್ ॥೫॥

ಶೂನ್ಯಮೇವ ಭವೇನ್ನೈವ ಭೇದಾಕಾರೋ ಭವೇದ್ದ್ವಿಜಾಃ ।

ಈ ಸತ್ತಾಜಾತಿಯು ಘಟಪಟಾದಿ ವಿಶೇಷವ್ಯಕ್ತಿಗಳಿಂದ ನಾನಾಕಾರವುಳ್ಳದ್ದಾಗುತ್ತದೆ—ಎಂದು ಕೆಲವರು, ದ್ವೈತಿಗಳು, ವಾದಿಸುತ್ತಾರೆ.

ತತ್ತ್ವಜ್ಞರಾದ ವಿದ್ವಾಂಸರು ಹೀಗೆ ವಿವರಿಸುತ್ತಾರೆ. ಆ ಸತ್ತೆಯು ವ್ಯಕ್ತಿಭೇದದಿಂದ ಬೇರೆ ಬೇರೆ ಆಗಲಾರದು. ಭೇದರೂಪಪದಾರ್ಥವೇ ಸಿದ್ಧಿಸುವುದಿಲ್ಲವೆಂದು ಹತ್ತನೆಯ ಅಧ್ಯಾಯದಲ್ಲಿ ೫೦ನೆಯ ಶ್ಲೋಕದಲ್ಲಿ ನಿರೂಪಿಸಿದೆ. ಆದುದರಿಂದ ಭೇದ ಸಿದ್ಧಿಸಿದರೆ ವಿಶೇಷವು ಸಿದ್ಧಿಸೀತು. ಆ ಭೇದವು ಸಿದ್ಧಿಸದಿರುವುದರಿಂದ ಭೇದವೂ ಇಲ್ಲ, ವಿಶೇಷವೂ ಇಲ್ಲವು. ||೩-೪||

ಭೇದಾಕಾರವು ವಾಸ್ತವವಾಗಿರುವುದಾದರೆ, ಭೇದವೆಂದರೆ ವಿಶೇಷವು. ಭೇದಾಕಾರವೆಂದರೆ ವಿಶೇಷಾಕಾರವು. ಇದು ಸತ್ತೆಗಿಂತ ಬೇರೆಯೆ, ಅಲ್ಲವೆ ? ಎಂದು ವಿಕಲ್ಪಿಸಿ ಭಿನ್ನವು ಎಂದರೆ, ಆ ಭೇದಾಕಾರವು ಆಸತ್ತಿನಲ್ಲಿರಬೇಕು. ಆದ್ದರಿಂದ ಶಶವಿಷಾಣದ ಹಾಗೆ ಅದೂ ಆಸತ್, ಶೂನ್ಯವಾಗಬೇಕು. ಆದುದರಿಂದ ಭೇದಾಕಾರವು ಸಿದ್ಧಿಸದು. ಘಟಾದಿಗಳಲ್ಲಿ ಸತ್ತಾಸಂಬಂಧವಿರುವುದರಿಂದ ಶೂನ್ಯವಲ್ಲವು. ಆದುದರಿಂದ ಅದು ಶಶವಿಷಾಣದಂತಹುದಲ್ಲವು. ಸತ್ತಾಸಂಬಂಧಕ್ಕಿಂತ ಮುಂಚೆ ಘಟಾದಿಗಳು ಸತ್ಪದಾರ್ಥವೋ ? ಅಸತ್ಪದಾರ್ಥವೋ ? ಅಸತ್ತಾದರೆ ಶಶವಿಷಾಣದಲ್ಲೂ ಸತ್ತೆ ಬರಲಿ. ಸತ್ತಾದರೆ ಸತ್ತಾವಿಶಿಷ್ಟದಲ್ಲಿ ಸತ್ತೆ ಬಂದಹಾಗಾಯಿತು. ಆಗ ವಿಶೇಷಣವಾದ ಸತ್ತೆಯು ಸಂಬಂಧವನ್ನು ಪಡೆಯುವ ಸತ್ತೆಗಿಂತ ಭಿನ್ನವೋ ? ಅಭಿನ್ನವೋ ? ಅಭಿನ್ನವಾದರೆ ಆತ್ಮಾಶ್ರಯದೋಷ ಬರುತ್ತದೆ ; ಭಿನ್ನವಾದರೆ ಅನ್ಯೋನ್ಯಾಶ್ರಯ ; ಈ ಎರಡಕ್ಕೂ ಬೇರೆಯಾದುದೆಂದರೆ ಚಕ್ರಕದೋಷವೂ, ಭೇದಪರಂಪರೆಯನ್ನು

ಭೇದಾಕಾರ ಸ್ಸ ಸತ್ತಾಯಾ ಅಭಿನ್ನಶ್ಚೇತ್ಸ ಸೈವ ಹಿ ॥೬॥

ಭಿನ್ನಾಭಿನ್ನೌ ಯದಿ ಸ್ಯಾತಾಂ ದೋಷದ್ವಯಸಮಾಗಮಃ ।
ತಸ್ಮಾತ್ಸತ್ತಾಽತಿರೇಕೇಣ ವಿಶೇಷಾರ್ಥೋಽ ನ ವಿದ್ಯತೇ ॥೭॥

ವಿಶೇಷಾರ್ಥಪ್ರತೀತಿಸ್ತು ಭ್ರಾಂತಿಸಿದ್ಧಾ ನ ಸಂಶಯಃ ।
ಅತ ಏಕಾ ಸದಾ ಸತ್ತಾ ಸೈವ ಬ್ರಹ್ಮ ಪರಾತ್ಪರಂ ॥೮॥
ಸತ್ತಾಯಾ ಯದಿ ಭಿನ್ನಂ ಚೇತ್ ಬ್ರಹ್ಮಾಸತ್ಸ್ಯಾತ್ ನೃಶೃಂಗವತ್ ।

ಅಂಗೀಕರಿಸಿದರೆ ಅನವಸ್ಥಾ ಮುಂತಾದ ದೋಷಗಳೂ ಬರುತ್ತವೆ. ಆದುದರಿಂದ ಭೇದವೇ ಸಿದ್ಧಿಸುವುದಿಲ್ಲ. ||೫||

ವಿಶೇಷಾಕಾರವಾದ ಘಟಾದಿಗಳು ಸತ್ತೆಗಿಂತ ಬೇರೆಯಲ್ಲದೆ ಅಭಿನ್ನವಾದರೆ ಅವು ಸತ್ತಾರೂಪಗಳೇ ಆಗಿರುತ್ತವೆ. ಘಟಪಟಾದಿ ರೂಪವಾದ ವಿಶೇಷಾಕಾರವು ಸತ್ತೆಗಿಂತ ಭಿನ್ನವೂ ಅಭಿನ್ನವೂ ಆಗಿದೆ ಎಂದು ಭೇದಾಭೇದವಾದಿಯಂತೆ ಹೇಳಿದರೆ, ಭಿನ್ನವೆಂದರೆ ಹಿಂದೆ ಹೇಳಿದಂತೆ ಶೂನ್ಯತ್ವವೂ, ಅಭಿನ್ನವೆಂದರೆ ಸತ್ತಾಭೇದವೂ, ಹೀಗೆ ಎರಡು ದೋಷಗಳು ಬರುತ್ತವೆ. ಆದುದರಿಂದ ಸತ್ತೆ ಎಂದರೆ ಬ್ರಹ್ಮರೂಪ ಸತ್ತೆಗಿಂತಲೂ ಬೇರೆಯಾಗಿ ಘಟಪಟಾದಿ ವಿಶೇಷಾಕಾರವಾದ ವಿಶೇಷಾರ್ಥಗಳು ಪಾರಮಾರ್ಥಿಕವಾಗಿ ಸಿದ್ಧಿಸವು. ಇದೆ, ಇದೆ, ಎಂದು ಎಲ್ಲ ಪದಾರ್ಥಗಳಲ್ಲೂ ಅನುಸ್ಯೂತವಾಗಿ ಅನುಭವವಿರುವುದರಿಂದ ಸತ್ತೆಯು ಬ್ರಹ್ಮಸ್ವರೂಪವೇ ಆಗಿದೆ. ||೬-೭||

ಘಟಪಟಾದಿ ರೂಪವಾದ ಭೇದಾಕಾರಗಳು ವಿಶೇಷಾಕಾರಗಳು ತೋರುತ್ತಿರುವುದು ಭ್ರಾಂತಿಯಿಂದಲೇ. ಇದರಲ್ಲಿ ಸಂಶಯವಿಲ್ಲವು. ಆದುದರಿಂದ ಸತ್ತೆಯು ಯಾವಾಗಲೂ ಒಂದೇ ಆಗಿಯೂ, ಪರಾತ್ಪರವಾದ ಬ್ರಹ್ಮರೂಪವೇ ಆಗಿಯೂ, ಇರುತ್ತದೆ. ಅನೇಕಪದಾರ್ಥಗಳಲ್ಲಿ ಅನುಸ್ಯೂತವಾಗಿರೋಣದರಿಂದ ಸತ್ತಾ ಎನ್ನಿಸಿಕೊಳ್ಳುತ್ತದೆ. ಜ್ಞಾನದಿಂದ ಅವಿದ್ಯಾನಾಶವಾಗಿ ಅನೇಕಪದಾರ್ಥಗಳು ತೋರದಿದ್ದಾಗ ಸದ್ರೂಪಮಾತ್ರ ಉಳಿದು ಸತ್ ಎನ್ನಿಸಿಕೊಂಡಿರುತ್ತದೆ. ಅನೇಕಪದಾರ್ಥಗಳಲ್ಲಿ ಅನುಸ್ಯೂತವಾಗಿಲ್ಲದಿರುವುದರಿಂದ ಸತ್ತಾ ಎನ್ನಿಸಿಕೊಳ್ಳುವುದಿಲ್ಲ. ಚಂದ್ರಬಿಂಬವು ತೆರೆಗಳಲ್ಲಿ ತೋರುವಾಗ ಅನೇಕ ಕಲ್ಪಿತಚಂದ್ರರಲ್ಲಿ ಅನುವೃತ್ತವಾಗುವುದರಿಂದ ಚಂದ್ರತ್ವವು ಸಿದ್ಧಿಸುತ್ತದೆ. ಉಪಾಧಿ ಇಲ್ಲದೆ, ಅನೇಕ ಚಂದ್ರರೂ ಇಲ್ಲದಿದ್ದರೆ, ಅನುಸ್ಯೂತಿಯೂ ಇಲ್ಲದಿದ್ದರೆ, ಆ ಚಂದ್ರತ್ವ ಚಂದ್ರಸ್ವರೂಪವಾಗಿಯೇ ಉಳಿಯುತ್ತದೆ. ಹಾಗೆಯೇ

ತತ್ರೈವಂ ಸತಿ ವಿಪ್ರೇಂದ್ರಾಃ ಯೇ ಪದಾರ್ಥಾ ಘಟಾದಯಃ ॥೯॥

ತೇ ತು ಸತ್ತಾತಿರೇಕೇಣ ನ ವಿದ್ಯಂತೇ ಕಥಂಚನ।
ಬ್ರಹ್ಮೈವೇದಮಿತಿ ಪ್ರಾಹ ಶ್ರುತಿರಪ್ಯತಿನಿರ್ಮಲಾ ॥೧೦॥

ವಿದುಷಾಮನುಭೂತಿಶ್ಚ ತಥೈವ ಹಿ ನ ಸಂಶಯಃ।
ಅತಸ್ಸರ್ವಮಿದಂ ಶಂಭುರಿತಿ ವಿತ್ತ ವಿಚಕ್ಷಣಾಃ ॥೧೧॥

ಅವಿದ್ಯಾತತ್ಕಾರ್ಯರೂಪವಾದ ಉಪಾಧಿನಾಶದಿಂದ ಅನೇಕ ವಿಶೇಷಾಕಾರಗಳು ತೋರದೆ ಇರುವಾಗ, ಅನುಸ್ಯೂತಿಯೂ ಇಲ್ಲದಿರುವಾಗ, ಸತ್ತೆಯು ಬ್ರಹ್ಮಸ್ವರೂಪವೇ ಆಗಿ ಸತ್ ಎನ್ನಿಸಿಕೊಂಡು ಉಳಿಯುತ್ತದೆ. ಧರ್ಮವಾಚಕವಾದ ಸತ್ತಾಶಬ್ದವು ಧರ್ಮಿಯಾದ ಸತ್ಪದಾರ್ಥವು ಹೇಗೆ ಆಗುತ್ತದೆಂದು ಆಕ್ಷೇಪಿಸಿದರೆ, ಧರ್ಮವಾದ ಸತ್ತೆಗಿಂತಲೂ ಧರ್ಮಿಯಾದ ಬ್ರಹ್ಮವು ಭಿನ್ನವೆಂದು ಹೇಳಿದ ಹಾಗಾಗುತ್ತದೆ. ಆಗ ಹಿಂದೆ ಹೇಳಿದಂತೆ ಬ್ರಹ್ಮನಿಗಿಂತ ಸತ್ತೆಭಿನ್ನವೆಂದರೆ ಮಾನವನ ಕೊಂಬಿನಂತೆ ಬ್ರಹ್ಮ ಅಸತ್ತಾಗ ಬೇಕಾಗುತ್ತದೆ. ಬ್ರಹ್ಮನಿಗಿಂತ ಸತ್ತೆ ಭಿನ್ನವಲ್ಲವೆಂದರೆ, ಬ್ರಹ್ಮ ಸತ್ತಾರೂಪವಾಗಲು ಇಷ್ಟಸಿದ್ಧಿಯಾಗುತ್ತದೆ. ಆದುದರಿಂದ ಬ್ರಹ್ಮನನ್ನು ಸತ್ತೆಗಿಂತ ಭಿನ್ನವೆಂದಾಗಲಿ ಅಭಿನ್ನವೆಂದಾಗಲಿ ಹೇಳಲಾಗುವುದಿಲ್ಲ. ಬ್ರಹ್ಮಸದ್ರೂಪವಾಗಿಯೇ ಉಳಿಯುತ್ತದೆ. ॥೮॥

ಹೀಗೆ ವಿಶೇಷಾರ್ಥಗಳನ್ನು ಬ್ರಹ್ಮನಿಗಿಂತ ಭಿನ್ನವೆಂದಾಗಲಿ ಅಭಿನ್ನವೆಂದಾಗಲಿ ಭಿನ್ನಾಭಿನ್ನವೆಂದಾಗಲಿ ನಿರೂಪಿಸುವುದಕ್ಕಾಗದೆ ಇರುವುದರಿಂದ, ಭೇದವೇ ಪ್ರಮಾಣಸಿದ್ಧವಾಗದೆ ಇರುವುದರಿಂದ, ಘಟಪಟಾದಿ ವಿಶೇಷಾರ್ಥಗಳು ಸತ್ತೆಗಿಂತಲೂ ಸದ್ರೂಪವಾದ ಬ್ರಹ್ಮನಿಗಿಂತಲೂ ಬೇರೆಯಾಗಿ ಪಾರಮಾರ್ಥಿಕವಾಗಿ ಇವೆ ಎಂದು ಹೇಗೂ ಸ್ಥಾಪಿಸಲಾಗುವುದಿಲ್ಲ. ಆದುದರಿಂದ ವಿಶೇಷಾರ್ಥಗಳು ಕಲ್ಪಿತಗಳಾಗಿಯೇ, ಅಧ್ಯಸ್ತಗಳಾಗಿಯೇ, ತೋರುತ್ತಿವೆ. ಎಂದು "ಅನಿಚ್ಛತಾಪ್ಯಭ್ಯುಪೇಯಂ, ಅಕಾಮೇನಾಪ್ಯಂಗೀಕರಣೀಯಂ" ಎಂದು ಸಿದ್ಧವಾಗುತ್ತದೆ. ॥೯॥

ಓ ಬುದ್ಧಿಕುಶಲರಾದ ಋಷಿಗಳೇ, ಅಜ್ಞಾನ, ಅಲ್ಪಜ್ಞಾನ, ಮುಂತಾದ ಪುರುಷದೋಷಗಳಿಲ್ಲದ ದೋಷರಹಿತಶ್ರುತಿಯೂ ಈ ದೃಶ್ಯಪ್ರಪಂಚವೆಲ್ಲವೂ ಬ್ರಹ್ಮಸ್ವರೂಪವಾದುದೆಂದು ಹೇಳುತ್ತಿದೆ. ವಿದ್ವಾಂಸರ ಅನುಭವವೂ ಹಾಗೆಯೇ ಇದೆ. ಇದರಲ್ಲಿ ಸಂದೇಹವಿಲ್ಲವು. ಆದುದರಿಂದ ಈ ಎಲ್ಲ ಜಗತ್ತೂ ಪರಶಿವಸ್ವರೂಪವಾದುದೆಂದು ತಿಳಿಯಿರಿ. ॥೧೦-೧೧॥

ಮೃಚ್ಛರಾವಾದಿ ರೂಪೇಣ ಯಥಾ ಭಾತಿ ಸ್ವಭಾವತಃ ।
ತಥಾ ಸರ್ವತಯಾ ಭಾತಿ ಶಿವಸ್ಸರ್ವಾವಭಾಸಕಃ ॥೧೨॥

ಕಟಕಾದಿ ವಿಭೇದೇನ ಯಥಾ ಹೇಮ ಪ್ರಕಾಶತೇ ।
ತಥಾ ಸರ್ವತಯಾ ಭಾತಿ ಶಿವಸ್ಸರ್ವಾವಭಾಸಕಃ ॥೧೩॥

ಶುಕ್ತಿಕಾ ರಜತಾಕಾರಾ ಯಥಾ ಭಾತಿ ಸ್ವಭಾವತಃ ।
ತಥಾ ಸರ್ವತಯಾ ಭಾತಿ ಶಿವಸ್ಸರ್ವಾವಭಾಸಕಃ ॥೧೪॥

ಸ್ವಪ್ನದೃಕ್ಸ್ವಪ್ನ ರೂಪೇಣ ಯಥಾ ಭಾತಿ ಸ್ವಭಾವತಃ ।
ತಥಾ ಸರ್ವತಯಾ ಭಾತಿ ಶಿವಸ್ಸರ್ವಾವಭಾಸಕಃ ॥೧೫॥

ಕಾರ್ಯಪ್ರಪಂಚವೆಲ್ಲವೂ ಕಾರಣಸ್ವರೂಪವಾದುದೆಂದು ದೃಷ್ಟಾಂತಗಳಿಂದ ವಿವರಿಸುತ್ತಾರೆ. ಉಪಾದಾನಕಾರಣವಾಗಿರುವ ಮಣ್ಣು ಶ್ರಾವೆ ಮುಂತಾದ ಕಾರ್ಯ ರೂಪಗಳಲ್ಲಿ ಹೇಗೆ ಸ್ವಾಭಾವಿಕವಾಗಿ ಕಾಣುತ್ತದೋ, ಚಿನ್ನವು ಕಡಗ ಮೊದಲಾದ ಒಡವೆಗಳಾಗಿ ಹೇಗೆ ಕಾಣುತ್ತದೋ, ಹಾಗೆ ಪರಶಿವನೂ ಈ ಜಗತ್ತಿಗೆ ಅಭಿನ್ನ ನಿಮಿತ್ತೋಪಾದಾನಕಾರಣನಾದುದರಿಂದ ಸರ್ವಸ್ವರೂಪನಾದುದರಿಂದ ಈ ಪ್ರಪಂಚ ರೂಪನಾಗಿ ಕಾಣುತ್ತಾನೆ. ॥೧೨-೧೩॥

ತಾರ್ಕಿಕರು ಕಾರಣಕ್ಕಿಂತ ಕಾರ್ಯ ಬೇರೆಯಾದುದೆಂದೂ ಹೊಸ ದ್ರವ್ಯಾ ರಂಭವಾಗುತ್ತದೆಂದೂ ಹೇಳುವರು. ಅದರಂತೆ ಕಾರ್ಯವು ಕಾರಣಕ್ಕಿಂತ ಬೇರೆಯಾದ ಪದಾರ್ಥವಾಗಿ ದ್ವೈತವೇ ಸಿದ್ಧವಾಗುತ್ತದೆ. ಅದನ್ನು ನಿವಾರಿಸಿ ಅದ್ವೈತಸಾಧನೆಗಾಗಿ ದೃಷ್ಟಾಂತವನ್ನು ಬೇರೆ ಕೊಡುತ್ತಾರೆ. ಶುಕ್ತಿಯು ರಜತಾಕಾರವಾಗಿ ತೋರುತ್ತದೆ. ಈ ತೋರಿಕೆಯಲ್ಲಿ ಶುಕ್ತಿಯ ಅಜ್ಞಾನವೇ ಕರಣವು. ಅದರಂತೆ ಪ್ರಪಂಚವೆಲ್ಲವೂ ಅಧಿಷ್ಠಾನವಾದ ಬ್ರಹ್ಮನ ಅಜ್ಞಾನದಿಂದ ಬ್ರಹ್ಮನಲ್ಲಿ ಆರೋಪಿತವಾಗಿ ತೋರುತ್ತಿದೆ. ಹಾಗಾದರೂ ಇದರಲ್ಲಿ ಇನ್ನೊಂದು ಪದಾರ್ಥವು ಬೇರೊಂದು ಪದಾರ್ಥದಲ್ಲಿ ಕಲ್ಪಿತ ವಾಗಿದೆ. ಆದರೆ ತನ್ನಲ್ಲಿ ಪದಾರ್ಥಾಂತರವು ಕಲ್ಪಿತವಾಗಲಾರದೆಂದರೆ ದೃಷ್ಟಾಂತವನ್ನು ಬೇರೆ ಹೇಳುತ್ತಾರೆ. ಸ್ವಪ್ನವನ್ನು ಕಾಣುವವನು ಸ್ವಾಭಾವಿಕವಾಗಿ ತನ್ನ ರೂಪದಿಂದಲೇ ಕನಸ್ಸಿನ ಪದಾರ್ಥಗಳನ್ನು ಕಾಣುತ್ತಾನೆ. ಏಕೆಂದರೆ ಆಗ ಇಂದ್ರಿಯಗಳು ವ್ಯಾಪಾರ ವನ್ನು ಮಾಡದೆ ಹೊರಗಿನ ಪ್ರಪಂಚದ ಇರುವಿಕೆಯು ಗೊತ್ತಾಗುವುದಿಲ್ಲ. ॥೧೪-೧೫॥

ಅಂಧಕಾರಪ್ರಕಾಶಶ್ಚ ಯಥಾಽಽಕಾಶೇ ಪ್ರಕಾಶತೇ ।
ಜಡಾಜಡಮಿದಂ ಸರ್ವಂ ತಥಾ ಭಾತಿ ಪರಾತ್ಮನಿ ॥೧೬॥

ವೀಚೀತರಂಗಪೂರ್ವಾಸ್ತು ಯಥಾ ಭಾಂತಿ ಮಹೋದಧೌ ।
ಮಹದಾದಿವಿಶೇಷಾಂತಂ ಜಗದ್ಭಾತಿ ತಥಾಽಽತ್ಮನಿ ॥೧೭॥

ನಿರವಯವವಾದ ಅದ್ವಿತೀಯಚೇತನನಾದ ಬ್ರಹ್ಮನಲ್ಲಿ ಅಚೇತನವಾದ ಆರೋಪ್ಯಸಂಬಂಧವು ಹೇಗೆ? ಎಂದು ಆಕ್ಷೇಪಿಸಿದರೆ, ಬೇರೆ ದೃಷ್ಟಾಂತವನ್ನು ಕೊಡುತ್ತಾರೆ. ಅವಯವವಿಲ್ಲದ ಆಕಾಶದಲ್ಲಿ ಪ್ರಕಾಶವೂ ಕತ್ತಲೆಯೂ ಏಕಕಾಲದಲ್ಲಿ ಹೊರಗಿನ ಬೆಳಕಿನಿಂದ ಮನೆಯೊಳಕ್ಕೆ ಬಂದಾಗ ಸ್ವಲ್ಪ ಹೊತ್ತು ಮಾತ್ರ ತೋರುವ ಹಾಗೆ ಈ ಜಡಪ್ರಪಂಚವು ಪರಶಿವಸ್ವರೂಪನಾದ ಪರಾತ್ಮನಲ್ಲಿ ತೋರುತ್ತಿದೆ. ॥೧೬॥

ಸಮುದ್ರದಲ್ಲಿ ಅಲೆಗಳು ಹೇಗೆ ತೋರುತ್ತವೋ ಹಾಗೆ ಮಹತ್ತತ್ತ್ವ ಮೊದಲುಗೊಂಡು ಪ್ರತಿವ್ಯಕ್ತಿಗಳವರೆಗಿನ ಈ ಜಗತ್ತೆಲ್ಲವೂ ಆತ್ಮನಲ್ಲಿ ತೋರುತ್ತಿರುತ್ತದೆ. ಕಾರ್ಯಪ್ರಪಂಚಕ್ಕೆ ಲಯವಾದರೆ ಕಾರಣಮಾತ್ರವೇ ಉಳಿಯುತ್ತದೆಂಬುದಕ್ಕೆ ಇದು ಉದಾಹರಣೆಯು.

ಅದ್ವೈತದ ಸ್ವರೂಪಾನುಭವವನ್ನು ಹೀಗೆ ವಿವರಿಸಬಹುದು :— ಅದ್ವೈತದರ್ಶನದಲ್ಲಿ ಸತ್ತಾ ಅಥವಾ ಇರುವಿಕೆಯು ಮೂರು ಬಗೆಯಾಗಿದೆ. ಎಂದು ಗೊತ್ತಾಗಿದೆ. ಪ್ರಾತಿಭಾಸಿಕ, ವ್ಯಾವಹಾರಿಕ ಮತ್ತು ಪಾರಮಾರ್ಥಿಕವೆಂದು ಅದನ್ನು ವಿಂಗಡಿಸಿದೆ. ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯು ತೋರುವಾಗ ಬೆಳ್ಳಿಯಲ್ಲಿನ ಸತ್ತೆಯು ಪ್ರಾತಿಭಾಸಿಕವಾದುದು. ಅದು ಸ್ವಲ್ಪಹೊತ್ತು ಮಾತ್ರ ಇರುತ್ತದಲ್ಲದೆ, ಒಂದು ವ್ಯಕ್ತಿಗೆ ಮಾತ್ರ ಅನ್ವಯ ಅಥವಾ ಸಂಬಂಧಪಟ್ಟಿರುತ್ತದೆ. ಬೆಳ್ಳಿಯು ತೋರುವಿಕೆಗೆ ಅಧಿಷ್ಠಾನವಾಗಿರುವ ಚಿಪ್ಪಿನ ಸಾಕ್ಷಾತ್ಕಾರಜ್ಞಾನದಿಂದ ಆ ಬೆಳ್ಳಿಯು ನಷ್ಟವಾಗಿ ಚಿಪ್ಪು ಮಾತ್ರ ಉಳಿದಿರುತ್ತದೆ. ಇದು ವ್ಯಾವಹಾರಿಕ ಸ್ಥಿತಿಯಲ್ಲಿ ಸಂಭವಿಸುತ್ತದೆಂಬುದು ನಮ್ಮೆಲ್ಲರಿಗೂ ಗೊತ್ತಾಗಿರುತ್ತದೆ. ಇದರಂತೆಯೇ ಸ್ವಪ್ನದಲ್ಲಿ ಅನುಭವಿಸಿದುದು ಎಲ್ಲವೂ ಮಿಥ್ಯಾಭೂತವಾದುದು ಎಂಬುದನ್ನೂ ಎಚ್ಚರಗೊಂಡ ಮೇಲೆ ಎಲ್ಲರೂ ತಿಳಿಯುತ್ತಾರೆ.

ನಾವು ವ್ಯವಹರಿಸುತ್ತಿರುವ ಈ ಪ್ರಪಂಚದಲ್ಲಿ ತೋರುತ್ತಿರುವ ಸತ್ತೆಯು ವ್ಯಾವಹಾರಿಕವಾದುದು. ವ್ಯವಹಾರವೆಂದರೆ ಶಬ್ದಪ್ರಯೋಗ ಮತ್ತು ಅರ್ಥಕ್ರಿಯಾ

ಕಾರಿತ್ವವೆಂದು ಅರ್ಥವು. ಎಂದರೆ ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಿ ಮಾಡುವ ಶಬ್ದಪ್ರಯೋಗವೂ, ನಾವು ಪ್ರತಿನಿತ್ಯದಲ್ಲೂ ಮಾಡುತ್ತಿರುವ ಲೌಕಿಕವಾದ ಮತ್ತು ವೈದಿಕವಾದ ಎಲ್ಲ ಕರ್ಮಗಳೂ, ಅವುಗಳಿಂದ ನಿರೀಕ್ಷಿಸುತ್ತಿರುವ ಫಲ, ಭಾವಗಳೂ, ಇಹಲೋಕಪರಲೋಕಗಳೂ, ಇವುಗಳಿಗೆ ಸಂಬಂಧಪಟ್ಟಿರುವ ಧರ್ಮಗಳ ಆಚರಣೆಗಳೂ, ಇವೆಲ್ಲಕ್ಕೂ ವ್ಯವಹಾರವೆಂದು ಹೆಸರು. ಇದರಲ್ಲಿ ನಾವೂ, ಇತರರೂ ಈ ಪ್ರಾಪಂಚಿಕ ಪದಾರ್ಥಗಳೂ, ವೇದಶಾಸ್ತ್ರಸಾಹಿತ್ಯಗಳೂ, ಎಲ್ಲವೂ ಸತ್ಯವಾಗಿ ಇವೆ. ಎಂದು ನಾವು ನಂಬಿ ವ್ಯವಹರಿಸುತ್ತಿರುತ್ತೇವೆ. ಆ ನಂಬಿಕೆಗೆ ಅನುಸಾರವಾಗಿ ಫಲಗಳನ್ನೂ ನಮ್ಮ ಪ್ರಯತ್ನಗಳಿಗೆ ತಕ್ಕಂತೆ ಪಡೆಯುತ್ತಿರುತ್ತೇವೆ. ಇವೆಲ್ಲಕ್ಕೂ ಅವಲಂಬನವಾಗಿರುವ ಸತ್ತೆಗೆ ವ್ಯಾವಹಾರಿಕ ಸತ್ತೆ. ಎಂದು ಹೆಸರಿದೆ. ಈ ಸತ್ತೆಯು ಪ್ರಾತಿಭಾಸಿಕಸತ್ತೆಗಿಂತ ಹೆಚ್ಚು ದೀರ್ಘಕಾಲ ಇರುತ್ತದೆ. ಅಲ್ಲದೆ ಮೋಕ್ಷದ ಪರ್ಯಂತವಾಗಿ ಅನುಸರಿಸಿಯೂ ಇರುತ್ತದೆ. ಇಷ್ಟೇ ಅಲ್ಲದೆ

ಇದರ ಪ್ರತೀತಿಯೂ ಅನುಭವವೂ ಒಂದು ವ್ಯಕ್ತಿಗೆ ಮಾತ್ರ ಸಂಬಂಧಪಟ್ಟಿರದೆ, ಎಲ್ಲರಿಗೂ ಅನ್ವಯವಾಗುವಂತಿರುತ್ತದೆ. ಇಲ್ಲಿ ನಾವು ನಮ್ಮ ಸಂಸ್ಕೃತಿ ಅಭಿರುಚಿ, ಸನ್ನಿವೇಶಗಳಿಗೆ ತಕ್ಕಂತೆ ಕರ್ಮಗಳನ್ನು ಮಾಡುತ್ತಿರುತ್ತೇವೆ. ನಮ್ಮ ಅನುಭವದಿಂದ ದುಷ್ಕರ್ಮವು ದುಃಖವನ್ನೂ, ಸತ್ಕರ್ಮವು ಸುಖವನ್ನೂ, ಉಂಟು ಮಾಡುತ್ತದೆಂದು ಗೊತ್ತಾಗುತ್ತದೆ. ಆಮೇಲೆ ವಿವೇಕದಿಂದ ದುಷ್ಕರ್ಮಗಳನ್ನು ಬಿಟ್ಟು ಸತ್ಕರ್ಮಗಳನ್ನೇ ಮಾಡುತ್ತೇವೆ. ಆದರೂ ಜನರಲ್ಲಿ ಕಾಣಬರುವ ವೈಷಮ್ಯಗಳನ್ನು ಎಂದರೆ, ಒಬ್ಬನು ಶ್ರೀಮಂತನು, ಮತ್ತೊಬ್ಬನು ಬಡವನು; ಒಬ್ಬನು ಅರೋಗದೃಢಕಾಯನು, ಇನ್ನೊಬ್ಬನು ರೋಗಿ ಅಶಕ್ತನು; ಒಬ್ಬ ಬುದ್ಧಿಕುಶಲನು, ಮುಗದೊಬ್ಬನು ದಡ್ಡನು; ಒಬ್ಬನು ಬೇಗಬೇಗನೆ ಕಲಿಯಬಲ್ಲನು, ಮತ್ತೊಬ್ಬನು ಕಲಿಯಲಾರನು; ಈ ವೈಷಮ್ಯಗಳಿಗೆ ಕಾರಣಗಳನ್ನು ವಿಮರ್ಶಿಸಿದರೆ ಜನ್ಮಾಂತರೀಯ ಸಂಸ್ಕಾರವೆಂದು ಗೊತ್ತಾಗುತ್ತದೆ. ಈ ಪ್ರಪಂಚದಲ್ಲಿರುವ ಅನೇಕಾನೇಕರಾದ ಕರ್ತೃಭೋಕ್ತೃಗಳಿಗೆ ಅವರವರ ಕರ್ಮಗಳಿಗೆ ತಕ್ಕಂತೆ ಫಲಗಳನ್ನು ತಕ್ಕ ದೇಶಕಾಲಗಳಲ್ಲಿ ಕೊಡಬಲ್ಲ ಸರ್ವಜ್ಞನಾದ, ಮತ್ತು ಈ ಪ್ರಪಂಚದ ಸೃಷ್ಟಿಸ್ಥಿತಿಸಂಹಾರಗಳನ್ನು ನೆರವೇರಿಸಬಲ್ಲ ಸರ್ವಶಕ್ತನೂ ಆದ, ಈಶ್ವರನೊಬ್ಬನಿರಬೇಕೆಂದೂ, ಇಲ್ಲದಿದ್ದರೆ ಅವ್ಯವಸ್ಥೆಯಿಂದ ಎಲ್ಲವೂ ಕ್ರಮತಪ್ಪಿ ಗೊಂದಲವಾಗಬೇಕಾದೀತೆಂದೂ, ವಿಮರ್ಶೆಯಿಂದ ಗೊತ್ತಾಗುತ್ತದೆ. ಇದರ ಕ್ರಮವ್ಯವಸ್ಥೆಗಾಗಿ ಈಶ್ವರನಿದಾನೆ. ಇಷ್ಟಫಲಪ್ರಾಪ್ತಿಗಾಗಿ ವರ್ಣಾಶ್ರಮಧರ್ಮ ಅಥವಾ ಕರ್ಮಗಳ ಅನುಷ್ಠಾನವೂ ಕ್ಲೃಪ್ತವಾಗಿದೆ

ಇದೇ ವ್ಯವಹಾರವು ಈ ವ್ಯಾವಹಾರಿಕ ಪ್ರಪಂಚದಲ್ಲಿ ದ್ವೈತವೇ ಸತ್ಯವು. ಎಂದರೆ ಈಶ್ವರನೂ (ಲಕ್ಷ್ಮೀನಾರಾಯಣ, ಉಮಾಮಹೇಶ್ವರ, ಅಥವಾ ಪರಾಶಕ್ತಿ), ಜೀವರೂ, ಈ ಲೋಕವೂ, ಪರಲೋಕಗಳೂ, ವೇದಶಾಸ್ತ್ರಗಳೂ, ಎಲ್ಲವೂ ಸ್ವತಂತ್ರವಾಗಿ ಸತ್ಯವಾಗಿವೆ. ಎಂಬುದು ಸಿದ್ಧಾಂತವು. ಇದರಲ್ಲಿ ಈಶ್ವರನು ಸಗುಣನೂ ಸಾಕಾರನೂ ಆಗಿದಾನೆ. ಜೀವರು ಪರಿಚ್ಛಿನ್ನರು, ಅಣುಗಳು, ಪ್ರಪಂಚವೂ ಸತ್ಯವಾದುದು. ದ್ವೈತ(ಮಾಧ್ವ)ಮತದಲ್ಲಿ ಯೋಗ್ಯತೆ ಎಂಬ ವಿಶೇಷ ಪದಾರ್ಥವನ್ನು ಅಂಗೀಕರಿಸಲಾಗಿದೆ. ವಿಶಿಷ್ಟಾದ್ವೈತ(ರಾಮಾನುಜ) ಮತದಲ್ಲಿ ಧರ್ಮಭೂತಜ್ಞಾನವೆಂಬ ಪದಾರ್ಥವನ್ನು ಒಪ್ಪುತ್ತಾರೆ. ಹೀಗೆ ಈ ವ್ಯಾವಹಾರಿಕ ಪ್ರಪಂಚದಲ್ಲಿ ಈ ಮತಗಳಂತೆಯೇ ಕ್ರಿಸ್ತ, ಮುಸಲ್ಮಾನ್ ಮತಗಳೂ ಸಮಾವೇಶವನ್ನು ಪಡೆಯುತ್ತವೆ.

ಈ ಎರಡು ಮತಗಳಲ್ಲೂ ವಿಶೇಷವೇನೆಂದರೆ ಈಶ್ವರನು ಸಗುಣನಾದರೂ ನಿರಾಕಾರನು. ಜೀವರಿಗೆ ಈ ಒಂದೇ ಜನ್ಮವು. ಸತ್ಕರ್ಮದಿಂದ ಅನಂತವಾದ ಸ್ವರ್ಗವೂ ದುಷ್ಕರ್ಮದಿಂದ ನರಕವೂ ದೊರೆಯುತ್ತದೆ. ಎಂಬುದು ವಿಶೇಷವು. ಈ ಮತಗಳಲ್ಲಿ ಈಶ್ವರನಿಗೆ ವೈಷಮ್ಯನೈರ್ಘೃಣ್ಯದೋಷಗಳೂ, ಜೀವರಿಗೆ ಕೃತಹಾನಿ ಅಕೃತಾಭ್ಯಾಗಮದೋಷಗಳೂ, ಕರ್ಮಗಳಿಗೂ ಫಲಗಳಿಗೂ ಅನನುರೂಪವಾಗಿರುವಿಕೆ ಎಂಬ ದೋಷವೂ ಸಂಭವಿಸುತ್ತವೆ.

ಈ ವ್ಯಾವಹಾರಿಕಸತ್ತೆಯನ್ನು ಮೀರಿರುವ ಪಾರಮಾರ್ಥಿಕ ಸತ್ತಾ ಎಂಬುದು ಇದೆ. ಪ್ರಾತಿಭಾಸಿಕ ಸತ್ತೆಯು ಹೇಗೋ ಹಾಗೆಯೇ ವ್ಯಾವಹಾರಿಕಸತ್ತಾ ಅಥವಾ ಸತ್ಯವೂ ತೋರಿಕೆ ಮಾತ್ರವಾಗಿದೆ. ಈ ತೋರಿಕೆಗೆ ಕಾರಣವು ಅಧಿಷ್ಠಾನವಾದ ಪರಬ್ರಹ್ಮತತ್ವದ ಅಜ್ಞಾನವೇ ಆಗಿದೆ. ಬ್ರಹ್ಮ ಒಂದೇ ನಿತ್ಯನಿರ್ವಿಕಾರಿಯಾದ ಸಚ್ಚಿದಾನಂದಸ್ವರೂಪವಾಗಿರುವ ತತ್ವವು. ನಿದ್ರೆಯಿಂದ ಎಚ್ಚರಗೊಳ್ಳುವಿಕೆಯು ಹೇಗೋ ಹಾಗೆ ಬ್ರಹ್ಮತತ್ವದ ಅಪರೋಕ್ಷಾನುಭವವೆಂಬ ಎಚ್ಚರಗೊಳ್ಳುವಿಕೆಯು ಒಂದು ಉಂಟು. ಈ ಜ್ಞಾನಪ್ರಬೋಧದಿಂದ ಎಲ್ಲವೂ ಬ್ರಹ್ಮರೂಪವಾಗಿ ಅಖಂಡವೂ ಏಕವೂ ಆದ ಜ್ಞಾನಸ್ವರೂಪವಾಗಿ ಉಳಿದಿರುವಿಕೆಯಾಗುತ್ತದೆ. ಇದೇ ಅದ್ವೈತಸಿದ್ಧಾಂತದಲ್ಲಿನ ಮೋಕ್ಷಸ್ವರೂಪವು. ಇದನ್ನೇ ಪಾರಮಾರ್ಥಿಕಸತ್ತೆ ಎಂದು ವರ್ಣಿಸಿದೆ. ಲೋಕದಲ್ಲಿರುವ ಎಲ್ಲ ಮತಗಳೂ, ದರ್ಶನಗಳೂ, ವ್ಯಾವಹಾರಿಕಸ್ಥಿತಿಯಲ್ಲಿ ನಿಜವಾಗಿರುತ್ತವೆಂದು ಆಗುವುದರಿಂದ ಅದ್ವೈತಕ್ಕೆ ಯಾವ ಮತದೊಡನೆಯೂ ವಿರೋಧವಿಲ್ಲವು. ಅಲ್ಲದೆ ಅದ್ವೈತವು ಎಲ್ಲವನ್ನೂ ಒಳಗೊಳ್ಳಬಲ್ಲಷ್ಟು ದೊಡ್ಡದೂ, ನಿತ್ಯವಾದ ಸ್ವರೂಪವೂ ಆಗಿದೆ. ಆದುದರಿಂದ ಹೀಗೆ ಇದರ ಹೆಚ್ಚುಗಾರಿಕೆಯನ್ನು ಮನಗಾಣಬಹುದು.

ಈ ರೀತಿಯಲ್ಲಿ ಅದ್ವೈತವೇದಾಂತದರ್ಶನದ ಸಿದ್ಧಾಂತಕ್ಕೆ ಅನುಸಾರವಾಗಿ ಮುಕ್ತನು ಪಡೆಯುವ ಬ್ರಹ್ಮಾತ್ಮೈಕ್ಯಾನುಭವದ ದೃಷ್ಟಿಯಿಂದ, ಎಂದರೆ, ಪಾರಮಾರ್ಥಿಕಸತ್ತಾದೃಷ್ಟಿಯಿಂದ, ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ। ಎಂದರೆ, ಪರಬ್ರಹ್ಮತತ್ವ ಒಂದೇ. ನಿತ್ಯವೂ, ನಿರ್ವಿಕಾರಿಯೂ, ಸಚ್ಚಿದಾನಂದರೂಪವೂ, ಆಗಿರುವ ಚೈತನ್ಯವೆಂದೂ, ಈ ಚರಾಚರಪ್ರಪಂಚವೆಲ್ಲವೂ, ಪ್ರಾತಿಭಾಸಿಕ ಮತ್ತು ಸ್ವಾಪ್ನಿಕಪ್ರಪಂಚದಂತೆ, ಮಿಥ್ಯಾಭೂತವಾದುದು, ಸುಳ್ಳಾದುದು, ವಾಸ್ತವಾದುದಲ್ಲದ್ದು, ಅಥವಾ ತೋರಿಕೆಯ ಸ್ವಭಾವವುಳ್ಳದ್ದು, ಎಂದೂ, ಜೀವಚೈತನ್ಯವೇ ವಾಸ್ತವವಾಗಿ ಬ್ರಹ್ಮವಾಗಿರುವುದೆಂದೂ, ಹೇಳಿದೆ. ಈ ವಾಸ್ತವವಾದ ಅದ್ವೈತಸ್ವರೂಪವನ್ನು ಮನಗಾಣದ, ದ್ವೈತವಾಸನೆಯೇ ಪ್ರಬಲವಾಗಿರುವ, ಜನರು ಅದ್ವೈತಸಿದ್ಧಾಂತವನ್ನು ಹೀಗೆ ಅಲ್ಲಗಳೆಯುವುದುಂಟು. "ಇಲ್ಲಿ ನೋಡಿ, ಸ್ವಾಮಿ, ಅದ್ವೈತಿಗಳು ಇದೆಲ್ಲವನ್ನೂ ಸುಳ್ಳೆನ್ನುತ್ತಾರೆ! ನಾನು ಸುಳ್ಳೇ? ನೀವು ಸುಳ್ಳೇ? ನಾನು ಮಾತನಾಡುತ್ತಿರುವುದೂ, ನೀವು ಕೇಳುತ್ತಿರುವುದೂ, ಬರೆಯುತ್ತಿರುವುದೂ, ಕಾಣುವ, ಕೈಗೂ ಸಿಕ್ಕುವ, ಈ ಪ್ರಪಂಚವೂ ಸುಳ್ಳೇ? ಇಂತಹ ಪ್ರತ್ಯಕ್ಷವನ್ನೇ ಅಪಲಾಪಮಾಡುವ ಅವರ ಅದ್ವೈತಸಿದ್ಧಾಂತವೇ ಸುಳ್ಳೆಂಬುದು ನಮಗೆ ಮತ್ತು ನಿಮಗೆ ಗೊತ್ತಾಗಿದೆ!" ಎಂದು ಮುಂತಾಗಿ ಹಳಿದು ಮಾತನಾಡುತ್ತಾರೆ. ಈ ವಿಮರ್ಶೆಯೂ ಖಂಡನೆಯೂ ವ್ಯಾವಹಾರಿಕದಶೆಯಲ್ಲಿ ಉಂಟಾಗಿದೆ, ಮತ್ತು ವ್ಯಾವಹಾರಿಕಸ್ಥಿತಿಯ ದೃಷ್ಟಿಯಿಂದ ಹೊರಡುತ್ತಿದೆ, ಎಂಬುದನ್ನು ಗಮನಿಸಬೇಕು. ಏಕೆಂದರೆ, ಪ್ರಾತಿಭಾಸಿಕಸ್ಥಿತಿಯಲ್ಲಿರುವಾಗ, ಸ್ವಪ್ನಗಳನ್ನು ನೋಡುತ್ತಿರುವಾಗ, ಆ ಪದಾರ್ಥಗಳು ಸುಳ್ಳೆಂಬುದು ಅವರಿಗೆ ಗೊತ್ತಾಗುವುದಿಲ್ಲ. ಭ್ರಾಂತಿಹೋದ ಮೇಲೆ, ಎಚ್ಚರವಾದ ಮೇಲೆ, ಅದೆಲ್ಲವೂ ಭ್ರಾಂತಿ ಎಂಬುದು ಗೊತ್ತಾಗುತ್ತದೆ. ಹಾಗೆ ಈಗಲೂ, ಈ ವ್ಯಾವಹಾರಿಕ ಪ್ರಪಂಚದಲ್ಲಿ ವ್ಯವಹರಿಸುತ್ತಿರುವಾಗ, ಇದೆಲ್ಲವೂ ಸತ್ಯವೇ. ಆದರೆ ಇದೇ ಪರಮಾರ್ಥವಲ್ಲವು. ಇದನ್ನು ಮೀರಿ, ದಾಟಿ, ಮೇಲಾಗಿರುವ ಪಾರಮಾರ್ಥಿಕಸ್ಥಿತಿಯು ಒಂದಿದೆ. ಹೇಗೆಂದರೆ ಈ ಪ್ರಪಂಚವೆಲ್ಲವೂ ಬದಲಾಯಿಸುತ್ತಿರುವುದರಿಂದ ವಿಕಾರಿಯಾಗಿ ಅನಿತ್ಯವಾಗಿದೆ. ಕರ್ಮಗಳೂ ಅವುಗಳ ಫಲಗಳೂ ಹಿಂಸಾ ಆಯಾಸಗಳಿಂದ ಕೂಡಿರುವುದರಿಂದ ದೋಷವುಳ್ಳವಾಗಿವೆ. ಅಲ್ಲದೆ ಫಲ ತಾರತಮ್ಯದಿಂದ ಅಸೂಯಾದಿಗಳಿಗೆ ಜನಕಗಳೂ ಆಗಿರುತ್ತವೆ.

ಇಷ್ಟೇ ಅಲ್ಲದೆ ಅವು ದುಃಖಮಿಶ್ರಗಳೂ, ನಶ್ವರಗಳೂ, ಆಗಿರುತ್ತವೆ. ಆದುದರಿಂದ ಇಂತಹ ಸಾಧನಗಳಿಂದ ಜನ್ಯವಾಗಿ ಉಂಟಾಗುವ ಮುಕ್ತಿಯು ಪರಮ

ಸುಖವೂ ಅಲ್ಲವು. ದುಃಖದ ಆತ್ಯಂತಿಕವಾದ ನಿವೃತ್ತಿಯೂ ಇದರಿಂದ ಆಗಲಾರದು. ಆದುದರಿಂದ ಜ್ಞಾನದಿಂದ, ಅಜ್ಞಾನ ತತ್ಕಾರ್ಯಗಳ ನಿವೃತ್ತಿಯಿಂದ, ಅದರಲ್ಲೂ 'ನಾನು', 'ನನ್ನದು', ಎಂಬ ಅಭಿಮಾನ ತ್ಯಾಗದಿಂದ, ಬ್ರಹ್ಮಾತ್ಮೈಕ್ಯಸಾಕ್ಷಾತ್ಕಾರ ದಿಂದ, ದುಃಖದ ಆತ್ಯಂತಿಕ ನಿವೃತ್ತಿಯೂ, ಪರಮ ಸುಖಸ್ವರೂಪವಾದ ಆತ್ಮಾನಂದದ ಅಪರೋಕ್ಷಾನುಭವವೂ ಉಂಟಾಗಿ, ಜೀವನು ಎಂದಿನಂತೆ ಬ್ರಹ್ಮಾನಂದ ರೂಪವಾ ಗಿರುವುದೇ ಮೋಕ್ಷವೆಂಬುದು, ಹೃದಯಂಗಮವಾಗಿ ಗೊತ್ತಾಗುತ್ತದೆ. ಇವಕ್ಕೆ ಪ್ರಮಾಣಗಳು

ಪುಣ್ಯೇನ ಪುಣ್ಯಂ ಲೋಕಂನಯತಿ ಪಾಪೇನಪಾಪಂ ಉಭಾಭ್ಯಾಮೇವ ಮಾನುಷ್ಯಲೋಕಂ. ಪ್ರಶ್ನ. ಉ. ೩. ೭.

ತೇತಂಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇಮರ್ತ್ಯಲೋಕಂ ವಿಶಂತಿ || ಭಗವದ್ಗೀತಾ. ೯. ೨೧.

ಗತಾಗತಂ ಕಾಮಕಾಮಾ ಲಭಂತೇ ಭ. ಗೀ. ೯. ೨೧.

ದೃಷ್ಟವದಾನುಶ್ರವಿಕಃ ಸ ಹ್ಯವಿಶುದ್ಧಿಕ್ಷಯಾತಿಶಯಯುಕ್ತಃ | ಸಾಂಖ್ಯ ಕಾರಿಕಾ. ೨.

ಯೋ ವೈಭೂಮಾ ತತ್ಸುಖಂ, ನಾಲ್ಪೇ ಸುಖಮಸ್ತಿ, ಭೂಮೈವ ಸುಖಂ, ಭೂಮಾತ್ವೇವ ವಿಜಿಜ್ಞಾಸಿತವ್ಯಃ. ಛಾಂದೋಗ್ಯ. ಉ. ೭. ೨೩. ೧.

ಯೋವೈ ಭೂಮಾ ತದ ಮೃತಂ ಛಾಂ. ಉ. ೭. ೨೪. ೧. ಸ್ಸೋಽಬಿಭೇತ್ ಬೃ. ೧. ೪. ೨.

ದ್ವಿತೀಯಾದ್ವೈ ಭಯಂ ಭವತಿ. ಬೃ. ಉ. ೧. ೪. ೨.

ಆತ್ಮೈವೇದಮಗ್ರ ಆಸೀತ್. ಬೃ. ಉ. ೧. ೪. ೧. ಬ್ರಹ್ಮವಾ ಇದಮಗ್ರ ಆಸೀತ್, ತದಾತ್ಮಾನ ಮೇವಾವೈತ್, ಅಹಂಬ್ರಹ್ಮಾಸ್ಮೀತಿ, ತಸ್ಮಾತ್ತತ್ಸರ್ವ ಮಭವತ್. ೧. ೪. ೧೦.

ಅಥಯೋಽನ್ಯಾಂ ದೇವತಾಂ ಉಪಾಸ್ತೇ ಅನ್ಯೋಽಹಮಸ್ಮೀತಿ ನ ಸ ವೇದ ಯಥಾಪಶುಃ. ಬೃ. ಉ. ೧. ೪. ೧೦.

ಯೋವೈ ಸ ಧರ್ಮಸ್ಸತ್ಯಂ ವೈತತ್. ತದುಭಯಂ ಭವತಿ. ಬೃ. ಉ. ೧.೪.೧೪.

ಆತ್ಮೈವೇದ ಮಗ್ರ ಆಸೀದೇಕಏವಸೋಽ ಕಾಮಯತ ಜಾಯಾಮೇ ಸ್ಯಾತ್ ಅಥ ಪ್ರಜಾಯೇಯ. ಬೃ. ಉ. ೧. ೪. ೧. ೧೭.

ನೇಹನಾನಾಽಸ್ತಿ ಕಿಂಚನ.

ಮೃತ್ಯೋಸ್ಸಮೃತ್ಯುಂ ಗಚ್ಛತಿ ಯ ಇಹ ನಾನೇವ ಪಶ್ಯತಿ । **ಈಶೋಪ. ೪.**

ಸರ್ವಂಖಲ್ವಿದಂಬ್ರಹ್ಮ ; ತತ್ವಮಸಿ ; ಅಯಮಾತ್ಮಾಬ್ರಹ್ಮ; ಅಹಂ ಬ್ರಹ್ಮಾಸ್ಮಿ; ಎಂದು ಮುಂತಾಗಿ ನೂರಾರು ಪ್ರಮಾಣವಾಕ್ಯಗಳಿವೆ.

ಆದರೆ ಇದರಂತೆಯೇ ಇತರ ಮತದರ್ಶನಗಳಲ್ಲಿ ಹೇಳಿರುವ ಸಿದ್ಧಾಂತಗಳಿಗೆ ಅನುಗುಣವಾಗಿರುವಂತೆ ತೋರುವ ಶ್ರುತಿವಾಕ್ಯಗಳೂ ಇವೆ. ಶ್ರುತಿಯ ಮುಖ್ಯ ತಾತ್ಪರ್ಯವನ್ನು ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಉಪಪತ್ತಿ, ಎಂಬ ಆರು ಪ್ರಮಾಣಗಳಿಂದ ನಿರ್ಣಯಿಸಬೇಕೆಂದು ಹೇಳುವುದಾದರೆ, ಅದರಂತೆಯೇ ಇತರ ಮತೀಯರೂ ದಾರ್ಶನಿಕರೂ ವಾದಿಸುತ್ತಾರೆ. ಹೀಗಾದರೆ ಅದ್ವೈತದ ಹೆಚ್ಚುಗಾರಿಕೆ ಏನೆಂದರೆ, ಸ್ವತಂತ್ರವಾಗಿ ಯುಕ್ತಿಗಳನ್ನು ಉಪಯೋಗಿಸಿ, ಅನುಭವ ಗಳನ್ನು ಪಡೆಯುತ್ತಾ, ವಿಮರ್ಶೆಪೂರ್ವಕವಾಗಿ ಮುಂದುವರಿದರೂ ಅದ್ವೈತ ಸಿದ್ಧಾಂತಕ್ಕೆ ಅನುಗುಣವಾದ ತಿಳಿವಳಿಕೆಯೇ ಬರುತ್ತದೆ. ಮೊದಲು ಶ್ರುತಿ ಗುರುವಾಕ್ಯಗಳಲ್ಲಿ ಶ್ರದ್ಧಾಭಕ್ತಿಯಿಂದ ಪ್ರಾರಂಭಿಸಬೇಕಾದುದು ಸಮಾನವಾಗಿದ್ದರೂ ಯುಕ್ತಿ ವಿಮರ್ಶೆ ಅನುಭವಗಳಿಂದ ಅದ್ವೈತಾನುಗುಣವಾದ, ಇತರ ಮತದರ್ಶನದ ಸಿದ್ಧಾಂತಗಳೆಂಬ ಮಜಲುಗಳನ್ನೂ ಮಾರ್ಗಕ್ರಮದಲ್ಲಿ ಪಡೆದು, ಮುಂದುವರಿದ ಮೇಲೆ, ಅದ್ವೈತಸಿದ್ಧಾಂತವನ್ನೇ ಪಡೆಯುತ್ತೇವೆ ಎಂಬುದನ್ನು "ಶ್ರುತ್ಯಾದಯಃ ಅನುಭ ನಾದಯಶ್ಚಶ್ಚಯಥಾ ಸಂಭವಂ ಇಹ ಪ್ರಮಾಣಂ" ಎಂದು ಶಂಕರಾಚಾ ರ್ಯರೂ ಹೇಳಿರುವುರು. ಆ ಅನುಭವವನ್ನೇ ಹೆಚ್ಚು ಹೆಚ್ಚು ಜನರು ಪಡೆಯುತ್ತಿರು ವುದೂ, ಅದ್ವೈತದ ಹೆಚ್ಚುಗಾರಿಕೆಯಾಗಿದೆ.

ಅಲ್ಲದೆ ಶ್ರುತಿಯಲ್ಲಿ ಅದ್ವೈತವನ್ನು ಹೆಚ್ಚಾಗಿ ವರ್ಣಿಸಿ, ವಿವರಿಸಿ, ಹೊಗಳಿದೆ. ಎಲ್ಲ ಪುರಾಣ, ಇತಿಹಾಸಗಳಲ್ಲೂ, ಅದ್ವೈತವನ್ನು ತಿಳಿಸುವ ಭಾಗಗಳು ತಪ್ಪದೆ ಅನೇಕ ಪ್ರಸಂಗಗಳಲ್ಲಿ ವಿವರಿಸಿ ಹೇಳಿದೆಯೇ ಹೊರತು, ಎಲ್ಲಿಯೂ ಅದ್ವೈತವನ್ನು ನಿಂದಿಸಿರುವುದಿಲ್ಲ. ಆದರೆ ದ್ವೈತವನ್ನು ನಿಂದಿಸಿರುವ ವಾಕ್ಯಗಳು ಶ್ರುತಿ, ಪುರಾಣ ಗಳಲ್ಲಿ ಅನೇಕವಾಗಿವೆ. ಇದರ ತಾತ್ಪರ್ಯವು 'ನಹಿ ನಿಂದಾನ್ಯಾಯ', ದಂತೆ ವಿಮರ್ಶಕನಾದ ಮುಮುಕ್ಷುವು ದ್ವೈತದಲ್ಲಿ ನಿಲ್ಲದೆ ಮುಂದುವರಿದರೆ ಅದ್ವೈತವನ್ನು ಮನಗಾಣುತ್ತಾನೆಂತಲೂ, ಅದೇ ಪರಮಶ್ರೇಯೋರೂಪವಾದ ಮೋಕ್ಷ ಫಲವೆಂ ತಲೂ ತಿಳಿಯ ಹೇಳುವುದೇ ಆಗಿದೆ. ಎಂಬುದನ್ನು ಮರೆಯಬಾರದು.

ಇಷ್ಟಾದರೂ ಇನ್ನೊಂದು ಆಕ್ಷೇಪಣೆಗೆ ಉತ್ತರವನ್ನು ಹೇಳಬೇಕಾಗಿರುತ್ತದೆ. ಅದ್ವೈತವೇ ಪರಮಾರ್ಥವಾಗುವುದಾದರೆ, ದ್ವೈತವು ಪಾರಮಾರ್ಥಿಕವಾದುದಲ್ಲವಾದರೆ, ಶ್ರುತಿಸ್ಮೃತಿಪುರಾಣಗಳಲ್ಲಿ ಪ್ರಪಂಚಗಳ ಸೃಷ್ಟಿಸ್ಥಿತಿಸಂಹಾರಗಳನ್ನೂ, ಧರ್ಮಾಧರ್ಮಗಳನ್ನೂ, ಅವುಗಳಿಂದಲೆ ಮೋಕ್ಷಸಾಧನೆಯಾಗುತ್ತದೆಂಬುದನ್ನೂ ಹೇಳಿರುವುದು ಹೇಗೆ ಸಂಗತವಾಗುತ್ತದೆ? ಎಂದು ಪ್ರಶ್ನೆಯು ಉಂಟಾಗುತ್ತದೆ. ಇದಕ್ಕೆ ಸಮಾಧಾನಕರವಾದ ಉತ್ತರವನ್ನು ಹೀಗೆ ಹೇಳಿದೆ. ಏನೆಂದರೆ, ಸಾಮಾನ್ಯವಾಗಿ ನಾವು ಉಪಯೋಗಿಸುವ ಯುಕ್ತಿ ಅನುಭವಗಳಿಂದ ತಿಳಿವಳಿಕೆಯನ್ನು ಪಡೆಯುತ್ತಿದೇವೆ. ಇದರಂತೆ ಭೌತಶಾಸ್ತ್ರ, ರಸಾಯನಶಾಸ್ತ್ರ ಮುಂತಾದ ಶಾಸ್ತ್ರಗಳ ರೀತಿಯಲ್ಲಿ ತತ್ವಶಾಸ್ತ್ರವೂ ಮುಂದುವರಿಯಬೇಕಾಗಿದೆ. ಆ ದೃಷ್ಟಿಯಿಂದ ನೋಡಿದರೆ ಸೃಷ್ಟಿಯು ಆಗಬೇಕಾದರೆ ಹೇಗೆ ಸ್ವಾಭಾವಿಕವಾಗಿ, ಸಕಾರಣವಾಗಿ ಆಗಬಹುದು. ಮತ್ತು ಅದರಂತೆಯೇ ಸಂಹಾರವು ಹೇಗೆ ಯಾವ ಕ್ರಮದಲ್ಲಿ ಆಗಬಹುದು. ಎಂಬ ರೀತಿಯನ್ನು ತಿಳಿಸುವುದಕ್ಕಾಗಿ ಶ್ರುತಿಸ್ಮೃತಿಪುರಾಣಗಳಲ್ಲಿ ಸೃಷ್ಟಿಕ್ರಮ ಉಪಸಂಹಾರ ಕ್ರಮಗಳನ್ನು ಕಾರಣವಿಮರ್ಶೆಯೊಡನೆ ಸ್ವಾಭಾವಿಕವಾದ ರೀತಿಯಲ್ಲಿ ವರ್ಣಿಸಿದೆ. ಇದೇ ತತ್ವವಲ್ಲವು. ಇದಕ್ಕಿಂತ ಮಿಗಿಲಾದ ಸರ್ವವ್ಯವಹಾರಗಳನ್ನೂ ಮೀರಿರುವ ಸ್ಥಿತಿಯು ಬಂದಿದೆ. ಅದೇ ಪರಮಾರ್ಥವು. ಎಂದು ಬೋಧಿಸಿರುವ ಈ ರೀತಿಗೆ ಅಧ್ಯಾರೋಪ ಅಪವಾದ ನ್ಯಾಯವೆಂದು. ಇದರಂತೆ ಈ ಪ್ರಪಂಚದ ಸ್ವರೂಪವನ್ನು ತಿಳಿದು, ಅದಕ್ಕಿಂತ ಹೆಚ್ಚಿನ ನಿತ್ಯವೂ ನಿರ್ವಿಕಾರಿಯೂ, ಸರ್ವಾಧಿಷ್ಠಾನವೂ ಆದ ತತ್ವವು ಒಂದೇ ಎಂಬುದನ್ನು ಮನಗಾಣಬೇಕೆಂದು ವೇದಶಾಸ್ತ್ರಗಳ ತಾತ್ಪರ್ಯವಾಗಿದೆ.

ಈಗಿನ ಭೌತಶಾಸ್ತ್ರ ಮುಂತಾದುವುಗಳಲ್ಲಿ ಪ್ರಾಕೃತಾದ್ವೈತದ ಸಿದ್ಧಾಂತವು, ಎಂದರೆ, ಎಲ್ಲ ಪದಾರ್ಥಗಳೂ ಒಂದೇ ತತ್ವದಿಂದ (Electrons) ಉಂಟಾಗುತ್ತದೆಂದು ಪ್ರತಿಪಾದಿಸುತ್ತಿರುವುದು ಕಂಡುಬರುತ್ತದೆ. (The Theory of relativity) ಎಂದರೆ ಆಪೇಕ್ಷಿಕತತ್ವವಾದವನ್ನೂ ಗಮನಿಸಬಹುದು. ಇದರಂತೆಯೇ ಆಧ್ಯಾತ್ಮಿಕತತ್ವದಲ್ಲೂ ಅದ್ವೈತವನ್ನು ಮನಗಾಣಬಹುದು. ಭೇದವು ಸಿದ್ಧಿಸದೇ ಹೋಗಲು, ಸಚ್ಚಿದಾನಂದರೂಪದಲ್ಲಿ ನಿತ್ಯನಿರ್ವಿಕಾರಿರೂಪದಲ್ಲಿ ಅದ್ವೈತವೇ ಪರಮಾರ್ಥವಾಗಿ ಉಳಿಯುತ್ತದೆ.

ಈ ಅಂಶಗಳನ್ನು ಅಲ್ಲಲ್ಲಿ ಈ ಗ್ರಂಥದಲ್ಲೂ ಹೇಳಿರುವುದನ್ನು ಒಟ್ಟುಗೂಡಿಸಿ ಇಲ್ಲಿ ಹೇಳಿದೆ. ||೧೭||

ಭೂತಾನಿ ಶಂಭುರ್ಭುವನಾನಿ ಶಂಭುಃ
ವನಾನಿ ಶಂಭುರ್ಗಿರಯಶ್ಚ ಶಂಭುಃ ।
ಸ ಏವ ಸರ್ವಂ ನ ತತೋಽತಿರಿಕ್ತಂ
ತತಸ್ಸ ಏಕಃ ಪರಮಾರ್ಥವೋತತ್ ॥೧೮॥

ಇಜ್ಯಶ್ಚ ಯಜ್ಞೈರಯಮೇವ ಶಂಭುಃ
ಲಭ್ಯಶ್ಚ ದಾನೈರಖಿಲೈಸ್ತಥೈವ ।
ಜಪ್ಯಶ್ಚಮಂತ್ರೈರಖಿಲೈರ್ವಿಶಿಷ್ಟೈಃ
ಮೃಗ್ಯಶ್ಚ ದೇವೈರಮರೇಂದ್ರಪೂರ್ವೈಃ ॥೧೯॥

ತಪೋಭಿರುಗ್ರೈಸ್ಸತತಂ ವಿಶಿಷ್ಟಾಃ
ಮಹೇಶಮೇನಂ ಪರಮಪ್ರಿಯೇಣ ।
ಪ್ರಪೂಜಯಂತ್ಯೇವ ಮುನೀಂದ್ರವೃಂದಾ
ನಮಂತಿ ನಿತ್ಯಂ ವಚಸಾ ಸ್ತುವಂತಿ ॥೨೦॥

ಯತೀಂದ್ರವೃಂದಾ ಹೃದಿ ಸನ್ನಿವಿಷ್ಟಂ
ಗುರುಪ್ರಸಾದಾಚ್ಚ ಶಿವಪ್ರಸಾದಾತ್ ।

ಪಂಚಭೂತಗಳೂ, ಲೋಕಗಳೂ, ಕಾಡುಗಳೂ, ಬೆಟ್ಟಗಳೂ, ಈ ಎಲ್ಲ ಪ್ರಪಂಚವೂ ಪರಮಾರ್ಥದಲ್ಲಿ ಪರಶಿವಸ್ವರೂಪವಾಗಿವೆ. ಆರೋಪ್ಯವಾದ ಜಗತ್ತು ಅಧಿಷ್ಠಾನವಾದ ಬ್ರಹ್ಮಕ್ಕಿಂತ ಬೇರೆಯಾಗಿರದು. ॥೧೮॥

ಯಜ್ಞಯಾಗಗಳಿಂದ ಪೂಜಿಸಲ್ಪಡುವವನೂ, ಎಲ್ಲ ದಾನಗಳಿಂದಲೂ ಪಡೆಯಬೇಕಾದವನೂ, ಎಲ್ಲ ಮಂತ್ರವಿಶೇಷಗಳಿಂದಲೂ ಧ್ಯಾನಮಾಡಬೇಕಾದವನೂ ಈ ಪರಮಾತ್ಮನೇ ಆಗಿದಾನೆ. ॥೧೯॥

ಶಿಷ್ಟರಾದ ಭಕ್ತರು ಹೆಚ್ಚಾದ ಪ್ರೀತಿಯಿಂದ ಕಠಿನವಾದ ತಪಸ್ಸುಗಳ ಮೂಲಕವಾಗಿ ಈ ಪರಮೇಶ್ವರನನ್ನು ಪೂಜಿಸುತ್ತಾರೆ. ಋಷಿಸಮೂಹಗಳು ನಮಸ್ಕರಿಸುತ್ತಾರೆ. ಮತ್ತು ಮಾತಿನಿಂದ ಯಾವಾಗಲೂ ಸ್ತೋತ್ರಮಾಡುತ್ತಾರೆ. ॥೨೦॥

ಜ್ಞಾನಿಗಳಾದ ಯತಿಶ್ರೇಷ್ಠರ ಸಮೂಹಗಳು ತಮ್ಮ ಹೃದಯದಲ್ಲಿ ಉಪಲಭ್ಯಮಾನನಾಗಿರುವ, ನಾನು ಎಂಬ ಅನುಭವಕ್ಕೆ ಸಾಕ್ಷಿಯಾಗಿರುವ, ಜ್ಞಾನ

ಅಹಂಪದಪ್ರತ್ಯಯಸಾಕ್ಷಿಭೂತಂ
ಚಿದಾತ್ಮರೂಪಂ ವಿದುರೇನಮೇವ ॥೨೦॥

ಶಿವಮಶೇಷಮಿದಂ ಪರಿಪಶ್ಯತಃ
ಸಕಲಜನ್ಮಜರಾಮರಣಾದಯಃ ।
ನಿಖಿಲಲೋಕಗತಿಶ್ಚ ನಿರಂಕುಶಂ
ಪರಮರೂಪತಯೈವ ವಿಭಾತಿ ಹಿ ॥೨೧॥

ಅಮಲಬೋಧತಯಾ ಪರಮೇಶ್ವರಂ
ಸಕಲವೇದವಚೋಭಿರಯತ್ನತಃ ।
ಪರಮಯೋಗಬಲೇನ ಚ ಪಶ್ಯತಃ
ಕಥಮಶೇಷಜಗತ್ಪ್ರತಿಭಾ ಭವೇತ್ ॥೨೨॥

ಪರಮಶಿವಮಶೇಷಂ ಪಶ್ಯತಾಮಾದಿಭೂತಂ
ಹೃದಯಕುಹರಮಧ್ಯೇ ಸಂಚಿತಂ ಕರ್ಮವೃಂದಮ್ ।
ಝಟಿತಿ ಭವತಿ ದಗ್ಧಂ ತೂಲವದ್ವಹ್ನಿಯುಕ್ತಂ
ನ ಫಲನಿಕರಭೋಗಪ್ರಾಪ್ತಯೇ ತದ್ಭವೇಚ್ಚ ॥೨೩॥

ಸ್ವರೂಪನಾಗಿಯೂ ಇರುವ, ಈ ಪ್ರತ್ಯಗಾತ್ಮಸ್ವರೂಪನನ್ನು ಈ ಪರಮಾತ್ಮನನ್ನಾಗಿ ತಿಳಿಯುತ್ತಾರೆ. ||೨೦||

ಈ ಪ್ರಪಂಚವೆಲ್ಲವೂ, ಪರಾಧೀನನಲ್ಲದೆ ಸ್ವತಂತ್ರನಾದ ಪರಶಿವನಸ್ವರೂಪವಾದುದೆಂಬ ಸಾಕ್ಷಾತ್ಕಾರವನ್ನು ಪಡೆದವನಿಗೇ ಹುಟ್ಟು ಮುಪ್ಪುಸಾವು ಇವೆಲ್ಲವೂ, ಎಲ್ಲ ಲೋಕಗಳ ಪ್ರಾಪ್ತಿಯೂ, ಪರಮೇಶ್ವರಸ್ವರೂಪವಾಗಿಯೇ ಕಾಣುತ್ತದೆ. ||೨೧||

ಎಲ್ಲ ಶ್ರುತಿವಾಕ್ಯಗಳಿಂದಲೂ ಶ್ರೇಷ್ಠವಾದ ಯೋಗಶಕ್ತಿಯಿಂದಲೂ ಈ ಪರಮೇಶ್ವರನನ್ನು ದೋಷವಿಲ್ಲದ ಜ್ಞಾನಸ್ವರೂಪನನ್ನಾಗಿ ಸುಲಭವಾಗಿ ಯಾರು ತಿಳಿಯುತ್ತಾರೋ, ಅಂಥವರಿಗೆ ಈ ಜಗತ್ತಿನ ತೋರುವಿಕೆಯು ಹೇಗೆ ಉಂಟಾದೀತು ?||೨೨||

ಹೃದಯಾಕಾಶದ ಮಧ್ಯದಲ್ಲಿ ಎಲ್ಲಕ್ಕೂ ಮೊದಲಿರುವ ಪರಶಿವನನ್ನು ಸಂಪೂರ್ಣವಾಗಿ ಸಾಕ್ಷಾತ್ಕಾರಮಾಡಿಕೊಂಡಂಥವರ ಕರ್ಮಗಳೆಲ್ಲವೂ ಬೆಂಕಿತಗುಲಿದ ಹತ್ತಿಯ ಹಾಗೆ ಕೂಡಲೆ ಸುಟ್ಟುಹೋಗುತ್ತವೆ. ಆ ಕರ್ಮವು ತನ್ನ ಫಲಸಮೂಹ

ಕರ್ಮಭಿಸ್ಸಕಲೈರಪಿ ಲಿಪ್ಯತೇ
ಬ್ರಹ್ಮವಿತ್ಪ್ರವರಶ್ಚ ನ ಸರ್ವಥಾ ।
ಪದ್ಮಪತ್ರಮಿವಾದ್ಭಿರಹೋ ಪರ
ಬ್ರಹ್ಮವಿತ್ಪ್ರವರಸ್ಯ ತು ವೈಭವಮ್ ॥೨೫॥

ಪುಣ್ಯಪಾಪತಯಾ ಯದಿ ಭಾಸತೇ
ಕರ್ಮಜಾತಮನಾತ್ಮವಿತಿಸ್ತದಾ ।
ಬ್ರಹ್ಮರೂಪತಯೈವ ಹಿ ಭಾತಿ ಚೇತ್
ಬ್ರಹ್ಮವೇದನಮೇವ ತದುತ್ತಮಮ್ ॥೨೬॥

ಸರ್ಪಾದಿಭಾವೇನ ವಿಭಾಸಮಾನಂ
ರಜ್ಜುರ್ನ ಸರ್ಪಾದಿ ಸದೈವ ರಜ್ಜುಃ ।
ತದ್ವತ್ಪ್ರಪಂಚಾತ್ಮ ತಯಾ ವಿಭಾತಿ
ಶಿವೋ ನ ವಿಶ್ವಂ ಶಿವ ಏವ ತತ್ಸ್ವಯಂ ॥೨೭॥

ವನ್ನುಂಟುಮಾಡಲಾರದ್ದಾಗುತ್ತದೆ. ಪ್ರಾರಬ್ಧಕರ್ಮ ಮಾತ್ರ ಭೋಗದಿಂದಲೇ ನಷ್ಟವಾಗುತ್ತದೆ. ॥೨೪॥

ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದವನು ಕರ್ಮಗಳಿಂದಲೂ ಲೇಪವನ್ನು ಪಡೆಯುವುದಿಲ್ಲವು. ತಾವರೆಯ ಎಲೆಯು ನೀರಿನಿಂದ ಹೇಗೆ ನೆನೆಯದೆ ಇರುವದೋ, ಹಾಗೆ, ಬ್ರಹ್ಮಜ್ಞಾನಿಯ ಮಹಿಮೆಯು ಆಶ್ಚರ್ಯಕರವಾದುದು. ॥೨೫॥

ಕರ್ಮಸಮೂಹವು ಪುಣ್ಯಪಾಪರೂಪದಿಂದ ತೋರುತ್ತಿದ್ದರೆ ಅಂಥವನು ಆತ್ಮಜ್ಞಾನಿಯಲ್ಲವು. ಹಾಗಲ್ಲದೆ ಅದು ಬ್ರಹ್ಮರೂಪವಾಗಿಯೇ ಕಾಣುವುದಾದರೆ ಅಂತಹ ಬ್ರಹ್ಮಜ್ಞಾನವೇ ಉತ್ತಮವಾದುದು. ॥೨೬॥

ಹಾವಿನಂತೆ ತೋರುತ್ತಿರುವ ಹಗ್ಗವು ಯಾವಾಗಲೂ ಹಾವಾಗಿರುವುದಿಲ್ಲವು. ಅದು ಸರ್ವದಾ ಹಗ್ಗವಾಗಿಯೇ ಇರುತ್ತದೆ. ಅದರಂತೆ ಈ ಪ್ರಪಂಚರೂಪದಿಂದ ತೋರುತ್ತಿರುವುದು ಪರಶಿವನೇ ಆಗಿದೆ, ಪ್ರಪಂಚವಾಗಿರುವುದಿಲ್ಲವು. ॥೨೭॥

ಯಥೈವ ತೋಯಾತ್ಮತಯಾ ಮಹೀಮಿಮಾಂ
ನರೋ ವಿಜಾನನ್ನಪಿ ವೇದ ಮೇದಿನೀಮ್ ।
ತಥೈವ ವಿಶ್ವಾತ್ಮತಯಾಽಭಿಪಶ್ಯನ್
ಅಪಿ ಪ್ರಪಶ್ಯತ್ಯಮಲಪ್ರಬೋಧಮ್ ॥೨೮॥

ಅತಃ ಪ್ರಪಂಚಾನುಭವಸ್ಸದಾ ನ ಹಿ
ಸ್ವರೂಪಬೋಧಾನುಭವಸ್ಸದಾ ಖಲು ।
ಇತೀವ ಪಶ್ಯನ್ ಪರಿಪೂರ್ಣವೇದನಃ
ನ ಬದ್ಧಮುಕ್ತೋ ನ ಚ ಬದ್ಧ ಏವ ತು ॥೨೯॥

ಸ್ವಸ್ವರೂಪತಯಾ ಸ್ವಯಮೇವ ಸ
ಪ್ರಸ್ಫುರತ್ಯಮಲಃ ಪರಮೇಶ್ವರಃ ।
ನ ಪ್ರಪಂಚವಿಭಾಸನಮಸ್ತ್ಯತಃ
ಕಸ್ಯಚಿಚ್ಚ ನ ಬಂಧನಮೋಚನೇ ॥೩೦॥

ಮನುಷ್ಯನು ಈ ಭೂಮಿಯನ್ನು ಜಲರೂಪವಾದುದೆಂದು ತಿಳಿದಿದ್ದರೂ ಭೂಮಿಯೊಂದನ್ನೇ ವ್ಯವಹಾರದಲ್ಲಿ ತಿಳಿದಿರುತ್ತಾನೆ. ಹಾಗೆಯೇ ಆತ್ಮನನ್ನು ಈ ಪ್ರಪಂಚರೂಪವನ್ನಾಗಿ ತಿಳಿದಿದ್ದರೂ ಪಾರಮಾರ್ಥಿಕವಾಗಿ ನಿರ್ದೋಷವಾದ ಜ್ಞಾನ ಸ್ವರೂಪವಾದುದೆಂದು ತಿಳಿಯುತ್ತಾನೆ. ||೨೮||

ಆದುದರಿಂದ ಪ್ರಪಂಚವೆಂಬ ತಿಳಿವಳಿಕೆಯು ಸರ್ವದಾ ಇರುವುದಿಲ್ಲ. ಅದು ತನ್ನ ಆತ್ಮಸ್ವರೂಪವಾಗಿದೆ ಎಂಬುದೇ ಸದಾ ಇರುತ್ತದೆ. ಅಂಥವನಿಗೆ ಪೂರ್ಣಜ್ಞಾನ ವಿರುವುದರಿಂದ ಸಂಸಾರದ ಬಂಧದಿಂದ ಬಿಡುಗಡೆಯಾಯಿತೆಂದಾಗಲಿ ಬಂಧವಿತ್ತೆಂ ದಾಗಲಿ ಹೇಳಲಾಗದು. ಅವನು ಸರ್ವದಾ ಮುಕ್ತನಾಗಿಯೇ ಇರುತ್ತಾನೆ. ||೨೯||

ದೋಷರಹಿತನಾದ ಆ ಪರಶಿವನು ತನ್ನ ಪ್ರತ್ಯಗಾತ್ಮರೂಪನಾಗಿದಾನೆಂದು ತೋರುತ್ತಿರುವಾಗ ಪ್ರಪಂಚರೂಪದ ತಿಳಿವಳಿಕೆ ಇರುವುದಿಲ್ಲವು. ಪ್ರಪಂಚರೂಪ ದಿಂದ ಕಾಣಿಸುವುದಿಲ್ಲ. ಆದುದರಿಂದ ಅಂಥವನ ವಿಷಯದಲ್ಲಿ ಬಂಧಮೋಕ್ಷಗಳೆರಡೂ ಪಾರಮಾರ್ಥಿಕವಾಗಿ ಇಲ್ಲವು. ||೩೦||

ಇಯಂ ಹಿ ವೇದಸ್ಯ ಪರಾ ಹಿ ನಿಷ್ಠಾ
ಮುನೀಶ್ವರಾಣಾಮಪಿ ಶಂಕರಸ್ಯ ತು ।
ಇತೋಽನ್ಯಥಾ ಯೇ ವಿದುರಂಧಕೂಪೇ
ಪತಂತಿ ತೇ ಮೋಹಫಣೀಂದ್ರದಷ್ಟಾಃ ॥೩೫॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಜ್ಞಾನವಿಶೇಷಯೋಗೋ ನಾಮ ಪಂಚದಶಾಧ್ಯಾಯಃ

ಈ ಉತ್ಕೃಷ್ಟವಾದ ಜೀವನ್ಮುಕ್ತಸ್ಥಿತಿಯು ವೇದವಾಕ್ಯಗಳ ತಾತ್ಪರ್ಯವಾಗಿದೆ. ಈ ಸ್ಥಿತಿಯು ಮುನಿಶ್ರೇಷ್ಠರಿಗೂ ಈಶ್ವರನಿಗೂ ಮಾನವರಿಗೂ ಸಮಾನವಾಗಿರುತ್ತದೆ. ಇದಕ್ಕಿಂತ ಬೇರೆ ರೀತಿಯಲ್ಲಿ ಯಾರು ತಿಳಿಯುತ್ತಾರೋ ಅಂಥವರು ಅಜ್ಞಾನವೆಂಬ ಹಾವಿನಿಂದ ಕಡಿಯಲ್ಪಟ್ಟು ತಿಳಿವಳಿಕೆಯಿಲ್ಲದಿರುವಿಕೆ ಎಂಬ ಬೆಳಕಿಲ್ಲದ ಸಂಸಾರವೆಂಬ ಬಾವಿಯಲ್ಲಿ ಬೀಳುತ್ತಾರೆ. ॥೩೦॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಜ್ಞಾನದಿಂದ ಜೀವನ್ಮುಕ್ತಿಯು ಹೇಗೆ ಆಗುತ್ತದೆಂಬುದನ್ನೂ ವಿವರಿಸಿರುವ
ಹದಿನೈದನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

॥ ಷೋಡಶೋಽಧ್ಯಾಯಃ ॥

ಹದಿನಾರನೆಯ ಅಧ್ಯಾಯವು

(ಜ್ಞಾನೋತ್ಪತ್ತಿಕಾರಣವರ್ಣನಂ)

॥ ಸೂತ ಉವಾಚ ॥

ಅಥಾತಸ್ಸಂಪ್ರವಕ್ಷ್ಯಾಮಿ ಜ್ಞಾನೋತ್ಪತ್ತೇಸ್ತು ಕಾರಣಮ್ ।
ವಿನಾ ಯೇನ ಶಿವಜ್ಞಾನಂ ನ ಜಾಯೇತ ಕಥಂಚನ ॥೧॥

ಮುಮುಕ್ಷುರತಿಸಂತುಷ್ಟಃ ಸಿಧ್ಯತ್ಯೇವ ಗತಿರ್ಮಮ ।
ಇತಿ ನಿಶ್ಚಯಬುದ್ಧಿಸ್ತು ಪ್ರತಿಬಂಧನಿವೃತ್ತಯೇ ॥೨॥

ಜ್ಞಾನದಿಂದ ಮುಕ್ತಿಯಾಗುತ್ತದೆಂದು ಹಿಂದೆ ಹೇಳಿದರು. ಈಗ ಅಂಥ ಜ್ಞಾನದ ಉತ್ಪತ್ತಿಗೆ ಕಾರಣವನ್ನು ಹೇಳುತ್ತಾರೆ. ಯಾವ ಜ್ಞಾನದ ಕಾರಣವು ಇಲ್ಲದಿದ್ದರೆ ಪರಶಿವನ ಜ್ಞಾನವು ಆಗುವುದಿಲ್ಲವೋ, ಅಂಥ ಕಾರಣದ ಸ್ವರೂಪವನ್ನು ವಿವರಿಸಲಾಗುವುದು. ॥೧॥

ಮುಕ್ತಿಯನ್ನು ಪಡೆಯಲಿಚ್ಛಿಸುವವನು ನನಗೆ ಆ ಶ್ರೇಷ್ಠವಾದ ಪದವಿಯು ತಪ್ಪದೆ ದೊರೆಯುತ್ತೆಂದು ನಿಶ್ಚಯಜ್ಞಾನವುಳ್ಳವನಾಗಿ ಸಂತೋಷವುಳ್ಳವನಾಗಿ ಅದರ ಪ್ರತಿಬಂಧಕಗಳನ್ನು ನಿವಾರಿಸುವುದಕ್ಕಾಗಿ ಎಲ್ಲ ದೇವತೆಗಳನ್ನೂ ಪ್ರಾರ್ಥಿಸುತ್ತಾನೆ. ಅವನೇ ಬುದ್ಧಿವಂತರಲ್ಲಿ ಮೇಲಾದವನು. ॥೨॥

ದೇವತಾಸ್ಸಕಲಾ ನಿತ್ಯಂ ಪ್ರಾರ್ಥಯೇನ್ಮತಿಮತ್ತಮಃ ।
ಶಂ ನೋ ಮಿತ್ರಶ್ಶಂ ವರುಣಃ ಶಂ ನೋ ಭವತ್ವರ್ಯಮಾ ॥೩॥

ಶಂ ನ ಇಂದ್ರಶ್ಚ ವಾಗೀಶಃ ಶಂ ನೋ ವಿಷ್ಣುರುರುಕ್ರಮಃ ।
ನಮೋಽಸ್ತು ಬ್ರಹ್ಮಣೇ ವಾಯೋ ನಮೋಽಸ್ತುತವ ಶೋಭನಮ್॥೪॥

ತ್ವಮೇವ ಸಾಕ್ಷಾದ್ಬ್ರಹ್ಮಾಸಿ ತ್ವಾಂ ವದಿಷ್ಯಾಮಿ ಶಂಕರಮ್ ।
ಋತಂ ಚ ಸತ್ಯಂ ಚಾಹಂ ತ್ವಾಂ ವದಿಷ್ಯಾಮಿ ವಿಶೇಷತಃ ॥೫॥

ತನ್ಮಾಮವತು ಕಲ್ಯಾಣಂ ತದ್ವಕ್ತಾರಂ ಚ ಶೋಭನಮ್ ।
ಮಾಂ ಭೂಯೋಽವತು ವಕ್ತಾರಂ ಅಪಿ ಚಾವತು ಶೋಭನಮ್ ॥೬॥

ಶಾಂತಿಶ್ಶಾಂತಿಃ ಪುನಶ್ಶಾಂತಿಃ ದೋಷತ್ರಯನಿವೃತ್ತಯೇ ।
ಕೃತ್ವೈವಂ ಪ್ರಾರ್ಥನಾಮಾತ್ಮಜ್ಞಾನಾರ್ಥಂ ಪುನರಾಸ್ತಿಕಾಃ ॥೭॥

ಜಪೇನ್ನಿತ್ಯಂ ಗುರೋರ್ಲಬ್ಧ್ವಾ ಮಂತ್ರಂ ಯಚ್ಛಂದಸಾಮಿತಿ ।
ಮೇ ಗೋಪಾಯೇತಿ ಪರ್ಯಂತಮತ್ಯಂತಂ ಶ್ರದ್ಧಯಾ ಸಹ ॥೮॥

ಆ ದೇವತಾವಿಶೇಷಗಳು ಮಿತ್ರ, ಸೂರ್ಯ, ವರುಣ, ಅರ್ಯಮಾ, ಇಂದ್ರ, ಬೃಹಸ್ಪತಿ, ವಿಷ್ಣು, ಇವರು. ಇವರೆಲ್ಲರೂ ಸುಖಕ್ಕೆ ಕಾರಣರಾಗಲಿ. ಇವರೆಲ್ಲರಲ್ಲೂ ಅಂತರ್ಯಾಮಿರೂಪನಾಗಿರುವ ಬ್ರಹ್ಮನಿಗೆ ನಮಸ್ಕಾರವು. ಸೂತ್ರಾತ್ಮನಾಗಿ ವಾಯು ಸ್ವರೂಪನಾಗಿರುವ ನಿನಗೆ ನಮಸ್ಕಾರವು. ಎಲೈ ವಾಯುವೇ, ಅಪರೋಕ್ಷವಾಗಿರುವ ಬ್ರಹ್ಮನೇ ನೀನಾಗಿದೀಯೆ, ನಿನ್ನನ್ನು ಶಂಕರರೂಪನೆಂದು ಭಾವಿಸುತ್ತೇನೆ. ಮನಸ್ಸಂಕಲ್ಪರೂಪವಾದ ಋತವೂ, ಮಾತಿನಲ್ಲಿ ಅದರ ವಿವರಣೆಯ ರೂಪವಾದ ಸತ್ಯವೂ ನೀನೇ ಎಂದು ಹೇಳುತ್ತೇನೆ. ಆ ವಾಯುರೂಪವಾದ ಪರಬ್ರಹ್ಮವು ನನ್ನನ್ನು ಮಂಗಳವುಳ್ಳವನನ್ನಾಗಿ ಮಾಡಿ, ಈ ತತ್ತ್ವವನ್ನು ವಿವರಿಸುವ ಆಚಾರ್ಯನನ್ನು ಕಲ್ಯಾಣವುಳ್ಳವನನ್ನಾಗಿ ಮಾಡಿ, ಇಬ್ಬರನ್ನೂ ಕಾಪಾಡಲಿ. ನನ್ನನ್ನೂ ಆಚಾರ್ಯನನ್ನೂ ಕಾಪಾಡಲೆಂದು ಇನ್ನೊಂದಾವೃತ್ತಿ ಅದರಿಂದ ಹೇಳುತ್ತೇನೆ. ॥೩-೪-೫-೬॥

ಶಾಂತಿಪದವನ್ನು ಮೂರಾವೃತ್ತಿ ಹೇಳುವುದು ಮೂರು ವಿಧವಾದ, ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕವೆಂಬ ದೋಷಗಳ ನಿವೃತ್ತಿಗಾಗಿ. ಈ ರೀತಿಯಲ್ಲಿ ಪ್ರಾರ್ಥನೆಮಾಡಿ ಆತ್ಮಸ್ವರೂಪದ ಜ್ಞಾನವಾಗುವುದಕ್ಕೋಸ್ಕರ "ಯಶ್ಛಂದಸಾಂ"

ಸಂಕೋಚೋ ದೇಹಯಾತ್ರಾಯಾಂ ಯದಿ ಜ್ಞಾನಾರ್ಥಿನೋ ಭವೇತ್ ।
ಉಪಕ್ಷೀಣಾ ಭವೇದ್ಬುದ್ಧಿಸ್ತತ್ರ ತಸ್ಯ ನ ಸಂಶಯಃ ॥೯॥

ಅತಸ್ಸಂಕೋಚಹಾನಾಯ ವಿದ್ಯಾರ್ಥಂ ತು ದಿನೇದಿನೇ ।
ಆಜ್ಯೇನಾನ್ನೇನ ಚೋಭಾಭ್ಯಾಂ ಆವಹಂತೀತಿ ಮಂತ್ರತಃ ॥೧೦॥

ಜುಹುಯಾಚ್ಛ್ರದ್ಧಯಾ ಸಾರ್ಧಂ ಬ್ರಹ್ಮಚಾರೀ ಗೃಹೀ ವನೀ ।
ಭಿಕ್ಷುಕಸ್ತು ಜಪೇನ್ಮಂತ್ರಮನಗ್ನಿಶ್ಶ್ರದ್ಧಯಾ ಸಹ ॥೧೧॥

ನಿತ್ಯಮಾಚಾರ್ಯಶುಶ್ರೂಷಾಂ ಪ್ರಕುರ್ಯಾದ್ಭಕ್ತಿಪೂರ್ವಕಮ್ ।
ಉತ್ಥಾಯೋತ್ಥಾಯ ಷಟ್ತ್ರೀಣಿ ಪ್ರಣಾಮಂ ದ್ವಾದಶಾಥವಾ ॥೧೨॥

ಕೃತ್ವಾಽಽಚಾರ್ಯಂ ಯಥಾಶಕ್ತಿ ಮುಮುಕ್ಷುರ್ಭುವಿ ದಂಡವತ್ ।
ವೇದಾಂತಶ್ರವಣಂ ಕುರ್ಯಾನ್ಮನನಂ ಚ ಸಮಾಹಿತಃ ॥೧೩॥

ಇತ್ಯಾದಿಯಾದ "ಮೇ ಗೋಪಾಯ" ಇತ್ಯಂತವಾದ ಮಂತ್ರವನ್ನು ಗುರೂಪದೇಶದಿಂದ ಪಡೆದು ಜಪಿಸಬೇಕು. ಶ್ರುತಿಯ ಮತ್ತು ಗುರುವಿನ ವಾಕ್ಯದಲ್ಲಿ ವಿಶ್ವಾಸದೊಡನೆ ಧ್ಯಾನಮಾಡಬೇಕು. ||೭-೮||

ಆತ್ಮಜ್ಞಾನವನ್ನು ಅಪೇಕ್ಷಿಸುವವನಿಗೆ ದಿನಗಟ್ಟಲೆಯ ಜೀವನವನ್ನು ನೆರವೇರಿಸಲು ಬಡತನ (ಸಂಕೋಚ)ವಿದ್ದರೆ, ಅಂಥವನ ಬುದ್ಧಿಯು ಆ ವಿಷಯದಲ್ಲಿ ಆಸಕ್ತವಾಗಿ ಆತ್ಮಜ್ಞಾನದಲ್ಲಿ ಗಮನವು ಕಡಿಮೆಯಾಗುತ್ತದೆ. ಆದುದರಿಂದ ಬಡತನದ ನಿವಾರಣೆಗಾಗಿಯೂ ಆತ್ಮಜ್ಞಾನಕ್ಕಾಗಿಯೂ ಆವಹಂತೀ ಇತ್ಯಾದಿಯಾದ ಮಂತ್ರದಿಂದ ತುಪ್ಪ, ಅಥವಾ ಅನ್ನ, ಅಥವಾ ಈ ಎರಡು ದ್ರವ್ಯಗಳಿಂದಲೂ ಅಗ್ನಿಯಲ್ಲಿ ಹೋಮಮಾಡಬೇಕು. ಬ್ರಹ್ಮಚಾರಿಯೂ ಗೃಹಸ್ಥನೂ, ವಾನಪ್ರಸ್ಥನೂ ಈ ಹೋಮವನ್ನು ನಂಬಿಕೆಯಿಂದ ಮಾಡಬೇಕು. ಸನ್ನ್ಯಾಸಿಯಾದರೆ ಅಗ್ನಿ ಇಲ್ಲದವನಾದುದರಿಂದ ಆ ಮಂತ್ರವನ್ನು ವಿಶ್ವಾಸದೊಡನೆ ಜಪಿಸಬೇಕು. ||೯-೧೦-೧೧||

ಪ್ರತಿದಿನವೂ ಗುರುಸೇವೆಯನ್ನು ಭಕ್ತಿಯೊಡನೆ ಮಾಡಬೇಕು. ಮೂರು, ಆರು ಅಥವಾ ಹನ್ನೆರಡು ಸಲ ಎದ್ದು ಎದ್ದು ಸಾಷ್ಟಾಂಗ ನಮಸ್ಕಾರವನ್ನು ಮಾಡಬೇಕು. ಹೀಗೆ ಮುಮುಕ್ಷುವಾದವನು ಶಕ್ತ್ಯನುಸಾರವಾಗಿ ನಮಸ್ಕರಿಸಿ ವೇದಾಂತ ಶ್ರವಣವನ್ನೂ ಮನನವನ್ನೂ ಸಮಾಧಾನವುಳ್ಳವನಾಗಿ ಮಾಡಬೇಕು. ಪ್ರತಿದಿನವೂ

ನಿತ್ಯಂ ಲಿಂಗೇ ಮಹಾದೇವಂ ಪೂಜಯೇದ್ಭಕ್ತಿಪೂರ್ವಕಮ್ ।
ಶಾಂತೋ ದಾಂತೋ ಭವೇನ್ನಿತ್ಯಂ ವಿರಕ್ತೋ ಭಿಕ್ಷುಕೋ ಭವೇತ್ ॥೧೪॥

ಶೀತೋಷ್ಣಸುಖದುಃಖೇಷು ತಥಾ ಮಾನಾಪಮಾನಯೋಃ ।
ಸಹಿಷ್ಣುಶ್ಚ ಭವೇನ್ನಿತ್ಯಂ ತಥೈಕಾಗ್ರಮನಾ ಭವೇತ್ ॥೧೫॥

ರುದ್ರಾಕ್ಷಧಾರಣಂ ಕುರ್ಯಾತ್ ರುದ್ರೋ ರುದ್ರಾಕ್ಷಧಾರಣಾತ್ ।
ಪ್ರತಿಬಂಧಕಬಾಹುಳ್ಯಾತ್ ಲಜ್ಜಾ ನಿತ್ಯಂ ಪ್ರಜಾಯತೇ ॥೧೬॥

ಆಲಪ್ಯ ಚ ಕ್ಷುತೇ ಚೈವ ತಥಾಽಭಕ್ಷ್ಯಸ್ಯ ಭಕ್ಷಣೇ ।
ಅದೃಶ್ಯದರ್ಶನಾದೌ ಚ ಜಪೇತ್ಪ್ರಾಜ್ಞಷ್ಷಡಕ್ಷರಮ್ ॥೧೭॥

ಷಡಕ್ಷರಾಣಿ ವರ್ತಂತೇ ಜಿಹ್ವಾಗ್ರೇ ಯಸ್ಯ ಸಂತತಮ್ ।
ಸಂಭಾಷಣಾದಿಕಂ ತೇನ ಕುರ್ಯಾದೇವಾವಿಚಾರತಃ ॥೧೮॥

ಲಿಂಗದಲ್ಲಿ ಮಹಾದೇವನನ್ನು ಭಕ್ತಿಪೂರ್ವಕವಾಗಿ ಪೂಜಿಸಬೇಕು. ಶಾಂತಿ-ಅಂತರಿಂದ್ರಿಯನಿಗ್ರಹ, ದಾಂತಿ-ಬಹಿರಿಂದ್ರಿಯನಿಗ್ರಹ, ಇವುಗಳಿಂದ ಕೂಡಿ ವೈರಾಗ್ಯವುಳ್ಳವನಾಗಿ ಸಂನ್ಯಾಸಿಯು ಹೀಗೆ ಇರಬೇಕು. ||೧೨-೧೩-೧೪||

ಶೀತ ಉಷ್ಣ, ಚಳಿ ಶಕೆ, ಸುಖ ದುಃಖ, ಮಾನ ಅಪಮಾನ, ಮುಂತಾದ ದ್ವಂದ್ವಗಳು ಸಂಭವಿಸಿದಾಗ ಸಹನಶೀಲನಾಗಿಯೂ, ಪರಶಿವಸ್ವರೂಪಧ್ಯಾನದಲ್ಲಿ ಏಕಾಗ್ರವಾದ ಮನಸ್ಸುಳ್ಳವನಾಗಿಯೂ ಇರಬೇಕು. ||೧೫||

ರುದ್ರನ ಕಣ್ಣುಗಳ ಪರಿಣಾಮರೂಪವಾದ ರುದ್ರಾಕ್ಷಿಯನ್ನು ಧರಿಸಬೇಕು. ಅದರಿಂದ ರುದ್ರಸ್ವರೂಪವನ್ನು ಪಡೆಯುತ್ತಾನೆ. ಇದಕ್ಕೆ ಅಡ್ಡಿಮಾಡುವ ಪಾಪಗಳು ಹೆಚ್ಚಾಗಿದ್ದರೆ ರುದ್ರಾಕ್ಷಿಗಳನ್ನು ಧರಿಸುವುದರಲ್ಲಿ ನಾಚಿಕೆಯುಂಟಾಗುತ್ತದೆ. ||೧೬||

ಲೌಕಿಕವಾದ ವ್ಯರ್ಥವಾದ ಮಾತುಗಳನ್ನಾಡಿದರೆ, ಉಗುಳುವಿಕೆಯನ್ನು ಮಾಡಿದರೆ, ನಿಷಿದ್ಧವಾದ ಆಹಾರವನ್ನು ತಿಂದರೆ, ನೋಡಬಾರದ್ದನ್ನು ನೋಡಿದರೆ ತಿಳಿವಳಿಕೆಯುಳ್ಳವನು ಷಡಕ್ಷರಮಂತ್ರವನ್ನು ಜಪಿಸಬೇಕು. ||೧೭||

ಷಡಕ್ಷರಮಂತ್ರವನ್ನು ಯಾರು ಸರ್ವದಾ ಉಚ್ಚರಿಸುತ್ತಿರುತ್ತಾರೋ, ಅಂಥವರೊಡನೆ ವಿಚಾರಮಾಡದೆ ಮಾತನಾಡಬಹುದು. ||೧೮||

ಸಂಭಾಷಣಾದಿಕಂ ನೀಚೈಃ ನ ಕುರ್ಯಾನ್ಮೋಹತೋಽಪಿ ವಾ ।
ಯದಿ ಕುರ್ಯಾತ್ಪ್ರಮಾದೇನ ಪ್ರಾಯಶ್ಚಿತ್ತೀ ಭವೇದ್ದ್ವಿಜಃ ॥೧೯॥

ಸ್ವಜಾತ್ಯವಿಹಿತಾಚಾರೈಃ ಅನ್ಯಾಚಾರೈಸ್ತಥೈವ ಚ ।
ವಿಶಿಷ್ಟಾ ಅಪಿ ನೀಚಾಸ್ಸ್ಯುಃ ನ ಸಂಭಾಷ್ಯಾ ದ್ವಿಜೋತ್ತಮೈಃ ॥೨೦॥

ಅಗ್ನಿಹೋತ್ರಾದಿಜಂ ಭಸ್ಮ ಸಿತಮಾದಾಯ ಸಾದರಮ್ ।
ಅಗ್ನಿರಿತ್ಯಾದಿಭಿರ್ಮಂತ್ರೈಃ ಜಾಬಾಲೋಕ್ತೈಶ್ಚ ಸಪ್ತಭಿಃ ॥೨೧॥

ಅಭಿಮಂತ್ರ್ಯ ಮಹಾದೇವಂ ಭಾವಯಿತ್ವಾ ಸಮಾಹಿತಃ ।
ಭಸ್ಮನಾ ತೇನ ಸರ್ವಾಂಗಂ ಸಮುದ್ಧೂಳ್ಯ ತತಃ ಪರಮ್ ॥೨೨॥

ತಿರ್ಯಕ್ತ್ರಿಪುಂಡ್ರಮುಕ್ತೇನ ವರ್ತ್ಮನಾ ಮತಿಮತ್ತಮಃ ।
ಲಲಾಟೇ ಚ ತಥಾ ಸ್ಕಂಧೇ ತಥೈವೋರಸಿ ಧಾರಯೇತ್ ॥೨೩॥

ಹೀನಜನರೊಡನೆ ಮಾತನ್ನಾಡಬಾರದು. ಅಜ್ಞಾನದಿಂದಲಾಗಲಿ ಪ್ರಮಾದ ದಿಂದಲಾಗಲಿ ಮಾತನ್ನಾಡಿದರೆ ಅಂಥ ದ್ವಿಜನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳ ಬೇಕು. ॥೧೯॥

ಎಲ್ಲರೂ ತಮ್ಮ ತಮ್ಮ ವರ್ಣಾಶ್ರಮಗಳಿಗೆ ವಿಹಿತವಲ್ಲದಿರುವ ಧರ್ಮಾಚರಣೆ ಗಳಿಂದಲೂ, ಇತರರ ಧರ್ಮಗಳನ್ನು ಆಚರಿಸುವುದರಿಂದಲೂ ಶಿಷ್ಟರಾಗಿದ್ದ ಜನರೂ ನೀಚರಾಗುತ್ತಾರೆ. ಅಂಥವರು ದ್ವಿಜಶ್ರೇಷ್ಠರೊಡನೆ ಸಂಭಾಷಣೆಗೆ ಅನರ್ಹರು.॥೨೦॥

ಅಗ್ನಿಹೋತ್ರಾದಿಗಳಿಂದುಂಟಾದ ಭಸ್ಮವನ್ನು ಆದರದೊಡನೆ ತೆಗೆದುಕೊಂಡು ಜಾಬಾಲೋಪನಿಷತ್ತಿನಲ್ಲಿ ಹೇಳಿರುವ ಅಗ್ನಿಃ ಇತ್ಯಾದಿಯಾಗಿ ಏಳು ಮಂತ್ರಗಳಿಂದ ಅಭಿಮಂತ್ರಿಸಿ ಏಕಾಗ್ರತೆಯಿಂದ ಮಹಾದೇವನನ್ನು ಧ್ಯಾನಮಾಡುತ್ತಾ ಆ ವಿಭೂತಿ ಯಿಂದ ಎಲ್ಲ ಶರೀರಕ್ಕೂ ಉದ್ಧೂಳನಮಾಡಿಕೊಳ್ಳಬೇಕು. ಆಮೇಲೆ ಅಲ್ಲಿ ಹೇಳಿ ರುವ ರೀತಿಯಿಂದ ಅಡ್ಡಲಾಗಿ ಮೂರು ಪುಂಡ್ರಗಳನ್ನು ಹಣೆಯಲ್ಲೂ ಹೆಗಲಿನಲ್ಲೂ ಎದೆಯಲ್ಲೂ ಧರಿಸಬೇಕು. ॥೨೧-೨೨-೨೩॥

ಚಿರಂತನಾನಿ ಸ್ಥಾನಾನಿ ಶಿವಸ್ಯಾಮಿತತೇಜಸಃ ।
ಪ್ರತಿಮಾಸಂ ವಿಶೇಷೇಣ ಸೇವನೀಯಾನಿ ಭಕ್ತಿತಃ ॥೨೪॥

ಶಿವಸ್ಯೋತ್ಸವಸೇವಾರ್ಥಂ ಗಚ್ಛೇಚ್ಛ್ರದ್ಧಾಪುರಸ್ಸರಮ್ ।
ಉತ್ಸವಂ ಸೇವಮಾನಸ್ಯ ಮುಕ್ತಿರ್ಹಸ್ತಸ್ಥಿತಾ ಭವೇತ್ ॥೨೫॥

ವಿಶಿಷ್ಟಮನ್ನಂ ಭುಂಜೀತ ಚಿತ್ತಶುದ್ಧ್ಯರ್ಥಮಾತ್ಮನಃ ।
ನಿರ್ಮಾಲ್ಯಂ ಚ ನಿವೇದ್ಯಂ ಚ ವಿಶೇಷೇಣ ವಿವರ್ಜಯೇತ್ ॥೨೬॥

ರುದ್ರೇಣ ಭುಕ್ತಂ ನಿರ್ಮಾಲ್ಯಂ ನ ತಥಾ ದೇವತಾಂತರೈಃ ।
ನಿವೇದ್ಯಂ ವಿಷ್ಣುನಾ ಭುಕ್ತಮಾದೃತಂ ಚಾನ್ಯದೈವತೈಃ ॥೨೭॥

ಪುರಾತನಗಳಾದ ಚಿದಂಬರ ಮುಂತಾದ ಶಿವಕ್ಷೇತ್ರಗಳಿಗೆ ಪ್ರತಿತಿಂಗಳಲ್ಲೂ ಯಾತ್ರೆಮಾಡಿ ಸೇವಿಸಬೇಕು. ಅಲ್ಲಿಗೆ ಶಿವನ ಉತ್ಸವಗಳನ್ನು ಸೇವಿಸಲು ಹೋಗಬೇಕು. ಹಾಗೆ ಉತ್ಸವವನ್ನು ಸೇವಿಸುವವರಿಗೆ ಮೋಕ್ಷವು ಕರಗತವಾದಂತೆ ಸಿದ್ಧವಾಗಿರುತ್ತದೆ. ॥೨೪-೨೫॥

ಶಿವನಿಗೆ ನಿವೇದನಮಾಡಿದ್ದರಿಂದ ವಿಶೇಷಗುಣವುಳ್ಳ ಅನ್ನಾದಿಗಳನ್ನು ತನ್ನ ಚಿತ್ತಶುದ್ಧಿಗಾಗಿ ಭೋಜನಮಾಡಬೇಕು. ಚಂಡೀಶನಿಗೆ ನಿವೇದನಮಾಡಿದ್ದನ್ನೂ, ಮಾಡಬೇಕಾದುದನ್ನೂ, ಸ್ವೀಕರಿಸಬಾರದು. ಅಲ್ಲದೆ ಈ ವಿಧಿನಿಷೇಧಗಳು ಏಕಾಯತನಪೂಜಾಕ್ರಮದಲ್ಲಿ, ಆಗಮೋಕ್ತದೇವಾಲಯದಲ್ಲಿ, ಪ್ರಸಕ್ತವಾಗುತ್ತವೆಯೇ ಹೊರತು, ಪಂಚಾಯತನ ದೇವಪೂಜಾಕ್ರಮದಲ್ಲಿ ಇದರ ಪ್ರಸಕ್ತಿಯೇ ಬರುವುದಿಲ್ಲವೆಂದು ತಿಳಿಯಬೇಕು. ॥೨೬॥

ರುದ್ರನಿಂದ ಸ್ವೀಕರಿಸಲ್ಪಟ್ಟ ಗಂಧ, ಪುಷ್ಪ, ನೈವೇದ್ಯ ಮುಂತಾದುವು ನಿರ್ಮಾಲ್ಯವೆನಿಸುತ್ತವೆ. ವಿಷ್ಣು ಮುಂತಾದ ಇತರ ದೇವತೆಗಳಿಂದಲೂ ಸ್ವೀಕರಿಸಲ್ಪಟ್ಟ ಆ ಅನ್ನಾದಿಗಳು ನಿರ್ಮಾಲ್ಯವಲ್ಲವು. ಆದ್ದರಿಂದ ಅವನ್ನು ಸ್ವೀಕರಿಸಬಹುದು. ಗುರುವು ಭೋಜನಮಾಡಿ ಮಿಕ್ಕ ಅನ್ನವೂ, (ಹಾಗೆಯೇ ಆಹಿತಾಗ್ನಿಯು ದರ್ಶ, ಪೂರ್ಣಮಾಸ, ಎಂಬ ಇಷ್ಟಿಗಳಲ್ಲಿ ದೇವತೆಗಳಿಗಾಗಿ ಶ್ರೌತಾಗ್ನಿಯಲ್ಲಿ ಹೋಮಮಾಡಿದ ಹವಿಸ್ಸಿಗೆ ಪುರೋಡಾಶವೆಂದು ಹೆಸರು. ಹಾಗೆ ಹೋಮ ಮಾಡಿದ ಮೇಲೆ) ಉಳಿದ ಪುರೋಡಾಶವೂ ನಿರ್ಮಾಲ್ಯವಾಗುತ್ತದೆ; ಈ ಪ್ರಸಾದಗಳನ್ನು ಸ್ವೀಕರಿಸಬಹುದು. ಸಂದೇಹವಿಲ್ಲವು. ಶೈವಾಗಮಸಿದ್ಧಾಂತದಲ್ಲಿ ರುದ್ರನೈವೇದ್ಯವು ಚಂಡದ್ರವ್ಯವೆಂದೂ,

ಗುರೂಚ್ಛಿಷ್ಟಂ ಪುರೋಡಾಶಂ ಭವತ್ಯೇವ ನ ಸಂಶಯಃ ।
ನಿರ್ಮಾಲ್ಯಂ ಚ ನಿವೇದ್ಯಂ ಚ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥೨೮॥

ವರ್ಣಾಶ್ರಮಾದಿಹೀನಾನಾಂ ಕುರ್ಯಾತ್ಸೇವಾಂ ನ ಮಾನವಃ ।
ಸಹವಾಸಂ ನ ತೈಃ ಕುರ್ಯಾತ್ಸಹ ಸಂ ಭಾಷಣಂ ತಥಾ ॥೨೯॥

ಸಹಪ್ರಮೋದಂ ಸಂಸೃಷ್ಟಿಂ ಸಹಪಂಕ್ತೌ ತು ಭೋಜನಮ್ ।
ಸಹೈವ ಗಮನಂ ಸಖ್ಯಂ ಸಹಸಂಬಂಧಮೇವ ಚ ॥೩೦॥

ದೇವಾನಾಂ ಚ ಮನುಷ್ಯಾಣಾಂ ತಥಾಽನ್ಯೇಷಾಂ ಚ ಲಾಂಛನಮ್ ।
ನ ಕುರ್ಯಾನ್ಮೋಹತೋ ವಾಽಪಿ ಯದಿ ಕುರ್ಯಾತ್ಪತತ್ಯಧಃ ॥೩೧॥

ಅದನ್ನು ಸ್ವೀಕರಿಸಬಾರದೆಂದೂ ಹೇಳಿದೆ. ಇತರವಾದ ವಾಮದಕ್ಷಿಣಾದಿ ತಂತ್ರಗಳಲ್ಲಿ ಚಂಡಾಧಿಕಾರವಿರುವೆಡೆಯಲ್ಲಿ ಮಾತ್ರ ಇದು ಅನ್ವಯಿಸುತ್ತೆಂದೂ ಹೇಳಿದೆ. "ಬಾಣ ಲಿಂಗೇ ಚರೇಲೋಹೇ ಸಿದ್ಧಲಿಂಗೇ ಸ್ವಯಂಭುವಿ । ಪ್ರತಿಮಾಸು ಚ ಸರ್ವಾಸು ನ ಚಂಡೋಽಧಿಕೃತೋ ಭವೇತ್ ॥ ಅದ್ವೈತಭಾವನಾಯುಕ್ತೇ ಸ್ಥಂಡಿಲೇಽಥ ವಿಧಾವಪಿ ॥" ಆದುದರಿಂದ ನಿರ್ಮಾಲ್ಯವಾದ ನಿವೇದ್ಯವನ್ನು ಚಂಡೀಶನಿಗೆ ಭಾಗ ವನ್ನು ತೆಗೆದು ಅರ್ಪಿಸದೆ, ಊಟಮಾಡಿದರೆ ಚಾಂದ್ರಾಯಣಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಹೋಮ ಪೂಜೆ ಇವುಗಳಲ್ಲಿ ದೇವತೆಗಳಿಗೂ ದೇವಭಕ್ತರಿಗೂ ನಿವೇದನ ಮಾಡಿ ಉಳಿದ ಗಂಧ, ಪುಷ್ಪ, ನೈವೇದ್ಯಗಳಿಗೆ ಅಮೃತವೆಂದು ಹೆಸರು. ಆ ಪ್ರಸಾದವು ಎಲ್ಲರಿಗೂ ಗ್ರಾಹ್ಯವು. "ಅಮೃತಂ ವಿಘಸೋ ಯಜ್ಞಶೇಷ ಭೋಜನ ಶೇಷಯೋಃ ।" ಅಮರ ; "ಯಜ್ಞಶಿಷ್ಟಾಶಿನಸ್ಸಂತಃ ಮುಚ್ಯಂತೇ ಸರ್ವಕಿಲ್ಬಿಷೈಃ ॥" ಭಗವದ್ಗೀತಾ. ೩.೧೩. ॥೨೭-೨೮॥

ವರ್ಣಾಶ್ರಮಧರ್ಮಗಳನ್ನು ಬಿಟ್ಟಿರುವವರ ಸೇವೆಯನ್ನು ಮಾಡಬಾರದು. ಅಂಥವರೊಡನೆ ವಾಸವನ್ನೂ, ಮಾತನಾಡುವುದನ್ನೂ ಮಾಡಬಾರದು. ಅಂಥವ ರೊಡನೆ ಸಂತೋಷಗೋಷ್ಠಿಯಲ್ಲಿಯೂ ಸೇರಬಾರದು. ಅವರೊಡನೆ ಒಂದೇ ಸಾಲಿ ನಲ್ಲಿ ಊಟವನ್ನೂ ಮಾಡಬಾರದು, ಬೆರೆಯಬಾರದು, ಜೊತೆಯಲ್ಲಿ ತಿರುಗಾಡ ಬಾರದು. ಅಂಥವರೊಡನೆ ಸ್ನೇಹವನ್ನೂ ಮದುವೆ ಮುಂತಾದ ಸಂಬಂಧವನ್ನೂ ಬೆಳೆಸಬಾರದು. ॥೨೯-೩೦-೩೧॥

ಕಸ್ಯಚಿಲ್ಲಾಂಛಿತೋ ಮರ್ತ್ಯೋ ನ ಸಾಕ್ಷೀ ಸರ್ವಥಾ ಭವೇತ್ ।
ಶ್ರೌತಸ್ಮಾರ್ತಸದಾಚಾರೇ ನಾಧಿಕಾರೀ ಚ ಲಾಂಛಿತಃ ॥೩೨॥

ಲಾಂಛಿತಾಶ್ಚ ನ ಸಂಭಾಷ್ಯಾ ನ ಸ್ಪೃಶ್ಯಾಶ್ಚ ತಥೈವ ಚ ।
ನ ದರ್ಶನೀಯಾಸ್ತಾನ್ರಾಜಾ ದೇಶಾಚ್ಛೀಘ್ರಂ ಪ್ರವಾಸಯೇತ್ ॥೩೩॥

ಅಕುರ್ವನ್ನಪಿ ವಿಧ್ಯುಕ್ತಂ ನಿಷಿದ್ಧಂ ಪರಿವರ್ಜಯೇತ್ ।
ನಿಷಿದ್ಧಪರಿಹಾರೇಣ ವಿಹಿತೇ ಲಭತೇ ಮತಿಮ್ ॥೩೪॥

ಸತ್ಯಾದ್ಧರ್ಮಾಚ್ಚ ಕುಶಲಾತ್ ಭಸ್ಮನೋದ್ಧೂಳನಾದಪಿ ।
ತ್ರಿಪುಂಡ್ರಧಾರಣಾಚ್ಚಾಪಿ ಸ್ವಾಧ್ಯಾಯಾಧ್ಯಯನಾದಪಿ ॥೩೫॥

ದೈವಾಚ್ಚ ಪಿತ್ರ್ಯಾತ್ ಕಾರ್ಯಾಚ್ಚ ಮಾತಾಪಿತ್ರಾದಿಪೂಜನಾತ್ ।
ತಥಾಽನ್ಯೇಭ್ಯಶ್ಚ ಕರ್ಮಭ್ಯಃ ಶ್ರೌತೇಭ್ಯಶ್ಚ ತಥೈವ ಚ ॥೩೬॥

ದೇವತೆಗಳ, ಮನುಷ್ಯರ, ಮತ್ತು ಇತರರ ಗುರುತುಗಳನ್ನು ಮಾಡಿಕೊಳ್ಳಬಾರದು. ಅಜ್ಞಾನದಿಂದ ಮಾಡಿದರೆ ದುರ್ಗತಿಯುಂಟಾಗುತ್ತದೆ. ಯಾರಾದರೂ ಮನುಷ್ಯನ ಗುರುತನ್ನು ಪಡೆದಿರುವವನು ಸಾಕ್ಷಿಯಾಗಲಾರನು. ಗುರುತನ್ನು ಹೊಂದಿರುವವನು ಶ್ರೌತಸ್ಮಾರ್ತಕರ್ಮಗಳಲ್ಲೂ ಕುಲಾಚಾರಾದಿಗಳಲ್ಲೂ ಅರ್ಹನಾಗುವುದಿಲ್ಲ. ಗುರುತನ್ನು ಮಾಡಿಕೊಂಡಿರುವವರೊಡನೆ ಮಾತನ್ನೂ ಆಡಬಾರದು; ಅಂಥವರನ್ನು ಮುಟ್ಟಲೂಬಾರದು, ನೋಡಲೂಬಾರದು. ಅಂಥವರನ್ನು ರಾಜನು ತನ್ನ ದೇಶದಿಂದ ಹೊರಕ್ಕೆ ಶೀಘ್ರವಾಗಿ ಹೊರಡಿಸಬೇಕು. ॥೩೧-೩೨-೩೩॥

ಶ್ರುತಿಯಲ್ಲಿ ವಿಹಿತವಾದ ಅಗ್ನಿಹೋತ್ರಾದಿ ಧರ್ಮಗಳನ್ನು ಆಚರಿಸದಿರುವವನೂ ಕೂಡ ನಿಷಿದ್ಧವಾದ ಬ್ರಹ್ಮಹತ್ಯಾದಿಗಳನ್ನು ಮಾಡಬಾರದು. ನಿಷಿದ್ಧ ಕರ್ಮವನ್ನು ಮಾಡದೆ ಇರುವುದರಿಂದ ಪಾಪಘಟನೆ ಆಗದೆ ವಿಹಿತಧರ್ಮಾನುಷ್ಠಾನದಲ್ಲಿ ಬುದ್ಧಿಯುಂಟಾಗುತ್ತದೆ. ಅದರಿಂದ ಆಮೇಲೆ ಧರ್ಮಾಚರಣೆಯನ್ನು ಮಾಡಿ ಪುರುಷಾರ್ಥಸಿದ್ಧಿಯನ್ನು ಪಡೆಯಲು ಮಾರ್ಗವು ಸುಗಮವಾಗುತ್ತದೆ. ॥೩೪॥

ಸತ್ಯ, ಧರ್ಮ, ಕುಶಲ (ಯೋಗಕ್ಷೇಮ), ಭಸ್ಮೋದ್ಧೂಳನ, ತ್ರಿಪುಂಡ್ರ ಧಾರಣ, ವೇದಾಧ್ಯಯನ, ಯಜ್ಞಯಾಗಾದಿಗಳು, ಪಿತೃಶ್ರಾದ್ಧಾದಿಗಳು, ಮಾತಾ ಪಿತೃಗಳ ಸೇವಾ, ಮತ್ತು ಇತರವಾದ, ಶ್ರುತಿಯಲ್ಲೂ ಸ್ಮೃತಿಯಲ್ಲೂ ವಿಹಿತವಾಗಿರುವ

ಸ್ಮಾರ್ತೇಭ್ಯಶ್ಚ ಮುಮುಕ್ಷುಶ್ಚೇತ್ ಸದಾ ನ ಪ್ರಚ್ಯುತೋ ಭವೇತ್ ।
ಉಕ್ತಸಾಧನಸಂಪನ್ನೋ ಜ್ಞಾನಾದ್ಭಸ್ಮಾಧಿಗಚ್ಛತಿ ॥೩೭॥

ಶಿವಸ್ವರೂಪಂ ಪರಮಂ ಭಾಸನಾದ್ಭಸ್ಮ ಸಮ್ಮತಮ್ ।
ತದೇವ ಸ್ವೀಯಮಾಯೋತ್ಥ ಪ್ರಪಂಚೇ ಜಲಸೂರ್ಯವತ್ ॥೩೮॥

ಅನುಪ್ರವಿಷ್ಟಂ ತದ್ರೂಪಂ ಭಸ್ಮಲೇಪ ಉದಾಹೃತಮ್ ।
ತೇನ ಲೇಪೇನ ದೇವೇಶಃ ಪ್ರತಿಬಿಂಬೇನ ಭಸ್ಮನಾ ॥೩೯॥

ಸ್ವತಂತ್ರೋ ಬಿಂಬಭೂತಸ್ತು ಸದ್ಯೋದ್ಧೂಳಿತಶ್ಶಿವಃ ।
ಸ ಏವ ಪೂಜನೀಯಸ್ತು ಬ್ರಹ್ಮವಿಷ್ಣುಸುರೋತ್ತಮೈಃ ॥೪೦॥

ತತ್ಪ್ರಸಾದೇನ ಸರ್ವೇಷಾಂ ದೇವತ್ವಂ ನ ಸ್ವಭಾವತಃ ।
ಸ್ವಭಾವಾದೇವ ದೇವತ್ವಂ ದೇವದೇವಸ್ಯ ಶೂಲಿನಃ ॥೪೧॥

ಅತಿಥಿಸತ್ಕಾರ, ಪರೋಪಕಾರ ಮುಂತಾದ ಕರ್ಮಗಳನ್ನು ಮುಮುಕ್ಷುವಾದವನು ಬಿಡಬಾರದು. ಮೇಲೆ ಹೇಳಿದ ಧರ್ಮಗಳ ಅನುಷ್ಠಾನದಿಂದ ಕೂಡಿರುವವನು ಚಿತ್ತಶುದ್ಧಿಯಮೂಲಕ ಜ್ಞಾನವನ್ನು ಪಡೆದು ಭಸ್ಮ (ಶಿವಸ್ವರೂಪ)ವನ್ನು ಹೊಂದುತ್ತಾನೆ. ಎಂದರೆ ಅವನು ಜ್ಞಾನೋದಯವನ್ನು ಪಡೆಯುತ್ತಾನೆ. ||೩೫-೩೬-೩೭||

ಭಸ್ಮವೆಂದರೆ ಪರಶಿವನ ಸ್ವಸ್ವರೂಪವನ್ನು ಪ್ರಕಾಶಪಡಿಸುವ ಧರ್ಮದಿಂದ ಕೂಡಿರುವ ವಸ್ತುವು ಭಸ್ಮವೆನಿಸುತ್ತದೆ. ಆ ಶಿವಭಸ್ಮವೇ ತನ್ನ ಮಾಯೆಯಿಂದುಂಟಾದ ಪ್ರಪಂಚದಲ್ಲಿ, ಜಲದಲ್ಲಿ ಪ್ರತಿಫಲಿಸಿರುವ ಚಂದ್ರನ ಹಾಗೆ, ಇದೆ. ಹೀಗೆ ಜಗತ್ತಿನಲ್ಲಿ ಅನುಪ್ರವೇಶದಿಂದ ವ್ಯಾಪಿಸಿರುವ ಭಸ್ಮದರೂಪವನ್ನು ಭಸ್ಮಲೇಪವೆನ್ನುತ್ತಾರೆ. ಈ ಪ್ರತಿಬಿಂಬರೂಪವಾದ ಲೇಪರೂಪವಾಗಿರುವ ಭಸ್ಮದಿಂದ ಉದ್ಧೂಳಿತನಾಗಿರುವವನು ಸ್ವತಂತ್ರನಾದ ಬಿಂಬರೂಪನಾದ ಸಾಕ್ಷಾತ್ ಶಿವನೇ ಆಗಿರುತ್ತಾನೆ. ಅಂಥವನೇ ಬ್ರಹ್ಮ, ವಿಷ್ಣು, ಇಂದ್ರ ಮುಂತಾದವರಿಂದಲೂ ಪೂಜಿಸಲ್ಪಡಲು ಯೋಗ್ಯನಾಗಿರುತ್ತಾನೆ. ||೩೮-೩೯-೪೦||

ಆ ಪರಮೇಶ್ವರನ ಅನುಗ್ರಹದಿಂದಲೇ ಎಲ್ಲರಿಗೂ ಕಡೆಗೆ ದೇವರೂಪವು ದೊರೆಯುತ್ತದೆ, ಸ್ವಾಭಾವಿಕವಾಗಿ ಇದು ದೊರೆಯದು. ಎಂದರೆ ಇತರ ವಸ್ತುಗಳ ಪ್ರಕಾಶಿಸುವಿಕೆಯು ದೇವತೆಗಳಿಗೆಲ್ಲರಿಗೂ ದೇವರಾದ ಪರಶಿವನ ಪ್ರಕಾಶನದಿಂದಲೇ

ತಂ ವಿದಿತ್ವಾ ವಿಮುಚ್ಯಂತೇ ಶಾಂತಾ ದಾಂತಾ ಯತೀಶ್ವರಾಃ ।
ಗೃಹಸ್ಥಾಶ್ಚ ತಥೈವಾನ್ಯೇ ಸತ್ಯಧರ್ಮಪರಾಯಣಾಃ ॥೪೨॥

ಭಸ್ಮಸಂಛನ್ನಸರ್ವಾಂಗಾಃ ತ್ರಿಪುಂಡ್ರಾಂಕಿತಮಸ್ತಕಾಃ ।
ರುದ್ರಾಕ್ಷಮಾಲಾಽಽಭರಣಾಃ ಶ್ರೀಮತ್ಪಂಚಾಕ್ಷರಪ್ರಿಯಾಃ ॥೪೩॥

ನಿತ್ಯಂ ಲಿಂಗಾರ್ಚನಪರಾಃ ಯಜ್ಞಾದ್ಯೈರ್ದಗ್ಧ ಕಲ್ಮಷಾಃ ।
ಅತೋ ಜ್ಞಾನಾರ್ಥಿಭಿರ್ಜ್ಞಾನಸಾಧನಾನಿ ಮನೀಷಿಭಿಃ ॥೪೪॥

ಸಂಪಾದ್ಯಾನಿ ಮಹಾಯಾಸಾತ್ ಜ್ಞಾನಾನ್ಮುಚ್ಯೇತ ಬಂಧನಾತ್ ।
ಜ್ಞಾನಂ ವೇದಾಂತವಿಜ್ಞಾನಂ ಬ್ರಹ್ಮಾತ್ಮೈಕತ್ವಗೋಚರಮ್ ॥೪೫॥

ತಸ್ಮಾತ್ ಜ್ಞಾತಂ ವಿಜಾನಾತಿ ವಿಮುಕ್ತಶ್ಚ ವಿಮುಚ್ಯತೇ ।
ನಿವರ್ತತೇ ನಿವೃತ್ತಶ್ಚ ಶ್ರುತ್ಯರ್ಥಸ್ಯೈಷ ಸಂಗ್ರಹಃ ॥೪೬॥

ಆಗುತ್ತದೆ. ಶೂಲಾಯುಧಧಾರಿಯಾದ ಪರಶಿವನ ಪ್ರಕಾಶಿಸುವಿಕೆಯು ಸ್ವಾಭಾವಿಕವಾದುದು. ಅಂಥ ಪರಶಿವನ ಸ್ವರೂಪವನ್ನು ತಿಳಿಯುವುದರಿಂದ ಯತಿಶ್ರೇಷ್ಠರೂ, ಗೃಹಸ್ಥರೂ, ಸತ್ಯಧರ್ಮಗಳಲ್ಲಿ ಆಸಕ್ತರಾದ ಇತರ ಜನರೂ ಮೋಕ್ಷವನ್ನು ಪಡೆಯುತ್ತಾರೆ. ॥೪೧-೪೨॥

ಶರೀರವನ್ನು ವಿಭೂತಿಯಿಂದ ಲೇಪಿಸಿಕೊಂಡಿರುವ, ತ್ರಿಪುಂಡ್ರದಿಂದ ಹಣೆಯನ್ನು ಅಲಂಕರಿಸಿಕೊಂಡಿರುವ, ರುದ್ರಾಕ್ಷಮಾಲೆಯೇ ಒಡವೆಯಾಗಿ ಉಳ್ಳ, ಶ್ರೀಪಂಚಾಕ್ಷರಮಂತ್ರವನ್ನು ಜಪಿಸುವುದರಲ್ಲಿ ಆಸಕ್ತರಾಗಿರುವ, ಪ್ರತಿನಿತ್ಯದಲ್ಲೂ ಲಿಂಗಾರ್ಚನೆಯನ್ನು ಮಾಡುವ, ಯಜ್ಞಯಾಗಾದಿಗಳಿಂದ ಪಾಪಗಳೆಲ್ಲವನ್ನೂ ಕಳೆದುಕೊಂಡಿರುವ, ಹೀಗೆ ಚಿತ್ತಶುದ್ಧಿಯನ್ನು ಪಡೆದವರು ಪರಶಿವನ ಸ್ವರೂಪವನ್ನು ತಿಳಿದು ಮುಕ್ತರಾಗುತ್ತಾರೆ. ಆದುದರಿಂದ ಜ್ಞಾನವಾಗಬೇಕೆಂದು ಇಚ್ಛಿಸುವ ತಿಳಿವಳಿಕೆಯುಳ್ಳವರು ಈ ಮೇಲೆ ಹೇಳಿದ ಜ್ಞಾನಸಾಧನಗಳನ್ನು ತುಂಬ ಶ್ರಮಪಟ್ಟಾದರೂ ಸಂಪಾದಿಸಬೇಕು. ವೇದಾಂತವ್ಯಾಸಂಗದಿಂದ ಉಂಟಾಗುವ, ಜೀವನೂ ಬ್ರಹ್ಮವೂ ಅಭಿನ್ನರೆಂಬ, ಜ್ಞಾನವೇ ಮೋಕ್ಷಸಾಧನವಾದ ಜ್ಞಾನವು. ಇಂಥ ಜ್ಞಾನದಿಂದ ಸಂಸಾರದ ತೊಡಕಿನ ದೆಸೆಯಿಂದ ಬಿಡುಗಡೆಯನ್ನು ಹೊಂದುತ್ತಾರೆ.॥೪೩-೪೪-೪೫॥

ಆದುದರಿಂದ ಮೊದಲು ಸಾಮಾನ್ಯರೂಪದಿಂದ ಎಂದರೆ ಅಂತಃಕರಣವಿಶಿ

ಅಯಮರ್ಥೋ ಮಹಾದೇವಪ್ರಸಾದರಹಿತೈರ್ನೃಭಿಃ।
ಜಾತ್ಯಂಧಗಜದೃಷ್ಟ್ಯೇವ ಕೋಟಿಶಃ ಪರಿಕಲ್ಪ್ಯತೇ ॥೪೭॥

ಬ್ರಾಹ್ಮಣೋ ವಾಽತ್ಯಂಜೋ ವಾಽಪಿ ತಥಾ ಗರ್ಭಸ್ಥಿತೋಽಪಿ ವಾ।
ಮಹಾದೇವಪ್ರಸಾದೇನ ಮುಚ್ಯತೇ ಭವಬಂಧನಾತ್ ॥೪೮॥

ಮಹಾದೇವೇ ಮಹಾನಂದೇ ಮಹಾಕಾರುಣಿಕೋತ್ತಮೇ।
ಪ್ರಸನ್ನೇ ಸತಿ ಕೀಟೋ ವಾ ಪತಂಗೋ ವಾ ವಿಮುಚ್ಯತೇ ॥೪೯॥

ಷ್ಟನು ಆತ್ಮನೆಂದೂ, ಮಾಯಾವಿಶಿಷ್ಟನು ಈಶ್ವರನೆಂದೂ ತಿಳಿದು, ಆ ಅಂತಃಕರಣವೇ ಉಪಾಧಿಯಾಗುಳ್ಳವನು ಜೀವಸಾಕ್ಷಿಯೆಂದೂ, ಮಾಯೆಯೇ ಉಪಾಧಿಯಾಗುಳ್ಳ ಚೈತನ್ಯವೇ ಈಶ್ವರಸಾಕ್ಷಿಯೆಂದೂ ತಿಳಿದು, ಆ ಮೂಲಕವಾಗಿ ಉಪಾಧಿಯು ಮಾಯಾಕಲ್ಪಿತವಾದುದೆಂದೂ ತಿಳಿದು, ಅದನ್ನು ಬಿಟ್ಟು ನಿರುಪಾಧಿಕವಾದ ಸ್ವಪ್ರಕಾಶಚೈತನ್ಯರೂಪವಾದ ಜೀವನಿಗೂ ನಿರುಪಾಧಿಕನಾದ ಬ್ರಹ್ಮನಿಗೂ ಇರುವ ಅಭೇದದ ಸಾಕ್ಷಾತ್ಕಾರವನ್ನು ಪಡೆದು, ತಿಳಿದಿದ್ದುದನ್ನೇ ವಿಶೇಷವಾಗಿ ತಿಳಿದಹಾಗೂ, ವಾಸ್ತವವಾಗಿ ಮುಕ್ತನಾಗಿದ್ದರೂ ಮುಕ್ತನಾದಹಾಗೂ, ಸಂಸಾರನಿವೃತ್ತಿ ಆಗಿದ್ದರೂ ನಿವೃತ್ತಿ ಆದಹಾಗೂ, ಆಗುತ್ತದೆ. ಇದೇ ಶ್ರುತಿಗಳ ತಾತ್ಪರ್ಯಗಳ ಒಟ್ಟು ಸಂಗ್ರಹವು.॥೪೬॥

ಈ ತಾತ್ಪರ್ಯಾರ್ಥವು ಮಹಾದೇವನ ಅನುಗ್ರಹದಿಂದ ಹೀನರಾದ ತಾರ್ಕಿಕಾದಿದಾರ್ಶನಿಕರು, ಹುಟ್ಟುಕುರುಡರು ಆನೆಯ ಸೊಂಡಿಲು, ಕಾಲು, ಬಾಲ, ಕಿವಿಗಳನ್ನು ಮುಟ್ಟಿ ನೋಡಿ, ಅದು ಒನಕೆಯ ಹಾಗೂ, ಕಂಬದ ಹಾಗೂ, ಪರಕೆಯ ಹಾಗೂ, ಮೊರದ ಹಾಗೂ, ಇದೆ ಎಂದು ಏಕದೇಶ ದೃಷ್ಟಿಯಿಂದ ತಪ್ಪು ಸಿದ್ಧಾಂತ ಮಾಡಿಕೊಂಡು ಜಗಳವಾಡಿದ ಹಾಗೆ, ನಾನಾವಿಧವಾಗಿ ಕಲ್ಪಿಸುತ್ತಾ ವಾದ ಪ್ರತಿವಾದ, ವಿವಾದಗಳಲ್ಲಿ ತೊಡಗಿರುತ್ತಾರೆ. ॥೪೭॥

ಬ್ರಾಹ್ಮಣನಾಗಲಿ, ಹೀನತಮವಾದ ಜಾತಿಯಲ್ಲಿ ಹುಟ್ಟಿದವನಾಗಲಿ, ಗರ್ಭದಲ್ಲಿರುವ ಶಿಶುವೇ ಆಗಲಿ, ಪರಶಿವನ ಅನುಗ್ರಹದಿಂದ ಈ ಸಂಸಾರದ ತೊಡಕಿನ ದೆಶೆಯಿಂದ ಬಿಡುಗಡೆಯನ್ನು ಹೊಂದುತ್ತಾನೆ. ಎಲ್ಲರಿಗಿಂತ ದೊಡ್ಡ ದೇವನಾದ, ನಿರತಿಶಯಾನಂದರೂಪನಾದ, ದಯಾಳುಗಳಲ್ಲಿ ಸರ್ವೋತ್ತಮನಾದ ಪರಶಿವನು ಪ್ರಸನ್ನನಾದರೆ ಹುಳುವಾದರೂ, ಹಕ್ಕಿಯಾದರೂ, ಮೋಕ್ಷವನ್ನು ಪಡೆಯುತ್ತವೆ.

ಗುರೂಪದಿಷ್ಟೋ ವೇದಾರ್ಥಸ್ಸಂಗ್ರಹೇಣ ಮಯೋದಿತಃ ।
ಮದುಕ್ತಾರ್ಥೇ ತು ವಿಶ್ವಾಸಂ ಕುರುಧ್ವಂ ಯತ್ನತೋ ದ್ವಿಜಾಃ ॥೫೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಜ್ಞಾನೋತ್ಪತ್ತಿಕಾರಣವರ್ಣನಂ ನಾಮ ಷೋಡಶಾಧ್ಯಾಯಃ

ಗುರುಗಳಿಂದ ಉಪದೇಶವಾದಂತೆ ವೇದದ ತಾತ್ಪರ್ಯವನ್ನು ನಾನು ಹೇಳಿದೇನೆ. ನಾನು ಹೇಳಿದ ಮಾತಿನಲ್ಲಿ ಯತ್ನಪೂರ್ವಕವಾಗಿ ನಂಬಿಕೆಯನ್ನಿಡಿ. ||೪೮-೪೯-೫೦||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಮೋಕ್ಷಕ್ಕೆ ಬೇಕಾದ ಜ್ಞಾನವಾಗುವ ಪ್ರಕಾರವನ್ನು ವಿವರಿಸಿರುವ
ಹದಿನಾರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ಸಪ್ತದಶಾಧ್ಯಾಯಃ ||

ಹದಿನೇಳನೆಯ ಅಧ್ಯಾಯವು

(ವೈರಾಗ್ಯವಿಚಾರಃ)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ವೈರಾಗ್ಯಂ ದುಃಖನಾಶನಮ್ ।
ಯೇನ ಸಾಕ್ಷಾಚ್ಛಿವಜ್ಞಾನಂ ಜಾಯತೇ ಮೋಕ್ಷಸಾಧನಮ್ ॥೧॥

ಪ್ರತ್ಯಗ್ಬ್ರಹ್ಮೈಕತಾಜ್ಞಾನಾತ್ ದ್ವೈತವಸ್ತು ಸಮುದ್ಗತಮ್ ।
ದ್ವೈತವಸ್ತುನಿ ವಿಪ್ರೇಂದ್ರಾಃ ಪೂರ್ವವಾಸನಯಾ ತಥಾ ॥೨॥

ವೇದಾಂತವ್ಯಾಸಂಗದಿಂದ ಆಗಬೇಕಾಗಿರುವ ಮುಖ್ಯವಾದ ಜ್ಞಾನವು ಸಾಧನ ಚತುಷ್ಟಯದಿಂದ ಕೂಡಿರುವವನಿಗೇ ಆಗುತ್ತದೆ. ಆದುದರಿಂದ ಸಾಧನಸಂಪತ್ತನ್ನು ತಿಳಿಯಬೇಕು. ಮತ್ತು ಈ ಶರೀರಧಾರಣವು ಹೆಚ್ಚಾಗಿ ದುಃಖಾನುಭವದಲ್ಲಿಯೇ ಪರಿಣಮಿಸುತ್ತದೆಂಬ ಅಂಶವನ್ನು ತಿಳಿಸಲು ವೈರಾಗ್ಯವನ್ನು ಜ್ಞಾನಯೋಗಖಂಡದ ಹತ್ತನೆಯ ಅಧ್ಯಾಯದಲ್ಲಿ ಸೂಚಿಸಲಾಯಿತು. ಆ ವೈರಾಗ್ಯವನ್ನು ವಿಸ್ತಾರವಾಗಿ ವಿವರಿಸಲು ಈ ಅಧ್ಯಾಯವು ಪ್ರಾರಂಭವಾಗುತ್ತದೆ. ಸೂತನು ಹೇಳಿದನು—ದುಃಖ ವನ್ನು ನಿವಾರಿಸುವ ವೈರಾಗ್ಯವನ್ನು ವಿವರಿಸುತ್ತೇನೆ. ಆ ವೈರಾಗ್ಯದಿಂದ ಮೋಕ್ಷಕ್ಕೆ ಸಾಧನವಾದ ಪರಶಿವನ ಸ್ವರೂಪಸಾಕ್ಷಾತ್ಕಾರವು ಆಗುತ್ತದೆ. ||೧||

ವಿಷಯಗಳಲ್ಲಿ ಆಶೆಯಿಲ್ಲದಿರುವಿಕೆಗೆ ವೈರಾಗ್ಯವೆಂದು ಹೆಸರು. ವಿಷಯವು ಸುಖ ಸಾಧನವೆಂದು ಭ್ರಾಂತಿಜ್ಞಾನವು ಹೋದ ಮೇಲೆ, ಅದರಲ್ಲಿ ದೋಷವನ್ನು ಮನ

ಆಜ್ಞಯಾ ದೇವದೇವಸ್ಯ ಕಾಲಪಾಕೇನ ಕರ್ಮಣಾಮ್ ।
ಶೋಭನಾಶೋಭನಭ್ರಾಂತಿಃ ಕಲ್ಪಿತಾ ಪರಮಾರ್ಥವತ್ ॥೩॥

ಶೋಭನತ್ವೇನ ಸಂಕ್ಲೃಪ್ತೇ ವಿಷಯೇ ವಾಸನಾ ಬಲಾತ್ ।
ಇಚ್ಛಾ ನಿತ್ಯಂ ಪ್ರಜಾಯೇತ ನರಾಣಾಂ ಮೂಢಚೇತಸಾಮ್ ॥೪॥

ಶೋಭನತ್ವೇನ ಸಂಕ್ಲೃಪ್ತಃ ಪದಾರ್ಥೋ ದ್ವಿವಿಧಸ್ಸ್ಮೃತಃ ।
ಏಕ ಐಹಿಕ ಆಖ್ಯಾತಃ ಇತರಃ ಪಾರಲೌಕಿಕಃ ॥೫॥

ಐಹಿಕಾನಿಂದ್ರಿಯೈರರ್ಥಾನ್ ಭುಂಜ್ತೇ ದೇಹೀ ನಿರಂತರಮ್ ।
ಪುನರ್ಭುಕ್ತೇಷು ಚಾರ್ಥೇಷು ತತ್ಸಮಾನೇಷು ಮಾನವಃ ॥೬॥

ಗಂಡಮೇಲೆ, ಬರುವ ಆಶೆ ಇಲ್ಲದ ತಿಳಿವಳಿಕೆಯೇ ವೈರಾಗ್ಯವೆಂದು ತಾತ್ಪರ್ಯವು. ವಿಷಯಗಳು ಸತ್ಯವಾದರೆ ವೈರಾಗ್ಯ ಬರುವುದೇ ಇಲ್ಲವು. ಅವು ಅಸತ್ಯಗಳಾದರೆ ವೈರಾಗ್ಯವನ್ನು ಪ್ರಯತ್ನದಿಂದ ಪಡೆಯಬೇಕಾಗಿಲ್ಲವು, ಅದನ್ನು ಪ್ರತಿಪಾದಿಸಬೇಕಾಗಿಯೂ ಇಲ್ಲವು. ಆದುದರಿಂದ ವೈರಾಗ್ಯವನ್ನು ವಿವರಿಸಬೇಕಾಗಿಲ್ಲವೆಂದು ಶಂಕೆ ಬಂದರೆ ಉತ್ತರವನ್ನು ಹೇಳುತ್ತಾರೆ. ಪ್ರತ್ಯಗಾತ್ಮನಿಗೂ ಬ್ರಹ್ಮಕ್ಕೂ ಅಭೇದವಿದೆ ಎಂಬ ಜ್ಞಾನದಿಂದ, ದ್ವೈತವಸ್ತುಗಳು ಆತ್ಮನಲ್ಲಿ ಅಧ್ಯಸ್ತವಾಗಿ ಸತ್ಯಗಳಲ್ಲವೆಂದು ತೋರಲಾರಂಭಿಸುತ್ತದೆ. ಆದರೂ ಪೂರ್ವಜನ್ಮಗಳಲ್ಲಿ ವಿಷಯಾನುಭವದಿಂದುಂಟಾಗಿ ಬಂದು ಸೇರಿರುವ ವಾಸನೆಯಿಂದಲೂ, ದೇವದೇವನ ಆಜ್ಞೆಯಿಂದಲೂ, ಕರ್ಮಗಳು ಕಾಲಕ್ರಮದಲ್ಲಿ ಫಲೋನ್ಮುಖವಾಗುವುದರಿಂದಲೂ, ಹಿತಾಹಿತ, ಸುಖದುಃಖಸಾಧನವೆಂದು ಮುಂತಾದ ವಿವೇಚನೆಯ ಜ್ಞಾನವು ಉಂಟಾಗದೆ ಆ ಭ್ರಾಂತಿಯೇ ಪರಮಾರ್ಥವೆಂದೂ ತೋರುತ್ತಿರುತ್ತದೆ. ಆದುದರಿಂದ ವೈರಾಗ್ಯವು ಸ್ವತಃ ಉಂಟಾಗುವುದಿಲ್ಲವು, ॥೨-೩॥

ಒಳ್ಳೆಯದೆಂದೂ ಸುಖಸಾಧನವೆಂದೂ ಪೂರ್ವಪೂರ್ವಾನುಭವದಿಂದ ಉಂಟಾಗಿದ್ದ ವಾಸನೆಯ ಬಲದಿಂದ ನಿಶ್ಚಯವಾಗಲು, ಅಜ್ಞಾನಿಗಳಿಗೆ ಸರ್ವದಾ ಆ ವಿಷಯಗಳನ್ನು ಪಡೆಯಬೇಕೆಂಬ ಇಚ್ಛೆಯೇ ಉಂಟಾಗುತ್ತದೆ. ॥೪॥

ಒಳ್ಳೆಯದೆಂದು ಗೊತ್ತಾಗುವ ವಿಷಯವು ಐಹಿಕ, ಆಮುಷ್ಮಿಕ ಎಂದು ಎರಡು ಬಗೆಯಾಗಿರುತ್ತದೆ. ॥೫॥

ಶಬ್ದಸ್ಪರ್ಶಾದಿಗಳಿಂದ ಐಹಿಕಾರ್ಥಗಳನ್ನು ಜೀವನು ಯಾವಾಗಲೂ ಇಂದ್ರಿಯಗಳಿಂದ ಅನುಭವಿಸುತ್ತಿರುತ್ತಾನೆ. ಅವುಗಳಂಥವುಗಳನ್ನು ಪುನಃಪುನಃ ಅನುಭವಿ

ಕರೋತಿ ವಾಂಛಾಮುವಶಃ ಕಲ್ಪನಾಮತಿಮೋಹಿತಃ ।
ಶೋಭನತ್ವೇನ ಯಃ ಕ್ಲೃಪ್ತಃ ಪದಾರ್ಥಃ ಪಾರಲೌಕಿಕಃ ॥೭॥

ತತ್ರ ಬುದ್ಧಿಂ ನೃಣಾಂ ಶಾಸ್ತ್ರಮುತ್ಪಾದಯತಿ ನಿಶ್ಚಿತಮ್ ।
ಭ್ರಮಾತ್ತದ್ಭೋಗವಾಂಛಾ ಚ ಜಾಯತೇ ಸರ್ವದೇಹಿನಾಮ್ ॥೮॥

ದೃಷ್ಟಾನುಶ್ರವಿಕದ್ವಾರಾ ಬುದ್ಧಿಸಂತತಿರಾತ್ಮನಃ ।
ಕಲ್ಪಿತೇ ವಿಷಯೇ ನಿತ್ಯಂ ಜಾಯತೇ ವೇದವಿತ್ತಮಾಃ ॥೯॥

ತಥಾ ಯೋಽಶೋಭನತ್ವೇನ ಪದಾರ್ಥಃ ಪರಿಕಲ್ಪಿತಃ ।
ಇಹಲೋಕೇ ಪರತ್ರಾಪಿ ದ್ವೇಷಸ್ತತ್ರ ಹಿ ಜಾಯತೇ ॥೧೦॥

ರಾಗದ್ವೇಷಾರ್ಗಳಾಬದ್ಧಾ ಧರ್ಮಾಧರ್ಮವಶಂ ಗತಾಃ ।
ದೇವತಿರ್ಯಙ್ಮನುಷ್ಯಾದಿನಿರಯಂ ಯಾಂತಿ ಮಾನವಾಃ ॥೧೧॥

ಸಲು ಆಶಾಧೀನನಾಗಿ ತುಂಬ ಅಜ್ಞಾನಿಯಾಗಿ ಸುಖಸಾಧನವೆಂಬ ಕಲ್ಪನೆಯನ್ನೂ ಆಶೆಯನ್ನೂ ಮಾಡುತ್ತಾನೆ. ॥೬॥

ಪಾರಲೌಕಿಕವಾದ ಸ್ವರ್ಗವೇ ಮುಂತಾದ ಒಳ್ಳೆಯ ಕರ್ಮಫಲಗಳ ವಿಷಯಗಳಲ್ಲಿ ತಿಳಿವಳಿಕೆಯನ್ನು ವೇದಗಳ ಕರ್ಮಕಾಂಡವು ಉಂಟುಮಾಡುತ್ತದೆ. ಮನುಷ್ಯರಿಗೆ ಅಜ್ಞಾನದಿಂದ, ಆ ಸ್ವರ್ಗವೇ ಪರಮಸುಖವೆಂಬ ಭ್ರಾಂತಿಯಿಂದ ಅದರಲ್ಲಿ ಆಶೆಯು ಖಂಡಿತವಾಗಿಯೂ ಮುಂದಕ್ಕೂ ಅನುಸರಿಸಿ ಉಂಟಾಗುತ್ತದೆ. ॥೭-೮॥

ಪ್ರತ್ಯಕ್ಷವಾಗಿ ಇಂದ್ರಿಯಗಳ ಮೂಲಕ ಅನುಭವಿಸಿದ ಮತ್ತು ಶಾಸ್ತ್ರಗಳಿಂದ ತಿಳಿದ ವಿಷಯಾನುಭವದ ಮೂಲಕ ಜೀವನಿಗೆ ಐಹಿಕ ಆಮುಷ್ಮಿಕಫಲಭೋಗದಲ್ಲೂ ಅದರ ಸಾಧನಗಳವಿಷಯದಲ್ಲೂ ಇಚ್ಛೆಯು ಸಂತತವಾಗಿ ಉಂಟಾಗುತ್ತಿರುತ್ತದೆ. ಇದು ಅವಿದ್ಯಾಕಲ್ಪಿತವಾದರೂ ನಿಜಸ್ವರೂಪದ ಅಜ್ಞಾನದಿಂದ ಇಚ್ಛೆಯುಂಟಾಗುತ್ತದೆ. ॥೯॥

ಹಾಗೆಯೇ ದುಃಖಸಾಧನವೆಂದು ಗೊತ್ತಾದ ಐಹಿಕವಾದ ವಿಷಯ ಮುಂತಾದುದೂ, ಶಾಸ್ತ್ರದಿಂದ ತಿಳಿದ ನರಕಾದಿ ಪದಾರ್ಥಗಳೂ, ಕೆಟ್ಟವಾದುದರಿಂದ ಅವುಗಳ ವಿಷಯದಲ್ಲಿ ದ್ವೇಷವೂ ಉಂಟಾಗುತ್ತದೆ. ॥೧೦॥

ಒಳ್ಳೆಯ ಫಲ ಮತ್ತು ಅದರ ಸಾಧನಗಳಲ್ಲಿ ರಾಗದಿಂದಲೂ, ಕೆಟ್ಟ ಫಲ ಮತ್ತು ಅದರ ಸಾಧನಗಳಲ್ಲಿ ದ್ವೇಷದಿಂದಲೂ ಕಟ್ಟಲ್ಪಟ್ಟವರಾಗಿ, ಕರ್ಮಮಾಡುತ್ತಾ ಪುಣ್ಯ

ಶುಕ್ರಂ ಚ ಶೋಣಿತಂ ದೃಷ್ಟ್ವಾ ಸ್ಪೃಷ್ಟ್ವಾ ಸ್ಮೃತ್ವಾ ತು ಮಾನವಃ ।
ಉದ್ಗಾರಂ ಕುರುತೇ ತದ್ಧಿ ಶರೀರಂ ಚೇತನಸ್ಯ ತು ॥೧೨॥

ತಸ್ಮಿನ್ ಶರೀರೇಽಹಂಬುದ್ಧಿಂ ಸದಾ ಕಃ ಕುರುತೇ ಜನಃ ।
ಮೂಢೋಽಹಂ ಮಮ ಬುದ್ಧಿಭ್ಯಾಮಿದಂ ಗೃಹ್ಣಾತಿ ವಿಗ್ರಹಮ್॥೧೩॥

ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ಚರ್ಮ ಭೂಮಿತಲೇ ಸ್ಥಿತಂ ।
ಉದ್ಗಾರಂ ಕುರುತೇ ಮರ್ತ್ಯಸ್ಸ್ವಯಂ ತದ್ದೋಷದರ್ಶನಾತ್ ॥೧೪॥

ತಥೈವಾತ್ಮತಯಾ ಗ್ರಾಹ್ಯೇ ಶರೀರೇ ಚರ್ಮ ಯದ್ಭವೇತ್ ।
ತಸ್ಮಿಂಶ್ಚರ್ಮಣ್ಯಹಂಬುದ್ಧಿಂ ಸದಾ ಕಃ ಕುರುತೇ ನರಃ ॥೧೫॥

ಪಾಪಗಳಿಗೆ ಅಧೀನರಾಗಿ ಮಾನವರು ದೇವತ್ವ ತಿರ್ಯಕ್ತ್ವ ಮನುಷ್ಯತ್ವಾದಿ ರೂಪದಲ್ಲಿ ಹುಟ್ಟುವುದೆಂಬ ನರಕದುಃಖವನ್ನು ಪಡೆಯುತ್ತಿರುತ್ತಾರೆ. ||೧೧||

ಅಧರ್ಮದಿಂದ ನರಕದುಃಖವೂ ಧರ್ಮದಿಂದ ಸ್ವರ್ಗಸುಖವೂ ಆಗುವುದರಿಂದ ವಿಷಯಸುಖವು ದುಃಖವಲ್ಲವು. ಪರಶಿವಜ್ಞಾನಹೊರತು ಉಳಿದುದೆಲ್ಲವೂ ದುಃಖರೂಪವೂ ಅಲ್ಲವು, ಜಗುಪ್ಸಿತವೂ ಅಲ್ಲವೆಂದು ಪರಿಣಮಿಸಿದಂತಾಯಿತೆಂದರೆ ಈ ಶೋಭನಾಶೋಭನವಿಷಯಗಳೆಲ್ಲವೂ ದುಃಖರೂಪವಾದುದೆಂದು ತಿಳಿಸುತ್ತಾರೆ. ಶುಕ್ರಶೋಣಿತಗಳನ್ನು ನೋಡಿದರೂ, ಮುಟ್ಟಿದರೂ, ಸ್ಮರಿಸಿದರೂ ಮಾನವನು ಅಸಹ್ಯಪಡುತ್ತಾನೆ. ಹಾಗೆಯೇ ಅವುಗಳಿಂದ ರೂಪಗೊಂಡಿರುವ, ||೧೨||

ಅಂಥ ಶರೀರದಲ್ಲಿ ಆ ಶರೀರವು ಚೇತನಕ್ಕೆ ಸೇರಿದುದು. ಅದರಲ್ಲಿ ನಾನು ನನ್ನದು ಎಂಬ ಅಭಿಮಾನವನ್ನು ವಿವೇಕಿಯಾದ ಯಾವ ಮನುಷ್ಯ ತಾನೇ ಮಾಡುತ್ತಾನೆ ? ಆದರೆ ಮೂಢನಾದ ಮನುಷ್ಯನು ಆ ಶರೀರದಲ್ಲಿ ನಾನು ನನ್ನದೆಂದು ಅಭಿಮಾನದಿಂದ ದೇಹಗಳನ್ನು ಸ್ವೀಕರಿಸುತ್ತಿರುತ್ತಾನೆ. ||೧೩||

ಹಾಗೆಯೇ ಚರ್ಮವನ್ನು ಶರೀರದಿಂದ ಬೇರ್ಪಟ್ಟು ಭೂಮಿಯ ಮೇಲೆ ಬಿದ್ದಿರುವುದನ್ನು ನೋಡಿ, ಮುಟ್ಟಿ, ಅಥವಾ ಸ್ಮರಿಸಿ ಮಾನವನು ಅಸಹ್ಯಪಟ್ಟು ಹಳಿಯುತ್ತಾನೆ. ಏಕೆಂದರೆ ಅದರ ದೋಷವನ್ನು ಅವನು ತಿಳಿಯುತ್ತಾನೆ. ||೧೪||

ಹಾಗೆಯೇ ಆತ್ಮನೆಂದು ಭ್ರಾಂತಿಯಿಂದ ತಿಳಿಯಲ್ಪಡುತ್ತಲಿರುವ ಈ ಶರೀರದಲ್ಲಿರುವ ಚರ್ಮದಲ್ಲಿ ಅಹಂಪದಾರ್ಥವಾದ ಆತ್ಮನೆಂಬ ಬುದ್ಧಿಯನ್ನು ಯಾವ ವಿವೇಕಿಯು ತಾನೆ ಇಡುತ್ತಾನೆ ? ||೧೫||

ಮೂಢೋಽಹಂ ಮಮ ಬುದ್ಧಿಭ್ಯಾಮಿದಂ ಗೃಹ್ಣಾತಿ ಸಂತತಮ್ ।
ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ಮಾಂಸಂ ಭೂಮಿತಲೇ ಸ್ಥಿತಮ್॥೧೬॥

ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ।
ತಥೈವಾತ್ಮತಯಾ ಗ್ರಾಹ್ಯೇ ದೇಹೇ ಮಾಂಸಂ ತು ಯದ್ಭವೇತ್ ॥೧೭॥

ತಸ್ಮಿನ್ ಮಾಂಸೇ ತ್ವಹಂಬುದ್ಧಿಂ ಸದಾ ಕಃ ಕುರುತೇ ನರಃ ।
ಮೂಢೋಽಹಂ ಮಮ ಬುದ್ಧಿಭ್ಯಾಮಿದಂ ಗೃಹ್ಣಾತಿ ಸಂತತಮ್ ॥೧೮॥

ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ಶಿರಾಂ ಭೂಮಿತಲೇ ಸ್ಥಿತಮ್ ।
ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ॥೧೯॥

ತಥೈವಾತ್ಮತಯಾ ಗ್ರಾಹ್ಯಾ ಶರೀರಸ್ಥಾ ಚ ಯಾ ಶಿರಾ ।
ತಸ್ಯಾಮೇವ ಹ್ಯಹಂಬುದ್ಧಿಂ ಸದಾ ಕಃ ಕುರುತೇ ನರಃ ॥೨೦॥

ಮೂಢೋಽಹಂ ಮಮ ಬುದ್ಧಿಭ್ಯಾಮಿದಂ ಗೃಹ್ಣಾತಿ ಸಂತತಮ್ ।
ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ಚಾಸ್ಥಿ ಭೂಮಿತಲೇ ಸ್ಥಿತಮ್ ॥೨೧॥

ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ।
ತಥೈವಾತ್ಮತಯಾ ಗ್ರಾಹ್ಯಂ ಶರೀರಸ್ಯಾಸ್ಥಿ ಯದ್ಭವೇತ್ ॥೨೨॥

ತಸ್ಮಿನ್ನೇವ ತ್ವಹಂಬುದ್ಧಿಂ ಸದಾ ಕಃ ಕುರುತೇ ಜನಃ ।
ಮೂಢೋಽಹಂ ಮಮ ಬುದ್ಧಿಭ್ಯಾಮಿದಂ ಗೃಹ್ಣಾತಿ ಸಂತತಮ್ ॥೨೩॥

ಶರೀರವನ್ನು ಬಿಟ್ಟು ಭೂಮಿಯಲ್ಲಿ ಬಿದ್ದಿರುವ ಮಾಂಸ, ಶಿರಾ, ಅಸ್ಥಿಗಳನ್ನು ನೋಡಿದರೆ, ಮುಟ್ಟಿದರೆ, ಅಥವಾ ಸ್ಮರಿಸಿದರೂ ಜನರು ಅಸಹ್ಯಪಡುವರು ; ಹಾಗಿದ್ದರೂ ಶರೀರದಲ್ಲಿ ಸೇರಿರುವ ಆ ಮಾಂಸ, ನರ, ಮೂಳೆಗಳಲ್ಲಿ ಮಾತ್ರ ನಾನು, ನನ್ನದು, ಎಂಬ ಅಭಿಮಾನವನ್ನು ವಿವೇಕಿಯಾದವರು ಯಾರುತಾನೆ ಮಾಡುತ್ತಾರೆ ? ||೧೬-೧೭-೧೮-೧೯-೨೦-೨೧-೨೨||

ಆದರೆ ಮೂಢನಾದ ಅಜ್ಞಾನಿಯು ಅವುಗಳಲ್ಲಿ ಅಹಂಮಮಬುದ್ಧಿಯನ್ನು ಎಂದರೆ, ಇದು ನಾನು, ಇವು ನನ್ನವು, ಎಂಬ ಅಭಿಮಾನವನ್ನು ಇಡುತ್ತಾನೆ.||೨೩||

ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ರೋಮಪುಂಜಂ ಭುವಿ ಸ್ಥಿತಮ್।
ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ॥೨೪॥

ತಥಾ ದೇಹಸ್ಥಿತಂ ರೋಮನಿಚಯಂ ಯದ್ದ್ವಿಜೋತ್ತಮಾಃ ।
ತಸ್ಮಿನ್ನೇವ ತ್ವಹಂಬುದ್ಧಿಂ ಸದಾ ಕಃ ಕುರುತೇ ಜನಃ ॥೨೫॥

ಮೂಢೋಽಹಂ ಮಮ ಬುದ್ಧಿಭ್ಯಾಮಿದಂ ಗೃಹ್ಣಾತಿ ಸಂತತಮ್ ।
ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ರಕ್ತಂ ಭೂಮಿತಲೇ ಸ್ಥಿತಮ್ ॥೨೬॥

ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ।
ತಥೈವಾತ್ಮತಯಾ ಗ್ರಾಹ್ಯಂ ರಕ್ತಂ ಯದ್ದೇಹಸಂಸ್ಥಿತಮ್ ॥೨೭॥

ತಸ್ಮಿನ್ನೇವ ತ್ವಹಂಬುದ್ಧಿಂ ಸದಾ ಕಃ ಕುರುತೇ ಜನಃ ।
ಮೂಢೋಽಹಂಮಮಬುದ್ಧಿಭ್ಯಾಮಿದಂ ಗೃಹ್ಣಾತಿ ಸಂತತಮ್ ॥೨೮॥

ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ಪೂಯಂ ಭೂಮಿತಲೇ ಸ್ಥಿತಮ್ ।
ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ॥೨೯॥

ತಥೈವಾತ್ಮತಯಾ ಗ್ರಾಹ್ಯೇ ಪೂಯಂ ಯದ್ದೇಹಸಂಜ್ಞಿತೇ ।
ತಸ್ಮಿನ್ನೇವ ತ್ವಹಂಬುದ್ಧಿಂ ಸದಾ ಕಃ ಕುರುತೇ ಜನಃ ॥೩೦॥

ಮೂಢೋಽಹಂಮಮಬುದ್ಧಿಭ್ಯಾಮಿದಂ ಗೃಹ್ಣಾತಿ ಸಂತತಮ್ ।
ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ಶ್ಲೇಷ್ಮರಾಶಿಂ ಭುವಿ ಸ್ಥಿತಮ್ ॥೩೦॥

ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ।
ತಥೈವ ಪುರಮಧ್ಯಸ್ಥೇ ಶ್ಲೇಷ್ಮರಾಶೌ ವಿಚಕ್ಷಣಃ ॥೩೨॥

ಕಃ ಕರೋತಿ ತ್ವಹಂಬುದ್ಧಿಂ ಮನುಷ್ಯಃ ಪಂಡಿತೋತ್ತಮಃ ।
ಮೂಢೋಽಹಂ ಮಮ ಬುದ್ಧಿಭ್ಯಾಮಿದಂ ಗೃಹ್ಣಾತಿ ಸಂತತಮ್ ॥೩೩॥

ಶರೀರವನ್ನು ಬಿಟ್ಟು ಭೂಮಿಯಲ್ಲಿ ಬಿದ್ದಿರುವ ರೋಮಗಳ ಗುಂಪನ್ನೂ ರಕ್ತ, ಕೀವು, ಶ್ಲೇಷ್ಮಗಳನ್ನೂ ನೋಡಿದರೂ, ಮುಟ್ಟಿದರೂ, ಸ್ಮರಿಸಿದರೂ, ಜನರು ಅಸಹ್ಯಪಟ್ಟು ದೂಷಿಸುತ್ತಾರೆ. ಆದರೆ ಅದೇ ರೋಮ, ರಕ್ತ, ಕೀವು, ಶ್ಲೇಷ್ಮಗಳು

ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ಪಿತ್ತಂ ಭೂಮಿತಲೇ ಸ್ಥಿತಮ್ ।
ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ॥೩೪॥

ತಥಾ ದೇಹಸ್ಥಿತೇ ಪಿತ್ತೇ ಹೇಯೇ ವೇದಾಂತಪಾರಗಾಃ ।
ಕಃ ಕರೋತಿ ತ್ವಹಂಬುದ್ಧಿಂ ಮೂಢ ಏವ ಕರೋತಿ ಹಿ ॥೩೫॥

ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ಮೂತ್ರಂ ಭೂಮಿತಲೇ ಸ್ಥಿತಮ್ ।
ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ॥೩೬॥

ತಥಾ ದೇಹಸ್ಥಿತೇ ಮೂತ್ರೇ ಹೇಯೇ ವೇದಾಂತಪಾರಗಾಃ ।
ಕಃ ಕರೋತಿ ತ್ವಹಂಬುದ್ಧಿಂ ಮೂಢ ಏವ ಕರೋತಿ ಹಿ ॥೩೭॥

ದೃಷ್ಟ್ವಾ ಸ್ಪೃಷ್ಟ್ವಾ ತಥಾ ಸ್ಮೃತ್ವಾ ಪುರೀಷಂ ಭೂತಲೇ ಸ್ಥಿತಮ್ ।
ಉದ್ಗಾರಂ ಕುರುತೇ ಮರ್ತ್ಯಃ ಸ್ವಯಂ ತದ್ದೋಷದರ್ಶನಾತ್ ॥೩೮॥

ತಥಾ ದೇಹಸ್ಥಿತೇ ಹೇಯೇ ಪುರೀಷೇ ಮತಿಮತ್ತಮಾಃ ।
ಕಃ ಕರೋತಿ ತ್ವಹಂಬುದ್ಧಿಂ ಮೂಢ ಏವ ಕರೋತಿ ಹಿ ॥೩೯॥

ಶರೀರದಲ್ಲಿದ್ದರೆ ಮಾತ್ರ ಅಂಥ ಶರೀರವನ್ನು ವಿವೇಕಿಯಾದವನು ಆತ್ಮಸ್ವರೂಪವೆಂದು ನಾನು ನನ್ನದು, ಎಂಬ ಭ್ರಾಂತಿಮೂಲಕವಾಗಿ ಅಭಿಮಾನಮಾಡುವುದಿಲ್ಲ. ಆದರೆ ಮೂಢನಾದ ಅಜ್ಞಾನಿಯು ಅಹಂಮಮಭಾವಗಳನ್ನಿಟ್ಟು ನರಳುತ್ತಿರುತ್ತಾನೆ. ॥೨೭-೨೮-೨೯-೩೦-೩೧-೩೨-೩೩॥

ಶರೀರವನ್ನು ಬಿಟ್ಟು ನೆಲದ ಮೇಲೆ ಬಿದ್ದಿರುವ ಪಿತ್ತ, ಮೂತ್ರ, ಪುರೀಷಗಳನ್ನು ನೋಡಿ, ಮುಟ್ಟಿ ಅಥವಾ ಜ್ಞಾಪಿಸಿಕೊಂಡು ಜನರು ಅಸಹ್ಯಪಡುತ್ತಾರೆ. ಹೀಗಿರುವಲ್ಲಿ ಅದೇ ಪಿತ್ತಾದಿಗಳು ಶರೀರದಲ್ಲಿದ್ದರೆ ಮಾತ್ರ ಅವುಗಳಲ್ಲಿ ಅಹಂಮಮಾಭಿಮಾನವನ್ನು ವಿವೇಕಿಯಾದವನು ಮಾಡನು. ಅದರೂ ಅವಿವೇಕಿಯು ಸುಖಸಾಧನವೆಂಬ ಭ್ರಾಂತಿಯಿಂದ ಅದರಲ್ಲಿ ನಾನು, ನನ್ನದು, ಎಂದು ಅಭಿಮಾನಮಾಡುತ್ತಾನೆ. ॥೩೪-೩೫-೩೬-೩೭-೩೮-೩೯॥

ಚಂದನಾಗರುಕರ್ಪೂರಪ್ರಮುಖಾ ಅಪಿ ಶೋಭನಾಃ ।
ಮಲಂ ಭವಂತಿ ಯತ್ಸ್ಪರ್ಶಾತ್ತತ್ಕಥಂ ಶೋಭನಂ ವಪುಃ ॥೪೦॥

ಭಕ್ಷ್ಯಭೋಜ್ಯಾದಯಸ್ಸರ್ವೇ ಪದಾರ್ಥಾಶ್ಚಾತಿಶೋಭನಾಃ ।
ಮಲಂ ಭವಂತಿ ಯತ್ಸ್ಪರ್ಶಾತ್ತತ್ಕಥಂ ಶೋಭನಂ ವಪುಃ ॥೪೧॥

ಸುಗಂಧಿ ಶೀತಲಂ ತೋಯಂ ಮೂತ್ರಂ ಯತ್ಸಂಗಮಾದ್ಭವೇತ್ ।
ತತ್ಕಥಂ ಶೋಭನಂ ಪಿಂಡಂ ಭವೇದ್ಬ್ರೂತ ದ್ವಿಜೋತ್ತಮಾಃ ॥೪೨॥

ಅತೀವ ಧವಳಾಶ್ಶುದ್ಧಾಃ ಪಟಾ ಯತ್ಸಂಗಮೇನ ತು ।
ಭವಂತಿ ಮಲಿನಾ ವರ್ಷ್ಮ ಕಥಂ ತಚ್ಛೋಭನಂ ಭವೇತ್ ॥೪೩॥

ರಕ್ತಜಾಃ ಕ್ರಿಮಯೋಽನಂತಾ ಮಾಂಸಜಾಃ ಕ್ರಿಮಯಸ್ತಥಾ ।
ಕ್ರಿಮಿಕೋಶಮಿದಂ ವರ್ಷ್ಮ ದುಃಖಾಯ ನ ಸುಖಾಯ ಹಿ ॥೪೪॥

ಗಂಧ ಮುಂತಾದ ಪರಿಮಳದ್ರವ್ಯಗಳೂ ಯಾವ ದೇಹದ ಸಂಬಂಧದಿಂದ ಪರಿಣಾಮದಲ್ಲಿ ಮಲವಾಗುತ್ತವೋ, ಅಂಥ ಶರೀರವು ಹೇಗೆತಾನೆ ಉತ್ತಮವೆನಿಸೀತು? ಹಾಗೆಯೇ ಭಕ್ಷ್ಯಭೋಜ್ಯಾದಿವಸ್ತುಗಳು ಹೊರಗೆ ಉತ್ತಮಪದಾರ್ಥಗಳಾಗಿದ್ದರೂ ಶರೀರಸಂಬಂಧದಿಂದ ಮಲವಾಗಿ ಪರಿಣಮಿಸುತ್ತವೆ. ಅಂಥ ಶರೀರವು ಹೇಗೆತಾನೆ ಒಳ್ಳೆಯದೆನಿಸೀತು? ಇಂತಹ ಶರೀರಾದಿಗಳಲ್ಲಿ ನಾನು, ನನ್ನದು, ಎಂದು ಅಭಿಮಾನವನ್ನು ಇಡುವುದು ಹೆಚ್ಚಿನ ಭ್ರಾಂತಿಯಾಗಿದೆ. ||೪೦-೪೧||

ಸುವಾಸನೆಯುಳ್ಳ ತಣ್ಣಗಿರುವ ನೀರು ಯಾವ ಶರೀರದ ಸಂಬಂಧದಿಂದ ಮೂತ್ರವಾಗಿ ಪರಿಣಮಿಸುತ್ತದೋ, ಹಾಗೆಯೇ ತುಂಬ ಬೆಳ್ಳಗಿರುವ ನಿರ್ಮಲವಾದ ವಸ್ತ್ರವು ಯಾವ ದೇಹಸಂಬಂಧದಿಂದ ಕೊಳೆಯುಳ್ಳದ್ದಾಗುತ್ತದೋ, ಅಂಥ ಶರೀರವು ಹೇಗೆತಾನೆ ಒಳ್ಳೆಯ ಗುಣಗಳುಳ್ಳದ್ದಾದೀತು? ಅಲ್ಲದೆ ರಕ್ತದಲ್ಲಿ ಅನೇಕ ಕ್ರಿಮಿಗಳಿವೆ, ಮಾಂಸದಿಂದ ಅನಂತವಾಗಿ ಕ್ರಿಮಿಗಳುಂಟಾಗುತ್ತವೆ. ಆದುದರಿಂದ ಈ ದೇಹವು ಕ್ರಿಮಿಗಳ ಚೀಲವಾಯಿತು. ಆದುದರಿಂದ ಈ ದೇಹವು ದುಃಖಕರವಾಗಬಲ್ಲುದೇ ಹೊರತು ಸುಖಕರವಾಗಲಾರದು. ಹೀಗೆ ಶರೀರದಲ್ಲಿ ದೋಷಗಳು ಇರುವುದು ಮಾತ್ರವಲ್ಲದೆ, ಅದರ ಸಂಬಂಧದಿಂದ ಗಂಧ ಮುಂತಾದ ಒಳ್ಳೆಯ ವಸ್ತುಗಳೂ ದುಷ್ಟಗಳಾಗಿ ಅಸಹ್ಯವಾಗುತ್ತವೆ. ಆದುದರಿಂದ ಶರೀರದ ಸಂಬಂಧವು

ಗರ್ಭಂ ತು ಕಲಲಾವಸ್ಥಂ ಕ್ರಿಮಿಭಿರ್ಭಕ್ಷಿತಂ ಭವೇತ್ ।
ದುಃಖಮೇವ ತದಾ ಸೌಖ್ಯಂ ನ ಕಿಂಚಿದಪಿ ವಿದ್ಯತೇ ॥೪೫॥

ಬುದ್ಬುದಾಕಾರತಾಽಽಪನ್ನಂ ಭಕ್ಷಯಂತಿ ಕಳೇವರಂ ।
ಕ್ರಿಮಯೋ ದುಃಖಮೇವ ಸ್ಯಾತ್ತದಾ ಸೌಖ್ಯಂ ನ ಕಿಂಚನ ॥೪೬॥

ಜಠರಾಗ್ನೌ ಭವೇತ್ತಪ್ತಃ ಗರ್ಭಂ ಮಾತುಸ್ಸದೈವ ತು ।
ದುಃಖಮೇವ ತದಾ ತಸ್ಯ ಸುಖಂ ಕಿಂಚಿನ್ನ ವಿದ್ಯತೇ ॥೪೭॥

ಜಠರೇ ವಾಯುಸಂಚಾರ ಘೂರ್ಣಿತೇ ಗರ್ಭತಾಂ ಗತಃ ।
ದುಃಖಮೇವ ತದಾ ತಸ್ಯ ಸುಖಂ ಕಿಂಚಿನ್ನ ವಿದ್ಯತೇ ॥೪೮॥

ಪುರೀಷಮೂತ್ರಸಂಪೂರ್ಣೇ ಜಠರೇ ಗರ್ಭತಾಂ ಗತಃ ।
ದುಃಖಮೇವ ಸದಾ ಯಾತಿ ನ ಕಿಂಚಿತ್ಸುಖಮಾಪ್ನುಯಾತ್ ॥೪೯॥

ಜರಾಯುಮಧ್ಯೇ ನಿಶ್ಛಿದ್ರೇ ನಿಮಗ್ನೋ ಗರ್ಭತಾಂ ಗತಃ ।
ದುಃಖಮೇವ ಸದಾ ಯಾತಿ ನ ಕಿಂಚಿತ್ಸುಖಮಾಪ್ನುಯಾತ್ ॥೫೦॥

ಸುಖವೂ ಅಲ್ಲವು, ಸುಖಸಾಧನವೂ ಅಲ್ಲವೆಂದು ಮನಗಂಡು ಅಭಿಮಾನವನ್ನೂ ರಾಗದ್ವೇಷಗಳನ್ನೂ ಬಿಡುವುದು ಶ್ರೇಯಸ್ಕರವೆಂದು ಭಾವವು. ॥೪೨-೪೩-೪೪॥

ಇಷ್ಟೇ ಅಲ್ಲದೆ ಶರೀರದ ಉತ್ಪತ್ತಿ ಬೆಳವಳಿಗೆ ಮುಂತಾದ ಎಲ್ಲ ಕಾಲಗಳಲ್ಲೂ ಅದು ದುಃಖಕರವೆಂದು ತಿಳಿಸುತ್ತಾರೆ. ತಾಯಿಯ ಗರ್ಭಕೋಶದಲ್ಲಿ ಶುಕ್ಲಶೋಣಿತಗಳೆರಡೂ ಒಟ್ಟಿಗೆ ಒಂದು ರಾತ್ರಿ ಇದ್ದರೆ ಅದು ಕಲಲವೆನಿಸುತ್ತದೆ. ಅದು ಏಳು ರಾತ್ರಿಗಳವರೆಗೂ ಇದ್ದರೆ ಬುದ್ಬುದವೆನಿಸುತ್ತದೆ. ಇದನ್ನು ಆ ಕ್ರಿಮಿಗಳು ಭಕ್ಷಿಸಿದರೆ ಆಗ ದುಃಖವಾಗುತ್ತದೆಯೇ ಹೊರತು ಸುಖವಾಗುವುದಿಲ್ಲ, ಗರ್ಭಸ್ರಾವವಾಗುತ್ತದೆ. ತಾಯಿಯ ಜಠರಾಗ್ನಿಯಿಂದ ಗರ್ಭವು ತಪ್ತವಾಗುವಾಗಲೂ, ವಾಯುಸಂಚಾರದಿಂದ ತೊಳಸಲ್ಪಡುವಾಗಲೂ ದುಃಖವಾಗುತ್ತದೆಯೇ ಹೊರತು ಯಾವ ಸುಖವೂ ಇಲ್ಲವು. ಮಲಮೂತ್ರಗಳಿಂದ ತುಂಬಿರುವಾಗಲೂ ಗರ್ಭದಲ್ಲಿ ದುಃಖವಾಗುತ್ತದೆಯೇ ಹೊರತು ಸುಖವಾಗುವುದಿಲ್ಲ. ರಂಧ್ರವಿಲ್ಲದ ಗರ್ಭಚೀಲದಲ್ಲಿ ಅಡಗಿರುವಾಗಲೂ ದುಃಖವೇ ಹೊರತು ಸುಖವಿಲ್ಲವು. ॥೪೫-೪೬-೪೭-೪೮-೪೯-೫೦॥

ರೌರವಾದಿಷು ಯದ್ದುಃಖಂ ನರಕೇಷು ನಿರಂತರಂ ।
ಗರ್ಭೇ ತತ್ಕೋಟಿಗುಣಿತಂ ಭವೇದ್ದುಃಖಂ ನ ಸಂಶಯಃ ॥೫೧॥

ಗರ್ಭಾತ್ತು ಜಾಯಮಾನಸ್ಯ ದುಃಖಂ ವಕ್ತುಂ ನ ಶಕ್ಯತೇ ।
ಅಹೋ ದುರ್ವಾಸ ಏವಾಸ್ಯ ಗರ್ಭವಾಸೋ ಮುನೀಶ್ವರಾಃ ॥೫೨॥

ಬಾಲ್ಯೇ ಪೀಡಾ ಮಹಾತೀವ್ರಾ ಗಣಪೀಡಾ ಮಹತ್ತರಾ ।
ಪಿಪೀಲಿಕಾದಿಪೀಡಾ ಚ ಪರಿಹರ್ತುಂ ನ ಶಕ್ಯತೇ ॥೫೩॥

ವ್ಯಾಧಿಪೀಡಾ ಮಹಾಪೀಡಾ ಕ್ಷುತ್ಪೀಡಾ ಚ ದಿನೇ ದಿನೇ ।
ಪಿಪಾಸಾ ಚ ಮಹಾಪೀಡಾ ಕಥಂ ಯಾತಿ ಸುಖಂ ನರಃ ॥೫೪॥

ಅಕ್ಷರಗ್ರಹಣೇ ಪೀಡಾ ಪೀಡಾ ಚ ಪಠನೇ ತಥಾ ।
ಶಬ್ದಜಾಲಸ್ಯ ದುಃಖಾಬ್ಧೇಃ ನ ಪಾರೋ ದೃಶ್ಯತೇ ಮಯಾ ॥೫೫॥

ರೌರವಾದಿ ನರಕಗಳಲ್ಲಿರುವ ದುಃಖಕ್ಕಿಂತ ಕೋಟಿಪಾಲು ಹೆಚ್ಚಾದ ದುಃಖವು ಗರ್ಭವಾಸದಿಂದ ಆಗುತ್ತದೆ, ಸಂಶಯವಿಲ್ಲವು. ॥೫೧॥

ಗರ್ಭವಾಸದಿಂದ ಆಗುವ ದುಃಖವನ್ನು ವರ್ಣಿಸಲು ಅಸಾಧ್ಯವಾದುದು. ಆದುದರಿಂದ ಗರ್ಭವಾಸವು ದುಃಖಕರವಾದ ಸ್ಥಿತಿಯು. ಅಷ್ಟೇ ಅಲ್ಲದೆ ಹುಟ್ಟಿದ ಮೇಲೆ ಸಂಭವಿಸುವ ದುಃಖಗಳು ನಾನಾಬಗೆಯವಾಗಿವೆ. ಹೇಗೆಂದರೆ—॥೫೨-೫೩॥

ಬಾಲ್ಯದಲ್ಲಿ ಸಂಭವಿಸುವ ಬಾಲಗ್ರಹಾದಿಗಳಿಂದ ಆಗುವ ಹಿಂಸೆಯು ಬಹಳ ಹೆಚ್ಚಾದುದು. ಅಲ್ಲದೆ ಇರುವೆಗಳೇ ಮುಂತಾದವುಗಳಿಂದ ಆಗುವ ಹಿಂಸೆಯನ್ನು ನಿವಾರಿಸುವುದು ಕಷ್ಟವು. ಇತರರಿಗೆ ತಿಳಿಸಿ ದುಃಖನಿವಾರಣೆಯನ್ನು ಮಾಡಿಕೊಳ್ಳಲೂ ಆಗುವುದಿಲ್ಲ. ಏಕೆಂದರೆ ಮಾತನಾಡಲು ಆಗ ಶಕ್ತಿಯು ಇರುವುದಿಲ್ಲವು. ॥೫೩॥

ಇತರರು ಎಂದರೆ ತಂದೆತಾಯಿಯರೂ ಸಹ ಮಕ್ಕಳ ದುಃಖಕಾರಣವನ್ನು ತಿಳಿಯಲಾರರು. ಖಾಯಿಲೆಗಳಿಂದಲೂ, ಹಸಿವಿನಿಂದಲೂ, ಬಾಯಾರಿಕೆಯಿಂದಲೂ ಪ್ರತಿನಿತ್ಯದಲ್ಲೂ ಆಗುವ ಹಿಂಸೆಯು ಬಹು ಹೆಚ್ಚಾದುದು. ಹೀಗಿರುವಲ್ಲಿ ಮನುಷ್ಯನು ಯಾವಾಗ, ಎಲ್ಲಿ, ಹೇಗೆತಾನೆ ಸುಖವನ್ನು ಹೊಂದುತ್ತಾನೆ? ॥೫೪॥

ತಕ್ಕ ವಯಸ್ಸಿಗೆ ಬಂದ ಮೇಲೂ ಒಳ್ಳೆಯ ಮಾರ್ಗವನ್ನು ಅನುಸರಿಸಲು ಬೇಕಾದ ಯೋಗ್ಯತೆಗಾಗಿ ಅಕ್ಷರಗಳನ್ನು ಕಲಿಯುವುದರಲ್ಲಿಯೂ, ಓದುವುದರ

ಶ್ರೌತಸ್ಮಾರ್ತಸದಾಚಾರೇ ಮಹಾಪೀಡಾ ಚ ದಾರುಣಾ ।
ನಿಷಿದ್ಧಪರಿಹಾರೇ ಚ ಸುಖಂ ಯಾತಿ ಕಥಂ ನರಃ ॥೫೬॥

ಯೌವನೇ ಚ ಮಹಾದುಃಖಂ ಸ್ತ್ರೀಸಂಸರ್ಗೇ ಮಹತ್ತರಮ್ ।
ಸ್ತ್ರೀಭೋಗಾಕ್ಷಮತಾ ದುಃಖಂ ದುಃಖಮೇವ ವಿಚಾರತಃ ॥೫೭॥

ಸ್ತ್ರೀಣಾಮಾರಾಧನೇ ದುಃಖಂ ತಾಸಾಂ ಸಂರಕ್ಷಣೇಽಪಿ ಚ ।
ತಾಸಾಂ ಪರಿಭವೇ ದುಃಖಂ ದುಃಖಮೇವ ವಿಚಾರತಃ ॥೫೮॥

ವಸ್ತ್ರಸಂಪಾದನೇ ದುಃಖಂ ಭೂಷಣಾನಾಂ ತಥೈವ ಚ ।
ರಕ್ಷಣೇ ಚ ತಥಾ ತೇಷಾಂ ದುಃಖಮೇವ ವಿಚಾರತಃ ॥೫೯॥

ಲ್ಲಿಯೂ ತುಂಬ ಕಷ್ಟವಾಗುತ್ತದೆ. ಶಬ್ದಸಮೂಹವೆಂಬ ದುಃಖಕರವಾದ ಸಮುದ್ರದ ಆಚೆದಡವನ್ನು ನಾನು ಕಾಣೆನು. ||೫೫||

ಶ್ರುತಿಸ್ಮೃತಿಗಳಲ್ಲಿ ಹೇಳಿರುವ ಧರ್ಮಾಚರಣೆಯಲ್ಲಿ ತುಂಬ ಆಯಾಸ ದುಃಖ ವಾಗುತ್ತದೆ. ನಿಷಿದ್ಧಧರ್ಮಗಳನ್ನು ಬಿಡುವುದರಲ್ಲೂ ತೊಂದರೆಯು ಹೆಚ್ಚಾಗಿರುತ್ತದೆ. ಹೀಗಿರುವಾಗ ಮಾನವನು ಸುಖವನ್ನು ಹೇಗೆತಾನೆ ಪಡೆಯುತ್ತಾನೆ? ||೫೬||

ಯೌವನದಲ್ಲಿಯೂ ಸ್ತ್ರೀಸಂಭೋಗದಲ್ಲಿಯೂ ಕಡೆಗೆ ಇಂದ್ರಿಯಗಳ ಅಶಕ್ತಿಯು ಉಂಟಾಗುವುದರಿಂದ ತುಂಬ ದುಃಖವಾಗುತ್ತದೆ. ಹಾಗೆಯೇ ಸ್ತ್ರೀ ಸಂಭೋಗದಲ್ಲಿ ಅಶಕ್ತಿಯಿಂದಲೂ ದುಃಖವಾಗುತ್ತದೆ. ಆದುದರಿಂದ ವಿಚಾರಮಾಡಿ ನೋಡಿದರೆ ಸರ್ವದಾ ದುಃಖವೇ ಹೊರತು ಸುಖವಿಲ್ಲವು. ||೫೭||

ಸ್ತ್ರೀಯರನ್ನು ಸಂತೋಷಪಡಿಸುವುದು ದುಃಖಕರವಾದುದು. ಅವರನ್ನು ಕಾಪಾಡುವುದರಲ್ಲೂ ದುಃಖವಿದೆ. ಅದರಿಂದ ತಿರಸ್ಕಾರವಾದರೂ ದುಃಖವಾಗುತ್ತದೆ. ಅವರಿಗೆ ಅವಮಾನ, ಕಷ್ಟಗಳು ಸಂಭವಿಸಿದರೂ ಅವುಗಳ ನಿವಾರಣೆಗಾಗಿ ತುಂಬ ಕಷ್ಟಪಡಬೇಕಾಗುತ್ತದೆ. ಕಷ್ಟಪಟ್ಟರೂ ಸುಖವಿಲ್ಲದೇ ಹೋಗುವ ಉದಾಹರಣೆಗಳು ಹೇರಳವಾಗಿವೆ. ಆದುದರಿಂದ ವಿಚಾರಮಾಡಿ ನೋಡಿದರೆ ದುಃಖಕರವಾಗಿಯೇ ಇರುತ್ತದೆ. ||೫೮||

ಬಟ್ಟೆ ಒಡವೆಗಳನ್ನು ಸಂಪಾದಿಸುವುದೂ, ಅವನ್ನು ಕಾಪಾಡುವುದೂ ದುಃಖಕರವಾದುವು. ಆದುದರಿಂದ ವಿಚಾರಮಾಡಿದರೆ ಎಲ್ಲವೂ ದುಃಖವಾಗಿಯೇ ಇರುತ್ತದೆ. ||೫೯||

ಗೃಹಕ್ಷೇತ್ರಧನಾದೀನಾಂ ದುಃಖಂ ಸಂಪಾದನೇ ತಥಾ ।
ರಕ್ಷಣೇ ಚ ತಥಾ ದುಃಖಂ ತೇಷಾಮೇವ ವಿಚಾರತಃ ॥೬೦॥

ಪುತ್ರಮಿತ್ರಾದಿಜಂತೂನಾಂ ದುಃಖೇ ದುಃಖಂ ತಥೈವ ಚ ।
ಜನ್ಮನಾಶಭಯಾದ್ದುಃಖಂ ದುಃಖಮೇವ ವಿಚಾರತಃ ॥೬೧॥

ರಾಜ್ಯಭಾರೇ ಮಹದ್ದುಃಖಂ ಅಮಾತ್ಯತ್ವೇ ಮಹತ್ತರಮ್ ।
ದಾಸಭಾವೇ ಮಹದ್ದುಃಖಂ ದುಃಖಮೇವ ವಿಚಾರತಃ ॥೬೨॥

ಮನೆ, ಭೂಮಿ, ಹಣ ಮುಂತಾದವುಗಳನ್ನು ಸಂಪಾದಿಸುವುದೂ, ಕಾಪಾಡುವುದೂ, ದುಃಖಕರವಾದುದು. ಇದುದರಿಂದ ವಿಚಾರಮಾಡಿದರೆ ಇವೆಲ್ಲ ದುಃಖವಾಗಿಯೇ ಇದೆ. ವಿತ್ತಾನಾಮಾರ್ಜನೇದುಃಖಂ ಆರ್ಜಿತಾನಾಂ ಚ ರಕ್ಷಣೇ । ನಾಶೇ ದುಃಖಂ ವ್ಯಯೇ ದುಃಖಂ ವಿತ್ತಂ ದುಃಖಮಯಂ ಸದಾ ॥ ಎಂಬಂತೆ ವಿತ್ತದಿಂದ ದುಃಖವೇ ಆಗುತ್ತದೆ. ॥೬೦॥

ನಮ್ಮ ಆತಂಕ ದುಃಖಗಳ ಜೊತೆಗೆ ಇತರರ ದುಃಖಗಳಿಂದಲೂ ನಮಗೆ ದುಃಖವಾಗುತ್ತದೆಂಬುದನ್ನು ತಿಳಿಸುತ್ತಾರೆ. ಮಕ್ಕಳು, ಸ್ನೇಹಿತರು ಮುಂತಾದ ಜಂತುಗಳಿಗೆ ದುಃಖವುಂಟಾದರೆ ಮತ್ತು ಹುಟ್ಟು, ಸಾವು, ಭಯಗಳುಂಟಾದರೂ ನಮಗೆ ದುಃಖವೇ. ಆದುದರಿಂದ ಎಲ್ಲವೂ ದುಃಖರೂಪವಾದುದೇ ಹೊರತು ಸುಖವಾದುದಲ್ಲವು. ಇತರರ ದುಃಖದಿಂದ ನಮಗೆ ದುಃಖವಾಗುವುದಕ್ಕೆ ಅವರಲ್ಲಿ ನಮಗಿರುವ "ಇವರು ನನ್ನವರು. ನನ್ನ ಸುಖಕ್ಕೆ ಇವರೂ ಸಾಧನಭೂತರು." ಎಂಬ ಅಭಿಮಾನವೇ ಕಾರಣವಾಗಿದೆ. ॥೬೧॥

ಇಹಲೋಕದಲ್ಲಿ ಎಲ್ಲಕ್ಕಿಂತಲೂ ಮಿಗಿಲಾದ ಸುಖಸೌಕರ್ಯಗಳು, ಅಧಿಕಾರ ಇವುಗಳಿಂದ ತುಂಬಿರುವುವೆಂದು ಜನರು ನಂಬಿರುವ ಸ್ಥಾನಮಾನಗಳಿಂದಲೂ ಸುಖವಿಲ್ಲವೆಂದು ತಿಳಿಸುತ್ತಾರೆ. ದೊರೆತನದಿಂದಲೂ, ಮಂತ್ರಿಪದವಿಯಿಂದಲೂ, ಆತಂಕವೇ ಹೊರತು ಸುಖವಿಲ್ಲವು. ಅದರಂತೆಯೇ ಜೀತದಿಂದಲೂ ಕಡೆಗೆ ದುಃಖವೇ ಆಗುತ್ತೆಂಬುದು ವಿಚಾರದಿಂದ ಗೊತ್ತಾಗುತ್ತದೆ. ಹೀಗೆ ಐಹಿಕಸಂಪತ್ತುಗಳೆಲ್ಲವೂ ಸುಖಸಾಧನಗಳಲ್ಲವು. ಕಡೆಗೆ ಅವು ಆತಂಕದುಃಖಗಳಿಗೇ ಕಾರಣವಾಗುತ್ತವೆ. ಈ ರೀತಿಯಲ್ಲಿ ಹೇಳಿರುವುದರಿಂದ ಈ ಉಪದೇಶವು ಜನರಲ್ಲಿ ಇಹಜೀವನ ನಿರ್ವಾಹಕ್ಕೆ ಆವಶ್ಯಕವಾಗಿ ಬೇಕಾಗುವ ಹುರುಡು ಉತ್ಸಾಹಗಳನ್ನು ಹಾಳು

ವೇದಮಾರ್ಗೇತರೇ ಮಾರ್ಗೇ ನಿಷ್ಠಾ ದುಃಖಂ ತಥೈವ ಚ ।
ಮಾರ್ಗೋತ್ಕರ್ಷಪರಿಜ್ಞಾನೇ ದುಃಖಮೇವ ವಿಚಾರತಃ ॥೬೩॥

ಮಾಡುತ್ತದೆ. ಇದರಿಂದ ನಿರಾಶಾಮನೋಭಾವವು (Pessimism) ಬೆಳೆಯು ವಂತಾಗುತ್ತದೆ. ಎಂದು ತಿಳಿಯಬಾರದು. ಮತ್ತೇನೆಂದರೆ ಇದು ವಸ್ತುಸ್ಥಿತಿಯನ್ನು ಹೇಳುತ್ತದೆ. ಏಕೆಂದರೆ

ಇದರಿಂದ ಜನರು ಐಹಿಕಸುಖಸೌಕರ್ಯಗಳಿಗಾಗಿ ಪ್ರಯತ್ನಮಾಡುವಾಗ ಕೇವಲ ಅರ್ಥಕಾಮಗಳಲ್ಲಿ ಹೆಚ್ಚು ಆಸಕ್ತಿಯಿಂದಲೂ ಅಭಿಮಾನದಿಂದಲೂ ಪ್ರಯತ್ನಿಸಿ ಅವುಗಳಿಂದ ಇವರ ಇಷ್ಟಾರ್ಥವು ನೆರವೇರದೆ ಹೋಗುವ ಸಂಭವವು ಬಂದರೆ, ಕಡೆಗೆ ನಿರಾಶಾಭಾವಕ್ಕೆ ತುತ್ತಾಗದೆ ಇರಲಿ. ಅರ್ಥ ಕಾಮಗಳ ಸಂಪಾದನೆ ಯಲ್ಲಿಯೇ ಮಗ್ನವಾಗಿರುವ ಮನಸ್ಸು ಧರ್ಮದ ವಿಷಯದಲ್ಲೂ ಪ್ರವರ್ತಿಸು ವಂತಾಗಿ, ಮೋಕ್ಷವು ಪರಮಪುರುಷಾರ್ಥವೆಂಬ ದೃಷ್ಟಿಯು ಲುಪ್ತವಾಗದೆ ಇರಲಿ. ಐಹಿಕವಾದ ಪ್ರಯತ್ನದ ವೈಫಲ್ಯ ಆಶಾಭಂಗಗಳಿಂದ ಜನರ ಮನಸ್ಸು ಕುಗ್ಗಿ ಸೋತು ಬೀಳದಿರಲಿ. ಎಂಬ ಉದ್ದೇಶದಿಂದ, ಐಹಿಕಸಂಪತ್ತುಗಳ ವಾಸ್ತವಸ್ವಭಾವ ವನ್ನು ಹೀಗೆ ವಿವರಿಸಿದೆ. ಮಾನವರು ತಮ್ಮ ಸುಖ ಸೌಕರ್ಯಗಳಿಗಾಗಿ ಪ್ರಯತ್ನಿಸು ತ್ತಿರುವುದು ಅನಿವಾರ್ಯವಾಗಿ ಸ್ವಾಭಾವಿಕವಾಗಿದೆ. ಮೇಲೆ ವಿವರಿಸಿರುವಂತೆ ತಿಳಿದು ಪ್ರಯತ್ನಮಾಡಿದರೆ ಕಾರ್ಯಸಿದ್ಧಿಯಾದರೆ ಹಿಗ್ಗಿ ಮೆರೆಯದಂತೆಯೂ, ಸಿದ್ಧಿಯಾಗದೆ ಹೋದರೆ ಕುಗ್ಗಿ ಕೊರಗಿ ಕುಸಿದು ಬೀಳದಂತೆಯೂ, ಮನಸ್ಸಮಾಧಾನದಿಂದ ಪುನಃ ತಕ್ಕಂತೆ ಪ್ರಯತ್ನಮಾಡಲು ಅನುಕೂಲವಾಗುತ್ತದೆ. ಹಾಗಿಲ್ಲದೆ ಆ ತಿಳಿವಳಿಕೆ ಇಲ್ಲದೆ ತುಂಬ ಬರವಸೆ ಉತ್ಸಾಹಗಳಿಂದ ಯತ್ನಿಸಿದರೆ ಸಿದ್ಧಿಯಾದರೆ ಹಿಗ್ಗಿ ಮೆರೆಯುವುದೂ, ಸೋಲಾದರೆ ನಿರಾಶಾಭಾವದಿಂದ ಉಂಟಾಗುವ ಅಪಾಯಗಳೂ ಹೆಚ್ಚಾಗಿರುತ್ತವೆ. ಆದುದರಿಂದ ಹೇಗಾದರೂ ಈ ತಿಳಿವಳಿಕೆಯಿಂದ ಬರುವ ವಿವೇಕದಿಂದ ಪ್ರಯತ್ನ ಮಾಡುವುದೇ ಉತ್ತಮವೆಂದು ತಿಳಿಯಬೇಕು. ಆದುದರಿಂದ ಯಾವಾಗಲೂ ಎಲ್ಲರೂ ನಾನು, ನನ್ನದು, ಎಂಬ ಅಭಿಮಾನವಿಲ್ಲದೆ ಧರ್ಮಾಚರಣೆಯನ್ನು ಮಾಡುತ್ತಿರು ವುದರಿಂದ ಅಪಾಯಗಳಿಗೆ ಗುರಿಯಾಗದೆ ಶ್ರೇಯಸ್ಸನ್ನು ತಪ್ಪದೆ ಪಡೆಯುತ್ತಾ ರೆಂಬುದು ಮುಖ್ಯ ತಾತ್ಪರ್ಯವಾಗಿದೆ. ॥೬೨॥

ಶ್ರುತ್ಯುಕ್ತಮಾರ್ಗವನ್ನು ಬಿಟ್ಟು ಬೇರೆ ದಾರಿಯಲ್ಲಿ ನಡೆಯುವುದರಿಂದ ನಮಗಿಂತಲೂ ಮೇಲಾದವರ ದಾರಿಯು ಉತ್ತಮವೆಂದು ತಿಳಿದಾಗ ನಮ್ಮ ದಾರಿಯು ಕೀಳೆಂಬ ತಿಳಿವಳಿಕೆಯಿಂದಲೂ ದುಃಖವೇ ಆಗುತ್ತದೆ. ॥೬೩॥

ಸುದಾರಿದ್ರ್ಯೇ ಮಹದ್ದುಃಖಂ ಪರಶ್ರೀದರ್ಶನೇ ತಥಾ ।
ಪರೈಸ್ಸಾಮ್ಯೇ ಮಹದ್ದುಃಖಂ ದುಃಖಮೇವ ವಿಚಾರತಃ ॥೬೪॥

ವಾಯುಪೀಡಾಽಗ್ನಿ ಪೀಡಾ ಚ ತೋಯಪೀಡಾ ತಥೈವ ಚ ।
ಸರ್ಪಾದಿದಂಶನೇ ಪೀಡಾ ದುಃಖಮೇವ ವಿಚಾರತಃ ॥೬೫॥

ಭೂತಪ್ರೇತಪಿಶಾಚಾನಾಂ ಯಕ್ಷಾದೀನಾಂ ತಥೈವ ಚ ।
ಪದಪ್ರಾಪ್ತೌ ಮಹದ್ದುಃಖಂ ದುಃಖಮೇವ ವಿಚಾರತಃ ॥೬೬॥

ಇಂದ್ರಲೋಕೇ ಮಹಾದುಃಖಂ ಪ್ರಾಜಾಪತ್ಯೇ ಮಹತ್ತರಂ ।
ವಿಷ್ಣುಲೋಕೇ ಚ ರೌದ್ರೇ ಚ ದುಃಖಮೇವ ವಿಚಾರತಃ ॥೬೭॥

ತುಂಬ ಬಡತನವಿದ್ದರೂ, ಇತರರ ಸಂಪತ್ತನ್ನು ನೋಡಿದರೂ, ಇತರರು ನಮಗೆ ಸಮಾನರಾಗಿದ್ದರೂ, ದುಃಖವಾಗುವುದರಿಂದ ಈ ಎಲ್ಲವೂ ದುಃಖರೂಪವು. ॥೬೪॥

ಬಿರುಗಾಳಿಯಿಂದಲೂ, ಬೆಂಕಿಯಿಂದಲೂ ಆಳವಾದ ನೀರಿನಿಂದಲೂ, ಹಾವು ಮುಂತಾದುದರ ಕಡಿಯುವಿಕೆಯಿಂದಲೂ ದುಃಖವೇ ಆಗುತ್ತದೆ. ಆದುದರಿಂದ ಎಲ್ಲವೂ ವಾಸ್ತವವಾಗಿ ದುಃಖರೂಪವಾದುದು. ಆದುದರಿಂದ ಈ ಆಧಿಭೌತಿಕವಾದ ಕಾರಣಗಳನ್ನು ಜಾಗರೂಕತೆ ಮುಂದಾಲೋಚನೆಗಳಿಂದ ನಿವಾರಿಸಿಕೊಂಡು ಅಭಿಮಾನವಿಲ್ಲದೆ ಧರ್ಮಾಚರಣೆಯನ್ನು ಮಾಡುತ್ತಿರಬೇಕು. ॥೬೫॥

ಭೂತ, ಪ್ರೇತ, ಪಿಶಾಚ, ಯಕ್ಷ ಮುಂತಾದ ರೂಪವನ್ನು ಪಡೆಯುವುದೂ ದುಃಖವೇ ಆಗುವುದರಿಂದ ಇದೆಲ್ಲವೂ ಕಡೆಗೆ ದುಃಖರೂಪವಾದುದು. ಇಂತಹ ಆಧಿದೈವಿಕವಾದ ದುಃಖಕಾರಣಗಳನ್ನು ನಿವಾರಿಸಿಕೊಳ್ಳುವುದರಲ್ಲೂ ಅಭಿಮಾನವಿಲ್ಲದ ಧರ್ಮಾಚರಣೆಯೇ ಸಾಧನವಾಗಬಲ್ಲದು. ॥೬೬॥

ಇಂದ್ರಲೋಕದಲ್ಲೂ, ಬ್ರಹ್ಮಲೋಕದಲ್ಲೂ, ವೈಕುಂಠದಲ್ಲೂ, ಕೈಲಾಸದಲ್ಲೂ ಆಗುವುದೆಲ್ಲವೂ ಕಡೆಗೆ ವಿಚಾರಮಾಡಿನೋಡಿದರೆ ಪರಶಿವೈಕ್ಯಸಾಕ್ಷಾತ್ಕಾರರೂಪವಾದ ಮುಕ್ತಿಗಿಂತ ಕೀಳಾದುದೂ ಅನಿತ್ಯವಾದುದೂ ತಾರತಮ್ಯದಿಂದ ಅಸೂಯಾಕರವೂ ಆಗಿರುವುದರಿಂದ ಇಂದ್ರಾದಿಪದವಿಯಸುಖವೂ ಕಡೆಗೆ ದುಃಖರೂಪವೇ ಆಗುತ್ತದೆ. ॥೬೭॥

ಬಹುನೋಕ್ತೇನ ಕಿಂ ದೇಹೇಽಹಂ ಮಮ ಜ್ಞಾನವಾನ್ಯದಿ ।
ದುಃಖಮೇವ ಸದಾ ಯಾತಿ ಸುಖಂ ಯಾತಿ ನ ಕಿಂಚನ ॥೬೮॥

ದುಃಖಂ ದುಃಖಾತ್ಮನಾ ಕಿಂಚಿತ್ ಜಾನಾತಿ ವಿವಶಃ ಪುಮಾನ್ ।
ಸುಖಾತ್ಮನಾ ಚ ಜಾನಾತಿ ಭ್ರಮಾದ್ದುಃಖಂ ಕದಾಚನ ॥೬೯॥

ಆತ್ಮನಸ್ತು ಸ್ವರೂಪಂ ಹಿ ಸುಖಂ ನಾನ್ಯದ್ವಿಚಾರತಃ ।
ತದಜ್ಞಾನಬಲೇನೈವ ಸುಖಪ್ರೇಪ್ಸಾ ನೃಣಾಂ ಬುಧಾಃ ॥೭೦॥

ತದಜ್ಞಾನೇ ನಿವೃತ್ತೇ ತು ಪ್ರಾಪ್ತಮೇತಿ ಸುಖಂ ಸ್ವತಃ ।
ಜಹಾತಿ ದುಃಖಮಪ್ರಾಪ್ತಂ ಸ್ವತಸ್ಸತ್ಯಂ ಮಯೋದಿತಂ ॥೭೧॥

ಹೆಚ್ಚು ಹೇಳಿ ಏನು? ಈ ದೇಹದಲ್ಲಿ ನಾನು, ನನ್ನದು ಎಂಬ ಭಾವನೆಯುಳ್ಳವನಿಗೆ ಸರ್ವದಾ ದುಃಖವೇ ಆಗುತ್ತಿರುತ್ತದೆ. ಯಾವಾಗಲೂ ನಿಜವಾದ ಸುಖವಾಗುವುದು ಇಲ್ಲವು. ॥೬೮॥

ಅಜ್ಞಾನದಿಂದ ಪರವಶನಾದವನು ದುಃಖವನ್ನು ಸುಖವೆಂದೂ, ವಿಷಯ ಸುಖವು ದುಃಖವಾದರೂ ಸುಖವೆಂದೂ, ತಿಳಿಯುತ್ತಾನೆ. ಹಾಗೆಯೇ ಭ್ರಾಂತಿಗೆ ಪರವಶನಾದವನು ಕಡೆಗೆ ಸುಖದಲ್ಲಿ ಪರಿಣಮಿಸುವುದಾದರೂ ಮೊದಲು ದುಃಖದಂತೆ ತೋರುವ ವೈರಾಗ್ಯಶಮದಮಾದಿಗಳನ್ನು ದುಃಖವೆಂದು ತಿಳಿಯುತ್ತಾನೆ. ॥೬೯॥

ಸತ್ಯಲೋಕದವರೆಗಿನ ಎಲ್ಲ ಸುಖವೂ ವಿಷಯಸುಖವಾದುದರಿಂದ ದುಃಖವೆನ್ನುವುದಾದರೆ ಸುಖವೇ ಇಲ್ಲವೆಂದು ಶಂಕಿಸಬಾರದು. ಏಕೆಂದರೆ ಆತ್ಮನ ವಾಸ್ತವವಾದ ಸ್ವರೂಪವು ಸುಖವಾದುದೇ ಹೊರತು ದುಃಖರೂಪವಾದುದಲ್ಲವೆಂಬುದು ಅವಸ್ಥಾತ್ರಯವನ್ನು, ಎಚ್ಚರ, ಕನಸು, ನಿದ್ದೆ ಎಂಬ ಮೂರು ಸ್ಥಿತಿಯಲ್ಲೂ ಮಾನವರಿಗೆ ಬರುವ ಪೂರ್ಣ ಅನುಭವವನ್ನು, ಎಂದರೆ ಮಾನವನ ಅಖಂಡವಾದ ಒಟ್ಟು ತಿಳಿವಳಿಕೆಯನ್ನು ವಿಮರ್ಶಿಸಿ, ವಿಚಾರಮಾಡಿದರೆ ಗೊತ್ತಾಗುತ್ತದೆ. ಅಂತಹ ಸುಖಸ್ವರೂಪನಾದ ಆತ್ಮನ ಸ್ವರೂಪಸುಖದ ತಿಳಿವಳಿಕೆ ಇಲ್ಲದಿರುವುದರಿಂದಲೇ ಸುಖವನ್ನು ಹೊರಗಿನ ಸಾಧನಗಳಿಂದ ಪಡೆಯಬೇಕೆಂದು ಜನರು ಆಶಿಸುತ್ತಿರುತ್ತಾರೆ. ಸುಖವು ಹಾಗೆ ಹೊರಗಿನಿಂದ ಪ್ರಾಪ್ಯವಾದುದಲ್ಲವು. ॥೭೦॥

ಜೀವನು ತನ್ನ ನಿಜವಾದ ಸ್ವರೂಪವನ್ನು, ಪರಶಿವನೊಡನೆ ಅಭೇದವನ್ನು, ತಿಳಿಯದೆ ಇರುವುದೆಂಬ ಅಜ್ಞಾನವು, ಬ್ರಹ್ಮಾತ್ಮೈಕ್ಯಜ್ಞಾನದಿಂದ ನಷ್ಟವಾಗಲಾಗಿ,

ಅಜ್ಞಾನಸ್ಯ ನಿವೃತ್ತಿಶ್ಚ ಜ್ಞಾನಾದೇವ ನ ಕರ್ಮಣಾ ।
ಜ್ಞಾನಂ ನಾಮ ಮಹಾದೇವಜ್ಞಾನಂ ವೇದಾಂತವಾಕ್ಯಜಮ್ ॥೭೨॥

ವಿರಕ್ತಸ್ಯ ಹಿ ಸಂಸಾರಾತ್ ಜ್ಞಾನಂ ನಾನ್ಯಸ್ಯ ಕಸ್ಯಚಿತ್ ।
ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಽಸ್ಯ ಹೃದಿ ಶ್ರಿತಾಃ ॥೭೩॥
ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ ।

ಸ್ವಸ್ವರೂಪವಾದ ಸುಖವು ಅಜ್ಞಾನದಿಂದ ಅಪ್ರಾಪ್ತವಾಗಿದ್ದಂತೆ ತೋರುತ್ತಿದ್ದು, ಈಗ ಪ್ರಾಪ್ತವಾದಂತೆ ತಿಳಿಯುತ್ತಾನೆ. ಹಾಗೆಯೇ ಆ ಅಜ್ಞಾನದಿಂದ ದುಃಖವು ಆತ್ಮನಿಗೆ ಪ್ರಾಪ್ತವಾಗಿದ್ದಂತೆ ತೋರುತ್ತಿರುತ್ತದೆ. ಸ್ವಸ್ವರೂಪದ ಜ್ಞಾನದಿಂದ ಅದು ಬಿಟ್ಟು ಹೋದಹಾಗೆ ಭಾವಿಸುತ್ತಾನೆ. ವಾಸ್ತವವಾಗಿ ಮುಕ್ತಿಯಲ್ಲಿ ತನ್ನಲ್ಲಿಲ್ಲದ ಸುಖವು ಹೊರಗಿನಿಂದ ಬರುವುದೂ ಇಲ್ಲವು. ಸಂಸಾರದೆಶೆಯಲ್ಲಿ ತನ್ನಲ್ಲಿಲ್ಲದ ದುಃಖವೂ ಹೊರಗಿನಿಂದ ಬಂದು ಸೇರುವುದೂ ಇಲ್ಲ. ಆತ್ಮನು ಯಾವಾಗಲೂ ಸುಖಸ್ವರೂಪನಾಗಿಯೇ ಇರುತ್ತಾನೆ. ಯಾವಾಗಲೂ ದುಃಖಸಂಬಂಧವುಳ್ಳವನೇ ಅಲ್ಲವು ॥೭೧॥

ಈ ಅಜ್ಞಾನದ ನಿವೃತ್ತಿಯು ಉಪನಿಷತ್ತುಗಳಲ್ಲಿರುವ ಮಹಾವಾಕ್ಯಗಳ ತಾತ್ಪರ್ಯವನ್ನು ಗುರೂಪದೇಶದಿಂದ ಪಡೆಯುವುದರ ಮೂಲಕವಾಗಿ ಉಂಟಾಗುವ ಬ್ರಹ್ಮಾತ್ಮೈಕ್ಯಜ್ಞಾನದಿಂದಲೇ ಆಗುತ್ತದೆ. ಅದು ಕರ್ಮಾನುಷ್ಠಾನದಿಂದಲೇ ನೇರವಾಗಿ ಆಗುವುದಿಲ್ಲವು. ಆ ಜ್ಞಾನವೂ ಉಪನಿಷದ್ವಾಕ್ಯಗಳಿಂದ ಪರಮಾರ್ಥವನ್ನು ಎಂದರೆ ಪರಶಿವನ ಸ್ವರೂಪವನ್ನು ಬ್ರಹ್ಮಾತ್ಮೈಕ್ಯವನ್ನು ತಿಳಿಯುವುದೇ ಆಗಿರುತ್ತದೆ. ॥೭೨॥

ಕರ್ತೃತ್ವಭೋಕ್ತೃತ್ವಜನನಮರಣರೂಪವಾದ ಸಂಸಾರದಲ್ಲಿ ನಾನು, ನನ್ನದು, ಇದು ಸುಖಸಾಧನವು, ಎಂದು ಮುಂತಾದರೀತಿಯಲ್ಲಿ ಅಭಿಮಾನರೂಪವಾದ ಸಂಬಂಧದಲ್ಲಿ ವೈರಾಗ್ಯವನ್ನು ವೇದಾಂತವಿಚಾರ ಅನುಭವಗಳಿಂದ ಪಡೆದಿರುವವನಿಗೇ ಅಂಥ ಪರಶಿವಾತ್ಮೈಕ್ಯಜ್ಞಾನವುಂಟಾಗುತ್ತದೆ. ಮತ್ತೆ ಯಾರಿಗೂ ಅಂಥ ಜ್ಞಾನವುಂಟಾಗುವುದಿಲ್ಲ. ಹೃದಯದಲ್ಲಿರುವ ಎಲ್ಲ ವಿಧವಾದ ಆಶೆಗಳೂ ಹೋದಮೇಲೆ ಚಿತ್ತವು ಶುದ್ಧವಾಗಲು, ಜ್ಞಾನವುಂಟಾಗಿ ಮಾನವನು ಮುಕ್ತನಾಗುತ್ತಾನೆ. ಇಲ್ಲಿಯೇ ಈಗಲೇ ಬ್ರಹ್ಮಸಾಕ್ಷಾತ್ಕಾರದ ಸುಖವನ್ನು ಅನುಭವಿಸುತ್ತಾನೆ. ಕಾಲಾಂತರವನ್ನು ಎಂದರೆ ಮರಣದವರೆಗೆ ನಿರೀಕ್ಷಿಸಬೇಕಾಗುವುದಿಲ್ಲ; ಅಂಥವನು ಆಯುಶ್ಶೇಷವಿದ್ದರೆ ಜೀವನ್ಮುಕ್ತನಾಗಿರುತ್ತಾನೆ, ಮತ್ತು ಅವನು ಲೋಕಾಂತರಕ್ಕೂ

ವೈರಾಗ್ಯಹೀನಸ್ಯ ನ ಸತ್ಯವೇದನಂ
ನ ಮುಕ್ತಿಸಿದ್ಧಿರ್ನ ಚ ಬಂಧನಚ್ಛಿದಾ ॥೭೪॥
ನ ಧರ್ಮಸಿದ್ಧಿಶ್ಚ ತತಃ ಪುರಾತನೈಃ
ಇದಂ ವಿಶಿಷ್ಟಂ ಕಥಿತಂ ಕೃಪಾಬಲಾತ್ ।

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ವೈರಾಗ್ಯವಿಚಾರೋ ನಾಮ ಸಪ್ತದಶಾಧ್ಯಾಯಃ

ಹೋಗಬೇಕಾಗಿರುವುದಿಲ್ಲ. ಇಲ್ಲಿಯೇ ಮುಕ್ತಿಸುಖಾನುಭವವನ್ನು ಹೊಂದುತ್ತಾನೆ. ॥೭೩॥

ವೈರಾಗ್ಯವಿಲ್ಲದವನಿಗೆ ಪರಮಾರ್ಥತತ್ತ್ವಸ್ವರೂಪದ ತಿಳಿವಳಿಕೆಯು ಉಂಟಾಗುವುದಿಲ್ಲ. ಮೋಕ್ಷವೂ ಸಿದ್ಧಿಸುವುದಿಲ್ಲ. ಸಂಸಾರಬಂಧನದ ಬಿಡುಗಡೆಯೂ ಉಂಟಾಗುವುದಿಲ್ಲ. ಕಡೆಗೆ ಧರ್ಮಾನುಷ್ಠಾನದ ಪರಮಫಲವೂ ಲಭಿಸುವುದಿಲ್ಲ. ಆದುದರಿಂದ ಪೂರ್ವಿಕರು ಸಂಸಾರದುಃಖದಲ್ಲಿ ನರಳುತ್ತಿರುವ ಜನರ ವಿಷಯದಲ್ಲಿ ದಯೆಯಿಂದ ಈ ವೈರಾಗ್ಯದ ಮಹಿಮೆಯನ್ನು ಬೋಧಿಸಿರುತ್ತಾರೆ. ॥೭೪॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ವೈರಾಗ್ಯದ ಸ್ವರೂಪ, ಪ್ರಯೋಜನಗಳನ್ನು ವಿವರಿಸಿರುವ
ಹದಿನೇಳನೆಯ ಅಧ್ಯಾಯವು ಮುಗಿದುದು

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

॥ ಅಷ್ಟಾದಶೋಽಧ್ಯಾಯಃ ॥

ಹದಿನೆಂಟನೆಯ ಅಧ್ಯಾಯವು

(ಅನಿತ್ಯವಸ್ತುವಿಚಾರಃ)

॥ ಸೂತ ಉವಾಚ ॥

ಅಥಾನಿತ್ಯಂ ಪ್ರವಕ್ಷ್ಯಾಮಿ ಸಮಾಸೇನ ನ ವಿಸ್ತರಾತ್ ।
ಯದ್ವಿಜ್ಞಾನೇನೈವ ಸಂಸಾರಾತ್ ವೈರಾಗ್ಯಂ ಜಾಯತೇ ಹೃದಿ ॥೧॥

ಅನಾತ್ಮಜಡರೂಪೋ ಯ ಸ್ಸ ಏವಾನಿತ್ಯಮುಚ್ಯತೇ ।
ಅನಾತ್ಮನಾಮನಿತ್ಯತ್ವಂ ಘಟಾದೀನಾಂ ಜಡಾತ್ಮನಾಮ್ ॥೨॥

ಈ ರೀತಿಯಾಗಿ ವೈರಾಗ್ಯವು ಜ್ಞಾನೋತ್ಪತ್ತಿಗೆ ಕಾರಣವು ಎಂಬುದನ್ನು ತಿಳಿಸಿ ನಿತ್ಯಾನಿತ್ಯವಸ್ತುವಿವೇಕವೂ ಕೂಡ ವೈರಾಗ್ಯವನ್ನುಂಟುಮಾಡುವುದರ ಮೂಲಕ ಜ್ಞಾನೋತ್ಪತ್ತಿಗೆ ಕಾರಣವಾದುದರಿಂದ ಅವುಗಳಲ್ಲೊಂದಾದ ಅನಿತ್ಯವಸ್ತುವನ್ನು ವಿಭಾಗಮಾಡಿ ತಿಳಿಸುತ್ತಾರೆ. ಎಲೈ ಶೌನಕಾದಿಋಷಿಗಳಿರಾ, ಯಾವ ಅನಿತ್ಯವಸ್ತುವಿನ ಜ್ಞಾನದಿಂದಲೇ ಈ ಸಂಸಾರದ ದೆಶೆಯಿಂದ ವೈರಾಗ್ಯ ಉಂಟಾಗುವುದೋ ಅಂಥ ಅನಿತ್ಯವಸ್ತುವಿನ ಸ್ವರೂಪವನ್ನು ವಿಸ್ತರಿಸದೆ ಸಂಗ್ರಹವಾಗಿ ವಿವರಿಸಿ ಹೇಳುತ್ತೇನೆ. ಸಾಧನಚತುಷ್ಟಯದಲ್ಲಿ ನಿತ್ಯಾನಿತ್ಯವಸ್ತುವಿವೇಕವು ಮೊದಲನೆಯದು. ॥೧॥

ಎಲೈ ಪಂಡಿತಶ್ರೇಷ್ಠರಿರಾ, ಚೇತನನಾದ ಆತ್ಮನನ್ನು ಬಿಟ್ಟು ಉಳಿದ ಜಡರೂಪಗಳಾದ ಘಟಾದಿಗಳೆಲ್ಲವೂ ಅನಿತ್ಯಪದಾರ್ಥಗಳು. ಇದಕ್ಕೆ ಪ್ರಮಾಣವೇನೆಂದರೆ,

ಆಬಾಲಪಂಡಿತಂ ದೃಷ್ಟಂ ಯತೋಽತಃ ಪಂಡಿತೋತ್ತಮಾಃ ।
ಕಾರ್ಯಸ್ಯೈವ ಹ್ಯನಿತ್ಯತ್ವಂ ವರ್ಣಯಂತಿ ಹಿ ಕೇಚನ ॥೩॥

ನ ತದ್ಯುಕ್ತಮಕಾರ್ಯಸ್ಯಾಪ್ಯನಿತ್ಯತ್ವಪ್ರಸಿದ್ಧಿತಃ ।
ಅಕಾರ್ಯಸ್ಯಘಟಾದೀನಾಂ ಪ್ರಾಗಭಾವಸ್ಯ ಜಂತುಭಿಃ ॥೪॥

ದೃಷ್ಟಮೇವ ಹ್ಯನಿತ್ಯತ್ವಂ ನಾದೃಷ್ಟಂ ಪಂಡಿತೋತ್ತಮಾಃ ।
ಭಾವರೂಪಸ್ಯ ಕಾರ್ಯತ್ವಮನಿತ್ಯತ್ವೇ ಪ್ರಯೋಜಕಂ ॥೫॥
ಅಪಿ ಸರ್ವಸ್ಯ ಪೂರ್ವೋಕ್ತಮನಾತ್ಮತ್ವಂ ಪ್ರಯೋಜಕಂ ।

ಶಾಸ್ತ್ರಾರ್ಥವನ್ನು ತಿಳಿಯದ ಹುಡುಗರು ಮೊದಲುಮಾಡಿ ದೊಡ್ಡ ಪಂಡಿತರವರೆಗೂ ಇರುವ ಸಮಸ್ತ ಜನಗಳಿಂದಲೂ ಜಡವಾದ ಆತ್ಮನಲ್ಲದ ಘಟಾದಿಪದಾರ್ಥಗಳು ಸರ್ವದಾ ಬದಲಾಯಿಸುತ್ತಿರುವುದರಿಂದಲೂ, ಪರಿಣಾಮಿಗಳಾಗಿ, ವಿಕಾರಿಗಳಾಗಿರುವುದರಿಂದಲೂ, ಕಡೆಗೆ ನಾಶವನ್ನೂ ಪಡೆಯುತ್ತಿರುವುದರಿಂದಲೂ ಅನಿತ್ಯಗಳಾಗಿವೆ. ಎಂಬುದು ಪ್ರತ್ಯಕ್ಷಪ್ರಮಾಣದಿಂದ ತಿಳಿಯಲ್ಪಟ್ಟಿದೆ. ಅದರಂತೆ ಆತ್ಮನಲ್ಲದ ಆಕಾಶಾದಿ ಪದಾರ್ಥಗಳೆಲ್ಲವೂ ಅನಿತ್ಯಗಳು. ಇದಕ್ಕೆ ಅನುಭವವೇ ಪ್ರಮಾಣವು. ||೨||

ಮತ್ತೆ ಕೆಲವರು ಘಟಾದಿ ಪದಾರ್ಥಗಳು ಕೃತಕ (ಒಬ್ಬರಿಂದ ಮಾಡಲ್ಪಟ್ಟ) ಪದಾರ್ಥಗಳಾದುದರಿಂದ ಅನಿತ್ಯಪದಾರ್ಥಗಳೇ ವಿನಾ, ಆತ್ಮನಲ್ಲದ ಪದಾರ್ಥಗಳಾದುದರಿಂದ ಅನಿತ್ಯಪದಾರ್ಥಗಳಲ್ಲವೆಂದು ಹೇಳುತ್ತಾರೆ. ಹೀಗೆ ಹೇಳುವುದು ಸರಿಯಲ್ಲ. ಏಕೆಂದರೆ ಅಕಾರ್ಯವಾದ ಪದಾರ್ಥಗಳೂ ಅನಿತ್ಯಪದಾರ್ಥಗಳೆಂದು ಕಂಡುಬಂದಿರುವುವು. ಹಾಗೆ ಎಲ್ಲಿ ಕಂಡಿದೆ? ಎಂದರೆ, ಘಟವು ಹುಟ್ಟುವುದಕ್ಕಿಂತಲೂ ಮೊದಲಿದ್ದ ಕಾರ್ಯವಲ್ಲದ ಪ್ರಾಗಭಾವವು (ಘಟ ಹುಟ್ಟುವುದಕ್ಕಿಂತಲೂ ಮೊದಲು ಇದ್ದ ಘಟದ ಇಲ್ಲದೆ ಇರುವಿಕೆ ಎಂಬುದು.) ಘಟವು ಹುಟ್ಟಿದನಂತರ ನಾಶವಾಗುವುದನ್ನು ಸರ್ವರೂ ತಿಳಿದೇ ಇದ್ದಾರೆ. ಆದರೆ ಇದು ಅಭಾವ ಪದಾರ್ಥಕ್ಕೆ ಸಂಬಂಧಪಟ್ಟಿದೆ. ಘಟಾದಿಗಳು ಭಾವಪದಾರ್ಥಗಳಾಗಿರುವುದರಿಂದ ಈ ನ್ಯಾಯವು ಅವಕ್ಕೆ ಹೊಂದುವುದಿಲ್ಲವೆಂದರೆ, ||೩-೪||

ಹಾಗಾದರೆ ಅಭಾವರೂಪವಾದ ಪ್ರಾಗಭಾವಕ್ಕೆ ನಾಶವಿದ್ದರೂ ಭಾವರೂಪವಾದ ಘಟಾದಿಪದಾರ್ಥಗಳು ಅನಿತ್ಯವೆಂಬುದಕ್ಕೆ ಕೃತಕತ್ವವೇ ಪ್ರಯೋಜಕವುನ್ನಬಹುದು. ಭಾವರೂಪವಾದ ಘಟಾದಿ ಪದಾರ್ಥಗಳು ಅನಿತ್ಯಗಳು ಎಂಬುದಕೆ

ತರ್ಕಶಾಸ್ತ್ರರತಸ್ಸಾಕ್ಷಾದ್ಬ್ರಹ್ಮಾತೀಂದ್ರಿಯಮವ್ಯಯಮ್ ।
ಧರ್ಮಾಧರ್ಮೌ ಚ ತರ್ಕೇಣ ಕೇವಲೇನ ಮುನೀಶ್ವರಾಃ ॥೧೨॥

ಅಕ್ಲೇಶೇನ ಪರಿಜ್ಞಾತುಮಕರೋದ್ಯತ್ನಮುತ್ತಮಮ್ ।
ತರ್ಕೋಽ ನಾನಾವಿಧಸ್ತಸ್ಯ ಪ್ರತಿಭಾತೋ ಮುನೀಶ್ವರಾಃ ॥೧೩॥

ತೇನ ಮೋಹಾವೃತಸ್ಸದ್ಯಸ್ಸಂಗಿರೋ ಮುನಿಪುಂಗವಾಃ ।
ಚಕಾರ ದೀಕ್ಷಾಂ ಪಾಷಂಡಮಾರ್ಗೇ ಶ್ರದ್ಧಾಪುರಸ್ಸರಮ್ ॥೧೪॥

ಪುನಸ್ತರ್ಕಾಪ್ರತಿಷ್ಠಾನಾತ್ಸಂಗಿರೋಽತೀವ ಮೋಹಿತಃ ।
ಚಕಾರ ದೀಕ್ಷಾಂ ಪಾಷಂಡವಿಶೇಷೇಷು ಯಥಾರುಚಿ ॥೧೫॥

ಪುನಸ್ತರ್ಕಾಪ್ರತಿಷ್ಠಾನಾನ್ಮಾಯಯಾ ಪರಿಮೋಹಿತಃ ।
ತ್ಯಕ್ತ್ವಾ ಪಾಷಂಡಮಾರ್ಗಂ ಚ ಚಚಾರ ಚ ಯಥಾರುಚಿ ॥೧೬॥

ಅವನು ತರ್ಕಶಾಸ್ತ್ರದಲ್ಲಿ ಆಸಕ್ತನಾಗಿ, ನಾಶರಹಿತವಾದ ಸಾಕ್ಷಾದ್ಬ್ರಹ್ಮತತ್ವವನ್ನೂ, ಪುಣ್ಯಪಾಪಗಳನ್ನೂ, ವೇದದ ಸಹಾಯವಿಲ್ಲದೆ ಯುಕ್ತಿಯಿಂದಲೇ ಸುಲಭವಾಗಿ ತಿಳಿಯುತ್ತೇನೆಂದು ಬಹಳ ಯತ್ನಮಾಡುತ್ತಿದ್ದನು. ॥೧೨॥

ಎಲೈ ಋಷಿಶ್ರೇಷ್ಠರಿರಾ, ಹೀಗೆ ಪ್ರಯತ್ನಮಾಡುತ್ತಿರಲು ಅವನಿಗೆ ಅನುಭವವೂ ವಾದ ಪ್ರತಿವಾದಗಳೂ ಹೆಚ್ಚಿದ ಹಾಗೆಲ್ಲ ಅನೇಕ ವಿಧವಾದ ಯುಕ್ತಿಯು ತೋರುತ್ತಿತ್ತು. ॥೧೩॥

ಹೀಗೆ ತೋರುತ್ತಿರುವ ಯುಕ್ತಿಯಿಂದ ಅವನು ನಿಶ್ಚಯವನ್ನು ತಿಳಿಯಲಾರದೆ ಭ್ರಾಂತಿಗೊಂಡವನಾಗಿ ನಾಸ್ತಿಕಮತವಾದಗಳಲ್ಲಿಯೂ ಅಸಕ್ತಿಯುಳ್ಳವನಾಗಿ ಅದರಲ್ಲಿಯೇ ದೀಕ್ಷಿತನಾದನು. ॥೧೪॥

ಮತ್ತೆ ಸರಿಯಾಗಿ ನಿಲುಗಡೆಗೆ ಸೇರದ ಯುಕ್ತಿಯಿಂದಲೂ ನಿಶ್ಚಯವನ್ನು ಕಾಣದೆ ಭ್ರಾಂತನಾದ ಆ ಸಂಗಿರನು ಆ ನಾಸ್ತಿಕಮತದಲ್ಲಿರುವ ಭೇದಗಳಲ್ಲಿ ಒಂದಾದಮೇಲೆ ಇನ್ನೊಂದನ್ನು ಅವಲಂಬಿಸಲು ಪ್ರವೃತ್ತನಾದನು. ॥೧೫॥

ಮನುಷ್ಯಕೃತವಾದ ಊಹೆಯ ಮೇಲೆ ಮತ್ತೊಬ್ಬರಿಗೆ ಮತ್ತೊಂದು ವಿಧವಾಗಿ ತೋರುವ ಸರಿಯಾಗಿ ನಿಲ್ಲಲಾರದ ಯುಕ್ತಿಯಿಂದ ಸರಿಯಾದ ಮಾರ್ಗವನ್ನು ಕಾಣದೆ ಕಡೆಗೆ ತನ್ನ ಮನಸ್ಸಿಗೆ ತೋರಿದ ಹಾಗೆ ಆಚರಿಸುತ್ತಿದ್ದನು. ॥೧೬॥

ಪುನರ್ನೋಽಹಾವೃತಸ್ಸಾಕ್ಷಾತ್ ಸ್ವಸಾರಂ ಮಾತರಂ ತಥಾ ।
ಗತ್ವಾ ಮಮಾರ ಕಾಲೇನ ಸಂಗಿರಸ್ಸಹಸಾ ದ್ವಿಜಾಃ ॥೧೭॥

ಅತ್ಯುಗ್ರಾ ಅತಿಸನ್ನದ್ಧಾ ಯಮದೂತಾ ಭಯಂಕರಾಃ ।
ಸಂಗಿರಂ ತು ಸಮಾದಾಯ ಶೀಘ್ರಂ ವಿಪ್ರಾ ಯಮಂ ಯಯುಃ॥೧೮॥

ಯಮಸ್ತಂ ಸಂಗಿರಂ ಕ್ರುದ್ಧೋ ವಿಲೋಕ್ಯಾಹ ಭಯಂಕರಃ ।
ಯಥಾಶಕ್ತಿ ಭಟಾ ಏಷ ಪೀಡ್ಯತಾಂ ಮಮ ಸನ್ನಿಧೌ ॥೧೯॥

ಇತಿ ಪ್ರಾಹ ಯಮಸ್ಸೋಽಪಿ ಸಂಗಿರೋ ಯಮಕಿಂಕರೈಃ ।
ಅತೀವ ಪೀಡಿತೋ ವಿಪ್ರಾ ಅಭವಚ್ಚ ವಿಚೇಷ್ಟಿತಃ ॥೨೦॥

ಪುನಶ್ಚ ತೀಕ್ಷ್ಣಯಾ ವಾಚಾ ಯಮಃ ಪ್ರಾಹ ಸುದಾರುಣಮ್ ।
ಛಿದ್ಯತಾಂ ಸಂಗಿರೋ ದುಷ್ಟಃ ಭಿದ್ಯತಾಂ ದಹ್ಯತಾಮಯಮ್ ॥೨೧॥

ಹೀಗಿದ್ದ ಸಂಗಿರನು ಮತ್ತೆ ಮತ್ತೆ ಭ್ರಾಂತಿಯಿಂದ ದಿಕ್ಕುತೋಚದೆ ಅಗಮ್ಯಾಗಮನವೇ ಮೊದಲಾದ ನೀಚಕೃತ್ಯಗಳನ್ನೂ ಮಾಡಿ ಅನಂತರ ಕೆಲವು ಕಾಲದ ಮೇಲೆ ಆಸ್ತಿಕತೆ ಧರ್ಮಾಧರ್ಮಗಳನ್ನು ತಿಳಿಯಲಾರದೆ ಮರಣಹೊಂದಿದನು.॥೧೭॥

ಎಲೈ ಬ್ರಾಹ್ಮಣರಿರಾ, ಹೀಗಿರುವಾಗ ಕರುಣೆಯಿಲ್ಲದ, ಆಯುಧಧಾರಿಗಳಾದ, ನೋಡಿದವರಿಗೆ ಭಯವನ್ನುಂಟುಮಾಡುವ ಯಮದೂತರು ಆ ಸಂಗಿರನನ್ನು ಯಮನ ಹತ್ತಿರಕ್ಕೆ ಕರೆದುಕೊಂಡುಹೋದರು. ॥೧೮॥

ಭಯಂಕರನಾದ ಆ ಯಮನೂ ಕೂಡ ಆ ಸಂಗಿರನನ್ನು ನೋಡಿ ಬಹಳ ಕೋಪಗೊಂಡವನಾಗಿ ದೂತರನ್ನು ಕುರಿತು, ಎಲೈ ದೂತರೇ, ನನ್ನೆದುರಿಗೇ ಈ ಸಂಗಿರನನ್ನು ನಿಮ್ಮ ಕೈಲಾದ ಮಟ್ಟಿಗೂ ಹಿಂಸಿಸಿರಿ, ಎಂದು ಹೇಳಿದನು. ॥೧೯॥

ಎಲೈ ಬ್ರಾಹ್ಮಣರಿರಾ, ಈ ರೀತಿಯಾಗಿ ಯಮನು ತನ್ನ ದೂತರನ್ನು ಕುರಿತು ಹೇಳಲು, ಅವರೂ ಕೂಡ, ಪಾಪಿಯಾದ ಆ ಸಂಗಿರನನ್ನು ಬಹಳವಾಗಿ ಹಿಂಸೆಪಡಿಸಿದರು. ಆದರೂ ಅವನು ಸ್ವಲ್ಪವು ಅಲ್ಲಾಡದೆ ಸುಮ್ಮನೆ ಇದ್ದನು. ॥೨೦॥

ಹೀಗೆ ಸುಮ್ಮನೆ ಇರುವುದನ್ನು ನೋಡಿ ಆ ಯಮನು ಆ ದೂತರನ್ನು ಕುರಿತು ದುಷ್ಟನಾದ ಸಂಗಿರನನ್ನು ಸೀಳಿರಿ, ಪುನಃ ಕತ್ತರಿಸಿರಿ, ಸುಡಿರಿ, ಕಬ್ಬಿನ

ಇಕ್ಷುಯಂತ್ರಾದಿಷು ಹ್ಯೇಷಃ ಪೀಡ್ಯತಾಮನಿಶಂ ಭಟಾಃ ।
ಅನ್ಯೈರ್ನಾನಾವಿಧೈಃ ಕ್ರೂರೈರುಪಾಯೈಃ ಪೀಡ್ಯತಾಮಿತಿ ॥೨೨॥

ಸಂಗಿರೋ ಯಮದೂತೈಶ್ಚ ಕ್ರಮೇಣ ನರಕಾರ್ಣವೇ ।
ಯಂತ್ರೈಃ ನಾನಾವಿಧೈರನ್ಯೈರುಪಾಯೈರತಿದಾರುಣೈಃ ॥೨೩॥

ಅತೀವ ಪೀಡಿತೋ ವಿಪ್ರಾ ಅಭವತ್ಕೋಟಿವತ್ಸರಮ್ ।
ಪುರಾ ಕೃತಮಹಾಪುಣ್ಯಪರಿಪಾಕಬಲೇನ ಚ ॥೨೪॥

ಪ್ರಸಾದಾದೇವ ರುದ್ರಸ್ಯ ಶಿವಸ್ಯ ಪರಮಾತ್ಮನಃ ।
ಅಕಸ್ಮಾದಾಗತಸ್ತತ್ರ ಮಹಾತೇಜಾ ಮಹಾಮತಿಃ ॥೨೫॥

ಶಂಭುಭಕ್ತಶ್ಶತಾನಂದೋ ನಾಮ್ನಾ ಶಂಭುರಿವಾಪರಃ ।
ಸ ಪುನಃ ಪೀಡ್ಯಮಾನಂ ತಂ ವಿಲೋಕ್ಯ ಕರುಣಾಬಲಾತ್ ॥೨೬॥
ಪ್ರಾಹೋನ್ನಮಶ್ಶಿವಾಯೇತಿ ಮಂತ್ರರಾಜಂ ಷಡಕ್ಷರಮ್ ।

ಗಾಣಕ್ಕೆ ಇವನನ್ನು ಕೊಟ್ಟು ಹಿಂಡಿಸಿರಿ. ಇನ್ನೂ ಬೇರೆ ಬೇರೆ ಕ್ರೂರವಾದ ಉಪಾಯಗಳಿಂದ ಇವನನ್ನು ಬಿಡದೆ ಹಿಂಸಿಸಿರಿ. ಎಂದು ಕಟ್ಟಪ್ಪಣೆಮಾಡಿದನು. ||೨೧-೨೨||

ಆ ಸಂಗಿರನು ಯಮದೂತರಿಂದ ಆ ನರಕಸಮುದ್ರದಲ್ಲಿ ಒಂದರಮೇಲೊಂದ ರಂತೆ ಯಂತ್ರದಿಂದ ಉಂಟಾದ, ಇನ್ನೂ ಅನೇಕ ಕ್ರೂರವಾದ ಹಿಂಸೆಗಳನ್ನು ಅನುಭವಿಸುತ್ತಾ ಕೋಟಿವರ್ಷಗಳವರೆಗೆ ದುಃಖಿಸುತ್ತಿದ್ದನು. ||೨೩||

ಹೀಗೆ ಆ ಸಂಗಿರನು ಯಮಲೋಕದಲ್ಲಿ ದುಃಖವನ್ನನುಭವಿಸುತ್ತಿರಲು, ಇವನು ಜನ್ಮಾಂತರದಲ್ಲಿ ಮಾಡಿದ್ದ ಬಹಳವಾದ ಪುಣ್ಯದ ಬಲದಿಂದಲೂ, ಈಶ್ವರನ ಅನುಗ್ರಹದಿಂದಲೂ ಅಕಸ್ಮಾತ್ತಾಗಿ ಅಲ್ಲಿಗೆ ಮಹಾ ತೇಜಸ್ವಿಗಳೂ ಬಹಳ ಬುದ್ಧಿವಂತರೂ ಆದ ಸಾಕ್ಷಾತ್ ಈಶ್ವರನ ಭಕ್ತರಾದ, ಎರಡನೆಯ ಈಶ್ವರನಂತೆ ಇರುವ ಶತಾನಂದರು ಬಂದರು. ||೨೪-೨೫||

ಬಂದ ಆ ಶತಾನಂದರು ದುಃಖವನ್ನನುಭವಿಸುತ್ತಿರುವ ಸಂಗಿರನನ್ನು ನೋಡಿ ಕರುಣೆಯಿಂದ, ಮಂತ್ರಗಳಲ್ಲಿ ಶ್ರೇಷ್ಠವಾದ ಷಡಕ್ಷರೀಮಂತ್ರವನ್ನು ಉಚ್ಚರಿಸಿದರು. ||೨೬||

ತದೈವ ನರಕಸ್ಸಾಕ್ಷಾತ್ಸ್ವರ್ಗಲೋಕೋಽಭವತ್ತದಾ ॥೨೭॥

ಪುಷ್ಪವೃಷ್ಟಿರಭವತ್ಸುಮಂಗಳಾ
ಸಿದ್ಧಯಕ್ಷಮುನಯಸ್ಸನಾತನಾಃ ।
ತತ್ರ ನೃತ್ತಮತಿಶೋಭನಂ ಮುದಾ
ಚಕ್ರುರಗ್ನಿವಿಮಲಾ ವಿಚಕ್ಷಣಾಃ ॥೨೮॥

ನೃತ್ತಗೀತಮುಖರಾ ಅಪಿ ದ್ವಿಜಾಃ
ಅಪ್ಸರೋಭಿರತಿಶೋಭನಾಸ್ಸಹ ।
ಯಕ್ಷಕಿನ್ನರಪುರಸ್ಸರಾ ಭೃಶಂ
ನೃತ್ತಗೀತಸುಖಭೋಗಿನೋಽಭವನ್ ॥೨೯॥

ದೇವೈರಶೇಷೈರಮರಾಧಿಪಃ ಸ್ವಯಂ
ಸಹ ಪ್ರಮೋದೇನ ನನರ್ತ ಶೋಭನಮ್ ।
ಪ್ರಜಾಪತಿಶ್ಚಾಪಿ ನನರ್ತ ಭಾರ್ಯಯಾ
ಶ್ರಿಯಾ ಚ ವಿಷ್ಣುಸ್ಸಹ ಮೋದಸಂಯುತಃ ॥೩೦॥

ಆ ಮಂತ್ರವನ್ನುಚ್ಚರಿಸಿದ ಒಡನೆಯೇ ಆ ಕ್ರೂರವಾದ ನರಕವೂ ಸಾಕ್ಷಾತ್ಸ್ವರ್ಗವೇ ಆಯಿತು! ಉಪಾಸನೆಯಲ್ಲಿ ಸಿದ್ಧಿಯಾಗಿದ್ದುದರ ಫಲವಿದು. ॥೨೭॥

ಅಲ್ಲದೆ ಆ ಷಡಕ್ಷರೀಮಹಿಮೆಯಿಂದ ಮಂಗಳಕರವಾದ ಹೂವಿನ ಮಳೆಯುಂಟಾಯಿತು. ಅಗ್ನಿಸೇವೆಯಿಂದ ಪರಿಶುದ್ಧರಾದ, ವಿದ್ವಾಂಸರಾದ ಋಷಿಗಳೂ, ಸಿದ್ಧರೂ, ಯಕ್ಷರೂ ಇವರೆಲ್ಲರೂ ಸಂತೋಷಾತಿಶಯದಿಂದ ಮನೋಹರವಾದ ನರ್ತನವನ್ನು ಮಾಡಿದರು. ॥೨೮॥

ಎಲೈ ಬ್ರಾಹ್ಮಣರಿರಾ, ಯಕ್ಷರು ಕಿನ್ನರರು ಮೊದಲಾದವರು ಸ್ವಭಾವದಿಂದಲೇ ನೃತ್ತಗಾನಗಳಲ್ಲಿ ಆಸಕ್ತರಾದಾಗ್ಯೂ ಪುನಃ ಈಗ ಅಪ್ಸರಸ್ತ್ರೀಯರಿಂದ ಕೂಡಿ, ಬಹಳ ಸಂತೋಷದಿಂದ ನೃತ್ತಗಾನ ಇವುಗಳಿಂದುಂಟಾದ ಸುಖವನ್ನನುಭವಿಸಿದರು. ॥೨೯॥

ಎಲ್ಲಾ ದೇವತೆಗಳಿಂದ ಕೂಡಿ ಇಂದ್ರನೂ ಸಂತೋಷದಿಂದ ನರ್ತನಮಾಡಿದನು. ಬ್ರಹ್ಮನು ಸರಸ್ವತಿಯಿಂದಲೂ, ವಿಷ್ಣುವು ಲಕ್ಷ್ಮಿಯಿಂದಲೂ ಕೂಡಿ ಸಂತೋಷದಿಂದ ನರ್ತನಮಾಡಿದರು. ॥೩೦॥

ಯಮೋಽತಿಭೀತಃ ಪರಮೇಶ್ವರಾಜ್ಞಯಾ
ಪ್ರವರ್ತಮಾನಶ್ಚ ಕೃತಾಂಜಲಿರ್ದ್ವಿಜಾಃ ।
ಸಹ ಸ್ವಕೀಯೈರಪಿ ಕಂಪಿತಃ ಸ್ವಯಂ
ಬಹುಪ್ರಣಾಮಂ ಶಿವಶಂಕಯಾಽಕರೋತ್ ॥೩೧॥

ಯಮಂ ಶತಾನಂದ ಸಮಾಹ್ವಯೋ ಮುನಿಃ
ವಿಲೋಕ್ಯ ಭೀತಂ ಕೃಪಯೈವ ಕೇವಲಮ್ ।
ವಿಮುಂಚ ಭೀತಿಂ ಯಮ ಶಂಕರಾಜ್ಞಯಾ
ಪ್ರವರ್ತಮಾನೇತಿ ವಚಸ್ಸುಖಾವಹಮ್ ॥೩೨॥

ಅಬ್ರವೀದಿತಿ ಶುಭಪ್ರತಿಭಾವಹಃ
ಶುದ್ಧಬೋಧಸುಖವಸ್ತುನಿ ಸ್ಥಿತಃ ।
ತದ್ವಚಃ ಶ್ರವಣಭಗ್ನಸಂಶಯೋ
ನಿರ್ಭಯಶ್ಚ ತರಸಾಽಭವದ್ಯಮಃ ॥೩೩॥

ಎಲೈ ಬ್ರಾಹ್ಮಣರೇ, ಆಗ ಯಮನೂ ಕೂಡ ಆ ಪರಮೇಶ್ವರನ ಅಪ್ಪಣೆಯಂತೆ ಸಕಲವನ್ನೂ ನಡೆಸುವವನಾಗಿದ್ದರೂ ಭಯದಿಂದ ಕೈಮುಗಿದು ತನ್ನ ಕಡೆಯವರಿಂದ ಕೂಡಿ ಸಾಕ್ಷಾತ್ ಶಿವನ ಅನುಗ್ರಹದ ಫಲವು ಇದು. ಎಂಬ ಭಯದಿಂದ ಶಿವನಿಗೆ ಅನೇಕ ನಮಸ್ಕಾರಗಳನ್ನು ಮಾಡಿ ಮುಂದಾಲೋಚನೆ ಇಲ್ಲದಿದ್ದ ಭಯದಿಂದ ನಡುಗುತ್ತ ನಿಂತಿದ್ದನು. ||೩೧||

ಶತಾನಂದರು ಭಯದಿಂದ ನಡುಗುತ್ತಿರುವ ಯಮನನ್ನು ನೋಡಿ ಕರುಣೆಯಿಂದ "ಎಲೈ ಯಮನೇ, ಭಯವನ್ನು ಬಿಡು, ಆ ಶಂಕರನಿಗೆ ವಿಧೇಯನಾಗಿ ಅವನ ಅಪ್ಪಣೆಯಂತೆ ನೀನು ನಡೆಯುವವನಾದ್ದರಿಂದ, ಎಂದರೆ ಅಧರ್ಮವನ್ನು ಆಚರಿಸಿದವರನ್ನು ನಿಗ್ರಹಿಸುತ್ತಲೂ, ಧರ್ಮಾಚರಣೆಯನ್ನು ಮಾಡಿದವರನ್ನು ಅನುಗ್ರಹಿಸುತ್ತಲೂ, ದುಷ್ಟರಿಗೆ ಯಮಸ್ವರೂಪನಾಗಿಯೂ, ಸಜ್ಜನರಿಗೆ ಧರ್ಮಸ್ವರೂಪನಾಗಿಯೂ, ನಿನ್ನ ಅಧಿಕಾರಧರ್ಮವನ್ನು ನೆರವೇರಿಸುತ್ತಿರುವುದರಿಂದ, ಧರ್ಮವೇ ದೇವಸ್ವರೂಪವಾದುದರಿಂದ, ನಿನಗೆ ಯಾವ ಭಯವೂ ಇಲ್ಲ ಎಂದು ಹಿತಕರವಾದ ಮಾತನ್ನು ಹೇಳಿದರು. ||೩೨||

ಅಜ್ಞಾನವನ್ನು ನಾಶಮಾಡುವುದರಲ್ಲಿ ಸಮರ್ಥರಾದ, ಪರಿಶುದ್ಧವಾದ ಜ್ಞಾನಸ್ವರೂಪವಾದ ಆತ್ಮವಸ್ತುವಿನ ಧ್ಯಾನದಲ್ಲಿರುವ (ಜ್ಞಾನಿಗಳಾದ) ಶತಾನಂದರು ಹೀಗೆ

ಪುನಶ್ಶತಾನಂದ ಸಮಾಹ್ವಯೋ ಮುನಿಃ
ಯಮಂ ಸಮಾಹೂಯ ಸಮಸ್ತಸನ್ನಿಧೌ ।
ಇದಂ ಬಭಾಷೇ ವಚನಂ ಸುಖಾವಹಂ
ಸಮಸ್ತಲೋಕಸ್ಯ ಮುನೀಶ್ವರೇಶ್ವರಃ ॥೩೪॥

ವಿಷ್ಣುಪ್ರಜಾಪತೀಂದ್ರಾದಿ ದೇವತಾಭ್ಯೋ ಮಹೇಶ್ವರಮ್ ।
ವಿಶಿಷ್ಟಂ ಯೋ ವಿಜಾನಾತಿ ತಂ ತ್ವಂ ಪರಿಹರ ಪ್ರಭುಮ್ ॥೩೫॥

ಶಿವರುದ್ರಾದಿ ಶಬ್ದಂ ಯೋ ವಿಶಿಷ್ಟಂ ವೇದ ಮಾನವಃ ।
ನಾರಾಯಣಾದಿ ಶಬ್ದೇಭ್ಯಃ ತಂ ತ್ವಂ ಪರಿಹರ ಪ್ರಭುಮ್ ॥೩೬॥

ಉಮಯಾ ಸಹಿತಾಂ ಶುದ್ಧಾಂ ತ್ರಿಣೇತ್ರಾಂ ಚಂದ್ರಶೇಖರಾಮ್ ।
ಪರಸ್ಯ ಮೂರ್ತಿಂ ಯೋ ವೇದ ತಂ ತ್ವಂ ಪರಿಹರ ಪ್ರಭುಮ್ ॥೩೭॥

ಹೇಳಿದ ಮಾತನ್ನು ಕೇಳಿ, ಅದರಿಂದ ಯಮನು ಆ ಕ್ಷಣದಲ್ಲಿಯೇ ತನ್ನ ಮನಸ್ಸಿನಲ್ಲಿದ್ದ ಸಂದೇಹಗಳನ್ನೆಲ್ಲವನ್ನೂ ಬಿಟ್ಟು ಭಯವಿಲ್ಲದವನಾದನು. ॥೩೩॥

ಋಷಿಗಳಲ್ಲೆಲ್ಲರಿಗಿಂತ ಶ್ರೇಷ್ಠರಾದ ಶತಾನಂದರು ಮತ್ತೆ ಆ ಯಮನನ್ನು ಕರೆದು ಆ ಎಲ್ಲರ ಎದುರಿನಲ್ಲಿ, ಸಮಸ್ತಲೋಕಕ್ಕೂ ಸುಖವನ್ನುಂಟುಮಾಡುವ ಈ ಮಾತನ್ನು ಮುಂದೆ ಹೇಳುವ ರೀತಿಯಲ್ಲಿ ಹೇಳಿದರು. ॥೩೪॥

ವಿಷ್ಣು ಬ್ರಹ್ಮ ಇಂದ್ರನೇ ಮೊದಲಾದ ದೇವತೆಗಳಿಗಿಂತಲೂ ಯಾರು ಪರಮೇಶ್ವರನ್ನು ಅಧಿಕನನ್ನಾಗಿ ತಿಳಿಯುತ್ತಾರೆಯೋ ಅಂಥ ವಿವೇಚನೆಯಲ್ಲಿ ಸಮರ್ಥರಾದವರನ್ನು ಓ ಯಮನೇ, ನೀನು ಹಿಂಸಿಸದೆ ಬಿಟ್ಟುಬಿಡು. ॥೩೫॥

ಯಾರು ನಾರಾಯಣ ಮೊದಲಾದ ಶಬ್ದಗಳಿಗಿಂತಲೂ, ಶಿವ, ರುದ್ರ ಎಂಬ ಶಬ್ದಗಳನ್ನು ಮೇಲಿನ ತತ್ವವನ್ನು ಬೋಧಿಸುತ್ತಿರುವುದರಿಂದ ಅಧಿಕವೆಂದು ತಿಳಿಯುತ್ತಾರೋ, ಅವರನ್ನು ಓ ಯಮನೇ, ನೀನು ತೊಂದರೆಪಡಿಸದೆ ಬಿಡು. ॥೩೬॥

ಯಾರು ಪಾರ್ವತಿಯಿಂದ ಕೂಡಿದ, ಪರಿಶುದ್ಧವಾದ, ಮೂರು ಕಣ್ಣುಗಳುಳ್ಳ, ತಲೆಯಲ್ಲಿ ಚಂದ್ರನನ್ನು ಧರಿಸಿರುವ ಆ ಈಶ್ವರನ ವ್ಯಾವಹಾರಿಕವಾದ ಆಕಾರವನ್ನು ಪರಮಾತ್ಮಸ್ವರೂಪವನ್ನಾಗಿ ತಿಳಿಯುತ್ತಾರೆಯೋ, ಅಂಥ ಸಮರ್ಥರನ್ನೂ ನೀನು ಬಿಟ್ಟುಬಿಡು. ಈ ಪ್ರಸಂಗದಲ್ಲಿ ಜ್ಞಾನಿಯನ್ನು ಪ್ರಭುವೆಂದು ವರ್ಣಿಸಿರುವುದು

ಸಮಸ್ತಜಗತೋ ಮೂಲಂ ಸಮಸ್ತಸ್ಯಾವಭಾಸಕಮ್ ।
ಯೋ ವೇದಾತ್ಮತಯಾ ನಿತ್ಯಂ ತಂ ತ್ವಂ ಪರಿಹರ ಪ್ರಭುಮ್ ॥೩೮॥

ತ್ರಿಪುಂಡ್ರಂ ಭಸ್ಮನಾ ಸ್ಕಂಧೇ ಲಲಾಟೇ ಚ ತಥಾ ಹೃದಿ ।
ಯೋ ದಧಾತಿ ಮಹಾಪ್ರೀತ್ಯಾ ತಂ ತ್ವಂ ಪರಿಹರ ಪ್ರಭುಮ್ ॥೩೯॥

ಅಗ್ನಿರಿತ್ಯಾದಿಭಿರ್ಮಂತ್ರೈರ್ಭಸ್ಮನೈವಾವಗುಂಠನಮ್ ।
ಯಃ ಕರೋತಿ ಸ್ವಕಂ ದೇಹಂ ತಂ ತ್ವಂ ಪರಿಹರ ಪ್ರಭುಮ್ ॥೪೦॥

ನಿತ್ಯಲಿಂಗೇ ಮಹಾದೇವಂ ಸಾಕ್ಷಾತ್ಸಂಸಾರಮೋಚಕಮ್ ।
ಆರಾಧಯತಿ ಯೋ ಮರ್ತ್ಯಃ ತಂ ತ್ವಂ ಪರಿಹರ ಪ್ರಭುಮ್ ॥೪೧॥

ಉಚಿತವಾಗಿದೆ. ಏಕೆಂದರೆ, ಎಲ್ಲಕ್ಕಿಂತಲೂ ಮಿಗಿಲಾಗಿರುವ ಶಿವಶಕ್ತಿತತ್ವಗಳ ಸ್ವರೂಪವನ್ನೂ, ಅಭೇದವನ್ನೂ, ಯಾರು ಉಪಾಸನೆಯಿಂದ ತಿಳಿದಿರುತ್ತಾರೋ, ಅಂಥವರು ಮಾಯೆಯನ್ನು ಜಯಿಸಿರುತ್ತಾರಾದುದರಿಂದ, ಪ್ರಭುಗಳು ಎಂದರೆ ಸಮರ್ಥರು ಎನ್ನುವುದು ಅನ್ವರ್ಥವಾಗಿದೆ. ಅಲ್ಲದೆ ಅವರು ಇತರರಿಗೂ ಮೇಲು ಪಂಙ್ತಿಯಾಗಿರುತ್ತಾ ಉಪಕಾರಕರಾಗಿಯೂ ಇರುತ್ತಾರೆ. ಅಂಥವರು ತಾವು ಉತ್ತೀರ್ಣರಾಗಿರುವುದು ಮಾತ್ರವಲ್ಲದೆ ಇತರರಿಗೂ ತಾರಕರಾಗಿರುತ್ತಾರೆ. ಎಂದು ಭಾವವು. ||೩೭||

ಮೇಲೆ ಹೇಳಿದ ಪರಶಿವನ ಸರ್ವಜ್ಞವೂ, ಸರ್ವಶಕ್ತವೂ ಆಗಿರುವ ಸಗುಣ ಸಾಕಾರವಾದ ಮೂರ್ತಿಯೇ ಪ್ರಪಂಚಕ್ಕೆಲ್ಲಕ್ಕೂ ಕಾರಣವೆಂದೂ, ಸಮಸ್ತ ಪದಾರ್ಥ ಗಳನ್ನು ಪ್ರಕಾಶಗೊಳಿಸುವುದು ಎಂದೂ, ಆತ್ಮಸ್ವರೂಪವಾದುದರಿಂದ ನಿತ್ಯವಾದುದು ಎಂದೂ, ಯಾರು ಯಾವಾಗಲೂ ತಿಳಿಯುತ್ತಾರೆಯೋ, ಅಂಥ ಮಹಾತ್ಮರನ್ನು ಓ ಯಮನೇ, ನೀನು ಹಿಂಸಿಸದೆ ಬಿಟುಬಿಡು. ||೩೮||

ಯಾರು ಭುಜಗಳಲ್ಲಿಯೂ ಹಣೆಯಲ್ಲಿಯೂ ಹೃದಯದಲ್ಲಿಯೂ ಪ್ರೀತಿಯಿಂದ ಭಸ್ಮವನ್ನು ಮೂರು ಗೆರೆಗಳಾಗಿ ಧರಿಸುತ್ತಾರೆಯೋ, ಮತ್ತು "ಅಗ್ನಿರಿತಿಭಸ್ಮ" ಇತ್ಯಾದಿ ಮಂತ್ರಗಳಿಂದ ಭಸ್ಮದಿಂದ ತಮ್ಮ ಶರೀರವನ್ನು ಲೇಪಮಾಡಿಕೊಳ್ಳುತ್ತಾ ರೆಯೋ, ಅವರನ್ನೂ ನೀನು ತೊಂದರೆಪಡಿಸಬೇಡ. ||೩೯-೪೦||

ಈಶ್ವರಲಿಂಗದಲ್ಲಿ ಯಾರು ಮಹಾದೇವನನ್ನು, ನಿತ್ಯನನ್ನಾಗಿಯೂ ಸಂಸಾರ ದಿಂದ ಬಿಡುಗಡೆಮಾಡತಕ್ಕವನನ್ನಾಗಿಯೂ ಭಾವಿಸಿ ಪೂಜೆಮಾಡುತ್ತಾರೋ, ಮತ್ತು

ರುದ್ರಾಕ್ಷಂ ತ್ರೀಣಿ ಷಟ್ಚೈಕಂ ಪರಯಾ ಶುದ್ಧಯಾ ಸಹ ।
ದಧಾತಿ ನಿತ್ಯಂ ಯೋ ಮರ್ತ್ಯಃ ತಂ ತ್ವಂ ಪರಿಹರ ಪ್ರಭುಮ್ ॥೪೨॥

ಶಾಂತಿದಾಂತ್ಯಾದಿ ಸಂಯುಕ್ತಶ್ಶಂಕರೇ ಭಕ್ತಿಸಂಯುತಃ ।
ಯಃ ಸರ್ವಕರ್ಮಸಂನ್ಯಾಸೀ ತಂ ತ್ವಂ ಪರಿಹರ ಪ್ರಭುಮ್ ॥೪೩॥

ವೇದಾನ್ತಶ್ರವಣಾನ್ನಿತ್ಯಂ ಮನನಂ ಚಿನ್ತನಂ ತಥಾ ।
ಯಃ ಕರೋತಿ ಮಹಾಪ್ರೀತ್ಯಾ ತಂ ತ್ವಂ ಪರಿಹರ ಪ್ರಭುಮ್ ॥೪೪॥

ವೇದವೇದಾನ್ತನಿಷ್ಠಸ್ಯ ಗುರೋಶ್ಶುಶ್ರೂಷಣೇ ರತಃ ।
ಯಶ್ಶೃಣೋತಿ ಹಿ ವೇದಾನ್ತಂ ತಂ ತ್ವಂ ಪರಿಹರ ಪ್ರಭುಮ್ ॥೪೫॥

ಯಜ್ಞದಾನತಪೋಹೋಮಸ್ವಾಧ್ಯಾಯಾಧ್ಯಯನಾದಿಭಿಃ ।
ಯೋ ರುದ್ರಂ ಯಜತೇ ಪ್ರೀತ್ಯಾ ತಂ ತ್ವಂ ಪರಿಹರ ಪ್ರಭುಮ್ ॥೪೬॥

ಶ್ರೌತಸ್ಮಾರ್ತಸದಾಚಾರೈರನ್ಯೈರಪಿ ಶಿವಾರ್ಚನಮ್ ।
ಯಃ ಕರೋತಿ ಮಹಾಪ್ರೀತ್ಯಾ ತಂ ತ್ವಂ ಪರಿಹರ ಪ್ರಭುಮ್ ॥೪೭॥

ಒಂದು ಮೂರು ಅಥವಾ ಆರು (ಒಟ್ಟು ಹತ್ತು) ರುದ್ರಾಕ್ಷಿಗಳನ್ನು ಯಾರು ಪರಿಶುದ್ಧರಾಗಿ ಪ್ರತಿದಿನವೂ ಧರಿಸುತ್ತಾರೋ, ಯಾರು ಅಂತರಿಂದ್ರಿಯ ಬಹಿರಿಂದ್ರಿಯನಿಗ್ರಹಗಳನ್ನು ಮಾಡಿ ಈಶ್ವರನಲ್ಲಿ ಮಿಗಿಲಾದ ಮತ್ತು ಅನನ್ಯವೂ ಏಕಾಂತವೂ ಆದ ಭಕ್ತಿಯಿಂದ ಕೂಡಿದವರಾಗಿ ಎಲ್ಲಾ ಕರ್ಮಗಳ ಫಲಗಳಲ್ಲೂ ಆಶೆಯನ್ನೂ ಬಿಟ್ಟಿರುತ್ತಾರೋ, ಅಂಥ ಮಹಾತ್ಮರನ್ನು ಓ ಯಮಧರ್ಮನೇ, ನೀನು ತೊಂದರೆಪಡಿಸದೆ ಬಿಡು. ಧರ್ಮಾಚರಣೆಯಿಂದ ಯಮನ ಆತಂಕವು ತಪ್ಪುತ್ತದೆ. ಎಂದು ಭಾವವು. ||೪೧-೪೨-೪೩||

ಯಾರು ವೇದಾಂತವಿಚಾರವನ್ನು ಕೇಳಿ ಪ್ರತಿದಿನವೂ ಆ ತತ್ವವನ್ನೇ ಮನನಮಾಡುತ್ತಲೂ ಯಾವಾಗಲೂ ಅದನ್ನೇ ಚಿಂತಿಸುತ್ತಲೂ ಇರುತ್ತಾರೋ, ಮತ್ತು ವೇದಗಳಲ್ಲೂ, ವಿಶೇಷವಾಗಿ ಉಪನಿಷತ್ತುಗಳೆಂಬ ವೇದಾಂತಗಳಲ್ಲೂ, ವಿವರಿಸಿರುವ ಶಿವಶಕ್ತ್ಯಭೇದ, ಬ್ರಹ್ಮಾತ್ಮೈಕ್ಯವೆಂಬ ಪರತತ್ವವನ್ನು ಗುರೂಪದೇಶ, ಶ್ರವಣ, ಮನನ, ನಿದಿಧ್ಯಾಸನಗಳಿಂದ ಸಾಕ್ಷಾತ್ಕರಿಸಿಕೊಂಡು ಬ್ರಹ್ಮಜ್ಞಾನಿಗಳಾದಂಥ ಗುರುಗಳ ಸೇವೆಮಾಡುತ್ತಾ ಅವರಿಂದ ವೇದಾಂತವನ್ನು ಕೇಳುತ್ತಿರುತ್ತಾರೋ, ಯಜ್ಞಮಾಡುವುದು, ದಾನಮಾಡುವುದು, ತಪಸ್ಸನ್ನಾಚರಿಸುವುದು, ಹೋಮ

ಉತ್ಕರ್ಷಂ ಸರ್ವದೇವೇಭ್ಯಶ್ಶಿವಸ್ಯ ಪರಮಾತ್ಮನಃ ।
ಯೋ ನ ವಕ್ತಿ ಸದಾ ಪ್ರೀತ್ಯಾ ತಂ ತ್ವಂ ಘಾತಯ ದುರ್ಜನಮ್ ॥೪೮॥

ಮಹಾದೇವಸಮಂ ವಿಷ್ಣುಂ ಬ್ರಹ್ಮಾಣಂ ಚಾನ್ಯಮೇವ ಚ ।
ಮನ್ಯತೇ ಯಸ್ಸ್ವಮೋಹೇನ ತಂ ತ್ವಂ ಘಾತಯ ದುರ್ಜನಮ್ ॥೪೯॥

ಶ್ರೌತಸ್ಮಾರ್ತಸದಾಚಾರಾನ್ ಶ್ರದ್ಧಯೈವ ದಿನೇದಿನೇ ।
ಯೋ ನಾಚರತಿ ಮೋಹೇನ ತಂ ತ್ವಂ ಘಾತಯ ದುರ್ಜನಮ್ ॥೫೦॥

ಮಾಡುವುದು, ವೇದಾಧ್ಯಯನಮಾಡುವುದು, ಇವುಗಳಿಂದ ರುದ್ರನ ಸೇವೆಯನ್ನು ಮಾಡುತ್ತಾರೋ, ಶ್ರುತಿಸ್ಮೃತಿಗಳಲ್ಲಿ ಹೇಳಿರುವ ರೀತಿಯಿಂದಲೂ, ಇತರವಾದ ರೀತಿಗಳಿಂದಲೂ ಯಾರು ಹೆಚ್ಚಾದ ಪ್ರೀತಿಯಿಂದ ಈಶ್ವರನನ್ನು ಪೂಜೆಮಾಡುತ್ತಾರೋ, ಅಂಥ ಮಹಾತ್ಮರನ್ನೂ ಓ ಯಮನೇ, ನೀನು ಹಿಂಸಿಸದೆ ಬಿಟ್ಟುಬಿಡು. (ಎಂದರೆ ಮೇಲೆ ಹೇಳಿದ ರೀತಿಗಳಲ್ಲಿ ಯಾರು ಆಸಕ್ತರಾಗಿರುತ್ತಾರೊ ಅವರಿಗೆ ಯಮಲೋಕದಲ್ಲುಂಟಾಗುವ ತೊಂದರೆಗಳೊಂದೂ ಆಗುವುದಿಲ್ಲ. ಎಂದು ತಾತ್ಪರ್ಯ.) "ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾಽನಾಶಕೇನ." ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ೪.೪.೨೨ರಲ್ಲಿ ಈ ವಿಷಯವನ್ನು ವಿವರಿಸಿದೆ. ||೪೪-೪೫-೪೬-೪೭||

ಯಾರು ದ್ವೇಷದಿಂದ ಶಿವಪರಮಾತ್ಮನಿಗೆ ಸರ್ವದೇವತೆಗಳಿಗಿಂತಲೂ ಉತ್ಕರ್ಷವನ್ನು ಹೇಳುವುದಿಲ್ಲವೋ, ಅಜ್ಞಾನದಿಂದ ಯಾರು ಮಹಾದೇವನನ್ನು ವಿಷ್ಣುವಿಗಾಗಲಿ ಬ್ರಹ್ಮನಿಗಾಗಲಿ ಇತರ ಯಾವ ದೇವತೆಗಳಿಗಾಗಲಿ ಸಮನಾದವನು ಎಂದು ಹೇಳುತ್ತಾರೋ, ಅಂಥ ದುಷ್ಟರನ್ನು ನೀನು ಹಿಂಸೆಮಾಡಿ ಕೊಲ್ಲುವವನಾಗು.

ಇಂತಹ ಪ್ರಸಂಗಗಳಲ್ಲಿ ವಿಷ್ಣು ಮುಂತಾದ ಇತರ ದೇವತೆಗಳ ನಿಂದೆಯಲ್ಲಾಗಲಿ ಆ ದೇವತಾಭಕ್ತರ ಶಿಕ್ಷೆಯಲ್ಲಾಗಲಿ ತಾತ್ಪರ್ಯವಿಲ್ಲವು. ಪರಬ್ರಹ್ಮತತ್ತ್ವದ ವಿಶ್ವವಿಶಾಲವಾದ ದೃಷ್ಟಿಯಲ್ಲಿ ಎಲ್ಲ ದೇವತೆಗಳಿಗೂ ತಕ್ಕ ಸ್ಥಾನಮಾನಗಳಿವೆ. ಎಲ್ಲ ದೇವತಾಭಕ್ತರಿಗೂ ಶ್ರೇಯಸ್ಸಿನ ಮಾರ್ಗಗಳು ಯಾವಾಗಲೂ ಸಿದ್ಧವಾಗಿ ತೆರೆದಿರುತ್ತವೆ. ಎಂಬುದನ್ನು ಮರೆಯಬಾರದು. " ನ ಹಿ ನಿಂದಾ ನಿಂದ್ಯಂ ನಿಂದಿತುಂ ಪ್ರವೃತ್ತಾ ಅಪಿತು ಸ್ತುತ್ಯಂ ಸ್ತೋತುಂ" ಎಂಬ ನ್ಯಾಯದಂತೆ ತಿಳಿಯಬೇಕು.||೪೮-೪೯||

ಯಾವನು ಶ್ರುತಿಸ್ಮೃತ್ಯುಕ್ತವಾದ ಕರ್ಮಗಳನ್ನು ಉತ್ತಮವಾದ ಆಚಾರ

ಊರ್ಧ್ವಪುಂಡ್ರಂ ತ್ರಿಶೂಲಂ ವಾ ವರ್ತುಲಂ ಯಸ್ತು ವೈದಿಕಃ ।
ದಧಾತಿ ಮೋಹತೋ ವಾಪಿ ತಂ ತ್ವಂ ಘಾತಯ ದುರ್ಜನಮ್ ॥೫೧॥

ಅಶ್ರೌತಾಚಾರಸಂಪನ್ನಶ್ಶ್ರೌತಾಚಾರಪರಾಙ್ಮುಖಃ ।
ಗುರುದ್ರೋಹೀ ಚ ಯೋ ಮರ್ತ್ಯಃ ತಂ ತ್ವಂ ಘಾತಯ ದುರ್ಜನಮ್॥೫೨॥

ಉತ್ಕರ್ಷಂ ವೇದಮಾರ್ಗಸ್ಯ ಯೋ ನ ಜಾನಾತಿ ಮಾನವಃ ।
ವೇದಾದನ್ಯಸ್ಯ ಚೋತ್ಕರ್ಷಂ ತಂ ತ್ವಂ ಘಾತಯ ದುರ್ಜನಮ್ ॥೫೩॥

ಮಾನುಷಂ ದೈವತಂ ವಾನ್ಯತ್ ಶರೀರೇ ಚಾಂಕನಂ ನರಃ ।
ಯಃ ಕರೋತಿ ಭ್ರಮಾದ್ವಾಽಪಿ ತಂ ತ್ವಂ ಘಾತಯ ದುರ್ಜನಮ್ ॥೫೪॥

॥ ಸೂತ ಉವಾಚ ॥

ಏವಮುಕ್ತ್ವಾ ಮುನಿಃ ಶ್ರೀಮಾನ್ ಶತಾನಂದಸಮಾಹ್ವಯಃ ।
ಕೈಲಾಸಮಗಮದ್ರುದ್ರಂ ತತಃ ಸ್ತೋತುಂ ಕುತೂಹಲಾತ್ ॥೫೫॥

ವನ್ನು ಆಸಕ್ತಿಯಿಂದ ಕೂಡಿ ಅಜ್ಞಾನದಿಂದ ಆಚರಿಸುವುದಿಲ್ಲವೋ, ಅಂಥ ದುಷ್ಟ ನನ್ನು ನೀನು ಹಿಂಸಿಸು. ॥೫೦॥

ಯಾವನು ಊರ್ಧ್ವಪುಂಡ್ರವನ್ನೂ ತ್ರಿಶೂಲಾಕಾರವಾದ ಚಿಹ್ನವನ್ನೂ ವರ್ತುಲಾಕಾರವಾದ ಚಿಹ್ನವನ್ನೂ ತನ್ನ ಶರೀರದಲ್ಲಿ ಅಜ್ಞಾನದಿಂದಲಾದರೂ ಧರಿಸುತ್ತಾನೆಯೋ, ಮತ್ತು ಯಾವನು ಶ್ರುತ್ಯುಕ್ತವಾದ ಆಚಾರವನ್ನು ಬಿಟ್ಟು ಶ್ರುತಿಯಲ್ಲಿ ಹೇಳದಿರುವ ನಡತೆಯುಳ್ಳವನಾಗಿಯೂ ಗುರುಗಳಿಗೆ ದ್ರೋಹ (ಮೋಸ) ಮಾಡುವನಾಗಿಯೂ ಇರುತ್ತಾನೋ, ಮತ್ತು ಯಾವನು ವೇದದಲ್ಲಿ ಉಕ್ತವಾದದ್ದನ್ನು ಬಿಟ್ಟು ವೇದೋಕ್ತವಾಗದುದನ್ನು ಉತ್ತಮವನ್ನಾಗಿ ತಿಳಿಯುತ್ತಾನೆಯೋ, ಅಂಥ ದುಷ್ಟನನ್ನೂ ಹಿಂಸಿಸು. ಯಾರು ಮನುಷ್ಯಸಂಬಂಧವಾದ ದೇವತಾಕಾರವಾದ ಅಥವಾ ಬೇರೆ ಯಾವುದಾದರೂ ಚಿಹ್ನೆಯನ್ನು ಅಜ್ಞಾನದಿಂದಲಾದರೂ ತನ್ನ ಶರೀರದಲ್ಲಿ ಮಾಡಿಕೊಳ್ಳುತ್ತಾನೆಯೋ ಅಂಥ ದುಷ್ಟನನ್ನು ನೀನು ಹಿಂಸಿಸು. ಎಂದು ಶತಾನಂದರು ಹೇಳಿದರು. ನಿಷ್ಕಾಮಧರ್ಮಾಚರಣೆಯನ್ನು ಮಾಡುವವರಿಗೆ ಯಮನು ಯಮರೂಪನಾಗಿ ತೋರದೆ ಧರ್ಮರೂಪನಾಗಿ ತೋರುತ್ತಾನೆಂದು ಭಾವವು. ॥೫೧-೫೨-೫೩-೫೪॥

ಸೂತರು ಹೇಳಿದರು—ಶತಾನಂದರು ಹೀಗೆ ಹೇಳಿ ರುದ್ರನನ್ನು ಸ್ತೋತ್ರ ಮಾಡಲು ಆಸೆಯುಳ್ಳವರಾಗಿ ಕೈಲಾಸಪರ್ವತಕ್ಕೆ ಹೊರಟುಹೋದರು. ॥೫೫॥

ಯಮೋಽಪಿ ಸಂಗಿರಂ ವಿಪ್ರಾಃ ಸಮಾಹೂಯಾದರೇಣ ಚ ।
ವಿನೈವ ವೇದಂ ತರ್ಕಸ್ಯ ಕೇವಲಸ್ಯ ಪರಿಗ್ರಹಾತ್ ॥೫೬॥

ತ್ವಯಾ ಭುಕ್ತಂ ಮಹಾದುಃಖಮಪ್ರಸಹ್ಯಮನೇಕಶಃ ।
ಪುರಾ ಕೃತೇನ ಪುಣ್ಯೇನ ಮಹಾದೇವಪ್ರಸಾದತಃ ॥೫೭॥

ಷಡಕ್ಷರಮಹಾಮಂತ್ರಶ್ರವಣಾಚ್ಚ ತಥೈವ ಚ ।
ದುಃಖಾದಪಿ ವಿನಿರ್ಮುಕ್ತಃ ತ್ವಂ ಮಹಾತ್ಮನ್ ಸುಖಪ್ರದಮ್ ॥೫೮॥

ಬ್ರಾಹ್ಮಣ್ಯಂ ಪ್ರಾಪ್ಯ ವೇದಸ್ಯ ವಿದಿತ್ವಾ ವೈಭವಂ ಪುನಃ ।
ತದುಕ್ತಂ ಧರ್ಮಮಾಸ್ಥಾಯ ಪುನರ್ವೇದಾಂತವಾಕ್ಯಜಮ್ ॥೫೯॥

ಶಿವಜ್ಞಾನಮವಾಪ್ಯಾಶು ವಿಮುಕ್ತೋ ಭವ ಬಂಧನಾತ್ ।
ಇತ್ಯುಕ್ತ್ವಾ ತು ಯಮಃ ಶ್ರೀಮಾನಗಮತ್ ಸ್ವಪುರಂ ಪ್ರತಿ ॥೬೦॥

ಅತೋ ವೇದೋದಿತೋ ಹ್ಯರ್ಥಸ್ಸಮ್ಯಗರ್ಥಸ್ಸುನಿಶ್ಚಿತಃ ।
ತರ್ಕಸಿದ್ಧೋಽತಿದುಃಖೋಽರ್ಥಃ ಪ್ರತ್ಯವಾಯಸ್ಯ ಕಾರಣಮ್ ॥೬೧॥

ಎಲೈ ಬ್ರಾಹ್ಮಣರೇ, ಆಗ ಯಮನೂ ಆ ಸಂಗಿರನನ್ನು ಆದರದೊಡನೆ ಕರೆದು ಹೀಗೆ ಹೇಳಿದನು : "ಎಲೈ ಸಂಗಿರನೇ, ನೀನು ವೇದವನ್ನು ಬಿಟ್ಟು ಯುಕ್ತಿಯನ್ನು ಮಾತ್ರ ಆಶ್ರಯಿಸಿದ್ದುದರಿಂದ ಸಹಿಸುವುದಕ್ಕಾಗದ ಅನೇಕ ವಿಧವಾದ ಕ್ರೂರವಾದ ದುಃಖಗಳನ್ನು ಅನುಭವಿಸಿದವನಾದೆ. ಆದರೆ ಪೂರ್ವಜನ್ಮದಲ್ಲಿ ಮಾಡಿದ ಪುಣ್ಯದಿಂದಲೂ ಆ ಮಹಾದೇವನ ಅನುಗ್ರಹದಿಂದಲೂ ಸುಖವನ್ನುಂಟುಮಾಡುವ ಷಡಕ್ಷರೀ ಮಂತ್ರವನ್ನು ಕೇಳಿದ್ದರ ಮಹಿಮೆಯಿಂದಲೂ ಎಲೈ ಮಹಾತ್ಮನೇ, ನೀನು ದುಃಖದಿಂದ ಬಿಡಲ್ಪಟ್ಟವನಾಗಿದ್ದೀಯೆ. ||೫೬-೫೭-೫೮||

ಮತ್ತು ಸುಖಕರವಾದ ಬ್ರಾಹ್ಮಣ್ಯವನ್ನು ಪಡೆದು ವೇದದ ಮಹಿಮೆಯನ್ನು ತಿಳಿದು ವೇದೋಕ್ತವಾದ ಧರ್ಮವನ್ನು ಆಚರಿಸಿ ವೇದಾಂತವಾಕ್ಯದಿಂದ ಉಂಟಾಗುವ ಶಿವ (ಬ್ರಹ್ಮ) ಜ್ಞಾನವನ್ನು ಪಡೆದು ಇನ್ನು ಮುಂದೆ ಶೀಘ್ರವಾಗಿ ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದು" ಎಂಬುದಾಗಿ ಹೇಳಿ ಆ ಸಂಪದ್ಯುಕ್ತನಾದ ಯಮನು ತನ್ನ ಪಟ್ಟಣಕ್ಕೆ ಹೊರಟುಹೋದನು. ||೫೯-೬೦||

ಆದ್ದರಿಂದ ಪುರುಷದೋಷಗಳ ಸಂಪರ್ಕವಿಲ್ಲದ, ಈಶ್ವರನಿಂದ ಪ್ರಕಟಿಸಲ್ಪಟ್ಟ

ಬಹವಃ ಕೇವಲಂ ತರ್ಕಂ ಸಮಾಶ್ರಿತ್ಯ ವಿನಾ ಶ್ರುತಿಮ್ ।
ರೌರವಾದಿಷು ಸಂತಪ್ತಾ ಅಭವನ್ವೇದವಿತ್ತಮಾಃ ॥೬೨॥

ಹೈತುಕೈಸ್ಸಹವಾಸಶ್ಚ ಸಹಪಙ್ಕ್ತ್ಯಾ ತು ಭೋಜನಮ್ ।
ಸ್ಪೃಷ್ಟಿಸ್ತೇಷಾಂ ನರಾಣಾಂ ತು ನರಕಾಯ ನ ಸಂಶಯಃ ॥೬೩॥

ಹೈತುಕಸ್ತು ಮಹಾಪಾಪೀ ಮಹಾಪಾತಕಿನಾ ಸಮಃ ।
ನ ತಸ್ಯ ನಿಷ್ಕೃತಿಸ್ತಸ್ಮಾದ್ಧೈತುಕಂ ಪರಿವರ್ಜಯೇತ್ ॥೬೪॥

ತಸ್ಮಾದ್ವೇದೋದಿತೇನೈವ ಪ್ರಕಾರೇಣ ವಿಚಕ್ಷಣಃ ।
ವಿಜಾನೀಯಾದನಾತ್ಮಾನಮನಿತ್ಯಮಿತಿ ನಿಶ್ಚಿತಮ್ ॥೬೫॥

ರುವ, ಹಿಂದಿನಂತೆಯೇ, ಈಗಲೂ, ಮುಂದೆಯೂ ಸ್ವತಂತ್ರ ಪ್ರಮಾಣವಾಗಿರಬಲ್ಲ ವೇದದಲ್ಲಿ ಹೇಳಿದ ಅರ್ಥವೇ ಉತ್ತಮವಾದದ್ದು ಮತ್ತು ಚೆನ್ನಾಗಿ ನಿಶ್ಚಯಿಸಲ್ಪಟ್ಟದ್ದು. ಯುಕ್ತಿಯಿಂದ ಸಾಧಿಸಲ್ಪಟ್ಟ ಅರ್ಥವು ದುಃಖಕರವಾದದ್ದು, ಪಾಪಕ್ಕೆ ಕಾರಣವಾದದ್ದು. ॥೬೧॥

ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಋಷಿಗಳಿರಾ, ಬಹಳ ಜನಗಳು ವೇದವನ್ನು ಬಿಟ್ಟು ತರ್ಕವನ್ನು ಮಾತ್ರ ಆಶ್ರಯಿಸಿ ಅದರಲ್ಲಿ ನಿಶ್ಚಯಜ್ಞಾನವನ್ನು ಹೊಂದದೆ ರೌರವಾದಿನರಕಗಳಲ್ಲಿ ಬಿದ್ದು ಅನೇಕವಿಧವಾದ ದುಃಖವನ್ನನುಭವಿಸುವವರಾದರು. ॥೬೨॥

ಯುಕ್ತಿವಾದಿಗಳ ಜೊತೆಯಲ್ಲಿ ವಾಸಮಾಡುವುದು ಅವರ ಜೊತೆಯಲ್ಲಿ ಕುಳಿತು ಊಟಮಾಡುವುದು ಅವರನ್ನು ಮುಟ್ಟುವುದು ಇವುಗಳೂ ಕೂಡ ಸಂದೇಹವಿಲ್ಲದೆ ನರಕವನ್ನುಂಟುಮಾಡುತ್ತವೆ. ॥೬೩॥

ಕೇವಲ ಯುಕ್ತಿವಾದಿಯು ಬಹಳ ಪಾಪಿಷ್ಠನು. ಸ್ವರ್ಣಸ್ತೇಯಾದಿ ಮಹಾಪಾಪವನ್ನು ಮಾಡಿದವನಿಗೆ ಸಮಾನನಾದವನು. ಅವನ ಪಾಪಕ್ಕೆ ಪರಿಹಾರವು ಇಲ್ಲವು. ಆದ್ದರಿಂದ ಅಂಥ ಪಾಪಿಯೊಡನೆ ಯಾವ ವ್ಯವಹಾರವನ್ನೂ ಮಾಡದೆ ಬಿಟ್ಟುಬಿಡಬೇಕು. ॥೬೪॥

ಆದುದರಿಂದ ಬುದ್ಧಿವಂತನಾದವನು ವೇದದಿಂದ ಯಾವುದು ಆತ್ಮನಲ್ಲವೆಂದು ನಿಶ್ಚಯಿಸಲ್ಪಟ್ಟದೆಯೊ ಅದು ಅನಿತ್ಯಪದಾರ್ಥವೆಂದು ತಿಳಿಯಬೇಕೇ ವಿನಾ ಯುಕ್ತಿಯಿಂದಲೇ ತಿಳಿಯಲು ಪ್ರಯತ್ನಮಾಡಬಾರದು. ಇಂತಹ ಪ್ರಸಂಗದಲ್ಲೂ, “ನಹಿ ನಿಂದಾನ್ಯಾಯವನ್ನನುಸರಿಸಿ, ಇಲ್ಲಿ ಯುಕ್ತಿಪ್ರಯೋಗವನ್ನು ನಿಂದಿಸುವುದರಲ್ಲಿ ಈ

ಆತ್ಮನೋಽನ್ಯಸ್ಯ ಸರ್ವಸ್ಯ ಯದನಿತ್ಯತ್ವವೇದನಮ್ ।
ತದ್ಧಿ ಸಂಸಾರವೈರಾಗ್ಯಜನಕಂ ನಾಪರಂ ದ್ವಿಜಾಃ ॥೬೬॥

ವಿರಕ್ತಸ್ಯ ಹಿ ಸಂಸಾರಾತ್ಕಿಮನ್ಯತ್ಕಾಂಕ್ಷಿತಂ ಭವೇತ್ ।
ವೈರಾಗ್ಯೇ ಸತಿ ಸಂಸಾರಾತ್ ಸರ್ವದುಃಖಂ ನ ವಿದ್ಯತೇ ॥೬೭॥

ರಾಗೇಣೈವ ಹಿ ಸಂಸಾರಮಹಾದುಃಖಂ ತು ದೇಹಿನಾಮ್ ।
ವಿರಕ್ತಸ್ಯ ನ ರಾಗೋಽಸ್ತಿ ತತೋ ವೈರಾಗ್ಯತ ಸ್ಸುಖಮ್ ॥೬೮॥

ತಸ್ಮಾದ್ವೈರಾಗ್ಯಲಾಭಾಯ ಚರಾಚರಮಿದಂ ಜಗತ್ ।
ಅನಿತ್ಯಮಿತಿ ಜಾನೀಯಾದನಾತ್ಮಾನಮಶೇಷತಃ ॥೬೯॥

ಘಟಾದೀನಾಮನಿತ್ಯತ್ವಂ ಸ್ವತ ಏವ ಪ್ರಕಾಶತೇ ।
ಗೃಹಪ್ರಾಸಾದಪೂರ್ವಾಣಾಮಪಿ ವೇದವಿದಾಂ ವರಾಃ ॥೭೦॥

ನಿಷೇಧವಾಕ್ಯಗಳಿಗೆ ತಾತ್ಪರ್ಯವಿಲ್ಲವು. ವೇದದಲ್ಲಿ ಪ್ರಾಮಾಣ್ಯಬುದ್ಧಿಯನ್ನು ಇಟ್ಟು ವೇದೋಕ್ತಾರ್ಥವನ್ನು ಅಂಗೀಕರಿಸಬೇಕೆಂದು ಹೇಳುವುದರಲ್ಲಿ ತಾತ್ಪರ್ಯವೆಂದು ತಿಳಿಯಬೇಕು. ||೬೫||

ಆದುದರಿಂದ ಮೇಲೆ ಹೇಳಿದಂತೆ ಆತ್ಮನನ್ನು ಬಿಟ್ಟು ಸರ್ವವೂ ಅನಿತ್ಯವೆಂಬ ತಿಳಿವಳಿಕೆಯೇ ಸಂಸಾರದ ದೆಸೆಯಿಂದ ವೈರಾಗ್ಯವನ್ನುಂಟುಮಾಡುವುದೇ ವಿನಾ ಬೇರೆ ಯಾವುದೂ ಮಾಡಲಾರದು. ||೬೬||

ಈ ಸಂಸಾರದ ದೆಸೆಯಿಂದ ವೈರಾಗ್ಯವನ್ನು ಹೊಂದಿದವನಿಗೆ ಅಪೇಕ್ಷಿಸ ಬೇಕಾದ ಬೇರೆ ವಸ್ತುವು ಯಾವುದೂ ಇಲ್ಲ. ಈ ಸಂಸಾರದ ದೆಸೆಯಿಂದ ವೈರಾಗ್ಯ ವನ್ನು ಪಡೆದವನಿಗೆ ಎಲ್ಲಾ ವಿಧವಾದ ದುಃಖಗಳೂ ನಾಶಹೊಂದುತ್ತವೆ. ||೬೭||

ಈ ಸಂಸಾರದಲ್ಲಿರುವ ಪ್ರೀತಿಯಿಂದಲೇ ಬಹಳ ದುಃಖವನ್ನನುಭವಿಸಬೇಕಾ ಗುವುದು. ವೈರಾಗ್ಯವನ್ನು ಹೊಂದಿದವನಿಗೆ ಈ ಸಂಸಾರದಲ್ಲಿ ಪ್ರೀತಿ ಇರುವುದಿಲ್ಲ ವಾದ್ದರಿಂದ ವೈರಾಗ್ಯಶಾಲಿಯಾದವನು ಸುಖವನ್ನು ಪಡೆಯುತ್ತಾನೆ. ||೬೮||

ಅದ್ದರಿಂದ ವೈರಾಗ್ಯವುಂಟಾಗುವುದಕ್ಕೋಸ್ಕರ ಜಡವಾದ, ಸ್ಥಾವರಜಂಗ ಮಾತ್ಮಕವಾದ ಈ ಪ್ರಪಂಚವೆಲ್ಲವೂ ಅನಿತ್ಯವೆಂದು ತಿಳಿಯಬೇಕು. ||೬೯||

ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಋಷಿಗಳಿರಾ, ಮನೆ, ಉಪ್ಪರಿಗೆ,

ಪುತ್ರಮಿತ್ರಕಳತ್ರಾದಿ ಭೋಗೋ ವಿದ್ಯುದಿವ ಸ್ಥಿತಃ ।
ವಿನಶ್ಯತಿ ಮಹಾಮೋಹಾನ್ನಿತ್ಯಂ ತಂ ಮನುತೇ ಜನಃ ॥೭೧॥

ಮಂಡಲಾಧಿಪತಿರ್ಮರ್ತ್ಯೋ ಮಹಾಭೋಗಸಮನ್ವಿತಃ ।
ವಿನಾಽಽಧಿಪತ್ಯಂ ತತ್ತೂಷ್ಣೀಂ ಭೂತೋ ದೃಷ್ಟಃ ಸ್ವಭಾವತಃ ॥೭೨॥

ತಥಾ ರಾಜಾ ಮಹಾಭೂಮೇಃ ಸ್ವಯಮೇಕೋಽಧಿಪಸ್ಸುಖೀ ।
ವಿನಾ ರಾಜ್ಯಸುಖಂ ದುಃಖೀ ದೃಷ್ಟಸ್ಸರ್ವಜನೈರಪಿ ॥೭೩॥

ಏವಂ ಸತ್ಯಪಿ ಮೋಹಾಂಧತಮಸಾ ಪರಿವೇಷ್ಟಿತಃ ।
ಈಹತೇ ಸುಖಭೋಗಾಯ ತ್ವಹೋ ಮೋಹಸ್ಯ ವೈಭವಮ್ ॥೭೪॥

ಘಟಾದಿಪದಾರ್ಥಗಳು ಇವೆಲ್ಲವೂ ಅನಿತ್ಯಪದಾರ್ಥಗಳು ಎಂಬುದೂ ತಾನಾಗಿಯೇ ಗೊತ್ತಾಗುತ್ತಲೇ ಇದೆ. ॥೭೦॥

ಮಕ್ಕಳು, ಸ್ನೇಹಿತರು, ಹೆಂಡಿರು, ವಿಷಯಭೋಗಗಳು, ಇವೆಲ್ಲವೂ ಮೋಡದ ಮಧ್ಯದಲ್ಲಿನ ಮಿಂಚಿನಂತೆ ಜಾಗ್ರತೆಯಾಗಿ ನಾಶಪಡೆಯುವ ಪದಾರ್ಥಗಳು. ಇಂಥ ಪದಾರ್ಥಗಳನ್ನು ಅಜ್ಞಾನದಿಂದ ಜನರು ನಿತ್ಯವೆಂಬುದಾಗಿ ತಿಳಿಯುತ್ತಾರೆ. ॥೭೧॥

ಚಕ್ರವರ್ತಿಯ ಪದವಿಯಲ್ಲಿದ್ದು ಅನೇಕ ಉತ್ತಮವಾದ ಭೋಗಗಳನ್ನು ಅನುಭವಿಸುತ್ತಿದ್ದವನಾದಾಗ್ಯೂ ಸ್ವಭಾವದಿಂದ ಅಧಿಕಾರವಿಲ್ಲದೆ ಸುಮ್ಮನೆ ಇರುವವನನ್ನು ಅನೇಕರು ನೋಡಿದ್ದಾರೆ. ಅದರಂತೆ ದೊಡ್ಡದಾದ ರಾಜ್ಯಕ್ಕೆ ದೊರೆಯಾಗಿ ಸ್ವತಂತ್ರವಾಗಿ ಅಧಿಕಾರಮಾಡುತ್ತಾ ಸುಖಗಳನ್ನನುಭವಿಸುತ್ತಾ ಇದ್ದವನಾದಾಗ್ಯೂ, ರಾಜ್ಯವನ್ನೆಲ್ಲವನ್ನೂ ಕಳೆದುಕೊಂಡು ದುಃಖವನ್ನನುಭವಿಸುವವನನ್ನೂ ಎಲ್ಲರೂ ನೋಡಿಯೇ ಇದ್ದಾರೆ. ॥೭೨-೭೩॥

ಹೀಗೆ ಅನೇಕ ಅನುಭವಗಳಿಂದ ಪ್ರಪಂಚವು ಅನಿತ್ಯವೆಂದು ತಿಳಿದಿದ್ದಾಗ್ಯೂ, ಅಜ್ಞಾನಕ್ಕೊಳಗಾಗಿ ಪ್ರಪಂಚದಲ್ಲಿ ಅನೇಕ ಸುಖವಾದ ಭೋಗಗಳನ್ನು ನಾನು ಅನುಭವಿಸಬೇಕೆಂದು ಇಚ್ಛೆಪಡುತ್ತಾನೆ. ಇಂಥ ಅಜ್ಞಾನದ ಆಶ್ಚರ್ಯಕರವಾದ ಮಹಿಮೆಯನ್ನು ಏನೆಂದು ಹೇಳೋಣ! ॥೭೪॥

ಪರಲೋಕಸುಖಂ ವಾಽಪಿ ಕರ್ಮಣಾ ಸಾಧ್ಯತೇ ಯತಃ ।
ಅತಸ್ತದಪಿ ವಿಪ್ರೇಂದ್ರಾ ನಶ್ಯತ್ಯೇವ ನ ಸಂಶಯಃ ॥೭೫॥

ಮಹಾಭೂಮಿರಿಯಂ ನಷ್ಟಾ ಭವಿಷ್ಯತಿ ಮಹೋದಧೌ ।
ಪ್ರಳಯೇ ತದ್ಗತಾ ಲೋಕಾ ಅಪಿ ನಶ್ಯಂತಿ ಸರ್ವಥಾ ॥೭೬॥

ಈಗ ಇಹಲೋಕದ ಸುಖದಂತೆ ಸ್ವರ್ಗಾದಿಸುಖಗಳೂ ಅನಿತ್ಯವೆಂದು ತಿಳಿಯಿಸುತ್ತಾರೆ. ಯಾಗ, ಹೋಮ ಮೊದಲಾದ ಕರ್ಮದಿಂದ ಪಡೆಯತಕ್ಕವುಗಳು ಸ್ವರ್ಗಾದಿಸುಖಗಳು. ಇಂಥ ಸುಖಗಳೂ ಕೂಡ ಇಹಲೋಕದಲ್ಲಿ ನಾವು ಕಲ್ಪಿಸಿ ಕೊಂಡಿರುವ ಸುಖಗಳೆಲ್ಲವೂ ಹೇಗೆ ಅನಿತ್ಯವಾದವುಗಳೋ, ಅದರಂತೆ ಕರ್ಮದಿಂದ ಪಡೆಯುವ ಸ್ವರ್ಗಾದಿಸುಖಗಳೂ ಅನಿತ್ಯವಾದವುಗಳೇ ಹೊರತು ನಿತ್ಯವಾದವುಗಳಲ್ಲ. ಏಕೆಂದರೆ ಜನ್ಯವಾದುದೆಲ್ಲವೂ ಅನಿತ್ಯವು. ಎಂದು ವ್ಯಾಪ್ತಿ ಇದೆ. ||೭೫||

ಈಗ ಕ್ರಮವಾಗಿ ಸೃಷ್ಟಿಸಲ್ಪಟ್ಟ ಆಕಾಶ, ವಾಯು, ಅಗ್ನಿ, ನೀರು, ಪೃಥಿವಿ ಇವುಗಳಿಗೂ ವ್ಯತ್ಯಸ್ತವಾದ ರೀತಿಯಿಂದ ಸಕಲ ಕಾರಣವಾದ ಬ್ರಹ್ಮನಲ್ಲಿಯೇ ನಾಶ ವನ್ನು ಹೇಳುತ್ತಾರೆ. ಇಲ್ಲಿ ವೈಶೇಷಿಕರು ಕಾರಣನಾಶವಾದ ಮೇಲೆ ಕಾರ್ಯ ನಾಶವೆಂದು ಹೇಳುತ್ತಾರೆ. ಹೀಗೆ ಹೇಳುವುದು ಸರಿಯಲ್ಲ. ಏಕೆಂದರೆ ನಾಶವೆಂದರೆ ಕಾರಣರೂಪದಿಂದ ಇರುವುದು ಎಂದರ್ಥ. ಕಾರ್ಯವಾದ ಘಟವು ನಾಶವಾದರೂ ಕಾರಣವಾದ ಮಣ್ಣಿನ ರೂಪದಿಂದ ಇದ್ದೇ ಇರುತ್ತದೆ. (ಘಟವು ಒಡೆದ ಮೇಲೆ ಮಣ್ಣಾಗುತ್ತದೆಯೇ ಹೊರತು ಮತ್ತೇನೂ ಆಗುವುದಿಲ್ಲ). ಆದ್ದರಿಂದ ಕಾರಣ ನಾಶದಿಂದ ಕಾರ್ಯನಾಶವಾಗುವುದೆಂದು ಹೇಳುವುದು ಸರಿಯಲ್ಲ. ಕಾರ್ಯವಾದ ದೊಡ್ಡದಾಗಿರುವ ಈ ಭೂಮಿಯು ತನಗೆ ಕಾರಣವಾದ ಜಲದಲ್ಲಿ (ದೊಡ್ಡದಾದ ಸಮುದ್ರದಲ್ಲಿ) ಲಯವಾಗುತ್ತದೆ. ಅಲ್ಲದೆ ಪೃಥಿವಿಯಲ್ಲಿರುವ ಅನೇಕವಾದ ಲೋಕ ಗಳೂ ಕೂಡ ಪ್ರಳಯದಲ್ಲಿ ಜಲದಲ್ಲಿಯೇ ನಷ್ಟವಾಗುತ್ತವೆ. ಎಂದರೆ ಘನ ಪದಾ ರ್ಥವು ದ್ರವರೂಪವಾಗಿಯೂ, ದ್ರವವು ತೇಜಸ್ಸಿನಲ್ಲೂ, ತೇಜಸ್ಸು ವಾಯುವಿನಲ್ಲೂ, ವಾಯುವು ಸ್ಪಂದದಲ್ಲೂ ಲಯವಾಗುತ್ತದೆ. ಹೀಗೆ ಪ್ರಾಕೃತಪದಾರ್ಥಗಳೆಲ್ಲವೂ ಸ್ಪಂದರೂಪವಾದ ಒಂದು ತತ್ವದಲ್ಲಿ ಕಡೆಗೆ ಲಯವನ್ನು ಹೊಂದುತ್ತದೆ. ಇದನ್ನು ಪ್ರಾಕೃತಾದ್ವೈತವೆನ್ನಬಹುದು. ಈ ನಾಮರೂಪಗಳ ಲಯವು, ಎಂದರೆ ಸ್ಥೂಲ ವಾದ ಕಾರ್ಯಗಳೆಲ್ಲವೂ, ಸೂಕ್ಷ್ಮವೂ, ವ್ಯಾಪಕವೂ ಆದಕಾರಣದಲ್ಲಿ ಲಯವಾಗು ತ್ತದೆಂದು ಭಾವವು.

ಈ ಪರಿಣಾಮಲಯಗಳ ಕ್ರಮುವನ್ನು (Theory of evolution and involution) ಎಂದರೆ ಕಾರಣದಿಂದ ಕಾರ್ಯವು ಪ್ರಾದುರ್ಭವಿಸುವುದು, ಕಡೆಗೆ ಕಾರ್ಯವು ಕಾರಣದಲ್ಲಿ ಲಯವಾಗುವುದು, ಇವುಗಳ ವಿವರವನ್ನು, ಐತರೇಯ ಬ್ರಾಹ್ಮಣದಲ್ಲಿ ಕಾಣಬಹುದು. "ತಸ್ಯಯ ಆತ್ಮಾ ನಮಾವಿಸ್ತರಾಂ ವೇದ ಅಶ್ನುತೇ ಹ ಆವಿರ್ಭೂಯಃ । ಓಷಧಿವನಸ್ಪತಯೋ ಯಚ್ಚ ಕಿಂಚಿತ್ ಪ್ರಾಣಭೃತ್ ಸ ಆತ್ಮಾನಂ ಆವಿಸ್ತರಾಂ ವೇದ । ಓಷಧಿ ವನಸ್ಪತಿಷು ಹಿ ರಸೋ ದೃಶ್ಯತೇ । ಚಿತ್ತಂ ಪ್ರಾಣಭೃತ್ಸು । ಪ್ರಾಣಭೃತ್ಸು ತ್ವೇವ ಆವಿಸ್ತರಾಂ ಆತ್ಮಾ । ತೇಷು ಹಿ ರಸೋ ದೃಶ್ಯತೇ । ನ ಚಿತ್ತಮಿತರೇಷು । ಪುರುಷೇತ್ವೇವ ಆವಿಸ್ತರಾಮಾತ್ಮಾ । ಸ ಹಿ ಪ್ರಜ್ಞಾನೇನ ಸಂಪನ್ನತಮಃ । ವಿಜ್ಞಾತಂ ವದತಿ । ವಿಜ್ಞಾತಂ ಪಶ್ಯತಿ । ವೇದಶ್ವಸ್ತನಂ । ವೇದ ಲೋಕಾಲೋಕೌ । ಮರ್ತ್ಯೇನ ಅಮೃತಂ ಈಪ್ಸತಿ । ಏವಂ ಸಂಪನ್ನಃ । ಅಥ ಇತರೇಷಾಂ ಪಶೂನಾಂ ಅಶನಾಪಿಪಾಸೇ ಏವ ಅಭಿವಿಜ್ಞಾನಂ । ನ ವಿಜ್ಞಾತಂ ವದಂತಿ । ನ ವಿಜ್ಞಾತಂ ಪಶ್ಯಂತಿ । ನ ವಿದುಃಶ್ವಸ್ತನಂ । ನ ಲೋಕಾಲೋಕೌ । ತ ಏತಾವಂತೋ ಭವಂತಿ । ಯಥಾಪ್ರಜ್ಞಂ ಹಿ ಸಂಭವಾಃ ॥" ಐತರೇಯ ಬ್ರಾಹ್ಮಣ ೨-೩೨.

ಇದರ ಅರ್ಥವನ್ನು ಹೀಗೆ ವಿವರಿಸಬಹುದು. ಯಾರು ಆ ಜೀವನಸ್ವರೂಪವನ್ನು ಹೆಚ್ಚಾಗಿ ತಿಳಿಯಬಲ್ಲವನೂ ಹೊರಹೊಮ್ಮಿಸಬಲ್ಲವನೂ ಆಗುತ್ತಾನೋ, ಅಂಥವನು ತನ್ನ ಆತ್ಮವಿಕಾಸದ ಆವಿರ್ಭಾವವನ್ನು ಹೆಚ್ಚಾಗಿ ಅನುಭವಕ್ಕೆ, ಅರ್ಥಕ್ರಿಯಾಕಾರಿತ್ವರೂಪವಾದ ವ್ಯವಹಾರಕ್ಕೆ, ತಂದುಕೊಳ್ಳುತ್ತಾನೆ. ಗಿಡಮರಬಳ್ಳಿಗಳು ಮುಂತಾದ ಪ್ರಾಣವ್ಯಾಪಾರವನ್ನು ಹೊಂದಿರುವ ಭೂತಗಳು ಮೃತ್ಪಾಷಾಣಾದಿಗಳಿಗಿಂತ ಹೆಚ್ಚಾಗಿ ಆತ್ಮಾವಿರ್ಭಾವವನ್ನು ತಿಳಿಸುತ್ತವೆ. ಗಿಡಮರಬಳ್ಳಿಗಳಲ್ಲಿ ರಸವು, ಎಂದರೆ ಪ್ರಾಣದ ಪ್ರಥಮ ರೂಪವು, ಮಾತ್ರ ಇರುತ್ತದೆ. ಆದರೆ ಪ್ರಾಣಿಗಳಲ್ಲಿ ಜಂಗಮಪ್ರಾಣಿಗಳಲ್ಲಿ, ಚಿತ್ತವೂ ಇರುತ್ತದೆ. ಆದುದರಿಂದ ಪ್ರಾಣಿಗಳಲ್ಲಿ ಆತ್ಮನು ಹೆಚ್ಚಾಗಿ ಆವಿರ್ಭಾವವನ್ನು, ತನ್ನ ಸ್ವರೂಪಶಕ್ತಿಗಳ ಹೆಚ್ಚಾದ ಹೊರಹೊಮ್ಮಿಸುವಿಕೆಯನ್ನು, ಪಡೆದಿರುತ್ತಾನೆ. ಏಕೆಂದರೆ, ಅಲ್ಲಿ, ಗಿಡ ಮರ ಬಳ್ಳಿಗಳಲ್ಲಿ, ರಸಮಾತ್ರವಿರುತ್ತದೆ, ಮನಸ್ಸು ಇರುವುದಿಲ್ಲ. ಮಾನವನಲ್ಲಿ ಆತ್ಮನು ಇನ್ನೂ ಹೆಚ್ಚಾಗಿ ಆವಿರ್ಭಾವವನ್ನು ಪಡೆದಿರುತ್ತಾನೆ. ಏಕೆಂದರೆ ಮಾನವನು ವಿವೇಚನೆ ಎಂಬ ಹೆಚ್ಚಿನ ತಿಳಿವಳಿಕೆಯನ್ನು ದಿನಗಟ್ಟಲೆಯ ಜೀವನದ ವ್ಯವಹಾರದಲ್ಲಿ ತಿಳಿಯಿಸುತ್ತಾನೆ. ತಿಳಿದುದನ್ನು ಹೇಳಬಲ್ಲನು. ತಿಳಿದುನೋಡಬಲ್ಲನು. ಮುಂದಾಗುವುದನ್ನು ಊಹಿಸಿ ತಿಳಿಯ

ಬಲ್ಲನು. ಕಾಣುತ್ತಿರುವುದರಿಂದ ಕಾಣದೆ ಇರುವುದನ್ನು ಗೊತ್ತುಮಾಡಬಲ್ಲನು. ವಿನಾಶಿಯಾದ ಈ ಜೀವನದಿಂದ ಶಾಶ್ವತವಾದ ಮೋಕ್ಷವನ್ನು ಪಡೆಯಲು ಇಚ್ಛಿಸುತ್ತಾನೆ. ಹೀಗೆ ಅವನು ತುಂಬುಜೀವನವುಳ್ಳವನಾಗಿದಾನೆ. ಇತರ ಪ್ರಾಣಿ ಮುಂತಾದ ಪದಾರ್ಥಗಳಾದರೋ ಹಸಿವು ಬಾಯಾರಿಕೆಗಳನ್ನು ಮಾತ್ರ ತಿಳಿಯಬಲ್ಲವು. ತಿಳಿದುದನ್ನು ವಿವರಿಸಲಾರವು. ತಿಳಿದು ನೋಡಲಾರವು. ನಾಳಿನದನ್ನು ಊಹಿಸಿ ತಿಳಿಯಲಾರವು. ಹಾಗೆಯೇ ಕಾಣುತ್ತಿರುವುದನ್ನೂ, ಕಾಣದೆ ಇರುವುದನ್ನೂ ಗೊತ್ತುಮಾಡಿಕೊಳ್ಳಲಾರವು. ಅವುಗಳ ಶಕ್ತಿಯ ಆವಿರ್ಭಾವವು ಅಷ್ಟರಲ್ಲೇ ಪರಿಮಿತವಾಗಿರುತ್ತದೆ. ಹೀಗೆ ಮೇಲುಮೇಲಿನ ಜನ್ಮಗಳಲ್ಲಿ, ಶರೀರಗಳಲ್ಲಿ, ತಿಳಿವಳಿಕೆಯು ಹೆಚ್ಚಾಗಿ ಹೊರಹೊಮ್ಮುತ್ತಿರುವುದನ್ನು ಕಾಣುತ್ತೇವೆ. ಆದುದರಿಂದ ಅದು ಶರೀರಗಳಲ್ಲಿನ ಮೇಲ್ಮೆಯನ್ನು ಅವಲಂಬಿಸಿರುತ್ತದೆ.

ಈ ಮೇಲೆ ಉದಾಹರಿಸಿರುವ ಐತರೇಯ ಬ್ರಾಹ್ಮಣದ ವಾಕ್ಯದ ಮೇಲೆ ಸಾಯಣಾಚಾರ್ಯರ ಭಾಷ್ಯವು ಹೀಗಿದೆ—

ಚೈತನ್ಯಸ್ಯ ಉಪಾಧಿ ವಿಶೇಷೇಷು ತಾರತಮ್ಯೇನ ಆವಿರ್ಭಾವಂ ದರ್ಶಯಿತುಂ ಏಕಂ ಉಪಾಧಿಂ ಉದಾಹರತಿ ಅಥೇತಿ । ಸಚ್ಚಿದಾನಂದ ರೂಪಸ್ಯ ಜಗತ್ಕಾರಣಸ್ಯ ಪರಮಾತ್ಮನಃ ಸರ್ವೇಽಪಿಪದಾರ್ಥಾಃ ಆವಿರ್ಭಾವೋಪಾಧಯಃ । ತತ್ರ ಅಚೇತನೇಷು ಮೃತ್ಪಾಷಾಣಾದಿಷು ಸತ್ತಾಮಾತ್ರಂ ಆವಿರ್ಭವತಿ । ನ ಚ ಆತ್ಮನಃ ಜೀವರೂಪತ್ವಂ। ಯೇ ತು ಓಷಧಿ ವನಸ್ಪತಯಃ ಜೀವರೂಪಾಃ ಸ್ಥಾವರಾಃ, ಯೇ ಚ ಶ್ವಾಸರೂಪ ಪ್ರಾಣಧಾರಿಣಃ ಜೀವರೂಪಾಃ ಜಂಗಮಾಃ, ತೇ ಉಭಯೇ ಅತಿಶಯೇನ ಆತ್ಮಾವಿರ್ಭಾವ ಸ್ಥಾನಂ ಇತಿ.

ಈ ವಾಕ್ಯದ ತಾತ್ಪರ್ಯವನ್ನು ಹೀಗೆ ಹೇಳಬಹುದು. ಆತ್ಮಚೈತನ್ಯದ ಗುಣಗಳು ಹೊರಹೊಮ್ಮುವುದಕ್ಕೆ ಶರೀರಗಳು ಉಪಾಧಿಗಳು, ಎಂದರೆ ಸಾಧನಗಳು ಆಗಿರುತ್ತವೆ. ಈ ಸಾಧನಭೂತವಾದ ಆಯಾ ದೇಹಗಳಲ್ಲಿ ಆತ್ಮಾವಿರ್ಭಾವದ ತಾರತಮ್ಯವನ್ನು ತಿಳಿಯಿಸಲು ಒಂದು ಉಪಾಧಿಯನ್ನು ಉದಾಹರಿಸಿ ತೋರಿಸಿದೆ. ಸಚ್ಚಿದಾನಂದರೂಪಸ್ಯ—ಸತ್=ಯಾವಾಗಲೂ ನಾಶವಾಗದೆ ಉಳಿದಿರುವಿಕೆ, ಚಿತ್=ಎಲ್ಲವನ್ನೂ ತಿಳಿಯುವ ಮನಗಾಣುವ ಶಕ್ತಿ, ಆನಂದ=ಸುಖ, ಇವೇ ಸ್ವರೂಪವಾಗಿ ಉಳ್ಳ; ಜಗತ್ಕಾರಣಸ್ಯ=ಈ ಪ್ರಪಂಚದ ಹುಟ್ಟು, ಬಾಳಿಕೆ, ಉಪಸಂಹಾರಗಳಿಗೆ ಕಾರಣನಾಗಿರುವ ಪರಮಾತ್ಮನಿಗೆ, ಎಲ್ಲ ಜೀವರಿಗಿಂತಲೂ

ಸಮುದ್ರಾಸ್ಸಪ್ತವಿಪ್ರೇಂದ್ರಾ ನಶ್ಯಂತಿ ಬಡಬಾನಲೇ ।
ಬಡಬಾ ಚ ಮಹಾವಹ್ನೌ ವಹ್ನಿರ್ವಾಯೌ ವಿನಶ್ಯತಿ ॥೭೭॥

ಮೊದಲನೆಯವನಾದ ಮಿಗಿಲಾದ ಹಿರಣ್ಯಗರ್ಭಬ್ರಹ್ಮನಿಗೆ; ಸರ್ವೇಽಪಿ ಪದಾರ್ಥಾಃ=ಈ ಪ್ರಪಂಚದಲ್ಲಿರುವ ಎಲ್ಲ ವಸ್ತುಗಳೂ; ಆವಿರ್ಭಾವೋಪಾಧಯಃ=ತನ್ನ ಸಗುಣ ಸಾಕಾರಸ್ವರೂಪದ ಪ್ರಕಟನೆಗೆ, ಹೊರಹೊಮ್ಮಿಸುವಿಕೆಗೆ, ಸಾಧನಗಳಾಗಿರುತ್ತವೆ. ಅವುಗಳಲ್ಲಿ ಚೇತನವಲ್ಲದ ಮಣ್ಣು, ಕಲ್ಲು ಮುಂತಾದ ಜಡವಸ್ತುಗಳಲ್ಲಿ ಆತ್ಮನ ಇರುವಿಕೆ ಮಾತ್ರ ತೋರುತ್ತಿರುತ್ತದೆ. ಆದರೆ ಆತ್ಮನ ಬದುಕಿರುವಿಕೆ ಎಂಬ ಗುಣವು ತೋರುತ್ತಿರುವುದಿಲ್ಲವು. ಗಿಡ, ಮರ, ಬಳ್ಳಿಗಳಲ್ಲಾದರೋ ಬದುಕಿರುವಿಕೆಯೂ, ಪ್ರಾಣನವ್ಯಾಪಾರವೂ, ತೋರುತ್ತಿರುತ್ತದೆ. ಆದರೂ ಅವು ಚಲಿಸರಾರದೆ ಇದ್ದಲ್ಲಿಯೇ ಇರುತ್ತವೆ. ಉಸಿರಾಡುವ, ಪ್ರಾಣಶಕ್ತಿಯುಳ್ಳ, ಚಲಿಸಬಲ್ಲ ಪ್ರಾಣಿಗಳಾದರೋ, ಹಿತಪ್ರಾಪ್ತಿ, ಅಹಿತಪರಿಹಾರ, ಇವುಗಳಿಗಾಗಿ ಚಲನವ್ಯಾಪಾರಸಾಮರ್ಥ್ಯವನ್ನೂ ಹೊಂದಿರುವುದರಿಂದ ಆತ್ಮನಗುಣಗಳ ಆವಿರ್ಭಾವವನ್ನು ಇನ್ನೂ ಹೆಚ್ಚಾಗಿ ಪ್ರಕಟಿಸಬಲ್ಲವಾಗಿರುತ್ತವೆ. ಹೀಗೆಯೇ ಕಡೆಗೆ ಮಾನವರೂಪದಲ್ಲಿ ಆತ್ಮನು ಅಥವಾ ಜೀವನು ಈ ಮೇಲೆ ಹೇಳಿದ ಗುಣಗಳ ಜೊತೆಗೆ ಮುಂದಾಲೋಚನೆ, ವಿವೇಚನೆಗಳನ್ನೂ, ಮುಂದುವರಿಯಿಸುತ್ತಾ, ನಿಷ್ಕಾಮಕರ್ಮಾಚರಣೆ, ಚಿತ್ತಶುದ್ಧಿ, ಅಜ್ಞಾನನಿವೃತ್ತಿಗಳ ಮೂಲಕ ಜ್ಞಾನವಾಗಲು, ಸ್ವಸ್ವರೂಪದ ಅಪರೋಕ್ಷಾನುಭವವಾಗಲು, ಎಂದಿನಂತೆ ನಿತ್ಯ, ಶುದ್ಧ, ಬುದ್ಧ, ಮುಕ್ತ, ಅದ್ವಿತೀಯ, ಪರಬ್ರಹ್ಮತತ್ವರೂಪವಾಗಿ ಉಳಿದಿರುತ್ತಾನೆ. ಇದೇ ಮೋಕ್ಷವು.

ಸಾಂಖ್ಯರು ವಿವರಿಸಿರುವ ಪ್ರಕೃತಿಪರಿಣಾಮವಾದದ ಮೂಲವು ಈ ಮೇಲೆ ಉದಾಹರಿಸಿರುವ ಬ್ರಾಹ್ಮಣವಾಕ್ಯದಲ್ಲಿ ಸೂಚಿತವಾಗಿದೆ, ಎನ್ನಬಹುದು. "Darwinian Theory of Evolution." (ವಿಕಾಸವಾದವೂ) ಇಲ್ಲಿ ಅಡಗಿರುವುದನ್ನು ಗಮನಿಸಬಹುದು. "God sleeps in stones, grows in plants, walks in animals, thinks in man and perfects in Himself again and again." ಎಂದು ಹೇಳಿರುವ ವಾಕ್ಯವೂ ನೆನಪಿಗೆ ಬರುತ್ತದೆ. ವೇದಾಂತತತ್ವದರ್ಶನದ ದೃಷ್ಟಿಯಿಂದ ಇದನ್ನು ಉಪಾಧಿಗುಣ ವಿಕಾಸಕ್ರಮವು ಎನ್ನಬಹುದಾಗಿದೆ. ಎಂದರೆ ತಪ್ಪಾಗಲಾರದು. ॥೭೬॥

ಲವಣ, ಇಕ್ಷು, ಸುರಾ, ಸರ್ಪಿ, ದಧಿ, ಕ್ಷೀರ, ಜಲ ಈ ಏಳು ಸಮುದ್ರಗಳೂ ಬಡಬಾ ಎಂಬ ಅಗ್ನಿಯಲ್ಲಿ ನಾಶವಾಗುತ್ತವೆ. ಆ ಅಗ್ನಿಯು ಮಹಾ ಅಗ್ನಿಯಲ್ಲಿ

ವಾಯುರ್ನಶ್ಯತಿ ಚಾಕಾಶೇ ತಥಾಕಾಶಸ್ಸ್ವಕಾರಣೇ ।
ಶಬ್ದಾದೀನಿ ಚ ಭೂತಾನಿ ನಶ್ಯಂತ್ಯೇವ ನ ಸಂಶಯಃ ॥೭೮॥

ಭೂತಾನಾಮಪಿ ನಾಶೇನ ಭೌತಿಕಾನ್ಯಖಿಲಾನ್ಯಪಿ ।
ನಶ್ಯಂತ್ಯೇವ ಸ್ವಭಾವೇನ ಕಿಂ ನಿತ್ಯಂ ಗಮ್ಯತೇಽನಘಾಃ ॥೭೯॥

ಬ್ರಹ್ಮಾನ್ತಾಃ ಸ್ತಂಬಪೂರ್ವಾಶ್ಚ ಚೇತನಾ ವಿವಿಧಾ ಅಪಿ ।
ನಶ್ಯಂತ್ಯೇವ ಸ್ವಭಾವೇನ ಕಿಂ ನಿತ್ಯಂ ಗಮ್ಯತೇಽನಘಾಃ ॥೮೦॥

ವಿಷ್ಣುರ್ವಿಶ್ವಜಗದ್ಯೋನಿಃ ಪ್ರಾದುರ್ಭಾವೈಸ್ಸ್ವಕೈಸ್ಸಹ ।
ವಿನಾಶಂ ಪ್ರಲಯೇ ಯಾತಿ ಕಿಂ ನಿತ್ಯಂ ಗಮ್ಯತೇಽನಘಾಃ ॥೮೧॥

ಲಯವಾಗುತ್ತದೆ. ಅಂಥ ಅಗ್ನಿಯು ತನಗೆ ಕಾರಣವಾದ ವಾಯುವಿನಲ್ಲಿ ಲಯವಾಗುತ್ತದೆ. ॥೭೭॥

ಅಂಥ ವಾಯುವು ತನಗೆ ಕಾರಣವಾದ ಆಕಾಶದಲ್ಲಿ ಲಯವಾಗುತ್ತದೆ. ಅಂಥ ಆಕಾಶವು, ತನಗೆ ಕಾರಣವಾದ ಆತ್ಮನಲ್ಲಿ ಲಯವಾಗುತ್ತದೆ. ಶಬ್ದಸ್ಪರ್ಶಾದಿ ವಿಷಯಗಳೂ ಆಕಾಶಾದಿಭೂತಗಳೂ ಎಲ್ಲವೂ ಸರ್ವಕಾರಣವಾದ ಬ್ರಹ್ಮನಲ್ಲಿ ಲಯವಾಗುತ್ತವೆ. ॥೭೮॥

ನಿರ್ದುಷ್ಟರಾದ ಋಷಿಗಳಿರಾ, ಹೀಗೆ ಭೂತಗಳೇ ನಾಶವನ್ನು ಹೊಂದುವುದರಿಂದ, ಅಂಥ ಭೂತಕಾರ್ಯವಾದ ಸಮಸ್ತಪ್ರಪಂಚವೂ ನಾಶವಾಗುವುದು ಸ್ವಭಾವವು. ಹೀಗಿರುವಾಗ ಬ್ರಹ್ಮ ಒಂದನ್ನು ಬಿಟ್ಟು ನಿತ್ಯವಾದ ಪದಾರ್ಥವು ಯಾವುದಿದೆ? ॥೭೯॥

ಸ್ತಂಬವನ್ನು ಮೊದಲುಮಾಡಿ ಚತುರ್ಮುಖಬ್ರಹ್ಮನವರೆಗೆ ಇರುವ ಸಮಸ್ತ ಜೀವರಾಶಿಗಳೂ ಸ್ವಭಾವವಾಗಿ ನಾಶವಾಗುವುವುಗಳೇ ಆದ್ದರಿಂದ ಬ್ರಹ್ಮವನ್ನು ವಿನಾ ಬೇರೆ ಯಾವ ನಿತ್ಯಪದಾರ್ಥವನ್ನು ಪಡೆಯಬಹುದು? ॥೮೦॥

ಪ್ರಳಯಕಾಲದಲ್ಲಿ ಸಾಕ್ಷಾದ್ವಿಷ್ಣುವೂ ಕೂಡ ತನ್ನ ಪರಿವಾರದಿಂದ ಕೂಡಿ ನಾಶವನ್ನು ಹೊಂದುತ್ತಾನೆ, ಆದ್ದರಿಂದ ಯಾವ ವಸ್ತುವನ್ನು ನಿತ್ಯವಾದುದೆಂದು ತಿಳಿಯೋಣ? ॥೮೧॥

ಅತಸ್ಸಾಕ್ಷಾತ್ಸ್ವಯಂಜ್ಯೋತಿಸ್ಸ್ವಭಾವಃ ಪರಮೇಶ್ವರಃ ।
ಏಕ ಏವ ದ್ವಿಜಾ ನಿತ್ಯಸ್ತತೋಽನ್ಯತ್ಸಕಲಂ ಮೃಷಾ ॥೮೨॥

ಅನಾತ್ಮಭೂತಂ ಸಕಲಂ ಜಡಾತ್ಮಕಂ
ಮೃಷೇತಿ ಪಶ್ಯನ್ ಶ್ರುತಿಭಿಶ್ಚ ಯುಕ್ತಿತಃ ।
ಕ್ರಮೇಣ ಶಂಭುಂ ಸತತೋದಿತಂ ಪ್ರಭುಂ
ಪ್ರಯಾತಿ ಸತ್ಯಂ ಪರಿಭಾಷಿತಂ ಮಯಾ ॥೮೩॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ನಿತ್ಯವಸ್ತುವಿಚಾರೋ ನಾಮ ಅಷ್ಟಾದಶಾಧ್ಯಾಯಃ

ಎಲೈ ಬ್ರಾಹ್ಮಣರೇ, ಸ್ವಯಂಪ್ರಕಾಶಸ್ವಭಾವನಾದ, ಅದ್ವಿತೀಯನಾದ ಪರಮೇಶ್ವರನೊಬ್ಬನೇ ನಿತ್ಯನಾದವನು. ಆ ಪರಮೇಶ್ವರನಿಂದ ಬೇರೆಯಾದವುಗಳೆಲ್ಲವೂ ಸುಳ್ಳಾದವುಗಳು, ಅಂದರೆ ಅನಿತ್ಯವಾದವು, ಮತ್ತು ತೋರಿಕೆಯ ಸ್ವಭಾವವುಳ್ಳವು. ॥೮೨॥

ಆತ್ಮನಲ್ಲದ ಸಕಲಪದಾರ್ಥಗಳೂ, ಜಡವಾದವುಗಳು. ಆದ್ದರಿಂದ ಇವುಗಳೆಲ್ಲವೂ ಅನಿತ್ಯಪದಾರ್ಥಗಳು ಎಂದು ಶ್ರುತಿಯಿಂದಲೂ ಯುಕ್ತಿಯಿಂದಲೂ ಯಾರು ತಿಳಿಯುತ್ತಾರೋ, ಅವರು ನನ್ನಿಂದ ಹೇಳಲ್ಪಟ್ಟ ನಿತ್ಯನಾದ, ವ್ಯಾಪಕನಾದ, ಯಾವಾಗಲೂ ಇರುತ್ತಿರುವ, ಆ ಪರಮೇಶ್ವರನನ್ನು ಪಡೆಯುತ್ತಾರೆ. ಎಂದು ಸೂತರು ಶೌನಕಾದಿಋಷಿಗಳನ್ನು ಕುರಿತು ಹೇಳಿದರು. ॥೮೩॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ನಿತ್ಯವಸ್ತುವನ್ನೂ ಅನಿನ್ಯವಸ್ತುಗಳನ್ನೂ ವಿವೇಚಿಸಿರುವ
ಹದಿನೆಂಟನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ಏಕೋನವಿಂಶಾಧ್ಯಾಯಃ ||

ಹತ್ತೊಂಬತ್ತನೆಯ ಅಧ್ಯಾಯವು

(ನಿತ್ಯವಸ್ತುವಿಚಾರಃ)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ನಿತ್ಯಂ ವಸ್ತು ಸಮಾಸತಃ ।
ಯದ್ಜ್ಞಾನೇನ ಶಿವಜ್ಞಾನಂ ಜಾಯತೇ ಸುದೃಢಂ ದ್ವಿಜಾಃ ||೧||

ಯ ಆತ್ಮಾ ಕೇವಲಶ್ಶುದ್ಧೋ ನಿರ್ವಿಕಾರೋ ನಿರಂಜನಃ ।
ಸ ಏವ ನಿತ್ಯಶ್ಚಿನ್ಮಾತ್ರಸ್ಸಾಕ್ಷೀ ಸರ್ವಸ್ಯ ಸರ್ವದಾ ||೨||

ಆತ್ಮನಿಂದ ಬೇರೆಯಾಗಿ ತೋರುತ್ತಿರುವ ಭೋಕ್ತೃಭೋಗ್ಯರೂಪವಾದ ಈ ಪ್ರಪಂಚವು ಅನಿತ್ಯವೆಂಬುದನ್ನು ವಿವರಿಸಿ ಈಗ ಆತ್ಮನ ನಿತ್ಯತ್ವವನ್ನು ವಿವರಿಸಲು ಈ ಅಧ್ಯಾಯವು ಅರಂಭವಾಗುತ್ತದೆ. ಸೂತನು ಹೇಳಿದನು. ಓ ಋಷಿಗಳೇ, ಈಗ ಆತ್ಮನ ವಿಷಯದಲ್ಲಿ ಬರಬಹುದಾದ ಅನಿತ್ಯತ್ವಶಂಕೆಯ ಪ್ರಕಾರಗಳನ್ನು ನಿವಾರಿಸುವುದಕ್ಕಾಗಿ ಸಂಗ್ರಹವಾಗಿ ನಿತ್ಯವಸ್ತುಸ್ವರೂಪವನ್ನು ಹೇಳುತ್ತೇನೆ. ಆ ಜ್ಞಾನದಿಂದ ಪರಶಿವನ ಸ್ವರೂಪಜ್ಞಾನವು ದೃಢವಾಗಿ ಆಗುತ್ತದೆ. ||೧||

ಮಾಯಾತತ್ಕಾರ್ಯರಹಿತನಾದುದರಿಂದ ನಿರ್ವಿಕಾರನಾಗಿ ನಿರಂಜನನಾಗಿರುವ, ಅದರಿಂದಲೇ ಶುದ್ಧನಾದ, ದ್ವಿತೀಯರಹಿತನಾದ, ಎಲ್ಲರಿಗೂ ಪ್ರತ್ಯಕ್ಸ್ವರೂಪನಾದ ಅತ್ಮನು ನಿತ್ಯವಾದವನೂ, ಜ್ಞಾನಮಾತ್ರಸ್ವರೂಪನಾದವನೂ, ಸರ್ವವನ್ನೂ ಕಾಲ

ಅನಿತ್ಯತಾ ಜಡಸ್ಯೈವ ನ ಚಿದ್ರೂಪಸ್ಯ ವಸ್ತುನಃ ।
ಅನಿತ್ಯತಾ ಚಿತಃ ಕೈಶ್ಚಿತ್ ನ ದೃಷ್ಟಾ ಖಲು ಸುವ್ರತಾಃ ॥೩॥

ಘಟಾದಿ ಪ್ರತ್ಯಯಸ್ಯಾಪಿ ನಾನಿತ್ಯತ್ವಂ ವಿಚಾರತಃ ।
ಚಿತ್ತವೃತ್ತಿನಿಮಿತ್ತಾ ಹಿ ಪ್ರತೀತಿಃ ಪ್ರತ್ಯಯಸ್ಯ ತು ॥೪॥

ತ್ರಯದಲ್ಲೂ ತಿಳಿಯುವ, ರಾಗ, ದ್ವೇಷ, ಅಭಿಮಾನಗಳ ಲೇಪವಿಲ್ಲದೆ ನೋಡುವವನಾದ, ಚೈತನ್ಯರೂಪನಾಗಿರುತ್ತಾನೆ. ||೨||

ಅನಿತ್ಯವಾಗಿರುವಿಕೆಯು ಜಡಪದಾರ್ಥಕ್ಕೆ ಮಾತ್ರ ಸಂಭವಿಸುತ್ತದೆ. ಜ್ಞಾನರೂಪವಾದ ತತ್ತ್ವಕ್ಕೆ ಅದು ಸಂಭವಿಸಲಾರದು. ಜ್ಞಾನರೂಪನಾದ ಸಾಕ್ಷಿಸ್ವರೂಪನಾದ ಆತ್ಮನಿಗೆ ಅನಿತ್ಯತ್ವವನ್ನು ಯಾವ ದಾರ್ಶನಿಕರೂ ಅಂಗೀಕರಿಸಿಲ್ಲವು. ಏಕೆಂದರೆ ಅನಿತ್ಯತ್ವವನ್ನು ನೋಡುವುದಕ್ಕೂ, ತಿಳಿಯುವುದಕ್ಕಾದರೂ ಒಂದು ಚೈತನ್ಯವು ಬೇಕೇಬೇಕಾಗುತ್ತದೆ. ಆ ಸಾಕ್ಷಿಚೈತನ್ಯವೇ ನಿತ್ಯನಾದ ಆತ್ಮನು. ||೩||

ಸಾಕ್ಷಿಚೈತನ್ಯಕ್ಕೆ ಅನಿತ್ಯತ್ವವಿಲ್ಲದೆ ಇರುವುದು ಮಾತ್ರವಲ್ಲ. ಅದರಂತೆಯೇ ಜ್ಞಾನರೂಪವಾದ 'ಅಯಂ ಘಟಃ', ಇದು ಗಡಿಗೆಯು, ಎಂಬ ಜ್ಞಾನವಾದರೂ ಅನಿತ್ಯವೆನ್ನಬಹುದೆ? ಎಂದರೆ, ಚೆನ್ನಾಗಿ ವಿಮರ್ಶಿಸಿ ನೋಡಿದರೆ ಅದಕ್ಕೂ ಅನಿತ್ಯವಾಗಿರುವಿಕೆ ಇಲ್ಲವು, ಎನ್ನಬೇಕು. ಏಕೆಂದರೆ ಇದು ಗಡಿಗೆಯು ಎಂಬ ಜ್ಞಾನವಾಗುವುದಕ್ಕಿಂತ ಮುಂಚೆ ಆ ಜ್ಞಾನವಿರದೆ ಇದ್ದದ್ದು ನಿಜ. ಅಷ್ಟುಮಾತ್ರದಿಂದ ಅಜ್ಞಾನವು ನಿತ್ಯವು ಎನ್ನಲಾಗದು. ಸತ್ತ್ವರಜಸ್ತಮೋರೂಪವಾದ ಅಂತಃಕರಣವು ಪ್ರತಿಯೊಂದು ಜ್ಞಾನವಾಗುವಾಗಲೂ ಸತ್ತ್ವಪರಿಣಾಮರೂಪವಾದ ಚಿತ್ತವೃತ್ತಿಯನ್ನು ಹೊಂದುತ್ತದೆ. ಆ ವೃತ್ತಿಯಲ್ಲಿ ಚೈತನ್ಯವು ಪ್ರತಿಬಿಂಬಿಸುತ್ತದೆ. ವಿಷಯವೂ ಇಂದ್ರಿಯವೂ ಸಂಬಂಧವನ್ನು ಪಡೆದು ಅದು ಮನಸ್ಸಿಗೆ ಬಂದಮೇಲೆ ಚಿತ್ತವೃತ್ತಿಯುಂಟಾಗುತ್ತದೆ. ಆ ವೃತ್ತಿಸಂಬಂಧದಿಂದ ಅದರಲ್ಲಿರುವ ಅನಿತ್ಯತ್ವವು ಚೈತನ್ಯದಲ್ಲೂ ಉಂಟಾದಂತೆ ತೋರುತ್ತದೆ. ಉಪಾಧಿಯು ತನ್ನ ಧರ್ಮವನ್ನು ಇತರವಸ್ತುವಿನಲ್ಲಿ ತೋರುವಂತೆ ಮಾಡುವ ಸ್ವಭಾವವುಳ್ಳದು. ಸ್ಫಟಿಕದಲ್ಲಿ ಜಪಾಕುಸುಮದ ಕೆಂಪು ತೋರುವ ಹಾಗೆ, ಅಷ್ಟೇಹೊರತು ವಾಸ್ತವವಾಗಿ ಚೈತನ್ಯದಲ್ಲಿ ವಿಕಾರವಾವುದೂ ಆಗುವುದಿಲ್ಲ. ಆದುದರಿಂದ ಹೀಗೆ ಚಿತ್ತವೃತ್ತಿಯನ್ನು ಅವಲಂಬಿಸಿ ಜ್ಞಾನವುಂಟಾಯಿತೆಂದು ವ್ಯವಹಾರವಿದೆ. ||೪||

ಪ್ರತ್ಯಯೇ ತು ಚಿದಾಕಾರೋ ವೃತ್ತ್ಯಾಕಾರಶ್ಚ ಸುವ್ರತಾಃ ।
ವಿದ್ಯತೇ ಮೋಹಮಾಹಾತ್ಮ್ಯಾತ್ ಏಕಾಕಾರಾವಭಾಸನಮ್ ॥೫॥

ಭಾವಾಂಶಃ ಕರಣಾಂಶಶ್ಚ ವಿದ್ಯತೇ ಪ್ರತ್ಯಯೇಽಪಿ ಚ ।
ಭಾವಾಂಶಸ್ತು ಚಿದಾಕಾರಃ ವೃತ್ತ್ಯಂತಃಕರಣಾಂಶತಃ ॥೬॥

ವೃತ್ತ್ಯಂಶ ಏವ ನಷ್ಟಸ್ತು ಜಡತ್ವಾತ್ ಕುಂಭವಸ್ತುವತ್ ।
ಚಿದಂಶೋ ನೈವ ನಷ್ಟಸ್ಸ್ಯಾತ್ ಅದೃಷ್ಟತ್ವಾತ್ತು ಕೇನಚಿತ್ ॥೭॥

ತತ್ರಾಪಿ ಜ್ಞಪ್ತಿಮಾತ್ರಸ್ಯ ವಿನಾಶೋ ನೈವ ದೃಶ್ಯತೇ ।
ವೃತ್ತಿಗ್ರಹಸ್ವಭಾವಸ್ಯ ಖಲು ನಾಶಃ ಪ್ರತೀಯತೇ ॥೮॥

ಪ್ರತಿಯೊಂದು ವೃತ್ತಿರೂಪವಾದ ಜ್ಞಾನದಲ್ಲೂ ಚಿದಂಶವೆಂದೂ ವೃತ್ತ್ಯಂಶವೆಂದೂ ಎರಡು ಭಾಗವಿದೆ. ಆದರೂ ಅವಿವೇಕದಿಂದ, ಸೂಕ್ಷ್ಮವಾಗಿ ವಿಂಗಡಿಸಿ ಪರಿಶೀಲಿಸದೆ ಇರುವುದೆಂಬ ಅಜ್ಞಾನದ ಮಹಿಮೆಯಿಂದ, ಆ ಜ್ಞಾನವು ಒಂದೇ ಆಗಿರುವಂತೆ ತೋರುತ್ತದೆ. ಹೀಗೆ ತೋರುವುದು ಭ್ರಮವೇ ಆಗಿದೆ. ॥೫॥

ಪ್ರತ್ಯಯಃ ಎಂಬ ಶಬ್ದದಲ್ಲೂ ಪ್ರಕೃತಿ ಪ್ರತ್ಯಯ ಎಂಬ ಎರಡು ಅಂಶಗಳೂ ಇವೆ. ಪ್ರತಿ ಎಂಬ ಉಪಸರ್ಗದೊಡನೆ ಕೂಡಿರುವ ಇ ಧಾತ್ವಂಶವೂ ಅ ಎಂಬ ಪ್ರತ್ಯಯಾಂಶವೂ ಸೇರಿ ' ಪ್ರತಿ ಇ ಅ, ಪ್ರತಿ ಏ ಅ, ಪ್ರತಿ ಅಯ್ ಅ, ಪ್ರತ್ಯಯ ' ಎಂದು ರೂಪವಾಗುವಂತೆ, ಪ್ರತಿಯೊಂದು ಜ್ಞಾನದಲ್ಲೂ ಧಾತ್ವರ್ಥದ ಸ್ಥಾನದಲ್ಲಿ ಚಿದಂಶವನ್ನೂ, ಪ್ರತ್ಯಯಾರ್ಥದ ಸ್ಥಾನದಲ್ಲಿ ವೃತ್ತಿಯ ಅಂಶವನ್ನೂ ಹೋಲಿಕೆಯಿಂದ ವಿಮರ್ಶಿಸಿ ತಿಳಿಯಬೇಕು. ॥೬॥

ಈ ಎರಡು ಅಂಶಗಳಲ್ಲಿ ವೃತ್ತ್ಯಂಶವೇ ನಷ್ಟವಾಗುತ್ತದೆ, ಏಕೆಂದರೆ ಅದು ಗಡಿಗೆಯ ಹಾಗೆ ಜಡವಾದುದು, ಮತ್ತು ಅದರ ಉತ್ಪತ್ತಿನಾಶಗಳು ನಮ್ಮ ಅನುಭವಕ್ಕೆ ಬರುತ್ತವೆ. ಹಾಗೆ ಚಿದಂಶವು ಯಾವಾಗಲೂ ನಷ್ಟವಾದುದಾಗಿ ಯಾರಿಂದಲೂ ಅನುಭವಿಸಲ್ಪಟ್ಟಿಲ್ಲವು, ಏಕೆಂದರೆ ಆ ನಾಶವನ್ನು ನೋಡುವುದಕ್ಕೂ, ತಿಳಿಯುವುದಕ್ಕೂ ಚೈತನ್ಯವು ಸಾಕ್ಷಿಯು ಬೇಕಾಗುತ್ತದೆ. ಆದುದರಿಂದ ಆ ಸಾಕ್ಷಿರೂಪವಾದ ಚೈತನ್ಯವು ನಾಶರಹಿತವಾಗಿರಬೇಕು. ॥೭॥

'ಇದು ಗಡಿಗೆಯು' ಎಂಬ ಜ್ಞಾನವು ' ಇದು ಬಟ್ಟೆಯು ' ಎಂಬ ಜ್ಞಾನವಿರುವಾಗ ಇರುವುದಿಲ್ಲ. ಆದುದರಿಂದ ಜ್ಞಾನದ ಉತ್ಪತ್ತಿಯೂ ನಾಶವೂ ಅನುಭವಕ್ಕೆ

ಅತೋ ನಾಶಪ್ರತೀತಿಸ್ತು ಪ್ರಭೋರ್ಭಾವಾಂಶಕಸ್ಯ ತು ।
ಚಿತ್ತವೃತ್ತಾವಭಿವ್ಯಕ್ತಂ ಚಿದಾಕಾರಂ ವಿಮೋಹಿತಾಃ ॥೯॥

ಜಾತಮಿತ್ಯಭಿಮನ್ಯಂತೇ ನ ವಿದ್ವಾಂಸಃ ಕದಾಚನ ।
ವೃತ್ತಿನಾಶೇನ ವೃತ್ತಿಸ್ಥಂ ಚಿದಾಕಾರಂ ಮುನೀಶ್ವರಾಃ ॥೧೦॥

ಅನಭಿವ್ಯಕ್ತಿತೋಽಜ್ಞಾನಾನ್ನಷ್ಟಮೇವೇತಿ ಮನ್ಯತೇ ।
ಅತಶ್ಚೈತನ್ಯಮಾತ್ರಸ್ಯ ನಾಸ್ತ್ಯನಿತ್ಯತ್ವಮಾಸ್ತಿಕಾಃ ॥೧೧॥

ಬರುವುವಲ್ಲವೆ? ಎಂದರೆ, ಆಗಲೂ ಜ್ಞಾನದ ಸಾಮಾನ್ಯರೂಪವಾದ ಚಿದಂಶಕ್ಕೆ ನಾಶವು ಅನುಭವಕ್ಕೆ ಬರುವುದಿಲ್ಲವು. ವಿಷಯೇಂದ್ರಿಯಸಂಯೋಗದಿಂದ ಆಗುವ ವೃತ್ತಿಯೇ ಉಂಟಾಗುತ್ತಲೂ ನಾಶಹೊಂದುತ್ತಲೂ ಇರುತ್ತದೆಯೇ ಹೊರತು ಚಿದಂಶವು ಎಂದಿನಂತೆ ಒಂದೇ ಸಮನಾಗಿರುತ್ತದೆ. ಹೀಗೆ ಜ್ಞಾನದಲ್ಲಿ ವಿಶೇಷಣವಾಗಿರುವ ವೃತ್ತಿಯ ಉತ್ಪತ್ತಿನಾಶಗಳಿಂದ ಜ್ಞಾನಕ್ಕೂ ಉತ್ಪತ್ತಿನಾಶಗಳಿರುವಂತೆ ಭ್ರಾಂತಿಯಿಂದ ತೋರುತ್ತದೆ. ॥೮॥

ಆದುದರಿಂದ ಜ್ಞಾನನಾಶದ ಅನುಭವವೂ ತೋರುವಾಗ ಜ್ಞಾನದಲ್ಲಿ ವಿಶೇಷಣವಾದ ವೃತ್ತಿನಾಶವೇ ತೋರುತ್ತದೆ. ಮುಖ್ಯವಾದ ಧಾತ್ವರ್ಥರೂಪವಾದ ಜ್ಞಾನಕ್ಕೆ ಚಿತ್ತವೃತ್ತಿಯಲ್ಲಿ ಪ್ರತಿಫಲಿಸಿರುವಿಕೆಯಿಂದ ಅಜ್ಞಾನಿಗಳಾದ ಜನರು ಉತ್ಪತ್ತಿಯಾಯಿತೆಂದೂ ಭ್ರಾಂತಿಯಿಂದ ತಿಳಿಯುತ್ತಾರೆ. ವಿವೇಚನಮಾಡಬಲ್ಲವರು ಮಾತ್ರ ಇದನ್ನು ಸರಿಯಾಗಿ ಎಂದರೆ ವೃತ್ತ್ಯಂಶಕ್ಕೆ ನಾಶವೇ ಹೊರತು ಚಿದಂಶಕ್ಕೆ ನಾಶವಿಲ್ಲವೆಂದು ತಿಳಿಯುತ್ತಾರೆ. ಜ್ಞಾನಕ್ಕೆ ಆತ್ಮಮನಸ್ಸುಗಳ ಸಂಯೋಗವು ಅಸಮವಾಯಿಕಾರಣವು; ಆತ್ಮನು ಸಮವಾಯಿಕಾರಣವು. ಜ್ಞಾನವು ಬೇಗ ನಾಶವನ್ನು ಪಡೆಯುವ ಸ್ವಭಾವವುಳ್ಳದೆಂದು ವೈಶೇಷಿಕದರ್ಶನಕಾರರು ಹೇಳುವುದಕ್ಕೂ ಈ ವಿಶೇಷ ವಿವೇಚನೆ ಇಲ್ಲದಿರುವಿಕೆಯೇ ಕಾರಣವಾಗಿದೆ. ॥೯-೧೦॥

ಪ್ರತಿಯೊಂದು ವೃತ್ತಿರೂಪವಾದ ಜ್ಞಾನದಲ್ಲೂ ಚೈತನ್ಯವು ಅಭಿವ್ಯಕ್ತಿಯನ್ನು ವೃತ್ತಿಯ ಉತ್ಪತ್ತಿಯಿಂದ ಪಡೆದಂತೆ ತೋರುತ್ತದೆ. ಹಾಗೆಯೇ ವೃತ್ತಿಯು ನಷ್ಟವಾದರೆ ಚಿದಂಶವೂ ನಾಶವನ್ನು ಪಡೆದಂತೆ ವಿವೇಚನೆ ಇಲ್ಲದಿರುವಿಕೆ ಎಂಬ ಅಜ್ಞಾನದಿಂದ ತೋರುತ್ತದೆ. ಆದುದರಿಂದ ಚೈತನ್ಯಮಾತ್ರವೇ ಸ್ವರೂಪವಾಗಿ ಉಳ್ಳ ಆತ್ಮನಿಗೆ ಅನಿತ್ಯತ್ವವು ಸಂಭವಿಸಲಾರದು. ॥೧೧॥

ಜ್ಞಾತಾಜ್ಞಾತಾರ್ಥಜಾತಸ್ಯ ಯಸ್ಸಾಕ್ಷೀ ಭಾಸತೇ ಸ್ವಯಮ್ ।
ಸ ಏವ ಸಾಕ್ಷಾಚ್ಚಿನ್ಮಾತ್ರಃ ಸ್ವಭಾವಾತ್ಮಾ ನ ಚಾಪರಃ ॥೧೨॥

ತಸ್ಯ ಜನ್ಮವಿನಾಶೌ ತು ನ ವಿದ್ಯೇತೇ ವಿಚಾರತಃ ।
ಜನ್ಮಕಾಲೇ ತು ಸಾಕ್ಷಿತ್ವಾತ್ ಜನ್ಮನೋ ಜನಿರಸ್ಯ ನ ॥೧೩॥

ವಿನಾಶ(ಶೇ)ಸಾಕ್ಷಿಣೋ ನಾಶಃ ತಥಾ ನೈವ ಭವಿಷ್ಯತಿ ।
ಸತ್ತಾಕಾಲೇ ತು ಸತ್ತ್ವಾಚ್ಚ ವಿನಾಶಸ್ಸುತರಾಂ ನ ಹಿ ॥೧೪॥

ಜನ್ಮನಾಶಪ್ರತೀತಿಸ್ತು ನಾಂತರೇಣೈವ ಸಾಕ್ಷಿಣಮ್ ।
ಜನ್ಮನಾಶೌ ಮುನಿಶ್ರೇಷ್ಠಾಃ ಸ್ವತ ಏವ ನ ಸಂಶಯಃ ॥೧೫॥

ಜ್ಞಾನಕ್ಕೆ ವಿಷಯವಾದ, ಗೋಚರವಾಗದೆ ಇರುವ, ಪದಾರ್ಥಗಳನ್ನು ತಿಳಿಯುವ ಸಾಕ್ಷಿಯು ತಾನೇ ತೋರುತ್ತದೆ. ಆ ಸಾಕ್ಷಿಯು ಜ್ಞಾನಮಾತ್ರವೇ ಸ್ವಭಾವವಾಗಿರುವುದರಿಂದ ಜ್ಞಾನಸ್ವರೂಪವಾಗಿರುವವನು. ಅವನಿಗೆ ಬೇರೆ ರೂಪ ವಿಲ್ಲವು. ||೧೨||

ಆ ಸಾಕ್ಷಿಗೂ ಉತ್ಪತ್ತಿವಿನಾಶಗಳು ಇಲ್ಲವು. ವಿಮರ್ಶೆಯಿಂದ ನೋಡಿದರೆ ಸಾಕ್ಷಿಗೂ ಜನ್ಮವುಂಟೆಂದರೆ ಆ ಉತ್ಪತ್ತಿಯನ್ನೂ ನೋಡುವ, ತಿಳಿಯುವ ಸಾಕ್ಷಿಯೊಬ್ಬನು ಬೇರೆ ಇರಬೇಕಾಗುತ್ತದೆ. ಹೀಗೆ ಅನವಸ್ಥಾದೋಷನಿವಾರಣೆಗಾಗಿ ಸಾಕ್ಷಿಗೆ ಜನ್ಮವಿಲ್ಲವೆನ್ನಬೇಕು. ||೧೩||

ಸಾಕ್ಷಿಗೆ ನಾಶವಿಲ್ಲವು. ಏಕೆಂದರೆ ಆ ವಿನಾಶವನ್ನು ತಿಳಿಯುವುದಕ್ಕೂ ಸಾಕ್ಷಿಯ ಆವಶ್ಯಕತೆ ಇರುತ್ತದೆ. ಆದುದರಿಂದ ಅನವಸ್ಥಾದೋಷನಿವಾರಣೆಗಾಗಿ ಸಾಕ್ಷಿಗೆ ನಾಶವಿಲ್ಲವೆನ್ನಬೇಕಾಗುತ್ತದೆ. ಸಾಕ್ಷಿಯು ತೋರುವಾಗಲಂತು ಸಾಕ್ಷಿಗೆ ನಾಶವು ಇಲ್ಲವೇ ಇಲ್ಲವು. ಸಾಕ್ಷಿ ಇಲ್ಲದಿದ್ದರೂ ವೃತ್ತಿಯಿಂದ ಕೂಡಿದ ಚೈತನ್ಯ ದಿಂದಲೇ ತಿಳುವಳಿಕೆಯುಂಟಾಗುತ್ತದೆ ಎನ್ನಲಾಗದು. ||೧೪||

ಸಾಕ್ಷಿಗೆ ಜನ್ಮವೂ ನಾಶವೂ ಉಂಟೆಂದು ಹೇಳಬೇಕಾದರೆ ಆ ತಿಳಿವಳಿಕೆ ಯನ್ನು, ಪ್ರತೀತಿಯನ್ನು, ತಿಳಿಯದೆ ಹೇಳಲಾಗುವುದಿಲ್ಲ. ಅದನ್ನು ತಿಳಿಯಲು ಸಾಕ್ಷಿ ಇರಬೇಕಾಗುತ್ತದೆ. ಆದ್ದರಿಂದ ಸಾಕ್ಷಿಗೆ ಜನ್ಮನಾಶಗಳು ಸಂಭವಿಸಲಾರವು. ಸಾಕ್ಷಿಯು ನಿತ್ಯನು. ಜನ್ಮನಾಶಗಳು ಸ್ವತಏವ ತೋರವು. ||೧೫||

ದೃಶ್ಯತ್ವೇನ ಜಡತ್ವಾಚ್ಚ ಘಟಕುಡ್ಯಾದಿವಸ್ತುವತ್ ।
ಸಾಕ್ಷಿಣೋ ಜನ್ಮನಾಶೌ ತು ನ ಚಾನ್ಯೇನೈವ ಸಿಧ್ಯತಃ ॥೧೬॥

ಜಡರೂಪೇಣ ಚಾನ್ಯೇನ ಜನ್ಮನಾಶೌ ನ ಸಿಧ್ಯತಃ ।
ಸಾಕ್ಷಿರೂಪೇಣ ಚಾನ್ಯೇನ ಜನ್ಮನಾಶೌ ನ ಸಿಧ್ಯತಃ ॥೧೭॥

ಅಭಾವಾದೇವ ಚಾನ್ಯಸ್ಯ ಸಾಕ್ಷಿರೂಪಸ್ಯ ಸುವ್ರತಾಃ ।
ಸಾಕ್ಷ್ಯಾಕಾರೇಣ ಚೈಕತ್ವಾತ್ ಸಾಕ್ಷಿಭೇದೋ ನ ಸಿಧ್ಯತಿ ॥೧೮॥

ಆಯಾಯ ವೃತ್ತಿಯಿಂದ ಕೂಡಿದ ಚೈತನ್ಯವೇ ಸಾಕ್ಷಿಯಾದುದರಿಂದ ಜನ್ಮನಾಶಗಳು ಸಾಕ್ಷಿಗಿಂತ ಬೇರೆಯಾದ ಚೈತನ್ಯದಿಂದ ತೋರಲಾರವು. ಆ ಬೇರೆಯಾದ ವಸ್ತುವು ಜಡವೋ, ಚೇತನವೋ, ಎಂದು ವಿಕಲ್ಪಿಸಿದರೆ, ಜಡದಿಂದ ತೋರಲಾರವು; ಏಕೆಂದರೆ ಜಡವು ಪ್ರಕಾಶಕವಾಗಲಾರದು. ಚೇತನವೆಂದರೆ ಅದು ಸಾಕ್ಷಿರೂಪವೇ ಆಗುತ್ತದೆ. ಅಲ್ಲದೆ ಜನ್ಮನಾಶಗಳೂ ಘಟ ಮೊದಲಾದವುಗಳ ಹಾಗೆ ದೃಶ್ಯಗಳಾದುದರಿಂದ ಜಡರೂಪವಾದುದರಿಂದ ಜನ್ಮನಾಶಗಳನ್ನು ಪ್ರಕಾಶ ಪಡಿಸಲಾರವು. ಇನ್ನೊಬ್ಬ ಸಾಕ್ಷಿಯಿಂದಲೂ ಜನ್ಮನಾಶಗಳು ತೋರಲಾರವು. ಏಕೆಂದರೆ ಇನ್ನೊಬ್ಬ ಸಾಕ್ಷಿಯು ಅನಾವಶ್ಯಕವು. ದೃಶ್ಯಕ್ಕೆ ಗ್ರಾಹಕನಾದ ಸಾಕ್ಷಿಯ ಅಪೇಕ್ಷೆ ಇದೆಯೇ ಹೊರತು ಗ್ರಾಹಕವಾದ, ಪ್ರಕಾಶಕವಾದ, ಸ್ವಪ್ರಕಾಶವಾದ ಚೈತನ್ಯಕ್ಕೆ ಗ್ರಾಹಕಾಂತರದ ಅಪೇಕ್ಷೆ ಇಲ್ಲವು. ಇದೆ ಎನ್ನುವುದಾದರೆ, ಅನವಸ್ಥಾ ದೋಷ ಬರುತ್ತದೆ. ॥೧೬॥

ಸಾಕ್ಷಿಯ ಜನ್ಮನಾಶಗಳನ್ನು ಇನ್ನೊಂದು ಜಡವಸ್ತುವಿನಿಂದ ತಿಳಿಯಲಾಗುವುದಿಲ್ಲ, ಏಕೆಂದರೆ ಜಡವಸ್ತುವಿಗೆ ತಿಳಿಯುವ ಶಕ್ತಿ ಇಲ್ಲವು. ಹಾಗೆಯೇ ಅವು ಇನ್ನೊಬ್ಬ ಸಾಕ್ಷಿಯಿಂದಲೂ ತಿಳಿಯಲಾಗುವುದಿಲ್ಲ, ಅಂಥ ಸಾಕ್ಷಿಯು ಇರುವುದರಲ್ಲಿ ಪ್ರಮಾಣವೇ ಇಲ್ಲವು. ॥೧೭॥

ಈ ಕಾರಣದಿಂದಲೇ ಇನ್ನೊಬ್ಬ ಸಾಕ್ಷಿ ಇದಾನೆಂದು ಹೇಳುವುದಾದರೆ ಆ ಸಾಕ್ಷಿಗೂ ಮೊದಲಿನ ಸಾಕ್ಷಿಗೂ ಸಾಕ್ಷಿರೂಪದಿಂದ ಭೇದವಿಲ್ಲವು. ಘಟಸಾಕ್ಷೀ, ಪಟಸಾಕ್ಷೀ ಎಂಬ ವ್ಯವಹಾರಕ್ಕೆ ವಿಷಯಭೇದವು ಕಾರಣವು. ಆ ಭೇದವು ವಿಷಯದಲ್ಲಿದೆಯೇ ಹೊರತು ಸಾಕ್ಷಿಯಲ್ಲಿಲ್ಲವು. ಆದುದರಿಂದ ಸಾಕ್ಷಿಭೇದವು ಸಿದ್ಧಿಸುವುದಿಲ್ಲವು. ॥೧೮॥

ಸಾಕ್ಷ್ಯರೂಪೇಣ ಭೇದಸ್ತು ಸಾಕ್ಷ್ಯಸ್ಯೈವ ನ ಸಾಕ್ಷಿಣಃ ।
ಸಾಕ್ಷಿಮಾತ್ರತಯಾ ಭೇದಾ ಭಾವೇಽನ್ಯಸ್ಯೈವ ಸಾಕ್ಷಿಣಃ ॥೧೯॥

ವಿಶೇಷಾಕಾರತೋ ಭೇದಂ ವದಂತಿ ಭುವಿ ಕೇಚನ ।
ತೇ ಮಹಾಮೋಹಸರ್ಪೇಣ ದಷ್ಟಾ ಏವ ನ ಸಂಶಯಃ ॥೨೦॥

ವಿಶೇಷರೂಪಂ ಚಿದ್ರೂಪಂ ಜಡರೂಪಂ ತು ವಾ ಭವೇತ್ ।
ನ ರೂಪಾಂತರಮೇವ ಸ್ಯಾತ್ ತಾದೃಶಸ್ಯಾನಿರೂಪಣಾತ್ ॥೨೧॥

ಚಿದ್ರೂಪಂ ಸಾಕ್ಷಿಮಾತ್ರಂ ಸ್ಯಾತ್ ನ ಚಾನ್ಯತ್ಪರಮಾರ್ಥತಃ ।
ಜಡರೂಪಂ ತು ನಾಸ್ತ್ಯೇವ ಸಾಕ್ಷಿಣಃ ಪರಮಾರ್ಥತಃ ॥೨೨॥

ಸಾಕ್ಷ್ಯಗಳಾದ, ತಿಳಿವಳಿಕೆಗೆ ವಿಷಯವಾಗಿರುವ, ಘಟ ಪಟ ಮುಂತಾದ ವಸ್ತುಗಳು ಬೇರೆ ಬೇರೆ ಆಗಿರುವುದರಿಂದ ಅವನ್ನು ತಿಳಿಯುವ ಸಾಕ್ಷಿಗಳಿಗೂ ಭೇದವಿರಲಿ ಎನ್ನಲಾಗುವುದಿಲ್ಲ. ಏಕೆಂದರೆ ಆ ಭೇದವು ವಿಷಯಗಳಲ್ಲಿರಬಹುದೇ ಹೊರತು ಅವು ಸಾಕ್ಷಿಗೆ ಸಂಬಂಧಿಸಲಾರವು. ಹೀಗೆ ಮೇಲೆ ಹೇಳಿದ ಎರಡು ಸಾಕ್ಷಿಗಳಿಗೂ ಸಾಕ್ಷಿ ಎಂಬ ರೂಪದಲ್ಲಿ ಭೇದವಿಲ್ಲದಿದ್ದರೂ, ಕೆಲವರು ವಿಜ್ಞಾನ ವಾದಿಗಳು ವಿಷಯಾಕಾರವಾದ ವೃತ್ತಿಭೇದದಿಂದ ಆ ಸಾಕ್ಷಿಗಳಿಗೂ ಭೇದವಿದೆ ಎಂದು ಹೇಳುವುದು ಅಜ್ಞಾನದ ಮಾತೇ ಹೊರತು ಪ್ರಾಮಾಣಿಕವಲ್ಲವು. ಪ್ರಮಾಣ ವಿಲ್ಲದೆ ಪ್ರಮೇಯಗಳನ್ನು ಒಪ್ಪಲಾಗದು. ||೧೯-೨೦||

ಸಾಕ್ಷಿಗೆ ವಿಷಯಭೇದದಿಂದ ಭೇದವಾಗುತ್ತಿದೆ ಎನ್ನುವ ಆ ವಿಶೇಷರೂಪವು ಚಿದ್ರೂಪವಾದುದೇ? ಜಡರೂಪವಾದುದೇ? ಎಂದು ವಿಕಲ್ಪಿಸಿ ಅದು ಚಿದ್ರೂಪವಾದರೆ ಸಾಕ್ಷಿಚೇತನರೂಪವೇ ಆಗುತ್ತದೆ. ಜಡರೂಪವಾದರೆ ಸಾಕ್ಷ್ಯರೂಪವೇ ಆಗುತ್ತದೆ. ಇವೆರಡಕ್ಕಿಂತ ಬೇರೆಯಾದ ವಸ್ತುವು ಯಾವುದೂ ಸಿದ್ಧಿಸುವುದಿಲ್ಲ. ||೨೧||

ಆ ವಿಶೇಷರೂಪವಾದ ಚಿದ್ರೂಪವು ಸಾಕ್ಷಿರೂಪವಾದುದೇ ಹೊರತು ವಾಸ್ತವ ವಾಗಿ ಬೇರೆಯಾದುದಲ್ಲವು. ಹಾಗಲ್ಲದೆ ಅದು ಜಡರೂಪವೆಂದರೆ, ಸಾಕ್ಷಿಯು ಚೇತನರೂಪನಾದುದರಿಂದ ಅವನಲ್ಲಿ ಜಡತ್ವವು ಸಂಬಂಧಿಸುವುದಿಲ್ಲವು. ಏಕೆಂದರೆ-ಪ್ರಕಾಶವೂ ಕತ್ತಲೆಯೂ ಒಂದೆಡೆಯಲ್ಲಿ ವಾಸ್ತವವಾಗಿ ಇರುವುದು ವಿರುದ್ಧವಾದುದು. ||೨೨||

ಚಿದ್ರೂಪಸ್ಯ ಜಡಾಕಾರೋ ವಿರೋಧಾನ್ನೈವ ಸಿಧ್ಯತಿ ।
ಪ್ರಕಾಶಸ್ಯ ತಮೋರೂಪಂ ಯಥಾ ಲೋಕೇ ನ ಸಿಧ್ಯತಿ ॥೨೩॥

ಅತೋ ವಿಶೇಷಾಕಾರೇಣ ಭೇದಂ ಯೇ ಸರ್ವಸಾಕ್ಷಿಣಃ ।
ವದಂತಿ ತೇ ಮಹಾಭ್ರಾಂತಾಃ ನಿಮಗ್ನಾಶ್ಚ ಭವಾರ್ಣವೇ ॥೨೪॥

ಆತ್ಮನಸ್ಸರ್ವಸಾಕ್ಷಿತ್ವಂ ಏಕತ್ವಂ ಚ ತಥೈವ ಚ ।
ನಿತ್ಯತ್ವಂ ಚೈವ ಶುದ್ಧತ್ವಂ ಭೂಮಾನಂದತ್ವಮೇವ ಚ ॥೨೫॥

ಈ ಲೋಕದಲ್ಲಿ ನಮ್ಮೆಲ್ಲರ ಅನುಭವದಲ್ಲಿ ಬೆಳಕಿಗೆ ಕತ್ತಲೆಯ ರೂಪವು ಹೇಗೆ ಸಂಬಂಧಿಸಿರಲಾರದೋ ಹಾಗೆಯೇ, ಚೇತನವಾದ ಸಾಕ್ಷಿಗೆ ಜಡಾಕಾರವು ಎಂದರೆ, ಜಡವಾದ ವಿಷಯದ ಸ್ವಭಾವವನ್ನು ಹೊಂದುವುದು, ವಿರುದ್ಧವಾದುದ ರಿಂದ ಸಂಭವಿಸುವುದಿಲ್ಲವು. ॥೨೩॥

ಆದುದರಿಂದ ವಿಷಯಭೇದದಿಂದಾಗುವ ಈ ಪ್ರಾಪಂಚಿಕವಾದ ಎಲ್ಲ ಬಗೆಯ ಪದಾರ್ಥಗಳ ಸಮೂಹ ಎಲ್ಲಕ್ಕೂ ಸಾಕ್ಷಿಯಾಗಿರುವ ।ಚೇತನಕ್ಕೂ ಭೇದವಾಗುತ್ತ ದೆನ್ನುವ ವಿಜ್ಞಾನವಾದಿಗಳ ಮಾತು ಭ್ರಾಂತಿಮೂಲಕವಾದುದೇ ಹೊರತು ಪ್ರಾಮಾ ಣಿಕವಾದುದಲ್ಲವು. ಏಕೆಂದರೆ ವಿಷಯಗಳು ನಾನಾಬಗೆಯಾಗಿದ್ದರೂ ಅವನ್ನು ನೋಡುವ ದೃಗ್ರೂಪನಾದ ಆತ್ಮನಿಗೆ ಭೇದವಾಗುವುದಿಲ್ಲವು. ಸಾಕ್ಷಿಯು ಈ ಎಲ್ಲ ತಿಳಿವಳಿಕೆಯಲ್ಲೂ ಸಾಕ್ಷಿಸ್ವರೂಪದಲ್ಲಿ ಅಭಿನ್ನನೇ ಆಗಿರುತ್ತಾನೆ. ವಿಷಯಗಳಂತು ಅನಿತ್ಯಗಳೂ ಜಡಗಳೂ ಆಗಿರುತ್ತಾ ತೋರಿಕೆಯಸ್ವಭಾವವುಳ್ಳವಾಗಿರುವುದರಿಂದ ಅವಾಸ್ತವವಾದ ವಿಷಯಗಳಿಂದ ವಾಸ್ತವವಾದ ಭೇದವು ಸಿದ್ಧಿಸುವುದಿಲ್ಲವೆಂದು ಅಭಿಪ್ರಾಯವು. ಹೀಗಿದ್ದರೂ ಭೇದವನ್ನು ನಂಬುವವರು ವಾಸ್ತವವಾದ ಅದ್ವೈತಾ ತ್ಮಸ್ವರೂಪದ ಅಜ್ಞಾನಮೂಲಕವಾದ ಸಂಸಾರಸಾಗರದಲ್ಲಿ ಮುಳುಗಿರುತ್ತಾರೆ. ॥೨೪॥

ಮೇಲೆ ಹೇಳಿದ ಹಾಗೆ ಚೇತನಸ್ವಭಾವವುಳ್ಳ ಸಾಕ್ಷಿಯ ಇರುವಿಕೆಯಲ್ಲಿ ಶ್ರುತಿಪ್ರಮಾಣವನ್ನೂ ತೋರಿಸುತ್ತಾರೆ. 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' ಶ್ವೇತಾಶ್ವತರೋಪನಿಷತ್, ೬.೧೧. ಎಂಬುದು ಆತ್ಮನಿಗೆ ಸರ್ವಸಾಕ್ಷಿತ್ವವನ್ನೂ 'ಏಕಮೇವಾದ್ವಿತೀಯಂ ಬ್ರಹ್ಮ,' 'ಏಕೋ ದೇವಸ್ಸರ್ವಭೂತೇಷು ಗೂಢಃ,' ಎಂಬುದು ಏಕತ್ವವನ್ನೂ, 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ,' ಎಂದು ನಿತ್ಯತ್ವವನ್ನೂ, 'ಅಸ್ಥಾವಿರಂ ಶುದ್ಧಮಪಾಪವಿದ್ಧಂ' ಎಂದು ಶುದ್ಧತ್ವವನ್ನೂ,

ಬ್ರಹ್ಮತ್ವಂ ಚ ದ್ವಿಜಾ ವೇದಾ ವದಂತಿ ಶ್ರದ್ಧಯಾ ಸಹ ।
ಸ್ಮೃತಯಶ್ಚ ಪುರಾಣಾನಿ ಭಾರತಾದೀನಿ ಚಾಸ್ತಿಕಾಃ ॥೧೬॥

ಮಹಾದೇವಶ್ಚ ವಿಷ್ಣುಶ್ಚ ಬ್ರಹ್ಮಾ ಚ ಮುನಯಸ್ತಥಾ ।
ನಿತ್ಯತ್ವಂ ಶುದ್ಧಬುದ್ಧತ್ವಂ ಆತ್ಮನಃ ಪ್ರವದಂತಿ ಹಿ ॥೧೭॥

ತಸ್ಮಾದಾತ್ಮೈವ ವಿಪ್ರೇಂದ್ರಾಃ ನಿತ್ಯಂ ವಸ್ತು ನ ಚಾಪರಮ್ ।
ಜಿಹ್ವಾಯಾಂ ಪರಶುಂ ತಪ್ತಂ ಧಾರಯಾಮಿ ನ ಸಂಶಯಃ ॥೧೮॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ನಿತ್ಯವಸ್ತುವಿಚಾರೋ ನಾಮ ಏಕೋನವಿಂಶಾಧ್ಯಾಯಃ

'ಯೋ ವೈ ಭೂಮಾ ತತ್ಸುಖಂ' ಎಂದು ಭೂಮಾತ್ಮಕತ್ವವನ್ನೂ 'ವಿಜ್ಞಾನಮಾನಂದಂ ಬ್ರಹ್ಮ' ಎಂದು ಆನಂದಬ್ರಹ್ಮಾತ್ಮಕತ್ವವನ್ನೂ, ಶ್ರುತಿವಾಕ್ಯಗಳು ಆದರದೊಡನೆ ತಾತ್ಪರ್ಯದಿಂದ ತಿಳಿಸುತ್ತವೆ. ಹಾಗೆಯೇ ಸ್ಮೃತಿಗಳೂ, ಪುರಾಣಗಳೂ, ಭಾರತ ಮುಂತಾದ ಇತಿಹಾಸಗಳೂ ಈ ವಿಷಯವನ್ನೇ ಸಾರುತ್ತಿವೆ. ||೧೫-೧೬||

ಈ ವೇದಾದಿ ಪ್ರಮಾಣಗಳಂತೆಯೇ ಮಹಾದೇವ, ವಿಷ್ಣು, ಬ್ರಹ್ಮರೆಂಬ ತ್ರಿಮೂರ್ತಿಗಳೂ, ಯಾಜ್ಞವಲ್ಕ್ಯಾದಿ ಋಷಿಗಳೂ ಆತ್ಮನು ನಿತ್ಯನೆಂದೂ, ಶುದ್ಧನೆಂದೂ, ಜ್ಞಾನರೂಪನೆಂದೂ ಸಾರಿಹೇಳುತ್ತಿದಾರೆ. ಆದುದರಿಂದ ಓ ಬ್ರಾಹ್ಮಣಶ್ರೇಷ್ಠರಿರಾ, ಆತ್ಮವಸ್ತು ಒಂದೇ ನಿತ್ಯವಾದ ತತ್ತ್ವವು, ಇನ್ನೊಂದೂ ನಿತ್ಯವಾದುದಲ್ಲವು. ಎಂದು ನಾನು ನಾಲಿಗೆಯಲ್ಲಿ ಕಾದ ಕೊಡಲಿಯನ್ನು ಧರಿಸಿ ಹೇಳಿ ಈ ತತ್ತ್ವವನ್ನು ದಿವ್ಯಪ್ರಮಾಣದಿಂದಲೂ ತೋರಿಸಿಕೊಡಬಲ್ಲೆನು. ಇದರಲ್ಲಿ ಸಂದೇಹವಿಲ್ಲವು, ಎಂದು ಸೂತರು ಹೇಳುತ್ತಾರೆ. ||೧೭-೧೮||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ನಿತ್ಯವಸ್ತುವಿನ ಸ್ವರೂಪವನ್ನು ವಿವರಿಸಿರುವ
ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

॥ ವಿಂಶೋಽಧ್ಯಾಯಃ ॥

ಇಪ್ಪತ್ತನೆಯ ಅಧ್ಯಾಯವು

(ವಿಶಿಷ್ಟಧರ್ಮವಿಚಾರಃ)

॥ ಸೂತ ಉವಾಚ ॥

ಅಥಾತಸ್ಸಂಪ್ರವಕ್ಷ್ಯಾಮಿ ವಿಶಿಷ್ಟಂ ಧರ್ಮಮಾದರಾತ್ ।
ಶ್ರುಣ್ಯುತಾತ್ಯಂತಕಲ್ಯಾಣಂ ಮುನಯಃ ಪರಯಾ ಮುದಾ ॥೧॥

ಪುರಾ ವೇದವಿದಾಂ ಮುಖ್ಯಾಃ ಕಾವಶೇಯಾ ಮಹರ್ಷಯಃ ।
ಸತ್ರಾವಸಾನೇ ಸಂಭೂಯ ಶ್ರದ್ಧಯಾ ಪರಯಾ ಸಹ ॥೨॥

ಮೇಲೆ ಹೇಳಿದಂತೆ ಆತ್ಮಸ್ವರೂಪವೇ ನಿತ್ಯವಾಗಿರುವಿಕೆಯು. ಆತ್ಮಜ್ಞಾನವೇ ವೇದಾಂತವಾಕ್ಯಗಳ ಮುಖ್ಯತಾತ್ಪರ್ಯವು. "ಅಯಂ ಹಿ ಪರಮೋ ಧರ್ಮಃ ಯದ್ಯೋಗೇನಾತ್ಮದರ್ಶನಂ" ಎಂಬಂತೆ ಈ ಆತ್ಮಪರಶಿವಾಭೇದಜ್ಞಾನವೇ ಪರಮ ಧರ್ಮವು. ಆದುದರಿಂದ ಎಲೈ ಋಷಿಗಳಿರಾ, ನಿತ್ಯಾನಿತ್ಯವಸ್ತುಸ್ವರೂಪವನ್ನು ಹೇಳಿ ಬಹಳ ಪ್ರೀತಿಯಿಂದ ಈಗ ಉತ್ಕೃಷ್ಟವಾದಂಥ ಧರ್ಮವಿಶೇಷವನ್ನು ಹೇಳುತ್ತೇನೆ. ಮಂಗಳಕರವಾದ ಈ ಧರ್ಮವನ್ನು ನೀವೆಲ್ಲರೂ ಸಂತೋಷದಿಂದ ಕೇಳಿರಿ—ಎಂದು ಸೂತರು ಶೌನಕಾದಿಋಷಿಗಳನ್ನು ಕುರಿತು ಹೇಳಿದರು. ॥೧॥

ಪೂರ್ವದಲ್ಲಿ ವೇದಜ್ಞರಾದ ಋಷಿಗಳಲ್ಲಿ ಮುಖ್ಯರಾದ ಕಾವಶೇಯರೆಂಬ ಮಹರ್ಷಿಗಳು ತಾವು ಮಾಡಬೇಕಾದ ಯಜ್ಞವನ್ನು ಸಂಪೂರ್ಣಮಾಡಿ ಧರ್ಮ ವಿಚಾರಮಾಡಲೋಸುಗ ಒಟ್ಟಾಗಿ ಸಭೆಯಲ್ಲಿ ಸೇರಿದರು. ॥೨॥

ವಿಚಾರ್ಯರ್ಜ ಸುಚಿರಂ ಕಾಲಂ ವಿಶಿಷ್ಟಂ ಧರ್ಮಮಾಸ್ತಿಕಾಃ ।
ಪುನಸ್ಸಂಶಯಮಾಪನ್ನಾ ವಿಷಣ್ಣಾ ವಿವಶಾಶ್ಚ ತೇ ॥೩॥

ಗತ್ವಾ ಹಿಮವತಃ ಪಾರ್ಶ್ವಂ ತ್ರಿಕಾಲಸ್ನಾನಸಂಯುತಾಃ ।
ಭಸ್ಮೋದ್ಧೂಳಿತಸರ್ವಾಂಗಾಸ್ತ್ರಿಪುಂಡ್ರಾಂಕಿತಮಸ್ತಕಾಃ ॥೪॥

ರುದ್ರಾಕ್ಷಮಾಲಾಭರಣಾ ಜಟಾವಲ್ಕಲಸಂಯುತಾಃ ।
ಲಿಂಗಾರ್ಚನಪರಾ ನಿತ್ಯಂ ಶಂಭೋರಮಿತತೇಜಸಃ ॥೫॥

ತಪ್ತವನ್ತಸ್ತಪಸ್ಸರ್ವೇ ವತ್ಸರಾಣಾಂ ತ್ರಯಂ ಮಹತ್ ।
ಮಹಾದೇವಪ್ರಸಾದೇನ ಮಹಾಕಾರುಣಿಕೋತ್ತಮಃ ॥೬॥

ಶಕ್ತಿಪಾಣಿಃ ಮಹಾತೇಜಾ ದ್ವಿತೀಯ ಇವ ಶಂಕರಃ ।
ಸ್ಕಂದಸ್ಸರ್ವಜಗತ್ಸ್ವಾಮಿಾ ಪ್ರತ್ಯಕ್ಷಮಭವತ್ಸ್ವಯಮ್ ॥೭॥

ಹೀಗೆ ಸೇರಿದಂಥ ಮಹರ್ಷಿಗಳು ಬಹಳ ಕಾಲದವರೆಗೆ ಶ್ರೇಷ್ಠವಾದ ಧರ್ಮವಾವುದು? ಎಂದು ಬಹಳ ಶ್ರದ್ಧೆಯಿಂದ ವಿಚಾರಮಾಡಿದಾಗ್ಯೂ ನಿಶ್ಚಯವನ್ನು ಕಾಣದೆ ಸಂಶಯದಿಂದ ಕೂಡಿದವರಾದರು. ॥೩॥

ಹೀಗೆ ಸಂದೇಹದಿಂದ ಕೂಡಿರುವ ಕಾವಶೇಯರೆಂಬ ಆ ಋಷಿಗಳು ಹಿಮವತ್ಪರ್ವತಕ್ಕೆ ಹೋಗಿ ಅಲ್ಲಿ ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಸ್ನಾನ ಮಾಡುತ್ತಾ, ಮೈಗೆಲ್ಲಕ್ಕೂ ಭಸ್ಮವನ್ನು ಬಳಿದುಕೊಂಡು ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸಿ ರುದ್ರಾಕ್ಷಮಾಲೆಯ ಆಭರಣವನ್ನೂ, ಜಡೆಯನ್ನೂ, ನಾರುಬಟ್ಟೆಗಳನ್ನೂ ಧರಿಸತಕ್ಕವರಾಗಿ ಪರಮತೇಜಶ್ಶಾಲಿಯಾದ ಈಶ್ವರಲಿಂಗವನ್ನು ಪೂಜೆಮಾಡುತ್ತಾ ಮೂರು ವರ್ಷಗಳು ತಪಸ್ಸನ್ನು ಮಾಡಿದರು. ॥೪-೫॥

ಇವರ ತಪಸ್ಸಿನಿಂದ ಸಂತೋಷಗೊಂಡ ಈಶ್ವರನ ಅನುಗ್ರಹದಿಂದ ಬಹಳ ಕರುಣಾಶಾಲಿಯಾದ ಶಕ್ತ್ಯಾಯುಧವನ್ನು ಕೈಯಲ್ಲಿ ಹಿಡಿದಿರುವ, ಬಹಳ ಪರಾಕ್ರಮ ಶಾಲಿಯಾದ, ಎರಡನೆಯ ಶಂಕರನೋ ಎಂಬ ಹಾಗೆ ಇರುವ, ಸಮಸ್ತವಾದ ಜಗತ್ತಿಗೆ ಒಡೆಯನಾದ ಷಣ್ಮುಖದೇವನು ಪ್ರತ್ಯಕ್ಷನಾದನು. ॥೬-೭॥

ತಂ ದೃಷ್ಟ್ವಾ ಮುನಯಸ್ಸರ್ವೇ ಪ್ರಸನ್ನೇಂದ್ರಿಯಮಾನಸಾಃ ।
ಭಕ್ತ್ಯಾ ಪರಮಯಾ ಯುಕ್ತಾ ವಿವಶಾ ಗದ್ಗದಸ್ವರಾಃ ॥೮॥

ಪ್ರಣಮ್ಯ ದಂಡವದ್ಭೂಮಾವುತ್ಥಾಯೋತ್ಥಾಯ ಸಾದರಮ್ ।
ಸ್ತೋತ್ರೈಃ ಸ್ತುತ್ವಾ ಮಹಾತ್ಮಾನಂ ಸಮಭ್ಯರ್ಚ್ಯ ಯಥಾಬಲಮ್ ॥೮॥

ಕೃತಾಂಜಲಿಪುಟಾ ಭೂತ್ವಾ ಪಪ್ರಚ್ಛುರ್ಧರ್ಮಮುತ್ತಮಮ್ ।
ಸೋಽಪಿ ಸರ್ವಜಗತ್ಸ್ವಾಮೀ ತಾರಕಾರಿರ್ಮಹಾದ್ಯುತಿಃ ॥೧೦॥

ಸರ್ವವಿಜ್ಞಾನರತ್ನಾನಾಮಾಕರಃ ಕರುಣಾಕರಃ ।
ಸುಪ್ರಸನ್ನಸ್ಸ್ವಯಂ ಪ್ರಾಹ ಮುನೀನಾಂ ಧರ್ಮಮುತ್ತಮಮ್ ॥೧೧॥

॥ ಸ್ಕಂದ ಉವಾಚ ॥

ಶೃಣುಧ್ವಂ ಮುನಯಸ್ಸರ್ವೇ ಮಹಾಭಾಗ್ಯಸಮನ್ವಿತಾಃ ।
ವದಾಮಿ ಸಂಗ್ರಹೇಣಾಹಂ ಯುಷ್ಮಾಕಂ ಧರ್ಮಮುತ್ತಮಮ್ ॥೧೨॥

ಎದುರಿನಲ್ಲಿ ಬಂದಿರುವ ಸ್ಕಂದನನ್ನು ನೋಡಿ ಆ ಋಷಿಗಳು ಸಂತೋಷಗೊಂಡ ಇಂದ್ರಿಯಗಳೂ ಮನಸ್ಸೂ ಉಳ್ಳವರಾಗಿ, ಉತ್ತಮವಾದ ಭಕ್ತಿಯಿಂದ ಕೂಡಿ, ತಡೆಯಲ್ಪಟ್ಟ ಕಂಠಸ್ವರವುಳ್ಳವರಾಗಿ ಭೂಮಿಯ ಮೇಲೆ ದಂಡದಂತೆ ಅನೇಕಾವೃತ್ತಿ ನಮಸ್ಕಾರಮಾಡಿ, ಅನೇಕವಿಧವಾಗಿ ಸ್ತೋತ್ರಮಾಡಿ ಯಥಾಶಕ್ತಿಯಾಗಿ ಪೂಜೆಯನ್ನು ಮಾಡಿ ಕೈಯನ್ನು ಬೊಗಸೆಯನ್ನಾಗಿ ಮಾಡಿಕೊಂಡು ಶ್ರೇಷ್ಠವಾದ ಧರ್ಮದ ವಿಷಯವನ್ನು ಪ್ರಶ್ನೆಮಾಡಿದರು. ॥೮-೯॥

ಎಲ್ಲಾ ಜಗತ್ತಿಗೂ ಒಡೆಯನಾದ, ತಾರಕಾಸುರನಿಗೆ ಶತ್ರುವಾದ, ಪರಾಕ್ರಮಶಾಲಿಯಾದ, ಜ್ಞಾನವೆಂಬ ರತ್ನಗಳಿಗೆ ಸಮುದ್ರದಂತೆ ಇರುವ, ಕರುಣಾಶಾಲಿಯಾದ ಆ ಷಣ್ಮುಖನು ಪ್ರೀತಿಯಿಂದ ಋಷಿಗಳಿಗೆ ಧರ್ಮವನ್ನು ಮುಂದೆ ಹೇಳುವ ರೀತಿಯಲ್ಲಿ ಹೇಳಿದನು. ॥೧೦-೧೧॥

ಎಲೈ ಭಾಗ್ಯಶಾಲಿಗಳಾದ ಋಷಿಗಳೇ, ನಿಮ್ಮೆಲ್ಲರಿಗೂ ಉತ್ತಮವಾದ ಧರ್ಮವಾವುದೆಂಬುದನ್ನು ಸಂಕ್ಷೇಪವಾಗಿ ಹೇಳುತ್ತೇನೆ, ಕೇಳಿರಿ. ॥೧೨॥

ಸ್ವಮನೀಷಿಕಯೋತ್ಪನ್ನೋ ನಿರ್ಮೂಲೋ ಧರ್ಮಸಂಜ್ಞಿತಃ ।
ಶ್ರದ್ಧಯಾ ಸಹಿತೋ ಯಸ್ತು ಸೋಽಪಿ ಧರ್ಮ ಉದಾಹೃತಃ ॥೧೩॥

ನಿರ್ಮೂಲೋಽಪಿ ಸ್ವಬುದ್ಧ್ಯೈವ ಕಲ್ಪಿತೋಽಪಿ ಮಹರ್ಷಯಃ ।
ದೇವತಾರಾಧನಾಕಾರೋ ಧರ್ಮಃ ಪೂರ್ವೋದಿತಾದ್ವರಃ ॥೧೪॥

ದೇವತಾರಾಧನಾಕಾರಾನ್ನಿರ್ಮೂಲಾದ್ಬುದ್ಧಿಕಲ್ಪಿತಾತ್ ।
ಧರ್ಮಾಚ್ಛ್ರೇಷ್ಠಸ್ಸಮಾಖ್ಯಾತಸ್ಸಮೂಲೋ ಧರ್ಮ ಆಸ್ತಿಕಾಃ ॥೧೫॥

ಸಮೂಲೇಷು ಚ ಧರ್ಮೇಷು ಬುದ್ಧಾಗಮಸಮನ್ವಿತಃ ।
ಧರ್ಮಃ ಶ್ರೇಷ್ಠ ಇತಿ ಪ್ರೋಕ್ತೋ ಮಯಾ ವೇದಾರ್ಥಪಾರಗಾಃ ॥೧೬॥

ಬುದ್ಧಾಗಮೋದಿತಾದ್ಧರ್ಮಾದರ್ಹಾಗಮಸಮೀರಿತಃ ।
ಧರ್ಮಶ್ಶ್ರೇಷ್ಠ ಇತಿ ಪ್ರೋಕ್ತೋ ಧರ್ಮತತ್ತ್ವವಿಶಾರದೈಃ ॥೧೭॥

ಶಾಸ್ತ್ರವನ್ನು ಬಿಟ್ಟು ತನ್ನ ಬುದ್ಧಿಯಿಂದಲೇ ಯೋಚಿಸಿ, ಆಚರಿಸುವ ಶಾಸ್ತ್ರ ಪ್ರಮಾಣವಿಲ್ಲದ ಯಾವ ತಪಸ್ಸುಂಟೋ ಅದೂ ಧರ್ಮವು. ಮತ್ತೂ ಶ್ರದ್ಧೆಯಿಂದ ಕೂಡಿ ಆಚರಿಸಿದ ಅಂಥ ತಪಸ್ಸೂ ಧರ್ಮವೇ ಆಗುವುದು. ॥೧೩॥

ಶಾಸ್ತ್ರಾದಿಪ್ರಮಾಣಗಳಿಲ್ಲದೆ ತನ್ನ ಬುದ್ಧಿಯಿಂದ ಕಲ್ಪನೆಮಾಡಿದ್ದಾದಾಗ್ಯೂ ದೇವತೆಗಳ ಪೂಜಾದಿಗಳಿಂದ ಕೂಡಿದ ಧರ್ಮವು ಮೊದಲು ಹೇಳಿದ ಧರ್ಮಕ್ಕಿಂತಲೂ ಸ್ವಲ್ಪ ಶ್ರೇಷ್ಠವಾದುದು. ॥೧೪॥

ತನ್ನ ಬುದ್ಧಿಯ ಊಹೆಯಿಂದ ತಿಳಿದ ದೇವತಾಪೂಜಾಸ್ವರೂಪವಾದ, ಶಾಸ್ತ್ರ ಪ್ರಮಾಣದಿಂದ ಸಿದ್ಧವಾಗದ, ಧರ್ಮಕ್ಕಿಂತಲೂ ಶಾಸ್ತ್ರದ ಆಧಾರವುಳ್ಳ ಧರ್ಮವು ಶ್ರೇಷ್ಠವಾದುದು. ॥೧೫॥

ಆಧಾರಸಹಿತವಾದ ಧರ್ಮಗಳಲ್ಲಿಯೂ ಬುದ್ಧನಿಂದ ಹೇಳಲ್ಪಟ್ಟಿರುವ ಧರ್ಮವು ಶ್ರೇಷ್ಠವಾದುದೆಂದು ನನ್ನಿಂದ ಹಿಂದೆ ಹೇಳಲ್ಪಟ್ಟಿದೆ. ॥೧೬॥

ಬುದ್ಧೋಕ್ತವಾದ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ಧರ್ಮಗಳಿಗಿಂತಲೂ ಜೈನ ಶಾಸ್ತ್ರದಲ್ಲಿ ಹೇಳಿರುವ ಧರ್ಮವೇ ಉತ್ತಮವಾದುದೆಂದು ಎಲ್ಲಾ ಧರ್ಮದ ಗುಟ್ಟನ್ನು ತಿಳಿದವರು ಹೇಳಿರುತ್ತಾರೆ. ॥೧೭॥

ಆರ್ಹಾಗಮೋದಿತಾದ್ಧರ್ಮಾತ್ಪ್ರಾಜಾಪತ್ಯಾಗಮೋದಿತಃ ।
ಧರ್ಮಃ ಶ್ರೇಷ್ಠ ಇತಿ ಪ್ರೋಕ್ತಸ್ಸರ್ವಧರ್ಮಾರ್ಥವೇದಿಭಿಃ ॥೧೮॥

ಪ್ರಾಜಾಪತ್ಯಾಗಮಪ್ರೋಕ್ತಾದ್ಧರ್ಮಾದ್ವೇದವಿದಾಂ ವರಾಃ ।
ಮಯಾ ಶ್ರೇಷ್ಠ ಇತಿ ಪ್ರೋಕ್ತೋ ಧರ್ಮೋ ವಿಷ್ಣ್ವಾಗಮೋದಿತಃ॥೧೯॥

ವಿಷ್ಣ್ವಾಗಮೋದಿತಾದ್ಧರ್ಮಾದಶೇಷಾದಾಸ್ತಿಕೋತ್ತಮಾಃ ।
ಶೈವಾಗಮೋದಿತೋ ಧರ್ಮೋ ವರಿಷ್ಠೋ ನೈವ ಸಂಶಯಃ ॥೨೦॥

ಶೈವಾಗಮೋದಿತೋ ಧರ್ಮೋ ದ್ವಿಧಾ ಪೂರ್ವಮುದೀರಿತಃ ।
ಅಧಸ್ಸ್ರೋತೋದ್ಭವಸ್ತ್ವೇಕ ಊರ್ಧ್ವಸ್ರೋತೋದ್ಭವಃ ಪರಃ ॥೨೧॥

ಅಧಸ್ಸ್ರೋತೋದ್ಭವಾದ್ಧರ್ಮಾದೂರ್ಧ್ವಸ್ರೋತೋದ್ಭವಃ ಪರಃ ।
ಕಾಮಿಕಾದಿಪ್ರಭೇದೇನ ಸಂಭಿನ್ನೋಽನೇಕಧಾ ದ್ವಿಜಾಃ ॥೨೨॥

ಅರ್ಹತಶಾಸ್ತ್ರದಲ್ಲಿ (ಜೈನಶಾಸ್ತ್ರದಲ್ಲಿ) ಹೇಳಿರುವ ಧರ್ಮಕ್ಕಿಂತಲೂ ಬ್ರಹ್ಮನಿಂದ ಹೇಳಲ್ಪಟ್ಟಿರುವ ಧರ್ಮವು ಉತ್ತಮವಾದುದೆಂದು ಎಲ್ಲಾ ಧರ್ಮದ ಅರ್ಥವನ್ನು ತಿಳಿದವರು ಹೇಳಿದ್ದಾರೆ. ॥೧೮॥

ಬ್ರಹ್ಮಸಂಬಂಧವಾದ ಶಾಸ್ತ್ರದಲ್ಲಿ ಹೇಳಿರುವ ಧರ್ಮಕ್ಕಿಂತಲೂ ವಿಷ್ಣುಸಂಬಂಧವಾದ ಶಾಸ್ತ್ರದಲ್ಲಿ ಹೇಳಿರುವ ಧರ್ಮವೇ ಶ್ರೇಷ್ಠವೆಂದು ನಾನು (ಸ್ಕಂದನು) ಹೇಳಿರುತ್ತೇನೆ. ॥೧೯॥

ಸಂಪೂರ್ಣವಾದ ವಿಷ್ಣುಸಂಬಂಧವಾದ ಶಾಸ್ತ್ರದಲ್ಲಿ ಹೇಳಿರುವ ಧರ್ಮಕ್ಕಿಂತಲೂ ಶಿವಸಂಬಂಧಶಾಸ್ತ್ರದಲ್ಲಿ ಹೇಳಿರುವ ಧರ್ಮವೇ ಬಹಳ ಉತ್ತಮವಾದುದೆನ್ನುವುದರಲ್ಲಿ ಸಂದೇಹವೇ ಇಲ್ಲವು. ॥೨೦॥

ಶೈವಾಗಮದಲ್ಲಿಯೂ ಊರ್ಧ್ವಸ್ರೋತೋದ್ಭವವಾದ ಧರ್ಮವೆಂದೂ ಅಧಸ್ಸ್ರೋತೋದ್ಭವಧರ್ಮವೆಂದೂ ಎರಡು ಬಗೆ ಇರುವುದೆಂದು ಹಿಂದೆಯೇ ಹೇಳಲ್ಪಟ್ಟಿದೆ. ॥೨೧॥

ಲೀಲೆಗೋಸ್ಕರವಾಗಿ ಶರೀರವನ್ನು ಧರಿಸಿರುವ ಆ ಪರಶಿವನ ನಾಭಿದೇಶಕ್ಕಿಂತ ಮೇಲುಭಾಗದಿಂದ ಪ್ರಕಟವಾಗುವ ಧರ್ಮಕ್ಕೆ ಊರ್ಧ್ವಸ್ರೋತಸ್ಸೆಂದೂ ನಾಭಿಪ್ರದೇಶಕ್ಕೆ ಕೆಳಭಾಗದಿಂದ ಹುಟ್ಟಿದ ಧರ್ಮಕ್ಕೆ ಅಧಸ್ಸ್ರೋತಸ್ಸೆಂದೂ ಹೆಸರು.

ಅಧಸ್ಸ್ರೋತೋದ್ಭವೋ ಧರ್ಮೋ ಬಹುಧಾ ಭೇದಿತಸ್ತಥಾ ।
ಊರ್ಧ್ವಸ್ರೋತೋದ್ಭವಾದ್ಧರ್ಮಾತ್ಸ್ಮಾರ್ತೋ ಧರ್ಮೋ ಮಹತ್ತರಃ ॥೨೩॥

ಸ್ಮಾರ್ತೇಭ್ಯಶ್ಶ್ರೌತಧರ್ಮಾಶ್ಚ ವರಿಷ್ಠಾ ಮುನಿಸತ್ತಮಾಃ ।
ತೇಷಾಂ ಶಾಂತ್ಯಾದಯಶ್ಶ್ರೇಷ್ಠಾಃ ತೇಷಾಂ ಭಸ್ಮಾವಗುಂಠನಮ್ ॥೨೪॥

ಇದು ಕಾಪಾಲಾದಿಯಾಗಿ ಅನೇಕ ಮತವಾಗಿರುವುದು. ಊರ್ಧ್ವಸ್ರೋತಸ್ಸೆಂದರೆ ಈಶಾನ, ತತ್ಪುರುಷ, ಅಘೋರ, ಸದ್ಯೋಜಾತ, ವಾಮದೇವ—ಎಂಬ ಐದು ಮುಖಗಳೇ; ಇವುಗಳಲ್ಲಿ ಉತ್ಪನ್ನವಾದ, ಎಂದರೆ ಈಶಾನ ಎಂಬ ಮುಖದಿಂದ ಹುಟ್ಟಿದ ಪ್ರೋದ್ಗೀತವೇ ಮೊದಲಾದ ಎಂಟು ವಿಧವಾದ ಸಂಹಿತೆಗಳು, ತತ್ಪುರುಷ ಮುಖದಿಂದ ಹೊರಟ ರೌರವವೇ ಮೊದಲಾದ ಐದು ಸಂಹಿತೆಗಳು, ಅಘೋರ ಎಂಬ ಮುಖದಿಂದ ಹುಟ್ಟಿದ ವಿಜಯವೇ ಮೊದಲಾದ ಐದು ಸಂಹಿತೆಗಳು, ವಾಮದೇವಮುಖದಿಂದ ಹುಟ್ಟಿದ ದೀಪ್ತವೇ ಮೊದಲಾದ ಐದು ಸಂಹಿತೆಗಳು, ಸದ್ಯೋಜಾತಮುಖದಿಂದ ಹೊರಟ ಕಾಮಿಕವೇ ಮೊದಲಾದ ಐದು ಸಂಹಿತೆಗಳು, ಇವೆಲ್ಲಕ್ಕೂ ಊರ್ಧ್ವಸ್ರೋತಸ್ಸುಗಳೆಂದು ಹೆಸರು. ಹೀಗೆ ಪರಶಿವನಿಂದ ಹುಟ್ಟಿದ ಅಧಸ್ಸ್ರೋತಸ್ಸುಗಳೆಂಬ ಧರ್ಮಕ್ಕಿಂತಲೂ ಊರ್ಧ್ವಸ್ರೋತೋದ್ಭವವಾದ ಧರ್ಮಗಳೇ ಉತ್ತಮವಾದವುಗಳು. ||೨೨||

ಅಧಸ್ಸ್ರೋತೋದ್ಭವವಾದ ಧರ್ಮಗಳು ಕಾಪಾಲಿಯೇ ಮೊದಲಾಗಿ ಅನೇಕ ವಿಧವಾಗಿ ಭಾಗಮಾಡಲ್ಪಟ್ಟಿರುವುದು.

ಊರ್ಧ್ವಸ್ರೋತೋದ್ಭವವಾದ ಧರ್ಮಗಳಿಗಿಂತಲೂ ಮನ್ವಾದಿಸ್ಮೃತಿಗಳಲ್ಲಿಯೂ ಪುರಾಣಗಳಲ್ಲಿಯೂ ಹೇಳಿರುವ ಧರ್ಮಗಳು ಉತ್ತಮವಾದವುಗಳು. ||೨೩||

ಮನ್ವಾದಿಸ್ಮೃತಿಗಳಲ್ಲಿ ಹೇಳಿರುವ ಧರ್ಮಗಳಿಗಿಂತಲೂ ವೇದದಲ್ಲಿ ಹೇಳಿರುವ ಪ್ರವೃತ್ತಿಧರ್ಮಗಳು ಬಹಳ ಉತ್ತಮವಾದವುಗಳು.

ಪ್ರವೃತ್ತಿಗೆ ಕಾರಣಗಳಾದ ವೇದೋಕ್ತಧರ್ಮಗಳಿಗಿಂತಲೂ ಶಾಂತಿದಾಂತಿ ಮೊದಲಾದ ನಿವೃತ್ತಿಮಾರ್ಗಕ್ಕೆ ಸಾಧಕಗಳಾದ ಧರ್ಮಗಳು ಶ್ರೇಷ್ಠವಾದವುಗಳು. ||೨೪||

ರುದ್ರಾಕ್ಷಧಾರಣಂ ಚಾಪಿ ಶಿವಾದ್ಯಾಖ್ಯಾಭಿಭಾಷಣಮ್ ।
ಶಿವಲಿಂಗಾರ್ಚನಂ ಭಕ್ತ್ಯಾ ಶಿವೋಽಹಮಿತಿ ಭಾವನಾ ॥೨೫॥

ಶಿವಜ್ಞಾನೈಕನಿಷ್ಠಸ್ಯ ಶುಶ್ರೂಷಾ ಚ ವಿಶಿಷ್ಯತೇ ।
ತೇಷಾಂ ವೇದಾನ್ತವಾಕ್ಯಾನಾಂ ತಾತ್ಪರ್ಯಸ್ಯ ನಿರೂಪಣಮ್ ॥೨೬॥

ವರಿಷ್ಠಸ್ಸರ್ವಧರ್ಮೇಭ್ಯೋ ಜ್ಞಾನಂ ಮೋಕ್ಷೈಕಸಾಧನಮ್ ।
ಜ್ಞಾನಾನ್ನಾಸ್ತಿ ಪರೋ ಧರ್ಮ ಇತಿ ವೇದಾನ್ತನಿರ್ಣಯಃ ॥೨೭॥

ಪೂರ್ವೋದಿತೇಭ್ಯೋ ಧರ್ಮೇಭ್ಯಃ ಸತ್ಯಧರ್ಮಪರಾಯಣಾಃ ।
ಜ್ಞಾನಾಂಗೇಭ್ಯಸ್ಸಮಾಸೇನ ಭಸ್ಮೈಕಂ ಪರಮಂ ಮತಮ್ ॥೨೮॥

ಭಸ್ಮಸಾಧನನಿಷ್ಠಾನಾಂ ಸಾಕ್ಷಾದ್ಭಸ್ಮಶಿವಾಭಿಧಮ್ ।
ಪ್ರಕಾಶತೇ ಯಥಾ ಶಾನ್ತಾನ್ತ್ಯಾ ಶಾನ್ತಂ ವಸ್ತು ಪರಾತ್ಪರಮ್ ॥೨೯॥

ಶಾಂತಿ ಮೊದಲಾದ ಧರ್ಮಗಳಿಗಿಂತಲೂ, ಭಸ್ಮಲೇಪನಮಾಡಿಕೊಂಡು ರುದ್ರಾಕ್ಷಿಯನ್ನು ಧರಿಸಿ ಶಿವ, ಈಶ್ವರ, ಶಂಭು ಮೊದಲಾದ ಶಬ್ದಗಳನ್ನುಚ್ಚರಿಸುತ್ತಾ ಜಪಮಾಡುವುದು, ಭಕ್ತಿಯಿಂದ ಶಿವಲಿಂಗವನ್ನು ಪೂಜೆಮಾಡುವುದು, ಪರಶಿವನೇ ನಾನಾಗಿದ್ದೇನೆ ಎಂದು ಮನಸ್ಸಿನಲ್ಲಿ ತಿಳಿಯುವುದು, ಶಿವಜ್ಞಾನದಲ್ಲಿಯೇ ನಿರತನಾದವನ ಸೇವೆಮಾಡುವುದು ಇವುಗಳು ಉತ್ತಮವಾದುವು. ||೨೫||

ಇವುಗಳಿಗಿಂತಲೂ ಉಪನಿಷತ್ತಿನಲ್ಲಿ ಹೇಳುವ ವಾಕ್ಯಕ್ಕೆ ತಾತ್ಪರ್ಯವನ್ನು ಲಕ್ಷಣ, ಪ್ರಮಾಣ ಇವುಗಳಿಂದ ನಿಶ್ಚಯಿಸಿ ತಿಳಿಯುವುದು ಉತ್ತಮವು. ||೨೬||

ಮೋಕ್ಷವನ್ನು ಪಡೆಯಲು ಮುಖ್ಯಕಾರಣವಾದ ಜ್ಞಾನವು ಇತರ ಎಲ್ಲಾ ಧರ್ಮಗಳಿಗಿಂತಲೂ ಬಹಳ ಮೇಲಾದುದು; ಜ್ಞಾನಕ್ಕಿಂತಲೂ ಉತ್ಕೃಷ್ಟವಾದ ಧರ್ಮವು ಬೇರೆ ಯಾವುದೂ ಇಲ್ಲ ಎಂಬುದೇ ವೇದಾಂತಶಾಸ್ತ್ರದ ನಿರ್ಣಯವು (ಸಿದ್ಧಾಂತವು). ||೨೭||

ಪೂರ್ವದಲ್ಲಿ ಹೇಳಿದ ಶಾಂತಿ, ದಾಂತಿ ಮೊದಲಾದ, ಜ್ಞಾನಕ್ಕೆ ಅಂಗವಾದ, ಧರ್ಮಗಳಿಗಿಂತಲೂ ಭಸ್ಮಧಾರಣೆಯೇ ಉತ್ತಮವಾದುದೆಂದು ಅಭಿಪ್ರಾಯವು.||೨೮||

ಭಸ್ಮಲೇಪನಾದಿಗಳಲ್ಲಿ ಆಸಕ್ತರಾದವರಿಗೆ ಶಿವನೆಂಬ ಭಸ್ಮವು, ಶಾಂತಿದಾಂತಿಗಳಿಂದ ಕೂಡಿದವರಿಗೆ ಹೇಗೆ ಪರವಸ್ತುವು ತೋರುವುದೋ ಹಾಗೆ, ತೋರುವುದು (ಭಸ್ಮವೆಂದರೆ, ಭಾಸನಾತ್ ಭಸ್ಮ, ಪ್ರಕಾಶಕನಾದ ಶಿವನು ಎಂದರ್ಥ). ||೨೯||

ಜ್ಞಾನಸ್ಯ ಕಾರಣೇಭ್ಯಸ್ತು ಶ್ರುತಿರೇವ ಮಹತ್ತರಾ ।
ಜ್ಞಾನಾನಾಂ ಶಂಭುವಿಜ್ಞಾನಂ ವರಿಷ್ಠಂ ನೇತರದ್ಭವೇತ್ ॥೩೦॥

ವೇದವಾಕ್ಯಸಮುತ್ಪನ್ನಂ ಶಿವಜ್ಞಾನಂ ನಿರೂಪಣೇ ।
ಸಮ್ಯಜ್ಞಾನಂ ಮಯಾಽಽಖ್ಯಾತಮಿತರದ್ವ್ಯವಹಾರತಃ ॥೩೧॥

ಚೋದನಾಲಕ್ಷಣೋ ಧರ್ಮೋ ಧರ್ಮಸ್ಸಾಕ್ಷಾನ್ನಿರೂಪಣೇ ।
ಇತರೋ ವ್ಯವಹಾರೇ ತು ಧರ್ಮ ಇತ್ಯಭಿಶಬ್ದ್ಯತೇ ॥೩೨॥

ಆಸ್ತಿಕ್ಯಾನ್ವಯಮಾತ್ರೇಣ ಧರ್ಮಾಭಾಸೇಽಪಿ ಸುವ್ರತಾಃ ।
ಪ್ರಯುಕ್ತೋ ಧರ್ಮಶಬ್ದಸ್ತು ಮುಖ್ಯೋ ಧರ್ಮಸ್ತು ವೇದಜಃ ॥೩೩॥

ಜ್ಞಾನಕ್ಕೆ ಕಾರಣವಾದವುಗಳಲ್ಲೆಲ್ಲಾ ವೇದವೇ ಉತ್ತಮವಾದುದು. ಉತ್ಪನ್ನವಾದ ಜ್ಞಾನಗಳಲ್ಲೆಲ್ಲಾ ವೇದಾಂತವಾಕ್ಯಗಳಿಂದ ಉತ್ಪನ್ನವಾದ ಯಾವ ಪರಶಿವ ಸ್ವರೂಪವಿಷಯಕವಾದ ಜ್ಞಾನವುಂಟೋ ಅದೇ ಬಹಳ ಉತ್ತಮವಾದುದು ; ಇತರ ಯಾವ ಜ್ಞಾನವೂ ಅಷ್ಟು ಉತ್ತಮವಾದುದಲ್ಲ. ॥೩೦॥

ಇತರವಾದ ಎಲ್ಲಾ ವ್ಯವಹಾರಗಳಿಗಿಂತಲೂ ವೇದವಾಕ್ಯದಿಂದ ಉತ್ಪನ್ನವಾದ ಶಿವಜ್ಞಾನವೇ ಉತ್ತಮವಾದ ಜ್ಞಾನವೆಂದು ನನ್ನಿಂದ ಹೇಳಲ್ಪಟ್ಟಿತು. ॥೩೧॥

ಉತ್ತಮವಾದ ಧರ್ಮವಾವುದೆಂದರೆ, " ಚೋದನಾ ಲಕ್ಷಣೋ ಧರ್ಮಃ " ಎಂಬ ಜೈಮಿನಿಸೂತ್ರದಂತೆ, (ಚೋದನಾ ಎಂದರೆ ವೇದದ ವಿಧಿವಾಕ್ಯವು. ಅದರಲ್ಲಿ ಹೇಳಿರುವ ಧರ್ಮವೇ ಚೋದನಾಲಕ್ಷಣಧರ್ಮವು) ವೇದವಾಕ್ಯಗಳಲ್ಲಿ ಹೇಳಿರುವ ಧರ್ಮವೇ ವಾಸ್ತವವಾದ ಧರ್ಮವು. ಹಾಗಾದರೆ ಇತರವಾದ, ಶಾಸ್ತ್ರಾದಿಗಳಲ್ಲಿ ಹೇಳಲ್ಪಟ್ಟ (ಮೇಲೆ ಸ್ವಮನೀಷಿಕಯಾ ಇತ್ಯಾದಿಗಳಿಂದ ಹೇಳಲ್ಪಟ್ಟ) ಧರ್ಮವು ಧರ್ಮವಲ್ಲವೆ? ಎಂದರೆ, ಅವುಗಳೂ ಧರ್ಮಗಳೇ, ಆದರೆ ಅವುಗಳು ಈ ಸಾಂಸಾರಿಕವಾದ ವ್ಯವಹಾರದಲ್ಲಿ ಮಾತ್ರ ಧರ್ಮಗಳು, ವಾಸ್ತವವಾದ ಮೋಕ್ಷಪ್ರದವಾದ ಧರ್ಮಗಳಲ್ಲವು. ೩೨॥

ಎಲೈ ನಿಯಮವಂತರಾದ ಋಷಿಗಳೇ, ಅಂಥ ಧರ್ಮಗಳು ವಾಸ್ತವವಾದ ಧರ್ಮಗಳಲ್ಲದೆ ಇದ್ದಾಗ್ಯೂ ಧರ್ಮದಂತೆ ತೋರುತ್ತಾ, ಆಸ್ತಿಕರಿಂದ ಅನುಸರಿಸಲ್ಪಡುತ್ತಿರುವುದರಿಂದ ಅವುಗಳಿಗೆ ಧರ್ಮವೆಂದು ಹೆಸರು. ಅಷ್ಟೇ ವಿನಾ ವಾಸ್ತವ

ಯಥಾ ಶಂಭುಸಮೋ ದೇವೋ ನಾಸ್ತಿ ಪುಣ್ಯವತಾಂ ವರಾಃ ।
ತಥಾ ವೇದಸಮಂ ಮಾನಂ ನಾಸ್ತಿ ತತ್ರ ನ ಸಂಶಯಃ ॥೩೪॥

ಯಥಾ ವಿಪ್ರಸಮೋ ಮರ್ತ್ಯೋ ನಾಸ್ತಿ ವೇದವಿದಾಂ ವರಾಃ ।
ತಥಾ ವೇದಸಮಂ ಮಾನಂ ನಾಸ್ತಿ ತತ್ರ ನ ಸಂಶಯಃ ॥೩೫॥

ಯಥಾ ನಾಽನ್ನಸಮಂ ಭೋಜ್ಯಂ ನಾಸ್ತಿ ಲೋಕೇ ವಿಚಕ್ಷಣಾಃ ।
ತಥಾ ವೇದಸಮಂ ಮಾನಂ ನಾಸ್ತಿ ತತ್ರ ನ ಸಂಶಯಃ ॥೩೬॥

ಯಥಾ ಗಂಗಾಸಮಾ ಪುಣ್ಯಾ ನದೀ ಲೋಕೇ ನ ವಿದ್ಯತೇ ।
ತಥಾ ವೇದಸಮಂ ಮಾನಂ ನಾಸ್ತಿ ತತ್ರ ನ ಸಂಶಯಃ ॥೩೭॥

ಯಥಾ ವಾರಾಣಸೀ ತುಲ್ಯಾ ಪುರೀ ಲೋಕೇ ನ ವಿದ್ಯತೇ ।
ತಥಾ ವೇದಸಮಂ ಮಾನಂ ನಾಸ್ತಿ ತತ್ರ ನ ಸಂಶಯಃ ॥೩೮॥

ವಾದ ಧರ್ಮವು ವೇದವಾಕ್ಯಗಳಲ್ಲಿ ಹೇಳಿರುವುದೇ ಆಗಿದೆ. ಎಂದು ತಿಳಿಯಬೇಕು. ||೩೩||

ಎಲೈ ಪುಣ್ಯವಂತರಲ್ಲಿ ಮೇಲಾದ ಋಷಿಗಳೇ, ಹೇಗೆ ದೇವತೆಗಳಲ್ಲಿ ಈಶ್ವರನಿಗೆ ಸಮನಾದ ದೇವರು ಇಲ್ಲವೋ, ಅದರಂತೆ ವೇದಕ್ಕೆ ಸಮಾನವಾದ ಪ್ರಮಾಣವು ಎಂದರೆ ಪುರುಷದೋಷರಹಿತವಾಗಿರುವುದರಿಂದ ಭ್ರಾಂತಿ, ವಿಪರ್ಯಯ, ಸಂಶಯಗಳಿಗೆ ಅವಕಾಶವಾಗದಂತೆ ಪರತತ್ವದ ಸ್ವರೂಪವನ್ನು ತಿಳಿಯಿಸುವ ಪ್ರಮಾಣವು ಮತ್ತೊಂದಿಲ್ಲವು. ಈ ವಿಷಯದಲ್ಲಿ ಸಂದೇಹವಿಲ್ಲವು. ||೩೪||

ಎಲೈ, ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಲೋಕಗಳಲ್ಲೆಲ್ಲಾ ಬುದ್ಧಿವಂತರಾದ ಋಷಿಗಳೇ, ಮನುಷ್ಯರಲ್ಲಿ ಬ್ರಾಹ್ಮಣನಿಗೆ ಎಂದರೆ, ಬ್ರಹ್ಮಜ್ಞಾನ, ಸಂಸ್ಕೃತಿಗಳಲ್ಲಿ ಎಂದರೆ ತಿಳಿವಳಿಕೆ ನಡೆವಳಿಕೆಗಳಲ್ಲಿ ಹೆಚ್ಚಾಗಿ ಮುಂದುವರಿದಿರುವವನಿಗೆ ಸಮಾನನಾದ ಮನುಜನು ಹೇಗೆ ಇಲ್ಲವೋ, ತಿನ್ನುವ ಪದಾರ್ಥಗಳಲ್ಲಿ ಅನ್ನಕ್ಕೆ ಸರಿಯಾದ ಪದಾರ್ಥವು ಹೇಗೆ ಇಲ್ಲವೋ, ಹೇಗೆ ನದಿಗಳಲ್ಲಿ ಗಂಗಾನದಿಗೆ ಸಮಾನವಾದ ಪುಣ್ಯಕರವಾದ ನದಿಯು ಮತ್ತೊಂದಿಲ್ಲವೋ, ಪಟ್ಟಣಗಳಲ್ಲೆಲ್ಲಾ ಕಾಶೀಪಟ್ಟಣಕ್ಕೆ ಸರಿಯಾದ ಪಟ್ಟಣವು ಮತ್ತೊಂದಿಲ್ಲವೋ, ಅದರಂತೆ ವೇದಕ್ಕೆ ಸರಿಯಾದ ಪ್ರಮಾಣವು ಬೇರೊಂದಿಲ್ಲವು. ||೩೫-೩೬-೩೭-೩೮||

ಯಥಾ ದಭ್ರಸಭಾತುಲ್ಯಂ ಸ್ಥಾನಂ ಲೋಕೇ ನ ವಿದ್ಯತೇ ।
ತಥಾ ವೇದಸಮಂ ಮಾನಂ ನಾಸ್ತಿ ತತ್ರ ನ ಸಂಶಯಃ ॥೩೯॥

ಷಡಕ್ಷರಸಮೋ ಮಂತ್ರೋ ಯಥಾಲೋಕೇ ನ ವಿದ್ಯತೇ ।
ತಥಾ ವೇದಸಮಂ ಮಾನಂ ನಾಸ್ತಿ ತತ್ರ ನ ಸಂಶಯಃ ॥೪೦॥

ಯಥಾ ಗುರುಸಮಸ್ತ್ರಾತಾ ನಾಸ್ತಿ ಸಂಸಾರಸಾಗರಾತ್ ।
ತಥಾ ವೇದಸಮಂ ಮಾನಂ ನಾಸ್ತಿ ತತ್ರ ನ ಸಂಶಯಃ ॥೪೧॥

ಅತಶ್ಚ ಸಂಕ್ಷೇಪಮಿದಂ ವದಾಮಿ
ಶ್ರುತಿಃ ಪ್ರಮಾಣಂ ಶಿವ ಏವ ಕೇವಲಃ ।
ವರಿಷ್ಠ ಉಕ್ತಸ್ಸಿತಭಸ್ಮಗುಂಠನಂ
ವಿಶುದ್ಧವಿದ್ಯಾ ಚ ನ ಚೇತರತ್ಪರಮ್ ॥೪೨॥

॥ ಓಂ ಸೂತ ಉವಾಚ ॥

ಏವಮುಕ್ತ್ವಾ ಮುನೀಂದ್ರೇಭ್ಯಶ್ಶ್ರೀಮಾನ್ ಬರ್ಹಿಣವಾಹನಃ ।
ಜಗತ್ಸ್ವಾಮೀ ಮಹಾತೇಜಾಸ್ತತ್ರೈವಾಂತರ್ಹಿತೋಽಭವತ್ ॥೪೩॥

ಲೋಕಗಳಲ್ಲಿರುವ ಸ್ಥಳಗಳಲ್ಲಿ ಹೇಗೆ ದಭ್ರವೆಂಬ ಶಿವಸಭೆಯು ಶ್ರೇಷ್ಠವಾದುದೋ, ಮಂತ್ರಗಳಲ್ಲೆಲ್ಲಾ ಷಡಕ್ಷರೀಮಂತ್ರವು ಹೇಗೆ ಉತ್ತಮವಾದುದೋ, ಹಾಗೆ ವೇದವೇ ಉತ್ತಮವಾದ ಪ್ರಮಾಣವು. ಸಂಸಾರವೆಂಬ ಸಮುದ್ರವನ್ನು ಸದುಪದೇಶ ಉದಾಹರಣೆಗಳಿಂದ ದಾಟಿಸತಕ್ಕವರಾಗಿರುವ ಗುರುಗಳಿಗೆ ಸಮನಾದವರು ಯಾರೂ ಹೇಗೆ ಇಲ್ಲವೋ, ಅದರಂತೆ ವೇದಕ್ಕೆ ಸಮಾನವಾದ ಪ್ರಮಾಣವು ಮತ್ತೊಂದಿಲ್ಲವು. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲವು. ॥೩೯-೪೦-೪೧॥

ಇದಕ್ಕಿಂತಲೂ ಸಂಗ್ರಹವಾಗಿ ಹೇಳುತ್ತೇನೆ—ಪ್ರಮಾಣಗಳಲ್ಲೆಲ್ಲಾ ಶ್ರುತಿಯೇ ಉತ್ತಮವಾದುದು. ಸಾಕ್ಷಾತ್ಪರಶಿವನೇ ಉತ್ತಮನಾದವನು. ಶುಭ್ರವಾದ ಭಸ್ಮಲೇಪನವೇ ಶ್ರೇಷ್ಠವಾದುದು. ವಿದ್ಯೆಗಳಲ್ಲೆಲ್ಲಾ ಪರಿಶುದ್ಧವಾದ ಬ್ರಹ್ಮವಿದ್ಯೆಯೇ ಶ್ರೇಷ್ಠವಾದುದು. ಇವುಗಳನ್ನು ಬಿಟ್ಟು ಉತ್ತಮವಾದ ವಸ್ತುವು ಮತ್ತೊಂದಿಲ್ಲವು. ॥೪೨॥

ಸೂತನು ಹೇಳಿದನು—ಎಲೈ ಋಷಿಗಳೇ, ಈ ರೀತಿಯಾಗಿ ಋಷಿಗಳಿಗೆ

ಕಾವಶೇಯಾ ಋಷಿಶ್ರೇಷ್ಠಾಃ ಪ್ರಸಾದಾತ್ತಾರಕಾರಿಣಃ ।
ಮಹಾದೇವಂ ಮಹಾತ್ಮಾನಂ ದದೃಶುಸ್ಸ್ವಯಮಾಗತಮ್ ॥೪೪॥

ತಂ ಪ್ರಣಮ್ಯ ಮಹಾದೇವಂ ಸರ್ವಜ್ಞಮಪರಾಜಿತಮ್ ।
ಶ್ರೀಮತ್ಪಂಚಾಕ್ಷರೇಣೈವ ಪೂಜಯಾಮಾಸುರಾದರಾತ್ ॥೪೫॥

ದೇವದೇವೋ ಮಹಾದೇವೋ ದೇವಾನಾಮಪಿ ದೇಶಿಕಃ ।
ಮುನಿಭ್ಯಃ ಕಾವಶೇಯೇಭ್ಯಸ್ಸ್ವಾತ್ಮಜ್ಞಾನಂ ದದೌ ಮುದಾ ॥೪೬॥

ಮುನೀಂದ್ರಾ ಅಪಿ ತೇ ಸರ್ವೇ ವಿಶುದ್ಧಜ್ಞಾನಿನಾಂ ವರಾಃ ।
ಪ್ರಣಮ್ಯ ದೇವಮೀಶಾನಂ ಸಾಂಬಂ ಸಂಸಾರಭೇಷಜಮ್ ॥೪೭॥

ಪ್ರಸಾದಯಿತ್ವಾ ದೇವೇಶಂ ಕೃತಾರ್ಥಾ ಆತ್ಮವೇದನಾತ್ ।
ನಿಸ್ಪೃಹಾ ಸ್ವಾತ್ಮನೋಽನ್ಯತ್ರ ಯಯುರ್ಹಿಮವತೋ ಗುಹಾಮ್ ॥೪೮॥

ಹೇಳಿ ಮಹಾತ್ಮನಾದ ಜಗತ್ತಿಗೆಲ್ಲಕ್ಕೂ ಒಡೆಯನಾದ ಷಣ್ಮುಖದೇವನು ಅಂತರ್ಧಾನವನ್ನು ಪಡೆದನು. ||೪೩||

ಆಗ ಷಣ್ಮುಖನ ಅನುಗ್ರಹದಿಂದ ಕಾವಶೇಯರೆಂಬ ಆ ಋಷಿಗಳು ಪ್ರತ್ಯಕ್ಷನಾದ, ತಾನಾಗಿಯೇ ಬಂದು ವೈದೋರಿದ, ಮಹಾತ್ಮನಾದ ಮಹಾದೇವನನ್ನು ನೋಡಿದರು. ||೪೪||

ಆ ಸರ್ವಜ್ಞನಾದ ಮಹಾಮಹಿಮನಾದ ಮಹಾದೇವನಿಗೆ ನಮಸ್ಕಾರಮಾಡಿ ಬಹಳ ಪ್ರೀತಿಯಿಂದ ಪಂಚಾಕ್ಷರೀಮಂತ್ರದಿಂದಲೇ ಪೂಜೆಯನ್ನು ಮಾಡಿದರು.||೪೫||

ದೇವತೆಗಳೆಲ್ಲರಿಗೂ ದೇವತೆಯೂ ಗುರುವೂ ಆದ ಆ ಮಹಾದೇವನು ಕಾವಶೇಯಋಷಿಗಳಿಗೆ ಆತ್ಮಜ್ಞಾನವನ್ನು ಬಹಳ ಸಂತೋಷದಿಂದ ಉಪದೇಶಮಾಡಿದನು. ||೪೬||

ಹೀಗೆ ಉಪದೇಶವನ್ನು ಪಡೆದು ಜ್ಞಾನಿಗಳಲ್ಲೆಲ್ಲರಲ್ಲೂ ಶ್ರೇಷ್ಠರಾದ ಆ ಕಾವಶೇಯಋಷಿಗಳು, ಸಂಸಾರವೆಂಬ ರೋಗಕ್ಕೆ ಔಷಧಪ್ರಾಯನಾದ, ಪಾರ್ವತೀಸಹಿತನಾದ, ಮಹಾದೇವನಿಗೆ ನಮಸ್ಕಾರಮಾಡಿ ಆ ಸ್ವಾಮಿಯ ಅನುಗ್ರಹವನ್ನು ಪಡೆದು, ಆತ್ಮಜ್ಞಾನವು ಲಭಿಸಿದ್ದರಿಂದ ಕೃತಾರ್ಥರಾಗಿ, ಆತ್ಮನನ್ನು ಬಿಟ್ಟು ಬೇರೆ ವಿಷಯಾದಿ

ವಿಶಿಷ್ಟಧರ್ಮಃ ಕಥಿತಸ್ಸಮಾಸತೋ
ಮಯೈವ ವೇದಾರ್ಥವಿಚಾರಣಕ್ಷಮಾಃ ।
ಇತೋಽತಿರಿಕ್ತಂ ಸಕಲಂ ಪಲಾಲವತ್
ವೃಥಾ ನ ಲಾಭಾಯ ವಿಶುದ್ಧಚೇತಸಾಮ್ ॥೪೯॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ವಿಶಿಷ್ಟಧರ್ಮವಿಚಾರೋ ನಾಮ ವಿಂಶಾಧ್ಯಾಯಃ

ಗಳಲ್ಲಿ ಆಶೆಯನ್ನು ಬಿಟ್ಟವರಾಗಿ ಧ್ಯಾನಸಮಾಧಿಗಳಿಗೋಸ್ಕರ ಹಿಮವತ್ಪರ್ವತದ ಗುಹೆಯನ್ನು ಪ್ರವೇಶಮಾಡಿದರು. ||೪೭-೪೮||

ವೇದಾರ್ಥವಿಚಾರಮಾಡುವುದರಲ್ಲಿ ಸಮರ್ಥರಾದ ಋಷಿಗಳಿರಾ, ಈ ರೀತಿಯಾಗಿ ಶ್ರೇಷ್ಠವಾದ ಧರ್ಮವಾವುದೆಂಬುದನ್ನು ಸಂಗ್ರಹವಾಗಿ ಹೇಳಿರುತ್ತೇನೆ. ಹೀಗೆ ಹೇಳಿದ ಧರ್ಮವನ್ನು ಬಿಟ್ಟು ಉಳಿದವುಗಳೆಲ್ಲವೂ ಮುಖ್ಯವಸ್ತುವಿಲ್ಲದ ಹೊಟ್ಟಿನಂತೆ ವ್ಯರ್ಥವಾಗಿ ಇರತಕ್ಕವು. ಅವುಗಳಿಂದ ಜ್ಞಾನಿಗಳಿಗೆ ಸ್ವಲ್ಪವೂ ಪ್ರಯೋಜನವಿಲ್ಲವು. ಎಂದು ಸೂತರು ಶೌನಕಾದಿಋಷಿಗಳನ್ನು ಕುರಿತು ಹೇಳಿದರು. ||೪೯||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಧರ್ಮವಿಶೇಷವನ್ನು ವಿವರಿಸಿರುವ ಇಪ್ಪತ್ತನೆಯ ಅಧ್ಯಾಯವು ಮುಗಿದುದು

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ಏಕವಿಂಶೋಽಧ್ಯಾಯಃ ||

ಇಪ್ಪತ್ತೊಂದನೆಯ ಅಧ್ಯಾಯವು

(ಮುಕ್ತಿಸಾಧನವಿಚಾರಃ)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಮುಕ್ತಿಸಾಧನಮಾಸ್ತಿಕಾಃ ।
ಶೃಣುತ ಶ್ರದ್ಧಯಾ ಸಾರ್ಧಂ ಸಾಕ್ಷಾದ್ವೇದಾನ್ತದರ್ಶಿತಮ್ ॥೧॥

ಪರಮಪುರುಷಾರ್ಥವಾದ ಮೋಕ್ಷಕ್ಕೆ ಸಾಧನಗಳು ಅಂತರಂಗಗಳೆಂದೂ ಬಹಿರಂಗಗಳೆಂದೂ ಎರಡು ಬಗೆಯಾಗಿವೆ. ಇವುಗಳನ್ನು ವಿವರಿಸುವ ಪ್ರಸಂಗದಿಂದ ಶಮದಮ ಮುಂತಾದ ಸಾಧನಗಳಲ್ಲಿ ಸಿದ್ಧಿಯನ್ನು ಪಡೆದಿರುವವನೇ ಮುಕ್ತಿಯನ್ನು ಪಡೆಯಲು ಅರ್ಹನಾಗುತ್ತಾನೆ. ಆದುದರಿಂದ ಅಂತಹ ಸಾಧನ ಸಂಪತ್ತನ್ನು ಮುಮುಕ್ಷುಗಳೆಲ್ಲರೂ ಸಂಪಾದಿಸಿಕೊಳ್ಳಬೇಕೆಂದು ತಿಳಿಯಹೇಳಿದೆ. " ಶಾಂತೋ ದಾಂತ ಉಪರತಸ್ತಿತಿಕ್ಷುಃ ಸಮಾಹಿತೋಽಭೂತ್ವಾ ಆತ್ಮನ್ಯೇವ ಆತ್ಮಾನಂ ಪಶ್ಯೇತ್ " ಸುಬಾಲೋಪನಿಷತ್ ೯.೧ಳ ರಲ್ಲಿ ಹೀಗೆಂದು ಹೇಳಿದೆ.

ಆಸ್ತಿಕರಾದ ಋಷಿಗಳೇ, ಹೀಗೆ ಧರ್ಮವಿಚಾರವನ್ನು ಹೇಳಿ ಈಗ ಮುಕ್ತಿಗೆ ಕಾರಣವನ್ನು ಹೇಳುತ್ತೇನೆ. ಇದಾದರೋ ವೇದಾಂತಶಾಸ್ತ್ರದಲ್ಲಿ ಹೇಳಿರುವಂಥಾದ್ದು. ಅದನ್ನು ನೀವುಗಳು ಶ್ರದ್ಧೆಯಿಂದ ಕೇಳಿರಿ. ಏಕೆಂದರೆ ಸಾಧನಸಂಪತ್ತಿಯೂ ಈಶ್ವರಾನುಗ್ರಹದಿಂದಲೇ ಉಂಟಾಗುತ್ತದೆ. ಆ ಅನುಗ್ರಹವೂ ಧರ್ಮಾಚರಣೆಯಿಂದಲೇ ಆಗುತ್ತದೆ. ಹೇಗೆಂದರೆ, ||೧||

ಪುರಾ ದೇವಾದಿಋಷ್ಯಂತಾ ಮುನಯೋ ಮುನಿಸತ್ತಮಾಃ ।
ಸಂಖ್ಯಾ ಚ ಶತಮೇತೇಷಾಂ ಸಹ ದ್ವಾದಶಸಂಖ್ಯಯಾ ॥೨॥

ತ ಏತೇ ಭಸ್ಮದಿಗ್ಧಾಂಗಾಸ್ತ್ರಿಪುಂಡ್ರಾಂಕಿತಮಸ್ತಕಾಃ ।
ರುದ್ರಾಕ್ಷಮಾಲಾಭರಣಾಃ ರುದ್ರಾರಾಧನತತ್ಪರಾಃ ॥೩॥

ತಪಶ್ಚೇರುರ್ಮಹತ್ತೀವ್ರಂ ಶ್ರದ್ಧಯಾ ಪರಯಾ ಸಹ ।
ಶ್ರೀಮದ್ದಕ್ಷಿಣಕೈಲಾಸೇ ಸಾಕ್ಷಾತ್ಸಂಸಾರನಾಶಕೇ ॥೪॥

ಯಸ್ಯ ದರ್ಶನಮಾತ್ರೇಣ ಪಾಪಾನಿ ಸಕಲಾನಿ ತು ।
ನಶ್ಯಂತಿ ವಹ್ನಿಸಂಯುಕ್ತಂ ಯಥಾ ತೂಲಂ ಪ್ರದಹ್ಯತೇ ॥೫॥

ಯಸ್ಮಿನ್ನೇವ ಸತಾಂ ನೄಣಾಮಶೇಷಾಣಾಂ ಮಹೇಶ್ವರಃ ।
ದದಾತಿ ಪರಮಾಂ ಮುಕ್ತಿಮಚಿರೇಣ ದ್ವಿಜೋತ್ತಮಾಃ ॥೬॥

ಯತ್ರ ಭಸ್ಮರತಾನಾಂ ತು ದ್ವಿಜಾನಾಂ ಪ್ರತಿವತ್ಸರಮ್ ।
ಯಥಾಶಕ್ತಿ ಧನಂ ದತ್ವಾ ಮುಚ್ಯೇತ ಭವಬಂಧನಾತ್ ॥೭॥

ಎಲೈ ಋಷಿಶ್ರೇಷ್ಠರೇ, ದೇವಶಬ್ದ ಆದಿಯಾಗಿ ಋಷಿಶಬ್ದವೇ ಅಂತವಾದ ಮುನಿಗಳು (ದೇವರ್ಷಿಗಳು) ಅವರಾದರೊ ಹನ್ನೆರಡರಿಂದ ಕೂಡಿದ ನೂರುಸಂಖ್ಯೆಯುಳ್ಳವರು. ಎಂದರೆ ನೂರ ಹನ್ನೆರಡು (೧೧೨) ಜನಗಳು. ॥೨॥

ಸಂಸಾರವನ್ನು ನಿಶ್ಶೇಷವಾಗಿ ನಾಶಮಾಡುವ ದಕ್ಷಿಣಕೈಲಾಸವೆಂಬ ಪವಿತ್ರವಾದ ಕ್ಷೇತ್ರದ ಸ್ಥಳದಲ್ಲಿ ಆ ದೇವರ್ಷಿಗಳು ಮೈಗೆಲ್ಲಕ್ಕೂ ಭಸ್ಮಲೇಪನಮಾಡಿಕೊಂಡು ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸಿ, ರುದ್ರಾಕ್ಷಮಾಲೆಯುಳ್ಳವರಾಗಿ, ಈಶ್ವರನ ಪೂಜೆಯಲ್ಲಿ ಆಸಕ್ತರಾಗಿ, ಬಹಳ ಭಕ್ತಿಯಿಂದ ಕ್ರೂರವಾದ ತಪಸ್ಸನ್ನು ಮಾಡಿದರು. ॥೩-೪॥

ಯಾವ ದಕ್ಷಿಣಕೈಲಾಸದ ದರ್ಶನಮಾತ್ರದಿಂದಲೇ ಸಕಲ ಪಾಪಗಳೂ, ಅಗ್ನಿಯಿಂದ ಹತ್ತಿಯ ರಾಶಿಯಂತೆ, ನಾಶವಾಗುವುವೋ, ಯಾವ ಸ್ಥಳದಲ್ಲಿರುವ ಸತ್ಪುರುಷರಿಗೆ ಪರಮೇಶ್ವರನು ಶ್ರೇಷ್ಠವಾದ ಮುಕ್ತಿಯನ್ನು ಶೀಘ್ರವಾಗಿಯೇ ಕೊಡುವನೋ, ॥೫-೬॥

ಯಾವ ಸ್ಥಳದಲ್ಲಿ ಭಸ್ಮಧಾರಣಮಾಡುವ ಬ್ರಾಹ್ಮಣರಿಗೆ ಪ್ರತಿವರ್ಷವೂ

ಯತ್ರ ಪ್ರತಿದಿನಂ ಪುಂಸಾಂ ಭಕ್ತಾನಾಂ ಈಶ್ವರಸ್ಯ ತು ।
ಮುಷ್ಟಿಮಾತ್ರಪ್ರದಾನೇನ ಮಹಾಪಾಪಾದ್ವಿಮುಚ್ಯತೇ ॥೮॥

ಯತ್ರ ಸಾಕ್ಷಾಚ್ಛಿವಜ್ಞಾನನಿಷ್ಠಸ್ಯಾತಿಪ್ರಿಯೇಣ ತು ।
ಭೋಜನಂ ಚ ತಥಾ ವಸ್ತ್ರಂ ದತ್ವಾ ಮುಚ್ಯೇತ ಬಂಧನಾತ್ ॥೯॥

ಯತ್ರ ಜಪ್ತಂ ಹುತಂ ದತ್ತಂ ಚಿಂತಿತಂ ಚ ದಿನೇದಿನೇ ।
ಬ್ರಾಹ್ಮಣಾನಾಂ ತಥಾಽನ್ಯೇಷಾಮನನ್ತಂ ಭವತಿ ಧ್ರುವಮ್ ॥೧೦॥

ತಪಸಾ ಶಂಕರಸ್ತೇಷಾಂ ಪ್ರಸನ್ನಃ ಕರುಣಾನಿಧಿಃ ।
ಸಾನ್ನಿಧ್ಯಮಕರೋತ್ತತ್ರ ಶಕ್ತ್ಯಾ ಪರಮಯಾ ಸಹ ॥೧೧॥

ತಂ ದೃಷ್ಟ್ವಾ ಸಾಂಬಮೀಶಾನಂ ಸಾಕ್ಷಾತ್ಸಂಸಾರಭೇಷಜಮ್ ।
ಪ್ರಣಮ್ಯ ದಂಡವದ್ಭೂಮೌ ಪಪ್ರಚ್ಛುರ್ಮುಕ್ತಿಸಾಧನಮ್ ॥೧೨॥

ಯಥಾಶಕ್ತಿಯಾಗಿ ದ್ರವ್ಯವನ್ನು ದಾನಮಾಡಿದಮಾತ್ರದಿಂದಲೇ ಸಂಸಾರದ ಕಟ್ಟಿನಿಂದ ಬಿಡುಗಡೆಯನ್ನು ಹೊಂದಬಹುದೋ, ಮತ್ತು ಯಾವ ಸ್ಥಳದಲ್ಲಿ ಈಶ್ವರ ಭಕ್ತರಾದವರಿಗೆ ಸ್ವಲ್ಪಮಾತ್ರ ದಾನಮಾಡಿದರೂ ಸುರಾಪಾನಾದಿ ಮಹಾಪಾಪಗಳಿಂದಲೂ ಬಿಡುಗಡೆಯನ್ನು ಹೊಂದಬಹುದೋ, ॥೭-೮॥

ಯಾವ ಸ್ಥಳದಲ್ಲಿ ಸಾಕ್ಷಾತ್ ಶಿವಜ್ಞಾನದಲ್ಲಿ ಆಸಕ್ತರಾದವರಿಗೆ ಬಹಳ ಪ್ರೀತಿಯಿಂದ ಅನ್ನವಸ್ತ್ರಗಳನ್ನು ಕೊಟ್ಟರೆ ಸಂಸಾರದಿಂದ ಬಿಡುಗಡೆಯನ್ನು ಪಡೆಯಬಹುದೋ, ॥೯॥

ಯಾವ ಸ್ಥಳದಲ್ಲಿ ಬ್ರಾಹ್ಮಣರಿಂದಾಗಲಿ, ಇತರರಿಂದಾಗಲಿ ಪ್ರತಿದಿನವೂ ಮಾಡಲ್ಪಟ್ಟ ತಪಸ್ಸು ಹೋಮದಾನಗಳು ಅಧಿಕವಾಗುವುವೋ, ಮನಸ್ಸಿನ ನಿರೀಕ್ಷಣೆಯು ನಿಶ್ಚಯವಾಗಿಯೂ ನೆರವೇರುವುದೋ, ಅಂಥ ದಕ್ಷಿಣಕೈಲಾಸದಲ್ಲಿ ದೇವರ್ಷಿಗಳು ತಪಸ್ಸುಮಾಡಿದರು. ॥೧೦॥

ಆ ಋಷಿಗಳ ತಪಸ್ಸಿನಿಂದ ಸಂತೋಷಗೊಂಡ ಕರುಣಾಶಾಲಿಯಾದ ಪರಮೇಶ್ವರನು ದೇವಿಯಿಂದ ಕೂಡಿ ಪ್ರತ್ಯಕ್ಷನಾದನು. ॥೧೧॥

ಪ್ರತ್ಯಕ್ಷನಾದ ಪಾರ್ವತೀದೇವಿಯಿಂದ ಸಮೇತನಾದ, ಸಂಸಾರರೋಗಕ್ಕೆ ಔಷಧಿಯಾದ, ಭವರೋಗವೈದ್ಯನಾದ, ಈಶ್ವರನನ್ನು ನೋಡಿ, ಆ ಋಷಿಗಳು

ದೇವೋಽಪಿ ಕರುಣಾಽಽಽಪಿಷ್ಟಸ್ಸಾಕ್ಷಾತ್ಸಂಸಾರಮೋಚಕಃ ।
ಮುನೀನಾಮುಗ್ರತಪಸಾಂ ಬಭಾಷೇ ಮುಕ್ತಿಸಾಧನಮ್ ॥೧೩॥

॥ ಓಂ ಈಶ್ವರ ಉವಾಚ ॥

ವಕ್ಷ್ಯಾಮಿ ಪರಮಂ ಗುಹ್ಯಂ ಮುಕ್ತಿಸಾಧನಮಾದರಾತ್ ।
ವರ್ಣಾಶ್ರಮಸಮಾಚಾರಾದೇವ ಮುಕ್ತಿರ್ನ ಚಾನ್ಯತಃ ॥೧೪॥

ಭೂಮಿಯ ಮೇಲೆ ಸಾಷ್ಟಾಂಗ ನಮಸ್ಕಾರಮಾಡಿದರು. ಮತ್ತು ಮುಕ್ತಿಗೆ ಸಾಧನ ವಾವುದೆಂದು ಪ್ರಶ್ನೆಯನ್ನು ಮಾಡಿದರು. ||೧೨||

ಸಂಸಾರದುಃಖದಿಂದ ಬಿಡುಗಡೆಮಾಡುವ ಆ ಪರಮೇಶ್ವರನು ಕರುಣೆಯಿಂದ ಕೂಡಿದವನಾಗಿ ಘೋರತಪಸ್ವಿಗಳಾದ ಆ ಋಷಿಗಳನ್ನು ಕುರಿತು ಮುಕ್ತಿಗೆ ಸಾಧನ ವಾವುದೆಂಬುದನ್ನು ಮುಂದೆ ಹೇಳುವ ರೀತಿಯಲ್ಲಿ ವಿವರಿಸಿದನು. ||೧೩||

ಈಶ್ವರನು ಹೇಳಿದನು—ಎಲೈ ಋಷಿಗಳೇ, ಬಹಳ ರಹಸ್ಯವಾದ ಮುಕ್ತಿಯ ಸಾಧನವನ್ನು ಹೇಳುತ್ತೇನೆ. ಬ್ರಾಹ್ಮಣಾದಿವರ್ಣದವರು ತಮ್ಮ ತಮ್ಮ ವರ್ಣಾಶ್ರಮಗಳಿಗೆ ವಿಹಿತವಾದ ಧರ್ಮಾಚರಣೆಯೇ ಮುಕ್ತಿಗೆ ಸಾಧನವು ಎಂದರೆ ಬ್ರಾಹ್ಮಣವರ್ಣದವರಿಗೆ ಯಜ್ಞಯಾಗಾದಿಗಳನ್ನು ಮಾಡುವುದು ಮತ್ತು ಮಾಡಿಸುವುದು ; ಮತ್ತು ತಿಳಿವಳಿಕೆಯನ್ನು ಸಂಪಾದಿಸಿ ಅದನ್ನು ಉಪದೇಶ ಮತ್ತು ಆಚರಣೆಗಳಿಂದ ಇತರರಿಗೂ ತಿಳಿಸಿ ಧರ್ಮವನ್ನು ಪ್ರಚಾರಮಾಡುವುದು ; ಕ್ಷತ್ರಿಯರಿಗೆ ರಾಜ್ಯಪರಿಪಾಲನೆ ಮಾಡುವುದು ; ವಿಪತ್ತಿಗೆ ಸಿಕ್ಕಿರುವ ಜನರನ್ನು ಅಪಾಯಕ್ಕೆ ಹೆದರದೆ ಧೈರ್ಯದಿಂದ ಮುಂದುವರಿದು ಕಾಪಾಡುವುದು. ವೈಶ್ಯರಿಗೆ—ಧನ, ಕೃಷಿ, ಗೋವುಗಳನ್ನು ಕಾಪಾಡುವುದು ; ಮತ್ತು ಧರ್ಮದಿಂದ ದೇಶದಲ್ಲಿ ಬೆಳೆದ ದವಸ ಧಾನ್ಯಗಳನ್ನೂ ತಯಾರಿಸಿದ ವಸ್ತುಗಳನ್ನೂ ನ್ಯಾಯವಾಗಿ ಎಲ್ಲರಿಗೂ ದೊರೆಯುವಂತೆ ಮಾಡುತ್ತಾ, ದೇಶದ ಜನರ ಆರ್ಥಿಕಸಂಪತ್ತನ್ನು ಕಾಪಾಡುತ್ತಿರುವುದು ; ಶೂದ್ರರಿಗೆ ಧರ್ಮನಿರತರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಸೇವೆಮಾಡುವುದು ; ಇವೇ ಆಯಾ ವರ್ಣದವರಿಗೆ ವಿಹಿತಗಳಾದುವು. ಇವುಗಳನ್ನು ಸರಿಯಾಗಿ ನಡೆಸುತ್ತಿದ್ದರೆ ಅದರಿಂದಲೇ ಮುಕ್ತಿಯಾಗುವುದೇ ವಿನಾ ಬೇರೆ ಯಾವುದರಿಂದಲೂ ಆಗುವುದಿಲ್ಲ. ಈ ಅಂಶವನ್ನು ಭಗವದ್ಗೀತಾ ಅ. ೩. ಶ್ಲೋ. ೩೫ ರಲ್ಲಿ ವಿವರಿಸಿದೆ. ||೧೪||

ಸ್ವಜಾತಿವಿಹಿತಂ ಧರ್ಮಂ ಯಃ ಕರೋತಿ ಪ್ರಿಯೇಣ ತು ।
ಸ ಜಾಯತೇ ಕುಲೇ ಮುಖ್ಯೇ ವಿಪ್ರಾಣಾಮೀಶ್ವರಾಜ್ಞಯಾ ॥೧೫॥

ಸ ಪುನರ್ಜಾತಕರ್ಮಾದಿಸಂಸ್ಕಾರೈರಪಿ ಸಂಸ್ಕೃತಃ ।
ಉಪನೀತೋ ಗುರೋರ್ವೇದಾನಧೀತ್ಯ ವಿಧಿವತ್ಪುನಃ ॥೧೬॥

ದಾರಾನಾಹೃತ್ಯ ಯಜ್ಞಂ ಚ ದಾನಂ ಚ ವಿಧಿವತ್ತದಾ ।
ತಪಶ್ಚ ವಿವಿಧಂ ಘೋರಂ ಕೃತ್ವಾ ಕಾಮನಯಾ ವಿನಾ ॥೧೭॥

ಪ್ರಣಷ್ಟಪಾಪಶ್ಶುದ್ಧಾನ್ತಃ ಕರಣೋ ಜ್ಞಾನವಾಂಛಯಾ ।
ವಿರಕ್ತಸ್ಸರ್ವಲೋಕೇಭ್ಯೋ ದೋಷಾಣಾಂ ತು ನಿರೂಪಣಾತ್॥೧೮॥

ಯಾವನು ತಮ್ಮ ತಮ್ಮ ಜಾತಿಗೆ ಗೊತ್ತುಮಾಡಲ್ಪಟ್ಟಿರುವ ಧರ್ಮವನ್ನು ತಪ್ಪದೆ ಪ್ರೀತಿಯಿಂದ ಆಚರಿಸುತ್ತಾನೋ ಅವನು ಈಶ್ವರನನುಗ್ರಹದಿಂದ ಕ್ರಮವಾಗಿ ಶ್ರೇಷ್ಠವಾದ ಬ್ರಾಹ್ಮಣವಂಶದಲ್ಲಿ ಹುಟ್ಟುತ್ತಾನೆ. ಈ ವಿಷಯವನ್ನು ಭಗವದ್ಗೀತೆಯಲ್ಲಿ ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ । ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥ ೩.೩೫., ಮತ್ತು ೬.೪೨-೪೪ ರಲ್ಲೂ ವಿವರಿಸಿದೆ. ॥೧೫॥

ಹೀಗೆ ಬ್ರಾಹ್ಮಣಕುಲದಲ್ಲಿ ಹುಟ್ಟಿ ಮತ್ತೆ ಜಾತಕರ್ಮ, ನಾಮಕರಣ ಮೊದಲಾದ ಸಂಸ್ಕಾರಗಳನ್ನು ಪಡೆದು ಉಪನಯನವನ್ನು ಮಾಡಿಸಿಕೊಂಡು ಶಾಸ್ತ್ರದಲ್ಲಿ ಹೇಳಿರುವ ರೀತಿಯಿಂದ ಗುರುಗಳಲ್ಲಿ ವೇದಾಧ್ಯಯನವನ್ನು ಮಾಡಿ ಅನಂತರ ವಿವಾಹಮಾಡಿಕೊಂಡು ಶಾಸ್ತ್ರೋಕ್ತವಾದ ಯಜ್ಞ, ದಾನ, ಘೋರವಾದ ತಪಸ್ಸು ಇವುಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡುತ್ತಾನೆ. ॥೧೬-೧೭॥

ಫಲಾಪೇಕ್ಷೆಯಿಲ್ಲದೆ ಮಾಡಿದ ಕರ್ಮದಿಂದ, ಸಮಸ್ತಪಾಪಗಳನ್ನೂ ಕಳೆದುಕೊಂಡು ಪರಿಶುದ್ಧವಾದ ಮನಸ್ಸುಳ್ಳ ಜ್ಞಾನಿಯಾಗಿ, ಸ್ವರ್ಗಾದಿಸುಖಗಳಲ್ಲಿಯೂ ಕೂಡ ಅವಿಶುದ್ಧಿ, ಕ್ಷಯ, ಅತಿಶಯ, ಎಂಬ ದೋಷವಿರುವುದರಿಂದ ಅವುಗಳನ್ನು ಅಪೇಕ್ಷಿಸದೆ ವೈರಾಗ್ಯವನ್ನು ಹೊಂದುತ್ತಾನೆ. ॥೧೮॥

ಚಿತ್ತಪಾಕಾನುಗುಣ್ಯೇನ ಪ್ರವ್ರಜ್ಯಾಂ ಕುರುತೇ ಪುನಃ ।
ಮುಮುಕ್ಷುಸ್ತತ್ರ ಸಂನ್ಯಾಸೀ ಪ್ರೇರಿತಃ ಪರಮೇಶ್ವರಾತ್ ॥೧೯॥

ಕುಟೀಚಕಾಭಿಧಾಂ ವೃತ್ತಿಂ ವೃತ್ತಿಂ ವಾಽಥ ಬಹೂದಕಾಮ್ ।
ಹಂಸವೃತ್ತಿಂ ತು ವಾ ನಿತ್ಯಂ ವಾಂಛತೇ ಮುನಿಸತ್ತಮಾಃ ॥೨೦॥

ಮುಮುಕ್ಷುರ್ಭಿಕ್ಷುಕೋ ನಿತ್ಯಂ ಪರಹಂಸಾಭಿಧಾಂ ಶುಭಾಮ್ ।
ವೃತ್ತಿಮಿಚ್ಛತಿ ದೇವಸ್ಯ ಪ್ರಸಾದೇನ ದ್ವಿಜೋತ್ತಮಾಃ ॥೨೧॥

ಕುಟೀಚಕಾದಿವೃತ್ತಿಸ್ಥೋ ಮುಕ್ತಿಮಿಚ್ಛತಿ ಚೇದ್ದ್ವಿಜಾಃ ।
ಪರಹಂಸಾಭಿಧಾಂ ವೃತ್ತಿಂ ಪ್ರಾಪ್ನುಯಾಚ್ಛಂಕರಾಜ್ಞಯಾ ॥೨೨॥

ವೈರಾಗ್ಯವು ಬಂದನಂತರ ಸಂಸ್ಕಾರದಿಂದ ಮನಸ್ಸು ಪರಿಪಕ್ವವಾಗುವುದರಿಂದ "ಯದಹರೇವ ವಿರಜೇತ್ತದಹರೇವ ಪ್ರವ್ರಜೇತ್" (ಯಾವ ದಿವಸ ವೈರಾಗ್ಯ ವುಂಟಾಗುವುದೋ ಅದೇ ದಿವಸವೇ ಸಂನ್ಯಾಸಿಯಾಗಬೇಕು) ಎಂಬ ಶ್ರುತಿಯನ್ನನು ಸರಿಸಿ, ಸಂನ್ಯಾಸವನ್ನು ಪಡೆಯುತ್ತಾನೆ.

ಎಲೈ ಋಷಿಗಳೇ, ಹೀಗೆ ಸಂನ್ಯಾಸವನ್ನು ಹೊಂದಿದವನಾಗಿ ಮೋಕ್ಷವನ್ನು ಪಡೆಯಲಿಚ್ಛಿಸುತ್ತಿರುವ ಅವನು ಈಶ್ವರನ ಪ್ರೇರಣೆಯಿಂದ ಕುಟೀಚಕ, ಬಹೂದಕ, ಹಂಸ ಎಂಬ ಸಂನ್ಯಾಸಾಶ್ರಮಗಳಲ್ಲಿ ಒಂದನ್ನು ಆಶ್ರಯಿಸುತ್ತಾನೆ. ॥೧೯-೨೦॥

ಸಾಧನಚತುಷ್ಟಯದಲ್ಲಿ ಒಂದಾದ ಮುಮುಕ್ಷುತ್ವವು (ಮೋಕ್ಷವನ್ನು ಹೊಂದಬೇಕೆಂಬ ಇಚ್ಛೆ) ಈಶ್ವರನ ಅನುಗ್ರಹದಿಂದ ಉಂಟಾಗಲು ಕುಟೀಚಕ, ಬಹೂದಕ, ಹಂಸ, ಪರಮಹಂಸ, ಎಂಬ ಸಂನ್ಯಾಸದ ನಾಲ್ಕು ಆಶ್ರಮಗಳ ಪೈಕಿ ಪರಮಹಂಸಾಶ್ರಮದಲ್ಲಿರುವಿಕೆಯು ಅವನಿಗೇ ಲಭಿಸುತ್ತದೆ. ಇತರರಾದ ಕುಟೀಚಕಾದ್ಯಾಶ್ರಮಿಗಳಿಗೆ ಲಭಿಸುವುದಿಲ್ಲ. ॥೨೧॥

ಕುಟೀಚಕ ಮೊದಲಾದ ಆಶ್ರಮಗಳಲ್ಲಿರತಕ್ಕವರು ಮೋಕ್ಷವನ್ನು ಪಡೆಯಲು ಇಚ್ಛಿಸಿದರೆ, ಅವರೂ ಈಶ್ವರನ ಅನುಗ್ರಹದಿಂದ ಪರಮಹಂಸಾಶ್ರಮವನ್ನು ಆಶ್ರಯಿಸಿಯೇ ಮುಕ್ತರಾಗುತ್ತಾರೆ. ಇಲ್ಲಿ ನಾವು ಗಮನಿಸಬೇಕಾದ ವಿಶೇಷವೇನೆಂದರೆ, ॥೨೨॥

ಸರ್ವೇಷಾಮಪಿ ಭಿಕ್ಷೂಣಾಂ ಶಾಂತಿರ್ದಾನ್ತಿಸ್ತಿತಿಕ್ಷತಾ।
ಸ್ನಾನಂ ಶೌಚಮಹಿಂಸಾ ಚ ಮಿಥ್ಯಾಭಾಷಣವರ್ಜನಮ್ ॥೨೩॥

ಅಗ್ನಿರಿತ್ಯಾದಿಭಿರ್ಮಂತ್ರೈರ್ಭಸ್ಮನೋದ್ಧೂಳನಂ ತಥಾ।
ತ್ರಿಪುಂಡ್ರಧಾರಣಂ ಸಾಕ್ಷಾದ್ಬ್ರಹ್ಮವಿಷ್ಣುಶಿವಾತ್ಮಕಮ್ ॥೨೪॥

ಲಿಂಗೇ ಶಿವಾರ್ಚನಂ ನಿತ್ಯಂ ಧರ್ಮಾಃ ಪ್ರೋಕ್ತಾಃ ಸನಾತನೈಃ।
ಸಾಕ್ಷಾದ್ವೇದಾನ್ತವಾಕ್ಯಾನಾಂ ಶ್ರವಣಂ ಮನನಂ ತಥಾ ॥೨೫॥

ನಿಧಿಧ್ಯಾಸನಮಾಚಾರ್ಯಪರಿಚರ್ಯಾ ಪ್ರಿಯೇಣ ತು।
ಪರಮಹಂಸಸ್ಯ ಧರ್ಮೋಽಯಂ ವಿಶೇಷೇಣ ಸಮೀರಿತಃ ॥೨೬॥

ಬ್ರಹ್ಮಜ್ಞಾನೋತ್ಪತ್ತಿಗೆ ಮುಖ್ಯಸಾಧನವಾದ ಸಂನ್ಯಾಸಾಶ್ರಮಧರ್ಮಗಳನ್ನು ಹೇಳುತ್ತಾರೆ.

ಎಲ್ಲಾ ಆಶ್ರಮದ ಸಂನ್ಯಾಸಿಗಳೂ ಶಾಂತಿ, ದಾಂತಿ, ತಿತಿಕ್ಷಾ ಉಳ್ಳವರಾಗಿರಬೇಕು. (ಶಾಂತಿ ಎಂದರೆ ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗುಗಳೆಂಬ ಜ್ಞಾನೇಂದ್ರಿಯಗಳ ನಿಗ್ರಹವು. ದಾಂತಿ ಎಂದರೆ ವಾಕ್, ಪಾಣಿ, ಪಾದ, ಪಾಯು, ಉಪಸ್ಥಗಳೆಂಬ ಕರ್ಮೇಂದ್ರಿಯಗಳ ನಿಗ್ರಹವು. ತಿತಿಕ್ಷಾ ಎಂದರೆ ಶೀತೋಷ್ಣ, ಸುಖದುಃಖಾದಿ ದ್ವಂದ್ವದ ಸಹನೆಯು) ಮೃತ್ತಿಕಾಶೌಚ, ಸ್ನಾನ ಮತ್ತೊಂದು ಪ್ರಾಣಿಗೆ ಹಿಂಸೆಮಾಡದಿರುವುದು, ಸುಳ್ಳುಹೇಳದಿರುವುದು, "ಅಗ್ನಿರಿತಿ ಭಸ್ಮ" ಇವೇ ಮೊದಲಾದ ಮಂತ್ರಗಳಿಂದ ಭಸ್ಮಧಾರಣೆಮಾಡುವುದು ಬ್ರಹ್ಮ, ವಿಷ್ಣು, ಶಿವಸ್ವರೂಪವಾದ ತ್ರಿಪುಂಡ್ರವನ್ನು ಹಣೆಯಲ್ಲಿ ಧರಿಸುವುದು. ||೨೩-೨೪||

ಲಿಂಗದಲ್ಲಿ ಈಶ್ವರನ ಪೂಜೆಯನ್ನು ಪ್ರತಿದಿನವೂ ತಪ್ಪದೆ ಮಾಡುವುದು ಇವುಗಳು ಸಂನ್ಯಾಸಾಶ್ರಮಿಗಳ ಧರ್ಮವೆಂದು ಪೂರ್ವಿಕರಿಂದ ಹೇಳಲ್ಪಟ್ಟಿವೆ.

ವೇದಾಂತವಾಕ್ಯಗಳನ್ನು ಅರ್ಥವಿಚಾರಪೂರ್ವಕವಾಗಿ ಗುರುಗಳಿಂದ ಶ್ರವಣ ಮಾಡುವುದು, ಆ ತಾತ್ಪರ್ಯಾರ್ಥದಲ್ಲಿ ಅಸಂಭಾವನೆ, ವಿಪರೀತಭಾವನೆಗಳು ತೋರಿಬಂದರೆ ಆ ದೋಷಗಳೆಲ್ಲವೂ ಹೋಗುವಂತೆ ಯುಕ್ತಿ ಅನುಭವಗಳಿಂದ ಮನನಮಾಡುವುದು, ನಿದಿಧ್ಯಾಸನ ಏಕಾಗ್ರತೆಯಿಂದ ಉಪಾಸನೆ ಮಾಡುವುದು, ಭಕ್ತಿಯಿಂದ ಗುರುಗಳ ಸೇವೆಮಾಡುವುದು ಇವುಗಳು ಪರಮಹಂಸಾಶ್ರಮದ ವಿಶೇಷವಾದ ಧರ್ಮಗಳೆಂದು ಹೇಳಿದ್ದಾರೆ. ||೨೫-೨೬||

ಪೂರ್ವಪುಣ್ಯಫಲಾತ್ಸಾಕ್ಷಾತ್ಪ್ರಸಾದಾಚ್ಚ ಶಿವಸ್ಯ ತು ।
ಬ್ರಹ್ಮಾತ್ಮವಿಷಯಂ ಜ್ಞಾನಂ ಲಭತೇ ಭಿಕ್ಷುಕೋಽಚಿರಾತ್ ॥೨೭॥

ಜ್ಞಾನಾದ್ವೇದಾನ್ತವಾಕ್ಯೋತ್ಥಾನ್ಮುಕ್ತಿಂ ಭಿಕ್ಷುರವಾಪ್ನುಯಾತ್ ।
ವಿನಾ ಜ್ಞಾನೇನ ಮುಕ್ತಿಸ್ತು ನ ಸಿಧ್ಯತಿ ನ ಸಿಧ್ಯತಿ ॥೨೮॥

ಮುಕ್ತಿಸಾಧನಮಾಖ್ಯಾತಂ ಸಂಗ್ರಹೇಣ ಮುನೀಶ್ವರಾಃ ।
ಜ್ಞಾನೇ ಯೂಯಮಪಿ ಶ್ರದ್ಧಾಂ ಕುರುಧ್ವಂ ಯತ್ನತಸ್ಸದಾ ॥೨೯॥

ಇತ್ಯುಕ್ತ್ವಾ ಭಗವಾನ್ ರುದ್ರಸ್ಸಾಕ್ಷಾತ್ಸಂಸಾರಮೋಚಕಃ ।
ಆಗಮಾಂತೈಕಸಂವೇದ್ಯಸ್ತತ್ರೈವಾಂತರ್ಹಿತೋಽಭವತ್ ॥೩೦॥

ಭವಂತೋಽಪಿ ಪ್ರಸಾದೇನ ಶಿವಸ್ಯ ಪರಮಾತ್ಮನಃ ।
ಮತ್ತೋ ಲಬ್ಧಪರಿಜ್ಞಾನಾ ಅಭವನ್ನಚಿರೇಣ ತು ॥೩೧॥

ಹೀಗೆ ಮಾಡಿದರೆ ಅಂಥ ಪರಮಹಂಸಸಂನ್ಯಾಸಿಯು ತಾನು ಮಾಡಿದ ಪೂರ್ವದ ಪುಣ್ಯದ ಮಹಿಮೆಯಿಂದಲೂ ಜಾಗ್ರತೆಯಾಗಿ ಬ್ರಹ್ಮ ಮತ್ತು ಆತ್ಮ ಇವೆರಡಕ್ಕೂ ಸಚ್ಚಿದಾನಂದರೂಪದಲ್ಲಿ ಇರುವ ಅಭೇದವಿಷಯವಾದ ಜ್ಞಾನವನ್ನು ಪಡೆಯುತ್ತಾನೆ. ॥೨೭॥

ಎಲೈ ಋಷಿಗಳಿರಾ, ಮುಕ್ತಿಗೆ ಸಾಧನವನ್ನು ಸಂಗ್ರಹವಾಗಿ ಹೇಳಿದ್ದೇನೆ. ಮುಕ್ತಿಗೆ ಸಾಧನವಾದ ಜ್ಞಾನವನ್ನು ಸಂಪಾದಿಸುವುದರಲ್ಲಿ ಯಾವಾಗಲೂ ನೀವು ಪ್ರಯತ್ನ ಆದರ, ಪ್ರೀತಿಗಳುಳ್ಳವರೂ ಆಗಿರಿ. ಎಂದು ಈಶ್ವರನು ದೇವರ್ಷಿಗಳನ್ನು ಕುರಿತು ಹೇಳಿದನು. ॥೨೯॥

ಸೂತನು ಹೇಳಿದನು—ಹೀಗೆ ಸಂಸಾರದಿಂದ ಬಿಡುಗಡೆಯನ್ನು ನೇರವಾಗಿ ಉಂಟುಮಾಡುವ, ಉಪನಿಷತ್ತುಗಳಿಂದ ಮಾತ್ರ ತಿಳಿಯಲು ಸಾಧ್ಯನಾದ, ಆ ಈಶ್ವರನು ದೇವರ್ಷಿಗಳನ್ನು ಕುರಿತು ಹೇಳಿ, ಅಲ್ಲಿಯೇ ಅಂತರ್ಧಾನನಾದನು. ॥೩೦॥

ಎಲೈ ಶೌನಕಾದಿಋಷಿಗಳೇ, ನೀವೂ ಕೂಡ ಪರಮಾತ್ಮಸ್ವರೂಪನಾದ ಈಶ್ವರನ ಅನುಗ್ರಹದಿಂದ ನನ್ನ ಮೂಲಕ ವಿವೇಕಜ್ಞಾನವನ್ನು ಪಡೆದವರಾಗಿದ್ದೀರಿ. ॥೩೧॥

ಶ್ರೀಮದ್ದಕ್ಷಿಣಕೈಲಾಸಂ ಸರ್ವಸ್ಥಾನೋತ್ತಮೋತ್ತಮಮ್ ।
ವಾಂಛಿತಾರ್ಥಪ್ರದಂ ನೃಣಾಮಿತಿ ವಿತ್ತ ವಿಚಕ್ಷಣಾಃ ॥೩೨॥

ಶ್ರೀಮದ್ದಕ್ಷಿಣಕೈಲಾಸಮದೃಷ್ಟ್ವಾ ಮುಕ್ತಿಮಿಚ್ಛತಃ ।
ನಾಸ್ತಿ ಸಂಸಾರವಿಚ್ಛಿತ್ತಿಸ್ಸತ್ಯಂ ಸತ್ಯಂ ನ ಸಂಶಯಃ ॥೩೩॥

ವಿಷ್ಣುಪ್ರಜಾಪತೀಂದ್ರೇಭ್ಯಶ್ಶಿವಸ್ಯಾಧಿಕ್ಯಮಾದರಾತ್ ।
ಅವಿಜ್ಞಾಯ ನ ಸಂಸಾರಾನ್ಮುಚ್ಯತೇ ಜನ್ಮಕೋಟಿಭಿಃ ॥೩೪॥

ವರ್ಣಾಶ್ರಮಸಮಾಚಾರಂ ವಿನಾ ಕೈವಲ್ಯಮಿಚ್ಛತಃ ।
ನಾಸ್ತಿ ಕೈವಲ್ಯಸಂಸಿದ್ಧಿಃ ಸತ್ಯಂ ಸತ್ಯಂ ನ ಸಂಶಯಃ ॥೩೫॥

ಬುದ್ಧಿವಂತರಾದ ನೀವು ದಕ್ಷಿಣಕೈಲಾಸವು ಇತರ ಎಲ್ಲಾ ಸ್ಥಳಗಳಿಗಿಂತಲೂ ಉತ್ತಮವಾದದ್ದನ್ನಾಗಿಯೂ, ಮನುಷ್ಯರು ಬೇಡಿದ ಇಷ್ಟಾರ್ಥವನ್ನು ಕೊಡುವುದನ್ನಾಗಿಯೂ ತಿಳಿಯಿರಿ. ||೩೨||

ಶ್ರೇಷ್ಠವಾದ ದಕ್ಷಿಣಕೈಲಾಸವನ್ನು ನೋಡದೆ ಮುಕ್ತಿಯನ್ನಪೇಕ್ಷಿಸುವವರಿಗೆ ಖಂಡಿತವಾಗಿಯೂ ಮುಕ್ತಿಯು ದೊರೆಯುವುದಿಲ್ಲ. ಈ ವಿಷಯದಲ್ಲಿ ಸಂದೇಹವಿಲ್ಲವು. ||೩೩||

ವಿಷ್ಣು, ಬ್ರಹ್ಮ, ಇಂದ್ರ—ಇವರಿಗಿಂತಲೂ ಶಿವನು ಹೆಚ್ಚಿಗೆಯುಳ್ಳವನು ಎಂಬುದನ್ನು ವಿಶ್ವಾಸದಿಂದ ತಿಳಿಯದೆ ಅನೇಕ ಕೋಟಿ ಜನ್ಮಗಳನ್ನೆತ್ತಿದಾಗ್ಯೂ ಕರ್ತೃತ್ವ, ಭೋಕ್ತೃತ್ವ, ಜನನ, ಮರಣ ಇವುಗಳ ಪರಂಪರೆಯಲ್ಲಿ ಸಿಕ್ಕಿಕೊಂಡಿರುವಿಕೆ ಎಂಬ ಸಂಸಾರದಲ್ಲಿ ನಾನು ನನ್ನದು ಎಂದು ಮುಂತಾದ ಅಭಿಮಾನದಿಂದ ಬಿಡುಗಡೆ ಎಂಬ ಮುಕ್ತಿಯು ಸಿಕ್ಕಲಾರದು. ||೩೪||

ವರ್ಣಾಶ್ರಮಧರ್ಮಗಳನ್ನು ನಡೆಸದೆ ಮುಕ್ತಿಯನ್ನು ಅಪೇಕ್ಷಿಸುವವನಿಗೂ ಖಂಡಿತವಾಗಿ ಮುಕ್ತಿಯು ದೊರೆಯುವುದಿಲ್ಲ. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲವು. ಏಕೆಂದರೆ ಧರ್ಮಾಚರಣೆಯನ್ನು ಬಿಡುವುದರಲ್ಲಿ ಎರಡು ಕಾರಣಗಳಿರುವುದು ಕಂಡುಬರುತ್ತಿದೆ. ಮೊದಲನೆಯದು ಅಜ್ಞಾನ ಮತ್ತು ಸೋಮಾರಿತನ. ಇವುಗಳಿಂದ ಕರ್ಮಗಳನ್ನು ಬಿಟ್ಟಿರುವುದಾದರೆ "ದುಃಖಮಿತ್ಯೇವಯತ್ಕರ್ಮಕಾಯಕ್ಲೇಶಭಯಾತ್ ತ್ಯಜೇತ್ । ಸಕೃತ್ವಾ ರಾಜಸಂತ್ಯಾಗಂ ನೈವತ್ಯಾಗಫಲಂ ಲಭೇತ್ ॥" ಎಂದು ಭಗವದ್ಗೀತಾ ೧೮.೮. ರಲ್ಲಿ ಹೇಳಿರುವಂತೆ ಇಂತಹ ಕರ್ಮತ್ಯಾಗದಿಂದ

ಜ್ಞಾನರೂಪವಾದ ಫಲವಾಗುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಎರಡನೆಯದಾಗಿ ತಕ್ಕ ಸೌಕರರ್ಯಸನ್ನಿವೇಶಗಳಿಲ್ಲದೆ ಅಥವಾ ಅಶಕ್ತಿಯಿಂದ ಕರ್ಮಗಳನ್ನು ಬಿಟ್ಟಿರಬಹುದು. ಇದೂ ಸರಿಯಲ್ಲವು. ಏಕೇದರೆ—

"ಅರ್ಥಾ ನಸ್ಯುರ್ಯದಿ ವಿಜಹಿಮೋ ಧರ್ಮಮರ್ಥೈಕಸಾಧ್ಯಂ
ಕಾಯಕ್ಲೇಶೈಃ ಕತಿಕತಿವಿಧಃ ಸಾಧನೀಯೋ ನ ಧರ್ಮಃ ।
ಕಾಯಃ ಶ್ರಾಂತೋ ಭವತಿ ಯದಿ ಕಸ್ತಾವತಾ ಧರ್ಮಲೋಪಃ
ಚಿತ್ತಂ ದತ್ವಾ ಪರಶಿವಪದೇ ಚಿಂತಿತಂ ಸಾಧಯಾಮಃ ॥

ಎಂದು ಹೇಳಿರುವಂತೆ ಹಣ ಮುಂತಾದ ಸೌಕರ್ಯಗಳಿಲ್ಲದಿದ್ದರೆ, ಅದರಿಂದಲೇ ಸಾಧ್ಯವಾಗುವ ಧರ್ಮಗಳನ್ನು ಆಚರಿಸದೆ ಬಿಟ್ಟಿದ್ದರೂ, ಸೋಮಾರಿತನವನ್ನು ಬಿಟ್ಟು ದೇಹಶ್ರಮದಿಂದ ಸಾಧ್ಯವಾಗುವ, ಉತ್ತಮ ಫಲವನ್ನೂ ಕೊಡುವ, ಅಧ್ಯಯನ, ಅಧ್ಯಾಪನ, ಸ್ನಾನ, ಜಪ, ಪೂಜಾ, ಸತ್ಪುರುಷಸೇವಾ ಮುಂತಾದ ಧರ್ಮಗಳನ್ನು ಆಚರಿಸುತ್ತಿರುವುದರಿಂದ ಫಲವನ್ನು ಸಾಧಿಸಬಹುದು. ಆ ದೇಹವೂ ಪೋಷಣೆಗೆ ಅವಕಾಶವಿಲ್ಲದೆ, ರೋಗಾದಿಗಳಿಂದ ಅಶಕ್ತವಾಗಿದ್ದರೂ ಪರಶಿವನ ಪಾದವನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಜಪಮಾಡುವುದು, ವೇದಾಂತ ವಾಕ್ಯಾರ್ಥವನ್ನು ಮನನಮಾಡುವುದು, ಈ ಮುಂತಾದ ಧರ್ಮದಿಂದಲಾದರೂ ಮೋಕ್ಷಕ್ಕೆ ಸಾಧನವಾದ ತಿಳಿವಳಿಕೆಯನ್ನು ಸಂಪಾದಿಸಿ ಫಲವನ್ನು ಪಡೆಯಬೇಕೇ ಹೊರತು ಆಗಲೂ ಧರ್ಮಾಚರಣೆಯನ್ನು ಬಿಡಕೂಡದು. ಆದುದರಿಂದ ಧರ್ಮಾಚರಣೆಯು ಅತ್ಯವಶ್ಯಕವಾದುದು ಎಂದು ಭಾವವು. ಮೂರನೆಯದಾಗಿ ಸಾಧನ ಚತುಷ್ಟಯದ ಸಂಪಾದನೆಯ ಪ್ರಭಾವದಿಂದ, ಎಂದರೆ ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರಫಲಭೋಗವಿರಾಗ, ಶಮದಮಾದಿಸಾಧನಸಂಪತ್ತು, ಮುಮುಕ್ಷುತ್ವ, ಇವುಗಳ ಸಾಧನೆಯಿಂದ, ಕರ್ಮಾಚರಣೆಯು ಸ್ವಾಭಾವಿಕವಾಗಿ, ತಾನಾಗಿಯೇ, ಬಿಟ್ಟುಹೋಗುವುದುಂಟು. ಅಂತಹ ಸಂದರ್ಭದಲ್ಲಿ ದೋಷವೇನೂ ಇಲ್ಲವು. ಆಗಲೂ ಕೃಷ್ಣ, ನಾರದ, ಶಂಕರರಂತೆ ಜೀವನ್ಮುಕ್ತರಾಗಿರುತ್ತಾ ಲೋಕಸಂಗ್ರಹಾರ್ಥವಾಗಿ ವರ್ಣಾಶ್ರಮ ಕರ್ಮಗಳನ್ನು ಮಾಡುತ್ತಾ, ಧರ್ಮಾಚರಣೆಯ ಮೇಲುಪಂಙ್ತಿಯನ್ನು ಜನರಿಗೆ ತೋರಿಸಿ ಅವರನ್ನೂ ಸನ್ಮಾರ್ಗದಲ್ಲಿರುವಂತೆ ಮಾಡುವುದೆಂಬ ಧರ್ಮಾಚರಣೆಯನ್ನು, ನಿಷ್ಕಾಮ ಕರ್ಮಯೋಗವನ್ನು, ಆಚರಿಸುತ್ತಿರುವುದು ಮೇಲೆಂಬುದೂ ಗೊತ್ತಾಗುತ್ತದೆ. ಹೀಗಿರುವುದರಿಂದ ಕರ್ಮ ಅಥವಾ ಧರ್ಮಗಳ ಆಚರಣೆಯು ಎಲ್ಲರಿಗೂ ಎಲ್ಲ ಕಾಲಗಳಲ್ಲೂ ಶ್ರೇಯಸ್ಕರವಾದುದೆಂಬುದನ್ನು

ಪ್ರತ್ಯಗ್ಬ್ರಹ್ಮೈಕತಾಜ್ಞಾನಂ ವಿನಾ ಕೈವಲ್ಯಮಿಚ್ಛತಾಮ್ ।
ನಾಸ್ತಿ ಕೈವಲ್ಯಮಿತ್ಯೇಷಾ ಶಾಶ್ವತೀ ಶ್ರುತಿರಾಹ ಹಿ ॥೩೬॥

ವಿಷ್ಣುಪ್ರಜಾಪತೀಂದ್ರಾದಿದೇವತಾಶ್ಚ ತಥೈವ ಚ ।
ವಿನಾ ಜ್ಞಾನಂ ನ ಕೈವಲ್ಯಮಿತ್ಯಾಹುಃ ಪುರುಷಾಧಿಕಾಃ ॥೩೭॥

ಭಗವಾನಪಿ ಸರ್ವಜ್ಞಶ್ಶಿವಃ ಕಾರುಣಿಕೋತ್ತಮಃ ।
ವಿನಾ ವೇದಾನ್ತವಿಜ್ಞಾನಂ ನ ಮುಕ್ತಿರಿತಿ ಚಾಹ ಹಿ ॥೩೮॥

ಮುನಯಶ್ಚ ಮಹಾತ್ಮಾನಸ್ಸತ್ಯಸಂಧಾ ಜಿತೇಂದ್ರಿಯಾಃ ।
ವಿನಾ ಜ್ಞಾನಂ ನ ಕೈವಲ್ಯಮಿತ್ಯಾಹುರ್ವೇದವಿತ್ತಮಾಃ ॥೩೯॥

ಅಥ ಕಿಂ ಬಹುನೋಕ್ತೇನ ಮುನೀಂದ್ರಾ ವೇದವಿತ್ತಮಾಃ ।
ಮುಕ್ತಿಸಾಧನವಿಜ್ಞಾನಂ ವೇದಾದೇವ ನ ಚಾನ್ಯತಃ ॥೪೦॥

ಮರೆಯಬಾರದು. ಧರ್ಮ ಕರ್ಮಗಳ ಲೋಪವು ಏತರಿಂದ ಆಗಿದೆ ಎಂಬುದನ್ನು ಎಲ್ಲರೂ ಆತ್ಮಪರೀಕ್ಷೆಯಿಂದ ಗೊತ್ತುಮಾಡಿಕೊಂಡು, ಆತ್ಮವಂಚನೆಯು ಅಜ್ಞಾನಾದಿ ಕಾರಣಗಳಿಂದ ಆಗದಿರುವಂತೆ ಎಚ್ಚರಿಕೆಯಿಂದ ಪ್ರಯತ್ನಶೀಲರಾಗಿರಬೇಕೆಂದು ಭಾವವು. ನಿಜವಾಗಿಯೂ ಜ್ಞಾನವಾಗಿ ಕರ್ಮಾಚರಣೆಯು ಬಿಟ್ಟುಹೋಗಿರಬಹು ದಾದಂತಹವರ ಉದಾಹರಣೆಗಳು ತುಂಬ ವಿರಳವಾಗಿರುತ್ತದೆ. "ಮನುಷ್ಯಾಣಾಂ ಸಹಸ್ರೇಷು ಕಶ್ಚಿತ್ ಯತತಿ ಸಿದ್ಧಯೇ । ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ ॥" ಎಂದು ಭಗವದ್ಗೀತೆ ಅ. ೩. ೩. ರಲ್ಲಿ ಹೇಳಿರುವುದನ್ನು ಜ್ಞಾಪಕದಲ್ಲಿಡಬೇಕು. ॥೩೬॥

ವಿಷ್ಣು, ಬ್ರಹ್ಮ, ಇಂದ್ರ ಇವರೇ ಮೊದಲಾದ ಪುರುಷರಿಗಿಂತ ಮೇಲಾದ ದೇವತೆಗಳೂ, ಸರ್ವಜ್ಞನೂ ಕರುಣಾಶಾಲಿಯೂ ಆದ ಶಿವನೂ, ವೇದಾಂತದಿಂದ ಉತ್ಪನ್ನವಾದ ಜ್ಞಾನವಿಲ್ಲದೆ ಮೋಕ್ಷವಾಗುವುದಿಲ್ಲವೆಂದು ಹೇಳಿದ್ದಾರೆ. ॥೩೭-೩೮॥

ವಿಶಾಲವಾದ ಹೃದಯವುಳ್ಳ ಸತ್ಯವಾದ ಪ್ರತಿಜ್ಞೆಯುಳ್ಳ ಇಂದ್ರಿಯಗಳನ್ನು ಜಯಿಸಿದ ಋಷಿಗಳೂ ಜ್ಞಾನವಿಲ್ಲದೆ ಮೋಕ್ಷವಿಲ್ಲವೆಂದು ಹೇಳಿದ್ದಾರೆ. ॥೩೯॥

ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಋಷಿಶ್ರೇಷ್ಠರೇ, ಬಹಳ ಹೇಳಿ ಏನು ಪ್ರಯೋಜನ? ಮೋಕ್ಷಕ್ಕೆ ಮುಖ್ಯಸಾಧನವಾದ ಜ್ಞಾನವು ಉಂಟಾಗಬೇಕಾದರೆ ವೇದದಿಂದಲ್ಲದೆ ಮತ್ತಾವುದರಿಂದಲೂ ಆಗಲಾರದು. ॥೪೦॥

ವೇದಮಾರ್ಗಜನಿತಂ ತು ವೇದನಂ
ದೋಷಹೀನಮತಿಶೋಭನಂ ಸದಾ ॥
ಅನ್ಯಮಾರ್ಗಜನಿತಂ ವಿಚಾರತೋ
ವೇದಮಾರ್ಗರುಚಿಕಾರಣಂ ಕ್ರಮಾತ್ ॥೪೧॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಮುಕ್ತಿಸಾಧನವಿಚಾರೋ ನಾಮ ಏಕವಿಂಶಾಧ್ಯಾಯಃ

ಎಲೈ ಋಷಿಗಳೇ, ವೇದಾಂತಶ್ರವಣಾದಿಗಳಿಂದ ಉಂಟಾದ ಜ್ಞಾನವೇ ಮುಕ್ತಿಯನ್ನು ಪಡೆಯಲು ಯಾವ ದೋಷವೂ ಇಲ್ಲದುದೂ ಉತ್ತಮವೂ ಆದ ಕಾರಣವಾಗಿದೆ. ಆದುದರಿಂದ ವೇದಾಂತವನ್ನು ಬಿಟ್ಟು ಇತರವಾದ ಶಾಸ್ತ್ರಾದಿಗಳಲ್ಲಿರುವ ವಿಚಾರಗಳಿಂದ ಉಂಟಾದ ಜ್ಞಾನವು ಪರಮಪುರುಷಾರ್ಥವಾದ ವೇದಾಂತಜ್ಞಾನದಲ್ಲಿ ಆಶೆಯನ್ನುಂಟುಮಾಡುವುದರ ಮೂಲಕ ಮುಕ್ತಿಗೆ ಕಾರಣವೇ ಹೊರತು, ಸ್ವತಂತ್ರವಾಗಿ ಕಾರಣವಾಗುವುದಿಲ್ಲವೆಂದು ಸೂತರು ಶೌನಕಾದಿಋಷಿಗಳನ್ನು ಕುರಿತು ಹೇಳಿದರು. ॥೪೧॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಮುಕ್ತಿಗೆ ನೇರವಾಗಿ ಸಾಧನವಾಗುವ ಜ್ಞಾನವೆಂಬ ಸಾಧನವನ್ನು ವಿವರಿಸಿರುವ
ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ದ್ವಾವಿಂಶೋಽಧ್ಯಾಯಃ ||

ಇಪ್ಪತ್ತೆರಡನೆಯ ಅಧ್ಯಾಯವು

(ಮಾರ್ಗಪ್ರಾಮಾಣ್ಯವರ್ಣನಮ್)

|| ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಮಾರ್ಗಪ್ರಾಮಾಣ್ಯನಿರ್ಣಯಮ್ ।
ಶ್ರದ್ಧಯಾ ಸಹಿತಾ ಯೂಯಂ ಶೃಣುಧ್ವಂ ಮುನಿಪುಂಗವಾಃ ॥೧॥

ಬೌದ್ಧಜೈನಶಾಸ್ತ್ರಗಳು ವೇದಮಾರ್ಗಕ್ಕೆ ವಿರೋಧಿಯಾದವುಗಳು. ಜೀವಾತ್ಮೈಕ್ಯಜ್ಞಾನವಾದರೋ ವೇದಮಾರ್ಗದಿಂದ ಮಾತ್ರ ಉಂಟಾಗತಕ್ಕುದು ; ಹೀಗಿರುವಾಗ ಈ ಬೌದ್ಧಜೈನಶಾಸ್ತ್ರಗಳು ವೈದಿಕಮಾರ್ಗದಲ್ಲಿ ಆಸೆಯನ್ನುಂಟುಮಾಡುವುದರ ಮೂಲಕ ಜ್ಞಾನಕ್ಕೆ ಸಾಧನವೆಂಬುದು ಸರಿಯಲ್ಲವಾದ್ದರಿಂದ ಈ ನಾಸ್ತಿಕಶಾಸ್ತ್ರಗಳು ಪ್ರಮಾಣವಲ್ಲ ಎಂಬ ಶಂಕೆಯನ್ನು ಪರಿಹಾರಮಾಡಿ ಅವುಗಳೂ ಕೂಡ ಪ್ರಮಾಣವೇ ಎಂದು ಹೇಳುವುದಕ್ಕಾಗಿ ಈ ಅಧ್ಯಾಯವು ಪ್ರಾರಂಭಿಸಲ್ಪಡುತ್ತದೆ.

ಎಲೈ ಶೌನಕಾದಿಋಷಿಗಳೇ, ಮುಕ್ತಿಗೆ ಸಾಧನವಾದ ಅನೇಕ ದಾರಿಗಳಲ್ಲಿ (ಶಾಸ್ತ್ರಗಳಲ್ಲಿ) ಯಾವ ದಾರಿಯು ಪ್ರಾಮಾಣಿಕವಾದುದು ಎಂಬುದರ ನಿಶ್ಚಯವನ್ನು ಹೇಳುತ್ತೇನೆ, ಅದನ್ನು ನೀವು ವಿಶ್ವಾಸದಿಂದ ಕೇಳಿರಿ. ||೧||

ವೇದಾಂಶ್ಚ ಧರ್ಮಶಾಸ್ತ್ರಾಣಿ ಪುರಾಣಂ ಭಾರತಂ ತಥಾ ।
ವೇದಾಂಗಾನ್ಯುಪವೇದಾಂಶ್ಚ ಕಾಮಿಕಾದ್ಯಾಗಮಾನಪಿ ॥೨॥

ಕಾಪಾಲಂ ಲಾಕುಲಂ ಚೈವ ತಯೋರ್ಭೇದಾನ್ದ್ವಿಜರ್ಷಭಾಃ ।
ತಥಾ ಪಾಶುಪತಂ ಸೋಮಂ ಭೈರವಪ್ರಮುಖಾಗಮಾನ್ ॥೩॥

ತೇಷಾಮೇವೋಪಭೇದಾಂಶ್ಚ ಶತಶೋಽಥ ಸಹಸ್ರಶಃ ।
ವಿಷ್ಣ್ವಾಗಮಾಂಸ್ತಥಾ ಬ್ರಾಹ್ಮಾನ್ಬುದ್ಧಾರ್ಹದ್ಯಾಗಮಾನಪಿ ॥೪॥

ಲೋಕಾಯತಂ ತರ್ಕಶಾಸ್ತ್ರಂ ಬಹುವಿಸ್ತಾರಸಂಯುತಮ್ ।
ಮೀಮಾಂಸಾಮತಿಗಂಭೀರಾಂ ಸಾಂಖ್ಯಯೋಗೌ ತಥೈವ ಚ ॥೫॥

ಅನೇಕಭೇದಭಿನ್ನಾನಿ ತಥಾ ಶಾಸ್ತ್ರಾಂತರಾಣಿ ಚ ।
ನಿರ್ಮಮೇ ಶಂಕರಸ್ಸಾಕ್ಷಾತ್ಸರ್ವಜ್ಞಸ್ಸಂಗ್ರಹೇಣ ತು ॥೬॥

ಪ್ರಸಾದಾದೇವ ರುದ್ರಸ್ಯ ಬ್ರಹ್ಮವಿಷ್ಣ್ವಾದಯಸ್ಸುರಾಃ ।
ಸಿದ್ಧಾ ವಿದ್ಯಾಧರಾ ಯಕ್ಷಾ ರಾಕ್ಷಸಾದ್ಯಾಸ್ತಥೈವ ಚ ॥೭॥

ನಾಲ್ಕು ವೇದಗಳನ್ನೂ, ಪುರಾಣಗಳನ್ನೂ, ಮಹಾಭಾರತವನ್ನೂ, ಆರು ವೇದಾಂಗಗಳನ್ನೂ, ಆಯುರ್ವೇದ, ಧನುರ್ವೇದ, ಗಾಂಧರ್ವವೇದ—ಎಂಬ ನಾಲ್ಕು ಉಪವೇದಗಳನ್ನೂ, ಕಾಮಿಕವೇ ಮೊದಲಾದ ಆಗಮಗಳನ್ನೂ ಕಾಪಾಲಿಕ ಲಾಕುಲ ಮುಂತಾದ ಆಗಮಗಳನ್ನೂ ಅವುಗಳ ಭೇದಗಳನ್ನೂ, ಮತ್ತು ಪಾಶುಪತಾಗಮ, ಸೋಮಾಗಮ, ಭೈರವಾಗಮವೇ ಮೊದಲಾದ ಆಗಮಗಳನ್ನೂ, ಈ ಆಗಮಗಳ ಭೇದಗಳನ್ನೂ, ಸಾವಿರಗಟ್ಟಲೆ ಇರುವ ಅವುಗಳ ಒಳಭೇದಗಳನ್ನೂ, ವೈಷ್ಣವಾಗಮ, ಬ್ರಹ್ಮಾಗಮಗಳನ್ನೂ, ಬೌದ್ಧ, ಜೈನ, ಚಾರ್ವಾಕಾದಿದರ್ಶನಗಳನ್ನೂ ಬಹಳ ವಿಸ್ತಾರವಾದ ತರ್ಕಶಾಸ್ತ್ರವನ್ನೂ, ಬಹಳ ಗಂಭೀರವಾದ ಮೀಮಾಂಸಾಶಾಸ್ತ್ರವನ್ನೂ, ಸಾಂಖ್ಯಯೋಗಶಾಸ್ತ್ರಗಳನ್ನೂ ಅನೇಕಭಾಗಗಳಿಂದ ಕೂಡಿರುವ ಇತರ ಶಾಸ್ತ್ರಗಳನ್ನೂ, ಸರ್ವವನ್ನೂ ತಿಳಿದಿರುವ ಶಂಕರನು ಸಂಕ್ಷೇಪವಾಗಿ ರಚಿಸಿದನು. ಹೀಗೆ ಈಶ್ವರನು ರಚಿಸಿದ್ದರಿಂದ ಎಲ್ಲಾ ಶಾಸ್ತ್ರಗಳೂ ಪ್ರಮಾಣಗಳೆಂದೇ ಅಭಿಪ್ರಾಯವು. ॥೨-೩-೪-೫-೬॥

ಹೀಗೆ ಹೇಳಿರುವುದು ಸರಿಯಲ್ಲ. ಬುದ್ಧಾದಿಗಳು ಆಯಾಯ ಶಾಸ್ತ್ರಗಳನ್ನು

ಮುನಯಶ್ಚ ಮನುಷ್ಯಾಶ್ಚ ಯಥಾಭಾಗಂ ದ್ವಿಜೋತ್ತಮಾಃ ।
ತಾನ್ಯೇವ ವಿಸ್ತರೇಣೈವ ಸಂಗ್ರಹೇಣೈವ ವಾ ಪುನಃ ॥೮॥

ಕುರ್ವಂತಿ ತಾನಿ ಮಾನಾನಿ ಕಥಿತಾನಿ ಮನೀಷಿಭಿಃ ।
ಅಧಿಕಾರಿವಿಭೇದೇನ ನೈಕಸ್ಯೈವ ಸದಾ ದ್ವಿಜಾಃ ॥೯॥

ತರ್ಕೈರೇತೇ ಹಿ ಮಾರ್ಗಾಸ್ತು ನ ಹಂತವ್ಯಾ ಮನೀಷಿಭಿಃ ।
ಯಥಾ ತೋಯಪ್ರವಾಹಾಣಾಂ ಸಮುದ್ರಃ ಪರಮಾವಧಿಃ ॥೧೦॥
ತಥೈವ ಸರ್ವಮಾರ್ಗಾಣಾಂ ಸಾಕ್ಷಾನ್ನಿಷ್ಠಾ ಮಹೇಶ್ವರಃ ।

ಮಾಡಿದವರಾದ್ದರಿಂದ ಈಶ್ವರನು ಮಾಡಿದನೆಂಬುದು ಯುಕ್ತವಲ್ಲವಲ್ಲ? ಎಂದರೆ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ.

ಸಾಕ್ಷಾತ್ಪರಮೇಶ್ವರನ ಅನುಗ್ರಹದಿಂದಲೇ ಬ್ರಹ್ಮ, ವಿಷ್ಣು– ಮೊದಲಾದ ದೇವತೆಗಳೂ, ಸಿದ್ಧರು, ವಿದ್ಯಾಧರರು, ಯಕ್ಷರು, ರಾಕ್ಷಸರು, ಹಾಗೆಯೇ ಕಪಿಲಾದಿ ಋಷಿಗಳೂ ಇತರರಾದ ಮನುಷ್ಯರೂ ಪರಮೇಶ್ವರನಿಂದ ನಿರ್ಮಿತಗಳಾದ ಶಾಸ್ತ್ರಗಳಲ್ಲಿನ ಒಂದೊಂದು ಭಾಗವನ್ನು ತಮ್ಮ ಬುದ್ಧ್ಯನುಸಾರವಾಗಿ ಸಂಕ್ಷೇಪ ವಾಗಿಯೂ ವಿಸ್ತಾರವಾಗಿಯೂ ವಿವರಿಸಿದ್ದಾರೆ. ಆದ್ದರಿಂದ ಏನೂ ವಿರೋಧವಿಲ್ಲವು. ಹೀಗೆ ಆಯಾಯ ದೇವತೆಗಳಿಂದಲೂ ಋಷಿಗಳಿಂದಲೂ ನಿರ್ಮಿತಗಳಾದ ಶಾಸ್ತ್ರಗಳು ಎಲ್ಲವೂ ಪ್ರಮಾಣಗಳೇ ಎಂಬುದಾಗಿ ತಿಳಿದವರು ಹೇಳುತ್ತಾರೆ. ಅಂದರೆ, ||೭-೮||

ಎಲೈ ಋಷಿಗಳೇ, ಇವುಗಳೆಲ್ಲವೂ ಒಬ್ಬ ಅಧಿಕಾರಿಗೇ ಮಾರ್ಗಗಳೆಂದು ಹೇಳಿಲ್ಲವು. ಬೇರೆ ಬೇರೆ ಸಂಸ್ಕೃತಿಯ ಅಂತಸ್ತುಗಳಲ್ಲಿರುವ ಅಧಿಕಾರಿಗಳಿಗೆ ಹೊಂದಿಬಂದು ಅಲ್ಲಲ್ಲಿಂದ ಮುಂದುವರಿಯಲು ಪ್ರಮಾಣಗಳಾದುದರಿಂದ ಎಲ್ಲವೂ ಪ್ರಮಾಣಗಳೇ. ||೯||

ವಿವೇಕಿಗಳು ಈ ಶಾಸ್ತ್ರಗಳನ್ನು ಒಣ ಯುಕ್ತಿಗಳಿಂದ ಪ್ರಮಾಣವಲ್ಲವೆಂದು ಖಂಡಿಸಿಬಿಡಬಾರದು. ಏಕೆಂದರೆ ಉಪಾಸ್ಯನಾದ ದೇವನೊಬ್ಬನುಂಟೆಂಬುದು ಎಲ್ಲ ಶಾಸ್ತ್ರಗಳಿಗೂ ಸಮ್ಮತವಾದ ವಿಷಯವಾಗಿದೆ. ಆಯಾ ದೇವರೂಪಗಳು ಈಶ್ವರನ ರೂಪಗಳೇ ಆಗಿರುವುದರಿಂದ ಆಯಾ ಶಾಸ್ತ್ರಗಳಲ್ಲಿ ಹೇಳಿರುವ ಉಪಾಸನೆಗಳಿಗೆ ಕೊನೆಯ ನೆಲೆಯು ಪರಮೇಶ್ವರನೇ ಆಗಬೇಕಾಗಿರುತ್ತದೆ.

ನದಿಗಳಿಗೆಲ್ಲಕ್ಕೂ ಹೇಗೆ ಸಮುದ್ರವೇ ಕೊನೆಯ ಪ್ರಾಪ್ಯಸ್ಥಾನವೋ, ಹಾಗೆ ಎಲ್ಲಾ ಶಾಸ್ತ್ರಮಾರ್ಗಗಳಿಗೂ ಪರಮೇಶ್ವರನೇ ಕೊನೆಯ ನೆಲೆಯು. ||೧೦||

ಯೇನ ಯೇನ ಪ್ರಕಾರೇಣ ಜನ್ಯೈರೇಭಿರುಪಾಸಿತಃ ॥೧೧॥

ತತ್ತನ್ಮಾರ್ಗಾನುಗುಣ್ಯೇನ ಸಾಧಕತ್ವಂ ಹ್ಯುಪೈತಿ ಸಃ ।
ತತ್ಪ್ರಸಾದಾತ್ಕ್ರಮಾನ್ಮಾರ್ಗಾನ್ವಿಶಿಷ್ಟಾನೇತಿ ಮಾನವಃ ॥೧೨॥

ತತ್ರತತ್ರ ಸ್ಥಿತೋ ದೇವಃ ಪ್ರಸಾದಂ ಕುರುತೇಽಸ್ಯ ತು ।
ಸೋಪಾನಕ್ರಮತೋ ಹ್ಯೇತೇ ವೇದಮಾರ್ಗಸ್ಯ ಹೇತವಃ ॥೧೩॥

ವೇದಮಾರ್ಗಸ್ಥಿತೋ ದೇವಸ್ಸಾಕ್ಷಾನ್ಮುಕ್ತೇಸ್ತು ಕಾರಣಮ್ ।
ತತ್ರಾಪಿ ಕರ್ಮಭಾಗಸ್ಥೋ ಜ್ಞಾನಶ್ರದ್ಧಾಪ್ರದೋ ಹರಃ ॥೧೪॥
ಜ್ಞಾನಭಾಗಸ್ಥಿತಶ್ಶಂಭುಃ ಜ್ಞಾನದ್ವಾರೇಣ ಮೋಕ್ಷದಃ ।

ಜನಗಳು ಯಾವಯಾವ ಶಾಸ್ತ್ರವನ್ನನುಸರಿಸಿ ಆಯಾಯ ಶಾಸ್ತ್ರಗಳಲ್ಲಿ ಹೇಳಿರುವ ಉಪಾಧಿಸಹಿತನನ್ನಾಗಿ ಈಶ್ವರನನ್ನು ಪೂಜಿಸುತ್ತಾರೋ ಅಂಥ ಪೂಜೆ ಮಾಡುವವರ ಮನಸ್ಸಿನಲ್ಲಿರುವ ಉಪಾಧಿಯ, ಉಪಾಸ್ಯದೇವತೆಯ, ರೂಪವನ್ನು ಅವನು ಪಡೆಯುತ್ತಾನೆ. ॥೧೧॥

ಹೀಗೆ ಆಯಾಯ ಉಪಾಧಿಯನ್ನು ಪಡೆದಿರುವ ಆಯಾಯ ದೇವತಾ ರೂಪನಾಗಿ ಅವರಿಗೆ ಕಾಣಿಸಿಕೊಳ್ಳುತ್ತಿರುವ ಈಶ್ವರನ ಅನುಗ್ರಹದಿಂದ ಕ್ರಮೇಣ ಉತ್ತಮವಾದ ಮಾರ್ಗಗಳನ್ನು ಉಪಾಸಕನು ಪಡೆಯುತ್ತಾನೆ. ಸಂಸ್ಕೃತಿಯ ಏಣಿಯಲ್ಲಿ ಮುಂದುವರಿಯುವಿಕೆಯಲ್ಲಿ ತಾರತಮ್ಯವನ್ನು ಅವಲಂಬಿಸಿ ಅಧಿಕಾರ ಭೇದವೇರ್ಪಡುತ್ತದೆ. ಬಾಹ್ಯದಿಂದ ಆಂತರಕ್ಕೂ ಸ್ಥೂಲದಿಂದ ಸೂಕ್ಷ್ಮಕ್ಕೂ, ಸಗುಣದಿಂದ ನಿರ್ಗುಣಕ್ಕೂ ಉಪಾಸನೆಯು ಮುಂದುವರಿಯುತ್ತದೆ. ॥೧೨॥

ಆಯಾಯ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ದೇವತಾಕಾರದಿಂದ ಉಪಾಸನೆಯನ್ನು ಮಾಡುವವನಿಗೆ ಈಶ್ವರನು ಅದದೇ ಉಪಾಧಿಯ ರೂಪವನ್ನು ಪಡೆದಿರುವವನಾಗಿ ಅನುಗ್ರಹವನ್ನು ಮಾಡುತ್ತಾನೆ. ಆದುದರಿಂದ ಇತರವಾದ ಎಲ್ಲಾ ಶಾಸ್ತ್ರಗಳೂ ವೇದಮಾರ್ಗಕ್ಕೆ ಮೆಟ್ಟಿಲುಗಳಂತೆ ಇವೆ. ॥೧೩॥

ವೇದದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಪರಮೇಶ್ವರನು ಮುಕ್ತಿಗೆ ನೇರವಾಗಿ ಕಾರಣನಾಗುತ್ತಾನೆ.

ಅದರಲ್ಲಿ ಕರ್ಮಕಾಂಡಪ್ರತಿಪಾದ್ಯನಾದ ಪರಮೇಶ್ವರನು ಯಜ್ಞಯಾಗಾದಿ ಕರ್ಮಗಳನ್ನು ಮಾಡಬೇಕೆಂಬ ಶ್ರದ್ಧೆಯನ್ನು ಉಂಟುಮಾಡುತ್ತಾನೆ. ಹಾಗೆಯೇ

ಏಕರೂಪಾ ಪರಾ ಮುಕ್ತಿಸ್ತತಸ್ತದ್ವಿಷಯಾ ಮತಿಃ ।
ಏಕರೂಪಾ ಭವೇನ್ನೈವ ನಾನಾರೂಪಾ ಭವಿಷ್ಯತಿ ॥೧೫॥

ವೇದಾನ್ತಾಶ್ಶಂಕರಂ ಸಾಕ್ಷಾನ್ನಿರ್ವಿಶೇಷಾ ದ್ವಯಾತ್ಮನಾ ।
ವಕ್ತುಂ ಮಾರ್ಗಾನ್ತರೈರ್ನೈವಂ ತತೋ ವಿದ್ಯಾ ತು ವೇದಜಾ ॥೧೬॥

ಅತೋ ಮಾರ್ಗಾನ್ತರಾಜ್ಜಾತಾ ಮತಯೋ ಮುನಿಸತ್ತಮಾಃ ।
ಅವಿದ್ಯಾ ನೈವ ವಿದ್ಯಾಸ್ಯುರಿತಿ ಸಮ್ಯಜ್ನಿರೂಪಣಮ್ ॥೧೭॥

ಜ್ಞಾನಕಾಂಡಪ್ರತಿಪಾದ್ಯನೂ ಆದ ಈಶ್ವರನೇ ಕರ್ಮದಿಂದ ಶುದ್ಧವಾದ ಚಿತ್ತದಲ್ಲಿ ಜ್ಞಾನವು ಮೂಡಲು ಅನುಕೂಲವಾಗಿ ಆ ಜ್ಞಾನದ ಮೂಲಕ ಮೋಕ್ಷವನ್ನೂ ಕೊಡುತ್ತಾನೆ. ||೧೪||

ವೇದಬೋಧಿತವಾದ ಮಾರ್ಗವನ್ನು ಬಿಟ್ಟು ಇತರವಾದ (ಶಾಸ್ತ್ರ) ಮಾರ್ಗಗಳಿಂದ ಉಂಟಾದ ಜ್ಞಾನಗಳಿಂದಲೂ ಮುಕ್ತಿಯು ಉಂಟಾಗಬಹುದಲ್ಲವೇ ? ಎಂದರೆ ಉತ್ತರವನ್ನು ಹೇಳುತ್ತಾರೆ. ಈ ಉತ್ಕೃಷ್ಟವಾದ ಮೋಕ್ಷವು ಒಂದೇ ರೂಪವುಳ್ಳದೇ ಹೊರತು ಅನೇಕವಲ್ಲ. ಆದ್ದರಿಂದ ಒಂದೇ ಆದ ಮೋಕ್ಷವಿಷಯಕವಾದ ಬುದ್ಧಿಯೂ ಒಂದೇ ರೂಪವುಳ್ಳದ್ದೇ ಆಗಿರಬೇಕೇ ಹೊರತು ಅನೇಕರೂಪವಾಗಿರುವುದಿಲ್ಲವು. ||೧೫||

'ಏಕಮೇವಾದ್ವಿತೀಯಂ ಬ್ರಹ್ಮ', 'ಅಶಬ್ದಮಸ್ಪರ್ಶಮರೂಪಮವ್ಯಯಂ', 'ಬ್ರಹ್ಮವೇದ ಬ್ರಹ್ಮೈವ ಭವತಿ' ಇವೇ ಮೊದಲಾದ ಉಪನಿಷದ್ವಾಕ್ಯಗಳು ಶಂಕರನನ್ನು ಯಾವ ವಿಧವಾದ ವಿಶೇಷಧರ್ಮಗಳೂ ಇಲ್ಲದ ಅದ್ವಿತೀಯನು ಎಂಬುದಾಗಿ ಹೇಳುತ್ತಿವೆ. ಇತರ ಶಾಸ್ತ್ರಮಾರ್ಗಗಳು ಹಾಗೆ ಹೇಳುವುದಿಲ್ಲವು. ಆದ್ದರಿಂದ ವೇದಾಂತ ಮಾರ್ಗದಿಂದ ಉಂಟಾಗುವ ಜ್ಞಾನವೇ ಮೋಕ್ಷಕ್ಕೆ ಕಾರಣವಾದುದು. ಆದುದರಿಂದ ವೇದದಿಂದ ಉಂಟಾಗುವ ಜ್ಞಾನವೇ ವಿದ್ಯೆ ಎನ್ನಿಸಿಕೊಳ್ಳುವುದು. ||೧೬||

ಎಲೈ ಮುನಿಶ್ರೇಷ್ಠರೇ, ವೇದಾಂತಮಾರ್ಗವನ್ನು ಬಿಟ್ಟು ಇತರ ಮಾರ್ಗಗಳಿಂದ ಉತ್ಪನ್ನವಾದ ಜ್ಞಾನಗಳು ಪರವಿದ್ಯೆಯ ದೃಷ್ಟಿಯಿಂದ ಅಜ್ಞಾನಗಳೇ ವಿನಾ, ನಿರ್ವಿಶೇಷನೂ ಅದ್ವಿತೀಯನೂ ಆದ ಶಂಕರನನ್ನು ಪ್ರತಿಪಾದನೆಮಾಡದಿರು

ತಸ್ಮಾನ್ಮಾರ್ಗಾಂತರಾಣಾಂ ತು ಪ್ರಾಮಾಣ್ಯಂ ವೇದನಿತ್ಯಮಾಃ ।
ಮುಕ್ತೇರನ್ಯತ್ರ ಸಾಕ್ಷ್ಯೈವ, ಕ್ರಮೇಣೈವಾತ್ರ ಮಾನತಾ ॥೧೮॥

ಅತೋ ವೇದಾನ್ತಮಾರ್ಗಸ್ಥೋ ಮಹಾದೇವೋಽಚಿರೇಣ ತು ।
ಮುಕ್ತಿಂ ದದಾತಿ ನಾನ್ಯತ್ರ ಸ್ಥಿತಸ್ಸೋಽಪಿ ಕ್ರಮೇಣ ತು ॥೧೯॥

ದದಾತಿ ಪರಮಾಂ ಮುಕ್ತಿಮಿತ್ಯೇಷಾ ಶಾಶ್ವತೀ ಶ್ರುತಿಃ ।
ಅತೋ ವೇದಸ್ಥಿತೋ ಮರ್ತ್ಯೋ ನಾನ್ಯಮಾರ್ಗಂ ಸಮಾಶ್ರಯೇತ್ ।
ವೇದಮಾರ್ಗೈಕನಿಷ್ಠಾನಾಂ ನ ಕಿಂಚಿದಪಿ ದುರ್ಲಭಮ್ ॥೨೦॥

ವುದರಿಂದ ವಿದ್ಯೆ ಎನ್ನಿಸಿಕೊಳ್ಳಲಾರವು ಎಂಬುದಾಗಿ ಚೆನ್ನಾಗಿ ತಿಳಿಸಿದ ಹಾಗಾಯಿತು. ||೧೭||

ವೇದಾಂತವನ್ನು ಬಿಟ್ಟು ಇತರ ಮಾರ್ಗಗಳಿಂದ ಉತ್ಪನ್ನವಾದ ಜ್ಞಾನವು ಮುಕ್ತಿಗೆ ಸಾಧನವಲ್ಲವೆಂದು ಹೇಳಿದನಂತರ ಅವುಗಳಿಗೆ ಪ್ರಾಮಾಣ್ಯವೇ ಇಲ್ಲವಲ್ಲವೇ ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆ. ಮುಂದುಮುಂದಿನ ಉಪಾಸನೆಗಳಿಗೆ ಹಿಂದಿನ ಉಪಾಸನೆಗಳು ಸೋಪಾನಕ್ರಮದಲ್ಲಿ ಸಹಾಯಮಾಡುತ್ತವೆ.

ಇತರ ಎಲ್ಲಾ ಶಾಸ್ತ್ರಗಳಿಗೂ ಮುಕ್ತಿಯೊಂದನ್ನು ಬಿಟ್ಟು ಉಳಿದ ಎಲ್ಲಾ ವ್ಯವಹಾರದಲ್ಲಿಯೂ ಪ್ರಾಮಾಣ್ಯ ಉಂಟು. ಮುಕ್ತಿಯ ವಿಷಯದಲ್ಲಿ ಮಾತ್ರ ಅವುಗಳಿಗೆ ಸಾಕ್ಷಾತ್ಪ್ರಾಮಾಣ್ಯವಿಲ್ಲವು. ಮುಕ್ತಿಯಲ್ಲಿಯೂ ಅವುಗಳಿಗೆ ಪರಂಪರೆಯಿಂದ ಪ್ರಾಮಾಣ್ಯ ಉಂಟು (ಎಂದರೆ ವೇದಮಾರ್ಗದಲ್ಲಿ ಪ್ರವೇಶಿಸುವಂತೆ ಆದರವನ್ನು ಉಂಟುಮಾಡುವುದರಿಂದ ಅವುಗಳಿಗೆ ಪ್ರಾಮಾಣ್ಯವು.) ||೧೮||

ಆದ್ದರಿಂದ ವೇದಾಂತಮಾರ್ಗಪ್ರತಿಪಾದ್ಯನಾದ ಶಿವನೇ ಶೀಘ್ರವಾಗಿ ಮೋಕ್ಷವನ್ನುಂಟುಮಾಡುವನು. ಇತರ ಮಾರ್ಗಪ್ರತಿಪಾದ್ಯನಾದ ಆ ಶಿವನು ಕ್ರಮವಾಗಿ ಮುಕ್ತಿಯನ್ನು ಕೊಡುವನೇ ಹೊರತು ಜಾಗ್ರತೆ ಕೊಡುವುದಿಲ್ಲ. ಈ ಅರ್ಥವನ್ನೇ 'ತಂ ತ್ವೌಪನಿಷದಂ ಪೃಚ್ಛಾಮಿ' ಇತ್ಯಾದಿ ಶ್ರುತಿಗಳು ಹೇಳುತ್ತೇವೆ. ||೧೯||

ಆದ್ದರಿಂದ ವೇದಮಾರ್ಗದಲ್ಲಿರುವ ಯೋಗ್ಯತೆಯುಳ್ಳ ಮನುಜನು ಮುಕ್ತಿಗಾಗಿ ಇತರ ಮಾರ್ಗವನ್ನು ಅನುಸರಿಸಬಾರದು. ವೇದಮಾರ್ಗವನ್ನನನುಸರಿಸತಕ್ಕವರಿಗೆ ಪಡೆಯಲಾಗದ ವಸ್ತುವು ಯಾವುದೂ ಇಲ್ಲ. ||೨೦||

ಅತ್ರೈವ ಪರಮಾ ಮುಕ್ತಿರ್ಭುಕ್ತಯಶ್ಚಾತ್ರ ಪುಷ್ಕಲಾಃ ।
ಅತೋಽಧಿಕಾರಿಭೇದೇನ ಮಾರ್ಗಮಾನಂ ನ ಸಂಶಯಃ ॥೨೦॥

ವೇದಮಾರ್ಗದಲ್ಲಿಯೇ ಉತ್ಕೃಷ್ಟವಾದ ಮೋಕ್ಷವೂ, ಇಹಪರಲೋಕಗಳಲ್ಲಿ ಅನುಭವಿಸಬಹುದಾದ ಉತ್ತಮವಾದ ಭೋಗಗಳೂ, ಇವಕ್ಕೆ ಸಾಧನವಾದ ಧರ್ಮಗಳ ತಿಳಿವಳಿಕೆಯೂ, ದೊರೆಯುತ್ತವೆ. ಇತರ ಮಾರ್ಗಗಳಲ್ಲಿ ಬೌದ್ಧರು, ಜೈನರು, ಕ್ರಿಸ್ತರು, ಮುಸಲ್ಮಾನರು, ಇವರು ಅನುಸರಿಸುತ್ತಿರುವ ಧರ್ಮಮಾರ್ಗಗಳಲ್ಲಿ ಇಹಪರಸಾಧನಗಳಾದ ಧರ್ಮಗಳ ತಿಳಿವಳಿಕೆಯು ಹಾಗೆ ಸಿಕ್ಕುವುದಿಲ್ಲ. ಆದರೂ ಇತರ ಶಾಸ್ತ್ರಗಳು ಅಧಿಕಾರಿಭೇದದಿಂದ ಪ್ರಾಮಾಣ್ಯವುಳ್ಳವೇ ಆಗಿವೆ. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲವು.

ಇದು ಪರಮತಗಳಲ್ಲಿರಬೇಕಾದ ಸಹನೆಸಹಾನುಭೂತಿಗಳ ಗುರುತಾಗಿದೆ. ಭಗವದ್ಗೀತೆಯಲ್ಲೂ ಹೀಗೆ ಹೇಳಿದೆ.

> ಯೋ ಯೋ ಯಾಂ ಯಾಂ ತನುಂಭಕ್ತಃ ಶ್ರದ್ಧಯಾ ಅರ್ಚಿತು ಮಿಚ್ಛತಿ ।
> ತಸ್ಯ ತಸ್ಯ ಅಚಲಾಂ ಶ್ರದ್ಧಾಂ ತಾ ಮೇವ ವಿದಧಾಮ್ಯಹಂ ॥
> ಸ ತಯಾ ಶ್ರದ್ಧಯಾ ಯುಕ್ತಃ ತಸ್ಯಾರಾಧನ ಮೀಹತೇ ।
> ಲಭತೇ ಚ ತತಃ ಕಾಮಾನ್ ಮಯ್ಯೈವ ವಿಹಿತಾನ್ ಹಿತಾನ್ ॥ ೭.೨೨.
> ಜನ್ಮ ಕರ್ಮ ಚ ಮೇ ದಿವ್ಯಂ ಏವಂ ಯೋ ವೇತ್ತಿ ತತ್ವತಃ । ೪.೯.
> ಯೇ ಯಥಾ ಮಾಂ ಪ್ರಪದ್ಯಂತೇ ತಾಂ ಸ್ತಥೈವ ಭಜಾಮ್ಯಹಂ ।
> ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥ ೪.೧೦.

ಓ ಅರ್ಜುನನೇ, ಈ ಲೋಕದಲ್ಲಿ ಯಾರು ಯಾರು ತಮ್ಮ ತಮ್ಮ ರುಚಿ ಸಂಸ್ಕೃತಿಗಳಿಗೆ ತಕ್ಕಂತೆ ಇಷ್ಟವಾಗುವ ಶಿವ, ವಿಷ್ಣು, ದೇವೀ, ಜಿನ, ಬುದ್ಧ ಮುಂತಾದ ಸಾಕಾರ ಸಗುಣಮೂರ್ತಿಯಲ್ಲಾಗಲಿ, ಅಲ್ಲಾ, ಗಾಡ್, ಮಜ್ದಾ ಮುಂತಾದ ನಿರಾಕಾರಸಗುಣರೂಪವನ್ನಾಗಲಿ, ದೇವನೆಂದು ನಂಬಿಕೆಯಿಂದ ಪೂಜಿಸುತ್ತಾರೋ, ಅವರ ಆ ಭಕ್ತಿಯನ್ನೇ ನಾನೂ ದೃಢವಾಗುವಂತೆ ಮಾಡುತ್ತೇನೆ. ಅವರೆಲ್ಲರೂ ಅದರಿಂದಲೇ ತಮ್ಮ ಇಷ್ಟಾರ್ಥಗಳನ್ನೂ ಪಡೆಯುತ್ತಾರೆ. ಅವರೆಲ್ಲರ ಕೋರಿಕೆಗಳನ್ನೂ ಆ ದೇವತೆಗಳ ಮೂಲಕ ನಾನೇ ನೆರವೇರಿಸುತ್ತಿರುತ್ತೇನೆ. ಆದುದರಿಂದ ಯಾರೂ ತಮ್ಮ ಮತಪರಿವರ್ತನೆಯನ್ನು ಮಾಡಿಕೊಂಡೇ ಶ್ರೇಯಸ್ಸನ್ನು ಪಡೆಯಬೇಕೆಂಬ ನಿರ್ಬಂಧವಿಲ್ಲ. ಈ ಎಲ್ಲ ದೇವತೆಗಳೂ ಒಂದೇ ಪರಬ್ರಹ್ಮನ ರೂಪ

ಗಳೆಂದೂ, ಎಲ್ಲ ಮತಧರ್ಮಗಳೂ ಶ್ರೇಯಸ್ಸನ್ನು ಪಡೆಯುವ ಮಾರ್ಗಗಳೆಂದೂ, ಒಂದು ಮೇಲು, ಮತ್ತೊಂದು ಕೀಳು ಎಂಬ ಭಾವನೆ ಇಲ್ಲದಿರಬೇಕೆಂದೂ, ತಿಳಿವಳಿಕೆ ಇದ್ದರೆ ಸಾಕು. ನಾನು ಹೀಗೆ ಅನೇಕ ಅವತಾರಗಳನ್ನೆತ್ತಿ, ಜನರನ್ನು ಆಯಾ ಕಾಲ, ದೇಶ, ವರ್ತನ, ಸಂಸ್ಕೃತಿ, ಅಭಿರುಚಿ ಇವುಗಳಿಗೆ ತಕ್ಕಂತೆ ನಾಮರೂಪಗಳನ್ನು ತೋರಿ, ಕಾಪಾಡುತ್ತಿರುತ್ತೇನೆಂದು ತಿಳಿಯುತ್ತಿರಬೇಕು. ಯಾರು ಯಾರು ಎಂತೆಂತಹ ಮನೋವೃತ್ತಿಯಿಂದ ಎಂತಹ ಫಲವನ್ನು ಪಡೆಯಲು ದೇವರನ್ನು ಆರಾಧಿಸುತ್ತಿರುತ್ತಾರೋ, ಅವರವರಿಗೆ ಅಂತಂತಹ ನಾಮರೂಪಗಳಲ್ಲೇ ಗೋಚರನಾಗುತ್ತಾ ಇರುತ್ತೇನೆ. ಆದುದರಿಂದ ಅವರೆಲ್ಲರೂ ನನ್ನ ಕಡೆಗೆ ಬರುವ ದಾರಿಯಲ್ಲಿಯೇ ಇರುತ್ತಾರೆಂದು ತಿಳಿಯಬೇಕು.

ಈ ರೀತಿಯಾಗಿ ಪ್ರತಿಯೊಬ್ಬರೂ ಪೂಜಾ, ಉಪಾಸನೆ, ಪರೋಪಕಾರ, ಮುಂತಾದ ಕರ್ಮಾಚರಣೆಯಲ್ಲಿ ಮಾತ್ರ ಅಧಿಕಾರವುಳ್ಳವರೂ, ಆ ಕರ್ಮಗಳ ಫಲದಲ್ಲಿ ರಾಗದ್ವೇಷಗಳಿಲ್ಲದವರೂ, ಆಗಿ ಆ ಕರ್ಮ ಮುಂತಾದುದನ್ನು ಆಚರಿಸುತ್ತಿರಬೇಕು. ಹೀಗೆ ನಿಷ್ಕಾಮಕರ್ಮಾಚರಣೆಯಿಂದಲೂ, ಸ್ವಾರ್ಥಪರವಲ್ಲದ ಚಟುವಟಿಕೆಯಿಂದಲೂ, ಶ್ರೇಯಸ್ಸನ್ನು ಪಡೆಯಬೇಕು. ಇತರರೂ ಶ್ರೇಯಸ್ಸನ್ನು ಪಡೆಯಲು ಸಹಾನುಭೂತಿಯಿಂದ ಸಹಕರಿಸುತ್ತಲೂ ಇರಬೇಕು. ಎಂಬುದಾಗಿ ಧರ್ಮ, ಕರ್ಮ, ಜಪ, ಪೂಜೆ, ಉಪಾಸನೆ, ಇಹಜೀವನ, ಶ್ರೇಯಸ್ಸಾಧನೆ ಇವುಗಳನ್ನು ಹೊಂದಿಸಿ ಬುದ್ಧಿವಾದವನ್ನು ಹೇಳಿದೆ. ಇದರಂತೆ ನಾವೆಲ್ಲರೂ ಕೃತಾರ್ಥರಾಗಬಹುದೆಂದು ಅದ್ವೈತವೇದಾಂತವೂ ಬೋಧಿಸುತ್ತದೆ. ಹೀಗೆ ಆಸ್ತಿಕದರ್ಶನಗಳಲ್ಲಿ ಸಮಾನವಾಗಿರುವ ಅಂಶಗಳನ್ನು ನಾವು ಗಮನಿಸಬೇಕು. ದೇವರು ಇದಾನೆ. ಅವನಿಂದಲೇ ಈ ಪ್ರಪಂಚಗಳೆಲ್ಲವೂ ಉಂಟಾಗಿ, ರಕ್ಷಣೆಯನ್ನು ಪಡೆಯುತ್ತಿದ್ದು, ಕಡೆಗೆ ಅವನಲ್ಲಿಯೇ ಉಪಸಂಹಾರವನ್ನೂ ಪಡೆಯುತ್ತಿರುತ್ತವೆ. ಅವನಿಂದಲೇ ಉಂಟಾಗುವ ವೈಷ್ಣವೀಮಾಯೆ, ಅಥವಾ ಶಿವಶಕ್ತಿ, ಅಥವಾ ಮೂಲಪ್ರಕೃತಿಯು, ಅವನ ಸಾನ್ನಿಧ್ಯಮಹಿಮೆಯಿಂದಲೇ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ, ಕಾರ್ಯಗಳನ್ನು ನೆರವೇರಿಸುತ್ತಿರುತ್ತಾಳೆ. ಈ ಮಾಯೆಯು ಸತ್ವರಜಸ್ ತಮಸ್ ಎಂಬ ಮೂರು ಗುಣಗಳ ಸ್ವರೂಪವಾಗಿದೆ. ಸತ್ವಗುಣವು ಪ್ರಧಾನವಾಗಿ ಸಂರಕ್ಷಣಕಾರ್ಯವೂ, ರಜೋಗುಣವು ಮುಂದಾಗಿ ಸೃಷ್ಟಿಕಾರ್ಯವೂ, ತಮೋಗುಣವು ಪ್ರಬಲವಾಗಿ ಉಪಸಂಹಾರಕಾರ್ಯವೂ, ನೆರವೇರುತ್ತಿರುತ್ತವೆ. 'ಸೃಷ್ಟಿಯನ್ನು ಮಾಡುವಾಗ ಸರಸ್ವತೀಪತಿಯಾದ ಬ್ರಹ್ಮನೆಂದೂ, ಸಂರಕ್ಷಣೆಯನ್ನು ನಿರ್ವಹಿಸುವಾಗ ಲಕ್ಷ್ಮೀ

ರಮಣನಾದ ನಾರಾಯಣನೆಂದೂ, ಉಪಸಂಹಾರವನ್ನು ನೆರವೇರಿಸುವಾಗ ಜ್ಞಾನ ಪ್ರದನಾದ ಉಮಾಮಹೇಶ್ವರನೆಂದೂ, ಈ ದೇವನಿಗೇ ಬೇರೆಬೇರೆ ವ್ಯವಹಾರವಿರುತ್ತದೆ. ಈ ದೇವರನ್ನೇ ಎಲ್ಲ ಮತಗಳವರೂ ಬೇರೆ ಬೇರೆ ಹೆಸರುಗಳಿಂದ ವರ್ಣಿಸುತ್ತಾ ಆರಾಧಿಸುತ್ತಿದ್ದಾರೆ. ಈ ಅಂಶವನ್ನು ಈ ಪದ್ಯದಲ್ಲಿ ಸಂಗ್ರಹಿಸಿದ್ದೇನೆ.

ಯಶ್ಶೈವೈಸ್ಸಮುಪಾಸ್ಯತೇ ಶಿವ ಇತಿ, ಬ್ರಹ್ಮೇತಿ ವೇದಾಂತಿಭಿಃ,
ವಿಷ್ಣುಃ ವೈಷ್ಣವಭಕ್ತಿಮಾರ್ಗನಿರತೈಃ, ಶಾಕ್ತೈಸ್ತುದೇವೀ ಪರಾ ।
ಬೌದ್ಧೈರ್ಬುದ್ಧ ಇತಿ, ಸ್ವಭಾವ ಇತರೈಃ, ಅಲ್ಲೇತಿ ಮುಸ್ಲಿಂ ಜನೈಃ,
ಕ್ರಿಸ್ತೈಃ ಗಾಡ್ ಇತಿ, ನಾಮಮಾತ್ರ ವಿವಿಧಂ ಪಾಯಾತ್ ತದೇಕಂ ಮಹಃ ॥

ಈ ದೇವರನ್ನೇ ವಿಶಿಷ್ಟಾದ್ವೈತ (ರಾಮಾನುಜ, ಶ್ರೀವೈಷ್ಣವ) ಮತೀಯರೂ, ದ್ವೈತ (ಮಧ್ವ, ವೈಷ್ಣವ) ಮತೀಯರೂ, ಮಹಾವಿಷ್ಣು ಅಥವಾ ಶ್ರೀಮನ್ನಾರಾಯಣನೆಂದೂ, ಅವನೇ ಸರ್ವೋತ್ತಮನೆಂದೂ, ಬ್ರಹ್ಮ, ರುದ್ರ, ಶಿವ ಮುಂತಾದ ಇತರ ದೇವತೆಗಳು ಅವನಿಗಿಂತ ಕಡಿಮೆಯಾಗಿರುತ್ತಾ ಅವನಿಗೆ ಅಧೀನ ರಾಗಿರುತ್ತಾರೆಂದೂ ಹೇಳುತ್ತಾರೆ. ಮಧ್ವಮತದಲ್ಲಿನ ಮುಖ್ಯವಾದ ಉಪದೇಶ ಗಳನ್ನು ಈ ಪದ್ಯದಲ್ಲಿ ಸಂಗ್ರಹಿಸಿ ಹೇಳಿದೆ.

ಶ್ರಿಮನ್ಮಧ್ವಮತೇ, ಹರಿಃ ಪರತರಃ, ಸತ್ಯಂ ಜಗತ್ ತತ್ವತಃ,
ಭಿನ್ನಾ ಜೀವಗಣಾ, ಹರೇರನುಚರಾ, ನೀಚೋಚ್ಚಭಾವಂ ಗತಾಃ ।
ಮುಕ್ತಿಃ ನೈಜಸುಖಾನುಭೂತಿಃ, ಅತುಲಾ ಭಕ್ತಿಶ್ಚ ತತ್ಸಾಧನಂ,
ಹ್ಯಕ್ಷಾದಿ ತ್ರಿತಯಂ ಪ್ರಮಾಣಂ, ಅಖಿಲಾಮ್ನಾಯೈಕವೇದ್ಯೋ ಹರಿಃ ॥

ರಾಮಾನುಜ ಮತದಲ್ಲಿನ ಮುಖ್ಯವಾದ ಉಪದೇಶಗಳನ್ನು ಈ ಪದ್ಯದಲ್ಲಿ ಸಂಗ್ರಹಿಸಿರುತ್ತೇನೆ.

ಮಾರ್ಗೇ ರಾಮಾನುಜೀಯೇ, ಸಕಲ ಚಿದಚಿತಶ್ಚಾಂಶ ಶೇಷಾಶ್ಶರೀರಂ,
ಶೇಷೀ ನಾರಾಯಣಸ್ಸ್ಯಾತ್, ಅನವಧಿ ಗುಣಯುಕ್, ಬ್ರಹ್ಮ, ಲಕ್ಷ್ಮೀವಿಶಿಷ್ಟಃ।
ಜೀವಾ ಭಿನ್ನಾಣುರೂಪಾಃ, ಪರಮಸಮತಯಾ ದಿವ್ಯವೈಕುಂಠಲೋಕೇ,
ಮುಕ್ತಿರ್ಭಕ್ತ್ಯಾ ಪ್ರಪತ್ತ್ಯಾ ಭವತಿ ಚ ನಿಯತಂ, ಜ್ಞಾನಕರ್ಮೋಭಯೇನ ॥

ಅದ್ವೈತದರ್ಶನದಲ್ಲಿನ ಮುಖ್ಯವಿಷಯಗಳನ್ನು ಈ ಪದ್ಯದಲ್ಲಿ ಸಂಗ್ರಹಿಸಿದೇನೆ.

ಅದ್ವೈತೇ, ಬ್ರಹ್ಮಸತ್ಯಂ, ಜಗದಿದಮನೃತಂ, ಮಾಯಯಾ ಭಾಸಮಾನಂ,
ಜೀವೋ ಬ್ರಹ್ಮಸ್ವರೂಪೋಽಪ್ಯಹಮಿತಿ ಮಮ ಚೇತ್ಯಸ್ತಿದೇಹೇಽಭಿಮಾನಾತ್ ।
ಶ್ರುತ್ಯಾ ಬ್ರಹ್ಮಾಹಮಸ್ಮೀತ್ಯನುಭವ ಉದಿತೇ ನಷ್ಟಕರ್ಮಾಭಿಮಾನಃ
ಮಾಯಾಸಂಸಾರ ಮುಕ್ತೇರಿಹ ಭವತಿ ಸದಾ ಸಚ್ಚಿದಾನಂದರೂಪಃ ॥

ಶಕ್ತಿವಿಶಿಷ್ಟಾದ್ವೈತ (ಲಿಂಗಾಯತ) ಮತೀಯರೂ, ವೀರಶೈವರೂ, ಉಮಾ ಮಹೇಶ್ವರನಾದ ಪರಮಶಿವನೇ ಸರ್ವೋತ್ತಮನೆಂದೂ, ಬ್ರಹ್ಮಾ, ವಿಷ್ಣು ಮುಂತಾದ ಇತರ ಎಲ್ಲ ದೇವತೆಗಳೂ ಅವನಿಗೆ ಅಧೀನರಾಗಿರುತ್ತಾರೆಂದೂ ಹೇಳುತ್ತಾರೆ. ಹೀಗೆಯೇ ಶಾಕ್ತೇಯರೂ, ಸೌರರೂ, ಗಾಣಾಪತ್ಯಮತೀಯರೂ, ಶಕ್ತಿ, ಸೂರ್ಯ, ಗಣಪತಿಗಳೇ ಸರ್ವೋತ್ತಮದೇವನೆಂದು ನಂಬಿರುತ್ತಾ ಆರಾಧಿಸುತ್ತಾರೆ.

ಈ ಪ್ರಪಂಚದಲ್ಲಿರುವ ಎಲ್ಲ ಮತಗಳ ಅನುಯಾಯಿಗಳೂ ಈ ಜಗತ್ತಿನ ಸೃಷ್ಟಿಸ್ಥಿತಿಸಂಹಾರಗಳನ್ನು ದೇವನೇ ನೆರವೇರಿಸುತ್ತಾನೆಂದು ಒಪ್ಪಿರುತ್ತಾರೆ. ಆದುದ ರಿಂದ ಅಂತಹ ದೇವರು ಆ ಕಾರ್ಯಗಳನ್ನು ನಿರ್ವಹಿಸಬೇಕಾದರೆ ಸರ್ವಜ್ಞನೂ, ಸರ್ವ ಶಕ್ತನೂ, ಸರ್ವವ್ಯಾಪಿಯೂ, ನಿತ್ಯನೂ, ಆಗಿರಬೇಕು. ಅಲ್ಲದೆ ಸಗುಣನೂ, ಸಾಕಾ ರನೂ, ಶರೀರ ಉಳ್ಳವನೂ, ಆಗಿರಬೇಕು. ಈ ವ್ಯವಹಾರಕಾಲದಲ್ಲಿ ದೇವನು ಸಗುಣ ಸಾಕಾರಮೂರ್ತಿಯನ್ನು ಹೊಂದಿರುತ್ತಾನೆ. ಈ ತಿಳಿವಳಿಕೆಯ ಸಾಕ್ಷಾತ್ಕಾರವೇ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಎಂಬ ಮುಕ್ತಿರೂಪಗಳಾಗಿರುತ್ತವೆ. ಇದನ್ನು ಎಲ್ಲ ಮತಗಳೂ ಮೋಕ್ಷವೆನ್ನುತ್ತಾರೆ. ಅದ್ವೈತವೇದಾಂತಿಗಳು ಇವೆಲ್ಲವೂ ಮುಮು ಕ್ಷುವಿನ ಮಾರ್ಗದಲ್ಲಿನ ಮಜಲುಗಳೆಂದೂ, ಇವನ್ನೂ ಮೀರಿ, ದಾಟಿರುವ ನಿರ್ಗುಣ, ನಿರಾಕಾರ, ತತ್ವಸ್ವರೂಪದಲ್ಲಿ ಅಭಿನ್ನವಾಗಿ, ಸಚ್ಚಿದಾನಂದಾನಂತಾದ್ವಯ ಚೇತನ ರೂಪವಾದ ಅಪರೋಕ್ಷಾನುಭವರೂಪವಾಗಿ ಎಂದಿನಂತೆ ನಿತ್ಯವಾಗಿರುವಿಕೆಯೇ ಮೋಕ್ಷವೆಂದು ವಿವರಿಸಿರುತ್ತಾರೆ.

ಜೈನರು ಒಪ್ಪುವ ಈಶ್ವರನು ಸೃಷ್ಟಿಸ್ಥಿತಿಲಯಗಳನ್ನು ಮಾಡುವುದಿಲ್ಲವೆನ್ನು ತ್ತಾರೆ. ಅವು ಜೀವರ ಕರ್ಮಾನುಸಾರವಾಗಿ, ಸ್ವಾಭಾವಿಕವಾಗಿ, ತಾವಾಗಿಯೇ ಆಗುತ್ತವೆ, ಎನ್ನುತ್ತಾರೆ. ಹಾಗಾದರೆ ಈಶ್ವರನನ್ನು ಒಪ್ಪಬೇಕಾದುದು ಏಕೆ? ಎಂದರೆ, ಜೀವನು ಪ್ರಗತಿಮಾರ್ಗದಲ್ಲಿ ಮುಂದುವರಿಯಲು ಈಶ್ವರನು ಮಾದರಿ

ಯಂತಿರುತ್ತಾ, ಆ ಮೇಲುಪಙ್ತಿಯ ಉದಾಹರಣೆಯಿಂದ ಜೀವರಿಗೆ ಸಹಾಯವಾಗುತ್ತದೆ, ಎನ್ನುತ್ತಾರೆ. ಈ ದೇವನು ಇದಾನೆಂದು ಬುದ್ಧನು ಉಪದೇಶಮಾಡಲಿಲ್ಲವಾದರೂ, ಬೌದ್ಧರು ಬುದ್ಧವಿಗ್ರಹಾರಾಧನೆಯನ್ನು ಜೈನರಂತೆ ಮಾಡುತ್ತಿರುತ್ತಾರೆ. ಪ್ರಾಟೆಸ್ಟೆಂಟ್ ಪಂಗಡದ ಕ್ರಿಸ್ತರೂ, ಮುಸಲ್ಮಾನರೂ ದೇವನನ್ನು ಒಪ್ಪಿದರೂ, ಅವನಿಗೆ ಸಾಕಾರಶರೀರವಿಲ್ಲವೆಂದರೂ, ಸಗುಣನೆಂದು ಮಾತ್ರ ಒಪ್ಪುತ್ತಾರೆ. ಆದುದರಿಂದಲೇ ವಿಗ್ರಹಾರಾಧನೆಯು ನಿಷಿದ್ಧವೆನ್ನುತ್ತಾರೆ. ರೋಮನ್ ಕ್ಯಾಥಲಿಕ್ ಪಂಗಡದ ಕ್ರಿಸ್ತರು ದೇವರನ್ನು ಸಾಕಾರನೆಂದು ನಂಬಿ, ವಿಗ್ರಹಾರಾಧನೆಯನ್ನು ಮಾಡುತ್ತಾರೆ. ಆದರೆ ಇವರೆಲ್ಲರೂ ಜೀವರಿಗೆ ಇದು ಒಂದೇ ಜನ್ಮವೆಂದೂ, ಹಿಂದೆಯೂ, ಜನ್ಮಗಳು ಇರಲಿಲ್ಲವೆಂದೂ, ಮುಂದೆಯೂ ಜನ್ಮಗಳು ಬರುವುದಿಲ್ಲವೆಂದೂ ಹೇಳುತ್ತಾರೆ. ಈಗಿನ ಜನ್ಮಗಳನ್ನು ದೇವರು ಜೀವರನ್ನು ಸೃಷ್ಟಿಸಿಕೊಡುತ್ತಾನೆನ್ನುತ್ತಾರೆ. ಅಲ್ಲದೆ ಜೀವರಿಗೆ ಇಲ್ಲಿ ಮಾಡುವ ಕರ್ಮಗಳಿಗೆ ಫಲವಾಗಿ ಶಾಶ್ವತವಾದ ಸ್ವರ್ಗವನ್ನೋ, ನರಕವನ್ನೋ ದೇವರು ಕೊಡುತ್ತಾನೆಂದು ಒಪ್ಪುತ್ತಾರೆ. ಆದರೆ ಇಹಜೀವನದಲ್ಲಿ ಜೀವರಿಗೆ ಬಂದೊದಗಿರುವ ವೈಷಮ್ಯಗಳಿಗೆ ಎಂದರೆ, ಶಕ್ತಿ, ಅಶಕ್ತಿ, ರೋಗ, ಆರೋಗ್ಯ, ಅಂಗಪೂರ್ಣತೆ, ಅಂಗವೈಕಲ್ಯ, ಕುರೂಪ, ಸುರೂಪ, ಅಲ್ಪಾಯು, ದೀರ್ಘಾಯು, ತಿಳಿವಳಿಕೆ, ದಡ್ಡತನ, ಐಶ್ವರ್ಯ, ಬಡತನ, ಬೇಗನೆ ಕಲಿಯುವ ಶಕ್ತಿ, ಅದಿಲ್ಲದಿರುವಿಕೆ, ಈ ಮುಂತಾದ ಭೇದಗಳಿಗೆ ಕಾರಣವನ್ನು ವಿವರಿಸುವುದು ತೃಪ್ತಿಕರವಾಗಿಲ್ಲದೆ, ಇವನ್ನೂ ಕೊಡುವ ದೇವರಿಗೆ ವೈಷಮ್ಯ, ನೈರ್ಘೃಣ್ಯಗಳು ತಪ್ಪುವಹಾಗಿಲ್ಲವು. ಅಲ್ಲದೆ ಜೀವರ ಈಗಿನ ಜೀವನದ ಅಲ್ಪಾವಧಿಯಲ್ಲಿ ಮಾಡಿರುವ ಕರ್ಮಾನುಸಾರವಾಗಿ ಶಾಶ್ವತವಾದ ಸ್ವರ್ಗವನ್ನೋ, ನರಕವನ್ನೋ ಕೊಡುತ್ತಾನೆನ್ನುವುದು, ಕರ್ಮ ಮತ್ತು ಫಲ ಇವುಗಳಿಗೆ ಹೆಚ್ಚಾದ ಮಿತಿಮಾರಿದ ಅನನುರೂಪವಾಗಿರುವಿಕೆ ಎಂಬುವ ದೋಷವು ತಪ್ಪುವಹಾಗಿಲ್ಲವು. ಅಲ್ಲದೆ ಜೀವರ ಹುಟ್ಟಿನಲ್ಲೇ ಬಂದಿರುವ ಹೆಚ್ಚು ಕಡಿಮೆಗಳಿಗೆ ಕಾರಣವಾಗಿ ಕೃತಹಾನಿ ಅಕೃತಾಭ್ಯಾಗಮ ದೋಷಗಳು ಜೀವರಿಗೆ ತಪ್ಪುವಹಾಗೂ ಇಲ್ಲವು. ಮೊದಲು ಇಲ್ಲದಿದ್ದ ಜೀವರನ್ನು ಸೃಜಿಸುವುದು ಹೇಗೆ? ಸೃಷ್ಟರಾದ ಜೀವರು ನಿತ್ಯವಾಗಿರುವುದು ಹೇಗೆ? ಎಂಬ ಪ್ರಶ್ನೆಗಳು ಸಮರ್ಪಕವಾದ ಉತ್ತರವಿಲ್ಲದೆ ಉಳಿದಿರಬೇಕಾಗಿವೆ. ಬೌದ್ಧಮತ ಹಿಂದೂಮತಗಳಲ್ಲಿ ಈ ದೋಷಗಳಿಗೆ ಅವಕಾಶವಿಲ್ಲವೆಂಬುದನ್ನು ಗಮನಿಸಬಹುದು. ಹೀಗೆ ಈ ಆಸ್ತಿಕದರ್ಶನಗಳಲ್ಲಿ ಸಾಕಾರ ಸಗುಣ ಬಹುತತ್ವವಾದಿಗಳೆಂದೂ, ನಿರಾಕಾರ ಸಗುಣಬಹುತತ್ವವಾದಿಗಳೆಂದೂ, ನಿರಾಕಾರನಿರ್ಗುಣ ಏಕತತ್ವವಾದಿಗಳೆಂದೂ

ಈಶ್ವರಸ್ಯ ಸ್ವರೂಪೇ ಚ ಬಂಧಹೇತೌ ತಥೈವ ಚ ।
ಜಗತಃ ಕಾರಣೇ ಮುಕ್ತೌ ಜ್ಞಾನಾದೌ ಚ ತಥೈವ ಚ ॥೨೨॥

ಮಾರ್ಗಾಣಾಂ ಯೇ ವಿರುದ್ಧಾಂಶಾ ವೇದಾನ್ತೇ ಚ ವಿಚಕ್ಷಣಾಃ ।
ತೇ ಚ ಮಂದಮತೀನಾಂ ಚ ಮಹಾಮೋಹಾವೃತಾತ್ಮನಾಮ್ ॥೨೩॥

ಮೂರು ಬಗೆಯನ್ನು ಮನಗಾಣಬಹುದು. ಅಲ್ಲದೆ ಈ ಅದ್ವೈತದರ್ಶನದಲ್ಲಿ ಹೀಗೆ ಎಲ್ಲ ಮತದರ್ಶನಗಳಿಗೂ ತಕ್ಕ ಸ್ಥಾನವಿದೆಯಾದುದರಿಂದ ಯಾವುದರೊಡನೆಯೂ ವಿರೋಧವಿಲ್ಲದೆ, ಎಲ್ಲವನ್ನೂ ಒಳಗೊಳ್ಳಬಲ್ಲಷ್ಟು ವಿಸ್ತಾರವನ್ನೂ, ವಿಶ್ವಧರ್ಮವನ್ನೂ ಇದು ಒಳಗೊಂಡಿದೆ ಎಂಬುದನ್ನೂ ಗಮನಿಸಬಹುದು. ||೨೧||

ಈಶ್ವರನ ಸ್ವರೂಪವು ಇಂಥದು ಎಂಬ ವಿಷಯದಲ್ಲಿಯೂ, ಅವನಿಗೆ ಸಂಸಾರದ ಮತ್ತು ಜಗತ್ತಿನ ಸೃಷ್ಟಿಸ್ಥಿತಿಲಯಗಳ ಕಾರಣವಿಷಯದಲ್ಲಿಯೂ, ಮುಕ್ತಿಜ್ಞಾನಗಳ ವಿಷಯದಲ್ಲಿಯೂ, ಬೇರೆ ಬೇರೆ ಶಾಸ್ತ್ರದವರು ನಾನಾವಿಧವಾಗಿ ಹೇಳುತ್ತಾರೆ. ಹೇಗೆಂದರೆ ಬೌದ್ಧರು ಮೀಮಾಂಸಕರು ಸಾಂಖ್ಯರೂ ಈಶ್ವರನೇ ಇಲ್ಲವೆನ್ನುತ್ತಾರೆ. ಈಶ್ವರನಿದ್ದಾನೆ; ಅವನು ದುಃಖ, ಕರ್ಮ ಇವುಗಳಿಲ್ಲದ ಒಬ್ಬ ಪುರುಷನೆಂದು ಯೋಗಶಾಸ್ತ್ರಜ್ಞರು ಹೇಳುತ್ತಾರೆ. ನಿತ್ಯವಾದ ಜ್ಞಾನಕ್ಕೆ ಆಶ್ರಯನೆಂದು ತಾರ್ಕಿಕರು ಹೇಳುತ್ತಾರೆ. ಪ್ರಕೃತಿ ಪುರುಷ ಇವರ ವಿವೇಕಜ್ಞಾನವು ಇಲ್ಲದುದರಿಂದ ಆತ್ಮನಿಗೆ ತಾನು ಮಾಡಿದ ಪುಣ್ಯಪಾಪಗಳಿಂದ ಸಂಸಾರವೆಂದು ತಾರ್ಕಿಕರು ಹೇಳುತ್ತಾರೆ. ಪರಮಾಣುಗಳೇ ಕಾರಣವೆಂದು ನ್ಯಾಯವೈಶೇಷಿಕರು ಹೇಳುತ್ತಾರೆ. ಪ್ರಕೃತಿಪುರುಷ ಇವರುಗಳ ವಿವೇಕಜ್ಞಾನದಿಂದ ಮೋಕ್ಷವೆಂದು ಸಾಂಖ್ಯರು ಹೇಳುತ್ತಾರೆ. ಬುದ್ಧ್ಯಾದಿಗುಣಗಳ ನಾಶವೇ ಮೋಕ್ಷವೆಂದು ವೈಶೇಷಿಕರು ಹೇಳುತ್ತಾರೆ. ಈ ಪ್ರಕಾರ ಬೇರೆ ಬೇರೆ ರೀತಿಯಾಗಿ ಹೇಳುತ್ತಿರುವ ಈ ಶಾಸ್ತ್ರಗಳಿಗೆ ಪ್ರಾಮಾಣ್ಯವಿಲ್ಲವು, ಎಂದರೆ ಈ ಮಾರ್ಗಗಳೆಲ್ಲವೂ ಅಜ್ಞಾನಿಗಳಾದ, ವೇದದಲ್ಲಿ ಅಧಿಕಾರವಿಲ್ಲದ, ಅಲ್ಪವಾದ ಬುದ್ಧಿಯುಳ್ಳ ಬೌದ್ಧಾದಿಗಳಿಗೆ ಮೊದಲೇ ಪರಶಿವನ ಸೂಕ್ಷ್ಮವಾದ ರೀತಿಯನ್ನು ತಿಳಿಯುವುದಕ್ಕೆ ಆಗುವುದಿಲ್ಲವಾದ್ದರಿಂದ ಅವರ ಉದ್ಧಾರಕ್ಕಾಗಿ ಈಶ್ವರನಿಂದ ಆಯಾಯ ಅಧಿಕಾರಿಗಳಯೋಗ್ಯತೆಗೆ ತಕ್ಕಹಾಗೆ ಹೇಳಲ್ಪಟ್ಟಿರುವುದರಿಂದ ಈ ಮಾರ್ಗಗಳೆಲ್ಲವೂ ಅಧಿಕಾರಿಭೇದದಿಂದ ಪ್ರಾಮಾಣಗಳೆನ್ನಬೇಕೇ ಹೊರತು ಅಪ್ರಮಾಣಗಳು ಎನ್ನಬಾರದು. ||೨೨-೨೩||

ವಾಂಛಾಮಾತ್ರಾನುಗುಣ್ಯೇನ ಪ್ರವೃತ್ತಾ ನ ಯಥಾರ್ಥತಃ ।
ದರ್ಶಯಿತ್ವಾ ತೃಣಂ ಮರ್ತ್ಯೋಽಧಾವಂತೀಂ ಗಾಂ ಯಥಾಽಗ್ರಹೀತ್॥೨೪॥

ದರ್ಶಯಿತ್ವಾ ತಥಾ ಕ್ಷುದ್ರಮಿಷ್ಟಂ ಪೂರ್ವಂ ಮಹೇಶ್ವರಃ ।
ಪಶ್ಚಾತ್ಪಾಕಾನುಗುಣ್ಯೇನ ದದಾತಿ ಜ್ಞಾನಮುತ್ತಮಮ್ ॥೨೫॥

ತಸ್ಮಾದುಕ್ತೇನ ಮಾರ್ಗೇಣ ಶಿವೇನ ಕಥಿತಾ ಅಮೀ ।
ಮಾರ್ಗಾ ಮಾನಂ ನ ಚಾಮಾನಂ ಮೃಷಾವಾದೀ ಕಥಂ ಶಿವಃ ॥೨೬॥

ಮಹಾಕಾರುಣಿಕೋ ದೇವಸ್ಸರ್ವಜ್ಞೋ ನಿರ್ಮಲಃ ಖಲು ।
ತಥಾಽಪಿ ವೇದೋ ಮಾರ್ಗಾಣಾಮುತ್ತಮಸ್ಸರ್ವಸಾಧಕಃ ॥೨೭॥

ಈ ಶಾಸ್ತ್ರಗಳೆಲ್ಲವನ್ನೂ ಈಶ್ವರನು ಮನಸ್ಸುಬಂದಂತೆ ಹೇಳುತ್ತಿರುವ ಬೌದ್ಧಾದಿಗಳ ಉದ್ಧಾರಕ್ಕಾಗಿಯೇ ಹೇಳಿದ್ದಾನೆ. ಹೇಗೆಂದರೆ, ಓಡಿಹೋಗುತ್ತಿರುವ ಹಸುವನ್ನು ಹಿಡಿಯಲಪೇಕ್ಷಿಸುವವನು ಮೊದಲು ಹಸುವಿಗೆ ಹುಲ್ಲು ಮೊದಲಾದ ಆಹಾರಪದಾರ್ಥಗಳನ್ನು ತೋರಿಸಿ, ಹೇಗೆ ತನ್ನ ಸ್ವಾಧೀನಮಾಡಿಕೊಳ್ಳುತ್ತಾನೋ ಹಾಗೆ ಆಯಾ ಜನರ ಸಂಸ್ಕೃತಿಯ ಮಹತ್ತ್ವಕ್ಕನುಸರಿಸಿ ಈ ಮಾರ್ಗಗಳಲ್ಲಿ ಯಾವುದಾದರೂ ಒಂದು ಅವರಿಗೆ ಹೊಂದಿಬರುತ್ತದೆ. ಅದರಿಂದ ಮುಂದುವರಿಯುವುದು ಎಲ್ಲರಿಗೂ ಸಾಧ್ಯವಾಗುತ್ತದೆ. ||೨೪||

ಈಶ್ವರನು ಮೊದಲು ಅವರವರ ಮನಸ್ಸಿಗೆ ತಕ್ಕಂತೆ ಅಲ್ಪ ಫಲಗಳ ವಿಚಾರಗಳನ್ನಾದರೂ ಹೇಳಿ, ಅನಂತರ ಅವರ ಮನಸ್ಸಿನ ಪರಿಣಾಮಕ್ಕೆ ತಕ್ಕಂಥ ಜ್ಞಾನವನ್ನು ಕೊಡುತ್ತಾನೆ. ||೨೫||

ಹೀಗೆ ಮೇಲೆ ಹೇಳಲ್ಪಟ್ಟ ರೀತಿಯಿಂದ ಎಲ್ಲಾ ಶಾಸ್ತ್ರಗಳೂ ಈಶ್ವರನಿಂದ ಹೇಳಲ್ಪಟ್ಟವುಗಳಾದುದರಿಂದ ಎಲ್ಲವೂ ಪ್ರಮಾಣಗಳೇ ವಿನಾ ಅಪ್ರಮಾಣಗಳಲ್ಲವು ; ಏಕೆಂದರೆ, ಈಶ್ವರನನ್ನು ಸುಳ್ಳುಗಾರನೆಂದು ಹೇಗೆ ಹೇಳಲಾದೀತು ? ||೨೬||

ಅಲ್ಲದೆ ಬಹಳ ಕರುಣಾಶಾಲಿಯೂ ನಿರ್ಮಲನೂ ಸರ್ವಜ್ಞನೂ ಆದ ಆ ಶಿವನಿಗೆ ಸುಳ್ಳಾದ ವಿಷಯವನ್ನು ಹೇಳಿ ಯಾವ ಪ್ರಯೋಜನವೂ ಆಗಬೇಕಾಗಿಲ್ಲವಾದ್ದರಿಂದ ಆ ಮಾರ್ಗಗಳೆಲ್ಲವೂ ಆಯಾ ಸಂಸ್ಕೃತಿಯ ಅಂತಸ್ತಿನಲ್ಲಿರುವವರಿಗೆ ಪ್ರಮಾಣವಾದವುಗಳೇ. ಅವುಗಳಲ್ಲಿಯೂ ವೇದಮಾರ್ಗವೇ ಉತ್ತಮವಾದುದಾಗಿಯೂ ಸಮಸ್ತ ಇಷ್ಟಾರ್ಥಗಳನ್ನೂ ಕೊಡುವುದಾಗಿಯೂ ಇದೆ. ಎಂದು ತಿಳಿಯಬೇಕು. ||೨೭||

ಸರ್ವಮುಕ್ತಂ ಸಮಾಸೇನ ಮಾರ್ಗಪ್ರಾಮಾಣ್ಯನಿರ್ಣಯಮ್ ।
ಏವಂ ಬುದ್ಧ್ವಾ ಶ್ರುತೌ ಶ್ರದ್ಧಾಂ ಕುರುಧ್ವಂ ಯತ್ನತೋ ದ್ವಿಜಾಃ ॥೨೮॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಮಾರ್ಗಪ್ರಾಮಾಣ್ಯವರ್ಣನಂ ನಾಮ ದ್ವಾವಿಂಶಾಧ್ಯಾಯಃ

ಎಲೈ ಬ್ರಾಹ್ಮಣರೇ, ಈ ರೀತಿಯಾಗಿ ಮುಕ್ತಿಯನ್ನು ಪಡೆಯುವ ಮಾರ್ಗಗಳಲ್ಲಿ ಯಾವುದಕ್ಕೆ ಪ್ರಾಮಾಣ್ಯವು ಎಂಬ ವಿಚಾರವನ್ನೆಲ್ಲವನ್ನೂ ಹೇಳಿದ್ದೇನೆ. ಇದರಂತೆ ಎಲ್ಲಾ ಪ್ರಮಾಣಗಳಿಗಿಂತಲೂ ಶ್ರೇಷ್ಠವಾದ ಶ್ರುತಿಮಾರ್ಗಗಳಲ್ಲಿ ನೀವುಗಳೆಲ್ಲರೂ ಶ್ರದ್ಧೆಯುಳ್ಳವರಾಗಿರಿ—ಎಂದು ಸೂತರು ಶೌನಕಾದಿಋಷಿಗಳನ್ನು ಕುರಿತು ಹೇಳಿದರು. ॥೨೮॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಮುಕ್ತಿಮಾರ್ಗಗಳ ಪ್ರಾಮಾಣ್ಯ ಮತ್ತು ಬೆಲೆಯನ್ನು ವಿವರಿಸಿರುವ
ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ತ್ರಯೋವಿಂಶಾಧ್ಯಾಯಃ ||

ಇಪ್ಪತ್ತುಮೂರನೆಯ ಅಧ್ಯಾಯವು

(ಶಂಕರಪ್ರಸಾದಕ್ರಮಃ)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಪ್ರಸಾದಕ್ರಮಮಾದರಾತ್ ।
ಯಸ್ಯ ವಿಜ್ಞಾನಮಾತ್ರೇಣ ಪ್ರಸಾದಶ್ಶಾಂಕರೋ ಭವೇತ್ ||೧||

ಪುರಾ ಸನತ್ಕುಮಾರಾಖ್ಯೋ ಮುನಿಸ್ಸತ್ಯಪರಾಯಣಃ ।
ಬ್ರಹ್ಮಾಣಂ ಬ್ರಹ್ಮಸಂಪನ್ನಮಪೃಚ್ಛದಿದಮಾದರಾತ್ ||೨||

ಹಿಂದಿನ ಅಧ್ಯಾಯದಲ್ಲಿ ಉಪಾಧಿವಿಶಿಷ್ಟನಾದ ಶಿವನು ಉಪಾಸಕರಿಗೆ ಇಷ್ಟವಾದ ಉಪಾಧಿಯನ್ನು ಆಶ್ರಯಿಸಿ ಅನುಗ್ರಹಮಾಡುತ್ತಾನೆಂದು ಹೇಳಲ್ಪಟ್ಟಿತು. ಈಗ ಮೋಕ್ಷವನ್ನು ಪಡೆಯಲಪೇಕ್ಷಿಸುವವನು ಯಾವ ಕ್ರಮದಿಂದ ಈಶ್ವರಾನುಗ್ರಹವನ್ನು ಹೊಂದಬೇಕು? ಎಂಬ ಕ್ರಮವನ್ನು ಹೇಳುವುದಕ್ಕಾಗಿ ಈ ಅಧ್ಯಾಯವು ಪ್ರಾರಂಭಿಸಲ್ಪಡುತ್ತದೆ. ಪುನಃ ಸೂತರು ಶೌನಕಾದಿಋಷಿಗಳನ್ನು ಕುರಿತು, ಎಲೈ ಋಷಿಗಳಿರಾ, ಯಾವ ಈಶ್ವರಾನುಗ್ರಹದ ಕ್ರಮವನ್ನು ತಿಳಿಯುವುದರಿಂದಲೇ ಮನುಜನು ಈಶ್ವರನ ಪ್ರೀತಿಗೆ ಪಾತ್ರನಾಗುವನೋ, ಅಂಥ ಈಶ್ವರಾನುಗ್ರಹದ ಕ್ರಮವನ್ನು ನಿಮಗಾಗಿ ಹೇಳುತ್ತೇನೆ. ||೧||

ಪೂರ್ವದಲ್ಲಿ ಸನತ್ಕುಮಾರರೆಂಬ ಸತ್ಯವಂತರಾದ ಋಷಿಗಳು ಬ್ರಹ್ಮಜ್ಞಾನ

ಸೋಽಪಿ ಸರ್ವಜಗದ್ಧಾತಾ ಸಹ ತೇನ ಮುನೀಶ್ವರಾಃ ।
ನಾರಾಯಣಮನಾದ್ಯಂತಮಪೃಚ್ಛದಿದಮುತ್ತಮಮ್ ॥೩॥

ಸೋಽಪಿ ನಾರಾಯಣಶ್ಶ್ರೀಮಾನ್ಸಹ ತಾಭ್ಯಾಮುಮಾಪತಿಮ್ ।
ಕೈಲಾಸಶಿಖರೇ ರಮ್ಯೇ ಸಮಾಸೀನಮತಿಪ್ರಭಮ್ ॥೪॥

ಪ್ರಣಮ್ಯ ದಂಡವದ್ಭಕ್ತ್ಯಾ ಸ್ತುತ್ವಾ ರುದ್ರೇಣ ಸುವ್ರತಾಃ ।
ಅಪೃಚ್ಛದ್ದೇವದೇವೇಶಮಿದಂ ಪರಮಕಾರಣಮ್ ॥೫॥

ದೇವದೇವೋಽಪಿ ಸರ್ವಜ್ಞಸ್ಸಾಂಬಸ್ಸರ್ವಫಲಪ್ರದಃ ।
ಪ್ರಾಹ ಗಂಭೀರಯಾ ವಾಚಾ ವಿಷ್ಣವೇ ಮುನಿಪುಂಗವಾಃ ॥೬॥

ತಚ್ಛ್ರುತ್ವಾ ಭಗವಾನ್ವ್ಯಾಸಸ್ಸಾಕ್ಷಾತ್ಪ್ರತ್ಯಕ್ಷಶಂಕರಾತ್ ।
ಸನತ್ಕುಮಾರಾತ್ಸರ್ವಜ್ಞಾದುಕ್ತವಾನ್ಮಮ ಸಾದರಮ್ ॥೭॥

ದಲ್ಲಿ ಆಸಕ್ತನಾದ ಚತುರ್ಮುಖಬ್ರಹ್ಮನನ್ನು ಕುರಿತು ಪ್ರೀತಿಯಿಂದ ಈಶ್ವರಾನುಗ್ರಹದ ಈ ರೀತಿಯನ್ನು ವಿವರಿಸಬೇಕೆಂದು ಪ್ರಶ್ನೆಮಾಡಿದರು. ॥೨॥

ಲೋಕಕ್ಕೆಲ್ಲಕ್ಕೂ ಒಡೆಯನಾದ ಆ ಬ್ರಹ್ಮನೂ ಕೂಡ ಈಶ್ವರಾನುಗ್ರಹದ ಕ್ರಮವನ್ನು ತಿಳಿಯದವನಾಗಿ ಆ ಸನತ್ಕುಮಾರರಿಂದ ಕೂಡಿ ಆದ್ಯಂತರಹಿತನಾದ ನಾರಾಯಣನ ಸಮೀಪಕ್ಕೆ ಹೋಗಿ ಅವನನ್ನು ಕೇಳಿದನು. ಆ ನಾರಾಯಣನು ಸನತ್ಕುಮಾರರು ಬ್ರಹ್ಮ ಇವರುಗಳಿಂದ ಸಮೇತನಾಗಿ ಕೈಲಾಸಪರ್ವತದ ಶಿಖರದಲ್ಲಿ ಕುಳಿತಿರುವ ಬಹಳ ಪ್ರಕಾಶಮಾನನಾದ ಪಾರ್ವತೀಪತಿಯಾದ ಈಶ್ವರನ ಸಮೀಪಕ್ಕೆ ಹೋಗಿ ಸಾಷ್ಟಾಂಗನಮಸ್ಕಾರಮಾಡಿ ರುದ್ರಾಧ್ಯಾಯದಿಂದ ಸ್ತೋತ್ರಮಾಡಿ ದೇವತೆಗಳಲ್ಲೆಲ್ಲಾ ಮುಖ್ಯನಾದ ಆ ಶಿವನನ್ನು ಕುರಿತು ಮೋಕ್ಷಕ್ಕೆ ಕಾರಣವಾದ ಈಶ್ವರಾನುಗ್ರಹದ ಕ್ರಮವನ್ನು ತಿಳಿಯಹೇಳಬೇಕೆಂದು ಪ್ರಶ್ನೆಮಾಡಿದನು. ॥೩-೪-೫॥

ಎಲೈ ಋಷಿಶ್ರೇಷ್ಠರೇ, ದೇವೋತ್ತಮನೂ ಸರ್ವಜ್ಞನೂ ಪಾರ್ವತೀಸಹಿತನೂ ಇಷ್ಟಾರ್ಥವನ್ನು ಕೊಡುವವನೂ ಆದ ಶಿವನು, ಗಂಭೀರವಾದ ಮಾತಿನಿಂದ ವಿಷ್ಣುವನ್ನು ಕುರಿತು ಆ ಕ್ರಮವನ್ನು ಹೀಗೆ ಹೇಳಿದನು. ॥೬॥

ಸಾಕ್ಷಾತ್ ಶಂಕರನಿಂದ ಈ ವಿಷಯವನ್ನು ತಿಳಿದ ಸರ್ವಜ್ಞರಾದ ಸನತ್ಕುಮಾರರಿಂದ ವ್ಯಾಸಮಹರ್ಷಿಗಳು ತಿಳಿದುಕೊಂಡು, ಪ್ರೀತಿಯಿಂದ ನನಗೆ ಅವನ್ನು ಹೇಳಿದರು. ॥೭॥

ಅಹಂ ಭಾಗ್ಯವತಾಮದ್ಯ ಯುಷ್ಮಾಕಂ ಮುನಿಪುಂಗವಾಃ ।
ಕೇವಲಂ ಕೃಪಯಾ ವಕ್ಷ್ಯೇ ತದೇವ ಪರಯಾ ಮುದಾ ॥೮॥

ನಿತ್ಯಕರ್ಮಾದ್ಯನುಷ್ಠಾನಾತ್ಪಾಪನಾಶೋ ಭವತ್ಯತಃ ।
ಚಿತ್ತಶುದ್ಧಿರ್ಭವೇಜ್ಜಂತೋ ರುದ್ರಸ್ಯೈವ ಪ್ರಸಾದತಃ ॥೯॥

ತಥಾ ಸಂಸಾರದೋಷಸ್ಯ ದರ್ಶನಂ ಭವತಿ ಸ್ವತಃ ।
ತತೋ ವಿರಕ್ತಸ್ಸಂಸಾರಾತ್ಪುನಸ್ತ್ಯಾಗಶ್ಚ ಕರ್ಮಣಾಮ್ ॥೧೦॥

ವಿರಿಂಚಸ್ಯ ಪ್ರಸಾದೇನ ತತಶ್ಶಾನ್ತ್ಯಾದಿ ಸಾಧನಮ್ ।
ಪ್ರಸಾದಾದ್ವೈಷ್ಣವಾತ್ಸಾಕ್ಷಾನ್ಮುಮುಕ್ಷುತ್ವಂ ಪುನಸ್ಸ್ವತಃ ॥೧೧॥

ಎಲೈ ಋಷಿಗಳಿರಾ, ನಾನು ವ್ಯಾಸರಿಂದ ತಿಳಿದುಕೊಂಡ ಆ ವಿಷಯವನ್ನೇ ಭಾಗ್ಯಶಾಲಿಗಳಾದ ನಿಮಗೆ ಯಾವ ಫಲಾಪೇಕ್ಷೆಯೂ ಇಲ್ಲದೆ ಸಂತೋಷವಾಗಿ ಕರುಣೆಯಿಂದ ಈಗ ಹೇಳುತ್ತೇನೆ. ॥೮॥

ಪ್ರತಿಯೊಬ್ಬರೂ ತಮ್ಮ ತಮ್ಮ ವರ್ಣಾಶ್ರಮಾದಿಗಳಿಗೆ ಉಕ್ತವಾಗಿರುವ ನಿತ್ಯನೈಮಿತ್ತಿಕಕರ್ಮಗಳನ್ನು ತಪ್ಪದೆ ಆಚರಿಸುತ್ತಿದ್ದರೆ ಅದರಿಂದ ಜ್ಞಾನೋತ್ಪತ್ತಿಗೆ ತಡೆಯಾಗಿರುವ ಪಾಪವು ನಾಶವಾಗುತ್ತದೆ. ಇದರಿಂದ ಚಿತ್ತಶುದ್ಧಿಯುಂಟಾಗುತ್ತದೆ. ಹೀಗಾಗುವುದು ಈಶ್ವರಾನುಗ್ರಹದಿಂದಲೇ ಹೊರತು ಅನ್ಯಥಾ ಇಲ್ಲ. ॥೯॥

ಈಶ್ವರಾನುಗ್ರಹದಿಂದಲೇ ಸಂಸಾರದಲ್ಲಿರುವ ದೋಷಗಳು ತಿಳಿದು ಸಂಸಾರದಲ್ಲಿ ವೈರಾಗ್ಯವೂ ಅನಂತರ ಕರ್ಮತ್ಯಾಗಾಪೇಕ್ಷೆಯೂ ಉಂಟಾಗುತ್ತದೆ. ॥೧೦॥

ರಜೋಗುಣಪ್ರಧಾನನಾದ ಬ್ರಹ್ಮನ ಅನುಗ್ರಹದಿಂದ ವೈರಾಗ್ಯಕ್ಕೆ ಮುಖ್ಯ ಸಾಧನವಾದ ಶಾಂತ್ಯಾದಿಗಳಲ್ಲಿ ಪ್ರವೃತ್ತಿಯುಂಟಾಗುತ್ತದೆ. ಅನಂತರ ಸತ್ತ್ವಗುಣವೇ ಉಪಾಧಿಯಾಗಿ ಉಳ್ಳ ವಿಷ್ಣುವಿನ ಅನುಗ್ರಹದಿಂದ ಮೋಕ್ಷಕ್ಕೆ ಪರಮ ಸಾಧನವಾದ ಮುಮುಕ್ಷುತ್ವವು ತಾನಾಗಿಯೇ ಉಂಟಾಗುವುದು. ಮುಮುಕ್ಷುತ್ವವೆಂದರೆ, ಶರೀರದ ಅರ್ಧಭಾಗವು ಸುಟ್ಟುಹೋಗಿರುವ ಮನುಷ್ಯನು ತಾಪ ಪರಿಹಾರಕ್ಕಾಗಿ ಬೇರೆ ಯಾವ ವಿಚಾರವೂ ಮಾಡದೆ ಹೋಗಿ ನೀರಿನಲ್ಲಿ ಮುಳುಗಿಕೊಳ್ಳುತ್ತಾನೆ. ಇದರಂತೆ ಸಂಸಾರದುಃಖದಿಂದ ತಾಪಗೊಂಡ ಪುರುಷನಿಗೆ ಸಂಸಾರದಿಂದ ಬಿಡುಗಡೆಯನ್ನು ಹೊಂದಬೇಕೆಂಬ ಬಲವಾದ ಇಚ್ಛೆಯೇ ಮುಮುಕ್ಷುತ್ವವು. ॥೧೧॥

ವಿಘ್ನರಾಜಪ್ರಸಾದೇನ ಗುರುಪಾದಪರಿಗ್ರಹಃ ।
ತೇನ ಯೋಗಾಭಿಧಂ ಧ್ಯಾನಮೈಶ್ವರಂ ಜ್ಞಾನಸಾಧನಮ್ ॥೧೨॥

ಪುನಸ್ಸಾಂಖ್ಯಾಭಿದಂ ಜ್ಞಾನಂ ಪಾರ್ವತ್ಯಾಸ್ತು ಪ್ರಸಾದತಃ ।
ಸಾಂಖ್ಯಸ್ಯೋತ್ಪತ್ತಿವೇಳಾಯಾಂ ಮೋಚಕಸ್ಯ ಶಿವಸ್ಯ ತು ॥೧೩॥

ಪ್ರಸಾದೋ ಜಾಯತೇ ತೇನ ಸಂಸಾರಸ್ಯ ವಿಮರ್ದನಮ್ ।
ಸಂಸಾರಮೋಚಕಸ್ಸಾಕ್ಷಾಚ್ಛಿವ ಏವ ನ ಚಾಪರಃ ॥೧೪॥

ಅನ್ಯಾಶ್ಚ ದೇವತಾಸ್ಸರ್ವಾಃ ಪ್ರಣಾಡ್ಯೈವ ಹಿ ಮೋಚಕಾಃ ।
ಅನೇಕಜನ್ಮಸಂಸಿದ್ಧಶ್ರೌತಸ್ಮಾರ್ತಪರಾಯಣಃ ॥೧೫॥

ಕ್ರಮೇಣೈವ ಮಹಾದೇವಂ ಮೋಚಕಂ ಪರಮೇಶ್ವರಮ್ ।
ಪ್ರಾಪ್ನುಯಾದಪ್ರಮಾದೇನ ಮುಮುಕ್ಷುರಿತಿ ಹಿ ಶ್ರುತಿಃ ॥೧೬॥

ಹೀಗೆ ಬ್ರಹ್ಮ, ವಿಷ್ಣು, ಮಹೇಶ್ವರರಿಂದ ಅನುಗ್ರಹವನ್ನು ಹೊಂದಿ ಸಾಧನ ಚತುಷ್ಟಯದಿಂದ ಕೂಡಿದವನಿಗೆ ತತ್ತ್ವೋಪದೇಶವನ್ನು ಪಡೆಯಲು ಗುರುಗಳ ಸಮೀಪಕ್ಕೆ ಹೋಗುವಿಕೆಯಲ್ಲಿ ಇಚ್ಛೆಯು ಗಣಪತಿಯ ಅನುಗ್ರಹದಿಂದ ಉಂಟಾಗುತ್ತದೆ. ಅಂಥ ಗುರುಗಳ ಅನುಗ್ರಹದಿಂದ ಯೋಗವೆಂಬ ಹೆಸರುಳ್ಳ ಈಶ್ವರಸಂಬಂಧವಾದ ಜ್ಞಾನಸಾಧನೆಯಲ್ಲಿ ಪ್ರವೃತ್ತಿಯುಂಟಾಗಿ ವಿಜಾತೀಯ ಪ್ರತ್ಯಯಗಳಿಲ್ಲದೆ ಸಜಾತೀಯ ಪ್ರತ್ಯಯಪರಂಪರೆ ಎಂಬ ಜ್ಞಾನವುಂಟಾಗುವುದು. ಅನಂತರ ಜ್ಞಾನಪ್ರದಳೂ ಉಮಾರೂಪಳೂ ಆದ ಪಾರ್ವತಿಯ ಅನುಗ್ರಹದಿಂದ ಬ್ರಹ್ಮಸಾಕ್ಷಾತ್ಕಾರ ಜ್ಞಾನವು ಬುದ್ಧಿಯಲ್ಲಿ ಉಂಟಾಗುವುದು. ಸಾಂಖ್ಯವೆಂದರೆ ಬುದ್ಧಿಯಲ್ಲಿ ಉಂಟಾಗುವ ಸಮ್ಯಕ್‌ಜ್ಞಾನವು. ಇಂಥ ಸಾಕ್ಷಾತ್ಕಾರವಾಗುವ ಕಾಲದಲ್ಲಿ ಸಂಸಾರದಿಂದ ಬಿಡುಗಡೆಮಾಡುವ ಶಿವನ ಅನುಗ್ರಹವು ಉಂಟಾಗುವುದು. ಈ ಶಿವನ ಅನುಗ್ರಹದಿಂದ ಸಂಸಾರದ ನಾಶವುಂಟಾಗುವುದು. ಸಂಸಾರದಿಂದ ಬಿಡುಗಡೆಯನ್ನುಂಟುಮಾಡಬೇಕಾದರೆ ಶಿವನಿಂದ ಹೊರತು, ಇತರರಿಂದ ಅದು ಪ್ರಣಾಡೀಕ್ರಮದ ಮೂಲಕವಾಗಿ ಅಲ್ಲದೆ ಸ್ವತಂತ್ರವಾಗಿ, ನೇರವಾಗಿ, ಆಗಲಾರದು. ॥೧೨-೧೩-೧೪॥

ಹೀಗೆ ಸಾಕ್ಷಾತ್ಸಂಸಾರದಿಂದ ಬಿಡುಗಡೆಯನ್ನು ಮಾಡುವವನು ನಿರುಪಾಧಿಕನಾದ ಶಿವನೇ. ಇತರರಾದ ವಿಷ್ಣ್ವಾದಿಗಳು ಕ್ರಮಪಾಲಕರಾದುದರಿಂದ ಕ್ರಮೇಣ

ಪ್ರಸಾದಹೇತುಭೂತೇಷು ಪ್ರಣವಾಖ್ಯೋ ಮಹಾಮನುಃ ।
ವರಿಷ್ಠಃ ಕಥಿತಃ ಪ್ರಾಜ್ಞೈರ್ದೇವತಾಸು ಶಿವಃ ಪರಃ ॥೧೭॥

ವಿಷ್ಣುರ್ಮುಖ್ಯ ಇತಿ ಪ್ರೋಕ್ತಸ್ತಥಾ ಸಕಲ ಧಾರ್ಮಿಕೈಃ ।
ರುದ್ರಾರಾಧನಮೇವೋಕ್ತಂ ವರಿಷ್ಠಮಿತಿ ವೈದಿಕೈಃ ॥೧೮॥

ಓಂಕಾರಸ್ಯ ಪ್ರಸಾದೇನ ವಿಷ್ಣೋಶ್ಚೈವ ಪ್ರಸಾದತಃ ।
ರುದ್ರಾರಾಧನವಾಂಛಾ ಸ್ಯಾತ್ತದಾರಾಧನತಃ ಪುನಃ ॥೧೯॥

ಜ್ಞಾನಮಾನಂದಮದ್ವೈತಂ ಪರಂ ಬ್ರಹ್ಮಾಧಿಗಚ್ಛತಿ ।
ಪ್ರಸಾದಾದೇವ ರುದ್ರಸ್ಯ ಜ್ಞಾನಂ ಮೋಕ್ಷೈಕಸಾಧನಮ್ ॥೨೦॥

ಕಾರಣರಾಗುತ್ತಾರೆಯೇ ವಿನಾ ಮುಖ್ಯವಾಗಿ ಎಂದರೆ ಸ್ವತಂತ್ರರಾಗಿ ನೇರವಾಗಿ ಕಾರಣರಾಗರು.

ಆದುದರಿಂದ ಮೋಕ್ಷವನ್ನು ಪಡೆಯಲಪೇಕ್ಷಿಸುವವನು ಜಾಗರೂಕನಾಗಿ ತನ್ನ ಕೆಲಸವನ್ನು ಮಾಡುತ್ತಿದ್ದರೆ ಎಂದರೆ ಅನೇಕ ಜನ್ಮಗಳಲ್ಲಿ ಶ್ರುತಿಸ್ಮೃತಿಗಳಲ್ಲಿ ಹೇಳಿರುವ ವರ್ಣಾಶ್ರಮ ಕರ್ಮಗಳನ್ನು ತಪ್ಪದೆ ಮಾಡಿ ಅದರಿಂದ ಚಿತ್ತಶುದ್ಧಿಯನ್ನು ಹೊಂದಿ ಕ್ರಮವಾಗಿ ಸಂಸಾರ ದುಃಖವನ್ನು ಬಿಡಿಸುವ ಶಿವನನ್ನು ಹೊಂದುತ್ತಾನೆ. ಇದಕ್ಕೆ ಪ್ರಣವ ಮಂತ್ರದ ಜಪವು ಮುಖ್ಯವೆಂದು "ಪ್ರಣವೋ ಧನುಃ" ಮುಂ. ಉ. ೨.೨.೪. ಎಂಬ ಶ್ರುತಿಯು ಹೇಳುತ್ತದೆ. ಹಾಗೆಯೇ ಶಿವನ ಅನುಗ್ರಹಕ್ಕೆ ಕಾರಣವಾದವುಗಳಲ್ಲೆಲ್ಲಾ ಪ್ರಣವವೆಂಬ ಮಹಾಮಂತ್ರವೇ ಶ್ರೇಷ್ಠವಾದುದು ಎಂದೂ, ದೇವತೆಗಳಲ್ಲೆಲ್ಲಾ ಶಿವನೇ ಉತ್ತಮನಾದವನು ಎಂದೂ, ಪ್ರಾಜ್ಞರು ಹೇಳುತ್ತಾರೆ. ||೧೫-೧೬-೧೭||

ಧಾರ್ಮಿಕರಾದವರು ವಿಷ್ಣುವೇ ಮುಖ್ಯನಾದವನೆಂದು ಹೇಳುವರು. ವೇದವನ್ನು ತಿಳಿದವರು ರುದ್ರನ ಆರಾಧನೆಯೇ ಮುಖ್ಯವೆಂದು ಹೇಳುತ್ತಾರೆ. ||೧೮||

ಓಂಕಾರೋಪಾಸನೆಯ ಮಹಿಮೆಯಿಂದಲೂ ವಿಷ್ಣುವಿನ ಅನುಗ್ರಹದಿಂದಲೂ ರುದ್ರನ ಪೂಜೆಯಲ್ಲಿ ಇಚ್ಛೆಯುಂಟಾಗುವುದು. ರುದ್ರನ ಆರಾಧನೆಯಿಂದ ಉಂಟಾದ ರುದ್ರನ ಅನುಗ್ರಹದಿಂದ ಸಚ್ಚಿದಾನಂದಸ್ವರೂಪವಾದ ಅದ್ವಿತೀಯವಾದ ಶ್ರೇಷ್ಠವಾದ ಬ್ರಹ್ಮತತ್ವದ ಜ್ಞಾನವನ್ನು ಹೊಂದುತ್ತಾನೆ. ಹೀಗೆ ರುದ್ರನ ಅನುಗ್ರಹದಿಂದ ಉಂಟಾದ ಬ್ರಹ್ಮಜ್ಞಾನವೇ ಮೋಕ್ಷಕ್ಕೆ ಮುಖ್ಯವಾದ ಸಾಧನವು. ||೧೯-೨೦||

ದೇವಯಾನಾಭಿಧಾ ವಿಷ್ಣೋರ್ಗತಿಸ್ಸ್ರಷ್ಟುಃ ಪ್ರಸಾದತಃ ।
ಬ್ರಾಹ್ಮಣ್ಯಂ ಕೀರ್ತಿರಿಂದೋಶ್ಚ ರವೇರಾರೋಗ್ಯಮೇವ ಚ ॥೨೦॥

ಅಗ್ನೇರೈಶ್ವರ್ಯಮತುಲಂ ಪಿತೃಯಾಣೋ ಯಮಸ್ಯ ತು ।
ಪುರಂದರಸ್ಯ ಸೌಭಾಗ್ಯಂ ಬಲಂ ವಾಯೋಃ ಪ್ರಸಾದತಃ ॥೨೧॥

ವಿಘ್ನರಾಜಸ್ಯ ದೇವಸ್ಯ ಕಾರ್ಯಸಿದ್ಧಿರವಿಘ್ನತಃ ।
ಷಣ್ಮುಖಸ್ಯ ಪ್ರಸಾದೇನ ಸರ್ವಸಿದ್ಧಿರಯತ್ನತಃ ॥೨೩॥

ಭಾರತ್ಯಾಶ್ಚ ಪ್ರಸಾದೇನ ವಾಗ್ವಿಭೂತಿರಯತ್ನತಃ ।
ಶ್ರೀದೇವ್ಯಾಸ್ತು ಪ್ರಸಾದೇನ ಸರ್ವೈಶ್ವರ್ಯಮಯತ್ನತಃ ॥೨೪॥

ಇಲ್ಲಿಯವರೆಗೆ ಫಲಾಪೇಕ್ಷೆಯಿಲ್ಲದೆ ಮಾಡಿದ ದೇವತಾರಾಧನೆಗೆ ತಕ್ಕ ಫಲವನ್ನು ಹೇಳಿ ಈಗ ಫಲವನ್ನು ಅಪೇಕ್ಷಿಸಿ ಮಾಡಿದಂಥ ದೇವತೋಪಾಸನೆಗೆ ಫಲವನ್ನು ಹೇಳುತ್ತಾರೆ. ವಿಷ್ಣುವಿನ ಆರಾಧನೆಮಾಡುತ್ತಿದ್ದರೆ ಅಂಥವರಿಗೆ ದೇವಯಾನವೆಂಬ ಗತಿಯುಂಟಾಗುತ್ತದೆ. ಬ್ರಹ್ಮನ ಆರಾಧನೆಯಿಂದ ಬ್ರಾಹ್ಮಣನಾಗಿ ಹುಟ್ಟುತ್ತಾನೆ, ಚಂದ್ರನ ಅನುಗ್ರಹದಿಂದ ಒಳ್ಳೆ ಯಶಶ್ಶಾಲಿಯಾಗುತ್ತಾನೆ, ಸೂರ್ಯನ ಅನುಗ್ರಹದಿಂದ ಆರೋಗ್ಯಶಾಲಿಯಾಗುತ್ತಾನೆ. ಹಾಗೆಯೇ ||೨೧||

ಅಗ್ನಿದೇವರ ಆರಾಧನೆಯಿಂದ ಬಹಳವಾದ ಐಶ್ವರ್ಯವುಂಟಾಗುತ್ತದೆ. ಯಮನ ಆರಾಧನೆಯಿಂದ ಪಿತೃಲೋಕಪ್ರಾಪ್ತಿಯಾಗುವುದು. ಇಂದ್ರನ ಅನುಗ್ರಹ ದಿಂದ ಸೌಭಾಗ್ಯವುಂಟಾಗುತ್ತದೆ. ವಾಯುದೇವರ ಪ್ರಸಾದದಿಂದ ಬಲವುಂಟಾಗುತ್ತದೆ. ||೨೨||

ಗಣೇಶನ ಅನುಗ್ರಹದಿಂಥ ಯಾವ ವಿಧವಾದ ತೊಂದರೆಯೂ ಇಲ್ಲದೆ ಕಾರ್ಯಸಿದ್ಧಿಯಾಗುವುದು. ಷಣ್ಮುಖನ ಅನುಗ್ರಹದಿಂದ ಹೆಚ್ಚು ಪ್ರಯತ್ನವಿಲ್ಲದೆ ಎಲ್ಲಾ ಕಾರ್ಯಸಿದ್ಧಿಯಾಗುವುದು. ||೨೩||

ಸರಸ್ವತಿಯ ಅನುಗ್ರಹದಿಂದ ವಾಚಾಳುತ್ವವೂ, ಲಕ್ಷ್ಮೀದೇವಿಯ ಅನುಗ್ರಹ ದಿಂದ ಎಲ್ಲಾ ವಿಧವಾದ ಐಶ್ವರ್ಯಗಳೂ, ನಮ್ಮ ಹೆಚ್ಚು ಪ್ರಯತ್ನವಿಲ್ಲದೆ ಉಂಟಾ ಗುತ್ತವೆ. ||೨೪||

ದುರ್ಗಾದೇವ್ಯಾಃ ಪ್ರಸಾದೇನ ಸರ್ವತ್ರ ವಿಜಯೋ ಭವೇತ್ ।
ಕಾಮಿನಾಂ ದೇವತಾಸ್ಸರ್ವಾಸ್ಸಾಂಸಾರಿಕಫಲಪ್ರದಾಃ ॥೨೫॥

ಕಾಮನಾರಹಿತಾನಾಂ ತು ಶುದ್ಧಿದ್ವಾರೇಣ ದೇವತಾಃ ।
ಮಹಾದೇವಪ್ರಸಾದಸ್ಯ ಹೇತುಭೂತಾ ಭವಂತಿ ಹಿ ॥೨೬॥

ಮಹಾದೇವಪ್ರಸಾದಸ್ತು ನ ಹೇತುಃ ಕಸ್ಯಚಿದ್ದ್ವಿಜಾಃ ।
ಸ್ವಯಂ ಭುಕ್ತಿಕರಃ ಪುಂಸಾಂ ಕಾಮಿನಾಮಚಿರೇಣ ತು ॥೨೭॥

ಸ್ವಯಂ ಮುಕ್ತಿಕರಸ್ಸಾಕ್ಷಾತ್ಕಾಮನಾರಹಿತಸ್ಯ ತು ।
ಅಚಿರೇಣೈವ ಕಾಲೇನ ಶಿವಸ್ಯೈವ ಪ್ರಸಾದತಃ ॥೨೮॥

ದುರ್ಗಾದೇವಿಯ ಅನುಗ್ರಹದಿಂದ ಎಲ್ಲಾ ಕಡೆಯಲ್ಲಿಯೂ ಎಲ್ಲಾ ಕೆಲಸಗಳಲ್ಲಿಯೂ ಜಯವುಂಟಾಗುವುದು. ಈ ರೀತಿಯಾಗಿ ಫಲಾಪೇಕ್ಷೆಯಿಂದ ಕರ್ಮ ಮಾಡುವವರಿಗೆ ಆಯಾಯ ದೇವತೆಗಳು ಸಂಸಾರಕ್ಕೆ ಸಂಬಂಧಪಟ್ಟ ಫಲವನ್ನೇ ಕೊಡುತ್ತಾರೆ. ॥೨೫॥

ಫಲಾಪೇಕ್ಷೆ ಇಲ್ಲದೆ ಮಾಡಿದ ಕರ್ಮಗಳು ಚಿತ್ತಶುದ್ಧಿಯನ್ನುಂಟುಮಾಡಿ ತನ್ಮೂಲಕ ಈಶ್ವರನ ಅನುಗ್ರಹಕ್ಕೆ ಕಾರಣವಾಗುತ್ತವೆ. ॥೨೬॥

ವಿಷ್ಣ್ವಾದಿದೇವತೆಗಳ ಅನುಗ್ರಹವು ಹೇಗೆ ಈಶ್ವರನ ಅನುಗ್ರಹಕ್ಕೆ ಕಾರಣವಾಗುವುದೋ, ಹಾಗೆ ಈಶ್ವರನ ಅನುಗ್ರಹವು ಮತ್ತೊಂದಕ್ಕೆ ಕಾರಣವಾಗದೆ ತಾನಾಗಿಯೇ ಫಲಾಪೇಕ್ಷೆಯಿಂದ ಈಶ್ವರನ ಆರಾಧನೆಯನ್ನು ಮಾಡುವವರಿಗೆ ಇಷ್ಟವಾದ ಫಲಗಳನ್ನು ಶೀಘ್ರವಾಗಿಯೇ ಕೊಡುತ್ತದೆ. ॥೨೭॥

ಫಲಾಪೇಕ್ಷೆ ಇಲ್ಲದೆ ಈಶ್ವರಾರಾಧನೆಮಾಡಿದರೆ ಅಂಥ ಆರಾಧನೆಯಿಂದುಂಟಾದ ಈಶ್ವರನ ಅನುಗ್ರಹವು ಸಾಕ್ಷಾನ್ಮೋಕ್ಷವನ್ನುಂಟುಮಾಡುವುದು. ಇತರರಾದ ದೇವತೆಗಳು ಈಶ್ವರನ ಅನುಗ್ರಹದ ಮೂಲಕವಾಗಿಯೇ ತಮ್ಮನ್ನು ಆರಾಧಿಸುವವರಿಗೂ ಇಹಪರಲೋಕಗಳ ಸೌಖ್ಯವನ್ನು ಶೀಘ್ರವಾಗಿ ಉಂಟುಮಾಡುವರೇ ಹೊರತು ಸ್ವತಂತ್ರವಾಗಿ ಅನುಗ್ರಹವನ್ನು ಮಾಡಲಾರರು. ॥೨೮॥

ದೇವತಾ ಭುಕ್ತಿದಾ ವಿಪ್ರಾ ಮುಕ್ತಿದಾ ನ ಸ್ವತಂತ್ರತಃ।
ಮಹಾದೇವಪ್ರಸಾದೇನ ಸಮಃ ಕಶ್ಚಿನ್ನ ವಿದ್ಯತೇ ॥೨೯॥

ಮಹಾದೇವಪ್ರಸಾದೇನ ಖಲು ವಿಷ್ಣುಪದಂ ದ್ವಿಜಾಃ।
ಬ್ರಹ್ಮೇಂದ್ರಾದಿಪದಂ ಚಾಪಿ ನ ಸ್ವತಸ್ಸರ್ವದೇಹಿನಾಮ್ ॥೩೦॥

ಪ್ರಸಾದೇ ಸತಿ ದೇವಸ್ಯ ಶಿವಸ್ಯ ಪರಮಾತ್ಮನಃ।
ವೈದಿಕಾನಾಂ ತಥಾಽನ್ಯೇಷಾಮಪಿ ಮುಕ್ತಿರ್ಹಿ ಸಿಧ್ಯತಿ ॥೩೧॥

ಬ್ರಾಹ್ಮಣಾಶ್ಚ ವಿಮುಚ್ಯಂತೇ ಪ್ರಸಾದೇನ ಶಿವಸ್ಯ ತು।
ಕ್ಷತ್ರಿಯಾಶ್ಚ ತಥಾ ವೈಶ್ಯಾಶ್ಶೂದ್ರಾ ಅಪಿ ಚ ಸಂಕರಾಃ ॥೩೨॥

ಪಾಷಂಡಿನೋ ವಿಮುಚ್ಯಂತೇ ಪ್ರಸಾದೇನ ಶಿವಸ್ಯ ತು।
ಕಿಂ ಪುನರ್ವೈದಿಕಾ ವಿಪ್ರಾಃ ಸ್ತ್ರಿಯಸ್ಸರ್ವಾ ಮುನೀಶ್ವರಾಃ ॥೩೩॥

ಎಲ್ಲ ದೇವತೆಗಳಿಗೂ ದೊಡ್ಡ ದೇವನಾದ ಈಶ್ವರನ ಅನುಗ್ರಹಕ್ಕೆ ಸಮನಾದ ಬೇರೆ ದೇವತಾನುಗ್ರಹವು ಯಾವುದೂ ಇಲ್ಲ. ಏಕೆಂದರೆ, ||೨೯||

ಎಲೈ ಬ್ರಾಹ್ಮಣರೇ, ಆ ಮಹಾದೇವನ ಅನುಗ್ರಹದಿಂದಲೇ ಎಲ್ಲಾ ಪ್ರಾಣಿಗಳಿಗೂ ವಿಷ್ಣುವಿನ ಸ್ಥಾನ (ವೈಕುಂಠಲೋಕ) ಪ್ರಾಪ್ತಿಯೂ, ಬ್ರಹ್ಮ (ಸತ್ಯ) ಲೋಕಪ್ರಾಪ್ತಿಯೂ, ಉಂಟಾಗುವುವೇ ಹೊರತು ಸ್ವತಂತ್ರವಾಗಿ ಆಗಲಾರವು. ಈಶ್ವರನ ಅನುಗ್ರಹವು ಉಂಟಾದರೇ, ಅದರಿಂದ ವೈದಿಕರಿಗೂ ಇತರರಿಗೂ ಮುಕ್ತಿಯು ಸಿದ್ಧಿಸುವುದು. ಶಿವನ ಅನುಗ್ರಹವಿಲ್ಲದಿದ್ದರೆ ಸಿದ್ಧಿಸಲಾರದು. ||೩೦-೩೧||

ಶಿವನ ಪ್ರಸಾದದಿಂದ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಮೋಕ್ಷವನ್ನು ಪಡೆಯುತ್ತಾರೆ. ಅಲ್ಲದೆ ಸ್ತ್ರೀಯರೂ, ಸಂಕರಜಾತಿಯವರೂ, ಪಾಷಂಡಿಗಳೂ (ವೇದಬಾಹ್ಯರು) ಮೋಕ್ಷವನ್ನು ಪಡೆಯುತ್ತಾರೆ. ಏಕೆಂದರೆ ಈಶ್ವರನು ಎಲ್ಲರಲ್ಲಿಯೂ ಕರುಣೆಯುಳ್ಳವನೂ, ಅನುಗ್ರಹಸ್ವಭಾವವುಳ್ಳವನೂ, ಆಗಿರುತ್ತಾನೆ. ಅಲ್ಲದೆ ಆವನಿಗೆ ಯಾರಲ್ಲಿಯೂ ದ್ವೇಷ ಔದಾಸೀನ್ಯಗಳಿಲ್ಲವೆಂದು ತಾತ್ಪರ್ಯವು. ಹೀಗಿರುವಲ್ಲಿ ಎಲೈ ಋಷಿಗಳೇ, ವೈದಿಕರಾದವರು ಮೋಕ್ಷವನ್ನು ಪಡೆಯುತ್ತಾರೆಂಬುದನ್ನು ಹೇಳುವುದೇನು ? ||೩೨-೩೩||

ಖರೋಷ್ಟ್ರಾಸ್ತರವೋಽಪೀಶಪ್ರಸಾದೇನೈವ ಕೇವಲಮ್ ।
ಅಯತ್ನೇನ ವಿಮುಚ್ಯಂತೇ ನಾತ್ರ ಸಂದೇಹಕಾರಣಮ್ ॥೩೪॥

ಗರ್ಭಸ್ಥೋ ಮುಚ್ಯತೇ ಕಶ್ಚಿಜ್ಜಾತಮಾತ್ರೇಣ ಕಶ್ಚನ ।
ಬಾಲ್ಯಯೌವನವಾರ್ಧಕ್ಯಾದ್ಯವಸ್ಥಾಸು ಚ ಕಶ್ಚನ ॥೩೫॥

ಪಾಷಂಡಾಶ್ಚ ವಿಮುಚ್ಯಂತೇ ಪ್ರಸಾದೇನ ಮಹೇಶಿತುಃ ।
ವೈದಿಕಾಶ್ಚ ಖರೋಷ್ಟ್ರಾದಿಜಾತಯಶ್ಚ ತಥೈವ ಚ ॥೩೬॥

ಪಾಂಸವಃ ಪರ್ವತಾಯಂತೇ ಪಾಂಸೂಯಂತೇ ಚ ಪರ್ವತಾಃ ।
ಶಿವಪ್ರಸಾದಯುಕ್ತಾನಾಮಾಜ್ಞಯೈವ ತು ಕೇವಲಮ್ ॥೩೭॥

ಬ್ರಹ್ಮಾ ನಾರಾಯಣಾದ್ಯಾಸ್ತು ದೇವತಾ ಅಖಿಲಾ ಅಪಿ ।
ವಿಜಾಯಂತೇ ಚ ನಶ್ಯಂತಿ ಹ್ಯಾಜ್ಞಯೈವ ಪ್ರಸಾದತಃ ॥೩೮॥

ಕತ್ತೆ, ಒಂಟೆ ಮೊದಲಾದ ಪ್ರಾಣಿಗಳೂ ಮರ, ಮೊದಲಾದುವೂ ಈಶ್ವರಾನುಗ್ರಹದಿಂದ ಹೆಚ್ಚು ಪ್ರಯತ್ನವಿಲ್ಲದೆ ಮೋಕ್ಷಹೊಂದುತ್ತವೆ. ಈ ವಿಚಾರದಲ್ಲಿ ಸಂದೇಹವಿಲ್ಲವು. ॥೩೪॥

ಕೆಲವು ಪ್ರಾಣಿಗಳು ಪರಮೇಶ್ವರನ ಅನುಗ್ರಹದಿಂದ ಗರ್ಭದಲ್ಲಿರುವಾಗಲೇ ಸಂಸಾರದುಃಖದಿಂದ ಬಿಡುಗಡೆಯನ್ನು ಹೊಂದುತ್ತವೆ. ಮತ್ತೆ ಕೆಲವು ಪ್ರಾಣಿಗಳು ಹುಟ್ಟಿದ ಮಾತ್ರದಿಂದಲೂ, ಕೆಲವು ಬಾಲ್ಯಾವಸ್ಥೆಯಲ್ಲಿಯೂ, ಪ್ರಾಯದ ಸ್ಥಿತಿಯಲ್ಲಿಯೂ, ವಾರ್ಧಕ್ಯದಲ್ಲಿಯೂ, ಬಿಡುಗಡೆಯನ್ನು ಹೊಂದುತ್ತವೆ. ವೇದದೂಷಕರೇ ಆಗಿರಲಿ, ವೈದಿಕರೇ ಆಗಿರಲಿ, ಕತ್ತೆ, ಒಂಟೆ ಮೊದಲಾದ ತಿರ್ಯಗ್ಜಾತಿಯ ಪ್ರಾಣಿಗಳೇ ಆಗಲಿ, ಈಶ್ವರನ ಅನುಗ್ರಹದಿಂದ ಮೋಕ್ಷವನ್ನು ಹೊಂದುತ್ತವೆ. ॥೩೫-೩೬॥

ಅಂಥ ಈಶ್ವರನ ಅನುಗ್ರಹವನ್ನು ಪಡೆದವರ ಅಪ್ಪಣೆಮಾತ್ರದಿಂದ ಸಣ್ಣದಾದ ಧೂಳಿನ ಕಣಗಳು ದೊಡ್ಡ ಪರ್ವತಗಳ ಹಾಗಾಗುತ್ತವೆ. ದೊಡ್ಡ ಪರ್ವತಗಳು ಧೂಳಿನ ಹಾಗಾಗುತ್ತವೆ. ಎಂದರೆ ಅಂಥ ದೊಡ್ಡಕಾರ್ಯಗಳೂ ಸಾಧ್ಯವಾಗುತ್ತವೆ॥೩೭॥

ಅಲ್ಲದೆ ಬ್ರಹ್ಮಾ, ನಾರಾಯಣ ಮೊದಲಾದ ಎಲ್ಲಾ ದೊಡ್ಡ ದೇವತೆಗಳೂ ಕೂಡ ಈಶ್ವರನ ಅನುಗ್ರಹವನ್ನೂ, ಅಪ್ಪಣೆಯನ್ನೂ ಪಡೆದು ಹುಟ್ಟುವುದು, ಸಾಯುವುದು ಇವುಗಳನ್ನು ಹೊಂದುತ್ತಾರೆ. ॥೩೮॥

ಪ್ರಸಾದಸ್ಯ(ತು)ಚ ಮಾಹಾತ್ಮ್ಯಂ ಶಿವಸ್ಯ ಪರಮಾತ್ಮನಃ ।
ಅಪಿ ದೇವಾ ನ ಜಾನಂತಿ ಶ್ರುತಯಶ್ಚ ನ ಸಂಶಯಃ ॥೩೯॥

ಶಂಕರೋಽಪಿ ಮಹಾತೇಜಾಶ್ಶಾಂಕರೀ ವಾ ಮುನೀಶ್ವರಾಃ ।
ಶಿವಪ್ರಸಾದಮಾಹಾತ್ಮ್ಯಂ ಕಿಂ ನು ಜಾನಂತಿ ಮಾನವಾಃ ॥೪೦॥

ಭವಂತೋಽಪಿ ಮಹಾದೇವಪ್ರಸಾದಾಯ ಮುನೀಶ್ವರಾಃ ।
ಗುರುಪಾದಾಂಬುಜಂ ನಿತ್ಯಂ ಪೂಜಯಧ್ವಂ ಯಥಾಬಲಮ್ ॥೪೧॥

ಶ್ರೀಮದ್ವ್ಯಾಘ್ರಪುರೇ ಪುಣ್ಯೇ ಸರ್ವದೇವಸಮಾವೃತೇ ।
ಸ್ವಸ್ವರೂಪಾನುಸಂಧಾನಪ್ರಮೋದೇನೈವ ಕೇವಲಮ್ ॥೪೨॥

ಸಾಕ್ಷಾತ್‌ದಭ್ರಸಭಾಮಧ್ಯೇ ನೃತ್ಯಂತಂ ದೇವನಾಯಕಮ್ ।
ಅಂಬಿಕಾಸಹಿತಂ ನಿತ್ಯಂ ಭಜಧ್ವಂ ಪರಯಾ ಮುದಾ ॥೪೩॥

ಪರಮಾತ್ಮನಾದ ಶಿವನ ಅನುಗ್ರಹದ ಮಹಿಮೆಯನ್ನು ದೇವತೆಗಳೇ ಆಗಲಿ ಶ್ರುತಿಯೇ ಆಗಲಿ ಸಮಗ್ರವಾಗಿ ತಿಳಿದಿಲ್ಲವೆಂಬುದರಲ್ಲಿ ಸಂದೇಹವಿಲ್ಲವು. ||೩೯||

ಶಂಕರನೇ ಆಗಲಿ, ಪಾರ್ವತಿಯೇ ಆಗಲಿ, ಆ ಪರಶಿವನ ಪ್ರಸಾದದ ಮಹಿಮೆಯನ್ನು ಪೂರ್ಣವಾಗಿ ತಿಳಿದಿಲ್ಲ. ಹೀಗಿರುವಾಗ ಸಾಮಾನ್ಯರಾದ ಮನುಷ್ಯರು ಹೇಗೆ ಅದನ್ನು ಸಮಗ್ರವಾಗಿ ತಿಳಿದಾರು? ||೪೦||

ಎಲೈ ಋಷಿಗಳೇ, ಅಂಥ ಮಹಾತ್ಮನಾದ ಪರಶಿವನ ಅನುಗ್ರಹಕ್ಕೋಸ್ಕರವಾಗಿ ನೀವೂ ಕೂಡ ಶಿವಾನುಗ್ರಹಕ್ಕೆ ಸಾಧನವಾದ ಗುರುಗಳ ಪಾದಸೇವೆಯನ್ನು ಯಥಾಶಕ್ತಿಯಾಗಿ ಮಾಡಿರಿ. ||೪೧||

ಅಂಥ ಅನುಗ್ರಹವನ್ನು ಪಡೆಯುವುದಕ್ಕೋಸ್ಕರ ಪುಣ್ಯಕರವಾದ ವ್ಯಾಘ್ರಪುರದಲ್ಲಿ ಸಮಸ್ತದೇವತೆಗಳಿಂದ ಕೂಡಿರುವ, ತನ್ನ ನಿಜವಾದ ಸಚ್ಚಿದಾನಂದಸ್ವರೂಪದ ತಿಳಿವಳಿಕೆಯಿಂದುಂಟಾದ ಸಂತೋಷದಿಂದ ಆ ದೇವತೆಗಳ ಮಧ್ಯದಲ್ಲಿ ನರ್ತನ ಮಾಡುತ್ತಿರುವ, ಪಾರ್ವತೀಸಹಿತನಾದ ಈಶ್ವರನ ಸೇವೆಯನ್ನು ನಿತ್ಯವೂ ಮಾಡಿರಿ. ||೪೨-೪೩||

ಶ್ರೀಕಾಳಹಸ್ತಿನಾಥಸ್ಯ ಪ್ರಣಾಮಾಲೋಕನಾದಯಃ ।
ಅಪಿ ಶಂಭೋಃ ಪ್ರಸಾದಾಯ ಭವಂತಿ ದ್ವಿಜಪುಂಗವಾಃ ॥೪೪॥

ವಾರಾಣಸ್ಯಾಂ ಮಹಾದೇವಪ್ರಣಾಮಾಲೋಕನಾದಯಃ ।
ಅಪಿ ಶಂಭೋಃ ಪ್ರಸಾದಾಯ ಭವಂತಿ ದ್ವಿಜಪುಂಗವಾಃ ॥೪೫॥

ಪ್ರಸಾದಲಾಭಾಯ ಹಿ ಕರ್ಮಸಂಚಯಃ
ಪ್ರಸಾದಲಾಭಾಯ ಹಿ ದೇವತಾಽರ್ಚನಮ್ ।
ಪ್ರಸಾದಲಾಭಾಯ ಹಿ ದೇವತಾಸ್ಮೃತಿಃ
ಪ್ರಸಾದಲಾಭಾಯ ಹಿ ಸರ್ವಮೀರಿತಮ್ . ॥೪೬॥

ಶಿವಪ್ರಸಾದೇನ ವಿನಾ ನ ಭುಕ್ತಯಃ
ಶಿವಪ್ರಸಾದೇನ ವಿನಾ ನ ಮುಕ್ತಯಃ ।
ಶಿವಪ್ರಸಾದೇನ ವಿನಾ ನ ದೇವತಾಃ
ಶಿವಪ್ರಸಾದೇನ ಹಿ ಸರ್ವಮಾಸ್ತಿಕಾಃ ॥೪೭॥

ಎಲೈ ಬ್ರಾಹ್ಮಣಶ್ರೇಷ್ಠರೇ, ಕಾಳಹಸ್ತಿಕ್ಷೇತ್ರದಲ್ಲಿರುವ ಈಶ್ವರನ ದರ್ಶನದಿಂದಲೂ ನಮಸ್ಕಾರದಿಂದಲೂ ಈಶ್ವರಾನುಗ್ರಹವುಂಟಾಗುತ್ತದೆ. ॥೪೪॥

ಓ ಬ್ರಾಹ್ಮಣೋತ್ತಮರೇ, ಕಾಶೀಕ್ಷೇತ್ರದಲ್ಲಿರುವ ಮಹಾದೇವನ ದರ್ಶನ ನಮಸ್ಕಾರಗಳೂ ಈಶ್ವರಾನುಗ್ರಹಕ್ಕೆ ಕಾರಣವಾಗುತ್ತವೆ. ॥೪೫॥

ಹೀಗೆ ಈಶ್ವರಾನುಗ್ರಹಕ್ಕೆ ಕಾರಣವನ್ನು ಹೇಳಿ ಫಲಾಪೇಕ್ಷೆಯಿಲ್ಲದ ಎಲ್ಲಾ ಕರ್ಮವೂ ಆ ಶಿವನ ಅನುಗ್ರಹಕ್ಕೆ ಕಾರಣವೆಂದು ಹೇಳುತ್ತಾರೆ. ಈಶ್ವರನ ಅನುಗ್ರಹವನ್ನು ಪಡೆಯುವುದಕ್ಕಾಗಿ ಎಲ್ಲಾ ಕರ್ಮಗಳೂ ವಿಹಿತವಾಗಿರುತ್ತವೆ. ದೇವರ ಪೂಜೆಮಾಡುವುದೂ ದೇವರ ಧ್ಯಾನಮಾಡುವುದೂ ಇತರ ಎಲ್ಲ ಬಗೆಯ ಧರ್ಮಗಳೂ ಈಶ್ವರನ ಅನುಗ್ರಹವನ್ನು ಪಡೆಯುವುದಕ್ಕಾಗಿಯೇ ವೇದಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿವೆ. ॥೪೬॥

ಓ ಆಸ್ತಿಕರಾದ ಬ್ರಾಹ್ಮಣೋತ್ತಮರೇ, ಶಿವಪ್ರಸಾದವಿಲ್ಲದೆ ಯಾವ ಕಾಮ್ಯ ಕರ್ಮಗಳ ಫಲಭೋಗವೂ ಸಿಕ್ಕುವುದಿಲ್ಲ. ಶಿವಪ್ರಸಾದವಿಲ್ಲದೆ ನಿಷ್ಕಾಮಕರ್ಮಾ

ಶಿವಪ್ರಸಾದೇನ ಸಮೋ ನ ವಿದ್ಯತೇ
ಶಿವಪ್ರಸಾದಾದಧಿಕೋ ನ ವಿದ್ಯತೇ ।
ಶಿವಪ್ರಸಾದೇನ ಶಿವಸ್ಯ ಸನ್ನಿಧಿಃ
ಶಿವಪ್ರಸಾದೇ ಹಿ ವಿಶುದ್ಧಿರಾತ್ಮನಃ ॥೪೮॥

ಶಿವಪ್ರಸಾದೇನ ಯುತಸ್ಯ ವೈದಿಕಂ
ನ ವಿದ್ಯತೇ ಕರ್ಮ ಜನಸ್ಯ ಸುವ್ರತಾಃ ।
ಶಿವಪ್ರಸಾದೇನ ಯುತಸ್ಯ ತಾಂತ್ರಿಕಂ
ನ ವಿದ್ಯತೇ ಕರ್ಮ ತಥೈವ ಕಿಂಚನ ॥೪೯॥

ಶಿವಪ್ರಸಾದೇನ ಯುತಸ್ಯ ಸುವ್ರತಾ
ನ ಜನ್ಮನಾಶೌ ಭವತಸ್ಸದೈವ ತು ।

ಚರಣೆಯಿಂದ ಆಗುವ ಮೋಕ್ಷವೂ ಉಂಟಾಗುವುದಿಲ್ಲ. ಶಿವಪ್ರಸಾದವಿಲ್ಲದೆ ದೇವತೆಗಳೂ ಅನುಗ್ರಹಮಾಡುವ ಬುದ್ಧಿಯುಳ್ಳವರಾಗುವುದಿಲ್ಲ. ಯಾವುದು ಆಗಬೇಕಾದರೂ ಶಿವಪ್ರಸಾದದಿಂದಲೇ ಉಂಟಾಗುವುದೇ ಹೊರತು ಅನ್ಯಥಾ ಇಲ್ಲ. ||೪೭||

ಶಿವನ ಅನುಗ್ರಹಕ್ಕೆ ಸಮಾನವಾದುದಾಗಲಿ ಮಿಗಿಲಾದುದಾಗಲಿ ಯಾವ ಸಾಧನಾಂತರವೂ ಇಲ್ಲ. ಶಿವನ ಸನ್ನಿಧಿಯು ದೊರೆಯಬೇಕಾದರೂ ಈಶ್ವರನ ಅನುಗ್ರಹವಿರಬೇಕು. ಆತ್ಮಶುದ್ಧಿಯಾಗಬೇಕಾದರೂ ಶಿವಾನುಗ್ರಹವಿರಬೇಕು.||೪೮||

ನಿಯಮಗಳನ್ನು ಪಾಲಿಸುತ್ತಿರುವ ಓ ಋಷಿಗಳೇ, ಶಿವಪ್ರಸಾದವು ಉಂಟಾದವರಿಗೆ ವೇದೋಕ್ತಯಜ್ಞಾದಿಕರ್ಮಗಳಾಗಲಿ, ತಂತ್ರದಲ್ಲಿ ಹೇಳಿರುವ ಕರ್ಮಗಳಾಗಲಿ, ಇನ್ನುಮುಂದೆಯೂ ಮಾಡಬೇಕಾಗಿರುವಂತಹವು ಯಾವುವೂ ಇರುವುದಿಲ್ಲವು. ||೪೯||

ವರ್ಣಾಶ್ರಮಧರ್ಮಗಳನ್ನು ಆದರದಿಂದ ಪಾಲಿಸುವ ನಿಯಮವುಳ್ಳ ಋಷಿಗಳೇ, ಈ ಪರಶಿವನ ಅನುಗ್ರಹ ಉಂಟಾದವರಿಗೆ ಯಾವಾಗಲೂ ಹುಟ್ಟುಸಾವುಗಳುಂಟಾಗುವುದಿಲ್ಲ. ಶಿವಪ್ರಸಾದವನ್ನು ಪಡೆದವನು ತಾನೂ ಶಿವನೇ ಆಗುತ್ತಾನೆ.

ಶಿವಪ್ರಸಾದೇನ ಯುತಃ ಸ್ವಯಂ ಶಿವಃ
ಶಿವಪ್ರಸಾದಸ್ತು ಶಿವಪ್ರಸಾದತಃ ॥೫೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಶಂಕರಪ್ರಸಾದಕ್ರಮೋ ನಾಮ ತ್ರಯೋವಿಂಶಾಧ್ಯಾಯಃ

ಅಲ್ಲದೆ ಅಂಥ ಶಿವನ ಅನುಗ್ರಹವು ದೊರೆಯುವುದೂ ಆ ಪರಶಿವನ ಅನುಗ್ರಹದಿಂದಲೇ ಉಂಟಾಗುತ್ತದೆ. ಎಂದು ಸೂತರು ಶೌನಕಾದಿಋಷಿಗಳನ್ನು ಕುರಿತು ತಿಳಿಯ ಹೇಳಿದರು. ॥೫೦॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಪರಶಿವನ ಅನುಗ್ರಹವು ಭಕ್ತರಿಗೆ ಆಗುವ ರೀತಿಯನ್ನೂ ಕ್ರಮಫಲಗಳನ್ನೂ ವಿವರಿಸಿರುವ ಇಪ್ಪತ್ತುಮೂರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಚತುರ್ವಿಂಶೋಽಧ್ಯಾಯಃ ||

ಇಪ್ಪತ್ತುನಾಲ್ಕನೆಯ ಅಧ್ಯಾಯವು

(ಪ್ರಸಾದವೈಭವಮ್)

|| ಸೂತ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಪ್ರಸಾದಸ್ಯ ತು ವೈಭವಮ್ ।
ಅತ್ಯಂತಶ್ರದ್ಧಯೋಪೇತಾಃ ಶೃಣುತಾತೀವ ಶೋಭನಮ್ ॥೧॥

ಪುರಾ ಕಶ್ಚಿನ್ಮಹಾಪಾಪೀ ದುರ್ಘಟೋ ನಾಮ ನಾಮತಃ ।
ಜಾತ್ಯಾ ಶೂದ್ರೋ ಮಹಾಕ್ರೂರೋ ಮಹಾಸಾಹಸಿಕೋತ್ತಮಃ ॥೨॥

ಎಲೈ ಶೌನಕಾದಿಋಷಿಗಳೇ, ಶಿವಪ್ರಸಾದದ ಕ್ರಮವನ್ನು ಹೇಳಿ ಅದರ ಮಹಿಮೆಯನ್ನು ಹೇಳುತ್ತೇನೆ. ಉತ್ತಮವಾದ ತುಂಬ ಮಂಗಳಕರವಾದ ಈ ಮಹಿಮೆಯನ್ನು ನೀವೆಲ್ಲರೂ ಶ್ರದ್ಧೆಯಿಂದ ಕೇಳಿರಿ. ಏಕೆಂದರೆ ಮಹಿಮೆಯನ್ನು ಕೇಳುವುದರಿಂದ ಆದರವೂ ಭಕ್ತಿಯೂ ತಪ್ಪದೆ ಭಕ್ತರಲ್ಲಿ ಉಂಟಾಗುತ್ತವೆ. ||೧||

ಪೂರ್ವದಲ್ಲಿ ಶೂದ್ರಜಾತಿಯಲ್ಲಿ ಹುಟ್ಟಿದ, ಎಲ್ಲರಿಗಿಂತ ಹೆಚ್ಚಾಗಿ ಬಹಳ ಪಾಪವನ್ನು ಮಾಡಿರುವ, ಆ ಪಾಪಗಳ ಫಲದಲ್ಲಿ ಹೆದರಿಕೆ ಇಲ್ಲದೆ ಬಹಳ ಸಾಹಸಿಯಾದ, ಕ್ರೂರವಾದ ಕೆಲಸಗಳನ್ನೂ ಮಾಡುತ್ತಿದ್ದ, ದುರ್ಘಟನೆಂಬ ಶೂದ್ರನು ಇದ್ದನು. ||೨||

ಅಭೂತ್ತೇನ ಮಹಾಮೋಹಾದ್ಬ್ರಾಹ್ಮಣಾನಾಂ ಶತಂ ಹತಮ್ ।
ಗವಾಂ ಶತಂ ಹತಂ ತೇನ ದಗ್ಧಂ ಗೇಹಶತಂ ತಥಾ ॥೩॥

ಅಥ ಚೌರ್ಯಂ ಕೃತಂ ತೇನ ನರಾಣಾಮವಿಚಾರತಃ ।
ಬಲಾತ್ಪರಸ್ತ್ರಿಯೋ ಭುಕ್ತಾ ಬಹುಶೋ ದೃಷ್ಟಿಗೋಚರಾಃ ॥೪॥

ವಾಪೀಕೂಪತಟಾಕಾದಿಜಲಂ ತೇನೈವ ದೂಷಿತಮ್ ।
ವರ್ಣಾಶ್ರಮಸಮಾಚಾರಮರ್ಯಾದಾ ತೇನ ಭೇದಿತಾ ॥೫॥

ಸಹಸ್ರಜನ್ಮತಃ ಪೂರ್ವಂ ದುರ್ಘಟೇನ ಮುನೀಶ್ವರಾಃ ।
ಶಿವಯೋಗಿಕರೇ ತೇನ ಸುವರ್ಣಂ ನಿಷ್ಕಮುತ್ತಮಮ್ ॥೬॥

ದತ್ತಂ ತೇನ ಮತಿಸ್ತಸ್ಯ ಜಾತಾ ಕಾಲೇನ ಶೋಭನಾ ।
ಅಹೋ ಮೋಹೇನ ಪಾಪಾನಿ ಕೃತಾನಿ ಸುಬಹೂನಿ ಚ ॥೭॥

ಮಯಾ ತೇಷಾಂ ನ ಪಶ್ಯಾಮಿ ವಿನಾಶಸ್ಯ ತು ಕಾರಣಮ್ ।
ಬ್ರಾಹ್ಮಣಾ ವೇದವಿದ್ವಾಂಸೋ ವದಂತಿ ನರಕಾನ್ಮಮ ॥೮॥

ಅಂಥ ದುರ್ಘಟನು ಅನೇಕ ಬ್ರಾಹ್ಮಣರನ್ನೂ, ಅನೇಕ ಗೋವುಗಳನ್ನೂ, ಕೊಂದಿದ್ದನು; ಅನೇಕ ಮನೆಗಳನ್ನು ಸುಟ್ಟಿದ್ದನು; ಸಾಧುಗಳು, ಸತ್ಪುರುಷರು ಎಂಬ ಯಾವ ವಿಚಾರವನ್ನೂ ಮಾಡದೆ ಅನೇಕರ ದ್ರವ್ಯವನ್ನು ಕದ್ದಿದ್ದನು; ದೃಷ್ಟಿಗೆ ಗೋಚರರಾದ ಪರಸ್ತ್ರೀಯರನ್ನು ಬಲಾತ್ಕಾರಮಾಡಿ ಹಾಳುಮಾಡಿದ್ದನು. ||೩-೪||

ಬಾವಿ, ಕೊಳ, ಕೆರೆ ಇವುಗಳಲ್ಲಿರುವ ನೀರನ್ನೆಲ್ಲವನ್ನೂ ಕೆಡಿಸುತ್ತಿದ್ದನು. ಬ್ರಾಹ್ಮಣಾದಿವರ್ಣಗಳ ಬ್ರಹ್ಮಚರ್ಯಾದ್ಯಾಶ್ರಮಗಳ ಕಟ್ಟಳೆಗಳೆಲ್ಲವೂ ಇವನಿಂದಲೇ ಅತಿಕ್ರಮಿಸಿ ಹಾಳುಮಾಡಲ್ಪಡುತ್ತಿದ್ದುವು. ||೫||

ಆದರೂ ಹೀಗಿರುತ್ತಿದ್ದ ದುರ್ಘಟನು ಸಾವಿರ ಜನ್ಮಗಳ ಹಿಂದೆ ಶಿವಯೋಗಿ ಎಂಬವರಿಗೆ ಒಂದು ಉತ್ತಮವಾದ ಚಿನ್ನದ ನಾಣ್ಯವನ್ನು ದಾನವಾಗಿ ಕೊಟ್ಟಿದ್ದನು. ಅದರ ಮಹಿಮೆಯಿಂದ ಅವನಿಗೆ ಕೆಲವು ಕಾಲ ಕಳೆದಮೇಲೆ, ಅಯ್ಯೋ! ನಾನು ಅಜ್ಞಾನದಿಂದ ಅನೇಕ ಪಾಪಕೃತ್ಯಗಳನ್ನು ಮಾಡಿದೆನಲ್ಲಾ! ||೬-೭||

ನಾನು ಮಾಡಿದ ಪಾಪಸಮೂಹದ ನಾಶಕ್ಕೆ ಕಾರಣವು ನನಗೆ ಗೊತ್ತಾಗುವುದಿಲ್ಲವಲ್ಲ! ಬ್ರಾಹ್ಮಣರೂ, ವೇದಗಳೂ, ವಿದ್ವಾಂಸರೂ, ಇಷ್ಟು ಪಾಪವನ್ನು ಮಾಡಿದ

ಇತಿ ವ್ಯಾಕುಲಚಿತ್ತಸ್ಯ ದುರ್ಘಟಸ್ಯ ದುರಾತ್ಮನಃ ।
ಮತಿಪ್ರದಾನಂ ಕೃತವಾನ್ ಬ್ರಾಹ್ಮಣಃ ಕಶ್ಚಿದಾಸ್ತಿಕಃ ॥೯॥

ಶ್ರೀಮದ್ವ್ಯಾಘ್ರಪುರಂ ನಾಮ ಸ್ಥಾನಮಸ್ತಿ ಮಹೀತಲೇ ।
ಯತ್ರ ನೃತ್ಯತಿ ಸರ್ವಾತ್ಮಾ ಶಿವಸ್ಸಂಸಾರಮೋಚಕಃ ॥೧೦॥

ಯಸ್ಯ ಮಾಹಾತ್ಮ್ಯವಿಜ್ಞಾನಾದ್ವಿಷ್ಣುರ್ವಿಶ್ವಜಗನ್ಮಯಃ ।
ತತಾಪ ಪರಮಂ ಘೋರಂ ತಪಸ್ತತ್ರೇಶ್ವರಂ ಪ್ರತಿ ॥೧೧॥

ಯಸ್ಯ ಮಾಹಾತ್ಮ್ಯವಿಜ್ಞಾನಾದ್ಬ್ರಹ್ಮಾ ವಿಶ್ವಾಮರಾಧಿಪಃ ।
ತತಾಪ ಪರಮಂ ಘೋರಂ ತಪಸ್ತತ್ರೇಶ್ವರಂ ಪ್ರತಿ ॥೧೨॥

ಯಸ್ಯ ಮಾಹಾತ್ಮ್ಯವಿಜ್ಞಾನಾದಿಂದ್ರಶ್ಶಸ್ತ್ರಭೃತಾಂ ವರಃ ।
ತತಾಪ ಪರಮಂ ಘೋರಂ ತಪಸ್ತತ್ರೇಶ್ವರಂ ಪ್ರತಿ ॥೧೩॥

ಯಸ್ಯ ಮಾಹಾತ್ಮ್ಯವಿಜ್ಞಾನಾದ್ದೇವಾ ಯಕ್ಷಾಶ್ಚ ಕಿನ್ನರಾಃ ।
ತಪ್ತವಂತೋ ಮಹಾಘೋರಂ ತಪಸ್ತತ್ರೇಶ್ವರಂ ಪ್ರತಿ ॥೧೪॥

ನನಗೆ ನರಕಗಳುಂಟಾಗುತ್ತವೆ ಎಂದು ಹೇಳುತ್ತಾರಲ್ಲ! ಏನನ್ನು ಮಾಡಲಿ ? ಎಂಬುದಾಗಿ ಪಶ್ಚಾತ್ತಾಪದ ಬುದ್ಧಿಯು ಹುಟ್ಟಿತು! ॥೮॥

ಹೀಗೆ ಪಶ್ಚಾತ್ತಾಪದ ದುಃಖದಿಂದ ಕೂಡಿದ ಮನಸ್ಸುಳ್ಳ ದುಷ್ಟನಾಗಿದ್ದ ಆ ದುರ್ಘಟನಿಗೆ ಒಬ್ಬ ಆಸ್ತಿಕನಾದ ಬ್ರಾಹ್ಮಣನು ಮುಂದೆ ಹೇಳುವರೀತಿಯಲ್ಲಿ ಬುದ್ಧಿವಾದವನ್ನು ಹೇಳಿದನು. ॥೯॥

ಎಲೈ ದುರ್ಘಟನೇ, ಭೂಲೋಕದಲ್ಲಿ ಭಕ್ತರನ್ನು ಕಾಪಾಡುವ ಪುಣ್ಯದ ಸಂಪತ್ತಿನಿಂದ ಕೂಡಿದ ವಾಘ್ರಪುರವೆಂಬ ಪಟ್ಟಣವಿದೆ. ಅಲ್ಲಿ ಸಂಸಾರದುಃಖವನ್ನು ಬಿಡಿಸುವ ಸಮಸ್ತ ಪ್ರಾಣಿಗಳ ಸ್ವರೂಪನಾದ ಪರಶಿವನು ಸ್ವಾತ್ಮಾನಂದದ ಅತಿಶಯದಿಂದ ನರ್ತನ ಮಾಡುತ್ತಿರುತ್ತಾನೆ. ॥೧೦॥

ಯಾವ ವ್ಯಾಘ್ರಪುರದಲ್ಲಿ ಅದರ ಮಹಿಮೆಯನ್ನು ತಿಳಿದುದರಿಂದ, ಎಲ್ಲಾ ಪ್ರಪಂಚಸ್ವರೂಪನಾಗಿ ವ್ಯಾಪಕನಾದ ವಿಷ್ಣುವೂ, ಎಲ್ಲಾ ದೇವತೆಗಳಿಗೂ ಒಡೆಯನಾದ ಬ್ರಹ್ಮನೂ, ಶಸ್ತ್ರವನ್ನು ಹಿಡಿದವರಲ್ಲಿ ಉತ್ತಮನಾದ ಇಂದ್ರನೂ, ಯಕ್ಷರೂ, ಕಿನ್ನರರೂ, ಎಲ್ಲಾ ಋಷಿಗಳೂ—ಆ ಈಶ್ವರನನ್ನು ಕುರಿತು ಘೋರವಾದ ತಪಸ್ಸನ್ನು

ಯಸ್ಯ ಮಾಹಾತ್ಮ್ಯವಿಜ್ಞಾನಾನ್ಮುನಯೋ ಮುನಿಸತ್ತಮಾಃ ।
ತಪ್ತವಂತೋ ಮಹಾಘೋರಂ ತಪಸ್ತತ್ರೇಶ್ವರಂ ಪ್ರತಿ ॥೧೫॥

ಯತ್ರ ಸರ್ವೇಶ್ವರಂ ದೃಷ್ಟ್ವಾ ಪ್ರಸಾದಂ ಲಬ್ಧವಾನ್ ಹರಿಃ ।
ತತ್ರ ದೇವಮುಪಾಸ್ಯ ತ್ವಂ ಪ್ರನೃತ್ಯಂತಮುಮಾಪತಿಮ್ ॥೧೬॥

ಯತ್ರ ಸರ್ವೇಶ್ವರಂ ದೃಷ್ಟ್ವಾ ಪ್ರಸಾದಂ ಲಬ್ಧವಾನಜಃ ।
ತತ್ರ ದೇವಮುಪಾಸ್ಯ ತ್ವಂ ಪ್ರನೃತ್ಯಂತಮುಮಾಪತಿಮ್ ॥೧೭॥

ಯತ್ರ ವಜ್ರೀಹರಂ ದೃಷ್ಟ್ವಾ ಪ್ರಸಾದಂ ಲಬ್ಧವಾನ್ ದ್ವಿಜಾಃ ।
ತತ್ರ ದೇವಮುಪಾಸ್ಯ ತ್ವಂ ಪ್ರನೃತ್ಯಂತಮುಮಾಪತಿಮ್ ॥೧೮॥

ಯತ್ರ ದೃಷ್ಟ್ವಾ ಹರಂ ದೇವಾಃ ಅಶೇಷಾ ಆಸ್ತಿಕೋತ್ತಮಾಃ ।
ಯಕ್ಷರಾಕ್ಷಸಗಂಧರ್ವಸಿದ್ಧವಿದ್ಯಾಧರಾದಯಃ ॥೧೯॥

ಪ್ರಸಾದಂ ಲಬ್ಧವಂತಸ್ತು ಸ್ವಾಧಿಕಾರಾನುರೂಪತಃ ।
ತತ್ರ ದೇವಮುಪಾಸ್ಯ ತ್ವಂ ಪ್ರನೃತ್ಯಂತಮುಮಾಪತಿಮ್ ॥೨೦॥

ಮಾಡಿದರೋ, ಯಾವ ಸ್ಥಳದಲ್ಲಿ ಎಲ್ಲ ಲೋಕಗಳಿಗೂ ಒಡೆಯನಾದ ಈಶ್ವರನನ್ನು ನೋಡಿ ವಿಷ್ಣುವೂ ಅನುಗ್ರಹವನ್ನು ಪಡೆದನೋ, ಅಂಥ ಉತ್ತಮವಾದ ವ್ಯಾಘ್ರಪುರದಲ್ಲಿ ನರ್ತನಮಾಡುತ್ತಿರುವ ಶಿವನನ್ನು ನೀನೂ ಆ ಕ್ಷೇತ್ರದಲ್ಲಿ ತಪಸ್ಸು ಮಾಡುತ್ತಾ ಉಪಾಸನೆಮಾಡು. ॥೧೧-೧೨-೧೩-೧೪-೧೫-೧೬॥

ಯಾವ ಸ್ಥಳದಲ್ಲಿ ಸರ್ವೇಶ್ವರನಾದ ಲಯಕರ್ತನಾದ ಆ ಶಿವನನ್ನು ನೋಡಿ ಬ್ರಹ್ಮನು ಅನುಗ್ರಹವನ್ನು ಪಡೆದನೋ, ಎಲ್ಲಾ ದೇವತೆಗಳೂ, ಯಕ್ಷರೂ, ರಾಕ್ಷಸರೂ, ಗಂಧರ್ವರೂ, ಸಿದ್ಧರೂ, ವಿದ್ಯಾಧರರೂ, ಋಷಿಗಳೂ—ಆ ಈಶ್ವರನ ಆರಾಧನೆಯನ್ನು ಮಾಡಿ ತಮ್ಮ ತಮ್ಮ ಉಪಾಸನೆಗೆ ತಕ್ಕ ಫಲವನ್ನು ಹೊಂದಿದರೋ, ಅಂಥ ವ್ಯಾಘ್ರಪುರಾಧೀಶನನ್ನು ನೀನೂ ಉಪಾಸನೆಮಾಡು. ಎಂದು ಆ ಬ್ರಾಹ್ಮಣನು ದುರ್ಘಟನನ್ನು ಕುರಿತು ಹೇಳಿದನು—ಎಂದು ಸೂತರು ಶೌನಕಾದಿ ಋಷಿಗಳನ್ನು ಕುರಿತು ಹೇಳಿದರು. ॥೧೭-೧೮-೧೯-೨೦॥

|| ಓಂ ಸೂತ ಉವಾಚ ||

ಇತ್യೇವಂ ಬ್ರಾಹ್ಮಣೇನೋಕ್ತೋ ದುರ್ಘಟಃ ಪುಣ್ಯಗೌರವಾತ್ ।
ಶ್ರೀಮದ್ವ್ಯಾಘ್ರಪುರಂ ಗತ್ವಾ ಶ್ರದ್ಧಯಾ ಪರಯಾ ಸಹ ॥೨೧॥

ಪ್ರದಕ್ಷಿಣತ್ರಯಂ ಕೃತ್ವಾ ಸ್ನಾತ್ವಾ ನಿತ್ಯಮತಂದ್ರಿತಃ ।
ನಮೋಽಂತಂ ಶಿವಮಂತ್ರಂ ತು ಜಪಿತ್ವಾಽಷ್ಟೋತ್ತರಂ ಶತಮ್ ॥೨೨॥

ಶ್ರೀಮದ್ದಭ್ರಸಭಾಮಧ್ಯೇ ಪ್ರನೃತ್ಯಂತಮುಮಾಪತಿಮ್ ।
ದೃಷ್ಟ್ವಾ ಭೂಮೌ ಮಹಾಭಕ್ತ್ಯಾ ದಂಡವತ್ಪ್ರಣಿಪತ್ಯ ಚ ॥೨೩॥

ರುದ್ರಭಕ್ತಾಯ ವಿಪ್ರಾಯ ಭಸ್ಮನೋದ್ಧೂಳಿತಾಯ ಚ ।
ಶಿವಜ್ಞಾನೈಕನಿಷ್ಠಾಯ ದತ್ವಾ ಧಾನ್ಯಂ ಧನಂ ಮುದಾ ॥೨೪॥

ಸತ್ಯವಾಗ್ಭಕ್ತಿಸಂಯುಕ್ತಃ ಕಾಮಕ್ರೋಧವಿವರ್ಜಿತಃ ।
ವತ್ಸರಾಣಾಂ ತ್ರಯಂ ತತ್ರ ಹ್ಯವಾಸಾತಿಪ್ರಿಯೇಣ ಸಃ ॥೨೫॥

ಎಲೈ ಬ್ರಾಹ್ಮಣರೇ, ಹೀಗೆ ಹೇಳಿದ ಆ ಬ್ರಾಹ್ಮಣನ ಮಾತನ್ನು ಕೇಳಿ ಆ ದುರ್ಘಟನು ಸಂಪತ್ತಿನಿಂದ ಕೂಡಿದ ವ್ಯಾಘ್ರಪುರಕ್ಕೆ ಹೋಗಿ ಬಹಳ ಶ್ರದ್ಧೆಯಿಂದ ಕೂಡಿ ಸ್ವಲ್ಪವೂ ಆಲಸ್ಯವಿಲ್ಲದೆ ಸ್ನಾನಮಾಡಿ ಈಶ್ವರನಿಗೆ ಮೂರು ಪ್ರದಕ್ಷಿಣೆ ಮಾಡುತ್ತಲೂ, ನೂರೆಂಟು ಸಲ ನಮಃ ಎಂಬ ಪದವೇ ಅಂತದಲ್ಲಿರುವ ಶಿವಮಂತ್ರ ವನ್ನು ಜಪಮಾಡುತ್ತಲೂ ಇದ್ದನು. ಹೀಗೆ ಮಾಡುತ್ತಿದ್ದು ದಭ್ರಸಭಾಮಧ್ಯದಲ್ಲಿ ನರ್ತನಮಾಡುತ್ತಿದ್ದ ಈಶ್ವರನನ್ನು ನೋಡಿ, ಬಹಳ ಭಕ್ತಿಯಿಂದ ಭೂಮಿಯ ಮೇಲೆ ಉದ್ದಕ್ಕೆ ನಮಸ್ಕಾರಮಾಡಿ, ರುದ್ರನಲ್ಲಿ ಬಹಳ ಭಕ್ತಿಯಿಂದಿರುವ, ಭಸ್ಮ ವನ್ನು ಧರಿಸುತ್ತಿರುವ, ಯಾವಾಗಲೂ ಶಿವನನ್ನೇ ಧ್ಯಾನಮಾಡುತ್ತಿರುವ, ಶಿವಭಕ್ತ ನಿಗೆ ಸಂತೋಷದಿಂದ ಧನಧಾನ್ಯಗಳನ್ನು ದಾನಮಾಡಿ, ಸತ್ಯವಾದ ಮಾತನ್ನೇ ಆಡುತ್ತಾ, ಕಾಮಕ್ರೋಧಾದಿಗಳನ್ನು ಬಿಟ್ಟು ಭಕ್ತಿಯಿಂದಲೂ ಪ್ರೀತಿಯಿಂದಲೂ ಕೂಡಿದವನಾಗಿ, ಮೂರು ವರ್ಷಗಳ ವರೆಗೆ ಅಲ್ಲಿ ವಾಸಮಾಡಿದನು. ||೨೧-೨೨-೨೩-೨೪-೨೫||

ದೇವದೇವೋ ಮಹಾದೇವೋ ಮಹಾಕಾರುಣಿಕೋತ್ತಮಃ ।
ಪ್ರಸಾದಮಕರೋತ್ತತ್ರ ದುರ್ಘಟಸ್ಯ ದುರಾತ್ಮನಃ ॥೨೬॥

ದೇವತೆಗಳಿಗೂ ದೇವನಾದ, ಕರುಣಾಶಾಲಿಗಳಲ್ಲಿ ಉತ್ತಮನಾದ ಮಹಾದೇವನೂ ದುಷ್ಟನಾಗಿದ್ದ ಈ ದುರ್ಘಟನಿಗೆ ಅನುಗ್ರಹಮಾಡಿದನು. ಈ ಸಂದರ್ಭದಲ್ಲಿ ಗಮನಿಸಬೇಕಾದ ವಿಶೇಷವೇನೆಂದರೆ—"ಪಶ್ಚಾತ್ತಾಪಾದುಪರಮಾತ್ ಪ್ರಾಯಶ್ಚಿತ್ತೋನ್ಮುಖತ್ವತಃ । ಪಶ್ಚಾಚ್ಚತದನುಷ್ಠಾನಾತ್ ಪಾಪಾ ನಶ್ಯಂತಿ ಪಾದಶಃ ॥" ಎಂದರೆ ಪಾಪಗಳನ್ನು ಮಾಡಿದವರಿಗೂ ಉದ್ಧಾರದ ಮಾರ್ಗವು ಇದೆ. ಹೇಗೆಂದರೆ, ಪಾಪಕಾರ್ಯವನ್ನು, ಮಾಡಬಾರದ ಕಾರ್ಯವನ್ನು, ಮಾದಿದೆನಲ್ಲ! ಎಂಬ ನಿಜವಾದ ಪಶ್ಚಾತ್ತಾಪದಿಂದ ಆ ಪಾಪದಲ್ಲಿ ಕಾಲುಭಾಗವು ನಷ್ಟವಾಗುತ್ತದೆ. ಇನ್ನು ಮುಂದೆ ಪಾಪವನ್ನು ಮಾಡದೆ ಬಿಡುವುದರಿಂದ ಕಾಲುಭಾಗ ಪಾಪವು ಕಳೆಯುತ್ತದೆ. ಆಮೇಲೆ ಈ ಪಾಪವನ್ನು ಕಳೆದುಕೊಳ್ಳುವ ಪ್ರಾಯಶ್ಚಿತ್ತವು ಯಾವುದು? ಎಂದು ಗುರುಹಿರಿಯರಲ್ಲಿ ವಿಚಾರಿಸಿ ತಿಳಿದು, ಅಂತಹ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂಬ ಮನೋವೃತ್ತಿಯಿಂದ ಇನ್ನೊಂದು ಕಾಲುಭಾಗದಷ್ಟು ಪಾಪವು ನಾಶಹೊಂದುತ್ತದೆ. ಕಡೆಗೆ ಅಂತಹ ಪ್ರಾಯಶ್ಚಿತ್ತರೂಪವಾದ ಧರ್ಮವನ್ನು ಆಚರಿಸುವುದರಿಂದ ಕಡೆಯದಾದ ಕಾಲುಭಾಗ ಪಾಪವೂ ನಷ್ಟವಾಗಿ, ಆ ಪಾಪಿಯೂ ಶುದ್ಧನಾಗುತ್ತಾನೆ. ಎಂಬುದು ತಾತ್ಪರ್ಯವು. ಈ ಅಭಿಪ್ರಾಯದಿಂದಲೇ ವಿಶಿಷ್ಟಾದ್ವೈತಮತದಲ್ಲಿ ಭಕ್ತಿಪ್ರಪತ್ತಿಗಳಿಗೆ ತುಂಬ ಪ್ರಾಮುಖ್ಯವನ್ನು ಕೊಡುತ್ತಾರೆ. ಈ ಕಾರಣದಿಂದಲೇ ಕ್ರಿಸ್ತಮತದಲ್ಲಿ (Confession and Repentance) ತಪ್ಪನ್ನು ಒಪ್ಪಿಕೊಳ್ಳುವಿಕೆ, ಪಶ್ಚಾತ್ತಾಪ ಪಡುವಿಕೆಗಳಿಗೆ ತುಂಬ ಪ್ರಭಾವವಿದೆ ಎಂದು ವಿಧಿಸಿರುತ್ತದೆ. ಈ ಉದ್ದೇಶದಿಂದಲೇ, "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ । ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷಯಂ ಸ್ಮೃತಂ ॥" ಎಂದರೆ ಮಾನವರ ಏಳು ಬೀಳುಗಳಿಗೆ ಕಾರಣವಾದ ಪುಣ್ಯಪಾಪಗಳಿಗೆ ಅವರ ಮನಸ್ಸೇ, ಮನೋವೃತ್ತಿಭಾವಗಳೇ, ಮುಖ್ಯವೂ ಪ್ರಬಲವೂ ಆದ ಕಾರಣವಾಗಿರುತ್ತವೆ. ಅದರಂತೆ ಭೋಗ್ಯವಿಷಯಗಳಲ್ಲಿ ಆಶೆಯನ್ನಿಟ್ಟು ಕಾಮ್ಯಕರ್ಮಗಳನ್ನು ಮಾಡುತ್ತಿದ್ದರೆ, ಸಂಸಾರವು, ಎಂದರೆ ಕರ್ತೃತ್ವ, ಭೋಕ್ತೃತ್ವ, ಜನನ, ಮರಣ, ಸುಖ, ದುಃಖ ಇವುಗಳ ಅನುಭವವೆಂಬ ಸುಳಿಯಲ್ಲಿ ಸಿಕ್ಕಿಕೊಂಡಿರುವಿಕೆಯ ನಿರ್ಬಂಧ ದುಃಖವು, ತಪ್ಪದೆ ಅನಂತವಾಗಿ ಉಂಟಾಗುತ್ತಿರುತ್ತದೆ. ಹಾಗಲ್ಲದೆ ವಿವೇಕವೈರಾಗ್ಯಗಳಿಂದ ನಿಷ್ಕಾಮಕರ್ಮಾಚರಣೆ ಎಂಬ ನಿವೃತ್ತಿಧರ್ಮ

ಶಿವಪ್ರಸಾದೇನ ಸ ದುರ್ಘಟಃ ಪುನಃ
ಸಮಸ್ತಲೋಕಾಧಿಪತಿರ್ಬಭೂವ ।
ವಿಮುಕ್ತಿಮಪ್ಯಾಪ ಮಹತ್ತರಾಮಿಮಾಂ
ಪರಪ್ರಮಾತೃಪ್ರಥನೈಕಲಕ್ಷಣಾಮ್ ॥೨೭॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಪ್ರಸಾದವೈಭವಂ ನಾಮ ಚತುರ್ವಿಂಶಾಧ್ಯಾಯಃ

ವನ್ನು ಆಚರಿಸುತ್ತಿದ್ದರೆ ಪರಶಿವನ ಅನುಗ್ರಹದಿಂದ ಕ್ರಮವಾಗಿ ಚಿತ್ತಶುದ್ಧಿ ಜ್ಞಾನ ಪ್ರಾಪ್ತಿಗಳ ಮೂಲಕವಾಗಿ ಮೋಕ್ಷವೆಂಬ ಪರಮ ಪುರುಷಾರ್ಥವು, ಸ್ವಾತಂತ್ರ್ಯ ಸುಖದ ನಿತ್ಯಾನಂದದ, ಅಪರೋಕ್ಷಾನುಭವವಾಗುತ್ತದೆ. ಎಂದು ವೇದಶಾಸ್ತ್ರಗಳಲ್ಲಿ ಅನೇಕ ಸ್ಥಳಗಳಲ್ಲಿ ಹಲವು ಪ್ರಕಾರವಾಗಿ ತಿಳಿಯಹೇಳಿರುವುದನ್ನು ಜ್ಞಾಪಕದಲ್ಲಿಡಬೇಕು.

ಅಲ್ಲದೆ ಮಾನವನು ಸ್ವಾಭಾವಿಕವಾಗಿ ಪಾಪಿಯೂ ದುಃಖಿಯೂ ಅಲ್ಲವು. ಮತ್ತೇನೆಂದರೆ, ಅವನು ತನ್ನ ಸ್ವಭಾವದಲ್ಲಿ ಪುಣ್ಯ ಅಥವಾ ಆನಂದಸ್ವರೂಪನಾಗಿದಾನೆ. ಆದುದರಿಂದಲೇ ಸುಖವು ಹೊರಗಿನಿಂದ ಬರುವುದಿಲ್ಲವೆಂಬುದೂ ಅವಸ್ಥಾತ್ರಯದಲ್ಲಿ, ಎಂದರೆ, ಎಚ್ಚರ, ಕನಸು, ನಿದ್ದೆಗಳಲ್ಲಿ ಜೀವಾತ್ಮನಿಗೆ ಬರುವ ಒಟ್ಟು ಅನುಭವದ, ವಿಮರ್ಶೆಯಿಂದ ಗೊತ್ತಾಗುತ್ತದೆ. ಈ ಕಾರಣದಿಂದಲೇ ಶ್ರುತಿಯಲ್ಲಿ, ಶ್ವೇತಾಶ್ವತರ ಉಪನಿಷತ್ತಿನಲ್ಲಿ, "ಶೃಣ್ವಂತಿ ವಿಶ್ವೇ ಅಮೃತಸ್ಯ ಪುತ್ರಾ ಆಯೇ ಧಾಮಾನಿ ದಿವ್ಯಾನಿ ತಸ್ಥುಃ । ೨.೫. ಎಂದು ಹೇಳಿದೆ. ಇದರಲ್ಲಿ ಜೀವಾತ್ಮರನ್ನು ಪಾಪಸ್ವರೂಪರೆಂದಾಗಲಿ, ದುಃಖಸ್ವಭಾವದವರೆಂದಾಗಲಿ, ವರ್ಣಿಸಿಲ್ಲವು. ಮತ್ತೇನೆಂದರೆ ಜೀವರು ನಿತ್ಯಾನಂದಸ್ವರೂಪನಾದ ನಿರ್ವಿಕಾರಿ ಪರಬ್ರಹ್ಮತತ್ವದ ಪುತ್ರರೂ, ಅಂಶರೂ ಆಗಿದಾರೆ! ಎಂದು ಹೇಳಿದೆ. ॥೨೬॥

ಶಿವನ ಅನುಗ್ರಹದಿಂದ ದುರ್ಘಟನು ಎಲ್ಲಾ ಲೋಕಕ್ಕೂ ಅಧಿಪತಿಯಾದನು. ಮತ್ತು ಕೊನೆಯಲ್ಲಿ ಪರಬ್ರಹ್ಮಸ್ವರೂಪವಾದ ಎಂದರೆ ಅಂತಃಕರಣವೇ ಉಪಾಧಿಯಾಗಿ ಉಳ್ಳ ಸಾಕ್ಷಿಚೈತನ್ಯರೂಪನಾದ ಪರಪ್ರಮಾತೃವು, ಅಜ್ಞಾನದಿಂದ ಕಲ್ಪಿತವಾಗಿದ್ದ ಉಪಾಧಿಯು ಸ್ವಸ್ವರೂಪಜ್ಞಾನದಿಂದ ಲಯವನ್ನು ಹೊಂದಲು, ಎಂದಿನಂತೆ

ಪರಬ್ರಹ್ಮಸ್ವರೂಪನಾಗಿ ಉಳಿಯುತ್ತಾನೆ ಎಂಬ ವಾಸ್ತವಸ್ಥಿತಿಯ ಪ್ರಕಟನರೂಪವಾದ ಮುಕ್ತಿಯನ್ನು ಪಡೆದನು ಎಂದು ಸೂತರು ಶೌನಕಾದಿಋಷಿಗಳನ್ನು ಕುರಿತು ಹೇಳಿದರು. ||೨೭||

ಇಲ್ಲಿ ನಾವು ಗಮನಿಸಬೇಕಾದ ಒಂದು ವಿಶೇಷ ವಿಷಯವೇನೆಂದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ದ್ವಿಜರಿಗೆ ಷಡಕ್ಷರೀಮಂತ್ರದ ಜಪ, ಉಪಾಸನೆ ಯಿಂದ ಶಿವಾನುಗ್ರಹವು ಸಿದ್ಧಿಸುತ್ತದೆ. ಅಲ್ಲದೆ ಶೂದ್ರರಿಗೂ ಇತರ ಎಲ್ಲ ಮಾನವರಿಗೂ ಪಂಚಾಕ್ಷರೀಮಂತ್ರದ ಜಪ, ಉಪಾಸನೆಗಳಲ್ಲಿ ಅಧಿಕಾರವಿದೆ ಎಂದೂ, ಅದರಿಂದ ಮಾನವರೆಲ್ಲರಿಗೂ ಶ್ರೇಯಸ್ಸಾಗುವ ಮಾರ್ಗವು ತೆರೆದಿದೆ. ಎಂಬ ವಿಶಾಲಮನೋಭಾವದ, ವಿಶ್ವಧರ್ಮದ ಉಪದೇಶವನ್ನು ಮಾಡಿರುವುದು, ಮತಗಳ ಸಂಕುಚಿತಭಾವವನ್ನು ಬಿಟ್ಟು, ಇತರ ಮತೀಯರ ಉದ್ಧಾರಕ್ಕೂ ಅನುಕೂಲವಾದ ಉದಾರ ನೀತಿಯನ್ನು ಉಪದೇಶಿಸಿರುವುದು ಎಲ್ಲರ ಮೆಚ್ಚುಗೆಗೂ, ಕೃತಾರ್ಥತೆಗೂ, ಕೃತಜ್ಞತೆಗೂ ಪಾತ್ರವಾಗುವುದರಲ್ಲಿ ಸಂದೇಹವಿಲ್ಲವು.

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಇಪ್ಪತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಪಂಚವಿಂಶೋಽಧ್ಯಾಯಃ ||

ಇಪ್ಪತ್ತೈದನೆಯ ಅಧ್ಯಾಯವು

(ಪ್ರಸಾದವೈಭವಮ್)

|| ಓಂ ಸೂತ ಉವಾಚ ||

ಭೂಯೋಽಪಿ ದೇವದೇವಸ್ಯ ಪ್ರಸಾದಸ್ಯ ತು ವೈಭವಮ್ ।
ಪ್ರವಕ್ಷ್ಯಾಮಿ ಸಮಾಸೇನ ಶೃಣುತ ಶ್ರದ್ಧಯಾ ಸಹ ||೧||

ಪುರಾ ಕಶ್ಚಿದ್ದ್ವಿಜಶ್ರೇಷ್ಠಸ್ಸರ್ವಲಕ್ಷಣಸಂಯುತಃ ।
ಸತ್ಯಸಂಧಾಭಿಧಃ ಶುದ್ಧೋ ವಿಷ್ಣುಭಕ್ತೋ ವಿಶೇಷತಃ ||೨||

ಹದಿಮೂರನೆಯ ಅಧ್ಯಾಯದಲ್ಲಿ ಈಶ್ವರನೇ ಸ್ವತಂತ್ರವಾಗಿ ಸಂಸಾರದ ಬಿಡುಗಡೆಯನ್ನು ಮಾಡುವವನು, ಇತರ ದೇವತೆಗಳು ಕ್ರಮೇಣ ಹಾಗೆ ಮಾಡುವರೇ ಹೊರತು ಸಾಕ್ಷಾತ್ತಾಗಿ ಮಾಡುವವರಲ್ಲವೆಂದು ಹೇಳಿದೆ. ಈ ಅಂಶವು ಸಾಕ್ಷಾದ್ವಿಷ್ಣುವಿನ ಮುಖದಿಂದಲೇ ಹೇಳಲ್ಪಟ್ಟಿದೆ ಎಂದು ತಿಳಿಸುವುದಕ್ಕಾಗಿ ಈ ಅಧ್ಯಾಯವು ಪ್ರಾರಂಭಿಸಲ್ಪಡುತ್ತದೆ.

ಸೂತರು ಶೌನಕಾದಿಗಳನ್ನು ಕುರಿತು ಎಲೈ ಋಷಿಗಳೇ, ದೇವದೇವನಾದ ಈಶ್ವರನ ಅನುಗ್ರಹ ಮಹಿಮೆಯನ್ನು ಸಂಕ್ಷೇಪವಾಗಿ ಮತ್ತೂ ಹೇಳುತ್ತೇನೆ; ನೀವೆಲ್ಲರೂ ಶ್ರದ್ಧೆಯಿಂದ ಕೇಳಿರಿ ಎಂದು ಈ ರೀತಿ ಹೇಳಿದರು. ||೧||

ಪೂರ್ವದಲ್ಲಿ ಎಲ್ಲಾ ಲಕ್ಷಣಗಳಿಂದ ಕೂಡಿದ ಪರಿಶುದ್ಧನಾದ ವಿಷ್ಣುವಿನಲ್ಲಿ ಬಹಳ ಭಕ್ತಿಯುಳ್ಳ ಸತ್ಯಸಂಧನೆಂಬ ಉತ್ತಮನಾದ ಬ್ರಾಹ್ಮಣನಿದ್ದನು. ಆತನು

ಅಭೂತ್ತೇನ ಕೃತಂ ಸರ್ವಂ ಶ್ರುತಿಸ್ಮೃತ್ಯುದಿತಂ ಮುದಾ ।
ಪ್ರತಿಷ್ಠಾ ಚ ಕೃತಾ ವಿಷ್ಣೋರ್ಬಹುಶಃ ಪಂಡಿತೋತ್ತಮಾಃ ॥೩॥

ಆರಾಧಿತಶ್ಚ ಭಗವಾನ್ ವಿಷ್ಣುರ್ವಿಶ್ವಜಗನ್ಮಯಃ ।
ದಿನೇದಿನೇ ಮಹಾಭಕ್ತ್ಯಾ ಸುಗಂಧಕುಸುಮಾದಿಭಿಃ ॥೪॥

ವೈಷ್ಣವಾ ವಿವಿಧಾ ಮಂತ್ರಾಸ್ತೇನ ಜಪ್ತ್ವಾ ದಿನೇದಿನೇ ।
ಚಿರಂತನಾನಿ ಸ್ಥಾನಾನಿ ವಿಷ್ಣೋರ್ದೃಷ್ಟಾನಿ ಸಾದರಮ್ ॥೫॥

ವೈಷ್ಣವಾ ಮನುಜಾಸ್ತೇನ ಪೂಜಿತಾಶ್ಚ ದಿನೇದಿನೇ ।
ಸರ್ವಸ್ವಂ ವಿಷ್ಣವೇ ದತ್ತಂ ಸತ್ಯಸಂಧೇನ ಸಾದರಮ್ ॥೬॥

ಪುರೋ (ನಃ) ನಾರಾಯಣಃ ಶ್ರೀಮಾನ್ ಶಂಖಚಕ್ರಗದಾಧರಃ ।
ಪ್ರತ್ಯಕ್ಷಮಭವತ್ತಸ್ಯ ಪ್ರಸನ್ನಃ ಪಂಕಜೇಕ್ಷಣಃ ॥೭॥
ತಂ ದೃಷ್ಟ್ವಾ ಸತ್ಯಸಂಧಸ್ತು ಪ್ರಸನ್ನೇಂದ್ರಿಯಮಾನಸಃ ।

ವೇದದಲ್ಲಿಯೂ ಸ್ಮೃತಿಗಳಲ್ಲಿಯೂ ಯಾವ ಯಾವ ಕರ್ಮಾದಿಗಳನ್ನು ಮಾಡಬೇಕೆಂದು ಹೇಳಿದೆಯೋ ಆ ಕರ್ಮಗಳೆಲ್ಲವನ್ನೂ ಮಾಡಿದ್ದನು. ಅಲ್ಲದೆ ವಿಷ್ಣುವಿನ ವಿಗ್ರಹವನ್ನು ಬಹಳ ಭಕ್ತಿ, ಶ್ರದ್ಧೆ, ವಿಜೃಂಭಣೆಗಳಿಂದ ಪ್ರತಿಷ್ಠೆಮಾಡಿದ್ದನು.॥೨-೩॥

ಆತನು ಪ್ರತಿದಿನವೂ ಬಹಳ ಭಕ್ತಿಯಿಂದ ಜಗತ್ಸ್ವರೂಪನಾದ ವಿಷ್ಣುವನ್ನು ಉತ್ತಮವಾದ ಗಂಧ, ಹೂ, ಮೊದಲಾದವುಗಳಿಂದ ಪೂಜೆಮಾಡಿ ಪ್ರತಿದಿನವೂ ವಿಷ್ಣುಸಂಬಂಧವಾದ ಅನೇಕ ಮಂತ್ರಗಳನ್ನು ಜಪಮಾಡಿ ಆ ವಿಷ್ಣುವಿನ ಉತ್ತಮವಾದ ಕ್ಷೇತ್ರಗಳಲ್ಲಿ ವಿಷ್ಣುಮೂರ್ತಿಗಳನ್ನು ನೋಡುತ್ತಿದ್ದನು. ॥೪-೫॥

ಆ ಸತ್ಯಸಂಧನು ಅನೇಕರಾದ ವಿಷ್ಣುಭಕ್ತರನ್ನೂ ಪೂಜಿಸುತ್ತಿದ್ದನು; ತನ್ನ ದ್ರವ್ಯಾದಿಗಳೆಲ್ಲವನ್ನೂ ಪ್ರೀತಿಯಿಂದ ವಿಷ್ಣುವಿಗೆ ಸಮರ್ಪಿಸಿದ್ದನು. ॥೬॥

ಹೀಗೆ ಮಾಡುತ್ತಿರುವ ಸತ್ಯಸಂಧನ ಸೇವೆಗೆ ಮೆಚ್ಚಿ, ಶಂಖಚಕ್ರಗಧಾ ಇವುಗಳನ್ನು ಧರಿಸಿರುವ, ಕಮಲದಂತೆ ಕಣ್ಣುಗಳುಳ್ಳ, ವಿಷ್ಣುವು ಪ್ರತ್ಯಕ್ಷನಾದನು. ॥೭॥

ಪ್ರಣಮ್ಯ ದಂಡವದ್ಭೂಮೌ ಭಕ್ತ್ಯಾ ಪರಮಯಾ ಸಹ ॥೮॥

ಗಂಧಪುಷ್ಪಾದಿಭಿರ್ದಿವ್ಯೈಸ್ಸಮಾರಾಧ್ಯ ಯಥಾಬಲಮ್ ।
ಸ್ತೋತುಮಾರಭತೇ ವಿಷ್ಣುಂ ವಿಶ್ವಲೋಕೈಕಕಾರಣಮ್ ॥೯॥

॥ ಓಂ ಸತ್ಯಸಂಧ ಉವಾಚ ॥

ವಿಷ್ಣವೇ ವಿಶ್ವಲೋಕಾನಾಂ ಹೇತವೇ ವಿವಿಧಾತ್ಮನೇ ।
ವೇದವೇದಾಂತನಿಷ್ಠಾನಾಂ ಆತ್ಮಭೂತಾಯ ತೇ ನಮಃ ॥೧೦॥

ಕೃಷ್ಣಾಯ ಕ್ಲೇಶಸಂಹರ್ತ್ರೇ ಮಮ ಕೇನಾಪಿ ಹೇತುನಾ ।
ಪ್ರತ್ಯಕ್ಷಾಯ ಪ್ರಬೋಧಾಯ ಸರ್ವೇಷಾಮಾತ್ಮನೇ ನಮಃ ॥೧೧॥

ಕೇಶವಾಯಾತಿಶುದ್ಧಾಯ ಕೇವಲಾಯ ಪರಾತ್ಮನೇ ।
ಕೇಷಾಂಚಿಚ್ಛುದ್ಧಚಿತ್ತಾನಾಂ ಪ್ರಸನ್ನಾಯ ನಮೋ ನಮಃ ॥೧೨॥

ಸತ್ಯಸಂಧನು ಪ್ರತ್ಯಕ್ಷನಾಗಿರುವ ವಿಷ್ಣುವನ್ನು ನೋಡಿ ಸಂತೋಷಗೊಂಡ ಮನಸ್ಸು, ಇಂದ್ರಿಯಗಳು, ಉಳ್ಳವನಾಗಿ ಆದರದಿಂದ ಭೂಮಿಯ ಮೇಲೆ ಉದ್ದಕ್ಕೂ ಸಾಷ್ಟಾಂಗನಮಸ್ಕಾರಮಾಡಿ ಬಹಳ ಭಕ್ತಿಯಿಂದ ಕೂಡಿ ಗಂಧ, ಹೂ, ಇವುಗಳಿಂದ ಯಥಾಶಕ್ತಿಯಾಗಿ ಪೂಜೆಮಾಡಿ, ಲೋಕಕ್ಕೆ ಕಾರಣನಾದ ವಿಷ್ಣುವನ್ನು ಸ್ತೋತ್ರ ಮಾಡುವುದಕ್ಕೆ ಪ್ರಾರಂಭಮಾಡಿದನು. ||೮-೯||

ಪಾತಾಳಲೋಕ ಮೊದಲಾಗಿ ಸತ್ಯಲೋಕದವರೆಗಿರುವ ಎಲ್ಲಾ ಲೋಕಗಳಿಗೂ ಕಾರಣನಾದ, ಅನೇಕ ವಿಧವಾದ ಶರೀರವುಳ್ಳ, ವೇದ ವೇದಾಂತ ಇವುಗಳಲ್ಲಿ ಆಸಕ್ತರಾದವರಿಗೂ ಆತ್ಮನಂತೆ ಇರುವ, ವಿಷ್ಣುವಾದ ನಿನಗೆ ನಮಸ್ಕಾರವು. ದುಃಖವನ್ನು ಪರಿಹಾರಮಾಡುವ ಕೃಷ್ಣಸ್ವರೂಪನಾದ, ಯಾವದೋ ಕೃಪಾತಿಶಯದ ಕಾರಣದಿಂದ ನನ್ನ ಎದುರಾಗಿ ನಿಂತಿರುವ, ಜ್ಞಾನಸ್ವರೂಪನಾದ, ಎಲ್ಲಾ ಪದಾರ್ಥಸ್ವರೂಪನಾದ ದೇವನೇ, ನಿನಗೆ ನಮಸ್ಕಾರವು. ||೧೦-೧೧||

ಮನೋಹರವಾದ ಮುಂಗುರುಳೂ ಜುಟ್ಟೂ ಉಳ್ಳ, ಪರಿಶುದ್ಧನಾದ, ಯಾವ ವಿಕಾರವೂ ಇಲ್ಲದ ಪರಬ್ರಹ್ಮಸ್ವರೂಪನಾದ ಶುದ್ಧವಾದ, ಮನಸ್ಸುಳ್ಳ ಕೆಲವರಿಗೆ ಮಾತ್ರ ಗೋಚರವಾಗುವ ದೇವನೇ, ನಿನಗೆ ನಮಸ್ಕಾರವು. ||೧೨||

ಮುಂಜಿಕೇಶಾಯ ಮುಂಡಾಯ ಮುಂಡಿನಾಮಾರ್ತಿಹಾರಿಣೇ ।
ಮೌನನಿಷ್ಠಸ್ಯ ಮೂರ್ಖಸ್ಯ ಮುಕ್ತಿದಾಯ ನಮೋ ನಮಃ ।
ಮಹಾಮೋಹವಿನಾಶಾಯ ಮಂತ್ರರೂಪಾಯ ತೇ ನಮಃ ॥೧೩॥

ಶ್ರೀವತ್ಸಾಂಕಾಯ ವರ್ಯಾಯ ವರದಾಯ ಮಹಾತ್ಮನೇ ।
ವಂಚಕಾನಾಮಗಮ್ಯಾಯ ವಸ್ತುಭೂತಾಯ ತೇ ನಮಃ ॥೧೪॥

ಶ್ರೀಪತೇ ಭೂಪತೇ ತುಭ್ಯಂ ಗೋಪತೇ ಮಮ ರೂಪಿಣೇ ।
ಮಮಕಾರಮಹಾಮೋಹವಿನಾಶಾಯ ನಮೋ ನಮಃ ॥೧೫॥

ಪೀತವಾಸಾಯ ಪೀತಾಯ ಪಾಪಪಂಜರಹಾರಿಣೇ ।
ಪಾಪಕರ್ಮಪರಾಣಾಂ ತು ಭಂಜಕಾಯ ನಮೋ ನಮಃ ॥೧೬॥

ಮೃದುವಾದ ನೊಜೆಯಂತೆ ಉದ್ದವಾಗಿ ಇರುವ ಕೇಶಪಾಶವುಳ್ಳ, ಯತಿಗಳ ದುಃಖವನ್ನು ಪರಿಹಾರಮಾಡುವ, ಅಜ್ಞಾನವನ್ನು ನಾಶಮಾಡುವ, ಮಂತ್ರಗಳಲ್ಲಿ ಉಪಾಸ್ಯದೇವತಾರೂಪನಾದ ನಿನಗೆ ನಮಸ್ಕಾರವು. ಮೌನವ್ರತವನ್ನು ಅವಲಂಬಿಸಿ ಹಠಯೋಗಿಯಾಗಿರುವ ಉಪಾಸಕನಿಗೂ ಮುಕ್ತಿಯನ್ನು ಕರುಣಿಸುವ ನಿನಗೆ ನಮಸ್ಕಾರವು. ॥೧೩॥

ಶ್ರೀವತ್ಸವೆಂಬ ಗುರುತುಳ್ಳ, ವರಿಸುವುದಕ್ಕೆ ಯೋಗ್ಯನಾದ, ಬೇಡಿದವರ ಇಷ್ಟಾರ್ಥವನ್ನು ಕೊಡುವ, ಮಹಾತ್ಮನಾದ, ವಂಚಕರಿಂದ ತಿಳಿಯಲಾಗದ, ಎಲ್ಲಕ್ಕೂ ಅಧಿಷ್ಠಾನ ತತ್ತ್ವರೂಪನಾದ ನಿನಗೆ ನಮಸ್ಕಾರವು. ॥೧೪॥

ಲಕ್ಷ್ಮಿಗೂ ಭೂಮಿಗೂ ಇಂದ್ರಿಯಗಳಿಗೂ ಒಡೆಯನಾದ, ನನ್ನ(ಉಪಾಸಕನ ಆತ್ಮ) ಸ್ವರೂಪನಾದ, ನನ್ನದೆಂಬ ಅಜ್ಞಾನವನ್ನು ನಾಶಮಾಡುವ ನಿನಗೆ ನಮಸ್ಕಾರವು. ॥೧೫॥

ಹಳದಿಯಬಣ್ಣದ ಬಟ್ಟೆಯನ್ನು ಧರಿಸಿರುವ, ಹೊಂಬಣ್ಣವುಳ್ಳ, ಪಾಪದ ಬಲೆಯನ್ನು ನಾಶಮಾಡುವ, ಎಷ್ಟೇ ಮೂರ್ಖ (ದಡ್ಡ) ನಾಗಿದ್ದಾಗ್ಯೂ ನಿನ್ನನ್ನೇ ಮನನ ಮಾಡುವವನಿಗೆ ಮೋಕ್ಷವನ್ನು ಕೊಡುವ, ಕೆಟ್ಟಕೆಲಸಮಾಡುವ ದುಷ್ಟರನ್ನು ನಾಶಮಾಡುವ ನಿನಗೆ ನಮಸ್ಕಾರವು. ॥೧೬॥

ಪ್ರಣಮ್ಯ ದಂಡವದ್ಭೂಮೌ ಭಕ್ತ್ಯಾ ಪರಮಯಾ ಸಹ ॥೮॥

ಗಂಧಪುಷ್ಪಾದಿಭಿರ್ದಿವ್ಯೈಸ್ಸಮಾರಾಧ್ಯ ಯಥಾಬಲಮ್ ।
ಸ್ತೋತುಮಾರಭತೇ ವಿಷ್ಣುಂ ವಿಶ್ವಲೋಕೈಕಕಾರಣಮ್ ॥೯॥

॥ ಓಂ ಸತ್ಯಸಂಧ ಉವಾಚ ॥

ವಿಷ್ಣವೇ ವಿಶ್ವಲೋಕಾನಾಂ ಹೇತವೇ ವಿವಿಧಾತ್ಮನೇ ।
ವೇದವೇದಾಂತನಿಷ್ಠಾನಾಂ ಆತ್ಮಭೂತಾಯ ತೇ ನಮಃ ॥೧೦॥

ಕೃಷ್ಣಾಯ ಕ್ಲೇಶಸಂಹರ್ತ್ರೇ ಮಮ ಕೇನಾಪಿ ಹೇತುನಾ ।
ಪ್ರತ್ಯಕ್ಷಾಯ ಪ್ರಬೋಧಾಯ ಸರ್ವೇಷಾಮಾತ್ಮನೇ ನಮಃ ॥೧೧॥

ಕೇಶವಾಯಾತಿಶುದ್ಧಾಯ ಕೇವಲಾಯ ಪರಾತ್ಮನೇ ।
ಕೇಷಾಂಚಿಚ್ಛುದ್ಧಚಿತ್ತಾನಾಂ ಪ್ರಸನ್ನಾಯ ನಮೋ ನಮಃ ॥೧೨॥

ಸತ್ಯಸಂಧನು ಪ್ರತ್ಯಕ್ಷನಾಗಿರುವ ವಿಷ್ಣುವನ್ನು ನೋಡಿ ಸಂತೋಷಗೊಂಡ ಮನಸ್ಸು, ಇಂದ್ರಿಯಗಳು, ಉಳ್ಳವನಾಗಿ ಆದರದಿಂದ ಭೂಮಿಯ ಮೇಲೆ ಉದ್ದಕ್ಕೂ ಸಾಷ್ಟಾಂಗನಮಸ್ಕಾರಮಾಡಿ ಬಹಳ ಭಕ್ತಿಯಿಂದ ಕೂಡಿ ಗಂಧ, ಹೂ, ಇವುಗಳಿಂದ ಯಥಾಶಕ್ತಿಯಾಗಿ ಪೂಜೆಮಾಡಿ, ಲೋಕಕ್ಕೆ ಕಾರಣನಾದ ವಿಷ್ಣುವನ್ನು ಸ್ತೋತ್ರ ಮಾಡುವುದಕ್ಕೆ ಪ್ರಾರಂಭಮಾಡಿದನು. ॥೮-೯॥

ಪಾತಾಳಲೋಕ ಮೊದಲಾಗಿ ಸತ್ಯಲೋಕದವರೆಗಿರುವ ಎಲ್ಲಾ ಲೋಕಗಳಿಗೂ ಕಾರಣನಾದ, ಅನೇಕ ವಿಧವಾದ ಶರೀರವುಳ್ಳ, ವೇದ ವೇದಾಂತ ಇವುಗಳಲ್ಲಿ ಆಸಕ್ತ ರಾದವರಿಗೂ ಆತ್ಮನಂತೆ ಇರುವ, ವಿಷ್ಣುವಾದ ನಿನಗೆ ನಮಸ್ಕಾರವು. ದುಃಖವನ್ನು ಪರಿಹಾರಮಾಡುವ ಕೃಷ್ಣಸ್ವರೂಪನಾದ, ಯಾವದೋ ಕೃಪಾತಿಶಯದ ಕಾರಣದಿಂದ ನನ್ನ ಎದುರಾಗಿ ನಿಂತಿರುವ, ಜ್ಞಾನಸ್ವರೂಪನಾದ, ಎಲ್ಲಾ ಪದಾರ್ಥಸ್ವರೂಪನಾದ ದೇವನೇ, ನಿನಗೆ ನಮಸ್ಕಾರವು. ॥೧೦-೧೧॥

ಮನೋಹರವಾದ ಮುಂಗುರುಳೂ ಜುಟ್ಟೂ ಉಳ್ಳ, ಪರಿಶುದ್ಧನಾದ, ಯಾವ ವಿಕಾರವೂ ಇಲ್ಲದ ಪರಬ್ರಹ್ಮಸ್ವರೂಪನಾದ ಶುದ್ಧವಾದ, ಮನಸ್ಸುಳ್ಳ ಕೆಲವರಿಗೆ ಮಾತ್ರ ಗೋಚರವಾಗುವ ದೇವನೇ, ನಿನಗೆ ನಮಸ್ಕಾರವು. ॥೧೨॥

ಮುಂಜಿಕೇಶಾಯ ಮುಂಡಾಯ ಮುಂಡಿನಾಮಾರ್ತಿಹಾರಿಣೇ ।
ಮೌನನಿಷ್ಠಸ್ಯ ಮೂರ್ಖಸ್ಯ ಮುಕ್ತಿದಾಯ ನಮೋ ನಮಃ ।
ಮಹಾಮೋಹವಿನಾಶಾಯ ಮಂತ್ರರೂಪಾಯ ತೇ ನಮಃ ॥೧೩॥

ಶ್ರೀವತ್ಸಾಂಕಾಯ ವರ್ಯಾಯ ವರದಾಯ ಮಹಾತ್ಮನೇ ।
ವಂಚಕಾನಾಮಗಮ್ಯಾಯ ವಸ್ತುಭೂತಾಯ ತೇ ನಮಃ ॥೧೪॥

ಶ್ರೀಪತೇ ಭೂಪತೇ ತುಭ್ಯಂ ಗೋಪತೇ ಮಮ ರೂಪಿಣೇ ।
ಮಮಕಾರಮಹಾಮೋಹವಿನಾಶಾಯ ನಮೋ ನಮಃ ॥೧೫॥

ಪೀತವಾಸಾಯ ಪೀತಾಯ ಪಾಪಪಂಜರಹಾರಿಣೇ ।
ಪಾಪಕರ್ಮಪರಾಣಾಂ ತು ಭಂಜಕಾಯ ನಮೋ ನಮಃ ॥೧೬॥

ಮೃದುವಾದ ನೊಜೆಯಂತೆ ಉದ್ದವಾಗಿ ಇರುವ ಕೇಶಪಾಶವುಳ್ಳ, ಯತಿಗಳ ದುಃಖವನ್ನು ಪರಿಹಾರಮಾಡುವ, ಅಜ್ಞಾನವನ್ನು ನಾಶಮಾಡುವ, ಮಂತ್ರಗಳಲ್ಲಿ ಉಪಾಸ್ಯದೇವತಾರೂಪನಾದ ನಿನಗೆ ನಮಸ್ಕಾರವು. ಮೌನವ್ರತವನ್ನು ಅವಲಂಬಿಸಿ ಹಠಯೋಗಿಯಾಗಿರುವ ಉಪಾಸಕನಿಗೂ ಮುಕ್ತಿಯನ್ನು ಕರುಣಿಸುವ ನಿನಗೆ ನಮಸ್ಕಾರವು. ॥೧೩॥

ಶ್ರೀವತ್ಸವೆಂಬ ಗುರುತುಳ್ಳ, ವರಿಸುವುದಕ್ಕೆ ಯೋಗ್ಯನಾದ, ಬೇಡಿದವರ ಇಷ್ಟಾರ್ಥವನ್ನು ಕೊಡುವ, ಮಹಾತ್ಮನಾದ, ವಂಚಕರಿಂದ ತಿಳಿಯಲಾಗದ, ಎಲ್ಲಕ್ಕೂ ಅಧಿಷ್ಠಾನ ತತ್ತ್ವರೂಪನಾದ ನಿನಗೆ ನಮಸ್ಕಾರವು. ॥೧೪॥

ಲಕ್ಷ್ಮಿಗೂ ಭೂಮಿಗೂ ಇಂದ್ರಿಯಗಳಿಗೂ ಒಡೆಯನಾದ, ನನ್ನ(ಉಪಾಸಕನ ಆತ್ಮ) ಸ್ವರೂಪನಾದ, ನನ್ನದೆಂಬ ಅಜ್ಞಾನವನ್ನು ನಾಶಮಾಡುವ ನಿನಗೆ ನಮಸ್ಕಾರವು. ॥೧೫॥

ಹಳದಿಯಬಣ್ಣದ ಬಟ್ಟೆಯನ್ನು ಧರಿಸಿರುವ, ಹೊಂಬಣ್ಣವುಳ್ಳ, ಪಾಪದ ಬಲೆಯನ್ನು ನಾಶಮಾಡುವ, ಎಷ್ಟೇ ಮೂರ್ಖ (ದಡ್ಡ) ನಾಗಿದ್ದಾಗ್ಯೂ ನಿನ್ನನ್ನೇ ಮನನ ಮಾಡುವವನಿಗೆ ಮೋಕ್ಷವನ್ನು ಕೊಡುವ, ಕೆಟ್ಟಕೆಲಸಮಾಡುವ ದುಷ್ಟರನ್ನು ನಾಶಮಾಡುವ ನಿನಗೆ ನಮಸ್ಕಾರವು. ॥೧೬॥

ವಿಷ್ವಕ್ಸೇನಾಯ ವಿಶ್ವಾಯ ವಿಶ್ವೋತ್ಪತ್ತ್ಯಾದಿಹೇತವೇ ॥೧೭॥

ವಿಶ್ವವಿಜ್ಞಾನರೂಪಾಯ ನಿರ್ಮಲಾಯ ಮಹಾತ್ಮನೇ ।
ವಿಶ್ವರೂಪಾಯ ವಿಶ್ವಾಸಲಭ್ಯಾಯಾವಿದಿತಾತ್ಮನೇ ॥೧೮॥

ವಿಶ್ವೋತ್ತೀರ್ಣಾಯ ವಿಶ್ವಸ್ಯ ಸಾಕ್ಷಿರೂಪಾಯ ತೇ ನಮಃ ।
ಮುರಾರಿಣೇ ಮುಹೂರ್ತಾಯ ಮುಹೂರ್ತಸ್ಯ ವಿಧಾಯಿನೇ ॥೧೯॥

ಮುಹೂರ್ತಂ ಭಜತಾಂ ನೃಣಾಂ ಮುಕ್ತಿದಾಯ ನಮೋ ನಮಃ ।
ಶೌರಿಣೇ ಶಾರ್ಙ್ಗಿಣೇ ತುಭ್ಯಂ ಶಂಖಕುಂದೇಂದುರೂಪಿಣೇ ॥೨೦॥

ಶಾಕಮೂಲಫಲಾಶಾನಾಂ ಶಾಂತಿದಾಯ ನಮೋ ನಮಃ ।
ಪದ್ಮನಾಭಾಯ ಪದ್ಮಾಯಾಃ ಪತಯೇ ಪದ್ಮಚಕ್ಷುಷೇ ॥೨೧॥

ಹೃತ್ಪದ್ಮಕರ್ಣಿಕಾಮಧ್ಯೇ ಸಮಾಸೀನಾಯ ತೇ ನಮಃ ।

ಎಲ್ಲಾ ಕಡೆಯಲ್ಲಿಯೂ (ರಕ್ಷಣೆ)ಸೈನ್ಯವುಳ್ಳ ಜಗತ್‌ಸ್ವರೂಪನಾದ, ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾದ, ಸರ್ವಜ್ಞನಾದ, ಪರಿಶುದ್ಧನಾದ, ಉತ್ಕೃಷ್ಟನಾದ, ಮಹಾಮಹಿಮಶಾಲಿಯಾದ ನಿನಗೆ ನಮಸ್ಕಾರವು. ||೧೭||

ಎಲ್ಲಾ ವಸ್ತುಗಳ ರೂಪನಾದ, ನಂಬಿಕೆಯಿಂದ ಪಡೆಯುವುದಕ್ಕೆ ಯೋಗ್ಯನಾದ, ಚಿತ್ತಶುದ್ಧಿ ಇಲ್ಲದವರಿಂದ ತಿಳಿಯಲಾಗದ ಸ್ವರೂಪವುಳ್ಳ, ಜಗತ್ತಿನ ಆಚೆಗೂ ಮೀರಿ ವ್ಯಾಪಿಸಿ ಇರುವ, ಜಗತ್ತಿಗೆ ಸಾಕ್ಷಿಯಾದ ನಿನಗೆ ನಮಸ್ಕಾರವು. ||೧೮||

ಮುರನೆಂಬ ರಾಕ್ಷಸನಿಗೆ ಶತ್ರುವಾದ, ಕಾಲರೂಪನಾದ, ಕಾಲಕರ್ತನಾದ, ಕಾಲರೂಪದಿಂದ ನಿನ್ನನ್ನು ಒಂದು ಮುಹೂರ್ತ ಎಂದರೆ ಎರಡು ಗಳಿಗೆಯವರೆಗಾದರೂ ಏಕಾಗ್ರವಾಗಿ ಸೇವಿಸುವವರಿಗೆ ಮುಕ್ತಿಯನ್ನು ಕೊಡುವ ನಿನಗೆ ನಮಸ್ಕಾರವು.||೧೯||

ಶೂರನೆಂಬವನಿಗೆ ಮೊಮ್ಮಗನಾದ, ಶಾರ್ಙ್ಗವೆಂಬ ಧನುಸ್ಸನ್ನು ಹಿಡಿದಿರುವ, ಶಂಖ, ಕುಂದಪುಷ್ಪ, ಚಂದ್ರರಂತೆ ಶುಭ್ರರೂಪನಾದ, ಸೊಪ್ಪು ಗೆಡ್ಡೆ, ಹಣ್ಣು ಇವುಗಳನ್ನು ತಿನ್ನುವ ಋಷಿಗಳಿಗೆ ಶಾಂತಿಯನ್ನು ಕೊಡುವ ನಿನಗೆ ನಮಸ್ಕಾರವು: ||೨೦||

ನಾಭಿಯಲ್ಲಿ ಕಮಲವುಳ್ಳ, ಲಕ್ಷ್ಮಿಗೆ ಪತಿಯಾದ, ಕಮಲದಂತೆ ಕಣ್ಣುಗಳುಳ್ಳ, ಭಕ್ತರ ಹೃದಯಕಮಲದ ಮಧ್ಯದಲ್ಲಿ ವಾಸಮಾಡುತ್ತಿರುವ, ಮುಕ್ತಿದಾತನಾದ,

ಮುಕುಂದಾಯ ಮುಕುಂದಸ್ಯ ಮಹಾಮೂರ್ಖಸ್ಯ ರಕ್ಷಸಃ ॥೨೨॥

ಹರ್ತ್ರೇ ಭರ್ತ್ರೇ ವಿಶಿಷ್ಟಾನಾಮಾತ್ಮನೇ ವಿದುಷಾಂ ನಮಃ ।
ಗೋವಿಂದಾಯ ಗವಾಂ ನಿತ್ಯಂ ಪಾಲಕಾಯ ಪರಾತ್ಮನೇ ॥೨೩॥

ನಂದಗೋಪಾಯ ಗುಪ್ತಾಯ ನಮಸ್ಸರ್ವಸ್ಯ ಹೇತವೇ ।
ಭೂಧರಾಯ ಭುಜಂಗಸ್ಯ ಮಹಾಕೋಪಚ್ಛಿದೇಽಚಿರಾತ್ ॥೨೪॥

ಭೂತನಾಥಾಯ ಭೂತಾನಾಮಾಧಾರಾಯ ನಮೋ ನಮಃ ।
ವೈಕುಂಠಾಯ ವಿಶಿಷ್ಟಾನಾಂ ವಿಶಿಷ್ಟಜ್ಞಾನದಾಯಿನೇ ॥೨೫॥

ವಿಶಿಷ್ಟಾಯ ವಿರಿಂಚಾದಿ ದೇವೇಭ್ಯಶ್ಚ ನಮೋ ನಮಃ ।
ಕ್ಷೀರೋದಶಾಯಿನೇ ಸಾಕ್ಷಾತ್ಕ್ಷೀರೋದಸ್ಯಾಪಿ ಹೇತವೇ ॥೨೬॥
ನಿರಾಧಾರಾಯ ನಿತ್ಯಾಯ ನಿತ್ಯಾನಂದಾಯ ತೇ ನಮಃ ।

ಮುಕುಂದನೆಂಬ ನೀಚರಾಕ್ಷಸನನ್ನು ಸಂಹಾರಮಾಡಿದ, ಶ್ರೇಷ್ಠರಿಗೆಲ್ಲರಿಗೂ ಒಡೆಯನಾದ, ವಿದ್ವಾಂಸರಾದ ಜ್ಞಾನಿಗಳಿಗೆ ಆತ್ಮಸ್ವರೂಪನಾದ ನಿನಗೆ ನಮಸ್ಕಾರವು. ||೨೧-೨೨||

ವೇದಪ್ರತಿಪಾದ್ಯನಾದ, ಗೋಕುಲದಲ್ಲಿ ಹಸುಗಳನ್ನು ಕಾಪಾಡುತ್ತಿದ್ದ, ಪರಮಾತ್ಮನಾದ, ನಂದನನ್ನು ಕಾಪಾಡಿದಂಥ, ರಹಸ್ಯಸ್ವರೂಪನಾದ, ಎಲ್ಲಕ್ಕೂ ಕಾರಣನಾದ ನಿನಗೆ ನಮಸ್ಕಾರವು. ||೨೩||

ಭೂಮಿಯನ್ನು ಧರಿಸಿರುವ, ಕಾಳಿಂಗನ ಕೋಪವನ್ನು ಜಾಗ್ರತೆಯಾಗಿ ನಾಶಪಡಿಸಿದ, ಎಲ್ಲಾ ಪ್ರಾಣಿಗಳಿಗೂ ಒಡೆಯನಾದ, ಎಲ್ಲಾ ಭೂತಗಳಿಗೂ ಆಧಾರನಾದ ನಿನಗೆ ನಮಸ್ಕಾರವು. ||೨೪||

ಜಗತ್ತಿನ ಸೃಷ್ಟಿಕಾಲದಲ್ಲಿ ಪಂಚಭೂತಗಳನ್ನು ಒಂದಕ್ಕೊಂದು ಸೇರಿಸಿದಂಥ ನಿತ್ಯಜ್ಞಾನರೂಪನಾದ, ಶ್ರೇಷ್ಠರಾದವರಿಗೆ ಒಳ್ಳೆಯ ಜ್ಞಾನವನ್ನು ಕೊಡುವ, ಬ್ರಹ್ಮಾದಿ ದೇವತೆಗಳಿಗಿಂತಲೂ ಉತ್ತಮನಾದ ನಿನಗೆ ನಮಸ್ಕಾರವು. ||೨೫||

ಕ್ಷೀರಸಮುದ್ರದಲ್ಲಿ ಮಲಗಿರುವವನಾದಾಗ್ಯೂ ಅಂಥ ಕ್ಷೀರಸಮುದ್ರಕ್ಕೂ ಕಾರಣನಾದ, ಯಾವ ಆಧಾರದ ಅಪೇಕ್ಷೆಯೂ ಇಲ್ಲದ, ನಾಶವಿಲ್ಲದ, ಶಾಶ್ವತವಾದ ಆನಂದರೂಪನಾದ ನಿನಗೆ ನಮಸ್ಕಾರವು. ||೨೬||

*

ಯಜ್ಞರೂಪಾಯ ಯಜ್ಞಸ್ಯ ಫಲಪ್ರಾಪ್ತ್ಯೇಕಹೇತವೇ ॥೨೭॥

ಯಜ್ವನಾಂ ಪತಯೇ ತುಭ್ಯಂ ಯಜ್ಞಗಮ್ಯಾಯ ತೇ ನಮಃ ।
ಜನಾರ್ದನಾಯ ದೈತ್ಯಾನಾಂ ಶತ್ರವೇ ಶಕ್ತಿದಾಯಿನೇ ॥೨೮॥

ಸ್ವಭಕ್ತಾನಾಂ ವಿಶುದ್ಧಾನಾಂ ವಿಶೇಷೇಣ ನಮೋ ನಮಃ ।
ವಾಸುದೇವಾಯ ವಸ್ವಾದಿದಾಯಿನೇ ವಾಸವಾದಿಭಿಃ ॥೨೯॥

ಪೂಜಿತಾಯ ಪುರಾಣಾಯ ಪುಂಸೇ ಪೂರ್ಣಾತ್ಮನೇ ನಮಃ ।
ದಾಮೋದರಾಯ ದೇವಾನಾಂ ಶತ್ರುನಾಶೈಕಹೇತವೇ ॥೩೦॥

ದಾಂತಚಿತ್ತಜನಸ್ಯಾಸ್ಯ ರಕ್ಷಕಾಯ ನಮೋ ನಮಃ ।
ಅಚ್ಯುತಾಯಾಖಿಲಸ್ಯಾಸ್ಯ ಸಾಕ್ಷಿಣೇಽಚ್ಯುತವಸ್ತುಭಿಃ ॥೩೧॥
ಅಸಕ್ತಾಯ ಸುಸಕ್ತಾಯ ಸ್ವಸಂವೇದ್ಯಾಯ ತೇ ನಮಃ ।

ಯಾಗಸ್ವರೂಪನಾದ, ಯಾಗದ ಫಲವನ್ನು ಕೊಡಲು ಮುಖ್ಯಕಾರಣನಾದ, ಯಾಗಮಾಡುವವರ ಯಜಮಾನನಾದ, ಯಜ್ಞದಿಂದಲೇ ತಿಳಿಯಲು ಅರ್ಹನಾದ ನಿನಗೆ ನಮಸ್ಕಾರವು. ॥೨೭॥

ಕೆಟ್ಟಕೆಲಸಮಾಡುವ ಜನಗಳನ್ನು ನಾಶಮಾಡುವ, ರಾಕ್ಷಸರಿಗೆ ಶತ್ರುವಾದ, ಪರಿಶುದ್ಧರಾದ ತನ್ನ ಭಕ್ತರಿಗೆ ವಿಶೇಷವಾದ ಜ್ಞಾನಮುಂತಾದ ಶಕ್ತಿದಾತನಾದ ನಿನಗೆ ನಮಸ್ಕಾರವು. ॥೨೮॥

ವಸುದೇವನ ಮಗನಾದ, ಧನಾದಿಗಳನ್ನು ಕೊಡುವ, ಇಂದ್ರಾದಿಗಳಿಂದ ಪೂಜಿಸಲ್ಪಟ್ಟ, ಅಖಂಡಾತ್ಮಸ್ವರೂಪನಾದ ಪುರಾಣಪುರುಷನಾದ ನಿನಗೆ ನಮಸ್ಕಾರವು. ॥೨೯॥

ಕಾಲಿನವರೆಗೂ ಇರುವ ತುಲಸೀಮಾಲೆಯನ್ನು ಧರಿಸಿರುವ, ದೇವತೆಗಳ ಶತ್ರುಗಳನ್ನು ನಾಶಮಾಡುವುದಕ್ಕೆ ಮುಖ್ಯಕಾರಣನಾದ, ಜಿತೇಂದ್ರಿಯರಾದವರನ್ನು ಕಾಪಾಡುವ ನಿನಗೆ ನಮಸ್ಕಾರವು. ॥೩೦॥

ತನ್ನ ದಿವ್ಯ ಸ್ಥಾನವನ್ನು ಧರ್ಮಮಾರ್ಗವನ್ನು ಬಿಡದಿರುವ, ಈ ಎಲ್ಲ ವಸ್ತುಗಳಿಗೂ ಸಾಕ್ಷಿಯಾದ, ಅನಿತ್ಯವಸ್ತುಗಳಲ್ಲಿ ಆಸಕ್ತನಾಗದ, ಭಕ್ತರನ್ನು ಬಿಡದೆ ಇರುವ, ಉಪಾಸಕರು ತಮ್ಮ ಅನುಭವದಿಂದಲೇ ತಿಳಿಯಲು ಅರ್ಹನಾದ ನಿನಗೆ ನಮಸ್ಕಾರವು. ॥೩೧॥

ಹರಯೇ ಹಾರಕೇಯೂರ ಕಟಕಾದಿವಿಭೂಷಣೈಃ ॥೩೨॥
ಅಲಂಕೃತಾಯ ಕಲ್ಯಾಣಶರೀರಾಯ ನಮೋ ನಮಃ ।
ಹೃಷೀಕೇಶಾಯ ಹೇಮಾದಿಧನಧಾನ್ಯಪ್ರದಾಯಿನೇ ।
ಹೃದಿ ಚಿಂತಯತಾಂ ನಿತ್ಯಂ ನಮಸ್ಸತ್ಯಪರಾತ್ಮನೇ ॥೩೩॥

ನಾರಾಯಣಾಯ ನರಕಾರ್ಣವತಾರಕಾಯ
ನಾನಾವಿಧಸ್ಯ ಜಗತಃ ಸ್ಥಿತಿಕಾರಣಾಯ ।
ಮೋಹಾವೃತಸ್ಯ ನಿಖಿಲಸ್ಯ ಜನಸ್ಯ ಸದ್ಯಃ
ಶ್ರೇಯಸ್ಕರಾಯ ಪುರುಷಾಯ ನಮಃ ಪರಸ್ಮೈ ॥೩೪॥

॥ ಸೂತ ಉವಾಚ ॥

ಏವಂ ಭಕ್ತ್ಯಾ ಹರಿಂ ಸ್ತುತ್ವಾ ಸತ್ಯಸಂಧೋ ಮಹಾದ್ವಿಜಃ ।
ಪ್ರಸಾದಂ ಕುರು ಮೇ ದೇವ ಮುಚ್ಯೇಯಂ ಯೇನ ಬಂಧನಾತ್ ॥೩೫॥
ಇತಿ ತಂ ಪ್ರಾರ್ಥಯಾಮಾಸ ಸತ್ಯಸಂಧೋ ಜನಾರ್ದನಂ ।

ಭಕ್ತರ ಪಾಪವನ್ನು ನಾಶಮಾಡುವ, ಮುತ್ತಿನ ಹಾರ ಬಾಹುಪುರಿ ಬಳೆ ಮುಂತಾದ ಆಭರಣಗಳಿಂದ ಅಲಂಕರಿಸಲ್ಪಟ್ಟಿರುವ, ಮಂಗಳಕರವಾದ ಶರೀರವುಳ್ಳ ನಿನಗೆ ಅನಂತನಮಸ್ಕಾರಗಳು. ॥೩೨॥

ಇಂದ್ರಿಯಗಳಿಗೆ ಅಧಿಪತಿಯಾದ, ಯಾವಾಗಲೂ ಹೃದಯದಲ್ಲಿ ನಿನ್ನನ್ನು ಧ್ಯಾನಮಾಡುವವರಿಗೆ ಚಿನ್ನ, ಧನ, ಧಾನ್ಯಾದಿಗಳನ್ನು ಕೊಡುವ, ಮೂರು ಕಾಲದಲ್ಲಿಯೂ ನಾಶವಿಲ್ಲದ, ಪರಮಾತ್ಮಪರಬ್ರಹ್ಮರೂಪನಾದ ನಿನಗೆ ನಮಸ್ಕಾರವು. ॥೩೩॥

ಕ್ಷೀರಸಾಗರಶಾಯಿಯಾದ, ಶಬ್ದದಿಂದ ತಿಳಿಯತಕ್ಕ, ನರಕವೆಂಬ ಸಮುದ್ರವನ್ನು ದಾಟಿಸುವ, ಅನೇಕ ವಿಧವಾದ ಪ್ರಪಂಚದ ಸ್ಥಿತಿಗೆ ಕಾರಣನಾದ, ಅಜ್ಞಾನದಿಂದ ಕೂಡಿದ ಎಲ್ಲಾ ಜನಗಳಿಗೂ ತನ್ನನ್ನು ಧ್ಯಾನಮಾಡಿದ ಕೂಡಲೆ ಶ್ರೇಯಸ್ಸನ್ನುಂಟುಮಾಡುವ, ಶ್ರೇಷ್ಠಪುರುಷನಾದ ನಿನಗೆ ನಮಸ್ಕಾರವು. ॥೩೪॥

ಎಲೈ ಋಷಿಗಳೇ, ಹೀಗೆ ಸತ್ಯಸಂಧನೆಂಬ ಆ ಶ್ರೇಷ್ಠಬ್ರಾಹ್ಮಣನು ವಿಷ್ಣುವನ್ನು ಭಕ್ತಿಯಿಂದ ಸ್ತೋತ್ರಮಾಡಿ ಆ ಜನಾರ್ದನನನ್ನು ಕುರಿತು ಓ ದೇವನೇ,

ಜನಾರ್ದನೋಽಪಿ ಭಗವಾನ್ ಸರ್ವಭೂತಹಿತೇ ರತಃ ॥೩೬॥

ಸತ್ಯವಾಗನಸೂಯಶ್ಚ ಸತ್ಯಜ್ಞಾನಮಹೋದಧಿಃ ।
ಪ್ರಾಹ ಗಂಭೀರಯಾ ವಾಚಾ ಸತ್ಯಸಂಧಂ ಪ್ರತಿ ದ್ವಿಜಾಃ ॥೩೭॥

॥ ಓಂ ಭಗವಾನ್ ಉವಾಚ ॥

ಸತ್ಯಸಂಧಮಹಾಭಕ್ತ ಮಮ ಸತ್ಯಪರಾಯಣ ।
ಶ್ರೌತಸ್ಮಾರ್ತೈಕನಿಷ್ಠಾನಾಮುತ್ತಮೋತ್ತಮ ಸುವ್ರತ ॥೩೮॥

ನಾಹಂ ಸಂಸಾರಮಗ್ನಾನಾಂ ಸಾಕ್ಷಾತ್ಸಂಸಾರಮೋಚಕಃ ।
ಬ್ರಹ್ಮಾದಿದೇವತಾಶ್ಚಾನ್ಯಾ ನೈವ ಸಂಸಾರಮೋಚಕಾಃ ॥೩೯॥

ಶಿವ ಏವ ಹಿ ಜಂತೂನಾಂ ಮಹಾಸಂಸಾರವರ್ತಿನಾಮ್ ।
ಸಂಸಾರಮೋಚಕಸ್ಸಾಕ್ಷಾತ್ಸರ್ವಜ್ಞಸ್ಸಾಂಬ ಈಶ್ವರಃ ॥೪೦॥

ನಾನು ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದುವಂತೆ ಅನುಗ್ರಹಮಾಡು ಎಂದು ಬೇಡಿಕೊಂಡನು. ॥೩೫॥

ಐಶ್ವರ್ಯವಂತನಾದ, ಎಲ್ಲಾ ಪ್ರಾಣಿಗಳಿಗೂ ಹಿತವನ್ನು ಮಾಡುವ, ಸತ್ಯವಾದ ಮಾತುಳ್ಳ, ಅಸೂಯಾದಿ ದೋಷಗಳಿಲ್ಲದ, ಸತ್ಯವಾದ ಜ್ಞಾನಕ್ಕೆ ಸಮುದ್ರದಂತೆ ಇರುವ ಆ ವಿಷ್ಣುವೂ ಕೂಡ ಗಂಭೀರವಾದ ಮಾತಿನಿಂದ ಸತ್ಯಸಂಧನನ್ನು ಕುರಿತು ಹೀಗೆ ಹೇಳಿದನು. ॥೩೬-೩೭॥

ಎಲೈ ಸತ್ಯವಂತನಾದ, ನನ್ನ ಭಕ್ತನಾದ, ಶ್ರುತಿಸ್ಮೃತಿಗಳಲ್ಲಿ ಹೇಳಲ್ಪಟ್ಟ ಕರ್ಮಗಳನ್ನು ಸರಿಯಾಗಿ ಮಾಡುವವರಲ್ಲಿ ಉತ್ತಮನಾದ, ಉತ್ತಮವಾದ ನಿಯಮಗಳುಳ್ಳ ಸತ್ಯಸಂಧನೇ, ನಾನು ಸಂಸಾರಸಮುದ್ರದಲ್ಲಿ ಮುಳುಗಿರುವವರ ಸಂಸಾರಬಂಧನವನ್ನು ಸಾಕ್ಷಾತ್ತಾಗಿ ಬಿಡಿಸುವವನಲ್ಲವು. ಏಕೆಂದರೆ, ಏಕಾಂತ ಭಕ್ತಿಯು ಅನನ್ಯವೂ ನಿರತಿಶಯವೂ ಆಗಿದ್ದರೂ ವಿಶ್ವವಿಶಾಲವಾಗಿರದೆ ಇದ್ದರೆ ಪರಮ ಶ್ರೇಯಸ್ಸಿಗೆ ಸಾಧನವಾಗಲಾರದು. ಎಂದು ಭಾವವು. ॥೩೮॥

ಬ್ರಹ್ಮಾದಿದೇವತೆಗಳೇ ಆಗಲಿ ಸಾಕ್ಷಾತ್ತಾಗಿ ಸಂಸಾರಮೋಚಕರಲ್ಲವು. ಸರ್ವಜ್ಞನಾದ, ಪಾರ್ವತೀಸಹಿತನಾದ, ಲೋಕಕ್ಕೆಲ್ಲಕ್ಕೂ ಒಡೆಯನಾದ ಶಿವನೇ,

ನ ತಸ್ಯ ಕಾರ್ಯಂ ಕರಣಂ ವಸ್ತುತೋ ವಿದ್ಯತೇಽನಘ ।
ನ ತತ್ಸಮಶ್ಚಾಭ್ಯಧಿಕಶ್ಚೇತನೋ ವಿದ್ಯತೇ ಕ್ವಚಿತ್ ॥೪೧॥

ತಥಾಽಪಿ ಪರಮಾ ಶಕ್ತಿರ್ವಿವಿಧಾ ತಸ್ಯ ಶೂಲಿನಃ ।
ಶ್ರೂಯತೇ ಸರ್ವವೇದೇಷು ಸ್ವಜ್ಞಾನಂ ಚ ಸ್ವಕಂ ಬಲಮ್ ॥೪೨॥

ಅಪಾರವಾದ ಸಂಸಾರದಲ್ಲಿರುವ ಪ್ರಾಣಿಗಳ ಸಂಸಾರಬಂಧನವನ್ನು ಬಿಡುಗಡೆಮಾಡುವವನು. ಇತರ ದೇವತೆಗಳ ಪೂಜಾದಿಗಳಿಂದ ಶಿವಭಕ್ತಿಯೂ ಶಿವಾನುಗ್ರಹವೂ ಸುಲಭವಾಗಿ ಫಲಸಿದ್ಧಿಯು ಶೀಘ್ರವಾಗಿ ದೊರೆಯುತ್ತದೆ. ಎಂದು ಭಾವವು.॥೩೯-೪೦॥

ಹೀಗೆ ವಿಷ್ಣುವು, ಮೋಕ್ಷವನ್ನು ಕೊಡುವ ಸಾಮರ್ಥ್ಯವು ತನಗೂ ಬ್ರಹ್ಮಾದಿ ದೇವತೆಗಳಿಗೂ ನೇರವಾಗಿ ಇಲ್ಲ. ಆ ಸಾಮರ್ಥ್ಯವು ಸಾಕ್ಷಾತ್ ಶಿವನಿಗೇ ಹೊರತು ಇತರರಿಗೆ ಇಲ್ಲವೆಂದು ಹೇಳಿ, ಆ ಶಿವನು ತನಗಿಂತಲೂ ಹೆಚ್ಚಿನವನೆಂದು ಹೇಳುತ್ತಾನೆ. ಆ ಪರಮೇಶ್ವರನಿಗೆ ಭೌತಕಾರ್ಯಗಳಾದ ಶರೀರವೂ, ಇಂದ್ರಿಯಗಳೂ— ಯಾವುವೂ ಇಲ್ಲ. (ಹೀಗೆ ಹೇಳಿದ್ದರಿಂದ ಸ್ಥೂಲಸೂಕ್ಷ್ಮಶರೀರಗಳೆರಡೂ ಇಲ್ಲವೆಂದೂ, ಅಲ್ಲದೆ ಅದರಿಂದ ಸ್ಥೂಲಸೂಕ್ಷ್ಮಶರೀರಗಳಿಗೆ ಉಪಾದಾನಕಾರಣವಾದ ಅವಿದ್ಯೆಯೂ ಅದಕ್ಕೆ ಕಾರಣವಾದ ಮಾಯೆಯೂ ವಸ್ತುತಃ ಅವನಲ್ಲಿಲ್ಲವೆಂದೂ, ಹೇಳಿದ ಹಾಗಾಯಿತು.) ಮತ್ತೂ ಅವನಿಗಿಂತಲೂ ಹೆಚ್ಚಾದವನೇ ಆಗಲಿ ಅವನಿಗೆ ಸಮಾನನಾದವನೇ ಆಗಲಿ ಜ್ಞಾನಶಕ್ತಿಗಳುಳ್ಳ ಇನ್ನೊಬ್ಬ ಚೇತನನು ಎಲ್ಲಿಯೂ ಇಲ್ಲ.॥೪೧॥

ಆದುದರಿಂದ ಸಚ್ಚಿದಾನಂದರೂಪನಾದ ಆ ಪರಮೇಶ್ವರನಲ್ಲಿರುವುದು ಉತ್ತಮವಾದ.ಶಕ್ತಿಯು ಒಂದೇ ಆದರೂ, ಅದು ಉಪಾಧಿಭೇದದಿಂದ ಅನೇಕವಾಗಿ ತೋರುತ್ತಿದೆ ಎಂದು ವೇದಗಳಲ್ಲಿ ಹೇಳಿದೆ. ಆದರೆ ನಿರತಿಶಯವಾದ ಜ್ಞಾನವೂ, ಜಗತ್ತನ್ನು ಸೃಷ್ಟಿಮಾಡುವ ಸಾಮರ್ಥ್ಯವೂ, ಸೃಷ್ಟಿಕಾಲದಲ್ಲಿ ಮೊದಲನೆಯ ವೃತ್ತಿರೂಪವಾದ ಕ್ರಿಯೆಯೂ, ಅವನಿಗೆ ಸ್ವಭಾವವಾದವುಗಳೇ ಹೊರತು ಬೇರೊಂದರ ಸಹಾಯದಿಂದ ಉಂಟಾಗತಕ್ಕವುಗಳಲ್ಲ. ಇದರ ಹಿಂದಿನ ಮತ್ತು ಈ ಶ್ಲೋಕದಲ್ಲಿ ಶ್ವೇತಾಶ್ವತರೋಪನಿಷತ್ತಿನ "ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ । ಪರಾಽಸ್ಯ ಶಕ್ತಿಃ ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥ ೬.೮. ಎಂಬ ಮಂತ್ರದ ಅರ್ಥವನ್ನು ಅನುವಾದ ಮಾಡಿರುತ್ತದೆ. ॥೪೨॥

ಸ್ವವ್ಯಾಪಾರಶ್ಚ ತಸ್ಯಾಸ್ಯ ಸ್ವತಃಸಿದ್ಧೋ ನ ಚಾನ್ಯತಃ ।
ಮಮ ಬ್ರಹ್ಮಾದಿದೇವಾನಾಮಪಿ ತಸ್ಯ ಪ್ರಸಾದತಃ ॥೪೩॥

ವಿಜ್ಞಾನಾದಿತ್ರಯಂ ಯಸ್ಮಾತ್ಸ ಏವ ಭವಮೋಚಕಃ ।
ಅಹಂ ಬ್ರಹ್ಮಾದಿದೇವಾಶ್ಚ ಪ್ರಸಾದಾತ್ತಸ್ಯ ಶೂಲಿನಃ ॥೪೪॥

ಪ್ರಣಾಡ್ಯೈವ ಹಿ ಸಂಸಾರಮೋಚಕಾ ನಾತ್ರ ಸಂಶಯಃ ।
ಪ್ರಸಾದೋ ಮುಕ್ತಿದಸ್ಸಾಕ್ಷಾಚ್ಛಿವಾತ್ಸತ್ಯಾದಿಲಕ್ಷಣಾತ್ ॥೪೫॥

ಅಪ್ರಸಕ್ತಭವಾಚ್ಛುದ್ಧಾದಸಂಗಾತ್ಸರ್ವಸಾಕ್ಷಿಣಃ ।
ಅಂಬಿಕಾಸಹಿತಾದಸ್ಮಾತ್ಸರ್ವಜ್ಞಾದೇವ ನಾನ್ಯತಃ ॥೪೬॥

ಹೀಗೆ ವಿಷ್ಣುವು ಎಲ್ಲಕ್ಕೂ ಮಿಗಿಲಾದ ಮೂಲವಾದ ಜ್ಞಾನಬಲಕ್ರಿಯಾ ಇವುಗಳಿರುವುದರಿಂದ ಶಿವನು ನಮಗಿಂತಲೂ ಅತಿಶಯಿತನಾದವನು ಎಂದು ಹೇಳಿ, ಆ ಜ್ಞಾನಾದಿಗಳು ತಮಗೆ ಬರಬೇಕಾದರೆ ಶಿವನ ಅನುಗ್ರಹವಿರಬೇಕೆಂದು ಹೇಳುತ್ತಾನೆ.

ನನಗಾಗಲಿ, ಬ್ರಹ್ಮನೇ ಮೊದಲಾದ ದೇವತೆಗಳಿಗಾಗಲಿ, ಆ ಶಿವನ ಅನುಗ್ರಹದಿಂದಲೇ ಜ್ಞಾನ, ಬಲ, ಕ್ರಿಯಾದಿಗಳು—ಉಂಟಾಗಬೇಕೇ ಹೊರತು ಸ್ವತಃ ಇಲ್ಲವು. ಆದ್ದರಿಂದ (ಜ್ಞಾನ, ಬಲ, ಕ್ರಿಯಾ) ಇವುಗಳಿಗೆ ಆಶ್ರಯವಾಗಿರುವುದರಿಂದ ಆ ಶಿವನೇ ಜೀವರನ್ನು ಸಾಕ್ಷಾತ್ತಾಗಿ ಸಂಸಾರದಿಂದ ಬಿಡುಗಡೆಮಾಡತಕ್ಕವನು. ಈ ಚರಾಚರಪ್ರಪಂಚಗಳಿಗೆ ಎಲ್ಲಕ್ಕೂ ಮೂಲಭೂತವಾದ ಪರತತ್ತ್ವವು ಒಂದೇ ಎಂಬ ಸಿದ್ಧಾಂತವನ್ನು ಒಪ್ಪಿದರೆ, ಈ ವಿವರಣೆಯು ಸ್ವಾಭಾವಿಕವೂ, ಆವಶ್ಯಕವೂ ಆಗಿರುತ್ತದೆ. ಆ ತತ್ತ್ವವನ್ನು ಯಾವ ಹೆಸರಿನಿಂದ ಕರೆದರೂ ಸರಿಯೇ. ಎಂದು ಭಾವವು. ||೪೩||

ನಾನೂ ಬ್ರಹ್ಮಾದಿದೇವತೆಗಳೂ ಆ ಶಿವನ ಅನುಗ್ರಹವನ್ನು ಹೊಂದಿದ ಅನಂತರ, ಪರಂಪರೆಯಿಂದ ಸಂಸಾರದಲ್ಲಿರಬೇಕಾದ ನಿರ್ಬಂಧ ದುಃಖದಿಂದ ಜೀವರ ಬಿಡುಗಡೆಗೆ ಕಾರಣರೇ ಹೊರತು ಸಾಕ್ಷಾತ್ತಾಗಿ ನೇರವಾಗಿ ಕಾರಣರಲ್ಲವು. ಈ ವಿಚಾರದಲ್ಲಿ ಸಂದೇಹವಿಲ್ಲವು. ||೪೪||

ಉಪಾಸಕರ ಕಲ್ಪನೆಯಂತೆ ಪಾರ್ವತೀಸಹಿತನಾಗಿಯೂ, ವಸ್ತುತಃ ಸರ್ವಜ್ಞನಾಗಿಯೂ ಇರುವ, ಎಲ್ಲಕ್ಕೂ ಸಾಕ್ಷಿಯಾಗಿರುವುದರಿಂದ ಮತ್ತೊಂದು ಪದಾರ್ಥದ ಸಂಬಂಧವಿಲ್ಲದವನಾಗಿಯೂ, ಸಂಬಂಧವಿಲ್ಲದುದರಿಂದಲೇ ಶುದ್ಧನಾಗಿಯೂ, ಆದುದ

ಮಮ ಬ್ರಹ್ಮಾದಿದೇವಾನಾಮಪಿ ಸಾಕ್ಷಾಚ್ಛಿವೇಚ್ಛಯಾ ।
ಭೋಗಮೋಕ್ಷಪ್ರದಃ ಪುಂಸಾಂ ಪ್ರಸಾದೋ ಜಾಯತೇಽನಘ ॥೪೭॥

ತಸ್ಮಾತ್ಪ್ರಸಾದಶ್ಚಾನ್ಯೇಷಾಂ ಮಮ ಚಾಶ್ರಿತ್ಯ ಶೂಲಿನಃ ।
ಪ್ರಸಾದಂ ಭೋಗಮೋಕ್ಷಾಯ ನ ಸ್ವಯಂ ನಾತ್ರ ಸಂಶಯಃ ॥೪೮॥

ಅತಃ ಪೂರ್ಣಪ್ರಸಾದಾಯ ಸತ್ಯಸಂಧ ಮಮ ಪ್ರಿಯ ।
ಮಹಾದೇವಂ ಮಹಾತ್ಮಾನಂ ಭಜ ಕಾರುಣಿಕೋತ್ತಮಂ ॥೪೯॥

ರಿಂದಲೇ ಮಾಯಾಸಂಸಾರವನ್ನು ಬಿಡಿಸುವವನಾಗಿಯೂ ಇರುವ ಸಚ್ಚಿದಾನಂದ ಸ್ವರೂಪನಾದ ಶಿವನಿಂದ ಉಂಟಾದ ಅನುಗ್ರಹವೇ ಮೋಕ್ಷವನ್ನುಂಟುಮಾಡುವುದು. ಬೇರೆ ಯಾವುದರಿಂದಲೂ ಮುಕ್ತಿಯು ದೊರೆಯದು. ॥೪೬॥

ಎಲೈ ಪುಣ್ಯಶಾಲಿಯಾದ ಸತ್ಯಸಂಧನೇ, ನನ್ನಿಂದಲಾಗಲಿ ಬ್ರಹ್ಮಾದಿದೇವತೆಗಳಿಂದಲಾಗಲಿ ಮನುಷ್ಯರಿಗೆ ಭೋಗಮೋಕ್ಷಗಳುಂಟಾಗಬೇಕಾದರೆ ಅವಕ್ಕೆ ಕಾರಣವಾಗಿರುವ ಅನುಗ್ರಹವು ಶಿವನ ಅನುಗ್ರಹದಿಂದ ದೊರೆಯುವುದೇ ವಿನಾ ಸ್ವತಂತ್ರರಾದ ನಮ್ಮಿಂದ ಸಂಸಾರದಲ್ಲಿ ಭೋಗಗಳಾಗಲಿ ಕಡೆಗೆ ಸಂಸಾರದಿಂದ ಬಿಡುಗಡೆಯಾಗಲಿ ನೇರವಾಗಿ ಅಥವಾ ಸ್ವತಂತ್ರವಾಗಿ ದೊರೆಯಲಾರದು. ॥೪೭॥

ಆದ್ದರಿಂದ ನಮ್ಮಗಳ ಅನುಗ್ರಹವು ಇಷ್ಟಾರ್ಥವನ್ನುಂಟುಮಾಡಬೇಕಾದರೂ ಶಿವನ ಅನುಗ್ರಹವಿಲ್ಲದೆ ಆಗುವುದಿಲ್ಲ. ಈ ವಿಚಾರದಲ್ಲಿ ಸಂದೇಹವಿಲ್ಲವು. ಇದರಿಂದ ವಿಷ್ಣು ಮುಂತಾದವರು ಕೀಳು, ಶಿವನು ಮೇಲು ಎಂದು ಭಾವವಲ್ಲವು. ಮತ್ತೇನೆಂದರೆ, ಪರತತ್ವವೂ ಅದರ ಶಕ್ತಿಯೂ ಒಂದೇ ಆಗಿ, ಅದು ಶಿವ ವಿಷ್ಣು ಬ್ರಹ್ಮ ಇಂದ್ರ ಮುಂತಾದವರಲ್ಲಿ ಅವರವರ ಉಪಾಧಿಗಳಿಗೆ ಅನುಗುಣವಾಗಿ ವ್ಯಕ್ತವಾಗುತ್ತಿದೆ. ಆದುದರಿಂದ ಶ್ರೇಯಸ್ಸಾಗಬೇಕಾದರೆ ಎಲ್ಲಕ್ಕೂ ಮೂಲಕಾರಣವಾದ ಅನುಗ್ರಹವು ಮುಖ್ಯವು ಎಂದು ತಾತ್ಪರ್ಯವು. ಹಾಗಾದರೆ ಅನೇಕ ದೇವತೆಗಳು ಏಕೆ? ಎಂದರೆ ಅವರೂ ಜನರ ರುಚಿಗೆ ಅನುಸಾರವಾಗಿರಬೇಕು. ಎಂದು ತಿಳಿಯಬೇಕು. ॥೪೮॥

ಆದ್ದರಿಂದ ಪ್ರೀತಿಪಾತ್ರನಾದ ಸತ್ಯಸಂಧನೇ, ಪೂರ್ಣವಾದ ಅನುಗ್ರಹವನ್ನು ಪಡೆಯುವುದಕ್ಕಾಗಿ, ಕರುಣಾಶಾಲಿಯಾದ, ಮಹಾತ್ಮನಾದ ಮಹಾದೇವನನ್ನು ಸೇವಿಸು. ಅವನ ಅನುಗ್ರಹದಿಂದ ಅದು ಸುಲಭವಾಗುವುದೆಂದು ಭಾವವು. ॥೪೯॥

ಮಹಾದೇವಂ ಸಮಾಶ್ರಿತ್ಯ ವಾಂಛಿತಂ ನಾಪ್ನುಯಾದ್ಯದಿ ।
ಮಹಾದೇವೋ ಮಹಾದೇವಂ ಕಥಮನ್ಯಂ ಸಮಾಶ್ರಯೇತ್ ॥೫೦॥

ನಾಮತಶ್ಚಾರ್ಥತಶ್ಚಾಪಿ ಮಹಾದೇವೋ ಮಹೇಶ್ವರಃ ।
ತದನ್ಯೇ ಕೇವಲಂ ದೇವಾಃ ಮಹಾದೇವಾ ನ ತೇಽನಘ ॥೫೧॥

ಮಹಾದೇವಂ ವಿನಾ ಯೋ ಮಾಂ ಭಜತೇ ಶ್ರದ್ಧಯಾ ಸಹ ।
ನಾಸ್ತಿ ತಸ್ಯ ವಿನಿರ್ಮೋಕ್ಷಸ್ಸಂಸಾರಾಜ್ಜನ್ಮಕೋಟಿಭಿಃ ॥೫೨॥

ಮಹಾದೇವನನ್ನು ಆಶ್ರಯಿಸಿ ಇಷ್ಟಾರ್ಥವನ್ನು ಪಡೆಯದಿದ್ದರೆ ಬೇರೆ ಯಾವ ದೇವತೆಯು ತಾನೆ ಇಷ್ಟಾರ್ಥವನ್ನು ಕೊಡಬಲ್ಲುದು ? ಭಕ್ತರ ಇಷ್ಟವನ್ನು ಸಲ್ಲಿಸುವುದಕ್ಕಾಗಿ ಆ ಮಹಾದೇವನು ಬೇರೆ ಒಬ್ಬ ಮಹಾದೇವನನ್ನು ತಾನೆ ಹೇಗೆ ಆಶ್ರಯಿಸಿಯಾನು ? ಎಂದರೆ ಅಂಥ ಮಹಾದೇವನು ಆಶ್ರಯಿಸಬೇಕಾದ ಮತ್ತೊಂದು ದೇವತೆಯು ಇದೆ. ಎಂದರೆ, ಅನವಸ್ಥೆಯಲ್ಲಿ ಪರ್ಯವಸಾನವಾಗಬೇಕಾಗುವುದರಿಂದ, ಆ ಮಹಾದೇವನೇ ಸ್ವತಂತ್ರವಾಗಿ ಫಲಕೊಡುತ್ತಾನೆ. ಇತರ ದೇವತೆಗಳು ಆ ಶಿವನ ಅನುಗ್ರಹವನ್ನು ಸಂಪಾದಿಸಿ ಅನಂತರ ಭಕ್ತರ ಇಷ್ಟವನ್ನು ನೆರವೇರಿಸುತ್ತಾರೆ. ಆದ್ದರಿಂದ ಸ್ವತಂತ್ರವಾಗಿ ಫಲಕೊಡಲು ಸಮರ್ಥನಾದ ಈಶ್ವರನನ್ನು ನಿನ್ನ ಇಷ್ಟ ಪ್ರಾಪ್ತಿಗಾಗಿ ಆಶ್ರಯಿಸು–ಎಂದು ತಾತ್ಪರ್ಯ. ॥೫೦॥

ಆ ಪರಮೇಶ್ವರನು ಹೆಸರಿನಿಂದಲೂ ಮಹಾದೇವನೆನ್ನಿಸಿಕೊಂಡಿದ್ದಾನೆ. ಇದರ ಅರ್ಥವಿಚಾರಮಾಡಿದರೂ ದೊಡ್ಡದೇವ, ದೇವತೆಗಳಲ್ಲೆಲ್ಲಾ ದೊಡ್ಡವನಾಗಿದ್ದಾನೆ, ಎಂದು ಗೊತ್ತಾಗುತ್ತದೆ. ಇತರರಾದ ದೇವತೆಗಳು ಬರಿಯ ದೇವತೆಗಳೇ ಹೊರತು ಮಹಾದೇವರಲ್ಲ. ಆದ್ದರಿಂದ ದೋಷರಹಿತನಾದ ಸತ್ಯಸಂಧನೇ, ನೀನು ಅಂಥ ಮಹಾದೇವನನ್ನು ಆಶ್ರಯಿಸು. ॥೫೧॥

ಮಹಾದೇವನನ್ನು ಬಿಟ್ಟು ಯಾರು ನನ್ನನ್ನು ಮಾತ್ರ ಭಕ್ತಿಯಿಂದ ಭಜಿಸುತ್ತಾರೋ ಅವರಿಗೆ ಒಂದು ಕೋಟಿ ಜನ್ಮಗಳು ಕಳೆದಾಗ್ಯೂ ಈ ಸಂಸಾರ ಬಂಧನದಿಂದ ಬಿಡುಗಡೆಯಿಲ್ಲವು. ಎಂದರೆ " ನನ್ನ ದೇವರಿಂದಲೇ ಶ್ರೇಯಸ್ಸಾಗುತ್ತದೆ. ಇತರರ ದೇವರಿಂದ ಅಲ್ಲವು." ಎಂಬ ಸಂಕುಚಿತವಾದ ದೇವಭಾವನೆಯನ್ನು ಮೀರಿ ಉದಾರವಾದ ವಿಶ್ವವಿಶಾಲವಾದ ದೇವಭಾವಕ್ಕೆ ಭಕ್ತರು ಏರಬೇಕು. ಎಂದು ಭಾವವು. ॥೫೨॥

ಸರ್ವಮುಕ್ತಂ ಸಮಾಸೇನ ಮಮ ಭಕ್ತಸ್ಯ ತೇಽನಘ ।
ಶಿವಾದನ್ಯಂ ಪರಿತ್ಯಜ್ಯ ಶಿವಂ ಸಾಂಬಂ ಸದಾ ಭಜ ॥೫೩॥

॥ ಓಂ ಸೂತ ಉವಾಚ ॥

ಏವಮುಕ್ತ್ವಾ ಹರಿಶ್ರೀಮಾನ್ ಕಿರೀಟೀ ಗರುಡಧ್ವಜಃ ।
ಸರ್ವವಿಜ್ಞಾನಸಂಪನ್ನಸ್ತತ್ರೈವಾಂತರಧೀಯತ ॥೫೪॥

ಸತ್ಯಸಂಧೋ ಮಹಾಧೀಮಾನ್ ಮಹಾವಿಷ್ಣೋಃ ಪ್ರಸಾದತಃ ।
ಪರಿತ್ಯಜ್ಯಾಖಿಲಾನ್ ದೇವಾನ್ ಆಶ್ರಿತೋಽಭವದೀಶ್ವರಮ್ ॥೫೫॥

ಈಶ್ವರಸ್ಯ ಪ್ರಸಾದೇನ ಸತ್ಯಸಂಧೋ ಮಹಾದ್ವಿಜಾಃ ।
ಜ್ಞಾನಂ ವೇದಾಂತಜಂ ಲಬ್ಧ್ವಾ ವಿಮುಕ್ತೋ ಭವಬಂಧನಾತ್॥೫೬॥

ಭವಂತೋಽಪಿ ದ್ವಿಜಶ್ರೇಷ್ಠಾಶ್ಶಿವಾದನ್ಯತ್ತು ದೈವತಮ್ ।
ಪರಿತ್ಯಜ್ಯ ಪ್ರಸಾದಾಯ ಭಜಧ್ವಂ ಶಿವಮವ್ಯಯಮ್ ॥೫೭॥

ಎಲೈ ನಿರ್ದೋಷಿಯಾದ ಸತ್ಯಸಂಧನೇ, ಎಲ್ಲವನ್ನೂ ಸಂಗ್ರಹಿಸಿ ನಿನಗೆ ಹೇಳಿದ್ದೇನೆ. ನೀನು ಶಿವನಿಗಿಂತಲೂ ಬೇರೆ ಯಾವ ದೇವತೆಗಳನ್ನೋ ಆಶ್ರಯಿಸುವುದನ್ನು ಬಿಟ್ಟು ಪಾರ್ವತೀಸಹಿತನಾದ ಮಂಗಳಕರನಾದ ಶಿವನನ್ನು ಯಾವಾಗಲೂ ಆಶ್ರಯಿಸು. ॥೫೩॥

ಈ ರೀತಿಯಾಗಿ ಕಿರೀಟವನ್ನು ಧರಿಸಿರುವ ಗರುಡವಾಹನನಾದ ಜ್ಞಾನಿಯಾದ ಆ ವಿಷ್ಣುವು ಸತ್ಯಸಂಧನನ್ನು ಕುರಿತು ಹೇಳಿ, ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು. ॥೫೪॥

ಎಲೈ ಬ್ರಾಹ್ಮಣರೇ, ಈ ರೀತಿಯಾಗಿ ಹೇಳಿದ ಮಹಾವಿಷ್ಣುವಿನ ಮಾತನ್ನು ಕೇಳಿ, ಅವನ ಅನುಗ್ರಹವನ್ನು ಹೊಂದಿದ ಬುದ್ಧಿಶಾಲಿಯಾದ ಸತ್ಯಸಂಧನು, ಇತರರಾದ ಎಲ್ಲಾ ದೇವತೆಗಳನ್ನೂ ಬಿಟ್ಟು ಈಶ್ವರನನ್ನು ಆಶ್ರಯಿಸಿದನು. ಆ ಈಶ್ವರನ ಅನುಗ್ರಹವನ್ನು ಸಂಪಾದಿಸಿ ವೇದಾಂತಜ್ಞಾನವನ್ನು (ಅಖಂಡಬ್ರಹ್ಮಾತ್ಮೈಕ್ಯಜ್ಞಾನವನ್ನು) ಹೊಂದಿ ಈ ಸಂಸಾರದುಃಖದಿಂದ ಬಿಡುಗಡೆ ಎಂಬ ಮೋಕ್ಷವನ್ನು ಪಡೆದನು. ॥೫೫-೫೬॥

ಎಲೈ ಬ್ರಾಹ್ಮಣಶ್ರೇಷ್ಠರೇ, ನೀವೂ ಕೂಡ ಸತ್ಯಸಂಧನಂತೆ ಇತರ ದೇವತೆಗಳನ್ನು ಬಿಟ್ಟು (ಎಂದರೆ, ಅವರಲ್ಲಿ ಕೀಳು ಎಂಬ ತಿರಸ್ಕಾರಭಾವದಿಂದ ಅಲ್ಲವು.

ಸರ್ವಮುಕ್ತಂ ಸಮಾಸೇನ ಯುಷ್ಮಾಕಂ ಮುನಿಪುಂಗವಾಃ ।
ಮಮ ವಾಕ್ಯೇऽತಿವಿಶ್ವಾಸಂ ಕುರುಧ್ವಂ ಯತ್ನತೋ ದ್ವಿಜಾಃ ॥೫೮॥

ಅತಿರಹಸ್ಯಮಿದಂ ಕಥಿತಂ ಮಯಾ
ಶ್ರುತಿಪರಂಪರಯಾ ಚ ಸಮಾಗತಮ್ ।
ಮುನಿಪರಂಪರಯಾ ಚ ಸಮಾಗತಂ
ನ ಕಥಿತವ್ಯಮಶಿಷ್ಟಜನಸ್ಯ ತು ॥೫೯॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಪ್ರಸಾದವೈಭವಂ ನಾಮ ಪಂಚವಿಂಶಾಧ್ಯಾಯಃ

ಮತ್ತೇನೆಂದರೆ, ಎಲ್ಲ ದೇವತತ್ವಗಳನ್ನೂ ಒಳಗೊಳ್ಳಬಲ್ಲ, ಎಲ್ಲಕ್ಕೂ ಮೂಲಕಾರಣವೂ ಅಧಿಷ್ಠಾನವೂ ಆಗಿರುವ, ಪರತತ್ವದ ಉನ್ನತಭಾವಕ್ಕೆ ಏರಿ, ಎಂದು ಭಾವವು.) ಈಶ್ವರಾನುಗ್ರಹಕ್ಕಾಗಿ ನಾಶರಹಿತನಾದ ಶಿವನನ್ನು ಭಜಿಸಿರಿ. ॥೫೭॥

ಎಲೈ ಬ್ರಾಹ್ಮಣರೇ, ಹೀಗೆ ಎಲ್ಲಾ ಸಮಾಚಾರವನ್ನೂ ನಿಮಗೆ ಸಂಕ್ಷೇಪವಾಗಿಯೂ, ವಿಶದವಾಗಿಯೂ, ಹೇಳಿದ್ದೇನೆ. ಈ ನನ್ನ ಮಾತಿನಲ್ಲಿ ತುಂಬ ನಂಬಿಕೆಯನ್ನು ಇಟ್ಟು ಈಶ್ವರ ಪ್ರಸಾದವನ್ನು ಹೊಂದಲು ಯತ್ನಮಾಡಿರಿ. ॥೫೮॥

ನಾನು ಶ್ರುತಿಕ್ರಮವಾಗಿಯೂ, ಋಷಿಗಳ ಕ್ರಮದಿಂದಲೂ ಬಂದಿರುವ ಬಹಳ ಗುಟ್ಟಾದ ವಿಚಾರವನ್ನು ನಿಮಗೆ ಹೇಳಿದ್ದೇನೆ. ಈ ವಿಚಾರವನ್ನು ತಕ್ಕ ಮೇಲಾದ ಸಂಸ್ಕೃತಿ ಇಲ್ಲದೆ ಅಯೋಗ್ಯರಾದವರಿಗೆ ಮಾತ್ರ ಹೇಳಬೇಡಿ. ಹೇಳಿದರೂ ವ್ಯರ್ಥವಾಗುವುದು. ಎಂದು ಸೂತರು ಶೌನಕಾದಿಗಳನ್ನು ಕುರಿತು ಹೇಳಿದರು. ॥೫೯॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಶಿವಪ್ರಸಾದದ ಮಹಿಮೆಯನ್ನು ವಿವರಿಸಿರುವ
ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಕರ್ಣಾಟಾಧಿಪತಿ ಶ್ರೀಮಜ್ಜಯಚಾಮೇಂದ್ರ ಶಾಸನಾತ್ ।
ಶ್ರೀಸೂತಸಂಹಿತಾರ್ಥಾನುವಾದಂ ಕನ್ನಡಭಾಷಯಾ ॥
ಸುಬ್ಬಮ್ಮಾಂಬಾದೇವಯಜ್ವ ತನಯಃ ಚಂದ್ರಶೇಖರಃ ।
ಜನಾನಾಮುಪಕಾರಾಯ ರಚಯಾಮಾಸ ಸಾದರಂ ॥
ವಾಣೀಸೇವಾಂ ರಾಜಸೇವಾಂ ಜನಸೇವಾಂ ಮಯಾಕೃತಾಂ ।
ಸ್ವೀಕೃತ್ಯ ತುಷ್ಯತು ಶಿವಃ ಸಾಂಬೋ ರಾಜಾ ಚ ಭಾರತೀ ॥